## ಅಧ್ಯಾಯ - 2

# ಇತಿಹಾಸ

ಧಾರವಾಡ ಜಿಲ್ಲೆಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಜಿಲ್ಲೆ. ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಅರಸರ ಹಾಗೂ ವಿಜಾಪುರದ ಆದಿಲ್‌ಷಾಹಿಗಳ ಆಳ್ವಿಕೆಯ ತಿರುಳುನಾಡಾಗಿ ಮೆರೆದ ಜಿಲ್ಲೆಯಿದು. ಇಲ್ಲಿನ ಸಮೃದ್ಧ ಬೆಳ್ವೊಲ 300 ಪ್ರದೇಶದ ಸ್ವಾಮ್ಯಕ್ಕಾಗಿ ಹೊಯ್ಸಳ ಮತ್ತು ಸೇಉಣ(ಯಾದವ)ರ ನಡುವೆ ಭಾರಿ ಕಾಳಗಗಳಾಗಿವೆ. ಮರಾಠರು ದಕ್ಷಿಣ ಭಾರತದ ಮೇಲೆ ದಾಳಿ ಮಾಡಿದಾಗಲೆಲ್ಲ ಈ ಜಿಲ್ಲೆಯನ್ನು ಹೆದ್ದಾರಿಯಂತೆ ಬಳಸಿಕೊಂಡರು. ಪುಣೆಯ ಮತ್ತು ಕೊಲ್ಲಾಪುರದ ಮರಾಠರ ನಡುವೆಯೂ ಇಲ್ಲಿ ಕೆಲಕಾಲ ಭಾರೀ ಯುದ್ಧಗಳಾದವು. ಹತ್ತಿ ಬೆಳೆಯುವ ಹಿನ್ನಾಡಾಗಿ, ಹುಬ್ಬಳ್ಳಿ (ರಾಯರಹುಬ್ಬಳ್ಳಿ ಅಥವಾ ಹಳೇ ಹುಬ್ಬಳ್ಳಿ) ಪ್ರಮುಖ ಕೈಗಾರಿಕಾ ಕೇಂದ್ರವಾಗಿತ್ತು. ಆಂಗ್ಲರ ಆಗಮನದ ಆರಂಭದ ದಿನಗಳಲ್ಲಿ ಅಂದಿನ ಕಾಳೀ ನದೀ ದಂಡೆಯ ಕಡವಾಡ ಗ್ರಾಮದಲ್ಲಿದ್ದ ಅವರ ಮಳಿಗೆಗೆ ಹತ್ತಿ ಬಟ್ಟೆ ಪೂರೈಸುವ ಕೇಂದ್ರ ಹಳೇ ಹುಬ್ಬಳ್ಳಿಯಾಗಿತ್ತು. ಹುಬ್ಬಳ್ಳಿಯಿಂದ ಕಾಳೀದಂಡೆಯ ಕದ್ರಾವರೆಗೆ ನೆಲಮಾರ್ಗದಿಂದ ವಸ್ತುಗಳ ಸಾರಿಗೆ ಸಾಗುತ್ತಿದ್ದು, ಇಂದಿನ ಧಾರವಾಡ, ಬಿಜಾಪುರ, ರಾಯಚೂರು ಜಿಲ್ಲೆಗಳ ಸಾವಿರಾರು ಮಗ್ಗಗಳಿಗೆ ಕೆಲಸ ಒದಗಿಸಲು ಇದು ಕಾರಣವಾಗಿತ್ತು. ದಕ್ಷಿಣದ ಬ್ಯಾಡಗಿ, ಹಾವೇರಿಗಳು ಕುಮಟಾ ಬಂದರಿನ ಜೊತೆ ಸಂಪರ್ಕ ಹೊಂದಿದ್ದವು. ಮೊದಲು ಪೋರ್ಚುಗೀಸರು ಈ ದೇಶಕ್ಕೆ ತಂದ ಮೆಣಸಿನಕಾಯಿ, ಬ್ರಿಟಿಷರ ಅಧಿಪತ್ಯದ ನಂತರ ಹತ್ತಿ ಇವುಗಳ ನಿರ್ಯಾತಕ್ಕೆ ಕುಮಟಾ ಬಂದರು ಪ್ರಸಿದ್ಧವಾಗಿತ್ತು. ಇವೆಲ್ಲ ಬ್ಯಾಡಗಿ, ಹಾವೇರಿಗಳಿಂದ ಹೋಗುತ್ತಿದ್ದವು. ಹಾವೇರಿಯು ಏಲಕ್ಕಿ ಮಾರಾಟದ ಪ್ರಮುಖ ಕೇಂದ್ರವಾಗಿತ್ತು. ಕುಮಟಾ ಹತ್ತಿ, ಬ್ಯಾಡಗಿ ಮೆಣಸಿನಕಾಯಿ ಎಂಬ ಹೆಸರುಗಳು ಹೀಗೆ ಖ್ಯಾತಿಗೆ ಬಂದವು.

ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಅವರ ರಾಜ್ಯದ ತಿರುಳು ನಾಡಿನಲ್ಲಿ ಇದ್ದ ಈ ಪ್ರದೇಶದಲ್ಲಿ ಗದಗು, ಕೊಣ್ಣೂರು, ಸವಡಿ, ಸೂಡಿ, ಅಣ್ಣಿಗೇರಿ, ಡಂಬಳ, ಹೊಂಬಳ, ಲಕ್ಕುಂಡಿ, ಹಾವೇರಿ, ಹಾನಗಲ್, ಚೌಡದಾನಪುರ, ಲಕ್ಷ್ಮೇಶ್ವರ, ರಟ್ಟಿಹಳ್ಳಿ ಮುಂತಾದ ಊರುಗಳಲ್ಲಿ ದೇವಾಲಯಗಳನ್ನು ಕಟ್ಟಿದರು. ಅಣ್ಣಿಗೇರಿಯಂತೂ ಕೆಲಕಾಲ ಚಾಳುಕ್ಯರ ರಾಜಧಾನಿಯಾಗಿತ್ತು. ಇಂಥ ನೂರಾರು ದೇವಾಲಯಗಳೂ, ಈ ಅರಸರ ಕಾಲದಲ್ಲಿ ಸ್ಥಾಪನೆಗೊಂಡ ಅಗ್ರಹಾರಗಳೂ, ದೇವಾಲಯಗಳ ಸುತ್ತ ಬೆಳೆದ ಸಾಂಸ್ಕೃತಿಕ ಮತ್ತು ಜಾನಪದ ಚಟುವಟಿಕೆಗಳೂ, ಮುಂದೆ 13 ನೇ ಶತಮಾನದಿಂದ ಆರಂಭಿಸಿ ಹರಡಿದ ವೀರಶೈವ ಮಠಗಳೂ ವಿದ್ಯೆ, ಕಲೆ, ಸಾಹಿತ್ಯ, ಸಾಂಸ್ಕೃತಿಗಳ ಕ್ಷೇತ್ರದಲ್ಲಿ ಧಾರವಾಡ ಜಿಲ್ಲೆಯನ್ನು ಒಂದು ಸಂಪನ್ನ ಪ್ರದೇಶವಾಗಿ ಮಾಡಿದವು. ಈ ಅರಸರು ಕಟ್ಟಿಸಿದ ನೂರಾರು ಕೆರೆಗಳು ಆರ್ಥಿಕ ಸಮೃದ್ಧಿಗೆ ತಳಪಾಯ ಹಾಕಿದವು. ಬಾದಾಮಿ ಚಾಳುಕ್ಯರ ಶಿಗ್ಗಾಂವಿ ತಾಮ್ರಶಾಸನದಲ್ಲಿ ಶಿಗ್ಗಾಂವಿ ಪರಿಸರದಲ್ಲೇ 14 ಕೆರೆಗಳ ಉಲ್ಲೇಖವಿದೆ.

ರಾಜಾಶ್ರಯವಿಲ್ಲದಿದ್ದರೂ ಧಾರವಾಡವು ಆಧುನಿಕ ಕಾಲದಲ್ಲಿ ವಿದ್ಯೆ, ಸಾಹಿತ್ಯ, ಸಂಸ್ಕೃತಿ ಹಾಗೂ ರಾಜಕೀಯ ಚಟುವಟಿಕೆಗಳ ಕೇಂದ್ರವಾಯಿತು. ಹಿಂದೆ ಕುಮಾರವ್ಯಾಸ, ಕನಕದಾಸ, ಸರ್ವಜ್ಞರಂಥ ಕವಿಗಳು ಮೂಡಿಬಂದ ವಾತಾವರಣವು ಬ್ರಿಟಿಷರ ಆಗಮನದ ನಂತರ ಸಂಪರ್ಕಸಾಧನಗಳ ವೃದ್ಧಿ, ಕ್ರೈಸ್ತ ಮಿಶನರಿಗಳ ಸಂಪರ್ಕ, ನವಶಿಕ್ಷಣ, ಕೈಗಾರಿಕಾ ಕ್ರಾಂತಿಗಳಿಂದ ನವೋದಯದ ತೂಗುತೊಟ್ಟಿಲಾಗಿ ಕರ್ನಾಟಕವನ್ನು ಕಟ್ಟುವ ಕೈಗಳನ್ನು ಸೃಷ್ಟಿಸಿತು. ಈ ಐತಿಹಾಸಿಕ ಹಿನ್ನೆಲೆಯಿಂದಾದ ಸಮುದ್ರ ಮಥನ ಇಂಥ ವಾತಾವರಣ ಒಡಮೂಡಲು ಕಾರಣವಾಯಿತು. ಸಮೃದ್ಧವಾಗಿ ಹತ್ತಿ ಬೆಳೆಯುವ ನಾಡಿನಲ್ಲಿ ಅಮೇರಿಕದ ಯಾದವೀಕಲಹದ (1862-66)ಅವಧಿಯಲ್ಲಿ ಇನ್ನೂ ಹೆಚ್ಚು ಹತ್ತಿ ಬೆಳೆಯಲು ದೊರೆತ ಪ್ರೋತ್ಸಾಹ ಜಿಲ್ಲೆಯ ಕೈಗಾರಿಕಾ ಕ್ಷೇತ್ರಕ್ಕೆ ಮುಂದೆ ಹೊಸಚಾಲನೆ ನೀಡಿತು. ಹತ್ತಿ ಸಂಸ್ಕರಣವೇ ಉಗಿಬಂಡಿ ಮಾರ್ಗ ಹಾಗೂ ರಸ್ತೆಗಳ ಹೆಚ್ಚಳಕ್ಕೆ ದಾರಿಮಾಡಿತು. ಹುಬ್ಬಳ್ಳಿ, ಗದಗುಗಳು ಉಗಿಬಂಡಿ ಮಾರ್ಗಗಳ ಕೂಡು ಸ್ಥಳಗಳಾಗಿ, ಧಾರವಾಡವು ಉಗಿಬಂಡಿ ವ್ಯವಸ್ಥೆಯ ನಿರ್ವಹಣೆಯ ಕಛೇರಿಯ ತಾಣವಾಗಿ, ಹುಬ್ಬಳ್ಳಿಯು ರೈಲ್ವೇ ಕಾರ್ಯಾಗಾರದ ನೆಲೆಯಾಗಿ ಈ ಊರುಗಳಲ್ಲಿ ಮತ್ತು ಅವುಗಳ ಪರಿಸರದಲ್ಲಿ ನಾನಾ ರೀತಿಯ ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಬೆಳವಣಿಗೆಗಳಿಗೆ ದಾರಿಯಾಯಿತು.

ಜಿಲ್ಲೆಯ ಉತ್ತರದಲ್ಲಿ ಇರುವ ಮಲಪ್ರಭಾನದಿ, ದಕ್ಷಿಣಕ್ಕೆ ಗಡಿಯಂತಿರುವ ತುಂಗಭದ್ರಾ ನದಿಗಳು ಜಿಲ್ಲೆಗೆ ತನ್ನದೇ ಪ್ರತ್ಯೇಕತೆಯನ್ನು ಒದಗಿಸಿದ್ದವು. ಏಳು ಕನ್ನಡ ಜಿಲ್ಲೆಗಳಿಂದ ಸುತ್ತುವರಿದು ಆ ಎಲ್ಲ ಜಿಲ್ಲೆಗಳ ಜೊತೆ ಆರ್ಥಿಕ, ಸಾಂಸ್ಕೃತಿಕ ಸಂಬಂಧ ಹೊಂದಿ, ಅವುಗಳ ಮೇಲೆ ಧಾರವಾಡ ಜಿಲ್ಲೆ ವಿಶೇಷ ಪ್ರಭಾವ ಬೀರಿದೆ.

ಬಿಜಾಪುರದ ಆದಿಲ್‌ಷಾಹಿಗಳ ಆಳ್ವಿಕೆಯ ಕಾಲದಲ್ಲಿ ಬಂಕಾಪುರ, ಮುಂದೆ ಮುಘಲರ ಕಾಲದಲ್ಲಿ ಸವಣೂರುಗಳು ಅವರ ಆಳ್ವಿಕೆಯ ಕೇಂದ್ರಗಳಾಗಿ ಪರ್ಶಿಯನ್, ಉರ್ದು ಭಾಷೆಗಳ ಪ್ರಭಾವ ಇಲ್ಲಾದರೂ ಕನ್ನಡವನ್ನು ನುಂಗಿ ಹಾಕಲು ಜಿಲ್ಲೆಯ ಈ ವೈಶಿಷ್ಟ್ಯ ಎಡೆಗೊಡಲಿಲ್ಲ. ನರಗುಂದ, ಶಿರಹಟ್ಟಿ, ಗುಡಗೇರಿ, ಕುಂದಗೋಳಗಳು ಮರಾಠರ ಕಾಲದಲ್ಲಿ ಅವರ ಆಡಳಿತ ಕೇಂದ್ರಗಳಾದರೂ ಕನ್ನಡ ಇಲ್ಲಿಂದ ಮಾಯವಾಗಲಿಲ್ಲ. ಇಲ್ಲಿನ ಸಮೃದ್ಧ ನೇಯ್ಗೆ ಉದ್ಯಮ ಮಹಾರಾಷ್ಟ್ರದಿಂದ ನೇಕಾರರನ್ನು ಆಕರ್ಷಿಸಿದರೂ ಕನ್ನಡವನ್ನು ಅವರು ಕಡೆಗಣಿಸಲಿಲ್ಲ. ಸಮೃದ್ಧ ಧಾರ್ಮಿಕ, ಸಾಹಿತ್ಯಿಕ ಪರಂಪರೆ ಹೊಂದಿದ ಲಿಂಗಾಯಿತರು, ಕುರುಬರು, ಬ್ರಾಹ್ಮಣರು, ಕನ್ನಡ ನೇಕಾರರೇ ಮುಂತಾದ ಕನ್ನಡ ಭಾಷಿಕ ಜನ ಇಲ್ಲಿ ಕನ್ನಡವನ್ನು ಅಳಿಯಗೊಡಲಿಲ್ಲ. ಧಾರವಾಡ ಜಿಲ್ಲೆಯ ಬಹುಭಾಗ ಕನ್ನಡದ ತಿರುಳು (ಒಕ್ಕುಂದ, ಕೊಪ್ಪಳ, ಹುಲಿಗೆರೆ ಅಥವಾ ಲಕ್ಷ್ಮೇಶ್ವರ ಮತ್ತು ಪಟ್ಟದಕಲ್ಲುಗಳನ್ನು ಗಡಿಯಾಗಿ ಹೊಂದಿರುವ) ನಾಡಿನದಾಗಿತ್ತು. ಕವಿರಾಜಮಾರ್ಗಕಾರನೂ ಪಂಪನೂ ಇದನ್ನು ಸಾರಿದ್ದಾರೆ. ಈ ತಿರುಳು ನಾಡೇ ಕನ್ನಡತನದ, ರಾಷ್ಟ್ರೀಯತ್ವದ ಬೆಳೆಗೆ ಹುಲುಸು ನೆಲವಾಗಿ, ಸುತ್ತಲೂ ಬೀಜ ಪ್ರಸಾರ ಮಾಡುವ ಕೇಂದ್ರವಾಯಿತು. ಧಾರವಾಡ ಜಿಲ್ಲೆಯ ಇತಿಹಾಸ ಪರಿಚಯ ಸ್ಫೂರ್ತಿದಾಯಕ ಹಾಗೂ ಮಾರ್ಗದರ್ಶಕವಾದ ಅನೇಕ ಘಟನೆಗಳನ್ನು ಒಳಗೊಂಡ ಆಕರ್ಷಕ ಕಥಾನಕವಾಗಿದೆ.

**ಪೌರಾಣಿಕ ಹಿನ್ನೆಲೆ**

ಪೌರಾಣಿಕ ಕಥನಗಳಲ್ಲಿನ ಘಟನೆಗಳು ನಡೆದ ಸ್ಥಳಗಳನ್ನು ಗುರುತಿಸುವ ಉತ್ಸಾಹ ನಮ್ಮಲ್ಲಿ ಹಿಂದಿನಿಂದಲೂ ಇದೆ. ಹೀಗಾಗಿ ಜಿಲ್ಲೆಯ ಗಡಿಯಾಚೆಯ ಸೌಂದತ್ತಿಯನ್ನು ಜಮದಗ್ನಿ ಮುನಿಯ ಆಶ್ರಮದ ಸ್ಥಾನವೆನ್ನುವರು. ಲಕ್ಕುಂಡಿಯನ್ನು ರಾಮ ನಿರ್ಮಿತ ಮಹಾಗ್ರಾಮ ಎಂದು ರಾಮಾಯಣದ ಶ್ರೀರಾಮನ ಜೊತೆ ಸೇರಿಸಿ 11-12ನೇಯ ಶತಮಾನದ ಶಾಸನಗಳೇ ಹೇಳುತ್ತವೆ. ಸುಗ್ರೀವನ ರಾಜ್ಯವಾದ ಕಿಷ್ಕಿಂಧೆಯ ಜೊತೆ ಗುರುತಿಸಲಾದ ಹಂಪೆ ಜಿಲ್ಲೆಯಿಂದ ಬಹಳ ದೂರವೇನೂ ಇಲ್ಲ. ಹಾನಗಲ್ ಅನ್ನು ವಿರಾಟನ ರಾಜಧಾನಿ ಎನ್ನುವ ನಂಬಿಕೆ 12 ನೆಯ ಶತಮಾನದ ಶಾಸನದಲ್ಲಿ ವ್ಯಕ್ತವಾಗಿದೆ. ಇದೇ ರೀತಿ ರೋಣವು ದ್ರೋಣಪುರವಾಗಿತ್ತೆಂದು ನಂಬಲಾಗಿದೆ. ದ್ರೋಣನದೆನ್ನಲಾದ ಒಂದು ಪ್ರತಿಮೆಯು ಅಲ್ಲಿನ ಬಸವ ದೇವಾಲಯದಲ್ಲಿ ಇದೆ. ದ್ರೋಣ ಎಂಬ ಹೆಸರಿನಿಂದ ರೋಣ ನಿಷ್ಪತ್ತಿಯಾಯಿತೆಂದು ಅಭಿಪ್ರಾಯವಿದೆ. ಗದಗನ್ನು ಕೃತುಪುರವೆಂದೂ ಜನಮೇಜಯನು ಯಜ್ಞ ಮಾಡಿದ ಸ್ಥಳವೆಂದೂ ಅವನೇ ಇಲ್ಲಿನ ಅಗ್ರಹಾರವನ್ನು ಸ್ಥಾಪಿಸಿದನೆಂದೂ ಹೇಳಿಕೆಗಳಿವೆ. ನಳನ ಜೊತೆ ಹಾವೇರಿಯ ಸಂಬಂಧದ ಕತೆ ಶಾಸನ ಒಂದರಲ್ಲಿ ಬಂದಿದೆ.

## ಇತಿಹಾಸ ಪೂರ್ವಕಾಲ

ಹಳ್ಳೂರಲ್ಲಿ (ಹಿರೇಕೆರೂರು ತಾಲೂಕ) ದೊರೆತ ಕಬ್ಬಿಣದ ಉಪಕರಣಗಳೇ ಇತಿಹಾಸ ಪೂರ್ವಕಾಲದ ಮಾನವನು ದಕ್ಷಿಣ ಭಾರತದಲ್ಲಿ ಬಲು ಹಿಂದೆ, ಸುಮಾರು ಕ್ರಿ.ಪೂ. 1200ರ ಸುಮಾರಿಗೆ ಕಬ್ಬಿಣದ ಬಳಕೆಯನ್ನು ಅರಿತಿದ್ದನೆಂಬುದಕ್ಕೆ ಸಾಕ್ಷಿ ಹೇಳುತ್ತವೆ. ಧಾರವಾಡ ಜಿಲ್ಲೆಯ ಇತಿಹಾಸ ಪೂರ್ವಕಾಲದ ಇತಿಹಾಸ ಅಷ್ಟು ಮಹತ್ವದ್ದು.

ಇಡೀ ಬೆಳಗಾವಿ, ಧಾರವಾಡ, ವಿಜಾಪುರ, ಬಳ್ಳಾರಿ ಜಿಲ್ಲೆಯ ಪ್ರದೇಶಗಳಲ್ಲಿ ಆದಿಶಿಲಾಯುಗ (ಪೇಲಿಯೊಲಿಥಿಕ್ ಏಜ್) ದಿಂದಲೇ ಮಾನವನ ನೆಲೆಗಳಿವೆ. ಜಿಲ್ಲೆಯಲ್ಲಿ ಮಲಪ್ರಭಾ ಮತ್ತು ತುಂಗಭದ್ರಾಗಳ ಉಪನದಿಗಳ ಕಣಿವೆ ಪ್ರದೇಶದಲ್ಲಿ ಅನೇಕ ಇತಿಹಾಸ ಪೂರ್ವಕಾಲದ ನಿವೇಶನಗಳಿವೆ. ಖ್ಯಾತ ಭೂವಿಜ್ಞಾನಿ ಶಾಸ್ತ್ರಜ್ಞ ರಾಬರ್ಟ್ ಬ್ರೂಸ್‌ಫೂಟ್ ಮಲಪ್ರಭಾ ಮತ್ತು ಬೆಣ್ಣೆಹಳ್ಳಗಳ ಸಂಗಮ ಸ್ಥಳದಲ್ಲಿ ಆದಿ ಶಿಲಾಯುಗದ ಆಯುಧಗಳುಳ್ಳ ನೆಲೆಗಳನ್ನು ಗುರುತಿಸಿದರು. ಮೋಟೆಬೆನ್ನೂರು ಬಳಿಯ ಬಾಚಿಗುಡ್ಡದಲ್ಲೂ ಶಿಲಾಯುಧ ಹಾಗೂ ಮುಂದಿನ ಕಾಲದ ಸಂಸ್ಕೃತಿಗಳ ಮೃತ್ಪಾತ್ರೆ (ಮಡಿಕೆಕುಡಿಕೆ) ಗಳು ದೊರೆತಿದ್ದವು. ಶಿರಹಟ್ಟಿ ತಾಲೂಕಿನ ಕೊಂಚಿಗೇರಿಯಲ್ಲಿ ಆದಿ ಹಳೇ ಶಿಲಾಯುಗದ ಒಂದು ನಿವೇಶನವಿದೆ. ಇದು ತುಂಗಭದ್ರಾದ ಉಪ ನದಿಯಾದ ದೊಡ್ಡಹಳ್ಳದ ದಡದಲ್ಲಿದೆ. ಇಲ್ಲಿ ದೊರೆತ ಉಪಕರಣಗಳಲ್ಲಿ ಕ್ವಾರ್ಟ್‌ಜೈಟ್‌ನ ಕೈಕೊಡಲಿ, ಮಚ್ಚು (ಕ್ಲೀವರ್) ಮುಂತಾದ ಆಯುಧಗಳಿವೆ. ಹಾವೇರಿ ತಾಲೂಕಿನ ಜಲ್ಲಾಪುರ ಹಾಗೂ ಶಿರಹಟ್ಟಿ ತಾಲೂಕಿನ ಜಿರಮಾದಾಪುರ ಹಾಗೂ ನಿಟ್ಟೂರುಗಳಲ್ಲಿ ಆದಿ ಶಿಲಾಯುಗದ ನಲೆಗಳನ್ನು ಗುರುತಿಸಿದ್ದು ಆಹಾರ ಸಂಗ್ರಹದ ಹಂತದಲ್ಲಿದ್ದ ಆದಿಮಾನವ ಜಿಲ್ಲೆಯ ಪೂರ್ವಕ್ಕೆ (ಎಂದರೆ ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಮೈದಾನ ಪ್ರದೇಶದಲ್ಲಿ) ಹೆಚ್ಚಾಗಿ ಹರಡಿದ್ದನೆಂದು ಡಾ|| ಪಾಡಿಗಾರ್ ಹೇಳುತ್ತಾರೆ. ಧಾರವಾಡ ತಾಲೂಕಿನ ಬೇಚಮಟ್ಟಿ, ಹಾನಗಲ್ಲು ತಾಲೂಕಿನ ವರ್ದಿಗಳಲ್ಲೂ ಆದಿ ಹಳೆ ಶಿಲಾಯುಗದ ಸಲಕರಣೆಗಳು ದೊರೆತಿವೆ. ಇವು ಅಬೆವಿಲ್ಲಿಯನ್ ಹಾಗೂ ಅಷೂಲಿಯನ್ ತಂತ್ರ ಪ್ರಕಾರಗಳಿಗೆ ಸೇರಿವೆ. ನದೀಹರಳಹಳ್ಳಿ (ರಾಣೆಬೆನ್ನೂರು ತಾಲೂಕು) ಮತ್ತು ನಲವಾಗಲು (ಹಿರೇಕೆರೂರು ತಾಲೂಕು) ಹಾಗೂ ಹೊಳೆ ಆಲೂರುಗಳಲ್ಲಿ ಸೂಕ್ಷ್ಮ ಶಿಲಾಯುಧಗಳು (ಮೈಕ್ರೊಲಿತ್ಸ್) ದೊರೆತಿವೆ.

ಒರಟು ಶಿಲಾಯುಧಗಳನ್ನು ಬಳಸುತ್ತಿದ್ದ ಆದಿ ಹಳೆ ಶಿಲಾಯುಗದ ಮಾನವರು ಕಾಲಾಂತರದಲ್ಲಿ ಉಜ್ಜಿ ನಯಮಾಡಿದ ಆಯುಧಗಳನ್ನು ಬಳಸಲು ಆರಂಭಿಸಿದ್ದು ನವಶಿಲಾಯುಗದಲ್ಲಿ. ಆಗ ಅವನ ಅಲೆಮಾರಿ ಜೀವನ ಕೊನೆಯಾಗಿ ಸ್ಥಿರ ನೆಲೆಗಳನ್ನು ಅವನು ಕಂಡುಕೊಂಡ. ವಾಸದ ಮನೆಗಳನ್ನು ಕಟ್ಟಿಕೊಂಡು ಕೃಷಿ, ಪಶುಪಾಲನೆ ಆರಂಭಿಸಿದ. ಕಪ್ಪು ಮತ್ತು ಕೆಂಪು ಬಣ್ಣದ ಇಲ್ಲವೆ ಬೂದು ಬಣ್ಣದ ಮಡಿಕೆ ಕುಡಿಕೆಗಳನ್ನು ಒಳಗೊಂಡ ಈ ಕಾಲದ ನಿವೇಶನಗಳು ನರಗುಂದ ತಾಲೂಕಿನ ಅರಶಿಣಗೋಡಿ, ಬೈರನಹಟ್ಟಿ, ಹಾರುಗುಪ್ಪ, ಕುರುಗೋವಿನ ಕೊಪ್ಪ, ಲಿಂಗಧಾಳ ಹಾಗೂ ಶಿರೋಳ, ನವಲಗುಂದ ತಾಲೂಕಿನ ಗುಡಿಸಾಗರ, ರೋಣ ತಾಲೂಕಿನ ಮಣ್ಣೂರು, ಮೆಣಸಗಿ, ನಿಡಗುಂದಿ ಮತ್ತು ನಿಡಗುಂದಿ ಕೊಪ್ಪ, ಶಿರಹಟ್ಟಿ ತಾಲ್ಲೂಕಿನ ಬಟ್ಟೂರು, ಹಿರೇಕೆರೂರು ತಾಲೂಕಿನ ಹಳ್ಳೂರು ಮುದೇನೂರು, ಅಲ್ಲದೆ, ನದೀಹರಳಹಳ್ಳಿ, ಬೇಲೂರು, ಹಾದರಗೇರಿ (ಈಗ ಹರಗಿರಿ), ಕುನಬೇವು, ನೀರಲಗಿ ಮುಂತಾದ ಎಡೆಗಳಲ್ಲಿ ದೊರೆತಿವೆ. ಇಲ್ಲಿನ ಶಿಲಾಯುಧಗಳಲ್ಲಿ ಚಾಕುವಿನಂಥ ನೀಳ ಚಕ್ಕೆಗಳು ಮತ್ತು ಒರೆಗಳು ದೊರೆತಿವೆ. ಇವುಗಳೊಡನೆ ನವಶಿಲಾಯುಗದ ನಂತರದ ಕಬ್ಬಿಣದ ಯುಗದ ಬೃಹತ್ ಶಿಲಾ (ಮೆಗ್ಯಾಲಿಥಿಕ್) ಸಂಸ್ಕೃತಿಯ ಮಡಿಕೆಗಳು ಕುನಬೇವು, ಹಳ್ಳೂರು, ಹರಗಿರಿ (ಹಿಂದಿನ ಹಾದರಗೇರಿ) ಹಳ್ಳೂರು ನೆಲೆಗಳಲ್ಲಿ ಸಿಕ್ಕಿವೆ. ಇವುಗಳ ಮೇಲೆ ತಿಳಿ ಬಿಳಿ ಬಣ್ಣದ ಚಿತ್ರಗಳಿವೆ. ರೋಣ ತಾಲೂಕಿನ ಹಿರೇಹಾಳ, ಹಾಗೂ ಹಿರೇಕೆರೂರು ತಾಲೂಕಿನ ಪುರದಕೇರಿಗಳಲ್ಲಿ ಇಂಥ ನೆಲೆಗಳಿವೆ.

ಇತ್ತೀಚೆಗೆ ಡಾ|| ಎಚ್.ಆರ್. ರಘುನಾಥ್ ಭಟ್ ಧಾರವಾಡ ಬಳಿಯ ಕ್ಯಾರಕೊಪ್ಪದ ಹೊರವಲಯದಲ್ಲಿ ನವಶಿಲಾಯುಗದ ಕೊಡಲಿಗಳನ್ನು ಹಲವು ಕ್ವಾರ್ಟ್‌ಜೈಟ್ ಆಯುಧಗಳನ್ನು ಪತ್ತೆಮಾಡಿದ್ದಾರೆ. ಆದರೆ, ಹಳ್ಳೂರನ್ನು ಡಾ|| ಎಂ.ಎಸ್. ನಾಗರಾಜ ರಾವ್ ಉತ್ಖನನಕ್ಕೆ ಒಳಪಡಿಸಿದ್ದು ಅಲ್ಲಿ ನವಶಿಲಾಯುಗ (ಕ್ರಿ.ಪೂ.1700) ಹಾಗೂ ತಾಮ್ರ ಶಿಲಾಯುಗದ ಹಾಗೂ ಕಬ್ಬಿಣಯುಗದ ಬೃಹತ್ ಶಿಲಾಯುಗದ ಮತ್ತು ಆದಿ ಇತಿಹಾಸ (ಪ್ರೋಟೊಹಿಸ್ಟಾರಿಕ್) ಕಾಲದ ಮೃತ್ ಪಾತ್ರೆಗಳು, ಕ್ವಾರ್ಟ್ಜ್ ಕಲ್ಲಿನ ಚಕ್ಕೆಗಳು, ಗುಡಿಸಲು ಮನೆಗಳು ಮುಂತಾದ ಅವಶೇಷಗಳು ಹಳ್ಳೂರಲ್ಲಿ ದೊರಕಿವೆ. ಬಹುಶಃ ತಾಮ್ರ ಶಿಲಾಯುಗದ ಜನರು ಜೊರ್ವೆ ಸಂಸ್ಕೃತಿಯ ಜನರ ಜೊತೆ ಸಂಪರ್ಕ ಹೊಂದಿದ್ದರು. ನೂತನ ಶಿಲಾಯುಗದ ಇಲ್ಲಿನ ಜನರಿಗೆ ಕುದುರೆಯ ಬಳಕೆಯೂ ತಿಳಿದಿತ್ತು. ರಾಗಿಯನ್ನು ಇವರು ಬೆಳೆಸುತ್ತಿದ್ದರು. ವೃತ್ತಾಕಾರದ ಗುಡಿಸಲನ್ನು ಸೂಚಿಸುವ ತಟ್ಟಿ ಮಾಡಿದ ನೆಲಗಟ್ಟುಗಳು, ಅವುಗಳ ಮಧ್ಯೆ ಕಂಬಗುಳಿಗಳು ಕಾಣಿಸಿವೆ. ತಲೆ ಕೊರಡು ಎಂದು ಹೆಸರಿಸಿದ ಮಣ್ಣಿನ ವಸ್ತು, ಶವ ಸಂಸ್ಕಾರದ ಮಣ್ಣಿನ ದೊಡ್ಡ ಮಡಕೆಗಳು, ಹೆಣೆದ ಚಾಪೆಯ ಗುರುತು,

ತಾಮ್ರದ ಕೊಡಲಿ, ಗಾಳ, ಇವೆಲ್ಲ ಸಂಗತಿಗಳೂ ದೊರೆತಿವೆ. ಇದೇ ನಿವೇಶನದಲ್ಲಿ ತರುವಾಯದ ಬೃಹತ್ ಶಿಲಾಯುಗದ (ಕ್ರಿ.ಪೂ.ಸು.1000 ವರ್ಷದಷ್ಟು ಹಳೆಯ) ಕಬ್ಬಿಣದ ಬಾಣಶಿರ, ಚಾಕು, ಬರ್ಚಿಗಳೂ ದೊರೆಕಿವೆ.

ಬೃಹತ್ ಶಿಲಾಯುಗದ ಜನರ ಭಾರೀ ಗಾತ್ರದ ಕಲ್ಲು ಚಪ್ಪಡಿಗಳಿಂದ ಮಾಡಿದ ಮೇಜಿನಂತೆ ಕಾಣುವ ಕಲ್ಮನೆಗಳು ಹಾಗೂ ಶಿಲಾ ವೃತ್ತಗಳು ಜಿಲ್ಲೆಯ ಹಲವೆಡೆ ಕಾಣಬಂದಿವೆ. ನರಗುಂದ ತಾಲೂಕು ಕುರುಗೋವಿನಕೊಪ್ಪ, ರೋಣ ತಾಲೂಕಿನ ಗಜೇಂದ್ರಗಡ, ಗೌಡಗೇರಿ ಹಾಗೂ ರಾಜೂರು, ರಾಣೆಬೆನ್ನೂರು ತಾಲೂಕು ಅಸುಂಡಿ, ಕೋಟಿಹಾಳ, ಕುಸನೂರು ಹಾಗೂ ಮಲಕನಹಳ್ಳಿ, ಹಾವೇರಿ ತಾಲೂಕು ಬೆನಕನಹಳ್ಳಿ, ಬ್ಯಾಡಗಿ ತಾಲೂಕು ಮೋಟೆಬೆನ್ನೂರು, ಕದರಮಂಡಲಗಿ, ಶಿರಹಟ್ಟಿ ತಾಲೂಕು ಬೆಳ್ಳಟ್ಟಿ, ಹೊಸೂರು, ಬೆಳಘಟ್ಟಿ, ತನಗೊಂಡ ಮುಂತಾದೆಡೆ ಇಂಥ ಕಲ್ಮನೆಯಂಥ ಗೋರಿಗಳಿವೆ. ಶಿಲೆಯ ಹಲಗೆಗಳನ್ನು ಬಳಸಿ ಮಾಡಿದ ಈ ಬೃಹತ್ ಕಲ್ಮನೆ ಸಮಾಧಿಗಳನ್ನು ಪಾಂಡವರ ಕಟ್ಟೆ, ಸಿದ್ಧರ ಕಟ್ಟೆ, ಮೋರಿಯರ ಅಂಗಡಿ ಎಂದೆಲ್ಲಾ ಕರೆಯುತ್ತಾರೆ. ಇದಲ್ಲದೆ ದೊಡ್ಡ ದೊಡ್ಡ ಕಲ್ಲುಗಳಿಂದ ರಚಿಸಿದ ಶಿಲಾ ವೃತ್ತಗಳೂ ಇವೆ. ಕಲ್ಲುಗಳನ್ನು ಸೇರಿಸಿ ಮಾಡಿದ ಅರ್ಧಗೋಲಾಕಾರದ ದಿನ್ನೆಗಳಿವೆ. ಕಪ್ಪು ಮತ್ತು ಕೆಂಪು ಬಣ್ಣದ ಇಲ್ಲವೆ ಹೊಳಪುಳ್ಳ ಕಪ್ಪು ಬಣ್ಣದ ಪಾತ್ರೆಗಳು, ಮಾನವ ಅಸ್ಥಿಪಂಜರಗಳ ಅವಶೇಷಗಳು, ಮಣಿಗಳು, ಮಣ್ಣಿನ ಗೊಂಬೆಗಳು, ಕಬ್ಬಿಣದ ಆಯುಧಗಳು ಈ ಸಮಾಧಿಗಳಲ್ಲಿ ಸಿಗುತ್ತವೆ. ಹಳ್ಳೂರಿನ ಬೃಹತ್ ಶಿಲಾಯುಗದ ವಾಸ್ತವ್ಯದ ನೆಲೆಗಳಲ್ಲಿ ಹಾಗೂ ತಡಕನಹಳ್ಳಿಯ ಕಲ್ಗೋರಿಗಳಲ್ಲಿ ಕಪ್ಪು, ಕೆಂಪು ಹಾಗೂ ಹೊಳಪಿನ ಕಪ್ಪುವರ್ಣದ ಪಾತ್ರೆಗಳಲ್ಲಿ, ಮಸುಕಾದ ಬಿಳಿವರ್ಣದ ರೇಖಾ ಚಿತ್ರಗಳಿರುವುದು ಗಮನಾರ್ಹ. ಇಂಥ ಪಾತ್ರೆಗಳು ಲೋಥಲ್ ಮುಂತಾದೆಡೆ ಹರಪ್ಪ ನಾಗರಿಕತೆಯ ಆದಿಹಂತದಲ್ಲಿ ಬಳಕೆಯಲ್ಲಿದ್ದವೆಂದು ಡಾ|| ಎ. ಸುಂದರ ಹೇಳುತ್ತಾರೆ. ಇಲ್ಲಿ ದೊರಕಿದ ಕೆಲವು ಮಡಿಕೆಗಳ ಭುಜದ ಮೇಲೆ ಸಮಾನ ಅಂತರದಲ್ಲಿ ನಾಲ್ಕು ಬಾಯಿಗಳಿರುವ ರಚನೆ ಇದೆ. ಇಂಥ ಸಂಗೀತ ಸಾಧನಗಳು ಪಟ್ಟದಕಲ್ಲು, ಅರಳು ಗುಪ್ಪೆಗಳಲ್ಲಿ ನಂತರದ ಶಿಲ್ಪಗಳಲ್ಲಿ ಕಂಡು ಬಂದಿವೆ. ಅವುಗಳಿಗೆ ಐದು ಬಾಯಿಗಳಿವೆ. ರೋಣ ತಾಲೂಕು ಉಣಚಗೇರಿಯಲ್ಲಿ ಒಂದೆರಡು ಶವಕುಣಿಗಳಲ್ಲಿ ಎಲುಬಿನ ತುಂಡುಗಳಿದ್ದ ಮಡಿಕೆಗಳು ಹಳ್ಳವೊಂದರ ದಂಡೆಯಲ್ಲಿ ಸಿಕ್ಕಿದೆ.

ಈ ಸಂಸ್ಕೃತಿಯ ಕಾಲಮಾನ ಸುಮಾರು ಕ್ರಿ.ಪೂ.1100 ರಿಂದ ಕ್ರಿ.ಪೂ.300.

## ಶಾತವಾಹನರು

ಮೋರಿಯರ ಅಂಗಡಿಗಳು ಎಂದು ಕರೆಯಲಾಗುವ ಕೆಲವು ಶಿಲಾ ಸಮಾಧಿಗಳ ಆಧಾರದಿಂದ ಧಾರವಾಡ ಜಿಲ್ಲೆಯಲ್ಲಿ ಮೌರ್ಯರು ಆಳುತ್ತಿದ್ದರೆನ್ನಲು ಆಧಾರ ಸಾಲದು. ಚಿತ್ರದುರ್ಗ (ಚಂದ್ರವಳ್ಳಿ)ದಿಂದ ಸನ್ನತಿಯವರೆಗೆ ಅಶೋಕನ ಶಾಸನಗಳು ಸಿಕ್ಕಿದ್ದರಿಂದ ಪೂರ್ವ ಕರ್ನಾಟಕದಷ್ಟೇ ಅವರ ಆಡಳಿತಕ್ಕೆ ಒಳಪಟ್ಟಿತ್ತೆಂದು ಹೇಳಬಹುದು. ನೆರೆಯ ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅಶೋಕನ ಶಾಸನಗಳು ದೊರೆತಿದ್ದರೂ ಧಾರವಾಡದಲ್ಲಿ ದೊರೆತಿಲ್ಲ.

ಶಾತವಾಹನದ ಸಾಮ್ರಾಜ್ಯ ಮಾತ್ರ ಧಾರವಾಡ ಜಿಲ್ಲೆಯನ್ನೂ ಒಳಗೊಂಡಿತ್ತು. ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಯ ಪ್ರದೇಶಗಳನ್ನು ಶಾತವಾಹನೀಹಾರ ಎಂದು ಕರೆದಿರುವುದರಿಂದ ಅವರು ಇದೇ ಪ್ರದೇಶಕ್ಕೆ ಮೂಲತಃ ಸೇರಿದವರೆಂದು ಡಾ||ಸುಖ್ತನಕರರ ಅಭಿಪ್ರಾಯ. ಆದರೆ ಇತ್ತೀಚೆಗೆ ವಂಶಸ್ಥಾಪಕ ಚಿಮುಕ (ಶ್ರೀಮುಖ)ನ ನಾಣ್ಯಗಳು ಆಂಧ್ರದ ಕರೀಂನಗರ ಜಿಲ್ಲೆಯಲ್ಲಿ ವಿಪುಲವಾಗಿ ದೊರೆತಿದ್ದು ಇದರಿಂದ ಅವರ ಮೂಲ ಕರ್ನಾಟಕವೆನ್ನಲು ಬಾರದು. ವಡಗಾಂವ್ ಮಾಧವಪುರದಲ್ಲಿ (ಬೆಳಗಾವಿ ಬಳಿ) ಇವರ ಕಾಲದ ಒಂದು ಊರಿನ ನಿವೇಶನದ ಅವಶೇಷ ದೊರೆತಿದ್ದು ಇತ್ತೀಚೆಗೆ ನರಗುಂದ ತಾಲೂಕಿನ ಗಡಿಯ ವಾಸನದಲ್ಲಿ ವಾಸಿಷ್ಠಿಪುತ್ರ ಶ್ರೀಪುಳುಮಾವಿಯ ಒಂದು ಪ್ರಾಕೃತ ಶಾಸನವೂ ದೊರೆತಿದೆ. ಈ ಶಾಸನದಲ್ಲಿ ಮಹಾದೇವ ಚಂಡಶಿವನ ದೇವಾಯತನ ಹಾಗೂ ಶಿಲ್ಪಿಯೊಬ್ಬನ ಉಲ್ಲೇಖವಿದೆ. ಕರ್ನಾಟಕದಲ್ಲಿ ಈವರೆಗೆ ತಿಳಿದಿರುವ ಅತಿ ಪ್ರಾಚೀನ ಶೈವ ದೇವಾಲಯದ ಉಲ್ಲೇಖವಿದು, ಎಂದು ಈ ಬಗೆಗೆ ಡಾ|| ಪಾಡಿಗಾರ್ ಹೇಳಿದ್ದಾರೆ.

ಗೋದಾವರೀ ತೀರದ ಪೈಠಣ ಅಥವಾ ಪ್ರತಿಷ್ಠಾನವನ್ನು ರಾಜಧಾನಿಯನ್ನಾಗಿ ಹೊಂದಿದ್ದ ಈ ಅರಸರು ಮಹಾರಾಷ್ಟ್ರ ನಾಸಿಕ್, ಕಾರ್ಲೆ, ಕನ್ಹೇರಿ ಮುಂತಾದೆಡೆ ಅನೇಕ ಗುಹಾಲಯಗಳನ್ನು ಆಂಧ್ರದಲ್ಲಿ (ಅಮರಾವತಿ, ಇತ್ಯಾದಿ) ಅನೇಕ ಸ್ತೂಪಗಳನ್ನು ಬಿಟ್ಟು ಹೋಗಿದ್ದಾರೆ. ದಖ್ಖಿಣ ಪ್ರದೇಶದಲ್ಲಿ ಕಬ್ಬಿಣದಿಂದ ಮಾಡಿದ ಗುಳವುಳ್ಳ ನೇಗಿಲನ್ನು ಬಳಸಿ ಕೃಷಿಯು ವ್ಯಾಪಕವಾಗಿ ಬೆಳೆಯಲು ಇವರು ಕಾರಣ ಕರ್ತರಾದರೆಂದು ಒಂದು ಅಭಿಪ್ರಾಯವಿದೆ. ಕಬ್ಬಿಣದ ಬಳಕೆ ವ್ಯಾಪ್ತವಾಗಿ ಹರಡಿದ್ದರಿಂದಲೇ ಕಾರ್ಲೆಯಲ್ಲಿರುವಂಥ

ಚೈತ್ಯಗಳ ರಚನೆ ಕೂಡ ಅವರಿಗೆ ಸಾಧ್ಯವಾಯಿತು. ಈ ರಾಜರು ವೈದಿಕ ಧರ್ಮಾನುಯಾಯಿಗಳಾಗಿದ್ದು ಯಜ್ಞಯಾಗಾದಿಗಳನ್ನು ನಡೆಸಿದರಾದರೂ ಇವರ ರಾಣೀವಾಸದ ಹಾಗೂ ಅಧಿಕಾರಿ ವರ್ಗದ ಅನೇಕರು ಬೌದ್ಧರಾಗಿದ್ದು ಬೌದ್ಧ ಧರ್ಮವನ್ನು ಪ್ರೋತ್ಸಾಹಿಸಿದರು.

ಇವರ ಪ್ರಥಮ ದೊರೆ ಶ್ರೀಮುಖನ ಕಾಲವನ್ನು ಕ್ರಿ.ಪೂವ.30 ಎಂದು ಡಾ॥ಡಿ.ಸಿ. ಸರ್ಕಾರರು ಸಕಾರಣವಾಗಿ ನಿರ್ಣಯಿಸಿದ್ದು, ಕಣ್ಹ, ಶಾತಕರ್ಣಿ (ಕ್ರಿ.ಪೂ.03 ರಿಂದ ಕ್ರಿ.ಶ.15) ಇವನ ಉತ್ತರಾಧಿಕಾರಿಗಳು. ಮುಂದೆ ಶಕರ ದಾಳಿಯಿಂದ ಇವರ ರಾಜ್ಯ ದುರ್ಬಲವಾಯಿತಾದರೂ ಗೌತಮೀಪುತ್ರ (ಸು.ಕ್ರಿ.ಶ.106 ರಿಂದ 130)ನು ಈ ವಂಶದ ಘನತೆಯನ್ನು ಮತ್ತೆ ಎತ್ತಿಹಿಡಿದನು. ಇವನ ಮಗ ವಾಸಿಷ್ಠೀ ಪುತ್ರ ಪುಲುಮಾವಿಯ (ಸು.130-150)ಯ ಪ್ರಾಕೃತ ಶಾಸನಗಳು ವಾಸನದಲ್ಲೂ ಉತ್ತರ ಕನ್ನಡದ ಬನವಾಸಿಯಲ್ಲೂ ದೊರೆತಿವೆ. ಈತನ ನಾಣ್ಯಗಳು ವಡಗಾಂವ್ ಮಾಧವಪುರದಲ್ಲೂ ದೊರೆತಿವೆ. ಈತನ ಉತ್ತರಾಧಿಕಾರಿಗಳು ಶಿವಶ್ರೀ (ಸು.159 ರಿಂದ 166),ಶಿವಸ್ಕಂದ (167 ರಿಂದ 174), ಮತ್ತು ಯಜ್ಞಶ್ರೀ (174 ರಿಂದ 203) ಎಂದು ತಿಳಿಯುತ್ತದೆ. ಯಜ್ಞಶ್ರೀಯ ನಂತರ ರಾಜ್ಯವು ವಿಭಜಿತವಾಗಿ ಕುಂತಲ ಮತ್ತು ಮುಂದೆ ಹಾಲ ಎಂಬ ರಾಜ ಪುತ್ರರು ಕರ್ನಾಟಕದಿಂದಲೇ, ಎಂದರೆ ಬಹುಶಃ ಬನವಾಸಿಯಿಂದ ಆಳುತ್ತಿದ್ದರು. ಗಾತಾಸತ್ತಸತಿ ಹಾಲನ ಪ್ರಾಕೃತ ಕೃತಿ. ಕ್ರಿ.ಶ.232 ರ ಸುಮಾರಿಗೆ ಶಾತವಾಹನರ ಆಡಳಿತ ಅಂತ್ಯವಾಯಿತು.

ಧಾರವಾಡ ಜಿಲ್ಲೆಯಲ್ಲಿ ಶಾತವಾಹನರ ಆಡಳಿತದ ಬಗ್ಗೆ ಡಾ॥ ಪಾಡಿಗಾರರು ಹೇಳಿದ ಮಾತುಗಳನ್ನು ಇಲ್ಲಿ ಉದ್ಧರಿಸಬಹುದು: ಇವರ ಕಾಲದಲ್ಲಿ ವ್ಯಾಪಾರಕ್ಕೆ ಬಹಳಷ್ಟು ಮಹತ್ವ ಬಂದಿತಲ್ಲದೇ ಅನೇಕ ಸಂಖ್ಯೆಯಲ್ಲಿ ನಗರಗಳು ಅಸ್ತಿತ್ವಕ್ಕೆ ಬಂದವು. ದಕ್ಷಿಣ ಭಾರತದಲ್ಲಿ ಇವರ ಕಾಲದಲ್ಲಿ ಪ್ರಥಮ ನಗರೀಕರಣ ಕಂಡಿತೆಂದು ಹೇಳಬಹುದು. ಧಾರವಾಡ ಜಿಲ್ಲೆಯ ಸಂಗೂರು, ಹೊಸರಿತ್ತಿ, ಕಳ್ಳಿಹಾಳ್ (ಹಾವೇರಿ ತಾಲೂಕು), ತಡಸ, ಸಿಡೇನೂರು, ಆನೂರು, ಕದರಮಂಡಲಗಿ, ಮೋಟೆಬೆನ್ನೂರು (ಬ್ಯಾಡಗಿ ತಾಲೂಕು), ಹೊನ್ನತ್ತಿ, ಕುದ್ರಿಹಾಳ, ಮುದೇನೂರ, ಕುನಬೇವು, ಇಟಗಿ (ರಾಣೆಬೆನ್ನೂರು ತಾ.), ಬೆರಳಹಟ್ಟಿ, ನಿಟ್ಟೂರು, ಶಂಖದಹಾಳ, ಯೆಳವಟ್ಟಿ (ಹಿರೇಕೆರೂರು ತಾಲೂಕು) ಮುಂತಾದವು ಈ ಕಾಲದ ಅವಶೇಷಗಳು ಕಂಡು ಬಂದಿರುವ ನೆಲೆಗಳು, ಎಂದು ಅವರು ಹೇಳಿದ್ದಾರೆ. ಇಟ್ಟಿಗೆಯ ರಚನೆಗಳ ಅವಶೇಷಗಳು, ಮಣ್ಣಿನ ಗೊಂಬೆಗಳು ಮಣಿಯ ಆಭರಣಗಳು ನಾಣ್ಯಗಳು, ರಸೆಟ್ ಕೋಟೆಡ್ (ಬಿಳಿ ಬಣ್ಣದಲ್ಲಿ ಚಿತ್ರಗಳನ್ನು ಬರೆದಿರುವ) ಮಣ್ಣಿನ ಪಾತ್ರೆಗಳು ಈ ಸ್ಥಳಗಳಲ್ಲಿ ದೊರೆತಿವೆ. ಅಲೆಕ್ಸಾಂಡ್ರಿಯಾದ ಗ್ರೀಕ್ ಭೂಗೋಲ ತಜ್ಞ ಟಾಲೆಮಿಯ (ಕ್ರಿ.ಶ.130) ಉಲ್ಲೇಖಿಸಿರುವ ಊರುಗಳಲ್ಲಿ ಧಾರವಾಡ ಜಿಲ್ಲೆಯ ಆಲೂರು (ಅಲೋ), ಮುಳಗುಂದ (ಮೊರುಂದ) ಮುಂತಾದವುಗಳೂ ಸೇರಿದ್ದವೆಂದು ಗುರುತಿಸಲಾಗಿದೆ. ಎಂದರೆ ಆಗ ಭಾರತ ಮತ್ತು ರೋಮ್‌ಗಳ ನಡುವೆ ನಡೆದ ಸಮೃದ್ಧ ವ್ಯಾಪಾರದಲ್ಲಿ ಧಾರವಾಡ ಜಿಲ್ಲೆಯೂ ಪಾಲು ಹೊಂದಿರಬೇಕು. ಹಾನಗಲ್ ತಾಲೂಕು ಅಕ್ಕಿ ಆಲೂರಲ್ಲಿ ರೋಮನ್ ನಾಣ್ಯಗಳು ದೊರೆತಿರುವುದೂ ಇದಕ್ಕೆ ಆಧಾರ. ಶಾತವಾಹನರ ರಾಜ್ಯವು ಕೈಮಗ್ಗದ ಉದ್ಯಮಕ್ಕೆ ಪ್ರಸಿದ್ಧವಾಗಿದ್ದು ಅಂಥ ಉದ್ಯಮದ ಕೇಂದ್ರಗಳು ಧಾರವಾಡ ಜಿಲ್ಲೆಯಲ್ಲೂ ಇದ್ದಿರಬೇಕು. ಒಟ್ಟಿನಲ್ಲಿ ಶಾತವಾಹನರು ತಮ್ಮ ಆಳ್ವಿಕೆಯ ಕುರುಹನ್ನು ಬಿಟ್ಟು ಹೋದ ಮೊದಲ ರಾಜವಂಶವಾಗಿದ್ದಾರೆ. ಮುಂದೆ ಇವರ ಪತನಾನಂತರ ಕೆಲವರ್ಷ ಕರ್ನಾಟಕವು ಕಾಂಚಿಯ ಪಲ್ಲವರ ವಶವಾದಂತೆ ತೋರುತ್ತದೆ.

## ಬನವಾಸಿ ಕದಂಬರು

ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಿಂದ ಕ್ರಿ.ಶ. ಸುಮಾರು 325 ರಿಂದ ಆಳಲು ಆರಂಭಿಸಿದ ಮಯೂರ ಶರ್ಮನಿಂದ ಕದಂಬವಂಶ ಸ್ಥಾಪನೆಯಾಯಿತು. ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಗ್ರಹಾರದ ಬ್ರಾಹ್ಮಣನಾದ ಈತನು ಪಲ್ಲವ ರಾಜಧಾನಿ ಕಾಂಚಿಯ ಘಟಿಕಾಸ್ಥಾನಕ್ಕೆ ಹೆಚ್ಚಿನ ಶಿಕ್ಷಣಕ್ಕಾಗಿ ತೆರಳಿರಲು ಅಲ್ಲಿ ಅವಮಾನಿತನಾಗಿ ಬಂಡೆದ್ದು ಪ್ರಥಮ ಕನ್ನಡ ಮೂಲದ ರಾಜವಂಶವನ್ನು ಸ್ಥಾಪಿಸಿದ್ದು ಧಾರವಾಡ ಜಿಲ್ಲೆಯ ಬಹುಭಾಗವು ಕದಂಬರ ಆಡಳಿತಕ್ಕೆ ಸೇರಿತ್ತು. ಕರ್ನಾಟಕದಲ್ಲಿನ ಪಲ್ಲವಸತ್ತೆಯನ್ನು ಇವನು ಕೊನೆಗಾಣಿಸಿದನು.

ಮಯೂರ ಶರ್ಮ (ಸು.325 ರಿಂದ 345), ಅವನ ನಂತರ ಅವನ ಪುತ್ರ ಕಙ್ಗವರ್ಮ (ಸು.345 ರಿಂದ 365), ಅನಂತರ ಕಙ್ಗವರ್ಮನ ಮಗನಾದ ಭಗೀರಥ (ಸು.365 ರಿಂದ 85), ಮುಂದೆ ಭಗೀರಥನ ಮಗ ರಘು (ಸು.385 ರಿಂದ 405) ಇವರುಗಳು ಬನವಾಸಿಯಿಂದ ಆಳಿದರು. ಈ ಕಾಲದಲ್ಲಿ ಇವರಿಗೆ ಪಲ್ಲವರಿಂದಲೂ ಅನ್ಯಶತ್ರುಗಳಿಂದಲೂ ತೊಂದರೆಯಾಗಿದ್ದರೂ ಅದನ್ನು

ಪ್ರತಿಭಟಿಸಿ ನಿಲ್ಲುವಲ್ಲಿ ಅವರು ಸಮರ್ಥರಾದರು. ರಘುವು ತನ್ನ ಶತ್ರುಗಳನ್ನು ಸೋಲಿಸಿ (ಪುರಾಣಗಳಲ್ಲಿ ಹೇಳಿದ) ಪೃಥುವಿನಂತೆ ತನ್ನ ರಾಜ್ಯವನ್ನು ಶತ್ರುಗಳಿಂದ ಮುಕ್ತಗೊಳಿಸಿದನೆಂದು ಹೇಳಿದೆ.

ರಘುವಿನ ಕಾಲದಲ್ಲಿ ಯುವರಾಜನಾಗಿದ್ದ ಅವನ ತಮ್ಮ ಕಾಕುಸ್ಥನು ಸಮರ್ಥ ದೊರೆಗಳಲ್ಲಿ ಒಬ್ಬನಾಗಿದ್ದು ಈತನ ಆಳ್ವಿಕೆಯ ಕಾಲದ ತಾಳಗುಂದ ಶಾಸನವು ಕದಂಬರ ಇತಿಹಾಸವನ್ನು ವಿವರವಾಗಿ ತಿಳಿಸುತ್ತದೆ. ಈತನ ಕಾಲದಲ್ಲಿ ರಾಜ್ಯವು ಇನ್ನಷ್ಟು ವೈಶಾಲ್ಯವನ್ನು ಪಡೆಯಿತು. ಹಲಸಿಯಲ್ಲಿ (ಬೆಳಗಾವಿ ಜಿಲ್ಲೆ) ತನ್ನ ಜೈನ ಸೇನಾನಿ ಶ್ರುತಕೀರ್ತಿ ಎಂಬವನಿಗೆ ಈತನು ದಾನವನ್ನು ಕೊಟ್ಟ ತಾಮ್ರಪಟ ದೊರೆಯುತ್ತದೆ. ಕದಂಬರ ಕಾಲದಲ್ಲಿ ಹಲಸಿಯಲ್ಲಿ ಒಂದು ಜೈನ ಬಸದಿಯೂ ಸ್ಥಾಪನೆಗೊಂಡಿತು. ದೇವಗಿರಿ (ಹಾವೇರಿ ತಾಲೂಕು)ನಲ್ಲಿ ದೊರೆತ ಈತನ ಆಳ್ವಿಕೆಯ ಮೂರನೆಯ ಮತ್ತು ನಾಲ್ಕನೇಯ ವರ್ಷದ ತಾಮ್ರಪಟಗಳು ಅರ್ಹದ್ದೇವರಿಗೆ ದಾನ ನೀಡಿದ ವಿಚಾರ ಹೇಳುತ್ತವೆ. ಎರಡನೇಯ ಶಾಸನವು ಅರ್ಹಚ್ಛಲದಲ್ಲಿರುವ ಬಸದಿಗೂ ಶ್ವೇತಾಂಬರ ಮತ್ತು ದಿಗಂಬರ ಸಂನ್ಯಾಸಿಗಳಿಗೂ ದಾನ ನೀಡಿದ ಸಂಗತಿಯನ್ನು ಹೇಳುತ್ತದೆ. ಕಾಕುಸ್ಥವರ್ಮನು ತನ್ನ ಹೆಣ್ಣುಮಕ್ಕಳನ್ನು ಗುಪ್ತ, ವಾಕಾಟಕ, ಭಟಾರಿ, ಗಂಗ ವಂಶಗಳಲ್ಲಿ ಮದುವೆ ಮಾಡಿಕೊಟ್ಟು ತನ್ನ ಮನೆತನದ ಪ್ರತಿಷ್ಠೆಯನ್ನು ಹೆಚ್ಚಿಸಿದ್ದುದಲ್ಲದೆ ನೆರೆಯ ರಾಜರ ಜೊತೆ ಸ್ನೇಹಯುತ ಸಂಬಂಧವನ್ನು ಹೊಂದಿದ್ದನು.

ಈತನ ಮಗನಾದ ಶಾಂತಿವರ್ಮನು ಬಹುಶಃ ತನ್ನ ತಂದೆಯ ಕಾಲದಲ್ಲಿ ಜಂಟಿ ಅರಸನೂ ಆಗಿದ್ದು (ತಾಳಗುಂದ ಶಾಸನವು ಅಲ್ಲಿನ ಶಿವಾಲಯಕ್ಕೆ ತನ್ನ ತಂದೆಯ ಕಾಲಕ್ಕೆ ಈತನು ಇತ್ತ ದಾನದ ದಾಖಲೆಯಾಗಿದೆ), ಮುಂದೆ 430 ರ ಸುಮಾರಿಗೆ ಪಟ್ಟಕ್ಕೆ ಬಂದ. ಇವನು ಅಲ್ಪಕಾಲ (ಸು.450 ವರೆಗೆ) ಆಳಿರಬೇಕು. ಇತ್ತೀಚೆಗೆ ದೊರೆತ ಮುತ್ತೂರ (ಬ್ಯಾಡಗಿ ತಾ.) ತಾಮ್ರಪಟವು ಹಿಂದೆ ಈ ವಂಶದವನೆಂದು ಹೇಳಲಾದ ಶಿವಮಂಧಾತೃ ವರ್ಮನ 13ನೇಯ ಆಡಳಿತ ವರ್ಷದಾಗಿದ್ದು ಇದರ ಲಿಪಿ ತಾಳಗುಂದ ಶಾಸನಕ್ಕೆ ನಿಕಟವಾಗಿದೆ; ಹೀಗಾಗಿ ಈ ಹೆಸರಿನ ರಾಜನು ಕಾಕುಸ್ಥವರ್ಮನ ಮಗನಾಗಿದ್ದು ಬನವಾಸಿಯಿಂದ ಆಳುತ್ತಿದ್ದಿರಬಹುದೆಂದು ಡಾ॥ ದೇವರಕೊಂಡರೆಡ್ಡಿಯವರ ಅಭಿಪ್ರಾಯ. ಇವನು ಅಣ್ಣ ಶಾಂತಿವರ್ಮನ ನಂತರ ಆಳಿರಬಹುದು. ಈತನ ಸೋದರನಾದ ಒಂದನೇಯ ಕೃಷ್ಣವರ್ಮನು ತ್ರಿಪರ್ವತದಲ್ಲಿ ಮಾಂಡಳಿಕನಾಗಿದ್ದು ಅಣ್ಣನ ವಿರುದ್ಧ ಬಂಡೆದ್ದ. ಈ ತ್ರಿಪರ್ವತ ಯಾವುದೆಂದು ಬಹಳಷ್ಟು ಚರ್ಚೆ ನಡೆದಿದ್ದರೂ ಇದು ಹಾವೇರಿ ತಾಲೂಕಿನ ದೇವಗಿರಿ ಇರಬೇಕೆಂದು ಬಹುಪಾಲು ವಿದ್ವಾಂಸರ ಮತ. (ಬೆಳಗಾವಿ ಜಿಲ್ಲೆಯ ಮುರಗೋಡ, ಹಾಸನ ಜಿಲ್ಲೆ ಹಳೇಬೀಡು ಎಂಬ ಅಭಿಪ್ರಾಯಗಳಿವೆ). ದೇವಗಿರಿಯಲ್ಲಿ ಇವರ ತಾಮ್ರಪಟಗಳು ಸಿಕ್ಕಿದ್ದು ಇದಕ್ಕೆ ಆಧಾರ. ಕೃಷ್ಣವರ್ಮನು ಅಣ್ಣನ ವಿರುದ್ಧ ಬಂಡೆದ್ದು ಮುಂದೆ ವಿಜಯಶಾಲಿಯಾಗಿ ಅಶ್ವಮೇಧಯಾಗ ಮಾಡಿದ. ಆತನೂ ಶಾಂತಿವರ್ಮನೂ ಮೃಗೇಶವರ್ಮನ ಬೇರೆ ಬೇರೆ ರಾಣಿಯರ ಮಕ್ಕಳಿರಬೇಕೆಂದು ಡಾ॥ಬಾ.ರಾ. ಗೋಪಾಲರು ಊಹಿಸಿದ್ದಾರೆ. ಕೃಷ್ಣವರ್ಮನು ಕೇಕಯ ರಾಜಕುಮಾರಿಯನ್ನು ವರಿಸಿದ್ದನು. ಕೇಕಯ ರಾಜನಾದ ಶಿವನಂದವರ್ಮನು ತನ್ನ ಅಳಿಯನ ಪರ, ಶಾಂತಿವರ್ಮನ ವಿರುದ್ಧ ನಡೆದ ಯುದ್ಧವೊಂದರಲ್ಲಿ ಪಾಲುಗೊಂಡ ವಿಚಾರವಿದ್ದು ಆರಂಭದಲ್ಲಿ ಕೃಷ್ಣವರ್ಮನ ಅಣ್ಣನ ಕೈಯಲ್ಲಿ ಸೋತಿರಬೇಕು (ಎ.ಕ.9, ಡಿಗ 10).

ಈತನ ಪುತ್ರನಾದ ವಿಷ್ಣುವರ್ಮನು (ಸು.490-516) ತ್ರಿಪರ್ವತದಿಂದ ಆಡಳಿತವನ್ನು ಮುಂದುವರಿಸಿದನು. ವಿಷ್ಣುವರ್ಮನಿಗೂ ಈತನ ಸೋದರ ದೇವವರ್ಮನಿಗೂ ಪಟ್ಟಕ್ಕಾಗಿ ಘರ್ಷಣೆಗಳು ನಡೆದಂತೆ ಇದೆ. ದೇವವರ್ಮನ ಒಂದು ಶಾಸನದಂತೆ (ದೇವಗಿರಿ ತಾಮ್ರಪಟ, ಇಂಡಿ.ಆ್ಯಂಟಿ, 7) ಆತನು ಯಾಪನೀಯ (ಜೈನ) ಸಂನ್ಯಾಸಿಗಳಿಗೆ ದಾನ ನೀಡಿದ ವಿವರವಿದೆ. ತ್ರಿಪರ್ವತದಿಂದಲೇ ಈ ದಾನಮಾಡಿದ್ದಾಗಿ ಹೇಳಿದೆ. ಮುಂದೆ ಈತನ ಉಲ್ಲೇಖ ಇಲ್ಲ. ವಿಷ್ಣುವರ್ಮನೂ ಕೇಕಯ ರಾಜಪುತ್ರಿಯನ್ನು ವರಿಸಿದ್ದ. ಈತನಿಗೆ ಪಟ್ಟವೇರಲು ಪಲ್ಲವರು ನೆರವಾದರೆಂದಿದೆ. ಆದರೆ ಈ ಪಲ್ಲವರು ಕಾಂಚಿಯವರೇ ಅಥವಾ ಉತ್ತರ ಕನ್ನಡದಿಂದ ಆಳುತ್ತಿದ್ದ ಒಂದು ಪಲ್ಲವ ವಂಶವೇ ತಿಳಿಯದು. "ದೇವಗಿರಿಯು ಕದಂಬರ ಕಾಲದಲ್ಲಿ ಹಲಸಿಯಂತೆ ಮಹತ್ವದ ಜೈನಕೇಂದ್ರವಾಗಿತ್ತೆಂದು ತಿಳಿಯಬಹುದು" ಎಂದು ಡಾ॥ ಪಾಡಿಗಾರ್ ಹೇಳಿದ್ದಾರೆ. ವಿಷ್ಣುವರ್ಮನ ಬೀರೂರು ತಾಮ್ರಪಟ (ಎಕ 6, ಕಡಿ 162) ತನ್ನ ಅಜ್ಜ ಶಾಂತಿವರ್ಮನನ್ನು "ಸಮಗ್ರ ಕರ್ಣಾಟ ಭೂವರ್ಗ ಭರ್ತಾರ" ಎಂದು ಕರೆದಿದ್ದು ಕರ್ಣಾಟ ಎಂಬ ಹೆಸರು ಶಾಸನದಲ್ಲಿ ಮೊದಲ ಬಾರಿ ಬಂದುದು ಇಲ್ಲೆಯೇ. ಎಂದರೆ ಇವನು ಬನವಾಸಿಯ ಶಾಂತಿವರ್ಮನಿಗೆ ಕೆಲಕಾಲ ಅಧೀನನಾಗಿರಬೇಕು ಎಂಬುದನ್ನು ಇಲ್ಲಿ ಊಹಿಸಬಹುದು. ವಾಸ್ತವವಾಗಿ ಈತನ ಮೂಡಿಗೆರೆ ತಾಮ್ರಪಟ (ಕಾರ್ಪಸ್ ಆಫ್ ಕದಂಬ, ನಂ.36) ದಂತೆ ಈತನಿಗೆ ಪಲ್ಲವರೇ ಅಲ್ಲದೇ ಶಾಂತಿವರ್ಮನೂ ಪಟ್ಟವೇರಲು ನೆರವಾಗಿದ್ದರೆಂದಿದ್ದು ಈ ಶಾಂತಿವರ್ಮನ ಬನವಾಸಿಯವನಾಗಿದ್ದು ದೇವವರ್ಮನ ವಿರುದ್ಧ ಈತನಿಗೆ ನೆರವಾಗಿರಬೇಕು. ಮುಂದೆ ಈತನು ಬನವಾಸಿಯ ರವಿವರ್ಮನಿಂದ ಹತನಾದಂತೆ ತೋರುತ್ತದೆ.

ವಿಷ್ಣುವರ್ಮನ ನಂತರ ಪಟ್ಟವೇರಿದ ಅವನ ಪುತ್ರ ಸಿಂಹವರ್ಮ (ಸು.490-516)ನ ಮೂಡಿಗರೆ ತಾಮ್ರಪಟದಲ್ಲಿ (ಕಾರ್ಪಸ್ ನಂ38) ಆತನು ಆಸಂದ್ಯಾಲೂರಲ್ಲಿ ಒಂದು ಜಿನಾಲಯಕ್ಕೆ ದಾನವಿತ್ತ ವಿಚಾರವಿದೆ. ಸೇಂದ್ರಕ ವಿಷಯದಲ್ಲಿರುವ ಈ ಊರು ಯಾವುದೆಂದು ತಿಳಿಯದು (ಈ ಶಾಸನ ಕೃತಕ ಎಂಬ ಅಭಿಪ್ರಾಯವೂ ಇದೆ). ಇವನ ನಂತರ ಪಟ್ಟವೇರಿದವನು ಇವನ ಮಗ ಎರಡನೇಯ ಕೃಷ್ಣವರ್ಮ (516-540). ಈತನು ವೈಜಯಂತಿಯನ್ನು (ಬನವಾಸಿ) ಗೆದ್ದು ವಂಶದ ಶಾಂತಿವರ್ಮನ ಶಾಖೆಯ ಹರಿವರ್ಮನನ್ನು ಸೋಲಿಸಿದ. ದೇವಗಿರಿಯ ಬದಲಿಗೆ ಬನವಾಸಿ ಅವನ ರಾಜಧಾನಿಯಾಯಿತು.

ಬನವಾಸಿಯಲ್ಲಿ ಶಾಂತಿವರ್ಮನ ನಂತರ ಅವನ ಮಗನಾದ ಮೃಗೇಶ (ಸು.450-85), ಮುಂದೆ ಕೆಲಕಾಲ ಶಿವಮಂಧಾತೃವರ್ಮರು ಆಳಿದರು (480-85)*. ಮೃಗೇಶವರ್ಮನು ಹಲಸಿಯನ್ನು ತನ್ನ ಎರಡನೇಯ ರಾಜಧಾನಿಯಾಗಿ ಮಾಡಿಕೊಂಡಿದ್ದ. ಈತನ ಮಗ ಭಾನುವರ್ಮ ಹಲಸಿಯ ಆಡಳಿತಾಧಿಕಾರಿಯಾಗಿರಬೇಕು. ಮೃಗೇಶನು ಕೇಕಯ ವಂಶದ ಪ್ರಭಾವತಿಯನ್ನು ವರಿಸಿದ್ದ. ಮುಂದೆ 485ರ ಸುಮಾರಿಗೆ ಬಹುಶಃ ಆವರೆಗೆ ಅಪ್ರಾಪ್ತ ವಯಸ್ಕನಾಗಿದ್ದ ರವಿವರ್ಮನು ಪಟ್ಟವೇರಿದನು. ಈತನು ದೀರ್ಘಕಾಲ ಆಳಿದ, ಪ್ರತಾಪಶಾಲಿಯಾದ ಅರಸು. ಅವನ ದಾವಣಗೆರೆ ಶಾಸನದಲ್ಲಿ (ಮೈ.ಆ.ರಿ.1933) ನರ್ಮದೆಯ ವರೆಗಿನ ಭೂಮಿಗೆ ಅವನು ಒಡೆಯನಾಗಿದ್ದನೆಂದು ಹೇಳಿದೆಯಲ್ಲದೆ ಬೌದ್ಧ ಸಂಘಕ್ಕೆ ಆಸಂದಿಯ ಸೇತುವೆಯ ದಕ್ಷಿಣದಲ್ಲಿ ಭೂಮಿ ದಾನಮಾಡಿದ್ದನ್ನು ತಿಳಿಸಿದೆ. ಈತನ ಚಿಕ್ಕಪ್ಪ ಬಂಡೇಳಲು ಆತನನ್ನು ಸೋಲಿಸಿ ತನ್ನ ಸೋದರನನ್ನು ಉಚ್ಚಂಗಿಯಲ್ಲಿ ಆಡಳಿತಾಧಿಕಾರಿಯಾಗಿ ನೇಮಿಸಿದ. ಹಲಸಿ ಜಿನಾಲಯಕ್ಕೆ ಈತನೂ ದಾನ ನೀಡಿದ.

ಈತನ ಉತ್ತರಾಧಿಕಾರಿಯಾದವನು ಇವನ ಮಗ ಹರಿವರ್ಮ. ಹರಿವರ್ಮನ ಸಂಗೊಳ್ಳಿ ಶಾಸನದಿಂದ ಅವನು ಕ್ರಿ.ಶ.519 ರಲ್ಲಿ ಪಟ್ಟವೇರಿದ ಎಂದು ತಿಳಿಯುತ್ತದೆ. ಈತನ ಆಡಳಿತ ಅಲ್ಪ ಕಾಲದ್ದಾಗಿ ತ್ರಿಪರ್ವತ (ದೇವಗಿರಿ) ಶಾಖೆಯ ಎರಡನೇಯ ಕೃಷ್ಣವರ್ಮನು ಕ್ರಿ.ಶ.ಸು530 ರಲ್ಲಿ ವೈಜಯಂತಿಯನ್ನು ಗೆದ್ದು ತಾನೇ ಬನವಾಸಿಯಲ್ಲಿ ರಾಜನಾದ. ಆದರೆ ಮುಂದೆ ಸುಮಾರು 540 ರಲ್ಲಿ ಬಹುಶಃ ಈತನ ಮಾಂಡಳಿಕನಾಗಿದ್ದಿರಬಹುದಾದ ಬಾದಾಮಿಯ ಚಾಳುಕ್ಯ ವಂಶದ ಒಂದನೇಯ ಪುಲಿಕೇಶಿ ಈತನನ್ನು ಸೋಲಿಸಲು ಕದಂಬರು ಚಾಳುಕ್ಯರ ಮಾಂಡಳಿಕರಾದರು. ಮುಂದೆ ಈ ವಂಶದಲ್ಲಿ ಹರಿವರ್ಮನ ಮಗ ಅಜವರ್ಮ ಹಾಗೂ ರವಿವರ್ಮ ಮತ್ತು ಅಜವರ್ಮನ ಮಗ ಭೋಗಿವರ್ಮ ಇವರುಗಳು ಆಳಿದರಾದರೂ ಮುಂದೆ ಬನವಾಸಿ ಕದಂಬ ವಂಶ ದೀರ್ಘಕಾಲ ಉಳಿಯಲಿಲ್ಲ. (ಹಾನಗಲ್ ಮತ್ತು ಗೋವೆಯಲ್ಲಿ ಆಳಿದ ಕಲ್ಯಾಣ ಚಾಳುಕ್ಯರ ಮಾಂಡಳಿಕರಾದ ಕದಂಬರು ಇದೇ ವಂಶದವರೆಂದು ಹೇಳಿಕೊಂಡಿದ್ದಾರೆ.)

ಕದಂಬರ ಆಡಳಿತದ ಕುರುಹುಗಳಾಗಿ, ಧಾರವಾಡ ಜಿಲ್ಲೆಯಲ್ಲಿ ಏನೂ ಉಳಿದುಬಂದಿಲ್ಲ. 1500 ವರ್ಷಗಳ ಹಿಂದೆ ಕಟ್ಟಿರಬಹುದಾದ ಬಸದಿ, ದೇವಾಲಯಗಳ ಸುಳಿವಿಲ್ಲ. ಬೇರೆಡೆ (ಚಂದ್ರವಳ್ಳಿ, ಗುಡ್ನಾಪುರ)ಗಳಲ್ಲಿ ಕೆರೆಗಳನ್ನು ಕಟ್ಟಿದ್ದರೂ ಇಲ್ಲಿ ಅಂಥ ಸಾಧನೆ ಮಾಡಿದ ಲಿಖಿತ ದಾಖಲೆ ಇಲ್ಲ. ಆಸಂದಿ ಸೇತು ಎಂಬುದು ಅವರ ಕಾಲದ ಒಂದು ಅಣೆಕಟ್ಟು ಇರಬಹುದು. ಈ ಆಸಂದಿ ಈಗಿನ ಧಾರಧಾಡ ಜಿಲ್ಲೆಯ ಊರಾಗಿರಲು ಸಾಧ್ಯವಿದೆ. ಆದರೆ ಕನ್ನಡವನ್ನು ಆಡಳಿತ ಭಾಷೆಯಾಗಿ ಮೊದಲಬಾರಿ ಬಳಸಿದ ಶ್ರೇಯಸ್ಸು ಕದಂಬರದು. ಹಲ್ಮಿಡಿ ಶಾಸನ (ಬೇಲೂರು ತಾಲೂಕು) ಕ್ರಿ.ಶ.ಐದನೇಯ ಶತಮಾನದ ಮಧ್ಯಭಾಗದ ಕದಂಬ ಕಾಕುಸ್ಥ ವರ್ಮನು ಬರೆಸಿದ ಕನ್ನಡ ಶಾಸನವಾಗಿದೆ.

ಅವರ ಶಾಸನಗಳಲ್ಲಿ ಬರುವ ವಿಷಯ ಎಂಬ ಜಿಲ್ಲೆಗಳಲ್ಲಿ ಸುದ್ದಿಕುಂದೂರು ವಿಷಯವು ಈಗಿನ ಧಾರವಾಡ ಜಿಲ್ಲೆಯ ನರೇಂದ್ರದ ಪರಿಸರದ್ದಾಗಿದ್ದು ಹಲಸಿಯನ್ನು ಒಳಗೊಂಡಿರಬಹುದೆಂದೂ ಪಾಂತಿಪುರ ವಿಷಯವು ಹಾನಗಲ್ಲಿನ ಪರಿಸರದಲ್ಲಿ ಇತ್ತೆಂದೂ ಪಂಚಮುಖಿಯವರು ಹೇಳಿದ್ದಾರೆ. ಅಲ್ಲದೆ ಪಲ್ಲಿ, ಗ್ರಾಮ, ಮಹಾಗ್ರಾಮ, ವಿಷಯ, ದೇಶ ಎಂಬ ಆಡಳಿತ ವಿಭಾಗಗಳನ್ನು ಅವರು ಗುರುತಿಸಿದ್ದಾರೆ. ಬೋಜಕ, ಆಯುಕ್ತಕ, ಸರ್ವಕಾರ್ಯಕರ್ತ ಮುಂತಾದ ಅಧಿಕಾರಗಳ ಉಲ್ಲೇಖವೂ ಶಾಸನಗಳಲ್ಲಿ ಇದೆ. ಉಂಥ, ದಂಡ, ವಿಷ್ಟಿ (ಬಿಟ್ಟಿ), ಅಂತಃಕರ (ಒಳತೆರಿಗೆ; ದಾರಿಸುಂಕ), ಪಂಗ ಮತ್ತು ಉತ್ಕೋಟಿ ಮುಂತಾದ ತೆರಿಗೆಗಳ ಹೆಸರನ್ನು ಡಾ॥ಬಿ.ಆರ್. ಗೋಪಾಲರು ಹೇಳಿದ್ದಾರೆ. ಕದಂಬರು ಸ್ಥಾಪಿಸಿದ್ದ ಆಡಳಿತ ವ್ಯವಸ್ಥೆಯನ್ನೇ ಮುಂದೆ ಚಾಳುಕ್ಯರು ಮುಂದುವರಿಸಿಕೊಂಡು ಹೋದರು.

---

* ಶಿವಮಂಧಾತೃವು ಶಾಂತಿವರ್ಮನ ಸೋದರನಿರಬೇಕೆಂದು ಇತ್ತೀಚಿಗಿನ ತಾಮ್ರಪಟದಿಂದ ಗಮನಿಸಿದೆ. ಹೀಗಾಗಿ ವಿದ್ವಾಂಸರು ಶಿವಮಂಧಾತೃವಿಗೆ ಇಲ್ಲಿಕೊಟ್ಟ ಸ್ಥಾನ ಬದಲಾಯಿಸಬೇಕಾಗಿದೆ. ಇವನು ಮೃಗೇಶನಿಗೂ ಮೊದಲೇ ಆಳಿರಬಹುದು.

## ಬಾದಾಮಿಯ ಚಾಳುಕ್ಯರು

ತಮ್ಮ ಆರಂಭದ ಶಾಸನಗಳಲ್ಲಿ 'ಚಳುಕ್ಯರು' ಎಂದೇ ತಮ್ಮನ್ನು ಚಾಳುಕ್ಯರು ಕರೆದುಕೊಂಡಿದ್ದಾರೆ. ಒಂದನೇಯ ಪುಲಿಕೇಶಿಯ ಬಾದಾಮಿ ಬಂಡೆ ಶಾಸನದಲ್ಲಿ ಕ್ರಿ.ಶ.543 ರಲ್ಲಿ ಅವನು ಬಾದಾಮಿಕೋಟೆಯನ್ನು ಕಟ್ಟಿದನೆಂದೂ ಅಶ್ವಮೇಧ ಯಾಗ ಮಾಡಿದನೆಂದೂ ತಿಳಿಯುತ್ತದೆ. ಗಂಗ, ಕದಂಬ ವಂಶಗಳನ್ನು ಸೋಲಿಸಿದ ಇವನು ಕ್ರಿ.ಶ.540 ಸುಮಾರಿಗೆ ಸ್ವತಂತ್ರನಾಗಿದ್ದು ಅದಕ್ಕೂ ಮೊದಲು ಕದಂಬರ ಮಾಂಡಲಿಕನಾಗಿದ್ದನು. ಈತನ ತಂದೆ ರಣರಾಗ ಹಾಗೂ ಅಜ್ಜ ಜಯಸಿಂಹನನ್ನು ಶಾಸನಗಳು ಉಲ್ಲೇಖಿಸಿವೆ. ಚಾಳುಕ್ಯರು ಶಾಸನಗಳಲ್ಲಿ ತಾವು ಅಯೋಧ್ಯೆಯ ಮೂಲದವರೆಂದು ಹೇಳಿಕೊಂಡಿದ್ದರೂ ಶಾಸನಗಳಲ್ಲಿ ಬರುವ ಚಲುಕ್ಯ, ಚಲ್ಕಿ, ಸಲ್ಕಿ ಎಂಬ ಹೆಸರುಗಳಿಂದ ಅವರು ಸಲ್ಕಿ ಅಥವಾ ಸಲಿಕೆಗೆ ಸಂಬಂಧವುಳ್ಳ ಕೃಷಿಕ ಮೂಲದವರೆಂದು ಡಾ|| ನಂದೀಮಠರು ಹೇಳಿದ್ದಾರೆ.

ಬಾದಾಮಿ ಚಾಳುಕ್ಯರ ಸುಮಾರು 150 ಶಾಸನಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ದೊರೆತವು ಸುಮಾರು 15 ಮಾತ್ರವೇ ಆದರೂ ಧಾರವಾಡ ಜಿಲ್ಲೆಯಲ್ಲಿ ಅವರ ಆಡಳಿತ ದೃಢವಾಗಿತ್ತೆಂದು ಭಾವಿಸಬಹುದಾಗಿದೆ. ಲಕ್ಷ್ಮೇಶ್ವರದಲ್ಲಿ ಅವರ ಐದು ಶಾಸನಗಳು ದೊರೆತಿದ್ದು ಈ ಊರು (ಪ್ರಾಚೀನ ಪುಲಿಗೆರೆ) ಅವರ ಆಡಳಿತದಲ್ಲಿ ಒಂದು ಪ್ರಮುಖ ಕೇಂದ್ರವಾಗಿತ್ತು. ಅಲ್ಲದೆ ಕುರ್ತುಕೋಟಿಯಲ್ಲಿ ಅಗ್ರಹಾರವೊಂದನ್ನು ಸ್ಥಾಪಿಸಿದ ಬಗ್ಗೆಯೂ ದಾಖಲೆಯಿದೆ. ಶಿಗ್ಗಾಂವಿ ತಾಮ್ರಪಟದಲ್ಲಿ ಗುಡಿಗೇರಿ ಊರನ್ನು ಲಕ್ಷ್ಮೇಶ್ವರದ ಬಸದಿಗೆ ದಾನವಿತ್ತ ವಿಚಾರವಿದ್ದು ಈ ಶಾಸನದಲ್ಲಿ ಆಗ ಇದ್ದ (ಕ್ರಿ.ಶ.707), 14 ಜಲಾಶಯಗಳ ಉಲ್ಲೇಖವಿದೆ. ಚಾಳುಕ್ಯರೂ (ಅವರ ಹಿಂದಿನ ರಾಜರೂ) ನೀರಾವರಿಗೆ ಎಷ್ಟೊಂದು ಪ್ರಾಶಸ್ತ್ಯ ನೀಡಿದ್ದರೆಂಬ ಸಂಗತಿ ಇದರಿಂದ ತಿಳಿಯುತ್ತದೆ. ಈ ವಂಶದ ಇಮ್ಮಡಿ ಪುಲಿಕೇಶಿಯು ಕರ್ನಾಟಕವನ್ನು ಏಕಾಡಳಿತಕ್ಕೆ ಒಳಪಡಿಸಿದ ಮೊದಲ ಅರಸು. ಕದಂಬರು ನಾಮಶೇಷರಾಗಿ ಗಂಗರೂ ಕರಾವಳಿಯ ಆಳುಪರೂ ಆಗ ಚಾಳುಕ್ಯರ ಅಧೀನರಾದರು. ಜೊತೆಗೆ ಕಾವೇರಿಯಿಂದ ನರ್ಮದೆಯವರೆಗಿನ ವಿಶಾಲ ಪ್ರದೇಶದಲ್ಲಿ ಪುಲಿಕೇಶಿಯು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಈ ವಿಶಾಲ ಸಾಮ್ರಾಜ್ಯ ಮುಂದೆ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಳುಕ್ಯರ ಕಾಲದಲ್ಲೂ ಮುಂದುವರಿಯಿತು. ಕರ್ನಾಟಕದ ಪ್ರತಿಷ್ಠೆ ಅಖಿಲ ಭಾರತ ಮಟ್ಟದಲ್ಲಿ ಬೆಳೆದು ಚಾಳುಕ್ಯರ ಸೇನೆಯು ಕರ್ನಾಟಬಲ ಎಂದು ಪ್ರಸಿದ್ಧಿಗೆ ಬಂತಷ್ಟೇ ಅಲ್ಲ 'ಕರ್ನಾಟಬಲಂ ಅಜೇಯಂ' ಎಂಬ ಕೀರ್ತಿಗೆ ಭಾಜನವಾಯಿತು. ಮೂಲದಲ್ಲಿ ವೈಷ್ಣವರಾಗಿ ವರಾಹಲಾಂಛನರಾಗಿದ್ದ ಚಾಳುಕ್ಯರು ಒಂದನೇಯ ವಿಕ್ರಮಾದಿತ್ಯನ ಕಾಲದಲ್ಲಿ ಶೈವರಾದರೂ ಧಾರ್ಮಿಕ ಸಮನ್ವಯ ನಿಲುವನ್ನು ಕೈಬಿಡಲಿಲ್ಲ.

ಮಾನವ್ಯಸ ಗೋತ್ರದವರೂ ಹಾರಿತೀ ಪುತ್ರರೂ ಎಂದು ತಮ್ಮನ್ನು ಕರೆದುಕೊಂಡ ಚಾಳುಕ್ಯರ ಒಂದನೇಯ ಪುಲಿಕೇಶಿಯು ಸುಮಾರು 540 ರಿಂದ 566 ರವರೆಗೆ ಆಳಿದವನು. ಸಿರುಗುಪ್ಪಿ (ಹುಬ್ಬಳ್ಳಿ ತಾಲೂಕು) ಶಾಸನದಲ್ಲಿ ಸೇಂದ್ರಕ ವಾಣಸತ್ತಿಯು ಮುಳುಗುಂದದಿಂದ ಆಳುತ್ತಿದ್ದನೆಂದು ಹೇಳಿದ್ದು ಇವನು ಒಂದನೇಯ ಪುಲಿಕೇಶಿಯ ಮಾಂಡಲಿಕನೆಂದೂ, ಹಲಸಿ ಶಾಸನದಲ್ಲಿ ಕದಂಬ ಹರಿವರ್ಮನ ಮಾಂಡಳಿಕನೆಂದು ಉಲ್ಲೇಖಿತನಾದ ಬಾನುಶಕ್ತಿಯೇ ಈತನೆಂದೂ ಕದಂಬರ ಸೋಲಿನ ನಂತರ ಇವನು ಚಾಳುಕ್ಯರ ಅಧಿಪತ್ಯ ಸ್ವೀಕರಿಸಿದನೆಂದೂ ಡಾ|| ಕೆ.ವಿ. ರಮೇಶ್ ಹೇಳಿದ್ದಾರೆ. ಈ ಸೇಂದ್ರಕರು ಶಿವಮೊಗ್ಗ ಜಿಲ್ಲೆಯ ಬಂದಳಿಕೆಯನ್ನು ಕೇಂದ್ರವಾಗಿ ಹೊಂದಿದ್ದ ಸೇಂದ್ರಕ ವಿಷಯದವರಾಗಿದ್ದು ಮುಂದೆ ಚಾಳುಕ್ಯರ ಸಂಬಂಧಿಗಳೂ ಮಾಂಡಳಿಕರೂ ಆಗಿ ಕಂಡುಬರುತ್ತಾರೆ. ಪುಲಿಕೇಶಿಯು ಮಹಾರಾಜ ಮತ್ತು ವಲ್ಲಭ ಮುಂತಾದ ಬಿರುದುಗಳನ್ನು ತಳೆದಿದ್ದ. ಬಹುಶಃ ಕೊಂಕಣ ಕರಾವಳಿಯಲ್ಲಿ ಆಳುತ್ತಿದ್ದ ಬಪ್ಪೂರ ವಂಶದ ಕುಮಾರಿ ದುರ್ಲಭದೇವಿ ಇವನ ರಾಣಿಯಾಗಿದ್ದಳು. ಮಹಾಕೂಟದ ಮಕುಟೇಶ್ವರ ದೇವಾಲಯ ಈತನ ರಚನೆಯೆಂದು ಡಾ|| ರಮೇಶ್ ಊಹಿಸಿದ್ದಾರೆ.

ಇವನ ನಂತರ ಪಟ್ಟವೇರಿದ ಕೀರ್ತಿವರ್ಮ ಅಥವಾ ಕತ್ತಿಯರಸನ ಕಾಲದಲ್ಲಿ (ಕ್ರಿ.ಶ.578) ಬಾದಾಮಿಯಲ್ಲಿ ಕಲ್ಲನೆ (ಮೂರನೇಯ ವೈಷ್ಣವ ಗವಿ)ಯನ್ನು ಯುವರಾಜ (ಇವನ ಸೋದರ) ಮಂಗಳೇಶನು ಕೊರೆಸಿದನು. ಕೀರ್ತಿವರ್ಮನು ಕದಂಬರನ್ನು ಪೂರ್ತಿಯಾಗಿ ಸೋಲಿಸಿದನು. ಮುಧೋಳ ತಾಮ್ರಪಟದಲ್ಲಿ ಈತನನ್ನು ಪುಗವರ್ಮ ಎಂದಿದ್ದು ಇದು ಪುಗಳ್ (ಕೀರ್ತಿ) ಎಂಬುದರ ಇನ್ನೊಂದು ರೂಪ, ಎಂದು ಡಾ|| ರಮೇಶ್ ಅಭಿಪ್ರಾಯ ಪಟ್ಟಿದ್ದಾರೆ. ಬಳ್ಳಾರಿ, ಕರ್ನೂಲು ಪ್ರದೇಶದ ನಳರನ್ನೂ ಕೊಂಕಣದ ಮೌರ್ಯರನ್ನು ಈತನು ಪರಾಭವಗೊಳಿಸಿದನು. ಸೇಂದ್ರಕರಾಜ ಪುತ್ರಿಯೊಬ್ಬಳನ್ನು ಈತನು ವರಿಸಿದ್ದನು.

ತನ್ನ ಅಣ್ಣನ ಮಗ ಇಮ್ಮಡಿ ಪುಲಿಕೇಶಿಯು ಅಪ್ರಾಪ್ತವಯಸ್ಕನಾಗಿದ್ದುದರಿಂದ ಮಂಗಳೇಶನು ಕೀರ್ತಿವರ್ಮನ ಮರಣಾನಂತರ 592 ರಲ್ಲಿ ತಾನೇ ಪಟ್ಟವೇರಿದನು. ಈತನ ಮಹಾಕೂಟ ಶಾಸನದಲ್ಲಿ ತಾನು ಗಂಗ, ದಾಮಿಲ (ಪಲ್ಲವ?), ಚೋಳ ಹಾಗೂ

ಆಳುಪರನ್ನು ಸೋಲಿಸಿದ್ದಾಗಿ ಹೇಳಿಕೊಂಡಿದ್ದಾನೆ. ಕೊಂಕಣದ ಕಲಚೂರಿ ಬುದ್ಧರಾಜ ಇಂದ್ರವರ್ಮನನ್ನೂ ಈತನು ಸೋಲಿಸಿ ರೇವಡಿ ದ್ವೀಪ (ರೇಡಿ ಅಥವಾ ಇರಿಡಿಗೆ)ಯನ್ನು ಗೆದ್ದನು. ರಾವಳಫಡಿ (ಐಹೊಳೆ) ಗವಿಯು ಈತನ ರಚನೆಯೆಂದು ಡಾ।। ರಮೇಶ್‌ರ ಅಭಿಪ್ರಾಯ.

ತಾನು ಪ್ರಾಪ್ತವಯಸ್ಕನಾದ ಮೇಲೂ ತನಗೆ ಪಟ್ಟವನ್ನು ನೀಡದ ತನ್ನ ಚಿಕ್ಕಪ್ಪ ಮಂಗಳೇಶನನ್ನು ಕೊಂದು ಇಮ್ಮಡಿ ಪುಲಕೇಶಿಯು 609 ರಲ್ಲಿ ಪಟ್ಟವೇರಿದನು. ಪಟ್ಟಕ್ಕೆ ಬಂದ ಕೂಡಲೇ ಬಂಡೆದ್ದ ಅಪ್ಪಾಯಿಕ ಮತ್ತು ಗೋವಿಂದ ಎಂಬವರನ್ನು ಸೋಲಿಸಿದನು. ಚಕ್ರವರ್ತಿ ಮಂಗಳೇಶನ ಸಾವಿನಿಂದ ಸಹಜವಾಗಿ ಅವಿಧೇಯರಾದ ಗಂಗ, ಕದಂಬ, ಆಳುಪ ಮತ್ತು ಕೊಂಕಣದ ಮೌರ್ಯರನ್ನೂ ಪುಲಿಕೇಶಿಯು ಬಗ್ಗಿಸಿದನು. ಮುಂದೆ ಉತ್ತರಕ್ಕೆ ದಂಡೆತ್ತಿ ನಡೆದು ಲಾಟ, ಮಾಳವ, ಗೂರ್ಜರರನ್ನು ಸೋಲಿಸಿ ಕಪ್ಪ ಪಡೆದನು. ಸಿರಪುರದಲ್ಲಿ ಆಳುತ್ತಿದ್ದ ಕೋಸಲ (ಪಾಂಡುವಂಶಿ)ಗಳನ್ನು ಪರಾಭವಗೊಳಿಸಿ ಈಗಿನ ಪೀಠಾಪುರಂ (ಪಿಷ್ಟಪುರ)ದಿಂದ ಆಳುತ್ತಿದ್ದ ಕಳಿಂಗದ ದೊರೆಯನ್ನು ಸೋಲಿಸಿ ದಕ್ಷಿಣದಲ್ಲಿ ವೆಂಗಿಗೆ ಸಾಗಿ ಅಲ್ಲಿನ ಇಕ್ಷ್ವಾಕು ಅರಸರನ್ನು ನಾಮಶೇಷ ಮಾಡಿದನು. ಕಾಂಚಿಯ ಪಲ್ಲವ ದೊರೆ ರಾಜಧಾನಿಯಲ್ಲಿ ಅಡಗಿಕೊಂಡರೆ ಚೇರ, ಚೋಳ, ಪಾಂಡ್ಯರು ಕಾವೇರಿದಾಟಿ ದಕ್ಷಿಣಕ್ಕೆ ಸಾಗಿದ ಈತನಿಗೆ ಕಪ್ಪವಿತ್ತರು. ತನ್ನನ್ನೂ ಎದುರಿಸಿದ ಕನೋಜದ ಹರ್ಷನನ್ನೂ ಸೋಲಿಸಿ ದಕ್ಷಿಣಾಪಥ ಪೃಥ್ವೀಸ್ವಾಮಿ ಎಂಬ ಬಿರುದಿಗೆ ಪುಲಕೇಶಿ ಪ್ರಾಪ್ತನಾದನು.

ಈತನ ಜೈನಮಂತ್ರಿ ರವಿಕೀರ್ತಿ ಐಹೊಳೆಯಲ್ಲಿ ಕಟ್ಟಿದ ಜಿನಾಲಯದಲ್ಲಿರುವ ಆತನೇ ಬರೆದ ಐಹೊಳೆ ಪ್ರಶಸ್ತಿ ಈ ಎಲ್ಲ ಸಾಧನೆಗಳನ್ನು ತಿಳಿಸುತ್ತದೆ. ತನ್ನ ಸೋದರ ವಿಷ್ಣುವರ್ಧನನ್ನು ವೆಂಗಿಯ ಮಾಂಡಳಿಕನಾಗಿ ಪುಲಕೇಶಿ ನೇಮಿಸಿದನು. ಇದು ಮುಂದೆ ವೆಂಗಿ ಚಾಳುಕ್ಯ ಶಾಖೆಯೆಂದು ಸ್ವತಂತ್ರವಾಗಿ 1070ರವರೆಗೆ ಮುಂದುವರಿಯಿತು. ಪುಲಕೇಶಿಯು ಆಳುಪ ವಂಶದ ಕದಂಬ ಎಂಬ ರಾಜಕುಮಾರಿಯನ್ನು ವರಿಸಿದ್ದನು. ಈತನ ಕಾಲದಲ್ಲಿ ಸೇಂದ್ರಕ ವಂಶದ ದುರ್ಗಶಕ್ತಿಯು (ಈತನು ಹುಬ್ಬಳ್ಳಿ ತಾಲೂಕು ಪರಿಸರದಲ್ಲಿ ಆಳುತ್ತಿದ್ದು) ಪುಲಿಗೆರೆ (ಲಕ್ಷ್ಮೇಶ್ವರ)ಯ ಶಂಖ ಜಿನಾಲಯಕ್ಕೆ 500 ನಿವರ್ತನ ಭೂಮಿಯನ್ನು ದಾನಮಾಡಿದನು. ಈತನ ಆಸ್ಥಾನಕ್ಕೆ ಚೀನೀ ಪ್ರವಾಸಿ ಹುಯನ್‌ತ್ಸಾಂಗ್ ಭೇಟಿ ನೀಡಿದ್ದನು. ಪರ್ಶಿಯದ ದೊರೆಯ ಜೊತೆ ಈತನಿಗೆ ರಾಯಭಾರ ಸಂಪರ್ಕವಿತ್ತು. ಅಸಾಧಾರಣ ವೀರನೂ ಕರ್ನಾಟಕದ ಬಾಹುಬಲದ ಕೀರ್ತಿಯನ್ನು ಎಲ್ಲೆಡೆ ಹರಡಿದವನೂ ಆದ ಪುಲಿಕೇಶಿ ತನ್ನ ಕೊನೆಗಾಲದಲ್ಲಿ ಪಲ್ಲವರಿಗೆ ಸೋತು ಬಾದಾಮಿ ಶತ್ರು ವಶವಾಯಿತು (642). ಪಲ್ಲವರು ಬಾದಾಮಿಯನ್ನು ಮಥನ (ಸೂರೆ) ಮಾಡಿದರು.

ಆದರೆ, 13 ವರ್ಷಗಳ ನಂತರ ಪುಲಿಕೇಶಿಯ ಮೂರನೇಯ ಮಗ ವಿಕ್ರಮಾದಿತ್ಯನು ಶತ್ರು ರಾಜರನ್ನು ಸೋಲಿಸಿ ಇಡೀ ರಾಜ್ಯವನ್ನು ಗೆದ್ದು (655) ಪಲ್ಲವರನ್ನು ಕಾಂಚಿಯವರೆಗೂ ಅಟ್ಟಿಸಿಕೊಂಡು ಸಾಗಿ ಅವರ ರಾಜಧಾನಿಗೆ ಮುತ್ತಿಗೆ ಹಾಕಿದನು. ಗಂಗ ಭೂವಿಕ್ರಮನ ನೆರವಿನಿಂದ ಪಲ್ಲವರನ್ನು ವಿಳಂದೆ ಎಂಬಲ್ಲಿ ತೀವ್ರವಾಗಿ ಸೋಲಿಸಿದನು. ಈತನ ರಾಣಿ ಗಂಗವಂಶದ ಗಂಗಮಹಾದೇವಿ. ಸುದರ್ಶನಾಚಾರ್ಯರೆಂಬ ಗುರುಗಳು ಈತನಿಗೆ ಶಿವಮಂಡಲ ದೀಕ್ಷೆ ನೀಡಿದರೆಂದು ಆಮುಲಪಾಡು ಶಾಸನ ಹೇಳುತ್ತದೆ (ಎ.ಇಂ.32 ಪು.227-29). ಇದರಿಂದ ವೈಷ್ಣವನಾಗಿದ್ದ ಈತನು ಶೈವ ದೀಕ್ಷೆ ಪಡೆದನೆಂದು ಅರ್ಥವಾಗುತ್ತದೆ. ಈತನ ಕುರ್ತುಕೋಟಿ ತಾಮ್ರ ಶಾಸನದಲ್ಲಿ ಅಗ್ರಹಾರವೊಂದನ್ನು ಆ ಊರಲ್ಲಿ (ಕುರಿತಕುಂಟೆ) ಸ್ಥಾಪಿಸಿದ ವಿಚಾರವಿದ್ದು ಈ ಶಾಸನವು ವಿಶ್ವಸನೀಯವಲ್ಲವೆಂಬ ಅಭಿಪ್ರಾಯವಿದೆ. ಈತನ ಅತ್ತಿಗೆ ವಿಜಯ ಭಟ್ಟಾರಿಕೆಯು (ಅಣ್ಣ ಚಂದ್ರಾದಿತ್ಯನ ಪತ್ನಿ)ಕೊಂಕಣದಲ್ಲಿ ಆಳುತ್ತಿದ್ದಳು. ಇವಳು ಪ್ರಸಿದ್ಧ ಸಂಸ್ಕೃತ ಕವಯಿತ್ರಿ ಕೂಡ. ಪುಲಿಕೇಶಿಯು ಸ್ಥಾಪಿಸಿದ ಸಾಮ್ರಾಜ್ಯವು ಯೋಗಾಯೋಗದಿಂದ ಆದುದಲ್ಲ, ಕರ್ಣಾಟಬಲವು ನಿಜವಾಗಿಯೂ ಸತ್ವಶಾಲಿಯಾದುದು ಎಂದು ವಿಕ್ರಮನು ಪರಾಧೀನವಾದ ತನ್ನ ತಂದೆಯ ರಾಜ್ಯವನ್ನು ಮತ್ತೆ ಗೆದ್ದಾಗ ತೋರಿಸಿಕೊಟ್ಟನು. ಕಾಂಚಿಯನ್ನು ಮುತ್ತಿದ್ದಲ್ಲದೆ ತಮಿಳುನಾಡಿನಲ್ಲಿ ದೀರ್ಘ ದಂಡಯಾತ್ರೆ ಮಾಡಿದ್ದು ಅವನ ಶಾಸನಗಳಿಂದ ತಿಳಿಯುತ್ತದೆ.

ಇವನ ಮಗ ವಿನಯಾದಿತ್ಯನು (681-96) ಯುವರಾಜನಾಗಿದ್ದಾಗಲೇ ತಂದೆಯ ಯುದ್ಧಗಳಲ್ಲಿ ಪಾಲುಗೊಂಡಿದ್ದನಲ್ಲದೆ ಪಲ್ಲವ, ಕಳಭ್ರ, ಕೇರಳ, ಹೈಹಯ (ಮಧ್ಯ ಭಾರತದ ಕಳಚೂರಿಗಳು)ರನ್ನು ಸೋಲಿಸಿದ್ದನು. ಪಾರಸಿಕ, ಸಿಂಹಳ ಮತ್ತು ಖಮೇರ (ಕೆಂಬೋಡಿಯಾ)ಗಳಿಂದ ಕಪ್ಪ ಸಂಗ್ರಹಿಸಿದ್ದನು. ಈತನ ಮಗ ವಿಜಯಾದಿತ್ಯನು ಉತ್ತರ ದಂಡಯಾತ್ರೆ ನಡೆಸಿ ಸಕಲೋತ್ತರಾಪಥನಾಥನೆನಿಸಿದ ದೊರೆಯಿಂದ ಕಪ್ಪವನ್ನು ಸಂಗ್ರಹಿಸಿದನು. ಈತನು ಕನೋಜದ ಯಶೋವರ್ಮನಿರಬಹುದೆಂದು ಡಾ।। ಮಜುಂದಾರ ಭಾವಿಸಿದ್ದಾರೆ. ಚಾಳುಕ್ಯ ಶಾಸನಗಳೇ ಅಲ್ಲದೆ, ಮುಂದೆ ಚಾಳುಕ್ಯರನ್ನು ಸೋಲಿಸಿ ಪಟ್ಟವೇರಿದ ರಾಷ್ಟ್ರಕೂಟ

ದಂತಿದುರ್ಗನೂ ಈ ವಿಚಾರ ಹೇಳಿದ್ದಾನೆ. ವಿನಯಾದಿತ್ಯನ ರಾಣಿ ವಿನಯವತಿ; ಈತನ ಪುತ್ರಿ ಕುಂಕುಮದೇವಿ ಆಳುಪ ಚಿತ್ರವಾಹನನನ್ನು ವರಿಸಿದ್ದಳು. ವಿನಯಾದಿತ್ಯನು ಲಕ್ಷ್ಮೇಶ್ವರದ ಶಂಖ ಜಿನಾಲಯಕ್ಕೆ ಹಡಗಿಲೆ ಗ್ರಾಮವನ್ನು ದಾನಮಾಡಿದ (683) ವಿಚಾರ (ಎಸ್ ಐ ಐ, 20,4) ಲಕ್ಷ್ಮೇಶ್ವರ ಶಾಸನದಲ್ಲಿದೆ. ಈತನ ಹರಿಹರ ತಾಮ್ರ ಶಾಸನದಲ್ಲಿ (694-95) ಹರೇಷಪುರದ (ಹರಿಹರ) ಬಳಿಯ ಕರಂಜ ಪತ್ರದಲ್ಲಿ ಬೀಡು ಬಿಟ್ಟಿದ್ದನೆಂದು ಈ ಊರು ಧಾರವಾಡ ಜಿಲ್ಲೆಯ ಕರ್ಜಗಿ, ಎಂದು ಪಂಚಮುಖಿಯವರು ಗುರುತಿಸಿದ್ದಾರೆ. ಸೇಂದ್ರಕ ವಂಶದ ಪೊಗ್ಗಿಲಿಯು ನಾಗರಖಂಡ (ಶಿವಮೊಗ್ಗ ಜಿಲ್ಲೆ)ವನ್ನು ಇವನ ಕಾಲದಲ್ಲಿ ಆಳುತ್ತಿದ್ದನು. ಈತನ ಮಗ ಅರಿಕೇಸರಿಯನ್ನು ಅವನು ಬೋಧನದ (ಆಂಧ್ರಪ್ರದೇಶ) ಮಾಂಡಳಿಕನಾಗಿ ನೇಮಿಸಿದ್ದನು.

ಇವನ ಉತ್ತರಾಧಿಕಾರಿಯಾಗಿ ಇವನ ಮಗ ವಿಜಯಾದಿತ್ಯನು 696ರಲ್ಲಿ ಪಟ್ಟವೇರಿದನು. ತಂದೆಯ ಕಾಲದಲ್ಲೇ ಈತನು ಉತ್ತರ ದಿಗ್ವಿಜಯ ನಡೆಸಿದ್ದನು. ವಾಸ್ತವವಾಗಿ ಈತನ ಜೊತೆ ದಂಡಯಾತ್ರೆಗೆ ಹೋಗಿದ್ದ ಸೇನೆ ವಿಜಯಶಾಲಿಯಾಗಿ ಹಿಂದಿರುಗಿದರೂ ಈತನು ಬಂಧಿತನಾಗಿದ್ದನು. ಈತನ ಅಗಲಿಕೆಯಿಂದ ಇವನ ತಂದೆ ದುಃಖದಿಂದ ಸಾವನ್ನಪ್ಪಲು ವಿಜಯಾದಿತ್ಯನು ಬಂಧನದಿಂದ ತಪ್ಪಿಸಿಕೊಂಡು ಬಂದು ಪಟ್ಟವೇರಿದನು. ಈತನ ಆಳ್ವಿಕೆಯ ಆರಂಭ ವರ್ಷಗಳಲ್ಲಿ ಪಾಂಡ್ಯರು ಮಂಗಳೂರ ಮೇಲೆ ದಂಡೆತ್ತಿ ಬರಲು ಈತನ ಸೋದರಿಯ ಪತಿ ಆಳುಪ ಚಿತ್ರವಾಹನನು ಅವರನ್ನು ಸೋಲಿಸಿದನು. ತನ್ನ ಸೋದರಿ ಕುಂಕುಮದೇವಿಯು ಪುಲಿಗೆರೆ (ಲಕ್ಷ್ಮೇಶ್ವರ)ದಲ್ಲಿ ಕಟ್ಟಿದ ಆನೆಸೆಜ್ಜೆ ಬಸದಿಗೆ ಗುಡಗೇರಿ (ಗುಡ್ಡಿಗೆರೆ) ಗ್ರಾಮವನ್ನು ವಿಜಯಾದಿತ್ಯನು ದಾನನೀಡಿದನು (707) (ಶಿಗ್ಗಾಂವಿ ತಾಮ್ರಪಟ, ಎ.ಇ.32, 317-24). ಇದಲ್ಲದೆ 723 ರಲ್ಲಿ ಲಕ್ಷ್ಮೇಶ್ವರದ ಖ್ಯಾತ ಶಂಖ ಬಸದಿಯ ಪರಿಸರದ ಜಿನಭಟ್ಟಾರಕ ಬಸದಿಗೆ ಸೆಂಬೊಳಲ್ (ಶಿರಹಟ್ಟಿ ತಾಲೂಕು ಶ್ಯಾಬಾಳ) ಗ್ರಾಮವನ್ನು ದಾನ ನೀಡಿದನು. ಇದಲ್ಲದೆ ಇದೇ ಸ್ಥಳದಲ್ಲಿ ಇದ್ದ ಉದಯದೇವ ಪಂಡಿತನೆಂಬ ಜೈನ ಗುರುವಿಗೆ 730 ರಲ್ಲಿ ಕದ್ದಮ ಎಂಬ ಗ್ರಾಮವನ್ನು ದಾನಮಾಡಿದನು. ಕರ್ಹಾಡದಲ್ಲಿ ಆಳುತ್ತಿದ್ದ ಸೇಂದ್ರಕರಾಜನ ಪುತ್ರಿ ಮಹಾದೇವಿ ಈತನ ರಾಣಿ. ಈತನ ಕಾಲದಲ್ಲಿ ಈತನ ತಾಯಿ ವಿನಯವತಿ ಬಾದಾಮಿಯಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರಿಗಾಗಿ ಕಟ್ಟಿಸಿದ ದೇವಾಲಯ ಈಗ ಜಂಬುಲಿಂಗ ದೇವಾಲಯವೆಂದು ಪರಿಚಿತವಾಗಿದೆ. ಪಟ್ಟದಕಲ್ಲಿನಲ್ಲಿನ ವಿಜಯೇಶ್ವರ ದೇವಾಲಯವೂ ಈತನದೇ ರಚನೆ. ಇದಲ್ಲದೆ ಈತನ ಕಾಲದಲ್ಲಿ ಮುಪಣ್ಣ ಎಂಬಾತನು ಕುರ್ತುಕೋಟಿಯಲ್ಲಿ ಮಹಾದೇಗುಲವೊಂದನ್ನು ಕಟ್ಟಿಸಿದನೆಂದು ಶಾಸನ ಹೇಳುತ್ತದೆ. ಲೋಕತಿನಿಮ್ಮಡಿ ಕುರುತ್ತಕುಂಟೆಯ ಆಡಳಿತ ನೋಡುತ್ತಿದ್ದರು. ಇವಳು ಚಾಳುಕ್ಯ ರಾಣಿಯೇ ಅಥವಾ ರಾಜಕುಮಾರಿಯೇ ತಿಳಿಯದು. ಪಲ್ಲವ ಪರಮೇಶ್ವರವರ್ಮನನ್ನು 730 ರಲ್ಲಿ ಯುದ್ಧದಲ್ಲಿ ಸೋಲಿಸಿದ್ದು ವಿಜಯಾದಿತ್ಯನ ಗಣ್ಯ ಸಾಧನೆ.

ವಿಜಯಾದಿತ್ಯನ ನಂತರ ಅವನ ಮಗ ಇಮ್ಮಡಿ ವಿಕ್ರಮಾದಿತ್ಯನು 734ರಲ್ಲಿ ಪಟ್ಟವೇರಿದನು. ಕಲ್ಯಾಣದ ಚಾಳುಕ್ಯರ ಶಾಸನಗಳು ಹೇಳುವಂತೆ ಇವನಿಗೆ ಭೀಮನೆಂಬ ಒಬ್ಬ ಸೋದರನಿದ್ದು ಅವನೇ ಮುಂದಣ ಕಲ್ಯಾಣ ಶಾಖೆಯ ಮೂಲ ಪುರುಷ. ವಿಕ್ರಮಾದಿತ್ಯನು 730 ರಲ್ಲಿ ತಮ್ಮನ್ನು ಕೆಣಕಿದ್ದ ಪಲ್ಲವರ ವಿರುದ್ಧ ದಂಡೆತ್ತಿ ನಡೆದು ಅವರ ರಾಜಧಾನಿ ಕಾಂಚಿಯನ್ನು ವಿಜಯಶಾಲಿಯಾಗಿ ಪ್ರವೇಶಿಸಿ ಅಲ್ಲಿನ ರಾಜಸಿಂಹೇಶ್ವರ (ಕೈಲಾಸನಾಥ) ದೇವಾಲಯಕ್ಕೆ ಅಪಾರ ದಾನವನ್ನು ಕೊಟ್ಟು ತನ್ನ ವಿಜಯದ ಸ್ಮಾರಕವಾಗಿ ಕನ್ನಡ ಶಾಸನವೊಂದನ್ನು ಆ ದೇವಾಲಯದಲ್ಲಿ ಬರೆಸಿ ಬಂದನು. ಹಿಂದೆ ಬಾದಾಮಿಯನ್ನು ಸೂರೆಮಾಡಿದ್ದ ಪಲ್ಲವರ ಕ್ರಮವನ್ನು ಗಮನಿಸಿ "ವಿಕ್ರಮಾದಿತ್ಯನು ಔದಾರ್ಯದಿಂದ ನಡೆದುಕೊಂಡ," ಎಂದು ಈ ಬಗ್ಗೆ ಪ್ರೊ|| ನೀಲಕಂಠ ಶಾಸ್ತ್ರಿಗಳು ಹೇಳಿದ್ದಾರೆ. ಮುಂದೆ ಇವನ ಪುತ್ರ ಯುವರಾಜ ಇಮ್ಮಡಿ ಕೀರ್ತಿವರ್ಮನು ಕಾಂಚಿಯನ್ನು ಮತ್ತೊಮ್ಮೆ ಪರಾಭವಗೊಳಿಸಿದನು. "ಕಂಚಿಯಾನ್ ಮೂಮೆ ಪರಾಜಿಸಿದೋರ್" ಎಂದು ಈ ಬಗ್ಗೆ ಪಟ್ಟದ ಕಲ್ಲಿನ ಶಾಸನ ಹೇಳಿದ್ದು ವಿಕ್ರಮಾದಿತ್ಯನ ರಾಣಿಯರಾದ ಹೈಹಯ ರಾಜಪುತ್ರಿಯರು ಈ ವಿಜಯದ ಸ್ಮಾರಕವಾಗಿ ಪಟ್ಟದ ಕಲ್ಲಿನಲ್ಲಿ ಎರಡು ಭವ್ಯ ದೇವಾಲಯಗಳನ್ನು ಕಟ್ಟಿದರು. ಲೋಕಾದೇವಿ ಕಟ್ಟಿದ ಲೋಕೇಶ್ವರ (ಇಂದಿನ ವಿರೂಪಾಕ್ಷ) ಮತ್ತು ತ್ರೈಲೋಕಾದೇವಿ ಕಟ್ಟಿದ ತ್ರೈಲೋಕೇಶ್ವರ (ಇಂದಿನ ಮಲ್ಲಿಕಾರ್ಜುನ)ಗಳೇ ಈ ದೇವಾಲಯಗಳು. ಇದೇ ಕಾಲದಲ್ಲಿ ಗುಜರಾತಿನಲ್ಲಿ ಆಳುತ್ತಿದ್ದ ನವಸಾರಿಯ ಚಾಳುಕ್ಯ ಮಾಂಡಳಿಕ ಅವನಿಜಾಶ್ರಯ ಪುಲಿಕೇಶಿಯು 739 ರ ಸುಮಾರಿಗೆ ಸಿಂದ್‌ನಿಂದ (711 ರಲ್ಲಿ ದಾಳಿಯಿಟ್ಟು ಗೆದ್ದುಕೊಂಡ ಪ್ರದೇಶ) ಅರಬ್ಬರು ದಖ್ಖಣದ ಕಡೆಗೆ ಮುಂದೊತ್ತಲು ಅವರನ್ನು ಪೂರ್ತಿ ಸೋಲಿಸಿ ದೇಶದಿಂದ ಹೊರಗಟ್ಟಿದ. ಹಾನಗಲ್ ತಾಲೂಕು ಗುಡಗುಡಿಯಲ್ಲಿ ಇವನ ಕಾಲದಲ್ಲಾದ ಕೆರೆಯ ಉಲ್ಲೇಖವಿದೆ. ಈತನ ಮರಣದ ನಂತರ ಪಟ್ಟದಕಲ್ಲಿನ ಸಮೀಪದ ಭದ್ರನಾಯಕನ ಜಾಲಿಹಾಳದಲ್ಲಿ ಒಂದು ಸ್ಮಾರಕವನ್ನು ಕಟ್ಟಲಾಯಿತು. (ಇಲ್ಲಿ ಹಲವಾರು ಕಿರುಗುಡಿಗಳಿದ್ದು ಬಹುಶಃ ಇವು ಚಾಳುಕ್ಯ ರಾಜರ ಸಮಾಧಿಗಳು). ಒಂದರಲ್ಲಿ ಬೆನಮ್ಮನ ಮಗ ದೇವರಿ 'ಕರಂಡದಪಾರದನ'ವನ್ನು

ಮಾಡಿದನೆಂಬ ಕಿರು ಶಾಸನವಿದೆ. ಬಹುಶಃ ಆತನ ಚಿತಾಭಸ್ಮವನ್ನು ಕರಂಡದಲ್ಲಿ ಹಾಕಿ ಇಲ್ಲಿ ಕಾದಿಟ್ಟಿರಬೇಕೆಂದು ಡಾ॥ಕೆ.ವಿ. ರಮೇಶ್ ಹೇಳಿದ್ದಾರೆ. ಈತನ ಕಾಲದಲ್ಲಿ ಲಕ್ಷ್ಮೇಶ್ವರದ 18 ಪ್ರಕೃತಿಗಳ ಅಧಿಕಾರವನ್ನು ರಾಜ ಪುತ್ರ ವಿಕ್ರಮಾದಿತ್ಯನು ಮಾನ್ಯ ಮಾಡಿದ ಶಾಸನವಿದೆ. ಸ್ಥಳೀಯ ಗ್ರಾಮಸಭೆ, ಶ್ರೇಣಿಗಳಿಗೆ ಅರಸರು ಮಾನ್ಯತೆ ನೀಡಿದ ಬಗ್ಗೆ ದಾಖಲೆ ಇದಾಗಿದೆ.

ಇಮ್ಮಡಿ ವಿಕ್ರಮಾದಿತ್ಯನ ಉತ್ತರಾಧಿಕಾರಿಯಾದ ಇಮ್ಮಡಿ ಕೀರ್ತಿವರ್ಮನು (744-51) ತೀರ ಅಲ್ಪಕಾಲ ಆಳಿದನು. ಈತನು ಯುವರಾಜನಾಗಿದ್ದಾಗಲೇ ಕಾಂಚಿಯ ಮೇಲೆ ದಂಡಯಾತ್ರೆ ನಡೆಸಿದ್ದನು (735); ಮತ್ತೆ ಪಟ್ಟವೇರಿದ ನಂತರವೂ ಕಾಂಚಿಯ ಮೇಲೆ ದಂಡಯಾತ್ರೆ ನಡೆಸಿದನು. ಲಕ್ಷ್ಮೇಶ್ವರದ ಧವಳ ಜಿನಾಲಯಕ್ಕೆ ಐವತ್ತು ಮತ್ತರು ಭೂಮಿಯನ್ನು ಆತನು ದಾನ ಮಾಡಿದನು. ಈತನ ಮಾಂಡಲಿಕನಾಗಿ ಗಂಗಿಪಾಂಡಿ ಊರಲ್ಲಿ (ಧಾರವಾಡ ಜಿಲ್ಲೆಯ ಆಡೂರು ಎಂದು ಗುರುತಿಸಿದೆ) ಜಿನಭವನವೊಂದಕ್ಕೆ ಕೀರ್ತಿವರ್ಮನ ಆಜ್ಞೆಯಂತೆ ಸೇಂದ್ರಕ ಮಾಧವತ್ತಿ ಅರಸನು ದಾನ ಮಾಡಿದ ಉಲ್ಲೇಖವಿದೆ. ಅಲ್ಲದೆ 751-52 ರಲ್ಲಿ ಅಣ್ಣಿಗೇರಿಯಲ್ಲಿ ಇವನ ಕಾಲದಲ್ಲಿ ಜಿನಮಂದಿರವೊಂದನ್ನು ಕಟ್ಟಿಸಿದ ಉಲ್ಲೇಖವಿದೆ. ಕೀರ್ತಿವರ್ಮನ ಕಾಲದ ಸು. 750ರ ಅಣ್ಣಿಗೇರಿ ಶಾಸನದಲ್ಲಿ ಗೋ ಸಹಸ್ರ ದಾನದ ಸೂಚನೆಯಾಗಿದೆ.

ತನ್ನ ಕೊನೆಯ ಕಾಲಕ್ಕೆ ಕೀರ್ತಿವರ್ಮನು ಬುದ್ಧಿಗೇಡಿಯಾದ, ಎಂದು ಡಾ॥ಕೆ.ವಿ. ರಮೇಶ್ ಶಾಸನಾಧಾರದಿಂದ ಹೇಳಿದ್ದಾರೆ. ಅವನು ಮರುಳನಾದ ಪ್ರಸಂಗದಲ್ಲಿ ರಾಷ್ಟ್ರಕೂಟರ ದಾಳಿಯಾಗಿ 753 ರಲ್ಲಿ ಬಾದಾಮಿ ಅವನ ಕೈತಪ್ಪಿ ರಾಷ್ಟ್ರಕೂಟ ದಂತಿದುರ್ಗನ ವಶವಾಯಿತು. 757 ರಲ್ಲಿ ದಂತಿದುರ್ಗನು ಅವನನ್ನು ಪೂರ್ತಿಯಾಗಿ ಸೋಲಿಸಿದನು. ಇದರಿಂದ ಸಾಮ್ರಾಜ್ಯ ಮಳಖೇಡದ ರಾಷ್ಟ್ರಕೂಟರ ಕೈಸೇರಿತು.

ಚಾಳುಕ್ಯರು ಕರ್ನಾಟಕ ಕೀರ್ತಿಯನ್ನು ಹೆಚ್ಚಿಸಿದ ವಿಶಾಲ ಸಾಮ್ರಾಜ್ಯ ಕಟ್ಟಿದ ಧೀರ ಅರಸರಷ್ಟೇ ಅಲ್ಲ, ಉತ್ತಮ ಆಡಳಿತವನ್ನು ನೆಲೆಗೊಳಿಸಿದವರು. ಅವರ ಸಾಮ್ರಾಜ್ಯದಲ್ಲಿ 99,000 ಗ್ರಾಮಗಳುಳ್ಳ ಮೂರು ಮಹಾರಾಷ್ಟ್ರಕಗಳಿದ್ದುವೆಂದು ಐಹೊಳೆ ಶಾಸನ ಹೇಳಿದೆ. ಗಂಗ, ಸೇಂದ್ರಕ, ಆಳೂಪ, ಗುಜರಾತಿನ, ಬೋಧನದ ಮತ್ತು ವೆಂಗಿಯ ಚಾಳುಕ್ಯ (ಕೊನೆಯವರು ಮುಂದೆ ಸ್ವತಂತ್ರರಾದರು), ಬಾಣ, ಭೋಜ ಹೀಗೆ ಅನೇಕ ಮಾಂಡಳಿಕ ಅರಸರು ಇವರ ಕೈಕೆಳಗಿದ್ದರು. ಮಹಾರಾಷ್ಟ್ರ, ರಾಷ್ಟ್ರ (ಮಂಡಲ), ವಿಷಯ, ಭೋಗ, ಗ್ರಾಮ ಮುಂತಾದ ಆಡಳಿತ ಘಟಕಗಳಿದ್ದವು. ಸಂಖ್ಯಾಧಾರಿತ ಬೆಳ್ವೊಲ-300 ಮುಂತಾದ ಆಡಳಿತ ವ್ಯವಸ್ಥೆ ವ್ಯಾಪಕವಾಗಿ ಬಳಸಲು ಆರಂಭಿಸಿದ್ದು ಇವರೇ. ಕೃಷಿಯ ಅಭಿವೃದ್ಧಿಗಾಗಿ ಅವರು ಅನೇಕ ತಟಾಕಗಳನ್ನು ಕಟ್ಟಿದರು ಎಂದಿದೆ. ಇವರ ಕಾಲದಲ್ಲಿ ಕಂದಾಯ ವಸೂಲಿಗಾಗಿ ಭೂಮಿ ಅಳತೆಗೆ ಬಳಸುತ್ತಿದ್ದ ಸುಮಾರು 153 ಇಂಚು ಉದ್ದದ ಒಂದು ಮಾಪನದಂಡವನ್ನು ನೆರೆಯ ಬಳ್ಳಾರಿ ಜಿ॥ಯ ಕುರುಗೋಡಿನಲ್ಲಿ ಒಂದು ಬಂಡೆಯ ಮೇಲೆ ಶಾಸನಸಹಿತವಾಗಿ ಕೆತ್ತಿದ್ದು ಕಂಡು ಬಂದಿದೆ. ಇದರ ಪ್ರಾತಿನಿಧಿಕ ರೇಖಾ ಕೆತ್ತನೆಯನ್ನು ಎಸ್. ರಾಜೇಂದ್ರಪ್ಪ ಪತ್ತೆ ಹಚ್ಚಿದ್ದಾರೆ.

ಕಲೆಯ ಕ್ಷೇತ್ರದಲ್ಲಿ ಗುಹಾಲಯ, ಕಟ್ಟಣೆಯ ರಚನೆಗಳಲ್ಲಿ ಇವರ ಸಾಧನೆ ಅದ್ವಿತೀಯ. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಇವರ ಕಾಲದ ರಚನೆಗಳು ಅನನ್ಯವಾಗಿದೆ. ಐಹೊಳೆಯು ದೇವಾಲಯ ವಾಸ್ತುಶಿಲ್ಪದ ಪ್ರಯೋಗಾಲಯವೆನಿಸಿದೆ. ಲಕ್ಷ್ಮೇಶ್ವರದ ವಿನಾ ಉಳಿದೆಡೆ ಅವರ ಕಟ್ಟಡಗಳು ಧಾರವಾಡ ಜಿಲ್ಲೆಯಲ್ಲಿ ಉಳಿದು ಬಂದಿಲ್ಲ. ಆದರೆ ಇವರು ರೂಢಿಸಿದ ವಾಸ್ತುಶಿಲ್ಪದ ಪ್ರಭಾವ ಆಂಧ್ರ, ಮಹಾರಾಷ್ಟ್ರ, ಗುಜರಾತ್‌ಗಳಲ್ಲೂ ಪ್ರಭಾವಬೀರಿದೆ. ವೈದಿಕರಾದರೂ ಜೈನ, ಬೌದ್ಧ ಸಂಪ್ರದಾಯಗಳಿಗೂ ಪ್ರೋತ್ಸಾಹವನ್ನು ಇವರು ನೀಡಿದರು. ಜಿಲ್ಲೆಯ ಲಕ್ಷ್ಮೇಶ್ವರ, ಕುರ್ತುಕೋಟಿಗಳಲ್ಲಿ ಇವರ ಕಾಲದಲ್ಲಿನ ಅಗ್ರಹಾರಗಳ ಉಲ್ಲೇಖವಿದೆ. ಇವರು ಸ್ಥಾಪಿಸಿದ ಭದ್ರ ಆಡಳಿತ ವ್ಯವಸ್ಥೆ ಮುಂದೆಯೂ ಸಾಗಿತು. ಗದ್ಯಾಣವೆಂಬ ನಾಣ್ಯದ ಉಲ್ಲೇಖ ಇವರ ಶಾಸನದಲ್ಲಿ ಮೊದಲ ಬಾರಿ ಬಂದಿದ್ದು ಅದಕ್ಕೆ ಇವರ ವರಾಹಲಾಂಛನದಿಂದಾಗಿ ವರಾಹ ಎಂಬ ಹೆಸರು ಬಂದಿರಬೇಕು. ಮುಂದೆ ಪ್ರಬಲಿಸಿದ ಐಹೊಳೆಯ ವ್ಯಾಪಾರೀ ಶ್ರೇಣಿ (ಅಯ್ಯಾವೊಳೆ ಐನೂರ್ವರ್)ಇವರ ಕಾಲದಲ್ಲೇ ಹುಟ್ಟಿದ್ದೆಂದು ಗಮನಿಸಬೇಕು.

## ಮಳಖೇಡದ ರಾಷ್ಟ್ರಕೂಟರು

ಬಾದಾಮಿ ಚಾಳುಕ್ಯರನ್ನು ಸೋಲಿಸಿ ಪಟ್ಟಕ್ಕೆ ಬಂದ ರಾಷ್ಟ್ರಕೂಟರ ಕಾಲದಲ್ಲೂ ಧಾರವಾಡ ಜಿಲ್ಲೆಯು ಅವರ ಸಾಮ್ರಾಜ್ಯದ ತಿರುಳುನಾಡಲ್ಲಿ ಇದ್ದು ಅವರ ಒಟ್ಟು 500 ಕ್ಕೂ ಮೇಲ್ಪಟ್ಟು ಶಾಸನಗಳಲ್ಲಿ ಸುಮಾರು 100 ಧಾರವಾಡ ಜಿಲ್ಲೆಯಲ್ಲಿ ಸಿಕ್ಕಿವೆ.

ದೇವಾಲಯ ಸ್ಥಾಪನೆ, ಅವುಗಳಿಗೆ ದಾನ ನೀಡುವಿಕೆ, ಅಗ್ರಹಾರಗಳ ಸ್ಥಾಪನೆ ಹಾಗೂ ಕೆರೆ ಮುಂತಾದ ಸಾರ್ವಜನಿಕ ಕಾಮಗಾರಿಗಳನ್ನು ಸೂಚಿಸುವ ಈ ಶಾಸನಗಳು ಈ ವಂಶದ ಸಮ್ರಾಟರು ಈ ಪ್ರದೇಶಕ್ಕೆ ಕೊಟ್ಟ ಮಹತ್ವದ ಪರಿಚಯ ಮಾಡಿಕೊಡುತ್ತವೆ. ಅವರ ಗಣ್ಯ ದೇವಾಲಯ ಎಲ್ಲೋರದಲ್ಲಿದ್ದರೂ ಕೊಣ್ಣೂರು, ಗದಗುಗಳಲ್ಲಿ ಅವರು ಮಹತ್ವದ ರಚನೆಗಳನ್ನು ಮಾಡಿದ್ದಾರೆ. ಡಾ॥ ಸಿಂದಗಿ ರಾಜಶೇಖರ ಅವರು ಇವರ ಕಾಲದ ಅನೇಕ ದೇವಾಲಯಗಳನ್ನು ಕರ್ನಾಟಕದಲ್ಲೂ ಗುರುತಿಸಿದ್ದಾರೆ (ರಾಷ್ಟ್ರಕೂಟ ಆರ್ಟ್ ಇನ್ ಕರ್ನಾಟಕ, 1991).ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಧಾರವಾಡ ಜಿಲ್ಲೆಯ ಚಿತ್ರ ರಾಷ್ಟ್ರಕೂಟರ ಕಾಲದಲ್ಲಿ ಚೆನ್ನಾಗಿ ಒಡಮೂಡುತ್ತದೆ.

ಈ ವಂಶದ ಆರಂಭದ ಅರಸು ದಂತಿದುರ್ಗನು ಬಾದಾಮಿ ಚಾಳುಕ್ಯರ ಮಾಂಡಳಿಕನಾಗಿದ್ದು, ಮಹಾರಾಷ್ಟ್ರ ಗುಜರಾತ್‌ಗಳ ಗಡಿಪ್ರದೇಶದಲ್ಲಿ ಆಳುತ್ತಿದ್ದವನಾಗಿ, ಗುಜರಾತಿನ ಚಾಳುಕ್ಯ ರಾಜಕುಮಾರಿಯನ್ನು ಲಗ್ನಮಂಟಪದಿಂದ ಬಲವಂತಾಗಿ ಅಪಹರಿಸಿ ಮದುವೆಯಾಗಿದ್ದ ರಾಷ್ಟ್ರಕೂಟ ಇಂದ್ರನ ಮಗನು. ಹೀಗಾಗಿ ಈತನು ಚಾಳುಕ್ಯ ರಾಜಕುಮಾರಿಯ ಪುತ್ರ. "ಕಾಂಚೀಶ, ಕೇರಳನರಾಧಿಪ, ಚೋಳ, ಪಾಂಡ್ಯ, ಶ್ರೀಹರ್ಷ, ವಜ್ರಟ ಇವರನ್ನೆಲ್ಲ ಸೋಲಿಸಲು ಸಮರ್ಥವಾದ ಅಜೇಯ ಕರ್ಣಾಟಬಲವನ್ನು" ತಾನು ಪರಾಭವಗೊಳಿಸಿ ಚಾಳುಕ್ಯರ ವಲ್ಲಭ ಎಂಬ ಬಿರುದನ್ನು ತಾನು ಸೆಳೆದುಕೊಂಡುದಾಗಿ ಅವನ ಶಾಸನಗಳು ಹೇಳಿವೆ.

ಮೂಲತಃ ತಾವು ಲಟ್ಟಲೂರವರು ಎಂದು (ಲಟ್ಟಲೂರಪುರವರಾಧೀಶ್ವರ) ರಾಷ್ಟ್ರಕೂಟರು ಕರೆದುಕೊಂಡಿರುವರು. ಈಗ ಕರ್ನಾಟಕದ ಗಡಿಯಲ್ಲಿರುವ ಮಹಾರಾಷ್ಟ್ರದ ಲಾತೂರಿನವರು ಎಂದು ಫ್ಲೀಟರು ಗುರುತಿಸಿದ್ದಾರೆ. ಲಾಟ, ಮಾಳವಗಳನ್ನೂ ಗೆದ್ದ ದಂತಿದುರ್ಗನು ತೀರಿಕೊಂಡಾಗ ಪಟ್ಟಕ್ಕೆ ಬಂದ ಅವನ ತಂದೆಯ ತಮ್ಮ ಒಂದನೇಯ ಕೃಷ್ಣನು (756) ತನ್ನ ಪಟ್ಟಗ್ರಹಣಕ್ಕೆ ವಿರೋಧಮಾಡಿದ ತನ್ನ ದಾಯಾದಿ ಕರ್ಕನನ್ನೂ ಸೋಲಿಸಿ ಚಾಳುಕ್ಯ ಕೀರ್ತಿವರ್ಮನನ್ನು ಅಂತಿಮವಾಗಿ ಸೋಲಿಸಿದನು (758). ಕೊಂಕಣವನ್ನು ಗೆದ್ದು ಅಲ್ಲಿ ಶಿಲಾಹಾರ ವಂಶದ ಸಣಫುಲ್ಲನನ್ನು ಮಾಂಡಳಿಕನಾಗಿ ನೇಮಿಸಿದನು. ಅಲ್ಲದೆ ಕಿರುಕುಳ ಕೊಡುತ್ತಿದ್ದ ವೆಂಗಿ ಚಾಳುಕ್ಯ ನಾಲ್ಕನೇಯ ವಿಷ್ಣುವರ್ಧನನ್ನೂ ಬಗ್ಗಿಸಿದನು. ಈ ಉಭಯವಂಶಗಳ ನಡುವೆ ವೈಮನಸ್ಯ ದೀರ್ಘಕಾಲ ಸಾಗಿತು. ಕೃಷ್ಣನು ಕಟ್ಟಿಸಿದ ಎಲ್ಲೋರಾದ ಏಕಶಿಲಾ ಕೈಲಾಸ ದೇವಾಲಯ ಈಗ ಮಹಾರಾಷ್ಟ್ರದಲ್ಲಿದ್ದು ಅದ್ಭುತಭವ್ಯ ರಚನೆಯಾಗಿದೆ. ಈತನ ಕಾಲದ ಹತ್ತಿಮತ್ತೂರು ವೀರಗಲ್ಲಿನಲ್ಲಿ (ಎ.ಇ.6, ಪು.1160-62) ದಾಸಮ್ಮ ಮತ್ತು ಎರೆಯರು ಗಂಗರ ವಿರುದ್ಧ ಹೋರಾಡಿ ಮಳ್ವೂರಲ್ಲಿ (ಹತ್ತಿಮತ್ತೂರು) ಮಡಿದರೆಂದಿದೆ. ಕೃಷ್ಣನಿಗೂ ಗಂಗ ಶ್ರೀಪುರುಷನಿಗೂ ಉಗ್ರ ಯುದ್ಧಗಳಾಗಿ ಒಮ್ಮೆ ಗಂಗರು ಕಂಪಿಲಿವರೆಗೂ (ಬಳ್ಳಾರಿ ಜಿ॥) ಕೃಷ್ಣನ ಸೇನೆಯನ್ನು ಶ್ರೀಪುರುಷನ ಮುಂದಾಳತ್ವದಲ್ಲಿ ಅಟ್ಟಿಸಿಕೊಂಡು ಬಂದಿದ್ದರು.

ಈತನ ನಂತರ ಪಟ್ಟವೇರಿದ ಇವನ ಮಗ ಎರಡನೇಯ ಗೋವಿಂದನು (774-780) ಕೆಲಕಾಲ ಮಾತ್ರ ಆಳಿದನು. ಮುಂದೆ ಈತನ ಸೋದರ ಧ್ರುವನು ಅಧಿಕಾರ ಗ್ರಹಣ ಮಾಡಿದನು. ಧ್ರುವನು ಅಸಾಮಾನ್ಯ ವೀರನಾಗಿದ್ದು ಅಂದು ಭಾರತದ ಅಧಿರಾಜತ್ವದ ಪೀಠಸ್ಥಾನವೆನಿಸಿದ್ದ ಕನೋಜವನ್ನು ಗೆಲ್ಲಲು ಯತ್ನಿಸುತ್ತಿದ್ದ ಗೂರ್ಜರ ಪ್ರತೀಹಾರ ವತ್ಸರಾಜನನ್ನು ಸೋಲಿಸಿ ಕನೋಜದೆಡೆ ಸಾಗಿ ಅಲ್ಲಿ ಆಳುತ್ತಿದ್ದ ಇಂದ್ರಾಯುಧನನ್ನೂ ಅವನನ್ನು ರಕ್ಷಿಸಲು ಬಂಗಾಳದಿಂದ ಬಂದ ಪಾಲರಾಜ ಧರ್ಮಪಾಲನನ್ನೂ ಸೋಲಿಸಿ ಇಬ್ಬರಿಂದಲೂ ಕಪ್ಪ ಪಡೆದನು. ಬಂಡೆದ್ದ ಗಂಗ ಎರಡನೇಯ ಶಿವಮಾರನನ್ನು ಸೋಲಿಸಿ ಅವನನ್ನು ಬಂಧಿಸಿ ತನ್ನ ಮಗ ಕಂಬರಸನನ್ನು ಗಂಗವಾಡಿಯ ಮಾಂಡಳಿಕನಾಗಿ ನೇಮಿಸಿದನು. ವೆಂಗಿ ರಾಜನನ್ನೂ ಸೋಲಿಸಿ ವೆಂಗಿಯ ರಾಜಕುಮಾರಿ ಶೀಲಭಟ್ಟಾರಿಕೆಯನ್ನು ವರಿಸಿದನು. ತನ್ನ ಇನ್ನೊಬ್ಬ ಮಗ ಇಂದ್ರನನ್ನು ಗುಜರಾತಿನ ಮಾಂಡಳಿಕನಾಗಿ ನೇಮಿಸಿದನು. ಈತನ ಸಿಡೇನೂರ ಶಾಸನ (ಎಸ್.ಐ.ಐ. 20, 10) ದಲ್ಲಿ ಬಿನಏತಿಯಬ್ಬೆ ಅಲ್ಲಿ ಆಳುತ್ತಿದ್ದಳೆಂದಿದ್ದು ಗಂಗರ ಜೊತೆ ನಡೆದ ಯುದ್ಧದ ಉಲ್ಲೇಖವಿದೆ. ಅಲ್ಲದೆ ಬನವಾಸಿಯನ್ನು ಮಾರಕ್ಕರಸನು ಆಳುತ್ತಿದ್ದನೆಂದಿದೆ. ಕಚವಿ ಶಾಸನದಲ್ಲಿ ಮದೆಯೂರ ಮಾರನು ಬನವಾಸಿ 12,000 ವನ್ನು ಆಳುತ್ತಿದ್ದನೆಂದಿದೆ. ಕಚವಿ (ಕಚ್ಛಪಿ)ಯ ಮಾರಬ್ಬೆ ಗುಡಿಗೆ ದಾನವನ್ನು ನೀಡಿದ ದಾಖಲೆ ಇದು.

ಧ್ರುವನ ಮಗನಾದ ಮೂರನೇಯ ಗೋವಿಂದ (794-814) ನು ತಂದೆಯಂತೆ ಪ್ರತಾಪಶಾಲಿಯಾಗಿದ್ದು ಹಿಮಾಲಯದಿಂದ ಸಿಂಹಳದವರೆಗೆ ತನ್ನ ಪರಾಕ್ರಮವನ್ನು ಮೆರೆದ ಧೀರ ರಾಜನಾಗಿದ್ದಾನೆ. ಇವನ ರಾಜಧಾನಿ ಮಯೂರಖಿಂಡಿ ಎಂದಿದ್ದು ಅದು ಬೀದರ್ ಜಿಲ್ಲೆಯ ಮೋರ್ಖಂಡಿಯಾಗಿದೆ. (ಬಾದಾಮಿ ಚಾಳುಕ್ಯರ ಕಾಲದ ಕೆಲವು ಗುಹಾಲಯಗಳನ್ನು ಇತ್ತೀಚೆಗೆ ಡಾ॥ ರು.ಮ. ಷಡಕ್ಷರಯ್ಯ ಇಲ್ಲಿ ಪತ್ತೆ ಮಾಡಿದ್ದಾರೆ). ಈತನು ಪಟ್ಟವೇರಿದಾಗ ಗಂಗವಾಡಿಯಲ್ಲಿ ಮಾಂಡಳಿಕನಾಗಿದ್ದ ಈತನ ಅಣ್ಣನು ಬಂಡೇಳಲು,

ಈತನು ಬಂಧಿತ ಗಂಗ ಶಿವಮಾರನನ್ನು ಬಿಡುಗಡೆ ಮಾಡಿದನು. ಶಿವಮಾರನೂ ಈತನ ವಿರುದ್ಧ ದಂಗೆಯೇಳಲು ಇಬ್ಬರನ್ನೂ ಬಂಧಿಸಿ, ಮುಂದೆ ತನ್ನ ಅಣ್ಣನನ್ನು ಮತ್ತೆ ಗಂಗವಾಡಿಯಲ್ಲಿ ಮಾಂಡಳಿಕನಾಗಿ ನೇಮಿಸಿದನು.

ಇದಾದ ಮೇಲೆ ಗೂರ್ಜರ ಪ್ರತೀಹಾರ ಎರಡನೇ ನಾಗಭಟನನ್ನು ಸೋಲಿಸಿ ಮತ್ತೆ ಕನೋಜದ ಮೇಲೆ ಸಾಗಿ ಅಲ್ಲಿ ಆಳುತ್ತಿದ್ದ ಚಕ್ರಾಯುಧನನ್ನೂ ಪರಾಭವಗೊಳಿಸಿ ಕಪ್ಪ ಪಡೆದನು. ಬಂಗಾಳದ ಧರ್ಮಪಾಲನೂ ಈತನಿಗೆ ತಾನಾಗಿ ಶರಣಾದನು. "ಗೋವಿಂದನ (ಸೇನೆಯ) ಕುದುರೆಗಳು ಹಿಮಾಲಯದಲ್ಲಿ ಹಿಮಕರಗಿದ ನೀರನ್ನು ಕುಡಿದವು. ಆತನ ಆನೆಗಳು ಗಂಗಾನದಿಯ ಜಲದಿಂದ ತಮ್ಮ ನೀರಡಿಕೆ ಕಳೆದವು," ಎಂದು ಈ ಭಾರೀ ವಿಜಯಯಾತ್ರೆಯನ್ನು ಶಾಸನಗಳು ಉಗ್ಗಡಿಸಿವೆ. ಉತ್ತರ ದಿಗ್ವಿಜಯದಿಂದ ಮರಳುವಾಗ ಶ್ರೀಭವನದಲ್ಲಿ (ಸೂರತ್ ಬಳಿಯ ಸೊಬ್ರಾಂವ್) ಮಳೆಗಾಲದಲ್ಲಿ ಗೋವಿಂದನು ವಿಶ್ರಮಿಸುತ್ತಿರಲು ಅಲ್ಲಿ ತನಗೆ ಹುಟ್ಟಿದ ಮಗನಿಗೆ ಅಲ್ಲಿನ ತನ್ನ ಮಾಂಡಲಿಕ ಮಿತ್ರರಾಜ ಶರ್ವನ ಹೆಸರಿಟ್ಟನು. ಅವನೇ ಮುಂದಿನ ಚಕ್ರವರ್ತಿ ಅಮೋಘವರ್ಷ ನೃಪತುಂಗ. ಪಲ್ಲವ ದಂತಿವರ್ಮನನ್ನು ಸೋಲಿಸಿ 803ರಲ್ಲಿ ಗೋವಿಂದನು ಕಾಂಚಿಯಲ್ಲೇ ಬೀಡುಬಿಟ್ಟನು. ಆಗ ಸಿಂಹಳದ ರಾಜನು ಕಾಂಚಿಗೆ ದೂತರನ್ನು ಕಳುಹಿಸಿ ಅವನಿಗೆ ಕಪ್ಪ ನೀಡಿದನು. ಹೀಗೆ ಅಖಿಲ ಭಾರತದಲ್ಲಿ ಕರ್ನಾಟಕದ ಪ್ರತಿಷ್ಠೆಯನ್ನು ಮೆರೆಸಿದವನು ಮೂರನೇಯ ಗೋವಿಂದ. ಈತನ ಲಕ್ಷ್ಮೇಶ್ವರ ಶಾಸನದಲ್ಲಿ ಆ ಊರ ಮೂರು ಕೇರಿಗಳ ಪಟ್ಟೆಗಾರರ ಶ್ರೇಣಿಯ ಉಲ್ಲೇಖವಿದೆ. ಗುಂಡಗಟ್ಟಿ ಶಾಸನದಲ್ಲಿ (ಹಿರೇಕೆರೂರ ತಾ||) ಬನವಾಸಿಯಲ್ಲಿ ದಂತಿಗನು ಆಳುತ್ತಿದ್ದನೆಂದಿದೆ.

ಗೋವಿಂದನ ನಂತರ ಆಳಿದ ಅವನ ಮಗ ಒಂದನೇಯ ಅಮೋಘವರ್ಷ ನೃಪತುಂಗನು (814-78) ಕೇವಲ 14 ವರ್ಷದ ಬಾಲಕನಿದ್ದು ಅವನು ಪಟ್ಟವೇರಿದಾಗಲೇ ಬಂಡಾಯಗಳಾಗಿ ಅವನ ದಾಯಾದಿಯಾದ ಗುಜರಾತಿನ ಸುವರ್ಣವರ್ಷನು ಈತನ ನೆರವಿಗೆ ನಿಂತು ಬಂಡಾಯಗಳನ್ನು ಮುರಿದನು. ವಾಸ್ತವವಾಗಿ ಅಮೋಘವರ್ಷನು ಶಾಂತಿಪ್ರಿಯ ರಾಜನಾದರೂ (ತನ್ನ ಹಿರಿಯರಂತೆ ದಿಗ್ವಿಜಯಗಳನ್ನು ನಡೆಸದಿದ್ದರೂ) ಬಂಡೆದ್ದ ಮಾಂಡಳಿಕರು ಹಾಗೂ ಶತ್ರುಗಳನ್ನು ಬಲಿ ಹಾಕಿದನು. ಗಂಗ 2ನೇ ಶಿವಮಾರ (816), ವೆಂಗಿಯ ಚಾಳುಕ್ಯ ಐದನೇಯ ವಿಷ್ಣುವರ್ಧನ (848), ಗುಜರಾತಿನ ತನ್ನ ವಂಶದವನೇ ಆದ ಧ್ರುವ (ಸು.850), ಮತ್ತೆ ಬಂಡೆದ್ದ ಗಂಗರ ನೆರವಿಗೆ ಬಂದಿದ್ದ ನೊಳಂಬ ಮಂಗಿ, ಆಳುಪ ವಿಮಲಾದಿತ್ಯ ಹಾಗೂ ತನ್ನ ಅಳಿಯ ಪಲ್ಲವ ಮೂರನೇಯ ನಂದಿವರ್ಮನ ವಿರುದ್ಧ ದಂಡೆತ್ತಿ ಬಂದ ಪಾಂಡ್ಯ ತೇಮರ್ಾರ, ಹೀಗೆ ಆರುರಾಜರು ಅಮೋಘವರ್ಷನ ಸೇನೆಗೆ ಬಲಿಯಾದರು. ಇವು ಅನಿವಾರ್ಯವಾಗಿ ಆದ ಯುದ್ಧಗಳು. ಆದರೆ ಪಲ್ಲವ ನಂದಿವರ್ಮನಿಗೆ ತನ್ನ ಮಗಳಾದ ಶಂಖಾಳನ್ನೂ ಗಂಗ ವಂಶದ ರಾಜಪುತ್ರರಿಗೆ ತನ್ನ ಇಬ್ಬರು ಪುತ್ರಿಯರನ್ನು ಅಮೋಘವರ್ಷನು ಮದುವೆ ಮಾಡಿಕೊಟ್ಟನು. ವೆಂಗಿವಂಶಕ್ಕೂ ತನ್ನ ಮನೆತನದ ಕನ್ಯೆಯೊಬ್ಬಳನ್ನು ಮದುವೆ ಮಾಡಿ ಕೊಟ್ಟಿರಲು, ಅವಳ ಮಗನೇ ಇವರ ವಿರುದ್ಧ ಬಂಡೆದ್ದು ಹತನಾದನು.

ದೀರ್ಘಕಾಲ ರಾಜ್ಯವಾಳಿದ ಅಮೋಘವರ್ಷನು ವಿದ್ಯಾಪಕ್ಷಪಾತಿಯೂ ಧಾರ್ಮಿಕನೂ ಆಗಿದ್ದ. ಖ್ಯಾತ ವಿದ್ವಾಂಸರೂ ಜೈನಸಂನ್ಯಾಸಿಗಳೂ ಆಗಿದ್ದ ವೀರಸೇನ, ಜಿನಸೇನ, ಗುಣಭದ್ರ, ಹಾಗೂ ವೈಯಾಕರಣಿ ಶಾಕಟಾಯನ ಇವನ ಆಸ್ಥಾನದಲ್ಲಿ ಇದ್ದರು. ಗಣಿತಜ್ಞ ಮಹಾವೀರ್ಯಾಚಾರ್ಯ, ಕವಿರಾಜಮಾರ್ಗಕಾರ ಶ್ರೀವಿಜಯ ಇವರ ಆಸ್ಥಾನಿಕರು. ಇವನ ಗಣ್ಯ ಸೇನಾನಿ ಬಂಕೆಯ ಬಂಕಾಪುರ ಊರಿನ ನಿರ್ಮಾಣಕ್ಕೆ ಕಾರಣನಾದನು. ಆತನೇ ಕೊಣ್ಣೂರು (ಕೊಳನೂರು) ಪರಮೇಶ್ವರ ದೇವಾಲಯವನ್ನೂ ಕಟ್ಟಿಸಿದನು (860) (ಮೂಲತಃ ಅದು ಜೈನಬಸದಿಯಾಗಿತ್ತು). ಹೊಯ್ಸಳರು ಮುಂದೆ ವ್ಯಾಪಕವಾಗಿ ಅಳವಡಿಸಿಕೊಂಡ ನಕ್ಷತ್ರಾಕಾರದ ತಳವಿನ್ಯಾಸ ಮೊದಲಬಾರಿ ಇಲ್ಲಿ ಕಾಣಿಸಿಕೊಂಡಿತೆಂದು ಡಾ|| ಎ. ಸುಂದರ ಹೇಳಿದ್ದಾರೆ. ಅಮೋಘವರ್ಷನೇ ಗುಲ್ಬರ್ಗ ಜಿಲ್ಲೆಯ ಮಳಖೇಡ (ಮಾನ್ಯಖೇಟ)ವನ್ನು ರಾಜಧಾನಿಯಾಗಿ ಮಾಡಿದವನು. ರಾಜ್ಯಕ್ಕೆ ಯಾವುದೋ ಸಂಕಟ ಬಂದಾಗ ಅದರ ಪರಿಹಾರಾರ್ಥ ನಿರುಪಾಯನಾಗಿ ಕೊಲ್ಲಾಪುರದ ಮಹಾಲಕ್ಷ್ಮಿಗೆ ತನ್ನ ಬೆರಳನ್ನು ಕತ್ತರಿಸಿ ಅರ್ಪಿಸಿದವನು ಅವನು. ಅಮೋಘವರ್ಷ ಕರ್ನಾಟಕದ ಹೆಮ್ಮೆಯ ತತ್ವಜ್ಞಾನಿರಾಜ.

ಅವನ ಕಾಲದ ಶಿಗ್ಗಾಂವಿ ತಾಲೂಕು ಬರಡೂರು ಶಾಸನದಲ್ಲಿ ಬನವಾಸಿ-12,000 ವನ್ನು ಇಂದ್ರ (ಬೇರೆ ಶಾಸನಗಳ ಇಂದಪ್ಪಯ್ಯ) ಆಳುತ್ತಿದ್ದು ಕಿಮುಳೆಯಲ್ಲಿ ಇದ್ದ ಅಗ್ರಹಾರದ ಉಲ್ಲೇಖವಿದೆ. ಇದೇ ರೀತಿ ಉಣಕಲ್-30 ಎಂಬ ಪ್ರದೇಶದ ಉಲ್ಲೇಖವಿದೆ. ರಾಣೆಬೆನ್ನೂರು ಶಾಸನದಲ್ಲಿ ಪೊಲ್ಲಬ್ಬೆ ಎಂಬುವಳು ಕಟ್ಟಿಸಿದ ಬಸದಿಗೆ ಭೂದಾನ ನೀಡಿದ ವಿಚಾರವಿದೆ (859). ಮಂತ್ರವಾಡಿ ಶಾಸನದಲ್ಲಿ ಎಳ್ಳುಣಸೆ ಅಗ್ರಹಾರದ ಉಲ್ಲೇಖವಿದೆ (865). ಆ ಅಗ್ರಹಾರದವರು ಆದಿತ್ಯ ಭಟಾರ (ಸೂರ್ಯ ದೇವಾಲಯ)ರಿಗೆ

ದಾನ ನೀಡಿದ್ದರು. ಶಿಗ್ಗಾಂವಿ ಶಾಸನದಲ್ಲಿ ಈ ಅಗ್ರಹಾರದ 40 ಮಹಾಜನರು ಮೂಲಸ್ಥಾನ ದೇವರಿಗೆ (ಈಶ್ವರ) ದಾನ ನೀಡಿದ ಉಲ್ಲೇಖವಿದೆ. ಶಿಶುವಿನಹಳ್ಳಿ (ತಾ॥ ನವಲಗುಂದ)ದಲ್ಲಿನ ಅಗ್ರಹಾರಕ್ಕೆ ಬೆಳ್ವೊಲ-300ರ ಅಧಿಕಾರಿ ದೇವಣಯ್ಯ ಕೆಲವೊಂದು ಸುಂಕ ವಿನಾಯಿತಿ ನೀಡಿದ ವಿಚಾರವಿದೆ (872). ಇಂಥದೇ ರಿಯಾಯಿತಿಯನ್ನು ನೀರ್ಗುಂದ (ಗದಗ ತಾಲೂಕು ನೀಲಗುಂದ)ದ ಅಗ್ರಹಾರ ಮಹಾಜನರಿಗೆ ಇದೇ ಅಧಿಕಾರಿ ನೀಡಿದ್ದಾನೆ (866). ನಿಡಗುಂದಿಗೆ -12ರ ಪೆರ್ಗಡೆ ಕುಪ್ಪಣನು ಆ ಊರಲ್ಲಿ ಒಂದು ಶಿವಾಲಯವನ್ನು ಕಟ್ಟಿ ದಾನ ನೀಡಿದ ಸಂಗತಿ ಅಮೋಘವರ್ಷನ ಇನ್ನೊಂದು ಶಾಸನದಲ್ಲಿ ಬಂದಿದೆ. ಗದಗ ತಾಲೂಕು ಚಿಂಚಿಲ ಅಗ್ರಹಾರದ ಉಲ್ಲೇಖವಿದ್ದು ಅಲ್ಲಿನ ಐವತ್ತಾರು ಮಹಾಜನರಿಗೆ ಗೋಸಹಸ್ರದಾನ ನೀಡಿದ ವಿವರಗಳು ಅಮೋಘ ವರ್ಷನ ಮತ್ತೊಂದು ಶಾಸನದಲ್ಲಿ ಇದೆ. ಐವತ್ತಾರು ಮಹಾಜನರಿದ್ದ ಅಗ್ರಹಾರವು ಚಿಂಚಿಲು (ಗದಗ ತಾಲೂಕು) ಊರಲ್ಲಿ ಇತ್ತು. ಗುಡ್ಡದ ಚನ್ನಾಪುರ (ಶಿಗ್ಗಾಂವಿ ತಾಲೂಕು) ಶಾಸನದಲ್ಲಿ ಬನವಾಸಿಯನ್ನು ಲೋಕಟೆ ಆಳುತ್ತಿರಲು ಕುಂದವೂರ-30ಕ್ಕೆ ಚಂದ್ರಯ್ಯ ನಾಡಗೌಡನಾಗಿದ್ದನೆಂದು ಹೇಳಿದೆ.

ಅಮೋಘವರ್ಷನ ನಂತರ ಪಟ್ಟವೇರಿದ ಅವನ ಪುತ್ರ ಎರಡನೇಯ ಕೃಷ್ಣ (878-914) ಜೈನ ವಿದ್ವಾಂಸ ಗುಣಭದ್ರನಿಂದ ಶಿಕ್ಷಣ ಪಡೆದಿದ್ದನು. ಕೃಷ್ಣನು ವೆಂಗಿ ಚಾಳುಕ್ಯರ ವಿರುದ್ಧ ದೀರ್ಘ ಹೋರಾಟ ನಡೆಸಬೇಕಾಯಿತು; ಹಾಗೂ ಅನೇಕ ಬಾರಿ ಅವನು ಸೋಲನ್ನು ಉಂಡನು. ಆದಿತ್ಯ ಚೋಳನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟ ಅವನು ಉರೆಯೂರಿನ ಚೋಳರ ಉತ್ತರಾಧಿಕಾರಕ್ಕೆ ನಡೆದ ಯುದ್ಧದಲ್ಲಿ ತನ್ನ ಮೊಮ್ಮಗ ಕನ್ನರನಿಗೆ ಪಟ್ಟ ಕೊಡಿಸಲು ವ್ಯರ್ಥ ಹೋರಾಟ ಮಾಡಿದನು. ಆದರೆ ಮಧ್ಯ ಭಾರತದ ಗೂರ್ಜರ ಪ್ರತೀಹಾರ ಬೋಜನನ್ನು ಸೋಲಿಸಿ ಅವನಿಂದ ಕಪ್ಪವನ್ನು ಸಂಗ್ರಹಿಸಿದನು. ಬಂಡೇಳುತ್ತಿದ್ದ ಗುಜರಾತಿನ ರಾಷ್ಟ್ರಕೂಟ ಶಾಖೆಯನ್ನು ಅವನು ಕೊನೆಗೊಳಿಸಿದನು. ಕೃಷ್ಣನ 15ಕ್ಕೂ ಮೇಲ್ಪಟ್ಟು ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ದೊರೆತಿದ್ದು ಸೊರಟೂರಲ್ಲಿ (883) ಹಾಗೂ ಚಿಂಚಿಲಲ್ಲಿ (897) ಅಗ್ರಹಾರಗಳಿದ್ದ ಉಲ್ಲೇಖ, ಬೆಳ್ವೊಲ-300 ರಲ್ಲಿ ವತ್ಸಯ್ಯ ಎಂಬಾತ ಅಧಿಕಾರಿಯಾಗಿದ್ದ ವಿಚಾರ, ಮುಳಗುಂದದಲ್ಲಿ ಚೀಕಾರ್ಯ ಎಂಬಾತನಿಂದ ಬಸದಿ ನಿರ್ಮಾಣ, ಕುಪ್ಪದೇವರಸ ಎಂಬಾತನು (ಬಹುಶಃ ತಾನೇ ಕಟ್ಟಿಸಿದ್ದ) ಕುಪ್ಪೇಶ್ವರ ದೇವರಿಗೆ ದಾನ, ಹಾಗೂ ಮೇಳಿವೀಡು (ಮೇವುಂಡಿ) ಎಂಬ ಪ್ರಾಂತರಾಜಧಾನಿಯಲ್ಲಿ ಕೊಯಿಗೇಶ್ವರ ದೇವಾಲಯಕ್ಕೆ ಸಾಮಂತರೊಬ್ಬರು ನೀಡಿದ ದಾನಗಳ ವಿಚಾರ, ಮೇವುಂಡಿ (ಮುಂಡರಗಿ ತಾಲೂಕು)ಯಲ್ಲಿ ಕಾಣಬರುತ್ತದೆ. (ಎಸ್.ಐ.ಐ. 11, ಭಾಗ1, ಕ್ರ.30, ಅದೇ ಕ್ರ.22). ಈತನ ಹೊನ್ನತ್ತಿ (ರಾಣೆಬೆನ್ನೂರು ತಾಲೂಕು) ಶಾಸನದಲ್ಲಿ ಲೋಕಟೆ ಎಂಬಾತನು ಬನವಾಸಿ - 12,000ಆಳುತ್ತಿದ್ದನೆಂದೂ ಅವನ ಮಗ ಕಲಿವಿಟ್ಟನು ಪುನ್ನವಂತಿ- 12(ಹೊನ್ನತ್ತಿ) ಭಾಗವನ್ನು ಆಳುತ್ತಿದ್ದನೆಂದೂ ತಿಳಿಯುತ್ತದೆ. ಹುಬ್ಬಳ್ಳಿಯಲ್ಲಿ ಈಗ ಇರುವ 974ರ ಒಂದು ಶಾಸನದಲ್ಲಿ ಮೋರಿಯರ ಕಲಿಬಿಟ್ಟಯ್ಯ ಕೆರೆಯೊಂದನ್ನು ಕಟ್ಟಿಸಿದ ವಿಚಾರವಿದ್ದು ಯಾವ ಊರಲ್ಲಿ ಎಂದು ತಿಳಿಯದು. ಈತನು ಹೊನ್ನತ್ತಿ ಶಾಸನದಲ್ಲಿ ಹೇಳಿದ ವ್ಯಕ್ತಿಯೇ ಇರಬಹುದು. ಕೌಜಗೇರಿಯ 912ರ ದಾಖಲೆಯಲ್ಲಿ ಬೆಳವಣಿಗೆ-12 (ಬೆಳವಣಿಕಿ) ಪ್ರದೇಶದ ಉಲ್ಲೇಖವಿದೆ.

ಕೃಷ್ಣನ ನಂತರ ಪಟ್ಟವೇರಿದ ಅವನ ಮೊಮ್ಮಗ (ಮಗ ಜಗತ್ತುಂಗನ ಪುತ್ರ; ಜಗತ್ತುಂಗನು ಬಹುಶಃ ಯುವರಾಜನಾಗಿದ್ದಾಗಿನ ಒಂದು ಶಾಸನ ರಾಣೆಬೆನ್ನೂರು ತಾಲೂಕು ಹೂಲಿಹಳ್ಳಿಯಲ್ಲಿ ಇದ್ದು ಆಗ ರಾಜಾದಿತ್ಯ ಬನವಾಸಿಯನ್ನಾಳುತ್ತಿದ್ದನೆಂದಿದೆ) ಮೂರನೇಯ ಇಂದ್ರನು (1914) (ಜಗತ್ತುಂಗನು ಕೃಷ್ಣನಿಗೂ ಮೊದಲೇ ಹತನಾಗಿದ್ದ) ಪರಮಾರ ಉಪೇಂದ್ರನ ದಾಳಿಯನ್ನು ಎದುರಿಸಿ ಅವನನ್ನು ಸೋಲಿಸಿ ಹಿಂದಕ್ಕಟ್ಟಿದನು. ಗೂರ್ಜರ ಪ್ರತೀಹಾರ ವಂಶದಲ್ಲಿ ನಡೆದ ಅಂತಃಕಲಹದ ಲಾಭ ಪಡೆದು ಇಂದ್ರನು ಉತ್ತರದಲ್ಲಿನ ಯಮುನಾ ನದಿಯನ್ನು ದಾಟಿ ಕನೋಜವನ್ನು ಗೆದ್ದು ಅದನ್ನು ತನ್ನ ವಶಪಡಿಸಿಕೊಂಡನು. ಆ ಕಾಲಾವಧಿಯು ಭಾರತದಲ್ಲಿ ಕನೋಜದ ಅದಿರಾಜತ್ವದ ಕಾಲ ಎಂದು ಹೇಳುವ ಉತ್ತರ ಭಾರತದ ಇತಿಹಾಸಕಾರರಿಗೆ ಕನೋಜ ಅರಸರಾದ ಹರ್ಷ, ಇಂದ್ರಾಯುಧ, ಚಕ್ರಾಯುಧರನ್ನು ಸೋಲಿಸಿ ಮುಂದೆ ಕನೋಜವನ್ನೇ ತಮ್ಮ ವಶದಲ್ಲಿ ಇರಿಸಿಕೊಂಡ ಕರ್ನಾಟಕ ಅರಸರ ಸಾಧನೆಯನ್ನು ಗಮನಿಸಿ 'ಇದು ಭಾರತದ ಇತಿಹಾಸದಲ್ಲಿ ಕರ್ನಾಟಕದ ಅಧಿರಾಜತ್ವದ ಕಾಲ' ಎಂಬ ಸಂಗತಿ ಇನ್ನೂ ಮನವರಿಕೆಯಾಗಬೇಕಾಗಿದೆ. ತ್ರಿಪುರಿಯ ಚೇದಿ (ಹೈಹಯ ಅಥವಾ ಕಲಚೂರಿ ವಂಶದ) ರಾಜಕುಮಾರಿ ಲಕ್ಷ್ಮಿಯ ಮಗನಾದ ಇಂದ್ರನು ಅದೇ ವಂಶದ ವಿಜಾಂಬಾ ಎಂಬ ರಾಜಪುತ್ರಿಯನ್ನು ವರಿಸಿದ್ದನು. ವೆಂಗಿಯ ಚಾಳುಕ್ಯ ಉತ್ತರಾಧಿಕಾರದ ಯುದ್ಧಗಳಲ್ಲಿ ಇಂದ್ರನು ಹಸ್ತಕ್ಷೇಪಮಾಡಿ ತನ್ನ ಮಿತ್ರನಾದ ವೆಂಗಿಯ ರಾಜಪುತ್ರನನ್ನು ಪಟ್ಟದಲ್ಲಿ ಕೂರಿಸಲು ಅನೇಕ ಯುದ್ಧಗಳನ್ನು ಮಾಡಬೇಕಾಯಿತು. ಸಂಸ್ಕೃತ ಕವಿ ಹಾಗೂ ದಂಡನಾಯಕ ಶ್ರೀವಿಜಯ, 'ನಳಚಂಪು'ವನ್ನು ಬರೆದ ತ್ರಿವಿಕ್ರಮ ಗೋವಿಂದನ ಆಸ್ಥಾನದಲ್ಲಿ ಇದ್ದವರು.

ಮೂರನೇಯ ಇಂದ್ರನ ಇಟಗಿ (ರಾಣೆಬೆನ್ನೂರು ತಾ॥) ಶಾಸನದಲ್ಲಿ (916) ಧೋರ ಎಂಬಾತನು ಬನವಾಸಿಯ ಅಧಿಕಾರಿ ಎಂದೂ ಹಿರೇಮಾಗನೂರು ಶಾಸನದಲ್ಲಿ (ರಾ.ಬೆನ್ನೂರು ತಾ॥) ಬಂಕೆಯನು (918) ಬನವಾಸಿಯ ಆಡಳಿತಾಧಿಕಾರಿಯೆಂದೂ ಹೇಳಿದೆ. ಹತ್ತಿಮತ್ತೂರ ಐವತ್ತೊಕ್ಕಲ (ಗ್ರಾಮಸಭೆ) ಉಲ್ಲೇಖ 916-17 ರ ಶಾಸನದಲ್ಲಿದೆ. ಲಕ್ಷ್ಮೇಶ್ವರದ 917ರ ಶಾಸನದಲ್ಲಿ ಪುಲಿಗೆರೆ-300 ಪ್ರದೇಶ ಹಾಗೂ ನಾಡಗೌಡ ಚಾವುಂಡನಾಯಕನ ಉಲ್ಲೇಖಗಳಿವೆ. ದಂಡಾಪುರದ (ನರಗುಂದ) 920ರ ಶಾಸನದಲ್ಲಿ ಧೋರ ಎಂಬ ಅಧಿಕಾರಿ ಅಲ್ಲಿನ ಪೆರ್ಗೆರೆ (ಹಿರಿಯ ಕೆರೆ)ಯ ದುರಸ್ತಿಗೆ ವ್ಯವಸ್ಥೆ ಮಾಡಿದ ಉಲ್ಲೇಖವಿದೆ. ಇಟ್ಟಿಗೆ -30, ಕುಡುವಣ್ಣಿಗಂಡ-70 ಕ್ಕೆ ಆಯಿಚಣ್ಣ ನಾಡಗಾವುಂಡನಾಗಿದ್ದ ಎಂದು ಮೇಲೆ ಹೇಳಿದ ಇಟಗಿ ಶಾಸನದಲ್ಲಿ ಹೇಳಿದ್ದು 916ರ ಅಸುಂಡಿ ಶಾಸನದಲ್ಲೂ ಇವರದೇ ಹೆಸರುಗಳಿವೆ.

ಇಂದ್ರನ ಮಗ ನಾಲ್ಕನೇಯ ಅಮೋಘವರ್ಷನು ಕೇವಲ ಒಂದು ವರ್ಷ (929) ಆಳಿ, ಮುಂದೆ ಇಂದ್ರನ ಇನ್ನೊಬ್ಬ ಮಗ ನಾಲ್ಕನೇಯ ಗೋವಿಂದನು ಅಣ್ಣನನ್ನು ಪಕ್ಕಕ್ಕೆ ಸರಿಸಿ ಪಟ್ಟವೇರಿದನು (920). ಈತನು ದುರ್ಬಲ ಅರಸನಾಗಿದ್ದು ವೆಂಗಿ ಚಾಳುಕ್ಯರು ಇವನನ್ನು ಸೋಲಿಸಿದರಲ್ಲದೆ ಕನೋಜದ ಮೇಲೆ ರಾಷ್ಟ್ರಕೂಟರಿಗಿದ್ದ ಹಿಡಿತವೂ ತಪ್ಪಿಹೋಯಿತು. ನಾಲ್ಕನೇಯ ಗೋವಿಂದನ ಕಾಲದಲ್ಲಿ ಕೌಜಗೇರಿಯ ಗೌಡನಾದ ಬಳ್ಳಜ್ಜನು ಕವುಜಗೇರಿ, ಬೆಳವಣಿಗೆ ಹಾಗೂ ಯಾವಗಲ್‌ಗಳಲ್ಲಿ ದೇವಾಲಯ ಹಾಗೂ ಮಠ (ವಿದ್ಯಾರ್ಥಿಗಳಿಗೆ ಛತ್ರ) ಗಳನ್ನು ಕಟ್ಟಿಸಿದ ಉಲ್ಲೇಖವಿದೆ. ಮೂರನೇಯ ಇಂದ್ರನ ತಮ್ಮನಾದ ಮೂರನೇಯ ಅಮೋಘವರ್ಷ ಬದ್ದಗದೇವನು ಇವನನ್ನು ಪದಚ್ಯುತಗೊಳಿಸಿ 936 ರಲ್ಲಿ ಪಟ್ಟವೇರಿದನು. ಗೋವಿಂದನ ಕಳಸ ಶಾಸನ (930) ದಲ್ಲಿ ಈ ಊರನ್ನು ಕಾಡಿಯೂರು ಎಂದು ಕರೆದಿದ್ದು ಗೊಜ್ಜಿಗದೇವ ಎಂದು ಚಕ್ರವರ್ತಿಯನ್ನು ಉಲ್ಲೇಖಿಸಿದೆ. ಕಾಡಿಯೂರು ಅಗ್ರಹಾರವನ್ನು ಸ್ಥಾಪಿಸಿ 200 ಬ್ರಾಹ್ಮಣರನ್ನು ನೆಲೆ ನಿಲ್ಲಿಸಿದ ವಿಚಾರ ಅದರಲ್ಲಿದೆ. ಈ ಊರಲ್ಲಿ ಕೊಂಡಗೆರೆ ಎಂಬ ತಟಾಕವೂ ಕಲಿದೇವಸ್ವಾಮಿಯ ದೇವಾಲಯವೂ ಇದ್ದುದು ತಿಳಿಯುತ್ತದೆ. ಅರಳಿಕಟ್ಟೆ (ಹಿ.ಕೆರೂರು ತಾ॥) ಶಾಸನದಲ್ಲಿ ಮಾಟೂರ ವಂಶದ ಮಾಚಿಯರಸ ಎಂಬ ಮಾಂಡಳಿಕನ ಉಲ್ಲೇಖವಿದೆ (931). ತಂಬೂರು (ಕಲಘಟಗಿ ತಾ॥) ಶಾಸನದಲ್ಲಿ ಪಲಸಿಗೆ-12,000ವನ್ನು ಕಣಹ ಮಹಾರಾಜನು ಆಳುತ್ತಿರುವುದಾಗಿ ಹೇಳಿದ್ದು ತಮ್ಮಬೂರ (ತಂಬೂರ) ಅಣ್ಣಿಗ ಎಂಬ ವೀರನ ಮರಣದ ಉಲ್ಲೇಖವಿದೆ.

ಮೂರನೇಯ ಅಮೋಘವರ್ಷನು ಪಟ್ಟಕ್ಕೆ ಬರುವಾಗ ಸಾಕಷ್ಟು ವೃದ್ಧನಾಗಿದ್ದು ಆಡಳಿತವನ್ನೆಲ್ಲ ಯುವರಾಜ ಮೂರನೇಯ ಕೃಷ್ಣ (ಕನ್ನರ, ಕಂಧಾರ) ನೋಡಿಕೊಳ್ಳುತ್ತಿದ್ದನು. ಈ ವಂಶದ ಪ್ರತಾಪಶಾಲಿಯಾದ ಅರಸರಲ್ಲಿ ಇವನೇ ಕೊನೆಯವನಾಗಿದ್ದು (939-67), ಬಂಡೆದ್ದ ಗಂಗ ಮೂರನೇಯ ರಾಜಮಲ್ಲನನ್ನು ಈತನು ಕೊಂದನಲ್ಲದೆ ಗೂರ್ಜರ ಪ್ರತೀಹಾರರ ರಾಜ್ಯದ ಮೇಲೆ ದಂಡೆತ್ತಿ ನಡೆದು ಚಿತ್ರಕೂಟ, ಕಲಿಂಜಾರಗಳನ್ನೂ ಗೆದ್ದು, ತಮ್ಮ ಸಂಬಂಧಿಗಳಾದ ತ್ರಿಪುರಿಯ ಚೇದಿ (ಹೈಹಯ)ರನ್ನೂ ಸೋಲಿಸಿದನು. (ವಾಸ್ತವವಾಗಿ ಈತನ ತಂದೆ ಚೇದಿ ರಾಜಕುಮಾರಿಯನ್ನು ವರಿಸಿ ತ್ರಿಪುರಿಯಲ್ಲಿ ಆಶ್ರಯ ಪಡೆದು ಚೇದಿಗಳ ನೆರವಿನಿಂದಲೇ ಪಟ್ಟಗಳಿಸಿದ್ದರಿಂದ ಕನ್ನರನ ಈ ಕ್ರಮ ಅವನ ವಂಶಕ್ಕೆ ಮುಂದೆ ಘಾತಕವಾಗಿ ಪರಿಣಮಿಸಿತು). ಪದಚ್ಯುತನಾಗಿದ್ದ ನಾಲ್ಕನೇಯ ಗೋವಿಂದನಿಗೆ ಆಶ್ರಯ ನೀಡಿದ್ದ ಬಾಣ, ವೈಡಂಬರರನ್ನು ಅನಂತರ ಸೋಲಿಸಿ, ಮುಂದೆ ಚೋಳರ ಮೇಲೆ ಸಾಗಿ ಕಾಂಚಿ, ತಂಜಾವೂರುಗಳನ್ನೂ ಇಡೀ ತೊಂಡೈಮಂಡಲ ಪ್ರದೇಶವನ್ನೂ ಗೆದ್ದುಕೊಂಡು ತನ್ನ ವಶವಿರಿಸಿಕೊಂಡನು. ಗಂಗರ ನೆರವಿನಿಂದ ತಕ್ಕೋಳಂ (ಆರ್ಕೋಣಂ ಬಳಿ) ಚೋಳರನ್ನು ಎದುರಿಸಲು ಚೋಳ ರಾಜಾದಿತ್ಯನು ಹತನಾದನು. ತನ್ನ ಸೋದರಿಯ ಪತಿಯಾದ ಗಂಗ ಬೂತುಗನ ನೆರವಿಗಾಗಿ ಅವನಿಗೆ ಬನವಾಸಿ, ಪುಲಿಗೆರೆ, ಬೆಳವಲ ಮುಂತಾದ ಪ್ರಾಂತಗಳ ಆಡಳಿತವನ್ನು ಕನ್ನರನು ನೀಡಿದನು. ಇದಲ್ಲದೆ ಪಾಂಡ್ಯ, ಕೇರಳರನ್ನೂ ಸೋಲಿಸಿ ಸಿಂಹಳದ ಅರಸನಿಂದಲೂ ಕಪ್ಪ ಸಂಗ್ರಹಿಸಿ ರಾಮೇಶ್ವರದಲ್ಲಿ ಒಂದು ವಿಜಯಸ್ತಂಭವನ್ನು ಸ್ಥಾಪಿಸಿದನು.

ಉತ್ತರದಲ್ಲಿ ಚಾಂದೇಲರು ಕಲಂಜಾರ, ಚಿತ್ರಕೂಟಗಳನ್ನು ಗೆಲ್ಲಲು ಗಂಗ ರಾಜಪುತ್ರ ಮಾರಸಿಂಹನ ಕೈಯಲ್ಲಿ ಕನ್ನರನು ದಂಡನ್ನು ಕಳುಹಿಸಿ ಗೂರ್ಜರ ಪ್ರತೀಹಾರರನ್ನೂ ಪರಮಾರರನ್ನೂ ಸೋಲಿಸಿ, ವಿಜಯದ ನೆನಪಿಗಾಗಿ ಕಾಲ್ಪಿಯಲ್ಲಿದ್ದ ಕಾಲಪ್ರಿಯನಾಥ ಎಂಬ ಶಿವನ ಬೃಹತ್ ಪ್ರತಿಮೆಯನ್ನು ತನ್ನ ಹೊಸ ರಾಜಧಾನಿ ನಾಂದೇಡ್ ಜಿಲ್ಲೆಯ ಕಂದಾರಪುರಕ್ಕೆ ತಂದನು. ಜಬ್ಬಲಪುರ ಬಳಿಯ ಜೂರಾದಲ್ಲಿ ಕೃಷ್ಣನ ಕನ್ನಡ ಶಾಸನವಿದೆ. ವೆಂಗಿಯಲ್ಲಿ ತನ್ನ ಬೆಂಬಲದಿಂದ ಧನವರ್ಮನು ಪಟ್ಟಕ್ಕೆ ಬರುವಂತೆ ನೆರವಾದನು (ವೆಂಗಿ ಚಾಳುಕ್ಯರು ತಂಜಾವೂರಿನ ಚೋಳರ ಜೊತೆ ರಕ್ತ ಸಂಬಂಧ ಬೆಳೆಸಿದ್ದರಿಂದ ಉಭಯರ ಮೈತ್ರಿ ಕನ್ನರನಿಗೆ ಘಾತಕವಾಗುವ ಸಂಭವವಿತ್ತು).

ಕನ್ನರನ ಬಹಳಷ್ಟು ಶಾಸನಗಳು ತಮಿಳುನಾಡಿನಲ್ಲಿ ಇದ್ದು ಈ ಪ್ರದೇಶದ (ಉತ್ತರ ತಮಿಳುನಾಡು) ಮೇಲೆ ಅವನ ಹಿಡಿತ ಕೊನೆವರೆಗೂ ಬಲವಾಗಿತ್ತು. ಈತನ ತುಪ್ಪದ ಕುರಹಟ್ಟಿಯ ಶಾಸನದಲ್ಲಿ ಬೆಳ್ವೊಲದಲ್ಲಿ ಆಳುತ್ತಿದ್ದ ಮಾಂಡಲಿಕ ಗಂಗ ಬೂತುಗನ ಕಾಲದಲ್ಲಿ ಅಚಯ್ಯ ಎಂಬಾತನು ಮಾಡಿಸಿದ ಅಚ್ಚೆಶ್ವರ ದೇವಾಲಯಕ್ಕೆ ಭೂಮಿ ಹಾಗೂ ದೇವಂಗೇರಿಯಲ್ಲಿ 24 ಮನೆ ಮುಂತಾದುವನ್ನು ದಾನಕೊಟ್ಟ ವಿವರವಿದ್ದು ಇದು 945 ರ ಶಾಸನವಾಗಿದೆ. ತೊಂಡಯ್ಯನು ಬೆಳ್ವೊಲ-30 ನಾಡಗೌಡನಾಗಿದ್ದು ಇತರ ಆರು ಗೌಡರ ಉಲ್ಲೇಖ ಶಾಸನದಲ್ಲಿದೆ. (ಎ.ಇಂ.14, ಪು.364-66). ಶಾಸನದಲ್ಲಿ ಊರ ಮೂಲಸ್ಥಾನ ದೇವರಿಗೆ ನಾಗಗಾವುಂಡನು ದಾನ ನೀಡಿದ ವಿವರವಿದೆ. ಗಂಗ ಬೂತುಗನ ಸತಿ ಪದ್ಮಬ್ಬರಸಿ ನರೇಗಲ್‌ನಲ್ಲಿ ಕಟ್ಟಿದ ಬಸದಿಗೆ ಮಾರಸಿಂಗಯ್ಯ ಛತ್ರವೊಂದನ್ನು ನಡೆಸಲು ದಾನ ನೀಡಿದ್ದಾನೆ (950). ಸೊರಟೂರಿನ ದೇವಾಲಯ ಒಂದರಲ್ಲಿ ಇರುವ ಮಠದಲ್ಲಿ ವಿದ್ಯಾರ್ಥಿಗಳ ಪೋಷಣೆಗಾಗಿ ಪೆರ್ಗಡೆ ಆಚಪ್ಪಯ್ಯ ಹಾಗೂ ಗೌಡ ಸಣ್ಣಕಟ್ಟೆಯಮ್ಮ ದಾನ ನೀಡಿದ್ದಾರೆ (951). ದೇವೀ ಹೊಸೂರಿನ 961 ರ ಶಾಸನವು ಆ ಊರ ಅಗ್ರಹಾರ ಹಾಗೂ ಬನವಾಸಿ ನಾಡನ್ನು ಗರ್ವಿಂದರನು ಆಳುತ್ತಿದ್ದನೆಂಬ ಸಂಗತಿಯನ್ನು ತಿಳಿಸುತ್ತದೆ. ಮೂರನೇಯ ಕೃಷ್ಣ (ಕನ್ನರ)ನ ನಂತರ ಅವನ ತಮ್ಮ ಖೊಟ್ಟಿಗನು (967-72) ಪಟ್ಟವೇರಿದನು. ಈತನ ಕಾಲದಲ್ಲಿ ರಾಷ್ಟ್ರಕೂಟರು ಶಕ್ತಿಗುಂದಿದರು. ಪರಮಾರರು ಮಳಖೇಡವನ್ನು ಮುತ್ತಿ ಸುಟ್ಟರು. ಆಗ ಖೊಟ್ಟಿಗನು ಹತನಾದನು (972). ಅವನ ನಂತರ ನಾಲ್ಕನೇಯ ಕೃಷ್ಣ (ಕನ್ನರ) ಎಂಬ ಅವನ ಮಗ ಕೆಲಕಾಲ ಆಳಿದ (972) ಸಂಗತಿ ಹರಿಶೀ ಶಾಸನದಿಂದ ತಿಳಿಯುತ್ತದೆ. ಮುಂದೆ ಕೃಷ್ಣನ ಇನ್ನೊಬ್ಬ ತಮ್ಮ ಕರ್ಕ (972-73) ಕೆಲಕಾಲ ಆಳಿದ. ಆದರೆ ರಾಷ್ಟ್ರಕೂಟಸತ್ತೆ ದುರ್ಬಲವಾಗಿ ಚಾಳುಕ್ಯರು ಮತ್ತೆ ಸಾಮ್ರಾಜ್ಯವನ್ನು ಕಸಿದರು. ಚಾಳುಕ್ಯ ಇಮ್ಮಡಿ ತೈಲನು ಕರ್ಕನನ್ನು ಸೋಲಿಸಿದನು. ಈತನು ತರ್ದವಾಡಿ (ವಿಜಾಪುರ ಜಿ. ತಡ್ಡೇವಾಡಿ)ಯಲ್ಲಿ ರಾಷ್ಟ್ರಕೂಟರ ಮಾಂಡಲಿಕನಾಗಿದ್ದನು. ಅಲ್ಲಿಗೆ ರಾಷ್ಟ್ರಕೂಟರ ಸಾಮ್ರಾಜ್ಯ ಅಸ್ತಂಗತವಾಯಿತು. ಮುಂದೆ ಕಲ್ಯಾಣ ಚಾಳುಕ್ಯರ ಮಾಂಡಳಿಕರಾದ ಸೌಂದತ್ತಿಯ ರಟ್ಟರು ತಮ್ಮನ್ನು ರಾಷ್ಟ್ರಕೂಟರ ವಂಶಜರೆಂದು ಕರೆದುಕೊಂಡಿದ್ದಾರೆ.

ಗದಗ ತಾ॥ ನಾಗಾವಿಯ ರಾಮೇಶ್ವರ ದೇವಾಲಯಕ್ಕೆ ವಿದ್ಯಾದಾನ ಮತ್ತು ಸತ್ರವನ್ನು ನಡೆಸಲು 969 ರಲ್ಲಿ ಖೊಟ್ಟಿಗನು ದಾನ ನೀಡಿದ್ದಾನೆ. ರೋಣ ತಾ॥ನ ಸವಡಿಯಲ್ಲಿ ಗಂಗರ ವತ್ಸಯ್ಯನು ಶಿವಾಲಯವನ್ನು ಈತನ ಕಾಲದಲ್ಲಿ ಕಟ್ಟಿದನು (971). ಖೊಟ್ಟಿಗನ 970 ರ ಹುಲಗೂರು ಶಾಸನದಲ್ಲಿ ಗುತ್ತಿಯ ಗಂಗನು ಪುಲಿಗೆರೆ- 300 ನ್ನು ಆಳುತ್ತಿದ್ದು ಆತನ ಪತ್ನಿ ಅಂಕಬ್ಬರಸಿ ಪುಲ್ಲಂಗೂರಬ್ಬೆಗೆ ಭೂದಾನ ಮಾಡಿದ್ದಾಳೆ. ('ಪುಲ್ಲಂಗೂರು' ಹುಲಗೂರಿನ ಪೂರ್ವ ರೂಪವಿರಬೇಕು). ಈತನದೇ (ಕಕ್ಕಲ) ಗುಂಡೂರು ಶಾಸನ (ಶಿಗ್ಗಾಂವಿ ತಾ॥) ದಲ್ಲಿ ಆ ಊರ ಮಹಾದೇವರಿಗೆ ದಾನ ನೀಡಿದ ಉಲ್ಲೇಖವಿದೆ 'ಕುಂದವೂರು' ಎಂದು ಬೇರೊಂದು (ಗುಡ್ಡದ ಚನ್ನಾಪುರ) ಶಾಸನದಲ್ಲಿ ಉಲ್ಲೇಖಿತವಾದ ಹೆಸರು ಗುಂಡೂರಿನದೇ ಇರಬಹುದೆನಿಸುತ್ತದೆ. ಈತನದೇ ಕೋಳಿವಾಡ ಶಾಸನದಲ್ಲಿ ಗಂಗಮಾರಸಿಂಹ (ಬೂತುಗನ ಮಗ) ಉಲ್ಲೇಖವಿದೆ ('ಸತ್ಯವಾಕ್ಯ ಕೊಂಗುಣಿ ವರ್ಮ ಮಾರಸಿಂಹ'). ಈತ ಬನವಾಸಿ ಬೆಳ್ವೊಲ, ಪುಲಿಗೆರೆಗಳಿಗೆ ತನ್ನ ತಂದೆ ಬೂತುಗನ ನಂತರ ಉತ್ತರಾಧಿಕಾರಿಯಾದ. ಈತನ ಕೈಕೆಳಗೆ ಸೆಬ್ಬಿ-30 (ಛಬ್ಬಿ) ಅನ್ನು ಆಳುತ್ತಿದ್ದ ಪಾಂಚಾಲನೆಂಬ ಅಧಿಕಾರಿಯ ವಿಚಾರ ಆದರಗುಂಚಿ ಶಾಸನದಲ್ಲಿದೆ. ಈ ಅಧಿಕಾರಿಯು ಆದರಗುಂಚಿಯ ಮಲ್ಲಿಗೇಶ್ವರನಿಗೆ ದಾನ ನೀಡಿದ್ದ (ಇಂ.ಆ್ಯ. 12, ಪು. 255-56).

ಗಂಗರಿಗೂ ರಾಷ್ಟ್ರಕೂಟರಿಗೂ ರಕ್ತಸಂಬಂಧವಿದ್ದು ಗಂಗ ಎರಡನೇಯ ಮಾರಸಿಂಹನು ರಾಷ್ಟ್ರಕೂಟ ವಂಶದ ತನ್ನ ಸೋದರಳಿಯ ನಾಲ್ಕನೇಯ ಇಂದ್ರನಿಗೆ ಬಂಕಾಪುರದಲ್ಲಿ ಪಟ್ಟಬಂಧ ನಡೆಸಿದನು. ಇದರ ಹಿಂದೆಯೇ ಅವನು ಸಲ್ಲೇಖನ ಮಾಡಿ ಬಂಕಾಪುರದಲ್ಲಿ ಅಸುನೀಗಿದನು (975). ಮುಂದೆ ಇಂದ್ರನೂ 982 ರಲ್ಲಿ ಸಲ್ಲೇಖನ ವ್ರತದಿಂದ ಅಸುನೀಗಿದನು.

ರಾಷ್ಟ್ರಕೂಟರ ಕಾಲದಲ್ಲಿ ಧಾರವಾಡ ಜಿಲ್ಲೆಯ ಪ್ರದೇಶದಲ್ಲಿ ಕುರ್ತಕೋಟಿ ಮುಂತಾದೆಡೆ ಅನೇಕ ಕೆರೆಗಳನ್ನು ಕಟ್ಟಿದ್ದು, ದಂಡಾಪುರ ಮುಂತಾದೆಡೆ ಕೆರೆ ವಿಸ್ತರಿಸಿದ್ದು, ದೇವಾಲಯ, ಬಸದಿಗಳ ನಿರ್ಮಾಣ, ವಿದ್ಯಾದಾನಕ್ಕೆ ಮಠಗಳ ಸ್ಥಾಪನೆ, ಕಾಡಿಯೂರೇ ಮುಂತಾದ ಅಗ್ರಹಾರಗಳ ಸ್ಥಾಪನೆ ಕಾಣಬರುತ್ತದೆ. ಪಟ್ಟೆಗಾರರು, ವ್ಯಾಪಾರಿಗಳು ಮುಂತಾದ ವೃತ್ತಿ ನಿರತರ ಶ್ರೇಣಿಗಳು ಅಸ್ತಿತ್ವದಲ್ಲಿದ್ದವು. 'ಹತ್ತಿಮತ್ತೂರ ಐವತ್ತು ಒಕ್ಕಲು' (916-17) ಎಂದಾಗ ಊರುಗಳಲ್ಲಿ ಗ್ರಾಮ ಸಭೆಗಳು ಕಾರ್ಯನಿರತವಾದುದು ಕಾಣಿಸುತ್ತದೆ. ಗದಗಿನ ತ್ರಿಕೂಟೇಶ್ವರ ಇವರದೇ ರಚನೆಯೆಂದು ಡಾ॥ ಎ. ಸುಂದರ ಅವರ ಅಭಿಪ್ರಾಯ. ಅಸುಂಡಿ, ಕೊಣ್ಣೂರು, ಬಂಕಾಪುರ, ನರೇಗಲ್, ಮುಳಗುಂದಗಳ ಬಸದಿಗಳು, ಸವಡಿ ಮುಂತಾದೆಡೆ ಉತ್ತಮ ದೇವಾಲಯಗಳು ಇದೇ ಕಾಲದಲ್ಲಿ ಆದುವು.

ಕುರ್ತಕೋಟಿಯಲ್ಲಿ ಮೂಲಸ್ಥಾನದೇವ (ಈಶ್ವರ) ಹಾಗೂ ಸೂರ್ಯ (ಆದಿತ್ಯ) ದೇವಾಲಯಗಳ ಉಲ್ಲೇಖವಿದೆ. ಮೇವುಂಡಿಯ ಕುಪ್ಪೇಶ್ವರ ಮತ್ತು ಕೊಯಗೇಶ್ವರ, ಘಾಳಿಪೂಜಿಯಲ್ಲಿ (ಬ್ಯಾಡಗಿ ತಾ॥) ಮಹಾದೇವ, ಕೌಜಗೇರಿ, ಬೆಳವಣಿಕಿ ಮುಂತಾದೆಡೆ ಆದ ದೇವಾಲಯಗಳ ವಿವರ ಶಾಸನಗಳಲ್ಲಿ ಇದೆ. ಇಂಥ ಚಟುವಟಿಕೆಗಳು ಬಾದಾಮಿಯ ಚಾಳುಕ್ಯರ ಕಾಲದಲ್ಲೂ ಆಗಿದ್ದರೂ ಆ ಬಗ್ಗೆ ವಿರಳವಾಗಿರುವ ಶಾಸನಗಳಿಂದಾಗಿ ಮಾಹಿತಿ ಸಿಗದು. ಗರುಡಧ್ವಜರೂ ವೈಷ್ಣವರೂ ಆದ ರಾಷ್ಟ್ರಕೂಟರ ಕಾಲದಲ್ಲಿ ವಿಷ್ಣುದೇವಾಲಯಗಳು ಇಲ್ಲದ್ದು ಅಚ್ಚರಿ. ಇವರ ಕಾಲದ ನರಗುಂದ ಬಳಿಯ ಆ ಊರ ಕಂತಮಗೆರೆಯ ದುರಸ್ತಿಗಾಗಿ ಊರ ಮಹಾಜನರು ಮಾಡಿಕೊಂಡ ವ್ಯವಸ್ಥೆ ಉಲ್ಲೇಖನೀಯ. ಊರಲ್ಲಿ ಬ್ರಾಹ್ಮಣರಲ್ಲಿ ಮದುವೆಯಾದರೆ ಮೂರು ನಾಣ್ಯ, ಉಪನಯನವಾದರೆ ಎರಡು ನಾಣ್ಯ, ಬ್ರಾಹ್ಮಣೇತರರಲ್ಲಿ ಮದುವೆಯಾದರೆ ಒಂದು ನಾಣ್ಯ ಹಾಗೂ ಅಪರಾಧಿಗಳಿಗೆ ಹಾಕಿದ ದಂಡದ ಹಣ ಇವನ್ನೆಲ್ಲ ಕೂಡಿಸಿ ಒಂದು ನಿಧಿಯನ್ನು ನಿರ್ಮಿಸಿ ಆ ನಿಧಿಯಿಂದ ಕಂತಮ ಗೆರೆಯ ದುರಸ್ತಿಗೆ ವ್ಯವಸ್ಥೆ ಮಾಡಿದ್ದು ಅಪೂರ್ವ ವಿಧಾನ. ಬಾದಾಮಿ ಚಾಳುಕ್ಯರಿಂದ ಆರಂಭವಾಗಿ ಮಳಖೇಡದ ರಾಷ್ಟ್ರಕೂಟರ ಚಿಂಚಿಲು (793), ಸೊರಟೂರು (833), ಗುಡಗೇರಿ (8ನೇ ಶತಮಾನ), ಬೆಲಹೋಡ (800), ಅಸೂಟಿ (920), ಹಳೇರಿತ್ತಿ (928) ಮುಂತಾದ ಅನೇಕ ಕಡೆ ಗೊಸಹಸ್ರದಾನ ಮಾಡಿದ ಗೋಸಾಸ ('ಮೇಟಿ') ಕಲ್ಲುಗಳಿದ್ದು ಇಂಥ ದಾನಸೂಚಿಸುವ ನೂರಾರು ಕಲ್ಲುಗಳು ಜಿಲ್ಲೆಯಲ್ಲಿ ಕಂಡು ಬರುತ್ತಿದ್ದು ಸಾವಿರಾರು ಗೋವುಗಳ ದಾನ ಮಾಡಿ ಪಶುಸಂಗೋಪನೆಗೂ ಪ್ರೋತ್ಸಾಹವಿತ್ತುದು ಕಾಣಬರುತ್ತದೆ.

## ಕಲ್ಯಾಣದ ಚಾಳುಕ್ಯರು

ಕಲ್ಯಾಣ ಚಾಳುಕ್ಯರ ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ನೂರಾರು ಸಿಕ್ಕಿದ್ದು ಅವರ ಆಡಳಿತ ಪರಿಣಾಮವನ್ನು ತಿಳಿಯಲು ವಿಪುಲ ಅವಕಾಶವಿದೆ. ಚಾಳುಕ್ಯ ಎರಡನೇಯ ತೈಲನು ರಾಷ್ಟ್ರಕೂಟ ಖೊಟ್ಟಿಗನನ್ನು ಪದಚ್ಯುತಗೊಳಿಸಿದ ನಂತರ ಮಳಖೇಡವನ್ನು 973 ರಲ್ಲಿ ಗೆದ್ದರೂ ಗಂಗವಂಶದ ಪಾಂಚಲದೇವ ಎಂಬ (ಹಿಂದೆ ರಾಷ್ಟ್ರಕೂಟರ ಕಾಲದಲ್ಲಿ ಗಂಗಮಾರಸಿಂಹನ ಮಾಂಡಳಿಕನಾಗಿ ಸೆಬ್ಬಿ -30 ಆಳುತ್ತಿದ್ದವನು) ತಾನು ಗಂಗವಂಶದ ಆಡಳಿತ ನಿರ್ವಹಿಸಿ ಚಾಳುಕ್ಯರ ವಿರುದ್ಧ ಪ್ರತಿಭಟಿಸಲು, ತೈಲನು ಅವನನ್ನು ಸೋಲಿಸಿದನು. ಅದೇ ರೀತಿ ರಾಷ್ಟ್ರಕೂಟ ಮೂರನೇಯ ಕೃಷ್ಣನ ಕಾಲದಲ್ಲಿ ಹತ್ತಿಕ್ಕಲ್ಪಟ್ಟ ಚೋಳ ವಂಶದ ಉತ್ತರಾಧಿಕಾರಿ ಉತ್ತಮನನ್ನು ಅವನ ದಂಡೆಯಾತ್ರೆಯ ವಿರುದ್ಧ ಸೆಣಸಿ ಸೋಲಿಸಿದನು. ಕೊಂಕಣದ ಶಿಲಾಹಾರರೂ ತನಗೆ ಕಪ್ಪ ಕೊಡುವಂತೆ ಮಾಡಿದನು. ಹಾಗೆಯೇ ನೊಳಂಬ ಏಕವಾಕ್ಯ ವೀರನೊಳಂಬನೂ ಅವನ ಮಾಂಡಲಿಕನಾದನು. ಮಧ್ಯ ಭಾರತದ ಪರಮಾರ ಮುಂಜನು ಮೇಲಿಂದ ಮೇಲೆ ಇವನ ರಾಜ್ಯದ ಮೇಲೆ ದಂಡೆತ್ತಿ ಬಂದು ಈತನನ್ನು ಸೋಲಿಸಿದರೂ ಮುಂದೆ ತೈಲನು ಮುಂಜನನ್ನು ಬಂಧಿಸಿ ಕೊಂದನು. ಈ ಯುದ್ಧದಲ್ಲಿ ದೇವಗಿರಿಯ ಮಾಂಡಲಿಕ ಸೇಉಣ (ಯಾದವ) ಎರಡನೇಯ ಭಿಲ್ಲಮ ಇವನಿಗೆ ನೆರವಾದನು. ಇದೇ ಕಾಲದಲ್ಲಿ ಚೋಳ ಒಂದನೇಯ ರಾಜರಾಜನು ಪ್ರಬಲಿಸಿ ಈತನ ರಾಜ್ಯದ ಮೇಲೆ ದಂಡೆತ್ತಿ ಬಂದು ಗಂಗವಾಡಿಯನ್ನು ಆಕ್ರಮಿಸಲು ಆರಂಭಿಸಿದನು. ಅಲ್ಲದೆ ಉತ್ತರದಲ್ಲಿ ರೊದ್ದದ (ಪೆನುಕೊಂಡ ಬಳಿ)ವರೆಗೂ ಬಂದನು. ಅವನನ್ನು ಸೋಲಿಸಿ 150 ಆನೆಗಳನ್ನು ತೈಲನು ಕಸಿದನು. ಈತನ ಚಿಕ್ಕೆರೂರು ಶಾಸನದಲ್ಲಿ (995) ಭಳರಿದೇವಿಯನ್ನು ಪಳ್ಳಿಗ ಎಂಬಾತನು ಪ್ರತಿಷ್ಠಾಪಿಸಿದ ವಿಚಾರವಿದೆ. ಭೀಮಯ್ಯ ಎಂಬಾತನು ಆಗ ಬನವಾಸೆನಾಡನ್ನು ಆಳುತ್ತಿದ್ದನೆಂದು ಹೇಳಿದೆ. ಕನ್ನಪ್ಪ ಎಂಬಾತನು 975 ರಲ್ಲಿ ಪುಲಿಗೆರೆಯಲ್ಲೂ 984 ರಲ್ಲಿ ಬನವಾಸಿಯಲ್ಲೂ ಆಳುತ್ತಿದ್ದು ಅವನ ತಮ್ಮನಾದ ಶೋಬನರಸನು ಬೆಳ್ವೊಲ-300 ಹಾಗೂ ಪುಲಿಗೆರೆ--300 ರಲ್ಲೂ (1980-81) ಆಳುತ್ತಿದ್ದರು. ಇವನ ನಂತರ ಕೇಶವಯ್ಯ ಈ ಪ್ರದೇಶದ ಅಧಿಕಾರಿಯಾದ. ಆಹವಮಲ್ಲ ಎಂಬುದು ತೈಲನ ಬಿರುದುಗಳಲ್ಲಿ ಒಂದು. ತೈಲನು ಅಸಮ ಸಾಹಸಿಯಾಗಿದ್ದು ರಾಷ್ಟ್ರಕೂಟರನ್ನು ಸೋಲಿಸಿ, ಆ ಸೋಲಿನ ನಂತರ ತನ್ನನ್ನು ಎದುರಿಸಿದ ಎಲ್ಲ ಮಾಂಡಳಿಕರನ್ನು ನೆರೆಯ ರಾಜರನ್ನೂ ಬಗ್ಗುಬಡಿದು, ಗುಜರಾತಿನವರೆಗೂ ದಂಡಯಾತ್ರೆ ನಡೆಸಿದನು.

ಕವಿ ರನ್ನನ ಆಶ್ರಯದಾತನಾದ ಸತ್ತಿಗ ಅಥವಾ ಸತ್ಯಾಶ್ರಯ (997-1006) ಈತನ ಉತ್ತರಾಧಿಕಾರಿಯಾಗಿದ್ದು ತನ್ನ ತಂದೆಯ ಕಾಲದಲ್ಲೇ ತನ್ನ ಪರಾಕ್ರಮವನ್ನು ಮೆರೆಸಿದ್ದನು. ಪರಮಾರರು ಚಾಳುಕ್ಯರು ಗೆದ್ದ ಪ್ರದೇಶವನ್ನು ಈತನ ಕಾಲದಲ್ಲಿ ಮತ್ತೆ ಪಡೆದರೂ ಉತ್ತರ ಕೊಂಕಣದ ಶಿಲಾಹಾರ ಅಪರಾಜಿತನನ್ನು ಈತನು ಸೋಲಿಸಿದನು. ಆದರೆ ಚೋಳ ರಾಜನು ಚಾಳುಕ್ಯರ ರಾಜ್ಯದ ಮೇಲೆ ದಾಳಿಮಾಡಿ ವಿಜಾಪುರ ಕೂಡಲಸಂಗಮದ ಬಳಿಯ ದೋಣೂರು (ದಣ್ಣೂರು) ಹಾಗೂ ಹುಬ್ಬಳ್ಳಿ ಬಳಿಯ ಉಣಕಲ್ (ಸು.1004)ನಲ್ಲಿ ಭಾರೀ ಕದನಗಳಾದವು. ಚೋಳ ರಾಜರಾಜನು ಗಂಗವಾಡಿಯನ್ನು ಪೂರ್ತಿ ಗೆದ್ದು ಕರ್ನಾಟಕದ ಹಾಗೂ ಆಂಧ್ರದ ಅನೇಕ ಪ್ರದೇಶಗಳನ್ನು ತನ್ನ ವಶಪಡಿಸಿಕೊಂಡರೂ ಸತ್ಯಾಶ್ರಯನು ಅವನನ್ನು ತನ್ನ ಗಡಿಯಾಚೆ ಅಟ್ಟಿದನು. ಚೋಳ ಯುವರಾಜ

ರಾಜೇಂದ್ರನನ್ನು ಸತ್ಯಾಶ್ರಯನು ಸೋಲಿಸಿದ್ದಾಗಿ ಹೊಟ್ಟೂರು ಶಾಸನ ಹೇಳಿದರೂ ಇಂಥ ಒಂದು ಯುದ್ಧದಲ್ಲಿ ಸತ್ಯಾಶ್ರಯನ ಸೋದರ ದಸವರ್ಮನು (ಯಶವರ್ಮ) ಮೃತನಾದನು. ಎಲೆಶಿರೂರಿನ 1006ರ ಶಾಸನವೊಂದರಲ್ಲಿ ಉಣಕಲ್ಲ ಕೋಟೆ ಕಾಳಗದಲ್ಲಿ ಕೇತಯ ಎಂಬ ರಾಜನ ಲೆಂಕನ ಮರಣದ ಉಲ್ಲೇಖವಿದೆ. ಮುಂಜನ ಕಾಲದಲ್ಲಿ ಕಳೆದುಕೊಂಡಿದ್ದ ಪ್ರದೇಶಗಳನ್ನು ಪರಮಾರರು ಈತನಿಂದ ಮತ್ತೆ ಗೆದ್ದುಕೊಂಡಂತಿದೆ. ಹಾಗೆಯೇ ಗುಜರಾತಿನಲ್ಲಿ ಆಳುತ್ತಿದ್ದ ಚೌಲುಕ್ಯ ಬಾಡಪನನ್ನು ಸೋಲಿಸಿ ಚೌಲುಕ್ಯ ಮೂಲರಾಜನು ಆ ಪ್ರದೇಶವನ್ನು ವಶಪಡಿಸಿಕೊಂಡನು. ಮಗಳಾದ ಮಹಾದೇವಿಯನ್ನು ಇರಿವ ನೊಳಂಬನಿಗೆ ಮದುವೆ ಮಾಡಿಸಿದನು. ವೆಂಗಿಯಲ್ಲಿ ತನ್ನ ಮಿತ್ರನಾದ ಗೊಗ್ಗಿರಾಜನಿಗೆ ಪಟ್ಟಕಟ್ಟಿದನು. ಸತ್ಯಾತ್ರಯನು ತನ್ನ ಸಾಹಸಭೀಮ, ಇರಿವಬೆಡಂಗ ಇವೆಲ್ಲ ಸತ್ಯಾಶ್ರಯನ ಬಿರುದುಗಳು. ಈತನ ಸೋದರ ದಸವರ್ಮನು ತನ್ನ ತಂದೆ ಹಾಗೂ ಬಹುಶಃ ತನ್ನ ಸೋದರನ ಕಾಲದಲ್ಲೂ ಮಾಂಡಳಿಕನಾಗಿ ಆಳುತ್ತಿದ್ದನೆಂದು ಕಾರ್ಜೋಳ (996) ಶಾಸನ ಹೇಳುತ್ತದೆ.

ಈತನ ನಂತರ ಈತನ ಸೋದರ ದಸವರ್ಮನ ಪುತ್ರ ಐದನೇಯ ವಿಕ್ರಮಾದಿತ್ಯನಿಗೆ ಪಟ್ಟವಾಯಿತು (1008). ದಾನಚಿಂತಾಮಣಿ ಅತ್ತಿಮಬ್ಬೆ ಚಾಳುಕ್ಯ ಸೇನಾನಿಯೊಬ್ಬನ ವಿಧವೆಯಾಗಿದ್ದು 1009 ರಲ್ಲಿ ಅವಳು ಲಕ್ಕುಂಡಿಯಲ್ಲಿ ಬ್ರಹ್ಮ ಜಿನಾಲಯವೆಂಬ ಭವ್ಯ ರಚನೆಯನ್ನು ಮಾಡಿದಳು. ವಿಕ್ರಮಾದಿತ್ಯನ ಸೋದರಿ ಅಕ್ಕಾದೇವಿ ಕಿಸುನಾಡು-70 (ಪಟ್ಟದಕಲ್ ಪ್ರದೇಶ)ವನ್ನು ಆಳುತ್ತಿದ್ದು ರೋಣ ತಾ॥ಸೂಡಿಯಲ್ಲಿ ಅಗ್ರಹಾರವೊಂದನ್ನು 1010ರಲ್ಲಿ ಸ್ಥಾಪಿಸಿದಳು. ವಿಕ್ರಮನ ನಂತರ ಆತನ ಸೋದರ ಅಯ್ಯಣ ಒಂದು ವರ್ಷ ಆಳಿದ (1015).ಅಯ್ಯಣನ ನಂತರ ಅವನ ಸೋದರ ಎರಡನೆಯ ಜಯಸಿಂಹನಿಗೆ ಪಟ್ಟವಾಯಿತು. (1015-43).

ಜಯಸಿಂಹನ ಕಾಲದಲ್ಲಿ ಚೋಳರು ಮಸ್ಕಿ (ರಾಯೂರು ಜಿ॥ಮಸಂಗಿ)ವರೆಗೆ ದಂಡೆತ್ತಿಬರಲು ಅವರನ್ನು ಈತನು ಹಿಂದಕ್ಕಟ್ಟಿದ. ಆದರೆ ಈತನ ರಾಜಧಾನಿಯಾಗಿದ್ದ ಮಳಖೇಡವನ್ನು ಚೋಳರು ನಾಶಪಡಿಸಲು ಏತಗಿರಿ (ಈಗಿನ ಯಾದಗಿರಿ) ಇವನ ರಾಜಧಾನಿಯಾಯಿತು (ಸು.1019ರಿಂದ 1133).ಮುಂದೆ ಆಂಧ್ರದಲ್ಲಿರುವ ಪೊಟ್ಟಲಕೆರೆ (ಪಟ್ಲಂಚೆರು) ಹಾಗೂ ಕೋಲ್ಲಿಪಾಕೆಗಳಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ. ವೆಂಗಿಯಲ್ಲಿ ಆಳುತ್ತಿದ್ದ ರಾಜೇಂದ್ರ ಚೋಳನ ಅಳಿಯ ರಾಜರಾಜ ಚಾಳುಕ್ಯನ ವಿರುದ್ಧ ಇವನು ಏಳನೇಯ ವಿಜಯಾದಿತ್ಯನಿಗೆ ಪಟ್ಟವೇರಲು ನೆರವಾದರೂ ಮುಂದೆ ರಾಜರಾಜನೇ ಮತ್ತೆ ಮೇಲ್ಮೆ ಪಡೆದ. ಬಂಡೆದ್ದ ಸೇಉಣ ಮೂರನೇಯ ಭಿಲ್ಲಮನನ್ನು ಜಯಸಿಂಹನು ಬಗ್ಗಿಸಿದನಲ್ಲದೆ ಪರಮಾರ ಭೋಜನು ಉತ್ತರ ಕೊಂಕಣವನ್ನು ಗೆಲ್ಲಲು ಅದನ್ನು ಮತ್ತೆ ವಶಪಡಿಸಿಕೊಂಡನು. ಸುಗ್ಗಲದೇವಿ ಇವನ ಸತಿಯಾಗಿದ್ದು ಆಕೆ ದೇವರ ದಾಸಿಮಯ್ಯನಿಂದ ಶೈವದೀಕ್ಷೆ ಪಡೆದಳೆಂದು ತಿಳಿಯುತ್ತದೆ. ಸಂಸ್ಕೃತ ಕವಿ ವಾದಿರಾಜ ('ಯಶೋಧರ ಚರಿತಂ' ಕರ್ತೃ), ವಸುಭಾಗನ 'ಪಂಚತಂತ್ರ' ಭಾಷಾಂತರಿಸಿದ ದುರ್ಗಸಿಂಹ ಹಾಗೂ 'ಲೋಕೋಪಕಾರ'ದ ಕರ್ತೃ ಎರಡನೇಯ ಚಾವುಂಡರಾಯ ಇವನ ಆಸ್ಥಾನಿಕರು. ಪರಮಾರ ಮತ್ತು ಚೋಳರ ವಿರುದ್ಧ ಸತತ ಹೋರಾಟ ಜಯಸಿಂಹನ ಕಾಲದಲ್ಲಿ ನಡೆಯಿತು. 1002ರ ಒಂದು ಶಾಸನದಲ್ಲಿ ಅಗ್ರಹಾರವಾಗಿದ್ದ 'ಕಳ್‌ದುಗು' (ಗದಗು)ವನ್ನು ದೇಸಿಂಗ (ಜಯಸಿಂಹ)ನು ಮುತ್ತಿದನೆಂದಿದ್ದು ಬಹುಶಃ ಇದು ಚೋಳರ ದಂಡಯಾತ್ರೆಗೆ ಪ್ರತಿಭಟನೆ ಇರಬಹುದು.

ಶೌಚನಾಯಕನೆಂಬ ಅಧಿಕಾರಿ ಇವರ ಕಾಲದಲ್ಲಿ ಅಸುಂಡಿಯ ಸೋಮೇಶ್ವರ ದೇವಾಲಯಕ್ಕೆ ದಾನನೀಡಿದ ಉಲ್ಲೇಖವಿದೆ (1026).ಲಕ್ಕುಂಡಿ ಶಾಸನದಲ್ಲಿ ಬನವಾಸಿಯನ್ನು ಕುಂದಮರಸನು ಆಳುತ್ತಿದ್ದುದಾಗಿ ಹೇಳಿದೆ (1030).ಹೊಸೂರಲ್ಲಿ (ಗದಗ ತಾ॥) ಆಯಿಚಗಾವುಂಡನೆಂಬ ಅಧಿಕಾರಿಯು ಬಸದಿಯೊಂದನ್ನು ಕಟ್ಟಿಸಿದನು. (ಈಗ ಅದು ಶಿವಾಲಯವಾದಂತೆ ಇದೆ). ಗುಂಡೇನಹಳ್ಳಿ (ಬ್ಯಾಡಗಿ ತಾ॥)ಯಲ್ಲಿ ಅಂಗಿಯಬ್ಬೆ ಎಂಬಾಕೆ ಮಲ್ಲಿಕಾರ್ಜುನ ದೇವಾಲಯ ಕಟ್ಟಿಸಿದಳು (1034).ಗದಗಿನ ತ್ರೈಪುರುಷ (ತ್ರಿಕೋಟೇಶ್ವರ) ದೇವಾಲಯಕ್ಕೆ ವ್ಯಾಪಾರಿಯೊಬ್ಬನು ಜಯಸಿಂಹನ ಕಾಲದಲ್ಲಿ ದಾನ ನೀಡಿದ ಶಾಸನವಿದೆ (1037). ಬೆಳಗಲಿ ಶಾಸನದಲ್ಲಿ ಕದಂಬ ಅರಸನೊಬ್ಬನು (ಬಹುಶಃ ಗೋವೆಯ ಮಾಂಡಲಿಕ) ಸಬ್ಬಿನಾಡಿನಲ್ಲಿ ಕೆರೆಯೊಂದನ್ನು ಕಟ್ಟಿಸಿದ ಉಲ್ಲೇಖವಿದೆ. ಈತನ ಕಾಲದಲ್ಲಿ ಬೆಳ್ವೊಲ, ಪುಲಿಗೆರೆಗಳನ್ನು ವಾವಣರಸನು ನೋಡಿಕೊಳ್ಳುತ್ತಿದ್ದನು. ತೊರಗೆಲೆ (ತೊರಗಲ್)ಯಿಂದ ಆಳುತ್ತಿದ್ದ ಚಟ್ಟನೆಂಬ ಮಾಂಡಳಿಕನು ಲೋಕಾಪುರ-12ಹೊಳಲುಗುಂದ-30,ದೊಡ್ಡವಾಡ, ನವಿಲುಗುಂದ- 40, ಕೊಳನೂರು (ಕೊಣ್ಣೂರು) -40ಇವುಗಳನ್ನು ಆಳುತ್ತಿದ್ದು ಈತನು ಬಂಡೇಳಲು ವಾವಣರಸನು ಆತನನ್ನು ಹತ್ತಿಕ್ಕಿದನು. ಜಯಸಿಂಹನ ಇನ್ನೋರ್ವ ಸತಿ ದೇವಲೆ ನೊಳಂಬವಂಶದವಳು. ಈತನ ಇನ್ನೊಬ್ಬ ರಾಣಿ ಲಕ್ಷ್ಮೀದೇವಿ ಬನವಾಸಿ-12,000 ಯನ್ನು ಆಳುತ್ತಿದ್ದಳು (1030). ಇದಕ್ಕೂ ಮೊದಲು ಕುಂದಮರಸನು ಬನವಾಸಿಯ ಆಡಳಿತ ನಿರ್ವಹಿಸುತ್ತಿದ್ದ. ಕದಂಬರ ಮಯೂರವರ್ಮ ಹಾನಗಲ್ 500ರ ಆಡಳಿತ ನಿರ್ವಹಿಸುತ್ತಿದ್ದ. ಮಯೂರವರ್ಮನು ಅಕ್ಕಾದೇವಿಯ ಪತಿ. ಈಕೆ ಕಿಸುಕಾಡನ್ನು ಆಳುತ್ತಿದ್ದು ಗೋಕಾವೆಯ ಅಧಿಕಾರಿಯೊಬ್ಬನ ಬಂಡಾಯವನ್ನು ಮುರಿದು 'ರಣಭೈರವಿ' ಎಂದು ಖ್ಯಾತಳಾದಳು.

ಜಯಸಿಂಹ ಪುತ್ರ ಒಂದನೇಯ ಸೋಮೇಶ್ವರನು (1043-1068) ಗಣ್ಯ ಅರಸನಾಗಿದ್ದು ಕಲ್ಯಾಣವು ಇವನ ಕಾಲದಲ್ಲಿ ರಾಜಧಾನಿಯಾಯಿತು. ಚೋಳರ ಜೊತೆ ಆಂಧ್ರದ ಅಮರಾವತಿಯಲ್ಲಿ ನಡೆದ ಕಾಳಗದಲ್ಲಿ ಈತನು ಸೋತು ಚೋಳರಾಜಾಧಿರಾಜನು ಕಲ್ಯಾಣದವರೆಗೆ ಬಂದು ರಾಜಧಾನಿಯನ್ನು ಸೂರೆಮಾಡಿದನು. ನಂತರ ಚೋಳರನ್ನು ಬೆನ್ನಟ್ಟಿ ಇವನು ಕಾಂಚಿಯನ್ನು ಗೆದ್ದನು. ಆದರೆ ಚೋಳರು ಮತ್ತೆ ಚಾಳುಕ್ಯರಾಜ್ಯದ ಮೇಲೆ ಸಾಗಿಬರಲು ಕೊಪ್ಪಂ (ಕೊಪ್ಪರ)ನಲ್ಲಿ ಚೋಳ ರಾಜಾಧಿರಾಜನು ಹತನಾದನು (1054). ಇದೇ ಯುದ್ಧದಲ್ಲಿ ಸೋಮೇಶ್ವರನ ಸೋದರ ಜಯಸಿಂಹನೂ ತೀರಿಕೊಂಡನು. ಈ ವಿಜಯದ ಸ್ಮಾರಕವಾಗಿ ಅಣ್ಣಿಗೇರಿಯ ಅಮೃತೇಶ್ವರ ದೇವಾಲಯವನ್ನು ಸೋಮೇಶ್ವರನು ಕಟ್ಟಿಸಿದನು. ಚೋಳ ಎರಡನೇಯ ರಾಜೇಂದ್ರನು ಮತ್ತೆ ದಾಳಿಮಾಡಿದಾಗ ತುಂಗಭದ್ರಾ ತೀರದಲ್ಲಿ ಆತನನ್ನು ಮತ್ತೆ ಸೋಲಿಸಲಾಯಿತು. ವೆಂಗಿಯಲ್ಲಿ ಚೋಳರ ಸಂಬಂಧಿಕ ರಾಜೇಂದ್ರನ ವಿರುದ್ಧ ಶಕ್ತಿವರ್ಮನಿಗೆ ಈತನು ಪಟ್ಟವನ್ನು ಗಳಿಸಿಕೊಟ್ಟರೂ ಶಕ್ತಿವರ್ಮನು ಮುಂದೆ ಪದಚ್ಯುತನಾದ. ಚೋಳ ಪಟ್ಟವನ್ನೇರಿದ ಚೋಳ ವೀರರಾಜೇಂದ್ರನು ಸೋಮೇಶ್ವರನನ್ನು ಐದುಬಾರಿ ಸೋಲಿಸಿದ್ದಾಗಿ ಹೇಳಿದ್ದಾನೆ. ಆದರೆ 1064 ರಲ್ಲಿ ಕೂಡಲಸಂಗಮದಲ್ಲಿ ಆತನಿಗೆ ಉಲ್ಲೇಖನೀಯ ವಿಜಯವಾಯಿತು. ಆದರೆ ರಾಜಪುತ್ರ ವಿಕ್ರಮನು 1067-68 ರಲ್ಲಿ ಚೋಳ ರಾಜಧಾನಿಯವರೆಗೂ ಸಾಗಿದನು. "ಚೋಳರು ಚಾಳುಕ್ಯರನ್ನು ಹಲವು ಬಾರಿ ಸೋಲಿಸಿದರೂ ಚಾಳುಕ್ಯರಾಜ್ಯ ಯಾವುದೇ ಭಾಗವನ್ನು ಗೆಲ್ಲುವುದು ಚೋಳರಿಗೆ ಸಾಧ್ಯವಾಗಲಿಲ್ಲ" ಎಂದು ಈ ಬಗ್ಗೆ ಡಾ|| ಗಂಗುಲಿ ಹೇಳಿದ್ದಾರೆ.

ಮಧ್ಯ ಭಾರತದ ಪರಮಾರ ಭೋಜನನ್ನು ಸೋಲಿಸಿ ಅವರ ನಗರಗಳಾದ ಮಂಡಪ (ಮಾಂಡು) ಮತ್ತು ಉಜ್ಜೈನಿಗಳನ್ನು ಸೋಮೇಶ್ವರ ಸೂರೆಮಾಡಿದ. ಚಕ್ರಕೋಟದಲ್ಲಿ ಆಳುತ್ತಿದ್ದ ನಾಗರನ್ನು ತನ್ನ ಸೇನಾನಿ ಕಾಕತೀಯ ವಂಶದ ಪ್ರೋಲನನ್ನು ಕಳುಹಿಸಿ ಸೋಲಿಸಿದ. ಬಂಡೆದ್ದ ಸೇಉಣ ಮೂರನೇಯ ಭಿಲ್ಲಮನನ್ನೂ ಹತ್ತಿಕ್ಕಿದ. ಗುಣಪಡಿಸಲಾಗದ ರೋಗವೊಂದರಿಂದ ನರಳುತ್ತಿದ್ದ ಸೋಮೇಶ್ವರನು 1058 ರಲ್ಲಿ ಕುರುವತ್ತಿಯಲ್ಲಿ ತುಂಗಭದ್ರಾ ನದಿಯಲ್ಲಿ ಜಲಸಮಾಧಿಯಿಂದ ಪ್ರಾಣತ್ಯಾಗಮಾಡಿದ. ಬಾಚಲದೇವಿ, ಹೊನ್ನವಾಡ ಅಗ್ರಹಾರ ಆಳುತ್ತಿದ್ದ ಕೇತಲದೇವಿ, ಹೊಯ್ಸಳ ವಂಶದ ಹೊಯ್ಸಳದೇವಿ, ಬನವಾಸಿ-12,000 ಕಿಲುಕಾಲ ಆಳುತ್ತಿದ್ದ ಮೈಳಲದೇವಿ ಅವನ ಗಣ್ಯ ರಾಣಿಯರು. ಬೆಳವಟ್ಟಿ ಶಾಸನದಲ್ಲಿ ರಾಣಿ ಅಚ್ಚಲದೇವಿಯು ಊರ ಆಡಳಿತ ನೋಡಿಕೊಳ್ಳುತ್ತಿದ್ದಳೆಂದು ಹೇಳಿದೆ.

ಸೋಮೇಶ್ವರನ ಕಾಲದಲ್ಲಿ ಮುಗುಂದ-30ಕ್ಕೆ ಒಬ್ಬ ನಾಡಗೌಡ (ನಾಳ್ಗಾವುಂಡ)ನಿದ್ದು ಅವನಿಂದ ಆ ಊರ (ಮುಗದ) ಬಸದಿಯ ಜೀರ್ಣೋದ್ಧಾರ ಹಾಗೂ ಅಲ್ಲಿಯೇ ಒಂದು ನಾಟಕಶಾಲೆಯ ರಚನೆಯಾಯಿತು (1045). ಸಿಂದವಂಶದ ಮಾಂಡಳಿಕ (ಯಲಬುರ್ಗಿ) ಕಂಚರಸನು ಮುಳಗುಂದದ ಜಿನಾಲಯಕ್ಕೆ ದಾನ ನೀಡಿದನು (1053). ನಾಗದೇವನೆಂಬ ಅಧಿಕಾರಿ ಸೂಡಿಯಲ್ಲಿ ನಾಗೇಶ್ವರ ದೇವಾಲಯ ರಚಿಸಿದನು (1050). ಸಾಸರವಾಡದಲ್ಲಿ ಮಸಣಯ ನಾಯಕ ಉತ್ತರೇಶ್ವರ ದೇವಾಲಯ ರಚಿಸಿದನು (1050). ಕಿಸುಕಾಡು-70, ತೊರಗಲೆ- 60 ಮಾಸವಾಡಿ- 140ನ್ನು ಆಳುತ್ತಿದ್ದ ರಾಜಪುತ್ರಿ ಅಕ್ಕಾದೇವಿ ಬಹುಶಃ ಸೂಡಿಯಲ್ಲಿ ಅವಳೇ ಕಟ್ಟಿಸಿದ ಅಕ್ಕೇಶ್ವರ ದೇವಾಲಯಕ್ಕೆ ಭೂದಾನ ಮಾಡಿದಳು (1054). ಚಿಲ್ಲೂರಬಡ್ನಿಯ (ಶಿಗ್ಗಾಂವಿ ತಾ||) ಊರೊಡೆಯ ನಾಯಮ್ಮನು ಆ ಊರಲ್ಲಿ ರಾಮೇಶ್ವರ ಮಂದಿರ ಕಟ್ಟಿಸಿದನು (1062). ಅಕ್ಕಾದೇವಿಯು ಮುಂಡರಗಿ ತಾ|| ಕೊರ್ಲಹಳ್ಳಿಯಲ್ಲಿ ತುಂಗಭದ್ರಾ ನದಿಗೆ ಸೇತುವೆ (ಅಣೆಕಟ್ಟು) ಕಟ್ಟಿ ಅದರ ರಕ್ಷಣೆಯ ವೆಚ್ಚಕ್ಕೆ ಭೂದಾನ ಮಾಡಿದಳು (1050). ಇದಲ್ಲದೆ ಬೆಣ್ಣೆವೂರಲ್ಲಿ (ಮೋಟೆ ಬೆನ್ನೂರು) ಲಚ್ಚಿಮಯ್ಯ ಕಟ್ಟಿಸಿದ್ದ ಬಸದಿಗೆ ಮಹಾ ಮಂಡಲೇಶ್ವರ ಲಕ್ಷ್ಮರಸನು ಭೂದಾನ ಮಾಡಿದನು (1067). 1047ರಲ್ಲಿ ಬೈಚವಳ್ಳಿ ಕೆರೆಯ ದುರಸ್ತಿಗಾಗಿಯೂ ಭೂದಾನವನ್ನು ಮಾಡಲಾಯಿತು. ಇಂಗಳಗುಂದಿಯಲ್ಲಿ ಇದ್ದ ಅಧಿಕಾರಿ ಕೇತಗಾವುಂಡನ ಮಗನು ಮಾಳೇಶ್ವರ ದೇವಾಲಯ ಮತ್ತು ಆ ಊರ ಕೆರೆಗೆ ದಾನ ನೀಡಿದನು (1049). ಹಿರೇಕೆರೂರು ಬಾಳಂಬೀಡುಗಳ ನಡುವಣ ಮಹಾತಟಾಕಗ್ರಾಮ (ಹಿರೇಕೆರೂರು)ದ ಕೆರೆಯ ಬಗ್ಗೆ ವರ್ಣನೆ ನೀಡುವ ಹಾಗೂ ಕೆರೆಗೆ ಸಂಬಂಧಿಸಿದ ವಿಷಪರಿಹಾರೇಶ್ವರ ದೇವರಿಗೆ ಬಿಟ್ಟ ದಾನದ ವಿವರದ ಒಂದು ಶಾಸನವಿದೆ (1058).

ಎರಡನೇಯ ಸೋಮೇಶ್ವರನು (1068-76) ಸೋಮೇಶ್ವರನ ಹಿರಿಮಗನಾಗಿದ್ದು ತಂದೆಯ ಕಾಲದಲ್ಲಿ ಬೆಳ್ವೊಲ, ಪುಲಿಗೆರೆ ಪ್ರದೇಶಗಳ ಆಡಳಿತಾಧಿಕಾರಿಯಾಗಿದ್ದನು. ಇವನು ಪಟ್ಟಕ್ಕೆ ಬಂದೊಡನೆ ಚೋಳರು ಗುತ್ತಿ ಕೋಟೆಯನ್ನು ಹಿಡಿದರು (1069). ಅವರನ್ನು ಹಿಂದಕ್ಕೆ ಅಟ್ಟಲಾಯಿತು. ಇದೇ ಕಾಲಕ್ಕೆ ಇವನಿಗೂ ಇವನ ಸೋದರ ಆರನೇಯ ವಿಕ್ರಮಾದಿತ್ಯನಿಗೂ ಉತ್ತರಾಧಿಕಾರಕ್ಕೆ

ಜಗಳ ಮೊದಲಿಟ್ಟಿತು. ಚೋಳ ಅಧಿರಾಜೇಂದ್ರನು ಮಕ್ಕಳಿಲ್ಲದೆ ತೀರಿಕೊಳ್ಳಲು ಚೋಳಪಟ್ಟವು (ಚೋಳ ರಾಜಕುಮಾರಿಯ ಪುತ್ರ)ವೆಂಗಿಯ ಕುಲೋತ್ತುಂಗ ಚಾಳುಕ್ಯನಿಗೆ ಸಲ್ಲುವುದನ್ನು ತಪ್ಪಿಸಲು ಆಗ ಗೋವಿಂದವಾಡಿಯನ್ನು ಆಳುತ್ತಿದ್ದ ವಿಕ್ರಮನು ತಂಜಾವೂರಿಗೆ ಲಗ್ಗೆಯಿಕ್ಕಿ ಅಲ್ಲಿ ತನ್ನ (ವಿಕ್ರಮನು ಚೋಳ ರಾಜಕುಮಾರಿಯನ್ನು ವರಿಸಿದ್ದನು) ಪತ್ನಿಯ ಸೋದರ ಅಧಿರಾಜೇಂದ್ರನಿಗೆ ಪಟ್ಟಕಟ್ಟಿದನು. ಆದರೆ ಅಧಿರಾಜೇಂದ್ರನು ಪದಚ್ಯುತನಾಗಿ 1070ರಲ್ಲಿ ವೆಂಗಿಯ ಕುಲೋತ್ತುಂಗನೇ ಚೋಳ ಪಟ್ಟವೇರಿದನು. ಮುಂದೆ ಸೇಉಣ ವಂಶದ ಸೇಉಣಚಂದ್ರ ಮತ್ತು ಹಾನಗಲ್ ಕದಂಬರ ನೆರವಿನಿಂದ ವಿಕ್ರಮಾದಿತ್ಯನು ತನ್ನ ಅಣ್ಣನನ್ನು ಪದಚ್ಯುತಗೊಳಿಸಿದನು.

ಇಮ್ಮಡಿ ಸೋಮೇಶ್ವರನ ಕಾಲದಲ್ಲಿ ಕಾಗಿನೆಲ್ಲಿಯ ಜಕ್ಕಗಾವುಂಡ ಮುಂತಾದ ಅಧಿಕಾರಿಗಳು ಗ್ರಾಮೇಶ್ವರ ದೇವರಿಗೆ ನೀಡಿದ ದಾನವ ಶಾಸನವಿದೆ (1072).ಮಹಾಮಂಡಲೇಶ್ವರ ಲಕ್ಷ್ಮರಸನು ಅಣ್ಣಿಗೇರಿಯ ಜಿನಾಲಯದ ದತ್ತಿಯನ್ನು 1072ರಲ್ಲಿ ನವೀಕರಿಸಿದ್ದಾನೆ. ರೋಣ ತಾ|| ಕುಂಟೋಜಿಯ ನಕರೇಶ್ವರ ದೇವರಿಗೆ ಆ ಊರ ನಕರರು ದತ್ತಿ ನೀಡಿದ 1072 ದಾಖಲೆ ಇದೆ. ಅದೇ ರೀತಿ ತಿಳುವಳ್ಳಿಯ ಮನೆವರ್ಗಡೆ ಅಗ್ರಹಾರಕ್ಕೆ ನೀಡಿದ ಕೊಡುಗೆಯ ಉಲ್ಲೇಖವಿದೆ. ತಿಳವಳ್ಳಿಯ ದೊಡ್ಡಕೆರೆಯ ಏರಿಯನ್ನು ಕಟ್ಟಲು ಬಂಟರು(?) ನೀಡಿದ ದಾನದ ಉಲ್ಲೇಖವೂ ಇದೆ (1072). ನೂಲೆ (ನೂಲ್ವಿ, ಹುಬ್ಬಳ್ಳಿ ತಾ||) ಯ 12 ಗಾವುಂಡರು ಧಾರ್ಮಿಕ ಗಣ್ಯರೊಬ್ಬರಿಗೆ (ಬಹುಶಃ ದೇವಾಲಯಕ್ಕಾಗಿ) ದಾನ ನೀಡಿದ ಉಲ್ಲೇಖವಿದೆ (1073).ನಿಡಗುಂದಿಯಲ್ಲಿ ದಂಡನಾಯಕ ಜನ್ನಿಮಯ್ಯನು ತ್ರೈಪುರುಷ ದೇವಾಲಯ ರಚನೆಮಾಡಿದ ದಾಖಲೆ ಇದೆ (1074). ರಾಜನ ಸೋದರಿ ಸುಗ್ಗಲೆ ನಿಡಗುಂದಿಯನ್ನು ಆಳುತ್ತಿದ್ದು ಅವಳು ಆ ಊರ ಸ್ವಯಂಭೂ ದೇವಾಲಯಕ್ಕೆ 1076 ರಲ್ಲಿ ದತ್ತಿ ನೀಡಿದ್ದಾಳೆ.

ಆರನೇಯ ವಿಕ್ರಮಾದಿತ್ಯನು (1076-1127) ಕರ್ನಾಟಕದ ಹೆಮ್ಮೆಯ ಚಕ್ರವರ್ತಿ. ದೀರ್ಘಕಾಲ ಆಳಿದ ಇವನು ಅನೇಕ ಯುದ್ಧಗಳನ್ನು ನಡೆಸಿ ಸಾಮ್ರಾಜ್ಯವನ್ನು ರಕ್ಷಿಸಿ ವಿಸ್ತರಿಸಿದನು. ವೆಂಗಿ ಚಾಳುಕ್ಯರಿಗೆ ಸೇರಿದ್ದ ಕೆಲವು ಪ್ರದೇಶಗಳನ್ನು ಗೆದ್ದುಕೊಂಡನು. ಆದರೆ ಶಾಂತಿಪ್ರಿಯನಾಗಿದ್ದ ಇವನ ಕಾಲದಲ್ಲಿ ಅನೇಕ ಜಲಾಶಯ, ದೇವಾಲಯ, ಅಗ್ರಹಾರಗಳ ಸ್ಥಾಪನೆಯಾಯಿತು. ಕಾಶ್ಮೀರದವನಾದ ಇವನ ಆಸ್ಥಾನ ಕವಿ ಬಿಲ್ಹಣನ 'ವಿಕ್ರಮಾಂಕ ದೇವ ಚರಿತಂ' ಕಾವ್ಯಕ್ಕೆ ಈತನೇ ನಾಯಕ. ಹಿಂದೂ ಕಾನೂನಿಗೆ ಆಧಾರಭೂತ ಕೃತಿಯಾದ 'ಮಿತಾಕ್ಷರ'ವನ್ನು ಈತನ ಆಸ್ಥಾನದಲ್ಲಿ ಬರೆದ ವಿಜ್ಞಾನೇಶ್ವರನು ಕಲ್ಯಾಣದಂಥ ನಗರ ಹಿಂದಿರಲಿಲ್ಲ, ಮುಂದಿರಲಾರದು, ವಿಕ್ರಮಾರ್ಕನಂಥ ಪ್ರಭು ಹಿಂದಿರಲಿಲ್ಲ, ಮುಂದೆ ಇರಲಾರನು, ಎಂಬ ವಾಕ್ಯ ಅತಿಶಯೋಕ್ತಿಯಾಗಿ ಕಂಡರೂ ಸಮಕಾಲೀನ ವಿದ್ವಾಂಸನೊಬ್ಬನ ಅಭಿಪ್ರಾಯವೆಂದು ಗಮನಿಸಬೇಕಾದ ಸಂಗತಿ. ವೈದಿಕ ಪರಂಪರೆಯ ಬ್ರಾಹ್ಮಣರಿಗೆ ವಿದ್ಯೆ ಮತ್ತು ಧರ್ಮಕಾರ್ಯಗಳನ್ನು ಕೈಕೊಳ್ಳಲು ಅಗ್ರಹಾರಗಳನ್ನು ನೀಡುತ್ತ ಬಂದ ಕ್ರಮ ಈತನ ಕಾಲದಲ್ಲಿ ಇನ್ನೂ ಹೆಚ್ಚಿ, ವೈದಿಕ ಪರಂಪರೆಯ ಕರ್ಮಕಾಂಡಗಳ ವಿರುದ್ಧ ಬಸವೇಶ್ವರ ಪ್ರಣೀತ ಧಾರ್ಮಿಕ ಸಾಮಾಜಿಕ ಕ್ರಾಂತಿಗೆ ಹಾದಿಮಾಡಿತೆಂಬುದು ನಿರ್ವಿವಾದ ಸಂಗತಿ.

ಪರಮಾರರ ರಾಜ್ಯದ ಮೇಲೆ ವಿಕ್ರಮಾದಿತ್ಯನು ಮೂರು ಬಾರಿ ದಾಳಿ ಮಾಡಿದನು. ಪಟ್ಟಕ್ಕೆ ಬಂದೊಡನೆ 1077 ರಲ್ಲಿ ಇವನಿಗೆ ಕಿರುಕುಳ ಕೊಟ್ಟ ಪರಮಾರರ ವಿರುದ್ಧ ಧಾರಾದವರೆಗೆ ಸಾಗಿದನು. 1087 ರಲ್ಲಿ ಧಾರಾವನ್ನು ಸೂರೆಮಾಡಿ ಅಲ್ಲಿ ವಿಜಯ ಸ್ತಂಭವನ್ನು ನಿಲ್ಲಿಸಿದನು. ಆತನ ಮಿತ್ರ ಪರಮಾರ ರಾಜಪುತ್ರ ಜಗದೇವನಿಗೆ ಪಟ್ಟಕೊಡಿಸಲು 1097 ರಲ್ಲಿ ಮತ್ತೆ ದಾಳಿ ಮಾಡಿದನು. ಈ ಪ್ರಯತ್ನದಲ್ಲಿ ಯಶ ದೊರೆಯದಿದ್ದರೂ ಜಗದೇವನು ಈತನ ರಾಜ್ಯದಲ್ಲೇ ಮಾಂಡಳಿಕನಾಗಿ ಕೊಲ್ಲಿಪಾಕೆಯಲ್ಲಿ ಉಳಿದನು. ನರ್ಮದೆಯು ಉತ್ತರದಲ್ಲಿ ಚಾಳುಕ್ಯ ರಾಜ್ಯದ ಗಡಿಯಾಗಿ ಮುಂದುವರಿಯಿತು. ತನ್ನ ಅಣ್ಣನ ವಿರುದ್ಧ ನಡೆದ ಬಂಡಾಯದಲ್ಲಿ ವಿಕ್ರಮನಿಗೆ ನೆರವಾಗಿದ್ದ ತನ್ನ ಕಿರು ಸೋದರ ಜಯಸಿಂಹನು ಮುಂದೆ ಬನವಾಸಿಯ ಅಧಿಕಾರಿಯಾಗಿದ್ದು 1080 ರಲ್ಲಿ ಬಂಡೇಳಲು ವಿಕ್ರಮನು ಅವನನ್ನು ಸೋಲಿಸಿ ಕ್ಷಮಿಸಿಬಿಟ್ಟನು. ಮುಂದೆ 1103 ರಿಂದ ಬನವಾಸಿ ಅನಂತಪಾಲ, ಮುಂದೆ ಆತನ ಸಂಬಂಧಿ ಗೋವಿಂದನಾಥನ ಆಡಳಿತಕ್ಕೆ ಸೇರಿತ್ತು. ಹೊಯ್ಸಳ ವಿಷ್ಣುವರ್ಧನನು ಈತನ ವಿರುದ್ಧ ಬಂಡೆದ್ದು ತುಂಗಭದ್ರೆಯನ್ನು ದಾಟಿಬಂದರೂ ಚಾಳುಕ್ಯ ಸೇನಾನಿ ಸಿಂಧ ಆಚುಗಿಯ ಕೈಯಲ್ಲಿ 1122ರಲ್ಲಿ ಹಲಸೂರಲ್ಲಿ ಸೋತು ಹಿಂದೆಗೆದನು. 1088 ರಿಂದ ವೆಂಗಿಗೆ ಸೇರಿದ್ದ ಕೊಲ್ಲಿಪಾಕೆ ಪ್ರದೇಶ ಈತನ ವಶವಾಯಿತು. ಗುಜರಾತಿನ ಚೌಲುಕ್ಯ ಕರ್ಣ ಹಾಗೂ ರತ್ನಪುರ (ಬಿಲಾಸಪುರ ಬಳಿ)ದಿಂದ ಆಳುತ್ತಿದ್ದ ಜಾಜಲ್ಲದೇವರೂ ಇವನಿಂದ ಸೋಲುಂಡರು. 1093 ರಿಂದ ವೆಂಗಿ ಈತನ ಕೈಗೆ ಬಂದರೂ 1099 ರಲ್ಲಿ ಚೋಳರು ಅದನ್ನು ಮತ್ತೆ ಗೆದ್ದರು. 1118 ರಲ್ಲಿ ವೆಂಗಿ ಮತ್ತೆ ಚಾಳುಕ್ಯರ ವಶವಾಗಿ 1124 ರವರೆಗೆ ಇವರ ವಶ ಮುಂದುವರಿಯಿತು. ಹೊಯ್ಸಳ ವಿಷ್ಣುವರ್ಧನ ಈ ದಾಳಿಯಲ್ಲಿ ಚಾಳುಕ್ಯನಿಗೆ ನೆರವಾಗಿದ್ದನು. ಗೋವೆಯ ಕದಂಬರು ಬಂಡೆದ್ದರೂ ಅವರನ್ನು ಸೋಲಿಸಿ ಮುಂದೆ

ಕದಂಬ ಇಮ್ಮಡಿ ಜಯಕೇಶಿಗೆ ತನ್ನ ಮಗಳಾದ ಮೈಳಲದೇವಿಯನ್ನು ಮದುವೆ ಮಾಡಿಕೊಟ್ಟನು. ಕರ್ಹಾಡದ ಶಿಲಾಹಾರ ಮನೆತನದ ಚಂದಲದೇವಿ ಈತನ ಅಗ್ರಮಹಿಷಿಯಾಗಿದ್ದಳು. ಇದಲ್ಲದೆ ಅವನಿಗೆ ಅನೇಕ ರಾಣಿಯರಿದ್ದರು. ಇವನ ಸೋದರ ಕೀರ್ತಿವರ್ಮ ಎಂಬಾತ 'ಗೋವೈದ್ಯ' ಕೃತಿಯನ್ನು ಕನ್ನಡದಲ್ಲಿ ಬರೆದನು. ಅಗ್ಗಳ, ಬ್ರಹ್ಮಶಿವರು ಇದೇ ಕಾಲದಲ್ಲಿ ಇದ್ದ ಕನ್ನಡ ಕವಿಗಳು. ಕೀರ್ತಿವರ್ಮ ಈ ಕವಿಗಳ ಮಿತ್ರನಿದ್ದಂತಿದೆ.

ವಿಕ್ರಮಾದಿತ್ಯನ ಕಾಲದಲ್ಲಿ ಅವನ ಅಧಿಕಾರಿಗಳು ಚಕ್ರವರ್ತಿಯ ಅನುಮತಿಯಿಂದ ಮಾಡಿದ ಅಸಂಖ್ಯ ದಾನಧರ್ಮ ಕಾರ್ಯಗಳಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಅದಲ್ಲದೆ ಜಿಲ್ಲೆಯ ಆಡಳಿತದ ಬಗೆಗೂ ಕೆಲವು ವಿವರಗಳು ತಿಳಿಯುತ್ತವೆ. ಅವನ ಸೋದರ ಜಯಸಿಂಹನು 1077 ರಲ್ಲಿಯೇ ಕುಂದೂರು -1000(ನರೇಂದ್ರನ ಪರಿಸರ), ಪುಲಿಗೆರೆ, ಬೆಳವೊಲ ಪ್ರದೇಶಗಳ ಮಂಡಲೇಶ್ವರನಾಗಿದ್ದು ಆಗ ನೊಳಂಬ ಸಮುದ್ರ ಎಂಬ ಕೆರೆಯ (ನಿರ್ಮಾಣವಾಗಿದ್ದು) ದುರಸ್ತಿಗೆ ಈತನು ಭೂದಾನ ಮಾಡಿದ್ದಾಗಿ ಮೊರಬ ಶಾಸನ ತಿಳಿಸುತ್ತದೆ. ಅದೇ ವರ್ಷ ವಿಕ್ರಮನು ಲಕ್ಷ್ಮೇಶ್ವರ (ಪುಲಿಗೆರೆ) ದೇವಾಲಯದ ದತ್ತಿಯನ್ನು ನವೀಕರಿಸಿದನು. ತೇಗೂರಿನ ಕಲಿದೇವರ ದೇವಾಲಯವನ್ನು 1082ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು. ಕಲಿಯಣ ಎಂಬಾತನು ನಿಟ್ಟೂರಲ್ಲಿ ಕಟ್ಟಿಸಿದ ಬೆನಕನ ಕೆರೆಗೆ ಆ ಊರ ಗೌಡ (ಗಾವುಂಡ) 1081ರಲ್ಲಿ ಭೂದಾನ ಮಾಡಿದನು. ಪುಲ್ಲುಣಿ (ಗಳಗನಾಥ) ಗ್ರಾಮದ ಗಳಗೇಶ್ವರ ದೇವರಿಗೆ ಸಾಮ್ರಾಜ್ಯದ ಮಹಾಮಂಡಲೇಶ್ವರನು ದತ್ತಿಯನ್ನು ಪುನರುಜ್ಜೀವಿಸಿದ ವಿಚಾರ 1080ರ ಶಾಸನದಲ್ಲಿದೆ. ಉಕ್ಕುಂದದಲ್ಲಿ ದಾನಗಾವುಂಡ ಎಂಬಾತನು ಶಿವಾಲಯವನ್ನು ಕಟ್ಟಿಸಿರಲು ದಂಡನಾಯಕ ಸೋಮೇಶ್ವರನು ಊರ ಸುಂಕವನ್ನು ದೇವಾಲಯಕ್ಕೆ ದಾನಮಾಡಿದನು (1089). ವಿಕ್ರಮನು ತುಂಗಭದ್ರಾ ತೀರದಲ್ಲಿ ಬೀಡು ಬಿಟ್ಟಿರಲು ಮುದೇನೂರ ಶಂಕರನಾರಾಯಣ ದೇವರಿಗೆ ದಾನವಿತ್ತ ದಾಖಲೆ ಇದೆ (1096). ಕುರ್ತುಕೋಟಿಯ ಕೆರೆಯ ರಕ್ಷಣೆಗಾಗಿ 1082 ರಲ್ಲಿ ನೀಡಿದ ಭೂದಾನವು ದಾಖಲಾಗಿದೆ. ಕುರ್ತುಕೋಟಿಯ ದಾನೇಶ್ವರ ದೇವಾಲಯಕ್ಕೆ ಜರಗಾರಡೋಣಿ ಸಾಸಿರ್ವರು 1087 ರಲ್ಲಿ ಕಾಣಿಕೆ ನೀಡಿದ್ದಾರೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ನೀಡಿದ ದಾನವೊಂದು ಗದುಗು ಶಾಸನದಲ್ಲಿ ಇದ್ದು, ಅದರಂತೆ ಸೋಮೇಶ್ವರ ಭಟ್ಟೋಪಾಧ್ಯಾಯನು ಪ್ರಭಾಕರ ವ್ಯಾಖ್ಯಾನ ಶಾಲೆಯನ್ನು ಲಕ್ಕುಂಡಿಯಲ್ಲಿ ನಿರ್ಮಿಸಿದ ವಿಚಾರವಿದೆ. (ಪೂರ್ವಮೀಮಾಂಸೆಗೆ ಸಂಬಂಧಿಸಿದ್ದು). ಈತ ರಾಮಲಿಂಗೇಶ್ವರ ಎಂದು ಪರಿಚಿತವಾದ ಬೆಳವಣಿಕೆಯ ಬೈರುಂಬೇಶ್ವರ ದೇವಾಲಯವನ್ನು ಬೈರುಂಬರಮಯ್ಯ ಎಂಬಾತನು 1093 ರಲ್ಲಿ ನಿರ್ಮಿಸಿದನು. ಚಿಕ್ಕಹಂದಿಗೋಳದಲ್ಲಿ ಮಾಧವೇಶ್ವರ ದೇವಾಲಯ ನಿರ್ಮಾಣವಾದುದು (1099), ಮುದ್ದಿಮಯ್ಯ ನಾಯಕನು ಗದಗಿನಲ್ಲಿ ಶಂಕರನಾರಾಯಣ ದೇವಾಲಯ ಕೆರೆ ಹಾಗೂ ಸತ್ರ ನಿರ್ಮಿಸಿದ್ದು (1101), ಮಲಕನಕೊಪ್ಪದಲ್ಲಿ ಬೊಮ್ಮಿಸೆಟ್ಟಿ ಎಂಬಾತನು ಜಿನಾಲಯ ನಿರ್ಮಿಸಿದ್ದು, ಲಕ್ಷ್ಮೇಶ್ವರದಲ್ಲಿ ಅನಂತಮಯ್ಯ ದಂಡನಾಯಕನು ಸೂಳಿಗೆರೆ ನಿರ್ಮಿಸಿ (ಜೀರ್ಣೋದ್ಧಾರ ಮಾಡಿ ?) ಅದರ ದುರಸ್ತಿಗಾಗಿ ದಾನ ನೀಡಿದ್ದು (1107), ನಿಗದಿಯಲ್ಲಿ 1111 ರಲ್ಲಿ ಮೂಲ ದೇವರ ಪ್ರತಿಷ್ಠಾಪನೆ ಮಾಡಿದ್ದು, ಅಬ್ಬಿಗೇರಿಯಲ್ಲಿ ಮಹಾಮಂಡಳೇಶ್ವರ ಆಚರಸನು ದೇವಿಂಗೆರೆಗೆ (ದುರಸ್ತಿ ಕಾರ್ಯಕ್ಕಾಗಿ) ಭೂದಾನ ನೀಡಿದ್ದು (1113), ಜಕ್ಕಲಿಯ ಬಸದಿಯನ್ನು ಜೀರ್ಣೋದ್ಧಾರ ಮಾಡಿ ಅದಕ್ಕೆ ಕಾಣಿಕೆ ಕೊಟ್ಟದ್ದು, ಜಕ್ಕಲಿ ಅಗ್ರಹಾರದ ಮಹಾಜನರ ವಿನಂತಿಯಂತೆ ಸೋಮಿದೇವರಸನು ಅಲ್ಲಿನ ಸೋಮೇಶ್ವರ ದೇವರಿಗೆ ದತ್ತಿಹಾಕಿದ್ದು, ಹೀಗೆ ಅನೇಕ ಧರ್ಮಕಾರ್ಯಗಳು ಈ ಜಿಲ್ಲೆಯಲ್ಲಿ ಆಗ ನಡೆದವು. ಅಗಡಿಯಲ್ಲಿ ಬಿರುದಳ ದೇವನು ಬಿರುದೇಶ್ವರ ಮಂದಿರ ನಿರ್ಮಿಸಿದನು (1116). ಅಮರಗೋಳ (ಅಂಬರಗೋಳ)ದಲ್ಲಿ ಕೇಶವ ಭೈರವ ದೇವಾಲಯಗಳ ಸ್ಥಾಪನೆ ಜಕ್ಕರಸನೆಂಬ ಅಧಿಕಾರಿಯಿಂದ ಆಯಿತು. (1120). ದಾಸಿಮಯ್ಯ ಎಂಬಾತ ನರೇಗಲ್‌ನಲ್ಲಿ ಸೂರ್ಯಮಂದಿರ ಕಟ್ಟಿದನು (1121). ಜಟಾಚೋಳ ಎಂಬವನು 1120 ರಲ್ಲಿ ಚೌಡದಾನಪುರದ ಪ್ರಸಿದ್ಧ ಮುಕ್ತೇಶ್ವರ ಮಂದಿರವನ್ನು ಕಟ್ಟಿಸಿದನು. ಈತನ ರಾಣಿಯರಲ್ಲಿ ಒಬ್ಬಳಾದ ಮಲಯವತಿದೇವಿ ಎಲೆಯಪೂರ್ವದಹಳ್ಳಿ (ಹುಬ್ಬಳ್ಳಿ) ಅಗ್ರಹಾರದ ಆಡಳಿತ ನಡೆಸುತ್ತಿದ್ದಳು (1111). ಕೋಡಿಕೊಪ್ಪ ಶಾಸನದಂತೆ ಕಿರುನರೆಯಂಗಲದ (ನರೇಗಲ್) ಮಲ್ಲೇಶ್ವರ ದೇವಾಲಯಕ್ಕೆ ದತ್ತಿ ಸಂದಿತು (1122). ಕಾಗಿನೆಲೆಯಲ್ಲಿ ಕಾಳೇಶ್ವರ ದೇವಾಲಯ ನಿರ್ಮಾಣವಾಗಿ (1121), ಇದೇ ದೇವಾಲಯದ ನಿರ್ಮಾತೃ ಬಾಸವೂರಿನ ಕಾಳಸೆಟ್ಟಿ ಮುಂದೆ ಬ್ರಹ್ಮೇಶ್ವರವನ್ನು ಕಟ್ಟಿಸಿದನು (1123). ಲಕ್ಷ್ಮೇಶ್ವರದಲ್ಲಿ ಈಗ ಕಣ್ಮರೆಯಾಗಿರುವ ರಾಮೇಶ್ವರ ದೇವಾಲಯದ ಮಠದಲ್ಲಿ ಕೌಮಾರ ವ್ಯಾಕರಣ ಬೋಧಿಸುವ ಉಪಾಧ್ಯಾಯರಿಗೆ 1123 ರಲ್ಲಿ ದಾನ ನೀಡಲಾಗಿತ್ತು. ಅರಟಾಳದಲ್ಲಿ ಗಂಗಪೊಮ್ಮಿಸೆಟ್ಟಿ 1123 ರಲ್ಲಿ ಬಸದಿ ನಿರ್ಮಾಣ ಮಾಡಿದನು. ಮುಮ್ಮಿಗಟ್ಟಿಯ ಕಲಿದೇವರಿಗೆ ಉದಯಗಾವುಂಡ 1124 ರಲ್ಲಿ ದತ್ತಿ ನೀಡಿದನು. ಗೂಗಿಕಟ್ಟಿಯಲ್ಲಿ 1125 ರಲ್ಲಿ ಕೇಶವ ದೇವರ ಪ್ರತಿಷ್ಠೆ ಮಾಡಲಾಯಿತು. ಮಾಧವಯ್ಯ ಎಂಬ ಅಧಿಕಾರಿ ಬೆಳವಟ್ಟಿಯಲ್ಲಿ ಕೆರೆ

ಕಟ್ಟಿಸಿದ್ದು, ಶ್ರೀಶದಂಡನಾಯಕರು ಅದೇ ಊರಲ್ಲಿ ಹಿರೇಕೆರೆ ಕಟ್ಟಿಸಿದ್ದು, ಇವೆಲ್ಲ ಈ ಜಿಲ್ಲೆಯಲ್ಲಿ ವಿಕ್ರಮನ ಕಾಲದಲ್ಲಾದ ಮುಖ್ಯ ಸಾಧನೆಗಳು. ಇದಲ್ಲದೆ ಹಾನಗಲ್ ಹಾಗೂ ಗೋವೆ ಕದಂಬರೂ ಯಲಬುರ್ಗಿಯ ಸಿಂಧರೂ ಇವರ ಮಾಂಡಲಿಕರಾಗಿ ಅನೇಕ ಸತ್ಕಾರ್ಯಗಳನ್ನು ಮಾಡಿದ್ದಾರೆ. ವಿಕ್ರಮನ ಅನೇಕ ಸಾಧನೆಗಳ ದೀರ್ಘ ಆಡಳಿತ ಕೊನೆಗೊಂಡಾಗ ಸರ್ವಜ್ಞ ಭೂಪನೆಂದು ಖ್ಯಾತನಾದ ಅವನ ಪುತ್ರ ಮೂರನೇಯ ಸೋಮೇಶ್ವರನಿಗೆ ಪಟ್ಟವಾಯಿತು.

ಮೂರನೇಯ ಸೋಮೇಶ್ವರನ (1127-1139) ಕಾಲದಲ್ಲಿ ವಿಷ್ಣುವರ್ಧನನು ಮತ್ತೆ ಬಂಡಾಯ ಹೂಡಿದರೂ ಅವನನ್ನು ಸದೆಬಡಿದರು. ಆದರೆ 1136 ರಲ್ಲಿ ಉಚ್ಚಂಗಿ ಹೊಯ್ಸಳರ ವಶವಾಯಿತು. 1130 ರಲ್ಲಿ ವೆಂಗಿಯು ಸೋಮೇಶ್ವರನ ಕೈತಪ್ಪಿದರೂ ವೆಂಗಿ ರಾಜ್ಯಕ್ಕೆ ಸೇರಿದ ಬಹುಭಾಗಗಳನ್ನು ಅವನು ವಶಪಡಿಸಿಕೊಂಡನು. ಆಂಧ್ರದಲ್ಲಿ ನಾದಿಂಡ್ಲವರೆಗಿನ ಪ್ರದೇಶ ಅವನ ವಶವಾಯಿತು. ಕೊಂಕಣ, ಹಲಸಿಗೆಗಳು ಇವನ ಮಾಂಡಳಿಕ ಜಯಕೇಶಿ ಕದಂಬನ ಆಡಳಿತಕ್ಕೆ ಸೇರಿತ್ತು. ಪಟ್ಟಕ್ಕೆ ಬರುವಾಗಲೇ 60 ರ ಗಡಿದಾಟಿದ್ದ ಭೂಲೋಕಮಲ್ಲ ಸೋಮೇಶ್ವರ ಹೆಚ್ಚು ವರ್ಷ ಆಳಲಿಲ್ಲ. 'ಮಾನಸೋಲ್ಲಾಸ' ಅಥವಾ 'ಅಭಿಲಷಿತಾರ್ಥ ಚಿಂತಾಮಣಿ'ಯು ಅವನು ರಚಿಸಿದ ಗಣ್ಯ ಸಂಸ್ಕೃತ ವಿಶ್ವಕೋಶ. ಅವನ ಕೊಟುಮಚಗಿ ಶಾಸನದಲ್ಲಿ ಅಲ್ಲಿನ ಅಗ್ರಹಾರದ ಉಲ್ಲೇಖವಿದೆ. 1132ರಲ್ಲಿ ಹಾವೇರಿಯಲ್ಲಿರುವ ಕದಂಬ ಮಲ್ಲಿಕಾರ್ಜುನ ದೇವಾಲಯದ ಕೆರೆಯ ದತ್ತಿ ನಷ್ಟವಾದುದನ್ನು ಸೋಮೇಶ್ವರ ನವೀಕರಿಸಿದ. ಶಿಗ್ಗಾಂವಿ ತಾ॥ ಹುನಗುಂದ ಕೆರೆಯ ಜೀರ್ಣೋದ್ಧಾರಕ್ಕೂ ದಾನ ನೀಡಲಾಯಿತು. ಈತನ ದಂಡನಾಯಕ ಮಹಾದೇವಯ್ಯನು ಜಕ್ಕಲಿಕೆರೆಯ ನಿರ್ಮಾಣಕ್ಕೆ ನೀಡಿದ ದಾನ 1139 ರದು.

ಆಗಲೇ ಪ್ರೌಢರಾದ ಪುತ್ರರನ್ನು ಹೊಂದಿದ್ದ ಸೋಮೇಶ್ವರನ ಮರಣಾನಂತರ ಅವನ ಹಿರಿಮಗ ಇಮ್ಮಡಿ ಜಗದೇಕಮಲ್ಲನಿಗೆ ಪಟ್ಟವಾಯಿತು (1139). ಹೊಯ್ಸಳ ವಿಷ್ಣುವರ್ಧನನ ಬಂಡಾಯ ತೀವ್ರವಾಗಿ ಮುಂದುವರಿದು ಲಕ್ಕುಂಡಿಯವರೆಗೆ ಬಂದ ಅವನು ದಂಡೆತ್ತಿಬಂದನಾದರೂ ಬಂಕಾಪುರ ಕದನದಲ್ಲಿ ಆತ 1141 ರಲ್ಲಿ ತೀರಿಕೊಂಡ. ಆದರೆ ಆಂಧ್ರಪ್ರದೇಶದ ನೆಲೆಗಳನ್ನು ಜಗದೇಕಮಲ್ಲನು ಕಳೆದುಕೊಂಡ. ಅಲ್ಲಿ ಕಾಕತೀಯ ಇಮ್ಮಡಿ ಪ್ರೋಲನು ಈತನ ವಿರುದ್ಧ ಬಂಡೆದ್ದರೂ ಇವನು ಆತನನ್ನು ಹತ್ತಿಕ್ಕಿದ. ಪರಮಾರ ಜಯವರ್ಮನನ್ನೂ ಈತನು ಸೋಲಿಸಿದ. ಆದರೆ ಪಟ್ಟಕ್ಕೆ ಬರುವಾಗಲೇ ವೃದ್ಧನಾಗಿದ್ದ ಜಗದೇಕಮಲ್ಲ 1149 ರಲ್ಲಿ ತೀರಿಕೊಂಡ. ಈತನ ಕಾಲದಲ್ಲಿ ಕುರಹಟ್ಟಿಯಲ್ಲಿ ತ್ರಿಕೂಟೇಶ್ವರ ಮಂದಿರವನ್ನು ಕಡಿತವರ್ಗಡೆ (ಕಂದಾಯ ದಾಖಲೆಗಳ ಅಧಿಕಾರಿ) ಮಾಳಪ್ಪಯ್ಯ ನಾಯಕ ನಿರ್ಮಿಸಿದ (1142). ಬಾಳೆಹಳ್ಳಿಯಲ್ಲಿ ಪಾರ್ಶ್ವನಾಥ ಜಿನಾಲಯವನ್ನೂ ಬಮ್ಮಿಸೆಟ್ಟಿ ಎಂಬಾತನು, ನೀರಲಗಿ (ನೇರಿಲಗೆ)ಯಲ್ಲಿ ಅಲ್ಲಿನ ನಾಳ್ಪ್ರಭು ಮಲ್ಲಿಗಾವುಂಡ ಮಲ್ಲಿನಾಥ ಜಿನಾಲಯವನ್ನೂ ಹಾಗೂ ಕರಗುದರಿಯಲ್ಲಿ ವ್ಯಾಪಾರಿಯಾದ ಕಲ್ಲಿಸೆಟ್ಟಿ ವಿಜಯಪಾರ್ಶ್ವ ಜಿನಾಲಯವನ್ನೂ ಕಟ್ಟಿಸಿದ್ದು ಧಾರವಾಡ ಜಿಲ್ಲೆಯ ಶಾಸನಗಳಿಂದ ತಿಳಿಯುತ್ತದೆ. ಗುಡಗುಡಿಯ ಒಂದು ಶಾಸನ ಆ ಊರ 'ಅರ್ವತ್ತೊಕ್ಕಲ'ನ್ನು ಉಲ್ಲೇಖಿಸುತ್ತದೆ. ಜಗದೇಕಮಲ್ಲನ ಕಾಲದಲ್ಲಿ ಕಾಗಿನೆಲ್ಲಿಯ ಪ್ರಜೆಗಳು ಈತನ ವಿರುದ್ಧ ಬಂಡುಹೂಡಿ ನಾಳಪ್ರಭು ಕೇತಿಸೆಟ್ಟಿ ಇವನ ಪರ ಹೋರಾಡಿ ಮಡಿದ ಉಲ್ಲೇಖ 1146 ರಲ್ಲಿ ಬಂದಿದೆ.

ಇವನ ಉತ್ತರಾಧಿಕಾರಿಯು ಇವನ ತಮ್ಮನಾದ ಮುಮ್ಮಡಿ ತೈಲ (1149-1162). ಇವನ ಮಗ ನಾಲ್ಕನೇಯ ಸೋಮೇಶ್ವರ ಈತನ ಜೊತೆ ಜಂಟಿ ಅರಸನೂ ಆಗಿದ್ದ. ತೈಲನು ಕಾಕತೀಯ ಪ್ರೋಲನ ಕೈಯಲ್ಲಿ ಸೋತು ಬಂಧಿತನಾಗಿ ಪ್ರತಿಷ್ಠೆ ಕಳೆದುಕೊಂಡ. ಉತ್ತರದ ಸೇಉಣರೂ ದಕ್ಷಿಣದ ಹೊಯ್ಸಳರೂ ಪ್ರಬಲಿಸಿ ಚಾಳುಕ್ಯ ರಾಜ್ಯದಲ್ಲಿ ಒತ್ತುವರಿ ನಡೆಸಿದರು. 1157ರಲ್ಲಿ ತರ್ದವಾಡಿ ತರಿಕಾಡುನಾಡುಗಳ ಮಾಂಡಳಿಕ ಹಾಗೂ ಆರನೇಯ ವಿಕ್ರಮಾದಿತ್ಯನ ಮಗಳ ಮಗ ಕಳುಚೂರಿ ಇಮ್ಮಡಿ ಬಿಜ್ಜಳನು ಕಲ್ಯಾಣವನ್ನು ಗೆದ್ದುಕೊಂಡ. ತೈಲನು ಅಣ್ಣಿಗೇರಿಯಲ್ಲಿ ಉಳಿಯಬೇಕಾಯಿತು. 1162 ರಲ್ಲಿ ಅವನು ತೀರಿಕೊಂಡ. ಹೊಯ್ಸಳ ನರಸಿಂಹನು ಈತನ ಕೊಲೆ ಮಾಡಿದನೆಂದು ಶಾಸನಾಧಾರದಿಂದ ಸೀತಾರಾಮ ಜಾಗಿರ್ದಾರ್ ಹೇಳಿದ್ದಾರೆ. ಆದರೆ ಈ ಕೊಲೆಯ ಲಾಭಪಡೆದವರು ಕಲಚೂರಿಗಳು. ಬಿಜ್ಜಳ ಕಲ್ಯಾಣದಲ್ಲಿ ಚಕ್ರವರ್ತಿಯಾದ.

1162 ರಿಂದ 1184 ರವರೆಗೆ ಕಲಚೂರಿಗಳು ಕಲ್ಯಾಣದಿಂದ ಆಳಿದರು. 1184 ರಲ್ಲಿ ಚಾಳುಕ್ಯ ನಾಲ್ಕನೇಯ ಸೋಮೇಶ್ವರ ಮತ್ತೆ ಅಧಿಕಾರ ಗ್ರಹಣಮಾಡಿದ. ತೈಲಪನ ಶಾಸನಗಳ ಪೈಕಿ ಅರೇಕುರಹಟ್ಟಿ ಶಾಸನ 'ಕುರಿಹಟ್ಟಿ'ಯ ಐವತ್ತು ಒಕ್ಕಲನ್ನು ಉಲ್ಲೇಖಿಸುತ್ತದೆ. ರುದ್ರದೇವನೆಂಬ ಅಧಿಕಾರಿ ಹಾವೇರಿಯ ಕೆರೆಯ ದುರಸ್ತಿಗಾಗಿ ದಾನಮಾಡಿದ ವಿಚಾರ 1158 ರ ಶಾಸನದಲ್ಲಿದೆ. ಅರಳೇಶ್ವರ (ಹಾನಗಲ್ ತಾ॥) ಊರ ಕದಂಬೇಶ್ವರ ದೇವಾಲಯವನ್ನು ಈತನ ಕಾಲದಲ್ಲಿ ವಿಸ್ತರಿಸಲಾಯಿತು.

## ಕಲಚೂರಿಗಳು

ಕಲ್ಯಾಣಿ ಚಾಲುಕ್ಯರ ಮಾಂಡಲಿಕರೂ ಬೀಗರೂ ಆದ ಕಲಚೂರಿಗಳೇ ಮುಂದೆ 1162 ರಲ್ಲಿ ರಾಜ್ಯ ಗ್ರಹಣ ಮಾಡಿದರು. ಉಚಿತ, ಬಿಜ್ಜಳ 1, ಕರ್ಣ, ಜೋಗಮ ಇವರೆಲ್ಲ ಅನುಕ್ರಮವಾಗಿ ಆಳಿದ ಈ ವಂಶದ ಮಾಂಡಲಿಕರಾಗಿದ್ದು ತರಿಕಾಡುನಾಡು ಪ್ರದೇಶವನ್ನು ಮಂಗಳವೇಡೆಯಿಂದ ಆಳುತ್ತಿದ್ದ ಜೋಗಮನ ಮಗ ಪೆರ್ಮಾಡಿಯು ಆರನೇಯ ವಿಕ್ರಮಾದಿತ್ಯನ ಮಗಳು ಸಾವಳದೇವಿಯನ್ನು ವರಿಸಿದ್ದ. ಸಾವಳದೇವಿಯ ಮಗನಾದ ಎರಡನೇಯ ಬಿಜ್ಜಳ 1129ರ ಸುಮಾರಿಗೆ ತರಿಕಾಡುನಾಡು, ಕರ್ಹಾಡ 4000 ಹಾಗೂ ತರ್ದವಾಡಿ-1000ಗಳ ಮಾಂಡಲಿಕನಾಗಿ, 1157 ರಲ್ಲಿ ಸ್ವಾತಂತ್ರ್ಯ ಘೋಷಿಸಿದ. 1156 ರ ಒಂದು ಶಾಸನದಲ್ಲೇ (ಬೆಟಗೇರಿ) ಬಿಜ್ಜಳನ ಸೋದರ ಮೈಲುಗಿ ಬೆಳ್ವೊಲ-300ನ್ನು ಮುಳಗುಂದದಿಂದ ಆಳುತ್ತಿದ್ದನೆಂದು ಹೇಳಿದೆ. 1162ರಲ್ಲಿ ಮೂರನೇಯ ತೈಲನು ತೀರಿಕೊಂಡಾಗ ಕಲ್ಯಾಣದಿಂದ ಚಕ್ರವರ್ತಿಯಾದ ಬಿಜ್ಜಳನ ಭಂಡಾರಿಗರಾಗಿದ್ದವರು ಖ್ಯಾತ ಧಾರ್ಮಿಕ ಪ್ರವರ್ತಕ ಮತ್ತು ಸಾಮಾಜಿಕ ಕ್ರಾಂತಿಕಾರಿ ಬಸವಣ್ಣನವರು. ಬಿಜ್ಜಳನು ಬಂಡೆದ್ದ ಹೊಯ್ಸಳ ನರಸಿಂಹ ಹಾಗೂ ಉಚ್ಚಂಗಿಯ ವಿಜಯಪಾಂಡ್ಯನನ್ನು ಬಗ್ಗಿಸಿದ. ಇದಲ್ಲದೆ ಸೇಉಣರು, ಚೋಳರು, ಆಂಧ್ರದ ಚೋಡರು ಹಾಗೂ ಕಳಿಂಗದ ಗಂಗ ರಾಘವನನ್ನೂ ಗುಜರಾತಿನ ಚೌಲುಕ್ಯ ಕುಮಾರಪಾಲನನ್ನು ಸೋಲಿಸಿದ. ಜೈನರ ವಿರುದ್ಧ ವಾದನಡೆಸಿ ಗೆದ್ದ ವೀರಶೈವ ಏಕಾಂತದ ರಾಮಯ್ಯನಿಗೆ ಜಯಪತ್ರವನ್ನು ಬಿಜ್ಜಳನು ಕೊಟ್ಟುದಾಗಿ ಅಬಲೂರು ಶಾಸನ ಹೇಳುತ್ತದೆ. 1154 ರಲ್ಲೇ ಬಿಜ್ಜಳನ ತಂತ್ರಪಾಲ ಬಲ್ಲರಸ ಹಾನಗಲ್ ತಾ|| ಗೆಜ್ಜೆಹಳ್ಳಿ ತೈಲೇಶ್ವರ ದೇವರಿಗೆ ದಾನ ನೀಡಿದ ಶಾಸನವಿದೆ. ಹಿಂದಣ 1146 ರ ಕಾಗಿನೆಲ್ಲಿ ಬಂಡಾಯವನ್ನು ಗಮನಿಸಿದಾಗ ಈ ಪ್ರದೇಶ ಬಿಜ್ಜಳನ ವಶವಾಗಿತ್ತೇ ಎಂಬ ಸಂದೇಹ ಬರುತ್ತದೆ. ಬಿಜ್ಜಳನ ಎರಡು ಶಾಸನಗಳು ಅಣ್ಣಿಗೇರಿಯಲ್ಲಿ ದೊರತಿವೆ (1161-62). ಆತನ ಸೇನಾಗಿ ಶ್ರೀಧರಯ್ಯ 1161ರಲ್ಲಿ ಅಮೃತೇಶ್ವರ ದೇವಾಲಯದಲ್ಲಿ ಪುರಾಣವಾಚನಕ್ಕೆ ಹಾಗೂ ಇನ್ನೊಂದು ಅದೇ ಊರಿನ ಚಂಡಿಕಾದೇವಾಲಯಕ್ಕೆ ಅದೇ ಸೇನಾನಿ 1162 ರಲ್ಲಿ ದಾನಗಳನ್ನು ನೀಡಿದನು. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯಕ್ಕೆ ಹಾಗೂ ಅಗ್ರಹಾರಕ್ಕೆ 1161 ಮತ್ತು 1166 ರಲ್ಲಿ ಬಿಜ್ಜಳನು ದಾನ ನೀಡಿದ್ದಾನೆ. ಹಿರೇಬೆಂಡಿಗೇರಿ ಕಲಿದೇವರ ದೇವಾಲಯಕ್ಕೆ ನಷ್ಟವಾದ ದತ್ತಿಯನ್ನು ಬಿಜ್ಜಳನ ಮಾಂಡಲಿಕ ಪೇರೆಯಾದಿ ಪುನರುಜ್ಜೀವನಗೊಳಿಸಿದ್ದಾನೆ. ಮಣಗಟ್ಟಿ ಹೊಲ್ಲೇಶ್ವರ ದೇವಾಲಯಕ್ಕೆ ದಂಡನಾಯಕ ಕೇಶಿರಾಜಯ್ಯ 1165 ರಲ್ಲಿ ದಾನ ನೀಡಿದ್ದಾನೆ. ಮಂತಗಿ (ಹಾನಗಲ್ ತಾ||)ಯಲ್ಲಿ ಕಲಿದೇವ ಸೆಟ್ಟಿಯು ಬಿಜ್ಜಳನ ಕಾಲದಲ್ಲಿ ಬಸದಿಯನ್ನು ಸ್ಥಾಪಿಸಿ 24 ತೀರ್ಥಂಕರನನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ. ಹಿರೇಬಾಸೂರು (ವ್ಯಾಸಪುರ)ದಲ್ಲಿ ವ್ಯಾಸೇಶ್ವರ ದೇವಾಲಯ ನಿರ್ಮಾಣವಾದ ವಿಚಾರ ಬಿಜ್ಜಳನ ತಾರೀಕಿನಲ್ಲದ ಒಂದು ಶಾಸನದಲ್ಲಿದೆ. ಇದಲ್ಲದೆ ಹುಯಿಲುಗೋಳದ ವ್ಯಾಪಾರಿ ಶ್ರೇಣಿಗಳು ಆ ಊರ ಚಂಡೇಶ್ವರ ದೇವರಿಗೆ ದಾನನೀಡಿದ ವಿಚಾರ 1164ರ ಶಾಸನದಲ್ಲಿ ಇದೆ. ಬಿಜ್ಜಳನ ಕೊನೆಯ ಶಾಸನ 1168 ರದಿದ್ದು ಅದರಂತೆ ಹಾನಗಲ್ ತಾಲೂಕು ಎಮ್ಮಿಗನೂರಲ್ಲಿ ಕಾಮಗಾವುಂಡ ರಾಮೇಶ್ವರ ದೇವಾಲಯ ನಿರ್ಮಾಣ ಮಾಡಿದ.

ಬಿಜ್ಜಳನ ಭಂಡಾರಿ ಬಸವಣ್ಣನವರು ನೇತೃತ್ವದಲ್ಲಿ ಆದ ವೀರಶೈವ ಜಾಗೃತಿ ಕಲ್ಯಾಣಕ್ಕೆ ದೂರದೂರದ ಶಿವಶರಣರನ್ನು ಆಕರ್ಷಿಸಿ, ಅಲ್ಲಿ ಅನುಭವಮಂಟಪ ಮೂಡಿಬಂದುದು ಪ್ರಸಿದ್ಧ ಘಟನೆ. ಬಸವಣ್ಣನವರು ಜಾತಿಭೇದಗಳ, ಮೇಲುಕೀಳುಗಳ ಭಾವನೆಗಳನ್ನು ಕಿತ್ತೆಸೆದು ಶರಣರೆಲ್ಲ ಒಂದೇ ಎಂಬ ವಾದವನ್ನು ಪ್ರತಿಪಾದಿಸಿ, 'ಅಸ್ಪೃಶ್ಯ' ಜಾತಿಯ ತರುಣನ ಜೊತೆ ಬ್ರಾಹ್ಮಣ ತರುಣಿಯೋರ್ವಳ ವಿವಾಹ ಏರ್ಪಡಿಸಲಾಗಿ ಸಂಪ್ರದಾಯ ಶರಣರು ಬಿಜ್ಜಳನಲ್ಲಿ ದೂರಿಟ್ಟು ವರ್ಣಾಶ್ರಮಧರ್ಮ ರಕ್ಷಣೆ ಅರಸನ ಕರ್ತವ್ಯವೆಂದು ಒತ್ತಾಯ ಮಾಡಿದಾಗ ಮದುವೆ ನಡೆಸಿದ ವಧೂವರರ ತಂದೆ ಹರಳಯ್ಯ ಹಾಗೂ ಮಧುವಯ್ಯರಿಗೆ ಬಿಜ್ಜಳನು ಮರಣದಂಡನೆ ನೀಡಿದನು. ಇದರಿಂದ ನೊಂದ ಬಸವಣ್ಣನವರು ರಾಜಧಾನಿ ತ್ಯಜಿಸಿ ಕಪ್ಪಡಿ (ಕೂಡಲ) ಸಂಗಮಕ್ಕೆ ತೆರಳಿದರು. ಕಲ್ಯಾಣದಲ್ಲಿ ಭಾರೀ ಕೋಲಾಹಲವಾಗಿ ಬಿಜ್ಜಳನ ಕೊಲೆಯಾಯಿತು. ಇದನ್ನು ನೆಪವಾಗಿ ಮಾಡಿ ಕಲ್ಯಾಣದಲ್ಲಿ ಸತ್ತೆಯ ಪ್ರೇರಣೆಯಿಂದ ಶರಣರ ಬೇಟೆ ಆರಂಭ ಆಗಲು ಶರಣರು ಕಲ್ಯಾಣ ಬಿಟ್ಟು ದೂರದೂರುಗಳಿಗೆ ವಲಸೆ ಹೋದರು. ಆಗ ಬಸವಣ್ಣನವರ ಸೋದರಳಿಯ ಚನ್ನಬಸವಣ್ಣ ಹಾಗೂ ಸೋದರಿ ಅಕ್ಕನಾಗಮ್ಮ ಬೆಳಗಾವಿ ಜಿಲ್ಲೆಯ ದಾರಿಯಾಗಿ ಉಳವಿಗೆ ಹೋಗಲು ಧಾರವಾಡ, ಸತ್ತೂರು, ಹುಬ್ಬಳ್ಳಿ, ಅದರಗುಂಚಿಗಳ ಮಾರ್ಗವಾಗಿ ಸಾಂಬ್ರಾಣಿ (ಉ.ಕ.ಜಿಲ್ಲೆ)ಗೆ ಸಾಗಿದರೆಂದು ಉಲ್ಲೇಖವಿದೆ. ಇವರ ಪ್ರಯಾಣದ ಪರಿಣಾಮ ಧಾರವಾಡ ಜಿಲ್ಲೆಯಲ್ಲಿ ಆಗದೇ ಇರಲಿಲ್ಲ, ಧಾರವಾಡದ ಉಳವಿ ಬಸವೇಶ್ವರ ದೇವಾಲಯ ಇರುವ ಸ್ಥಳದಲ್ಲಿ ಇವರು ತಂಗಿದ್ದರೆಂದು ನಂಬುಗೆ.

ಬಿಜ್ಜಳನು ತಾನು ಜೀವಂತವಿದ್ದಾಗಲೇ 1167ರಲ್ಲಿ ತನ್ನ ಹಿರಿಮಗ ಸೋವಿದೇವನಿಗೆ ಅಧಿಕಾರವಿತ್ತಿದನು. ಆದರೆ ಸೋವಿದೇವನ (1167-1172)ಚಿಕ್ಕಪ್ಪ ಮೈಲುಗಿ ಹಾಗೂ ಬಿಜ್ಜಳನ ಮೊಮ್ಮಗ (ಮಗ ವಜ್ರದೇವನ ಮಗ) ಕಲಿದೇವ ಅಥವಾ ಕರ್ಣ ಸೋವಿದೇವನ ಅಧಿಕಾರವನ್ನು ಪ್ರಶ್ನಿಸಿ ಅಂತರ್ಯುದ್ಧಕ್ಕೆ ಕಾರಣರಾದರು. ಸೋವಿದೇವನ ಕಾಲದ ವೀರಗಲ್ಲೊಂದು ಅವನ ಆಡಳಿತದ ಮೂರನೇಯ ವರ್ಷದ್ದಾಗಿದ್ದು ಹಂದಲಗಿ (ಹಂದಣಗೆ) ಊರಲ್ಲಿದೆ. ನಿಡಗುಂದಿಯ ತ್ರೈಪುರುಷ ದೇವಾಲಯದ ನಾರಾಯಣ ದೇವರಿಗೆ (1171) ಸಿರಿಯಾದೇವಿ ಪುನರ್ದತ್ತಿ ನೀಡಿದ ಕಾರ್ಯ ಸೋವಿದೇವನ ಆಳ್ವಿಕೆಯಲ್ಲಿ ಆಯಿತು. ಅಣ್ಣಿಗೇರಿಯಲ್ಲಿ ನಾಗಗಾವುಂಡನೆಂಬ ಅಧಿಕಾರಿ ನಾಗೇಶ್ವರ ದೇವಾಲಯ ನಿರ್ಮಿಸಿದ ಉಲ್ಲೇಖದಲ್ಲಿ (1173) ಸೋವಿದೇವನ ಹೆಸರಿದೆ. ಕಣವಿಯಲ್ಲಿ ಚೌಡನಾಯಕನೆಂಬ ಸೇನಾನಿ 1173 ರಲ್ಲಿ ಆ ಊರ ಮೂಲಸ್ಥಾನ ದೇವರಿಗೆ ದಾನನೀಡಿದ ದಾಖಲೆ ಇದೆ.

ಯಲಬುರ್ಗಿಯ ಸಿಂದ ಬೊಪ್ಪರಸ ಅಬ್ಬಿಗೇರಿಯ ಗುಪ್ಪೇಶ್ವರ ದೇವರಿಗೆ ನೀಡಿದ ದಾನದಲ್ಲಿ (1174) ಸೋವಿದೇವನ ಉಲ್ಲೇಖವಿದೆ. ಅಂತರ್ಯುದ್ಧದಿಂದ ಕುಗ್ಗಿದ ಸಾಮ್ರಾಜ್ಯಕ್ಕೆ ಬಿಜ್ಜಳನ ಇನ್ನೊಬ್ಬ ಮಗ ಮಲ್ಲುಗಿ (ಮಲ್ಲಿಕಾರ್ಜುನ) 1176 ರಲ್ಲಿ ಉತ್ತರಾಧಿಕಾರಿಯಾದ. ಆದರೆ ಅಂತರ್ಯುದ್ಧವಾಗಿ ಮುಂದೆ 1180 ರ ಸುಮಾರಿಗೆ ಅವನ ತಮ್ಮ ಸಂಕಮನಿಗೆ ಪಟ್ಟವಾಯಿತು. ಮಲ್ಲುಗಿಯ ಯಾವುದೇ ಶಾಸನ ಧಾರವಾಡ ಜಿಲ್ಲೆಯಲ್ಲಿ ಇಲ್ಲ. 1176 ರ ನಂತರ ಅವನ ಶಾಸನಗಳೇ ಕಾಣಬರುವುದಿಲ್ಲವೆಂದು ಡಾ|| ಪಿ.ಬಿ. ದೇಸಾಯಿ ಹೇಳಿದ್ದಾರೆ. ಸಂಕಮನು 1178 ರ ವೇಳೆಗೆ ಧಾರವಾಡ ಜಿಲ್ಲಾ ಪ್ರದೇಶದ ಮೇಲೆ ಅಧಿಕಾರ ಹೊಂದಿದ್ದ. ಗೆಜ್ಜೆಹಳ್ಳಿ (ತಾ||ಹಾನಗಲ್) ತಂತ್ರಪಾಲ ಬಲ್ಲರಸನು ತೈಲೇಶ್ವರ ದೇವರಿಗೆ 1178 ರಲ್ಲಿ ದಾನನೀಡಿದ ಶಾಸನವಿದೆ. ಅದೇ ರೀತಿ ಸಂಕಮನನ್ನು ಉಲ್ಲೇಖಿಸುವ ಯಲಬುರ್ಗಿಯ ಸಿಂದ ವಿಕ್ರಮಾದಿತ್ಯನ ರೋಣದ ಎರಡು ದೇವಾಲಯಗಳಿಗೆ ನೀಡಿದ ದಾನ ಶಾಸನ 1179 ರದು. ಸೂಡಿಯ ಸಿಂದರ ಒಂದು ಶಾಸನದಲ್ಲೂ ಸಂಕಮನ ಉಲ್ಲೇಖವಿದ್ದು ನರೇಗಲ್‌ನಲ್ಲಿ ಮಹಾಪ್ರಧಾನ ಕೇಶವಯ್ಯ ಕೇದಾರ ದೇವರಿಗೆ ನೀಡಿದ ದಾನದಲ್ಲೂ ಸಂಕಮನನ್ನು ಚಕ್ರವರ್ತಿಯೆಂದು 1180 ರಲ್ಲಿ ಹೇಳಿದೆ. ಸಂಕಮನ ನಂತರ ಪಟ್ಟವೇರಿದ ಅವನ ಸೋದರ ಆಹವಮಲ್ಲ 1183 ರವರೆಗೆ ಆಳಿದ. ಅವನ ಒಂದು ತಾಮ್ರಪಟ ಮಾತ್ರ 1182 ರದಿದ್ದು ರಾಯಾಪುರದಲ್ಲಿ ಒಬ್ಬ ಅಧಿಕಾರಿ (ಉದಯಗಾವುಂಡ) ಕಲಿದೇವರಿಗೆ ನೀಡಿದ ಭೂದಾನದ ಉಲ್ಲೇಖವಿದೆ. ಅಲ್ಲದೆ 1181 ರ ಹರಳಹಳ್ಳಿ (ಹಾವೇರಿ ತಾ||) ಶಾಸನದಲ್ಲಿ ಅವನ ಅಧಿಕಾರಿ ಜೋಯಿದೇವರಸನು ಮಾಡಿದ ದಾನಗಳ ಉಲ್ಲೇಖವಿದೆ. ಇದಲ್ಲದೆ ಕಲಕೇರಿ (ಹಾನಗಲ್ ತಾ||) ಶಾಸನದಲ್ಲಿ ಆಹವಮಲ್ಲನ ಕಾಲದಲ್ಲಿ 1183 ರ ಸುಮಾರಿಗೆ ಆತನ ವಿರುದ್ಧ ರಟ್ಟೆಹಳ್ಳಿಯಲ್ಲಿ ಒಂದು ಯುದ್ಧ ನಡೆದಂತಿದೆ. ಅವನ ನಂತರ ಒಂದೇ ವರ್ಷ ಆಳಿದ ಅವನ ಸೋದರ (ಬಿಜ್ಜಳನ ಕಿರಿಯಮಗ) ಸಿಂಘಣನ ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ಇಲ್ಲ.

ಆಗಲೇ ಧಾರವಾಡ ಜಿಲ್ಲಾ ಪ್ರದೇಶದಲ್ಲಿ ಕಾರ್ಯನಿರತನಾಗಿದ್ದ ಚಾಳುಕ್ಯ ನಾಲ್ಕನೇಯ ಸೋಮೇಶ್ವರನ ಸೇನಾನಿ ನರಸಿಂಹ ಕಲಚೂರಿ ಸಂಕಮನನ್ನು 1184 ರಲ್ಲಿ ಕೊಲ್ಲಲು ಸೋಮೇಶ್ವರನಿಗೆ ಮತ್ತೆ ಪಟ್ಟವಾಯಿತು. ಕಲಚೂರಿ ಆಹವಮಲ್ಲ ಕೆಲಕಾಲ ಸೋಮೇಶ್ವರನ ಮಾಂಡಳಿಕನಾಗಿದ್ದನೆಂದು 1184 ರ ಮಿಣಜಗಿ ಶಾಸನದ ನೆರವಿನಿಂದ ಡಾ|| ದೇಸಾಯಿ ಹೇಳಿದ್ದಾರೆ.

ಅಣ್ಣಿಗೇರಿಯೇ ಸೋಮೇಶ್ವರನ ರಾಜಧಾನಿಯಾಗಿ ಇದ್ದಂತಿದೆ. 1184 ಅವನ ಅಧಿಕಾರಿಯೊಬ್ಬ ಆ ಊರ ಬೊಮ್ಮೇಶ್ವರ ಹಾಗೂ ಇನ್ನೊಬ್ಬ ಅಧಿಕಾರಿ ಮಾಹೇಶ್ವರ ದೇವರಿಗೆ ದಾನನೀಡಿದ ಶಾಸನವಿದೆ. ಗದಗಿನ ತ್ರಿಕೂಟೇಶ್ವರ ದೇವಾಲಯಕ್ಕೆ 1186 ರಲ್ಲಿ ನೀಡಿದ ದಾನದಲ್ಲೂ ಸೋಮೇಶ್ವರನ ಉಲ್ಲೇಖವಿದೆ. 1189ರಲ್ಲಿ ಹೊಂಬಳದ ಬೊಂತೇಶ್ವರ ದೇವರಿಗೆ ರುದ್ರಶಕ್ತಿ ದೇವನು ನೀಡಿದ ದಾನದಲ್ಲೂ ಈತನ ಉಲ್ಲೇಖವಿದೆ. ಆದರೆ ಆಗಲೇ ಪೂರ್ತಿ ದುರ್ಬಲವಾಗಿದ್ದ ಚಾಳುಕ್ಯ ಸತ್ತೆಯನ್ನು ಬಂಡೇಳುತ್ತಿರುವ ಪ್ರಭು ಮಾಂಡಳಿಕರಾದ ಸೇಉಣ (ಯಾದವ), ಕಾಕತೀಯ ಹಾಗೂ ಹೊಯ್ಸಳರ ಆಕ್ರಮಣಗಳಿಂದ ರಕ್ಷಿಸುವಂತಿರಲಿಲ್ಲ. 1189 ರಲ್ಲಿ ಸೋಮೇಶ್ವರನು ಅಧಿಕಾರ ಕಳೆದುಕೊಂಡು ಗೋವೆಯ ಕದಂಬರ ಆಸರೆಯಲ್ಲಿ ನಾಮಮಾತ್ರ ಚಕ್ರವರ್ತಿಯಾಗಿ ಉಳಿದ. ಕಲ್ಯಾಣವನ್ನು ಸೇಉಣರು ಗೆದ್ದರು. ಯಲಬುರ್ಗಿ ಸಿಂದ ಮತ್ತು ಗೋವೆ ಕದಂಬರ ಬೆಂಬಲಪಡೆದ ಸೋಮೇಶ್ವರನು ಧಾರವಾಡ ಜಿಲ್ಲೆಯ ಶಾಸನಗಳಲ್ಲಿ 1189 ರ ನಂತರವೂ ಸಿಂದ ಮತ್ತು ಕದಂಬರಿಂದ ಉಲ್ಲೇಖಿತನಾಗಿದ್ದಾನೆ. ಇದರಲ್ಲಿ ಮನಗುಂಡಿ (ಧಾರವಾಡ ತಾ||)ಯಲ್ಲೇ 1203 ರಿಂದ 1215 ರವರೆಗಿನ ನಾಲ್ಕು ಶಾಸನಗಳಿವೆ. 1225 ರ ವರೆಗೂ ಅವನು ಗೋವೆಯ ಕದಂಬರ ನೆರವಿನಿಂದ ಬದುಕಿದ್ದನೆಂದು ಡಾ|| ಗೋಪಾಲ್ ಹೇಳಿದ್ದಾರೆ.

ಜಿಲ್ಲೆಯಲ್ಲಿ ಚಾಲುಕ್ಯರ ಮುಖ್ಯ ಪ್ರಾಂತಗಳೆಂದರೆ ಬೆಳವಲ- 300(ಅಣ್ಣಿಗೇರಿ ಕೇಂದ್ರ), ಪುಲಿಗೆರೆ -300(ಲಕ್ಷ್ಮೇಶ್ವರ ಕೇಂದ್ರ), ಕುಂದೂರು-1000 (ನರೇಂದ್ರ ಕೇಂದ್ರ), ಪಾನುಂಗಲ್ 500 (ಹಾನಗಲ್ ಕೇಂದ್ರ), ಮಾಸವಾಡಿ -140(ಡಂಬಳ ಕೇಂದ್ರ) ಹಾಗೂ ಬಾಸವೂರು- 140(ಬಾಸ್ಯೂರು ಕೇಂದ್ರ) ಮತ್ತು ಬನವಾಸಿ -12,000 ಕ್ಕೆ ಸೇರಿದ (ಇದಕ್ಕೆ ಶಿವಮೊಗ್ಗ ಜಿಲ್ಲೆಯ ಬೆಳ್ಗಾವಿ ಅಥವಾ ಬಳ್ಳಿಗಾಂವೆ ಕೇಂದ್ರ), ರಟ್ಟಪಳ್ಳಿ- 70 (ರಟ್ಟೀಹಳ್ಳಿ), ಇಟ್ಟಿಗೆ-30 (ಇಟಗಿ), ಬೆಲುಹುಗೆ-70 (ಬೆಳವಿಗಿ), ಹೊನ್ನವತ್ತಿ-12 (ಹೊನ್ನತ್ತಿ), ಬೆಣ್ಣೆವೂರು-12 (ಮೋಟೆಬೆನ್ನೂರು), ಬಿನ್ನವೂರು-12 (ರಾಣೆಬೆನ್ನೂರು) ಮುಂತಾದ ಉಪ ವಿಭಾಗಗಳು ಮುಖ್ಯವಾದವು.

ಚಾಲುಕ್ಯರ ಕಾಲದಲ್ಲಿ ಕಟ್ಟಿದ ಅಥವಾ ದುರಸ್ತಿ ಮಾಡಿದ ಕೆರೆಗಳು, ನಿರ್ಮಿಸಿದ ದೇವಾಲಯಗಳು ಹಾಗೂ ಸ್ಥಾಪಿಸಿದ ಅಗ್ರಹಾರಗಳು ಹಿಂದಿಗಿಂತಲೂ ಹೆಚ್ಚಾಗಿದ್ದು ಜಿಲ್ಲೆಯ ಸರ್ವತೋಮುಖ ಪ್ರಗತಿಗೆ ಹಾದಿಮಾಡಿದವೆಂಬುದು ನಿರ್ವಿವಾದ. ಮತ್ತು ಆಡಳಿತದ ಬಗ್ಗೆ ಹಿಂದಿಗಿಂತಲೂ ಹೆಚ್ಚು ವಿವರಗಳು ಶಾಸನಗಳಿಂದ ದೊರೆಯುತ್ತಿದ್ದು ಈ ವಿಶಾಲ ಸಾಮ್ರಾಜ್ಯವು ಜನರ ವಿತ್ತ ಜೀವಿತಗಳ ರಕ್ಷಣೆಗೆ ಅವಕಾಶ ನೀಡಿತು. ಅವರ ಕಾಲದಲ್ಲಿ ಧಾರವಾಡ ಜಿಲ್ಲೆಯ ಪ್ರದೇಶದಲ್ಲಿದ್ದ ಮಾಂಡಳಿಕರಲ್ಲಿ ಮುಖ್ಯರು ಗುತ್ತಲದ ಗುತ್ತರು, ಹಾನಗಲ್‌ನ ಹಾಗೂ ಗೋವೆಯ ಕದಂಬರು ಮತ್ತು ಯೆಲ್ಬುರ್ಗಿಯ (ಯೆರಂಬರಗೆ, ಈಗ ರಾಯಚೂರು ಜಿಲ್ಲೆಯಲ್ಲಿದೆ) ಸಿಂದರು.

**ಹಾನಗಲ್ ಕದಂಬರು**

ಜಿಲ್ಲೆಯಲ್ಲಿದ್ದ ಕಲ್ಯಾಣ ಚಾಲುಕ್ಯ ಮಾಂಡಳಿಕರಲ್ಲಿ ಹಾನಗಲ್ ಕದಂಬರು ಗಣ್ಯರು. ಆರಂಭದಲ್ಲಿ ರಾಷ್ಟ್ರಕೂಟರ ಕಾಲದಲ್ಲೇ ಬನವಾಸಿಯಿಂದ ಆಳುತ್ತಿದ್ದ ಇವರು, ಮುಂದೆ ಬನವಾಸಿ-12,000 ಪ್ರಾಂತಕ್ಕೆ ಇವರ ಮೇಲೆ ಅಧಿಕಾರ ಚಲಾಯಿಸಲು ಒಬ್ಬ ಪ್ರತ್ಯೇಕ ಮಂಡಲೇಶ್ವರನನ್ನು ಬಳ್ಳಿಗಾಂವೆ (ಶಿವಮೊಗ್ಗ ಜಿ॥)ಯಿಂದ ನೇಮಿಸಿದಾಗ, ಅದಕ್ಕೆ ಒಳಪಟ್ಟ ಪಾನುಂಗಲ್ -500ರ ಮೇಲೆ ಇದರ ಹೆಚ್ಚಿನ ಅಧಿಕಾರ ಹೊಂದಿದರು.

ಬನವಾಸಿ ಕದಂಬರ ಉತ್ತರಾಧಿಕಾರಿಗಳು ತಾವೆಂದು ಕರೆದುಕೊಂಡ ಇವರು ಬನವಾಸಿಯಿಂದಲೇ ಮೊದಲು ಆಳುತ್ತಿದ್ದು ಚಟ್ಟಯದೇವ ಎಂಬಾತನು 869 ರಲ್ಲಿ ರಾಷ್ಟ್ರಕೂಟರ ಮಾಂಡಳಿಕನಾಗಿ ಆಳುತ್ತಿದ್ದ ಮೊದಲ ಶಾಸನ ಉತ್ತರ ಕನ್ನಡದ ಸೋಮನಹಳ್ಳಿಯಲ್ಲಿದೆ (969). ತಾನು ಬನವಾಸಿ-12,000 ಮತ್ತು ಸಾಂತಳಿಗೆ-1000 (ಶಿವಮೊಗ್ಗ ಜಿ॥ಹುಂಚದ ಪರಿಸರ)ಗಳನ್ನು ಆಳುತ್ತಿದ್ದುದಾಗಿ ಈತನು ಹೇಳಿದ್ದು ಶಿರಸಿ ಬಳಿಯ ಯಿಸಳೆಯಲ್ಲಿ ಈತನ ನಾಲ್ಕು ಶಾಸನಗಳಿವೆ. ಆ ಪೈಕಿ ಒಂದು ಚಾಳುಕ್ಯ ಎರಡನೇಯ ತೈಲನ ಮಾಂಡಲಿಕ ತಾನೆಂದು ಹೇಳಿಕೊಳ್ಳುತ್ತದೆ (982). ಅಲ್ಲದೆ 1006ರ ದೇವತೆಮನೆ ಶಾಸನದಲ್ಲಿ ತಾನು ಚಾಳುಕ್ಯ ಸತ್ಯಾಶ್ರಯನ ಅಧೀನನೆಂದೂ ಹೇಳಿದೆ. ಸತ್ಯಾಶ್ರಯನು ತನ್ನ ಅಳಿಯ (ಪಂಪಾದೇವಿಯ ಗಂಡ) ಕುಂದಮರಸನನ್ನು ಬನವಾಸಿ ಪ್ರಾಂತದ ಮಾಂಡಳಿಕನಾಗಿ ನೇಮಿಸಲು ಈತನು ಅವನ ಅಧೀನನಾಗಿ ಇದ್ದ.

ಚಾಳುಕ್ಯ ಎರಡನೇಯ ಜಯಸಿಂಹನ ಕಾಲದಲ್ಲಿ ರಾಜಧಾನಿ ಮಳಖೇಡದ ಮೇಲೆ ಭಾರೀ ದಾಳಿಯಾದಾಗ ಇವನು ಚಾಳುಕ್ಯರಿಗೆ ನೆರವಾಗಿ 'ಕಟಕದ ಗೋವ' (1015) ಎಂಬ ಬಿರುದು ಪಡೆದ.

ಇವನ ಮಗ ಜಯಸಿಂಹನ ಹೆಸರನ್ನು ಶಾಸನಗಳಿಂದ ತಿಳಿದರೂ ಅವನು ಈ ಪ್ರದೇಶದಲ್ಲಿ ಆಳಿದಂತೆ ಇಲ್ಲ. ಸುಮಾರು 60 ವರ್ಷಕಾಲ ಈ ವಂಶದ ಬಗ್ಗೆ ಯಾವುದೇ ಮಾಹಿತಿ ಸಿಗದು. ಬಂಕಾಪುರದ ಕದಂಬರೆಂಬ ಇನ್ನೊಂದು ಶಾಖೆಯವರು ಆಗ ಹಾನಗಲ್ ಬನವಾಸಿಗಳನ್ನು ಆಳುತ್ತಿದ್ದರೆಂದು ಡಾ॥ ಬಿ.ಆರ್. ಗೋಪಾಲರು ಹೇಳಿದ್ದಾರೆ.

ಮುಂದೆ ಚಟ್ಟಯ್ಯನ ಮಗ ಜಯಸಿಂಹನ ಐದು ಮಕ್ಕಳಲ್ಲಿ ಒಬ್ಬನಾದ ಮಾವುಲಿಯ ಮಗ ಕೀರ್ತಿವರ್ಮನು ಬನವಾಸಿ, ಹಾನಗಲ್‌ಗಳನ್ನು 1068 ರಿಂದ 1071 ರವರೆಗೆ ಆಳಿದ. ಎರಡನೇಯ ಸೋಮೇಶ್ವರನ ಕಾಲದಲ್ಲಿ ನಡೆದ ಇವನ ಆಡಳಿತ ಕಾಲದಲ್ಲಿ ಈತನು ತನ್ನ ಅಣ್ಣನ ವಿರುದ್ಧ ಬಂಡಾಯ ಹೂಡಿದ ಆರನೇಯ ವಿಕ್ರಮಾದಿತ್ಯನಿಗೆ ನೆರವಾದನು. ಇವನ ಜೊತೆ ಇವನ ಸೋದರ ಎರಡನೇಯ ಚಟ್ಟಿಯು ಜಂಟಿ ಅರಸನಾಗಿದ್ದ. ಆದರೆ ವಿಕ್ರಮಾದಿತ್ಯನಿಗೆ ನೆರವಾದ ಕೀರ್ತಿವರ್ಮನನ್ನು ಶಿಕ್ಷಿಸಲು ಎರಡನೇಯ

ಸೋಮೇಶ್ವರನು ದಂಡನ್ನು ಕಳುಹಿಸಲು ಕೀರ್ತಿವರ್ಮನ ಇನ್ನೊಬ್ಬ ಸೋದರ ತೈಲನೂ ಇವನಿಗೆ ಎದುರು ಬಿದ್ದು ಶಿರಸಿಯಲ್ಲಿ ಯುದ್ಧವಾಗಿ ಕೀರ್ತಿವರ್ಮನು ಸೋತು(1071) ಬನವಾಸಿಗೆ ತನ್ನ ಅಧಿಕಾರ ಮಿತಗೊಳಿಸಿದ.

ಆರನೇಯ ವಿಕ್ರಮಾದಿತ್ಯನು ಮುಂದೆ 1075 ರಲ್ಲಿ ತೈಲನ ಚಿಕ್ಕಪ್ಪ (ಜಯಂಹನ ಇನ್ನೊಬ್ಬ ಮಗ) ಶಾಂತಯದೇವನಿಗೆ ಅಧಿಕಾರ ಒಪ್ಪಿಸಿದ (ನೀರಲಗಿ ಶಾಸನ). ಇವನ ಜೊತೆ ಇವನ ಮಗ ಎರಡನೇಯ ತೈಲನು ಬನವಾಸಿ, ಹಾನಗಲ್ಲುಗಳನ್ನು ಆಳುತ್ತಿದ್ದನು. ಶಾಂತಯ ಅಥವಾ ಶಾಂತಿವರ್ಮ ಮುಂದೆ ಬಂಕಾಪುರದಲ್ಲಿ ಇರುತ್ತಿದ್ದ. 1090 ರಿಂದ ತೈಲನು ಒಬ್ಬನೇ ಆಳಲಾರಂಭಿಸಿದ. ಈತನ ಕಾಲದಲ್ಲಿ ದಂಡನಾಯಕಿತಿ ಮಲ್ಲಿಯಕ್ಕ ಕರಗುದರಿಯಲ್ಲಿ ತ್ರೈಪುರುಷ ದೇವಾಲಯ ಪ್ರತಿಷ್ಠೆ ಮಾಡಿದಳು (1108-9). ಈ ಶಾಸನದಲ್ಲಿ ಈತನ ರಾಣಿ ಬಾಚಲದೇವಿಯ ಹೆಸರಿದೆ. ಅರಳೇಶ್ವರದಲ್ಲಿ ಈತನ ಅಧೀನಾಧಿಕಾರಿ ಎಡವೊಳಲ್-70ರ ರಾಮಸಿಂಗಿಪಂಡಿತ ಅಲ್ಲಿನ ದೇವಾಲಯ ಕದಂಬೇಶ್ವರವನ್ನು ವಿಸ್ತರಿಸಿದ. 1103 ರಲ್ಲಿ ಗೆಜ್ಜಿಹಳ್ಳಿ ಶಿವಾಲಯಕ್ಕೆ ಬೊಪ್ಪಗಾವುಂಡನು ದಾನ ನೀಡಿದ ಉಲ್ಲೇಖವಿದೆ. ಹಾನಗಲ್ ತಾ॥ನರೇಗಲ್‌ನಲ್ಲಿ ಮಹಾಪ್ರಭು ಕಪ್ಪಿಮಯ್ಯ ಎಂಬ ಅಧಿಕಾರಿ ಅಲ್ಲಿ ಈಶ್ವರ ದೇವಾಲಯ ನಿರ್ಮಿಸಿದ. ಮಂತಗಿಯಲ್ಲಿನ ಸೋಮೇಶ್ವರ ದೇವಾಲಯಕ್ಕೆ 'ಮಂತಗೆ ಸಾಸಿರ್ವರೂ ಆರ್ವತೊಕ್ಕಲೂ' ಚಿನ್ನ, ಭೂದಾನ ನೀಡಿದ್ದ ಈತನ ಕಾಲದ ಇನ್ನೊಂದು ಶಾಸನವಿದೆ. ಸುರಳೇಶ್ವರ ಊರಲ್ಲಿ ಈತನೇ ಚಿಕ್ಕೇಶ್ವರ ದೇವಾಲಯ ಕಟ್ಟಿಸಿದ್ದಾನೆ. ಈತನ ಮಹಾ ಪ್ರಧಾನ ಮಸಣನು 1121 ರಲ್ಲಿ ಹಾನಗಲ್‌ನಲ್ಲಿ ತೈಲೇಶ್ವರ ದೇವಾಲಯವನ್ನು ಈತನ ಹೆಸರಲ್ಲೇ ಕಟ್ಟಿಸಿದ್ದು ಅದೇ ಈಗಿನ ಖ್ಯಾತ ತಾರಕೇಶ್ವರವಾಗಿರಬೇಕು. ಅದೇ ದೇವಾಲಯದ ಎದುರಿಗೆ ಶಾಸನವಿದ್ದು, ಅದೇ ದೇವಾಲಯದ ಹೊರಮಗ್ಗುಲ ಸಮಕಾಲೀನ ಶಾಸನದಲ್ಲಿ ತಾರಕೇಶ್ವರ ಎಂದೇ ದೇವಾಲಯಕ್ಕೆ ನೀಡಿದ ದತ್ತಿಯಲ್ಲಿ ಉಲ್ಲೇಖವಿದೆ. ನರೇಗಲ್ (ಹಾನಗಲ್ ತಾ॥)ನಲ್ಲಿ ದಾಸಿಮಯ್ಯ ಎಂಬಾತ ಸೂರ್ಯ ದೇವಾಲಯ ಕಟ್ಟಿಸಿದ ಶಾಸನ (1126)ವಿದೆ.

ಈತನ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನನು ಸಾಮ್ರಾಜ್ಯದ ಮೇಲೆ ಒತ್ತುವರಿ ನಡೆಸಿ ತುಂಗಭದ್ರೆಯನ್ನು ದಾಟಿಬರುತ್ತಿರಲು ಹೊಯ್ಸಳನನ್ನು ಈತನು ಪ್ರತಿಭಟಿಸಿದ್ದರ ಪ್ರತಿಧ್ವನಿಯು ಹಾನಗಲ್ಲು, ಮಲ್ಲಿಗಾರ, ಹಾವಣಗಿಗಳ ವೀರಗಲ್ಲುಗಳಲ್ಲಿ ಕಂಡುಬಂದಿದೆ. ತೈಲನ ನಂತರ ಅವನ ಮಕ್ಕಳಾದ ಮಯೂರವರ್ಮ (1030-32), ಮಲ್ಲಿಕಾರ್ಜುನ (ಸು.1132 ರಿಂದ 46) ಹಾಗೂ ಮೂರನೇಯ ತೈಲ (ಸು.1147-48), ಇವರು ಆಳಿದರು. ಮುಂದೆ ಮೂರನೇಯ ತೈಲನ ಮಕ್ಕಳಾದ ಮಾವುಲಿತೈಲ (1152), ಎರಡನೇಯ ಕೀರ್ತಿವರ್ಮ (1161 ರಿಂದ 78) ಹಾಗೂ ಕಾಮದೇವ (1180 ರಿಂದ 1217) ಇವರುಗಳು ಅನುಕ್ರಮವಾಗಿ ಆಳಿದರು. ಈ ಕೀರ್ತಿವರ್ಮನ ಎರಡು ದಾನಶಾಸನಗಳೂ ಬಂಕಾಪುರದಲ್ಲಿವೆ. ಮಯೂರವರ್ಮ ಹಾಗೂ ಮಲ್ಲಿಕಾರ್ಜುನರು ಹೊಯ್ಸಳ ವಿಷ್ಣುವರ್ಧನನ ದಾಳಿಯನ್ನು ಎದುರಿಸುವಲ್ಲಿ ತುಂಬಾ ಶ್ರಮಪಡಬೇಕಾಯಿತು. ಮಯೂರವರ್ಮನು ಲೊಕ್ಕಿಗುಂಡಿವರೆಗೂ ಹೋಗಿ ಹೊಯ್ಸಳ ಸೈನ್ಯವನ್ನು ಎದುರಿಸಿದಂತಿದೆ. ಇದೇ ಕಾಲದಲ್ಲಿ 1141 ರಲ್ಲಿ ಹೊಯ್ಸಳ ವಿಷ್ಣುವರ್ಧನನು ಬಂಕಾಪುರದಲ್ಲಿ ತೀರಿಕೊಂಡ.

ಮಯೂರವರ್ಮನು ಅವನ ತಂದೆಯ ಕಾಲದಲ್ಲೇ ಜಂಟಿ ಅರಸನಾಗಿದ್ದು, ಗೋವಿಂದದೇವ ಎಂಬಾತನು ನರೇಗಲ್ ಅನ್ನು ಈತನ ಸಾನ್ನಿಧ್ಯದಲ್ಲಿ 1125 ರಲ್ಲಿ ಮೂಲ ಸ್ಥಾನ ದೇವರಿಗೆ ದತ್ತಿಬಿಟ್ಟ ವಿಚಾರವಿದೆ.

ಇವರ ಕಾಲದಲ್ಲಿ ಹೊಯ್ಸಳರ ದಾಳಿ, ಕಲಚೂರಿನ ಬಂಡಾಯ, ಮುಂದೆ ಚಾಳುಕ್ಯರ ಪತನ ಹಾಗೂ ಸೇಉಣರ ಏಳ್ಗೆಯ ಸನ್ನಿವೇಶಗಳು ನಡೆದು ಇವರ ರಾಜ್ಯ ರಣರಂಗವೇ ಆಗಿತ್ತು. ಎರಡನೇಯ ಕೀರ್ತಿವರ್ಮನು ಕಲಚೂರಿಗಳ ಅಧೀನತ್ವವನ್ನು ಒಪ್ಪಿಕೊಂಡನು. ಅದೇ ಕಾಲಕ್ಕೆ ಅವನು ಹೊಯ್ಸಳರ ದಾಳಿಯನ್ನು ಎದುರಿಸಿದನು. ಆಗ ಕಮ್ಮಾರ ಬೋಕೋಜ ಹಾಗೂ ಸಮಗಾರ ಬಮ್ಮಣ ಎಂಬುವರು ಕಾದಿಮಡಿದ ಶಾಸನಗಳು ಬಾಳೇಹಳ್ಳಿಯಲ್ಲಿ ಇವೆ (1163). ಕೀರ್ತಿವರ್ಮನ ಸೋದರ ಕಾಮದೇವನ ಕಾಲದಲ್ಲಿ ಹಾನಗಲ್‌ನ ನಡೆದ ಹೊಯ್ಸಳ ಬಲ್ಲಾಳನ ಮುತ್ತಿಗೆಯ ಕಾಲದಲ್ಲಿ ಮಡಿದವರ ಬಗ್ಗೆ ಮೂರು ವೀರಗಲ್ಲುಗಳಿವೆ (1196). ಕಾಮದೇವನ ನಂತರ ಅವನ ಮಗ ಮಲ್ಲ ಅಥವಾ ಮಲ್ಲದೇವ ಎಂಬಾತನು 1217 ರಿಂದ 1252 ರವರೆಗೆ ಆಳಿದನು. ಈತನು ಕೆಲಕಾಲ ಸ್ವತಂತ್ರವಾಗಿ ಆಳಿರಬಹುದು. ಆದರೆ ಮುಂದೆ ಸೇಉಣ ಸಿಂಘಣನ ಆಶ್ರಿತನಾಗಿ ಆಳಿದನು. (ಬಹುಶಃ ಈತನ ಮಗ) ಕಾಮದೇವನ ಎರಡು ಶಾಸನಗಳು ಉತ್ತರ ಕನ್ನಡದ ಪಾಳಾ (ಮುಂಡಗೋಡ್ ತಾ॥)ದಲ್ಲಿ (1282 ಮತ್ತು 1291) ದೊರಕಿವೆ. ಮುಂದೆ ಇವರ ಆಳ್ವಿಕೆ ಖಚಿತವಾಗಿ ಸ್ಪಷ್ಟ ದಾಖಲೆಗಳು ಇಲ್ಲ.

## ಗುತ್ತಲದ ಗುತ್ತರು

ಕಲ್ಯಾಣದ ಚಾಳುಕ್ಯರ ಮಾಂಡಳಿಕರಾಗಿ, ಕೆಲಕಾಲ ಸ್ವತಂತ್ರರಾಗಿ, ಮುಂದೆ ದೇವಗಿರಿಯ ಸೇಉಣರ ಮಾಂಡಳಿಕರಾಗಿ 12 ನೇಯ ಶತಮಾನದ ಆದಿಭಾಗದಿಂದ 13 ನೇಯ ಶತಮಾನ ಕೊನೆಯವರೆಗೆ ಹಾವೇರಿ ತಾಲೂಕಿನ ಗುತ್ತವೊಳಲ್ ಅಥವಾ ಗುತ್ತಲದಿಂದ ಆಳಿದ ರಾಜವಂಶ ಗುತ್ತರು. ತಮ್ಮನ್ನು ಮಗಧದ ಗುಪ್ತರ ಉತ್ತರಾಧಿಕಾರಿಗಳೆಂದೂ ಉಜ್ಜಯಿನೀಪುರವರಾಧೀಶ್ವರೆಂದು ಚಂದ್ರಗುಪ್ತಾನ್ವಯರೆಂದೂ ಕರೆದುಕೊಂಡ ಇವರ ಮೂಲ ಪುರುಷ ಮಾಗುತ್ತ (ಮಹಾಗುಪ್ತ), ಹಾಗೂ ಆತನ ಮಗ ಗುತ್ತ ಎಂದು ಅವರ ಶಾಸನಗಳು ಹೇಳಿವೆ. ಬಹುಶಃ ಈತನು ಕಲ್ಯಾಣದ ಒಂದನೇಯ ಸೋಮೇಶ್ವರನ ಕಾಲದಲ್ಲಿ ಅಧಿಕಾರ ಹೊಂದಿದ್ದು ಹಾನಗಲ್ ಕದಂಬರಿಂದ ಕೆಲವೊಂದು ಪ್ರದೇಶಗಳನ್ನು ಗೆದ್ದುಕೊಂಡಿರಬೇಕು. ಅವನ ಮಗ ಮಲ್ಲಿದೇವನೇ ಖಚಿತವಾದ ತಾರೀಕು ಉಳ್ಳ (1115) ಚೌಡದಾನಪುರ ಶಾಸನದಲ್ಲಿ ಉಲ್ಲೇಖಿತನಾದ ಅರಸುವಾಗಿದ್ದು ಈತನು ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ಮಾಂಡಳಿಕ (ಬನವಾಸಿ – 12,000ದ ಅಧಿಕಾರಿ) ಗೋವಿಂದರಸನ ಅಧೀನನಾಗಿದ್ದನೆಂದು ತಿಳಿಯುತ್ತದೆ. ಈತನು ಮಹಾವೀರನೆಂದೂ ಅನೇಕ ಯುದ್ಧಗಳನ್ನು ಗೆದ್ದವನೆಂದೂ ಶಾಸನಗಳು ಹೇಳಿದ್ದು ಇವನ ಅಧಿಕಾರಿಯಾಗಿದ್ದ ಜಟಾಚೋಳನಿಂದ ಚೌಡದಾನಪುರ ಮುಕ್ತೇಶ್ವರ ದೇವಾಲಯ ನಿರ್ಮಾಣವಾಯಿತು (1120). ನೂರುಬಾಂಡದ ಕಡಂಬ ಬೀರದೇವನನ್ನು ಇವನ ತಂಗಿ ಚಾಚಲೆ ವರಿಸಿದ್ದಳು. ಹೊನ್ನತ್ತಿ ಶಾಸನದಲ್ಲಿ ಜಟಾಚೋಡ ವಂಶದ ಅತ್ತಿರಾಜ ಎಂಬ ಇವನ ಅಧಿಕಾರಿ ನಂದಿತೀರ್ಥದಲ್ಲಿ ಶಿವಾಲಯ ರಚಿಸಿದನೆಂದು ಹೇಳಿದೆ. ಮಲ್ಲಿದೇವನ ಸೋದರ ಜೋಯಿದೇವನು ಇದೇ ಕಾಲದಲ್ಲಿ ಬೆಳುಹುಗೆ-70 (ಬೆಳವಿಗಿ), ಹೊನ್ನವತ್ತಿ- 12 ಹಾಗೂ ಬೆಣ್ಣೆಊರು-12 (ಮೋಟೆಬೆನ್ನೂರು)ಗಳ ಆಡಳಿತ ನೋಡಿಕೊಳ್ಳುತ್ತಿದ್ದ. ಮಹಾಮಂಡಲೇಶ್ವರ ಎಂದೇ ಶಾಸನಗಳು ಕರೆದಿರುವ ಜೋಯಿದೇವನ ಮಂತ್ರಿಗಳಾದ ದೇಕಣ್ಣ ಮತ್ತು ನಾಕಣ್ಣ ಎಂಬವರು ಚಾಮೇಶ್ವರ ದೇವಾಲಯಕ್ಕೆ ಪನ್ನವರ್ತಿ (ಹೊನ್ನತ್ತಿ) ಗ್ರಾಮವನ್ನು ದಾನಮಾಡಿದ ಸಂಗತಿಯೂ ಹೊನ್ನತ್ತಿ ಶಾಸನದಲ್ಲಿದೆ (1124).

ಜೋಯಿದೇವನು ಅಣ್ಣ ಮಲ್ಲಿದೇವನ ಜೊತೆ ಜಂಟಿ ಆಡಳಿತಗಾರನಿರಬಹುದು. ಅಥವಾ ಉತ್ತರಾಧಿಕಾರಿಯೂ ಆಗಿರಬಹುದು. ಅವನ ನಂತರ ಪಟ್ಟವೇರಿದವನು ಮಲ್ಲಿದೇವನ ಮಗ ಎರಡನೇಯ ವಿಕ್ರಮಾದಿತ್ಯ. ಈತನನ್ನು ಉಲ್ಲೇಖಿಸುವ ಗುತ್ತಲ ಶಾಸನ (1162) ಇವನ ರಾಜ್ಯದ ವ್ಯಾಪ್ತಿಯನ್ನು ಇವನ ಚಿಕ್ಕಪ್ಪನ ರಾಜ್ಯದಷ್ಟೇ ಆಗಿ ಹೇಳಿದ್ದು ಈತನು ಗುತ್ತಲದಲ್ಲಿ ಬಸದಿಯೊಂದಕ್ಕೆ ದಾನನೀಡಿದ ವಿವರವಿದೆ. ಯಾವುದೇ ಚಕ್ರವರ್ತಿಯ ಹೆಸರು ಶಾಸನದಲ್ಲಿಲ್ಲ, ಕಲ್ಯಾಣದಲ್ಲಿ ಅಧಿಕಾರ ಗ್ರಹಣಮಾಡಿದ್ದ ಬಿಜ್ಜಳನಿಗೆ ಮಣಿಯಲು ಅವನು ಸಿದ್ಧನಿರಲಿಲ್ಲವೆನಿಸುತ್ತದೆ. ಈತನ ಸೋದರಿ ಲಾಳಿಯದೇವಿ ನೂರುಂಬಾಡದ ಕಡಂಬ ಕೇತರಸನನ್ನು ವರಿಸಿದ್ದಳು. ಗುತ್ತಲದಲ್ಲಿ ತನ್ನ ತಾಯಿಯ ನೆನಪಿಗೆ ಪದ್ಮೇಶ್ವರ ದೇವಾಲಯ ಕಟ್ಟಿಸಿ 1190 ರಲ್ಲಿ ಈತನು ಅದಕ್ಕೆ ದಾನ ನೀಡಿದನು. ಈತನ ಸೇನಾನಿ ದಾಸರಾಜನು ಹಾವೇರಿ ತಾ॥ಹರಳಹಳ್ಳಿಯಲ್ಲಿ ದಾಸೇಶ್ವರ ದೇವಾಲಯ ಕಟ್ಟಿಸಿದನು. 1183ರಲ್ಲಿ ಕಲಚೂರಿ ಆಹವಮಲ್ಲನು ಇವನನ್ನು ಬಗ್ಗಿಸಿರಬೇಕು. ವಿಕ್ರಮಪುರ (ಹರಳಹಳ್ಳಿ) ಗ್ರಾಮ ನಿರ್ಮಿಸಿ ಜೋಯಿದೇವನು ತನ್ನ ವಂಶದವರ ಸ್ಮಾರಕವಾದ ವಿಕ್ರಮೇಶ್ವರ ಮತ್ತು ಗುತ್ತೇಶ್ವರ (ಶಿವಾಲಯಗಳು) ಮಂದಿರಗಳಿಗೆ ದಾನ ನೀಡಿದ. ಶಾಸನದಲ್ಲಿ ಆಹಮಮಲ್ಲನನ್ನು ಚಕ್ರವರ್ತಿಯೆಂದು ಉಲ್ಲೇಖಿಸಿದೆ. ಬಿದಿರಹಳ್ಳಿ-12 ಕೂಡ ಇವನ ರಾಜ್ಯಕ್ಕೆ ಸೇರಿತ್ತು. ಕಲಚೂರಿಗಳ ನಂತರ ವಿಕ್ರಮನು ಚಾಳುಕ್ಯ ನಾಲ್ಕನೇಯ ಸೋಮೇಶ್ವರನ ಬೆಂಬಲಿಗನಾಗಿ ಈತನು ಹೊಯ್ಸಳರ ವಿರುದ್ಧ ಹೋರಾಡಿದ್ದನು. ಚಾಳುಕ್ಯ ಸತ್ತೆ ಅಸ್ತಂಗತವಾದಾಗ ಸ್ವತಂತ್ರನಾದನು. ಈತನ 1214 ರ ಹರಳಹಳ್ಳಿ ಶಾಸನದಂತೆ ತನ್ನ ಮಗಳಾದ ತುಳುವಲದೇವಿಯ ನೆನಪಿಗೆ ತುಳುವಲೇಶ್ವರ ದೇವಾಲಯವನ್ನು ಆ ಊರಲ್ಲಿ ನಿರ್ಮಿಸಿದನು. ಈ ವಂಶದ ಬಗ್ಗೆ ವಿಶೇಷ ಸಂಶೋಧನೆ ಮಾಡಿದ ಡಾ॥ಜಕಿಯೂ ಅನ್ಸಾರಿಯವರು ಹೇಳುವಂತೆ ಈತ ಈ ವಂಶದಲ್ಲೇ ಪ್ರಬಲ ಅರಸನಾಗಿದ್ದು ಬನವಾಸಿ-12,000 ವನ್ನೂ ಗೆದ್ದಿದ್ದು, ನೊಳಂಬವಾಡಿ ಹಾಗೂ ಪೆರ್ಬೊಲು-70 ರ ಮೇಲೂ ಅಧಿಕಾರ ಹೊಂದಿರಬೇಕು. 1233 ರ ವರೆಗೆ ಈತನು ಆಳಿದ್ದು ಇವನ ನಂತರ ಇವನ ಮಕ್ಕಳಾದ ಮೂರನೇಯ ಜೋಯಿದೇವ ಮತ್ತು ಮೂರನೇಯ ವಿಕ್ರಮರು ರಾಜ್ಯಭಾರ ಮಾಡಿದರು. ಉಚ್ಚಂಗಿ ಪಾಂಡ್ಯ ವಂಶದ ಸೋವಲದೇವಿ ಇವನ ರಾಣಿಯರಲ್ಲಿ ಒಬ್ಬಳು. ಸಾಂತಲಿಗೆನಾಡ ಸಿಂಗಿದೇವ ಇವನ ಅಳಿಯ. ಜೋಯಿದೇವನು ಸೇಉಣ ಸಿಂಘಣನ ಸೇನಾನಿ ಬೀಚಿದೇವನಿಂದ ಸೋತು ಅವನ ಮಾಂಡಳಿಕನಾದ. ಸುಮಾರು 10 ವರ್ಷ ಆಳಿದ ಮೂರನೇಯ ವಿಕ್ರಮಾದಿತ್ಯನ ನಂತರ ಅವನ ಸೋದರ ಮೂರನೇಯ ಸೋಯಿದೇವನಿಗೆ ಸುಮಾರು 1238 ರಲ್ಲಿ ಪಟ್ಟವಾಯಿತು. ಸೇಉಣ ಕನ್ನರನ ಮಾಂಡಳಿಕನಾಗಿ ಹೆಬ್ಬಳ್ಳಿಯ 'ಕುಮಾರ ವೃತ್ತಿ' ಯನ್ನು ಇವನು ಹೊಂದಿದ್ದನೆಂದು ಹರಳಹಳ್ಳಿ ಶಾಸನ ಹೇಳುತ್ತದೆ.

ಸೇಉಣ ಕನ್ನರ ಹಾಗೂ ಮಹಾದೇವರ ಮಾಂಡಳಿಕನಾಗಿ ಮೂರನೇಯ ವಿಕ್ರಮ ಗುತ್ತನು ಸು.1259 ರಿಂದ ಆಳಿದ. ಚೌಡದಾನಪುರದ ಒಂದು ಶಾಸನದಲ್ಲಿ ಈತನ ಅಣ್ಣ ವಿಕ್ರಮ ಎಂಬಾತನ ಉಲ್ಲೇಖವಿದ್ದು ಆತನು ಆಳಿದಂತೆ ಇಲ್ಲ. ಗುತ್ತನು ಸೇಉಣರ ವಿರುದ್ಧ ಬಂಡೆದ್ದರೂ ಹತ್ತಿಕಲ್ಪಟ್ಟು, ಸಾಳುವ ತಿಕ್ಕಮನೆಂಬ ಸೇಉಣ ಸೇನಾನಿ ಈತನ ರಾಜಧಾನಿಯಲ್ಲಿ ತಂಗಿದ ಉಲ್ಲೇಖವಿದೆ. ಇವನ ನಂತರ ಇವನ ತಮ್ಮ ಜೋಯಿದೇವನ ಮಗ ವಿಕ್ರಮಾದಿತ್ಯನು ಆಳುತ್ತಿದ್ದು ಅವನ ಸತಿ ಪದುಮಲದೇವಿ ಹಿರೇಬಿದರಿಯ ಶಿವಾಲಯವೊಂದಕ್ಕೆ ದಾನಕೊಟ್ಟಿದ್ದು ಇದು ಈ ವಂಶದ ಕೊನೆಯ ಶಾಸನ. ಈತನು ತನ್ನನ್ನು "ಸ್ವಯಂಭುಗಳಗನಾಥ ದೇವರ ಪಾದ ಪದ್ಮಾರ್ಥಕ" ಎಂದು ಕರೆದುಕೊಂಡಿದ್ದಾನೆ. ಇದರಲ್ಲಿ ಸೇಉಣ ರಾಮಚಂದ್ರನ ಉಲ್ಲೇಖವಿದೆ. ಮುಂದೆ ದೆಹಲಿ ಸುಲ್ತಾನರ ಸೇನೆಯ ದಾಳಿಯಿಂದ ಈ ವಂಶ ನಾಮಶೇಷವಾಗಿರಬೇಕು.

**ನೂರುಂಬಾಡದ ಕದಂಬರು**

ತಮ್ಮ ಶಾಸನಗಳಲ್ಲಿ 'ಕದಂಬ' ಎಂದೇ ಕರೆಸಿಕೊಂಡಿರುವ ನೂರುಂಬಾಡದ ಈ ಮಾಂಡಳಿಕರು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ತಲೆಯೆತ್ತಿ ರಟ್ಟಪಳ್ಳಿ-70 (ರಟ್ಟಿಹಳ್ಳಿ) ಹಾಗೂ ಇಟ್ಟಿಗೆ-30 (ರಾಣೆಬೆನ್ನೂರು ತಾ||) ಹೀಗೆ 100 ಗ್ರಾಮಗಳನ್ನು ಒಳಗೊಂಡ ಪ್ರದೇಶ ದಲ್ಲಿ ಆಳುತ್ತಿದ್ದರು. ರಟ್ಟಿಹಳ್ಳಿ (ಹಿರೇಕೆರೂರು ತಾ||) ಇವರ ಕೇಂದ್ರ. ಚಾಳುಕ್ಯ ಸಮ್ರಾಟ ಎರಡನೇಯ ಜಯಸಿಂಹನ ಯಾವುದೋ ಶತ್ರುವನ್ನು ಸೋಲಿಸಿ ಶತ್ರುವಿನ ಒಂದು ಆನೆಯನ್ನು ವಶಪಡಿಸಿ ಅದನ್ನು ಚಕ್ರವರ್ತಿಗೆ ನೀಡಿದ್ದರಿಂದ ಈ ನೂರುಂಬಾಡದ ಆಡಳಿತವನ್ನು ಬೀರದೇವನಿಗೆ ನೀಡಲಾಯಿತೆಂದು 1174 ರ ಹಿರೇಕೆರೂರು ತಾ|| ಕಣವಿ ಸಿದ್ಧಗೇರಿ ಶಾಸನ (*ಕ.ಇ.6*, ನಂ.7)ದಿಂದ ತಿಳಿಯುತ್ತದೆ. ತಾವು ಶಾಖಾಚರೇಂದ್ರ (ಹನುಮಂತ) ಧ್ವಜರೆಂದೂ ಕದಂಬೇಶ್ವರನ ಪಾದಪದ್ಮಾರ್ಥಕರೆಂದೂ ಕರೆದುಕೊಂಡಿದ್ದು ಕದಂಬೇಶ್ವರ ಮಂದಿರವು ರಟ್ಟಿಹಳ್ಳಿಯಲ್ಲಿಯ ದೇವಾಲಯವಾಗಿದೆ. ಈ ಬೀರದೇವನ ಸೋದರ ಒಂದನೇಯ ಕೇತರಸನ ಮಗ ನಾಮರಸ, ಹಾಗೂ ಮೊಮ್ಮಗ ಎರಡನೇಯ ಕೇತರಸನ ಉಲ್ಲೇಖವಿದ್ದು ಈ ಎರಡನೇಯ ಕೇತರಸನ ಸತಿ ಅತ್ತಿಮಬ್ಬೆಯೆಂದೂ ಈತನ ಆರು ಜನ ಪುತ್ರರಲ್ಲಿ ಎರಡನೇಯ ಬೀರದೇವನು ಮುಂದೆ ಅರಸನಾದನೆಂದೂ ತಿಳಿಯುತ್ತದೆ. ಈ ಬೀರದೇವ ಸತಿ ಬಾಚಲೆ ಗುತ್ತ ಮಲ್ಲಿದೇವನ ಸೋದರಿ. ಈತ ಕಲ್ಯಾಣದ ಆರನೇಯ ವಿಕ್ರಮಾದಿತ್ಯ ಮತ್ತು ಮೂರನೇಯ ಸೋಮೇಶ್ವರನ ಮಾಂಡಳಿಕನಾಗಿದ್ದ.

ಎರಡನೇಯ ಬೀರದೇವನು ಗುತ್ತರಾಜ ಕುಮಾರಿ ಲಾಳಿಯದೇವಿಯನ್ನು (ಎರಡನೇಯ ವಿಕ್ರಮಾದಿತ್ಯನ ಸೋದರಿ) ವರಿಸಿದ್ದು ಇವನ ಮೂವರು ರಾಣಿಯರಲ್ಲಿ ಇನ್ನೊಬ್ಬಳು ಬೆಳಗುತ್ತಿ (ಶಿವಮೊಗ್ಗ ಜಿ||)ಯ ಸಿಂದವಂಶದ ದೋರಲದೇವಿಯೆಂದು ಡಾ|| ಶ್ರೀನಿವಾಸ ರಿತ್ತಿ ಊಹಿಸಿದ್ದಾರೆ.

ಈ ವಂಶದ ಪ್ರಥಮ ಉಲ್ಲೇಖವು ಚಾಳುಕ್ಯ ಇಮ್ಮಡಿ ಜಗದೇಕಮಲ್ಲನ ರಟ್ಟಿಹಳ್ಳಿ ಶಾಸನದಲ್ಲಿದ್ದು ಮೂರನೇಯ ಕೇತರಸನ ಮಂತ್ರಿಗಳಾಗಿದ್ದ ಸೋಮನಾಥ ಹಾಗೂ ಮಲ್ಲ ಇವರ ಉಲ್ಲೇಖ ಅದರಲ್ಲಿದೆ (ಕ.ಇ.6,31). ಕಣವಿ ಸಿದ್ಧಗೇರಿ ಹಾಗೂ ರಟ್ಟಿಹಳ್ಳಿಯ 1174 ರ ಶಾಸನಗಳಲ್ಲಿ ಈ ಕೇತಮಲ್ಲನ ಮಗ ಪಾಂಡ್ಯನು ಬಿಜ್ಜಳ ಸೋವಿದೇವನ ಮಾಂಡಳಿಕನೆಂದಿದೆ. ಈ ಪಾಂಡ್ಯರ ಹಡವಳ (ಸೇನಾನಿ) ಕುಮಾರ ಚೌಂಡರಸನ ಉಲ್ಲೇಖವೂ ಇದರಲ್ಲಿದ್ದು ಕದಂಬೇಶ್ವರ ದೇವರ ಸೇವೆಗೆ ಕಾಳಾಮುಖ ಪಂಥದ ಕಲ್ಯಾಣ ಪಂಡಿತರಿಗೆ ನೀಡಿದ ದಾನ ಈ ಶಾಸನದಲ್ಲಿ ದಾಖಲಾಗಿದೆ. ಇದೇ ರೀತಿ "ಭಗವತಿ ಘಟ್ಟದ ಜಮದಗ್ನಿ ರಾಮೇಶ್ವರ" ದೇವರಿಗೆ ಪಾಂಡ್ಯನೂ ಕುಮಾರ ಚೌಂಡರಸನೂ ಅದೇ ವರ್ಷ ನೀಡಿದ ದಾನಗಳ ಉಲ್ಲೇಖ ಈಗಿನ ಕಣವಿ ಸಿದ್ಧಗೇರಿಯ ಸಿದ್ಧೇಶ್ವರ ದೇವಾಲಯದಲ್ಲಿದೆ. ರಟ್ಟಿಹಳ್ಳಿಯ 1238 ರ ಶಾಸನ (*ಕ.ಇ.6*, ನಂ 44)ದಲ್ಲಿ ಪಾಂಡ್ಯನಿಗೆ ಗರುಡ ಪಾಂಡ್ಯನೆಂಬ ಸೋದರನಿದ್ದನೆಂದು ಹೇಳಿದ್ದು ಪಟ್ಟವೇರಿದ ಅವನು ಆ ಕಾಲಕ್ಕೆ ಸೇಉಣ ಸಿಂಘಣನ ಮಾಂಡಳಿಕನಾಗಿದ್ದನು. ಹೊನ್ನಬೊಮ್ಮಿ ಸೆಟ್ಟಿ ಎಂಬವನು ರಟ್ಟಿಹಟ್ಟಿ ಕದಂಬೇಶ್ವರ ದೇವಾಲಯದಲ್ಲಿ ಮಲ್ಲೇಶ್ವರ ಮತ್ತು ರಾಜೇಶ್ವರ ಲಿಂಗಗಳನ್ನು ಪ್ರತಿಷ್ಠಾಪಿಸಿ ಅವುಗಳ ಪೂಜಾದಿಗಾಗಿ ಕಾಡವೂರು ಎಂಬ ಗ್ರಾಮವನ್ನು ಕಾಳಾಮುಖ ಪಂಥದ ರಾಜಗುರು ಮೂರುಜಾವಿದೇವರಿಗೆ ಒಪ್ಪಿಸಿದ್ದನ್ನು ಶಾಸನ ಹೇಳಿದೆ. ಇಲ್ಲಿಗೆ ಮುಂದೆ ವಂಶದ ವಿವರ ತಿಳಿಯದು. ಹೊಯ್ಸಳ ಇಲ್ಲವೆ ಸೇಉಣರು ಈ ರಾಜರನ್ನು ಪದಚ್ಯುತಗೊಳಿಸಿರಬಹುದು, ಇಲ್ಲವೆ ದೆಹಲಿ ಸುಲ್ತಾನರ ದಾಳಿಯಿಂದ ಇವರು ನಾಮಶೇಷರಾಗಿರಬಹುದು. ಈ ಅರಸರು ಕಾಳಾಮುಖ ಶೈವರಾಗಿದ್ದರು.

## ಗೋವೆಯ ಕದಂಬರು

ಕೊಂಕಣದ ಶಿಲಾಹಾರರ ರಾಜ್ಯದ ಮೇಲೆ ಒತ್ತುವರಿ ನಡೆಸಿ ಮೂಲತಃ ಗೋವೆಯ ಚಂದ್ರಪುರ (ಚಾಂದೋರ್)ದಿಂದ ಆಡಳಿತ ನಡೆಸುತ್ತಿದ್ದ ಗೋವೆಯ ಕದಂಬರು ಬನವಾಸಿ ಕದಂಬರ ವಂಶಜರು ತಾವೆಂದು ಹೇಳಿಕೊಂಡಿದ್ದಾರೆ. ಸಪ್ತಕೋಟೀಶ್ವರ ಭಕ್ತನೆಂದು (ಗೋವಾದ ನಾರ್ವೆಯಲ್ಲಿರುವ ಪ್ರಸಿದ್ಧ ಕ್ಷೇತ್ರ) ಕರೆದುಕೊಂಡ ಇವರು ಮುಂದೆ ತಮ್ಮ ರಾಜಧಾನಿಯನ್ನು ಗೋಪಕ ಪಟ್ಟಣಕ್ಕೆ ಬದಲಾಯಿಸಿದರು (1049). (ಇದು ಇಂದಿನ ಪಣಜಿ ಬಳಿಯ ಹಳೇ ಗೋವೆ -ವೆಲ್ಹಾ ಗೋವಾ). ಇದು ದೊಡ್ಡ ವ್ಯಾಪಾರಿ ಕೇಂದ್ರವಾಗಿ ಬೆಳೆಯಿತು. ರಾಷ್ಟ್ರಕೂಟರ ಕಾಲದಲ್ಲಿ ಆಳಲು ಆರಂಭಿಸಿದ ಒಂದನೇಯ ಚಟ್ಟ, ಅನಂತರ ಅವರ ಮಗ ನಾಗವರ್ಮ, ಅವನ ಮೊಮ್ಮಗ ಗೂವಲದೇವ ಇವರೆಲ್ಲರ ಉಲ್ಲೇಖ ಶಾಸನಗಳಲ್ಲಿದೆ. ಗೂವಲದೇವನು ಚಾಳುಕ್ಯ ಇಮ್ಮಡಿ ತೈಲನ ಮಾಂಡಳಿಕನಾಗಿದ್ದು ಅವನ ಮಗ ಎರಡನೇಯ ಷಷ್ಠನು (1006-1072) ಕೊಂಕಣ ಶಿಲಾಹಾರರನ್ನು ನಾಮಶೇಷಗೊಳಿಸಿದನು.

ಇಮ್ಮಡಿ ಷಷ್ಠನು (ಚಟ್ಟ; ಚಟ್ಟರಸ) ಆರಂಭದಲ್ಲಿ ತನ್ನ ಹಿರಿಮಗ ಎರಡನೇಯ ಗೂವಲದೇವನನ್ನು ಜಂಟಿ ಅರಸನಾಗಿ ಮಾಡಿದ್ದು (1038) ಆತನು ತೀರಿಕೊಂಡುದರಿಂದ ಎರಡನೇಯ ಮಗ ವೀರವರ್ಮನಿಗೆ ಅಧಿಕಾರ ನೀಡಿದ. ಈತನ 1041 ಮತ್ತು 1054 ರ ಶಾಸನಗಳು ಗೋವೆಯಲ್ಲಿ ಇವೆ. ಮುಂದೆ ಬಹುಶಃ ವೀರವರ್ಮನೂ ತೀರಿಕೊಳ್ಳಲು ಎರಡನೇಯ ಷಷ್ಠನ ತನ್ನ ಕೊನೆಯ ಮಗ ಒಂದನೇಯ ಜಯಕೇಶಿಯನ್ನು ಜಂಟಿ ಅರಸನಾಗಿ ಮಾಡಿದನು. ಚಟ್ಟಯದೇವನ ಕಾಲದಲ್ಲಿ ಕಲಘಟಗಿ ತಾ॥ ಕಂದಲಿ ಗ್ರಾಮದಲ್ಲಿ ಮಾರಯ್ಯ ಎಂಬಾತ ಬಾದುಬ್ಬೆ (ಬನಶಂಕರಿ)ಯ ಪ್ರತಿಷ್ಠೆ ಮಾಡಿಸಿದ (1050).

ಎರಡನೇಯ ಷಷ್ಠನು 1072 ರಲ್ಲಿ ತೀರಿಸಿಕೊಳ್ಳಲು ಜಯಕೇಶಿಯು ಆಡಳಿತ ನಿರ್ವಹಿಸಿದನು. ಚಕ್ರವರ್ತಿ ಎರಡನೇಯ ಸೋಮೇಶ್ವರನು ಚೋಳರ ವಿರುದ್ಧ ನಡೆಸಿದ ಯುದ್ಧಗಳಲ್ಲಿ ಈತ ಚಕ್ರವರ್ತಿಗೆ ನೆರವಾದ. ಮುಂದೆ ಎರಡನೇಯ ಸೋಮೇಶ್ವರನಿಗೂ ಆರನೇಯ ವಿಕ್ರಮಾದಿತ್ಯನಿಗೂ ಕಲ್ಯಾಣದ ಪಟ್ಟಕ್ಕಾಗಿ ನಡೆದ ಹೋರಾಟದಲ್ಲಿ ಜಯಕೇಶಿಯು ವಿಕ್ರಮಾದಿತ್ಯನ ಪಕ್ಷವಹಿಸಿದನಲ್ಲದೆ ತನ್ನ ಮಗಳನ್ನು ವಿಕ್ರಮನಿಗೆ ಮದುವೆ ಮಾಡಿಕೊಟ್ಟ. 1078ರಲ್ಲಿ ಇವನ ಹಿರಿಮಗ ಮೂರನೇಯ ಗೂವಲದೇವನಿಗೆ ಪಟ್ಟವಾಯಿತು. ಅನಿಲಪುರವು (ಧಾರವಾಡ ಜಿಲ್ಲೆಯ ಅಳ್ನಾವರ) ಈತನ ರಾಜಧಾನಿಗಳಲ್ಲಿ ಒಂದಾಗಿತ್ತು. ಇಲ್ಲಿ ಈತನ ಎರಡು ಖಂಡಿತ ಶಾಸನಗಳಿವೆ. ಒಂದು ಶಾಸನವು ಬಿಳಿಯ ಜಿನಾಲಯಕ್ಕೆ ದಾನವನ್ನು ಪ್ರಕಟಿಸುತ್ತದೆ (1081). ಅವನು ಕೊಂಕಣ-900 ಮತ್ತು ಪಲಸಿಗೆ-12,000 ಆಳುತ್ತಿದ್ದು, 1100ರ ಸುಮಾರಿಗೆ ವಿಕ್ರಮಾದಿತ್ಯನ ವಿರುದ್ಧ ಬಂಡೇಳಲು ವಿಕ್ರಮಾದಿತ್ಯನು ಅವನಿಂದ ಹಲಸಿಗೆ-12,000 ವನ್ನು ಕಿತ್ತುಕೊಂಡನು. ಮುಂದೆ ಈತನ ತಮ್ಮ ವಿಜಯಾದಿತ್ಯನ ಮಗ ಎರಡನೇಯ ಜಯಕೇಶಿಯು ಈತನ ಜೊತೆಗೆ ಅರಸನಾದನು. ಆಗ ಚಾಳುಕ್ಯ ವಿಕ್ರಮಾದಿತ್ಯನು ತನ್ನ ಮಗಳಾದ ಮೈಳಲದೇವಿಯನ್ನು ಜಯಕೇಶಿಗೆ ಮದುವೆಮಾಡಿಕೊಟ್ಟು (1103) ಹಲಸಿಗೆ 12,000 ವನ್ನು ಮರಳಿಸಿದನಲ್ಲದೆ ಕುಂದೂರು 500 (ನರೇಂದ್ರ ಪರಿಸರ) ಮುಂತಾದ ಭಾಗಗಳನ್ನು ಅವನಿಗೆ ಬಳುವಳಿಯಾಗಿ ಕೊಟ್ಟನು. ಗೂವಲದೇವನ ಕಲ್ಲುಕುಟಿಗೆ (ಕಲಘಟಗಿ) ಶಾಸನದಲ್ಲಿ ಆತ ಉಣಕಲ್ಲು -30ಮತ್ತು ಸಬ್ಬಿ- 30ನಾಡುಗಳನ್ನೂ ಆಳುತ್ತಿದ್ದನೆಂದಿದ್ದು (1120) ತಂಬೂರಲ್ಲಿ ಅವನ ಅಧಿಕಾರಿ ಸೇನಿಗಾವುಂಡನಿಂದ ಫಣಿರಾಜ ದೇವಾಲಯ (1120) ಹಾಗೂ ಅದೇ ಊರಲ್ಲಿ ಜಯದೇವ ಎಂಬಾತನಿಂದ ವಿಷ್ಣುಮಂದಿರ ನಿರ್ಮಾಣವಾದ ಶಾಸನಗಳಿವೆ (1120).

1125 ರಲ್ಲಿ ಮೂರನೇಯ ಗೂವಲದೇವನು ತೀರಿಕೊಂಡನು. ಎರಡನೇಯ ಜಯಕೇಶಿಯ ನರೇಂದ್ರ ಶಾಸನದಲ್ಲಿ ಆತನು ಕೊಂಕಣ -900,ಹೈವೆ -500,ಹಲಸಿಗೆ-12,000, ಹಲಸಿಗೆಗೆ ಸೇರಿದ ಕುಂದೂರ-500ಗಳನ್ನು ಆಳುತ್ತಿರಲು ಅವನ ಸೇನಾನಿ ಸಿಂಗರಸನು ಕುಂಡೂರಲ್ಲಿ (ಈಗಿನ ನರೇಂದ್ರ) ಕಟ್ಟಿದ (ಲಕ್ಷ್ಮೇಶ್ವರ) ಶಿವಾಲಯಕ್ಕೆ ನೀಡಿದ ದಾನದ ವಿಚಾರವಿದೆ. ಈ ಶಾಸನದಲ್ಲಿ ರಾಜಧಾನಿ ಕುಂದೂರಿನ ಗಡಿಗಳ ವಿವರವಿದೆ. ಅದೇ ಊರ ಇನ್ನೊಂದು ಶಾಸನದಲ್ಲಿ ಅಲ್ಲಿನ ಅರಕೆರೆಯ ಶಂಕರದೇವರ ದೇವಾಲಯಕ್ಕೆ 1126ರಲ್ಲಿ ಜಯಕೇಶಿ ಮತ್ತು ಮೈಳಲದೇವಿಯರು ನೀಡಿದ ದಾನವಿದ್ದು ಮೈಳಲದೇವಿಯು ಕುಂದೂರಲ್ಲಿ ಇರುತ್ತಿರಲು ಕೊಂಕಣ -900, ಉಣಕಲ್-30, ಛಬ್ಬಿ (ಸಬ್ಬಿ-30), ಕೊಂತಕುಳಿ-30, ಹಾನಗಲ್-500, ಉತ್ತುಗಾಂವೆ (ಉಚಗಾಂವ್)-30, ಕಾದರವಳ್ಳಿ -30,ಪೊಳಲ್ಗುಂದೆ-30,ವೇಳುಗ್ರಾಮ (ಬೆಳಗಾವಿ) -70,ಹೈವೆ-500 ಹಾಗೂ ಕಾವಡಿದ್ವೀಪ ಒಂದೂಕಾಲು ಲಕ್ಷಗಳನ್ನು ಆಳುತ್ತಿದ್ದಳೆಂದು ಹೇಳಿದೆ.

ಎರಡನೇಯ ಜಯಕೇಶಿಯ ಶಾಸನಗಳು ಮೊದಲ ಬಾರಿ ಧಾರವಾಡ ಜಿಲ್ಲೆಯಲ್ಲಿ ದೊರೆಯುವುದು 1111 ರಿಂದ. ನಿಗದಿಯ ಮೂಲಸ್ಥಾನ ದೇವರ ಪ್ರತಿಷ್ಠಾಪನೆಯ ಉಲ್ಲೇಖ ಅದರಲ್ಲಿದೆ. 1112 ರಲ್ಲಿ ಉಣಕಲ್ಲಿನ ಆದಿತ್ಯದೇವರ ಸತ್ರಕ್ಕೆ ದಾನಪ್ರಕಟಿಸುವ ಅಮ್ಮಿನಭಾವಿ ಶಾಸನವಿದೆ. ಬಾವಿಹಾಳದ ಅಳ್ನಗುಂಡಿ ಮಲ್ಲಿಕಾರ್ಜುನ ದೇವರಿಗೆ ಮಾಡಿದ ಭೂದಾನ 1125 ರದು. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯಕ್ಕೆ 1128 ರಲ್ಲಿ ಈತನು ಮಾಡಿದ ದಾನದಿಂದ ಅಲ್ಲಿ 'ಗಳಿಗೆ'ಯನ್ನು ಸ್ಥಾಪಿಸಲಾಯಿತು. ಬಹುಶಃ ಅದು ಆಗ ಘಟಿಕಾಸ್ಥಾನವಾಗಿ ರೂಪುತಾಳಿರಬೇಕು. ಇದೇ ದೇವಾಲಯಕ್ಕೆ 1138 ರಲ್ಲಿ ಅವನು ನಿಟ್ಟೂರು ಗ್ರಾಮವನ್ನು ದಾನಮಾಡಿದ್ದಾನೆ. ಇದೇ ಕಾಲದಲ್ಲಿ ಈತನು ಹೊಯ್ಸಳ ವಿಷ್ಣುವರ್ಧನನ ಕೈಯಲ್ಲಿ ಸೋತಂತೆ ಕಾಣುತ್ತದೆ.

ಈತನ ಇಬ್ಬರು ಮಕ್ಕಳಾದ ಶಿವಚಿತ್ತ ಪೆರ್ಮಾಡಿ ಹಾಗೂ ವಿಷ್ಣುಚಿತ್ತ ವಿಜಯಾದಿತ್ಯರು (1147) ಜಂಟಿಯಾಗಿ ಇವನ ಉತ್ತರಾಧಿಕಾರಿಗಳಾದರು. ಶಿವಚಿತ್ತನು ಹಾನಗಲ್ ಕದಂಬ ರಾಜಪುತ್ರಿ ಕಮಲಾದೇವಿಯನ್ನು ವರಿಸಿದ್ದು ಕಿತ್ತೂರ ಬಳಿಯ ದೇಗಾಂವೆಯ ಕಮಲನಾರಾಯಣ ಮಂದಿರ ಇವಳು ಕಟ್ಟಿಸಿದ್ದ ಪ್ರಸಿದ್ಧ ದೇವಾಲಯವಾಗಿವೆ. ಈ ಸೋದರರು ಕಲಚೂರಿ ಬಿಜ್ಜಳನಿಗೆ ತಲೆಬಾಗದೆ ಸ್ವತಂತ್ರರಾಗಿ ಉಳಿದರು. ಕಲಚೂರಿಗಳೂ ಹೊಯ್ಸಳರೂ ಪ್ರತ್ಯೇಕವಾಗಿ ಇವರನ್ನು ಸೋಲಿಸಿದರೂ ಅದರಿಂದ ಆ ಮನೆತನಗಳಿಗೆ ಹೆಚ್ಚಿನ ಪ್ರದೇಶವೇನೂ ಸಿಕ್ಕಿದಂತೆ ಇಲ್ಲ.

ಪೆರ್ಮಾಡಿದೇವನ ಕಾಲದಲ್ಲಿ ಬೊಮ್ಮಿಗಟ್ಟಿ ಜಿನಾಲಯಕ್ಕೆ ಸಿಂಘಣನೆಂಬಾತ ದಾನ ಮಾಡಿದ 1147 ರ ಶಾಸನವಿದೆ. ನೂಲ್ವಿ ಶಾಸನದಲ್ಲಿ ಕಾಳೇಶ್ವರ ದೇವಾಲಯಕ್ಕೆ 1171 ರಲ್ಲಿ ದಾನಮಾಡಿದ ಉಲ್ಲೇಖವಿದೆ. ಕುಂದಗೋಳ ತಾ|| ಕೊಪ್ಪ ಶಾಸನದಲ್ಲಿ ಬರ್ಮಿಗಾವುಂಡನು ಕರುವೇಶ್ವರ ದೇವಾಲಯವನ್ನು ನಿರ್ಮಿಸಿದ 1165 ರ ಶಾಸನವಿದೆ. ಬಹುಶಃ ಧಾರವಾಡ ಜಿಲ್ಲೆಯ ಪ್ರದೇಶವನ್ನು ಈತನು ನೋಡಿಕೊಳ್ಳುತ್ತಿದ್ದುದರಿಂದ ಜಿಲ್ಲೆಯಲ್ಲಿ ಇವನ ಶಾಸನಗಳಷ್ಟೇ ಕಂಡುಬಂದಿದ್ದು ಈತನ ಸೋದರ ವಿಷ್ಣುಚಿತ್ತನ ಶಾಸನಗಳಿಲ್ಲ. ಈ ವಂಶದವರು ಕಲ್ಯಾಣದ ನಾಲ್ಕನೇಯ ಸೋಮೇಶ್ವರನಿಗೆ ಬೆಂಬಲ ನೀಡಿ ಆತನು ಪದಚ್ಯುತನಾದ ಮೇಲೂ ತಮ್ಮ ರಾಜ್ಯದಲ್ಲಿ ಆಸರೆ ನೀಡಿದ್ದರು. ಶಿವಚಿತ್ತನು 1192 ರವರೆಗೆ ಬದುಕಿದ್ದು ಅವನ ಕಾಲದಲ್ಲೇ ವಿಷ್ಣುಚಿತ್ತನು ತೀರಿಕೊಳ್ಳಲು ವಿಷ್ಣುಚಿತ್ತನ ಪುತ್ರ ಮೂರನೇಯ ಜಯಕೇಶಿ 1187 ರಿಂದ ಜಂಟಿ ಅರಸನಾಗಿದ್ದು ಶಿವಚಿತ್ತನ ನಂತರ ತಾನೊಬ್ಬನೇ ಆಡಳಿತ ನಿರ್ವಹಿಸಿದನು. ಈತನು ಸೇಉಣ ಸಿಂಘಣನ ಕೈಯಲ್ಲಿ 1206 ರ ಹೊತ್ತಿಗೆ ಸೋತು ಆತನ ಮಾಂಡಲಿಕತ್ವ ಒಪ್ಪಿಕೊಂಡನು.

ಮೂರನೇಯ ಜಯಕೇಶಿಯ ಕಾಲದಲ್ಲಿ 1171 ರಲ್ಲಿ ಈತನ ಪಡೆವಳ (ಸೇನಾನಿ) ಉದಯಾದಿತ್ಯನು ಉಗ್ಗೇರಿ ಮಾಕೇಶ್ವರ ದೇವರಿಗೆ ಭೂದಾನ ಮಾಡಿದ್ದಾನೆ. ಮುಂದೆ 1198 ರ ಶಾಸನದಲ್ಲಿ ಎಲೆಪೂರ್ವಹಳ್ಳಿ ಎಂದು ಹಳೇ ಹುಬ್ಬಳ್ಳಿಯ ಉಲ್ಲೇಖವಿದ್ದ ಒಂದು ಶಾಸನವಿದ್ದು ಇದೇ ಊರು 1206 ರಲ್ಲಿ 'ಅಗ್ರಹಾರ ಹುವಳ್ಳಿ' ಎಂದು ಕರೆಯಲ್ಪಟ್ಟಿದ್ದು ಇಲ್ಲಿ ಮಹಾಲಕ್ಷ್ಮೀ ದೇವಸ್ಥಾನವನ್ನು ಪ್ರತಿಷ್ಠಾಪಿಸಿದ ವಿವರವಿದೆ. ಈತನ 1215ರ ಶಾಸನದಲ್ಲಿ ಮನಗುಂಡಿಯ ಬಸದಿಯೊಂದಕ್ಕೆ ಅನೇಕ ದಾನಗಳನ್ನು ಮಾಡಿದ ಸಂಗತಿ ವರದಿಯಾಗಿದೆ. 1202ರ ಘಳಗಿ ಶಾಸನದಲ್ಲಿ ಅಲ್ಲಿನ ನಾಡಗಾವುಂಡ ಮತ್ತು ಆ ಊರು ಅರ್ವತ್ತೊಕ್ಕಲು ಭೂತೇಶ್ವರ ದೇವರಿಗೆ ದಾನ ನೀಡಿದ ವಿವರವಿದೆ.

ಇವನ ನಂತರ ಪಟ್ಟಕ್ಕೆ ಬಂದ ತ್ರಿಭುವನಮಲ್ಲನು ಸು.1225 ರಿಂದ 46 ರವರೆಗೆ ಆಳಿದ. (ಈತನಿಗೂ ಮೊದಲು ಈತನ ಅಣ್ಣ ವಜ್ರದೇವ ಎಂಬಾತ 1200-1221 ರವರೆಗೆ ಯುವರಾಜನಾಗಿ ಇದ್ದಂತಿದೆ). ತ್ರಿಭುವನ ಮಲ್ಲನ ನೂಲ್ವಿ ಶಾಸನದಲ್ಲಿ 1237 ರಲ್ಲಿ ನೂಲ್ವಿಯ ಅರ್ವತ್ತೊಕ್ಕಲು ದೇವಾಲಯಕ್ಕೆ ದಾನ ನೀಡಿದ ಉಲ್ಲೇಖವಿದೆ. ತ್ರಿಭುವನ ಮಲ್ಲ (ಈತನಿಗೆ ಸೋವಿದೇವನೆಂಬ ಹೆಸರೂ ಇತ್ತು) ಹಾಗೂ ಅವನ ಉತ್ತರಾಧಿಕಾರಿ ಮೂರನೇಯ ಷಷ್ಠ (1246-64) ಇವರ ಆಳ್ವಿಕೆಯ ವಿವರಗಳು ತಿಳಿಯವು.

ಮೂರನೇಯ ಷಷ್ಠ ಅಥವಾ ಚಟ್ಟಯ್ಯದೇವನು ಭಟ್ಟಿಕೊಪ್ಪ (ಕಲಘಟಗಿ ತಾ||) ಗ್ರಾಮದಲ್ಲಿ ಶಂಕರದೇವರ ಪ್ರತಿಷ್ಠೆಯನ್ನು ಮಾಡಿಸಿದನು (1250). ಹುಬ್ಬಳ್ಳಿ ತಾ. ಬುದ್ರಸಿಂಗಿ ಶಾಸನದಲ್ಲಿ ಸೊನ್ನಲಿಗೆಯ ಕಪಿಲಸಿದ್ಧಮಲ್ಲಿಕಾರ್ಜುನನಿಗೆ ಉಚ್ಚಂಗಿ ಗ್ರಾಮ ದಾನ ಮಾಡಿದ ವಿಚಾರವಿದೆ (1258). ಸೇಉಣ ಕನ್ನರನು ಇವರನ್ನು ಮಾಂಡಳಿಕರನ್ನಾಗಿ ಮಾಡಿಕೊಂಡ. ಮುಂದೆ ಸೇಉಣ ಮಹಾದೇವನು ಇವರನ್ನೂ ಪೂರ್ತಿ ನಾಮಶೇಷಗೊಳಿಸಿದೆ. ಮೂರನೇಯ ಷಷ್ಠನೇ ಈ ವಂಶದ ಕೊನೆಯ ಅರಸು.

**ಬಂಕಾಪುರ ಕದಂಬರು**

ಅಲ್ಪ ಕಾಲ ಬಂಕಾಪುರದಿಂದ ಆಳಿದ ಕದಂಬ ಶಾಖೆಯೊಂದನ್ನು ಡಾ॥ ಬಾ.ರಾ. ಗೋಪಾಲರು ಗುರುತಿಸಿದ್ದಾರೆ. ಇವರು ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದರು. ಸತ್ಯಾಶ್ರಯನ ಸಮಕಾಲೀನರಾದ ಹಾನಗಲ್ ಕದಂಬ ಚಟ್ಟಯ ದೇವನ ನಂತರ ಬನವಾಸಿ-12,000 ಪ್ರಾಂತವನ್ನು ಮಯೂರ ಶರ್ಮ ಎಂಬಾತನು ಆಳುತ್ತಿದ್ದ. ಈತನು ಚಟ್ಟಯದೇವನ ವಂಶಸ್ಥನಲ್ಲ. ಅರಿಕೇಸರಿ ಅಥವಾ ಹರಿಕಂತ ಎಂಬಾತನ ಮಗ. ಈ 'ಹರಿಕಂತದೇವ'ನ ಎರಡು ಶಾಸನಗಳು ಸಿದ್ದಾಪುರ ತಾ॥ ಕೋಡಕಣಿಯಲ್ಲಿ ದೊರೆತಿವೆ. ಈತನ ಮಗ ಮಯೂರ ಶರ್ಮನು 'ಪಾಂಥಿಪುರಾಧೀಶ್ವರ' (ಹಾನಗಲ್‌ನ ಮೂಲ ಸೂಚಿಸುತ್ತದೆ) ಎಂದು ಕರೆದುಕೊಂಡಿದ್ದು ಇವನು ಬಂಕಾಪುರದಿಂದ ಆಳುತ್ತಿದ್ದುದು ಖಚಿತ. ಈತ ಚಕ್ರವರ್ತಿ ಎರಡನೆಯ ಜಯಸಿಂಹನ ಸೋದರಿ ಅಕ್ಕಾದೇವಿಯನ್ನು ವರಿಸಿದ್ದ. ಈತನ ಶಾಸನಗಳು 1035 ರಿಂದ ಕಾಣಬರುತ್ತಿದ್ದು ಬನವಾಸಿ-12,000 ಮತ್ತು ಪಾನುಂಗಲ್-500 ಗಳನ್ನು ಆಳುತ್ತಿದ್ದ. 'ಹರಿಕಂತನ ಸಿಂಗ' ಎಂಬ ಶಬ್ದದಿಂದ ಹರಿಕಂತನ ಮಗ ಈತನೆಂಬುದು ಖಚಿತ. ಹಾನಗಲ್ ಕದಂಬರ ವಂಶವೃಕ್ಷದಲ್ಲಿ ಈತನ ಹೆಸರಿಲ್ಲ. ಈತನ ಸತಿ ಅಕ್ಕಾದೇವಿ ಅರಸಿಬೀಡಿಯಿಂದ ಕಿಸುಕಾಡು -70ನ್ನು ಆಳುತ್ತಿದ್ದಳು. ಈತನ ಉತ್ತರಾಧಿಕಾರಿಗಳು ಇವನ ಮಕ್ಕಳಾದ ಅರಕೇಸರಿ (1047) ಹಾಗೂ ತೋಯಿಮದೇವ. ಇವರು ಹಾನಗಲ್ ಪ್ರದೇಶದ ಆಡಳಿತ ನಿರ್ವಹಿಸಿದರು. ಮುಂದೆ ಹಾನಗಲ್ ಕದಂಬ ವಂಶದ ಕೀರ್ತಿವರ್ಮ ಇವರಿಂದ ಅಧಿಕಾರ ಪಡೆದ (ಸು.1066 ರ ನಂತರ). ಅಲ್ಲಿಗೆ ಈ ಕಿರುಮಾಂಡಳಿಕ ಶಾಖೆ ಕೊನೆಯಾಯಿತು. ತೋಯಿಮದೇವನು ಅಕ್ಕಾದೇವಿಯ ಮಗನು. ಹಾನಗಲ್ ಕದಂಬ ಕೀರ್ತಿವರ್ಮನ ಒಂದು ಶಾಸನದಲ್ಲಿ ಬಂಕಾಪುರವನ್ನು ರಾಜಧಾನಿ ಪಟ್ಟಣವೆಂದು ಹೇಳಿದೆ.

**ಬೆಳಗುತ್ತಿಯ ಸಿಂದರು**

ಹೊನ್ನಾಳಿ ತಾ॥ ಬೆಳಗುತ್ತಿ (ಬೆಳಗುವರ್ತಿ)ಯ ಸಿಂದರು ವಾಸ್ತವವಾಗಿ ನಾಗರಖಂಡ-70ನ್ನು ಒಳಗೊಂಡ ಸೇಂದ್ರಕ ವಿಷಯ ಎಂದು ಪರಿಚಿತವಾದ ಬಂದಳಿಕೆಯ ಪರಿಸರದಲ್ಲಿ ಬಾದಾಮಿ ಚಾಳುಕ್ಯರ ಕಾಲದಿಂದ ಆಳುತ್ತಿದ್ದ ವಂಶದ ಒಂದು ಶಾಖೆ. ಸೇಂದ್ರಕರು ಬಾದಾಮಿಯ ಚಾಳುಕ್ಯರ ಬೀಗರು ಕೂಡ. ಧಾರವಾಡ ಜಿಲ್ಲೆಯ ಹಿರೇಕೆರೂರು ತಾ॥ ಹಾಗೂ ಶಿಗ್ಗಾಂವಿ ತಾಲೂಕಿನ ಕುಂದೂರು ಪರಿಸರದಿಂದ ಬೆಳಗುತ್ತಿಯ ಸಿಂದರು ಆಳುತ್ತಿದ್ದರು. ಕೆಲವು ಕಾಲ ಹಿರೇಕೆರೂರು ತಾ॥ ಹಳ್ಳೂರು ಇವರ ರಾಜಧಾನಿಯಾಗಿತ್ತು. ನಾಗರಖಂಡ-70ಕ್ಕೆ ತಿಳುವಳ್ಳಿ ಮುಂದೆ ಕೇಂದ್ರವಾಗಿರಬಹುದು. ಪಿರಿಯಚಟ್ಟರಸ, ಅವನ ಮಗ ಅಯ್ಯಣ ಜೋಗರಸ, ಇವನ ನಂತರ ಪಿರಿಯ ಚಟ್ಟರಸನ ಮೊಮ್ಮಗ ಎರಡನೇಯ ಚಟ್ಟರಸ ಇವರು ಆರಂಭದ ಅರಸರಾಗಿ ಕಲ್ಯಾಣದ ಚಾಳುಕ್ಯರ ಮಾಂಡಲಿಕರಾಗಿದ್ದರು. ಜೋಗರಸ (ಸು.1060-1090) ನ ಶಾಸನಗಳ ಹಿರೇಕೆರೂರು ತಾ॥ ಅಣಜಿಯಲ್ಲಿ ಹಾಗೂ ಮೇದೂರಲ್ಲಿ ದೊರೆತಿವೆ. ಈತ ಮಾಸೂರು-22 ಕುಂದೂರು-12, (ಶಿಗ್ಗಾಂವಿ ತಾ॥) ಮುಂತಾದ ಪ್ರದೇಶಗಳ ಮೇಲೂ ಅಧಿಕಾರ ಹೊಂದಿದ್ದ. ಕಲ್ಯಾಣದ ಒಂದನೇಯ ಹಾಗೂ ಎರಡನೇಯ ಸೋಮೇಶ್ವರ, ಮತ್ತು ಆರನೇಯ ವಿಕ್ರಮಾದಿತ್ಯ ಇವರಿಗೆ ಈತ ಮಾಂಡಳಿಕನಾಗಿದ್ದ. ಇವನ ನಂತರ ಆಳಿದ ಎರಡನೇಯ ಚಟ್ಟರಸ (ಸು.1090-1120), ನಂತರ ಒಂದನೇಯ ಈಶ್ವರದೇವ, ಈಶ್ವರ ದೇವನ ಪುತ್ರರಾದ ಮಾಚರಸ (ಸು.1120-40) ಮತ್ತು ಮಲ್ಲಿದೇವ(1140-55)ಇವರುಗಳ ಶಾಸನಗಳು ಧಾರವಾಡ ಜಿಲ್ಲೆಯ ಪ್ರದೇಶದಲ್ಲಿ ಅಷ್ಟೊಂದು ಇಲ್ಲ. ಮಾಚರಸನ ಒಂದು ಶಾಸನ ನಾಗವಂದದಲ್ಲಿ ದೊರೆತಿದೆ (1128). ಇವನು ಮೂರನೇಯ ಸೋಮೇಶ್ವರನ ಮಾಂಡಳಿಕ. ಈ ಸೋದರರ ನಂತರ ಪಟ್ಟವೇರಿದವನು ಇವರ ತಮ್ಮ ಐವರಸನ ಮೊಮ್ಮಗ (ಮಗ ರಾಯರಸನ ಮಗ) ಎರಡನೇಯ ಈಶ್ವರದೇವ; ಈತ ಕಲಚೂರಿಗಳ ಮಾಂಡಲಿಕನೆಂದು ಹೇಳಿಕೊಂಡ. ಈತನ ಕೊಡಮೊಗ್ಗಿ (1159; ಹಿರೇಕೆರೂರು ತಾ॥) ಹಾಗೂ ನಿಡನೇಗಿಲು (1165) ಶಾಸನಗಳಿವೆ. ನಿಡನೇಗಿಲ ಮಲ್ಲಿಕಾರ್ಜುನ (ಕಲ್ಲೇಶ್ವರ) ದೇವಾಲಯಕ್ಕೆ ರಾಜ ಸುಂಕ ದಾನ ನೀಡಿದ್ದಾನೆ. ಕೊಡಮಗ್ಗಿಯ ಶಾಸನವೂ ಅಲ್ಲಿನ ಈಶ್ವರ ದೇವಾಲಯಕ್ಕೆ ರಾಜನು ನೀಡಿದ ದಾನದ ದಾಖಲೆ. ಎರಡನೇಯ ಈಶ್ವರದೇವ (1155-1185) ಸಾಹಸಿಯಾದ ದೊರೆ. ಈತನ ರಾಜಧಾನಿ ಹಳ್ಳೂರು. ಈತ ವಿಶಾಲ ಪ್ರದೇಶವನ್ನು ಆಳುತ್ತಿದ್ದು ಮಾಸೂರು-12, ಉಡವಟ್ಟಿ-70 ಕುಂದೂರು-70, ಮುಂತಾದ ಪ್ರದೇಶಗಳೂ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳೂ ಅವನ ರಾಜ್ಯದಲ್ಲಿ ಸೇರಿದ್ದವು. ಮುಂದೆ ಹೊಯ್ಸಳ ಇಮ್ಮಡಿ ಬಲ್ಲಾಳನು ಈತನನ್ನು ಬಗ್ಗಿಸಿ, ತನ್ನ ಮಾಂಡಳಿಕನಾಗಿ ಮಾಡಿಕೊಂಡ (1175). ಆದರೆ

ಮುಂದೆ ಕಲಚೂರಿ ಸೋವಿದೇವನು ಹೊಯ್ಸಳನನ್ನು ಹೊರಗಟ್ಟಿ ಸಿಂದರಮೇಲೆ ಸ್ವಾಮ್ಯ ಸಾಧಿಸಿದ (1179). ಈಶ್ವರದೇವನ ಮಕ್ಕಳಾದ ಪಾಂಡ್ಯದೇವ ಹಾಗೂ ಮಲ್ಲಿದೇವರು ಅವನಿಗೆ ಆಡಳಿತದಲ್ಲಿ ನೆರವಾಗುತ್ತಿದ್ದು ಧಾರವಾಡ ಜಿಲ್ಲೆಯ ಪ್ರದೇಶಗಳಲ್ಲಿ ಪಾಂಡ್ಯದೇವನಿದ್ದನೆಂದು ಸೂಚಿಸುವ ರಟ್ಟಿಹಳ್ಳಿ ಶಾಸನವಿದೆ (1174). ಇದು ಅಲ್ಲಿನ ಕಡಂಬೇಶ್ವರ ದೇವಾಲಯಕ್ಕೆ ನೀಡಿದ ದಾನದ ದಾಖಲೆ. ಮುಂದೆ ಈಶ್ವರದೇವನು ಮತ್ತೆ ಉದಿಸಿದ ಕಲ್ಯಾಣ ಚಾಳುಕ್ಯ ಸತ್ತೆಗೆ (1185) ಶರಣರಾದರೂ ಹೊಯ್ಸಳ-ಸೇಉಣ ಹೊಯ್ದಾಟದಲ್ಲಿ ಸಿಂದರು ನುಗ್ಗಾದರು. ತುಂಗಭದ್ರಾ ನದಿಯ ಉಭಯ ತೀರದಲ್ಲಿ ಇದ್ದ ಈ ರಾಜ್ಯ ಸದಾ ರಣರಂಗವಾಗಿತ್ತು.

ಈತನ ಮಗ ಎರಡನೇ ಮಲ್ಲಿದೇವ(ಸು.1185-1205) ಹಳ್ಳೂರಿಂದಲೇ ಆಳುತ್ತಿದ್ದು ಬಹುಶಃ ಹೊಯ್ಸಳರ ವಿರುದ್ಧ ನಡೆಸಿದ ಉಗ್ರವಾದ ರಟ್ಟಿಹಳ್ಳಿ ಕಾಳಗದ ಉಲ್ಲೇಖ 1195 ರ ಶಾಸನದಲ್ಲಿದೆ. ಹೊಯ್ಸಳರಾಣಿ ಉಮಾದೇವಿ (ಬಲ್ಲಾಳನ ಹೆಂಡತಿ) ಕೂಡ ಬೆಳಗುತ್ತಿಯ ವಿರುದ್ದ ಸಾಗಿ ಜಯಗಳಿಸಿದ ಉಲ್ಲೇಖಗಳಿವೆ. ಈತ ಹೊಯ್ಸಳರಿಗೆ ಸೋತ. 1198ರಲ್ಲಿ ಎರಡನೇಯ ಬಲ್ಲಾಳ ಹಳ್ಳೂರು ನೆಲೆವೀಡಿನಲ್ಲಿದ್ದ.

ಮಲ್ಲಿದೇವನ ಮಗ ಮೂರನೇಯ ಈಶ್ವರ (ಸು.1205-1229) ಸೇಉಣರ ಜೊತೆ ಸ್ನೇಹ ಮಾಡಿ ಹೊಯ್ಸಳರ ವಿರುದ್ಧ ಹೋರಾಟ ನಡೆಸಿದ. ಈತ ಸೇಉಣರ ಮೇಲಾಳ್ಕೆ ಒಪ್ಪಿಕೊಳ್ಳಬೇಕಾಯಿತು. ಸೇಉಣ ಸಿಂಘಣನ ನಿಕಟಮಿತ್ರ ಇವನಾದ. ಆದರೆ 1216 ರ ನಂತರ ಹೊಯ್ಸಳ ಎರಡನೇಯ ಬಲ್ಲಾಳ ಮತ್ತೆ ದಂಡೆತ್ತಿ ಬಂದು ಇವನನ್ನು ಸೋಲಿಸಿದ. ಇದರಿಂದ ಸಿಂದರ ಮೇಲೆ ಸೇಡುತೀರಿಸಿಕೊಂಡು ಸೇಉಣರು ಬೆಳಗುತ್ತಿಯನ್ನು ಗೆದ್ದುಕೊಂಡರು. ಸೇಉಣರ ವಿರುದ್ಧ ಬೆಳಗುತ್ತಿಯಲ್ಲಿ 1218ರಲ್ಲೂ ಅಬಲೂರಲ್ಲಿ 1219ರಲ್ಲೂ 1223ರಲ್ಲಿ ಚಿಕ್ಕೆರೂರಲ್ಲೂ ಯುದ್ಧಗಳಾದವು. ಸೇಉಣರ ವಿರುದ್ಧ ಹೋರಾಡುತ್ತ ಇದ್ದ ಮೂರನೇಯ ಈಶ್ವರದೇವನ ಮಗ ಕೇಶವದೇವ (ಸು.1229-39) ಹಾಗೂ ಬೀರದೇವ (1239-47; ಕೇಶವದೇವನ ಮಗನೇ ಹೇಗೆಂದು ತಿಳಿಯದು) ಈ ಭಾಗದಲ್ಲಿ ಆಳಿದರಾದರೂ ಧಾರವಾಡ ಜಿಲ್ಲೆಯಿಂದ ಅವರು ಹೊರದೂಡಲ್ಪಟ್ಟರು. ಮುಂದೆ, ಹದಿಮೂರನೇಯ ಶತಮಾನದಲ್ಲಿ ಸಿಂದರ ರಾಜ್ಯ ಸೇಉಣ ರಾಜ್ಯದಲ್ಲಿ ಸೇರಿಹೋಯಿತು. ಇವರ ಶಾಸನಗಳಲ್ಲಿ ತಮ್ಮ ಉಳಿವಿಗಾಗಿ ನಡೆಸಬೇಕಾಗಿ ಬಂದ ಯುದ್ಧಗಳ ವಿವರಗಳೇ ಹೆಚ್ಚು. ಜನ ಕಲ್ಯಾಣಕರ ಕಾರ್ಯಗಳ ದಾಖಲೆಗಳು ಅಷ್ಟಿಲ್ಲ.

### ಯಲಬುರ್ಗಿಯ ಸಿಂದರು

ಧಾರವಾಡ ಜಿಲ್ಲೆಯ ಒಂದು ಅಂಚಿನಲ್ಲಿ, ರೋಣ ತಾ॥ನ ಭಾಗವಾದ ನರೇಗಲ್ ಪರಿಸರದ ಮೇಲೆ ಅಧಿಕಾರ ಹೊಂದಿದ್ದ ಈ ಸಿಂದವಂಶ ರಾಯಚೂರು ಜಿಲ್ಲೆಯ ಯಲಬುರ್ಗಿ (ಯರಂಬರಗೆ)ಯನ್ನು ರಾಜಧಾನಿಯಾಗಿ ಹೊಂದಿದ್ದು, ಬಾಗಡಗೆ (ಬಾಗಲಕೋಟೆ)ಯಿಂದ ಆಳುತ್ತಿದ್ದ ಸಿಂದವಂಶದ ಶಾಖೆಯಾಗಿತ್ತು. ಹನ್ನೊಂದನೇಯ ಶತಮಾನದ ಮಧ್ಯಭಾಗದಲ್ಲಿ ಕಲ್ಯಾಣ ಚಾಳುಕ್ಯರ ಮಾಂಡಳಿಕರಾಗಿ ಇವರು ಆಳಿದರು. ಜಿಲ್ಲೆಯ ಹೊರಗಿನ ಕಿಸುಕಾಡು-70 ಇವರ ರಾಜ್ಯಕ್ಕೆ ಸೇರಿತ್ತು. ಯರಂಬರಗೆ ಇವರ ರಾಜಧಾನಿ. ಕಿಸುಕಾಡನ್ನು ಆಳುತ್ತಿದ್ದ ಅಕ್ಕಾದೇವಿಯ ನಂತರ ಇವರು ಆಳ್ವಿಕೆ ಆರಂಭಿಸಿರಬೇಕು. ಬಾಗಡಗೆಯ ಮಹಾಸಾಮಂತ ಸೇವ್ಯರಸನ ಅನೇಕ ಮಕ್ಕಳಲ್ಲಿ ಒಂದನೇಯ ಆಚುಗಿ ಅಥವಾ ಆಚರಸ ಆರನೇಯ ವಿಕ್ರಮಾದಿತ್ಯನ ಮಾಂಡಳಿಕನಾಗಿದ್ದು ಇವನೇ ವಂಶಸ್ಥಾಪಕ. ಮುಂದೆ ಈತನ ಮಗ ಬಮ್ಮರಸ (1024-1083) ಆಳಿದ. ಇವನ ನಂತರ ಪಟ್ಟವೇರಿದವನು ಇವನ ದಾಯಾದಿ ಚಿಕ್ಕಪ್ಪ ಸಿಂಗನ ಮಗ ಎರಡನೇಯ ಆಚುಗಿ (ಸು. 1100-1125). ಈತನು ವಿಕ್ರಮಾದಿತ್ಯನ ವಿರುದ್ದ ಬಂಡೆದ್ದ ಹೊಯ್ಸಳರೇ ಮುಂತಾದ ಮಾಂಡಳಿಕರನ್ನು ಬಗ್ಗುಬಡಿದು ಚಕ್ರವರ್ತಿಯಿಂದ 'ತ್ರಿಭುವನಮಲ್ಲ ಕೇಸರಿ' ಎಂಬ ಬಿರುದು ಪಡೆದ.

ಬಮ್ಮರಸನು ಅಬ್ಬಿಗೇರಿ (ಇದು ನರೇಗಲ್-12ಕ್ಕೆ ಸೇರಿದ ಗ್ರಾಮ)ಯ ಕುಪ್ಪೇಶ್ವರ ದೇವರಿಗೆ ನೀಡಿದ 1074ರ ದಾನ ಶಾಸನವಿದೆ; ನರೇಗಲ್‌ನಲ್ಲಿ (1105) ಬ್ರಹ್ಮೇಶ್ವರ ದೇವಾಲಯ ಕಟ್ಟಿಸಿದವನು ಇವನೇ ಇರಬಹುದು. ಎರಡನೇಯ ಆಚರಸನು 1113ರಲ್ಲಿ ಅಬ್ಬಿಗೇರಿಯ ದೇವಿಂಗೆರೆಯ ದುರಸ್ತಿ ಕಾರ್ಯಕ್ಕಾಗಿ ಭೂದಾನ ನೀಡಿದ ಶಾಸನವಿದೆ. ಅಲ್ಲದೆ 1122ರಲ್ಲಿ ಕಿರುನರೆಗಲ್ಲಿನ ಮೊಲ್ಲೇಶ್ವರ ದೇವರಿಗೆ ದಾನ ನೀಡಿದ ವಿಚಾರ ಕೋಡಿಕೊಪ್ಪದ ಶಾಸನದಲ್ಲಿದೆ. ಸೂಡಿಯ ಬ್ರಹ್ಮೇಶ್ವರ ಈತನ ತಂದೆಯ ಜ್ಞಾಪಕಾರ್ಥ ಕಟ್ಟಿದ ದೇವಾಲಯವಿದ್ದರೂ ಇರಬಹುದು. ಇದಕ್ಕೆ ನೀಡಿದ ಭೂದಾನ ಈ ಆಚುಗಿಯದೇ ಇರಬಹುದು. ಈತನ ಉತ್ತರಾಧಿಕಾರಿ ಹಿರಿಯ ಮಗ ಪೆರ್ಮಾಡಿ. ಈತನ 1144ರ ಶಾಸನ ಕೋಡಿಕೊಪ್ಪದಲ್ಲಿ ದೊರೆತಿದೆ. ಪೆರ್ಮಾಡಿಯ ನಂತರ ಆಳಿದ ಅವನ ತಮ್ಮ ಚಾವುಂಡ

(1151-69)ನ್ನು ಮುಂದೆ ಬಿಜ್ಜಳನ ಮೇಲಾಳ್ಕೆಯನ್ನು ಒಪ್ಪಿಕೊಂಡಿದ್ದು, ಕಿಸುಕಾಡು, ಬಾಗಡಗೆ ಹಾಗೂ ಕೆಳವಾಡಿ-300 ಇವನ ಆಡಳಿತಕ್ಕೆ ಸೇರಿತ್ತೆಂದು 1163ರ ಪಟ್ಟದಕಲ್ಲು ಶಾಸನದಿಂದ ತಿಳಿಯುತ್ತದೆ. ಇವನ ಕಾಲದಲ್ಲೇ ಇವನ ಮಗ ಮೂರನೇಯ ಆಚುಗಿ ಹಾಗೂ ಮೂರನೇಯ ಪೆರ್ಮಾಡಿಯನ್ನು ಮೇಲೆ ಹೇಳಿದ ಪಟ್ಟದಕಲ್ ಶಾಸನ (1163) ಉಲ್ಲೇಖಿಸುತ್ತದೆ.

ಮೂರನೇಯ ಆಚುಗಿ 1194ರಲ್ಲಿ ಕಳಕಪ್ಪನಗುಡ್ಡ (ರೋಣ ತಾ।।)ದ ಕಾಳಕಾಳೇಶ್ವರ ದೇವರಿಗೆ ನೀಡಿದ ದಾನದ ಶಾಸನವಿದೆ. ಮುಂದೆ ಅವನ ಮಲಸೋದರ ವೀರಬಿಜ್ಜಳ ಮತ್ತು ವೀರವಿಕ್ರಮನ ಶಾಸನಗಳಿವೆ. ಇವರು ಚಾವುಂಡನ ಸತಿ ಹಾಗೂ ಕಲಚೂರಿ ಬಿಜ್ಜಳನ ಕುಮಾರಿ ಸಿರಿಯಾದೇವಿಯ ಮಕ್ಕಳು. ವೀರ ಬಿಜ್ಜಳ ಸಮಾರು 1166ರಲ್ಲಿ ಅಧಿಕಾರಕ್ಕೆ ಬಂದಿರಬಹುದು. ಆದರೆ, ಮೂರನೇಯ ಆಚುಗಿಯ 1194ರ ಶಾಸನವನ್ನು ಇಲ್ಲಿ ಗಮನಿಸಬೇಕು. 1179ರ ರೋಣ ಶಾಸನದಲ್ಲಿ ಕಲಚೂರಿ ಸಂಕಮನ ಮಾಂಡಳಿಕನಾದ ವೀರವಿಕ್ರಮನು ರೋಣದ ಚಾಮೇಶ್ವರ ಮತ್ತು ಮಲ್ಲೇಶ್ವರ ದೇವರಿಗೆ ದಾನ ನೀಡಿದ ಮಾಹಿತಿ ಇದೆ. ಕೋಡಿಕೊಪ್ಪದ ಒಂದು ಶಾಸನದಲ್ಲಿ ಈತನ ಸೋದರ ವೀರಬಿಜ್ಜಳನು ಚಾಳುಕ್ಯ ನಾಲ್ಕನೇಯ ಸೋಮೇಶ್ವರನ ಮಾಂಡಲಿಕನೆಂದು ಹೇಳಿದೆ. ಹೇಗಿದ್ದರೂ 13ನೇಯ ಶತಮಾನದಲ್ಲಿ ಸೇಉಣರು ಇವರನ್ನು ಮಾಂಡಳಿಕರಾಗಿ ಮಾಡಿಕೊಂಡರಷ್ಟೇ ಅಲ್ಲ, 1220ರ ನಂತರ ಇವರು ನಾಮಶೇಷರಾದರು. ( ಈ ಬಗ್ಗೆ ಡಾ।। ಎ.ವಿ. ನರಸಿಂಹಮೂರ್ತಿ ಹಾಗೂ ಡಾ।। ರಿತ್ತಿಯವರು ವಿಶೇಷ ಸಂಶೋಧನೆ ಮಾಡಿದ್ದು ಅವರ ಬರಹಗಳನ್ನು ಈ ಭಾಗ ಆಧರಿಸಿದೆ).

## ದೇವಗಿರಿಯ ಸೇಉಣರು

ಕಲ್ಯಾಣದ ಚಾಳುಕ್ಯರ ವಂಶದ ಇತಿಶ್ರೀಯಾದ ನಂತರ ಬಾದಾಮಿಯ ಚಾಳುಕ್ಯರ ಕಾಲದಿಂದ ಐದು ಶತಮಾನದಷ್ಟು ದೀರ್ಘಕಾಲ ನಡೆದುಬಂದ ಕಾವೇರಿಯಿಂದ ನರ್ಮದೆಯವರೆಗಿನ ಕರ್ನಾಟಕ ಸಾಮ್ರಾಜ್ಯ ಒಡೆದು ಚೂರುಚೂರಾಗಿ ಮುಖ್ಯವಾಗಿ ದೇವಗಿರಿ (ಈಗಿನ ದೌಲತಾಬಾದ್)ಯ ಸೇಉಣ (ಸೇವುಣ ಅಥವಾ ಯಾದವರು)ರು, ಓರಂಗಲ್‌ನ ಕಾಕತೀಯರು ಹಾಗೂ ದ್ವಾರಸಮುದ್ರದ ಹೊಯ್ಸಳರಲ್ಲಿ ಹಂಚಿಹೋಯಿತು. (ಫ್ಲೀಟ್ ಅವರು 'ಯಾದವ'ರೆಂದು ಕರೆದುದರಿಂದ ಈ ಹೆಸರು ಉಳಿದುಬಂದಿದೆ. ಆದರೆ ಸೇಉಣ ಎಂದೇ ಅವರ ವಂಶನಾಮ. ರಾಷ್ಟ್ರಕೂಟರೂ ಹೊಯ್ಸಳರೂ ವಿಜಯನಗರ ಹಾಗೂ ಮೈಸೂರಿನ ಅರಸರೂ ತಮ್ಮನ್ನು 'ಯಾದವ' ಎಂದೂ ಹೇಳಿಕೊಂಡಿದ್ದಾರೆ). ಇನ್ನೂ ಅನೇಕ ಸಣ್ಣಪುಟ್ಟ ರಾಜ್ಯಗಳು ಸ್ವತಂತ್ರವಾದವು. ದಕ್ಷಿಣದ ಪ್ರಸ್ಥಭೂಮಿಯು ಯಾದವೀ ಕಲಹಗಳ ರಣರಂಗವಾಗಿ ದೆಹಲಿ ಸುಲ್ತಾನರು ಬಂದು ಲೀಲಾಜಾಲವಾಗಿ ಇದನ್ನು ಗೆಲ್ಲಲು ಸಾಧ್ಯವಾಯಿತು. ಧಾರವಾಡ ಜಿಲ್ಲೆಯಂತೂ ಸುಮಾರು ಒಂದು ಶತಮಾನದವರೆಗೆ ಸೇಉಣ ಹೊಯ್ಸಳ ದ್ವಂದ್ವದ ಕುರುಕ್ಷೇತ್ರವಾಗಿ ಮಾರ್ಪಟ್ಟಿತು. ಸೇಉಣರು 12 ನೇಯ ಶತಮಾನದ ಕೊನೆಯಿಂದ 13 ನೇಯ ಶತಮಾನದ ಕೊನೆಯವರೆಗೆ ಈ ಜಿಲ್ಲೆಯಲ್ಲಿ ಅಧಿಕಾರ ಹೊಂದಿದ್ದರು. ಆಗಾಗ ಅವರ ಅಧಿಕಾರವನ್ನು ಹೊಯ್ಸಳರು ಪ್ರಶ್ನಿಸುತ್ತಲೂ ಇದ್ದರು. ಆದರೆ, ಎರಡನೇಯ ವೀರ ಬಲ್ಲಾಳನ ನಂತರ ಹೊಯ್ಸಳರು ಧಾರವಾಡ ಜಿಲ್ಲೆಯಲ್ಲಿ ಹೆಚ್ಚಿನ ಪ್ರಭಾವ ಹೊಂದಿರಲಿಲ್ಲ. ತುಂಗಭದ್ರಾ ನದಿಯು ಉಭಯರ ರಾಜ್ಯಗಳ ಗಡಿಯಾಗಿ ಧಾರವಾಡ ಜಿಲ್ಲೆ ಬಹುಮಟ್ಟಿಗೆ ಸೇಉಣರ ವಶದಲ್ಲೇ ಇತ್ತು.

ಒಂಭತ್ತನೇಯ ಶತಮಾನದಲ್ಲಿ ರಾಷ್ಟ್ರಕೂಟರ ಮಾಂಡಳಿಕರಾಗಿ ಸಿಂದಿನೇರ (ನಾಸಿಕ ಜಿ।।ಯ ಸಿನ್ನರ)ದಿಂದ ಆಳುತ್ತಿದ್ದ ಈ ವಂಶ ಮುಂದೆ ಕಲ್ಯಾಣ ಚಾಳುಕ್ಯರ ಮಾಂಡಳಿಕತ್ವವನ್ನು ಹೊಂದಿ ಮುಂದುವರೆಯಿತು. ಮುಂದೆ ಇವರ ರಾಜಧಾನಿ ದೇವಗಿರಿ (ಈಗಿನ ದೌಲತಾಬಾದ್)ಗೆ ವರ್ಗಾವಣೆ ಹೊಂದಿತು. ವಾಸ್ತವವಾಗಿ ಧಾರವಾಡ ಜಿಲ್ಲೆಯಲ್ಲಿ ಇವರು ಕಾಲೂರಿದ್ದು ಐದನೇಯ ಭಿಲ್ಲಮ(1173-92)ನ ಕಾಲದಲ್ಲೇ. ಅದಕ್ಕೂ ಮೊದಲು ಈ ವಂಶದಲ್ಲಿ 20 ಕ್ಕೂ ಮೇಲ್ಪಟ್ಟು ರಾಜರು ಆಳಿದ್ದು ಅವರು ಈ ಜಿಲ್ಲೆಯಲ್ಲಿ ಆಳಿರದ್ದರಿಂದ ಅವರ ದೀರ್ಘ ಇತಿಹಾಸದ ಕಥನ ಇಲ್ಲಿ ಅಪ್ರಸ್ತುತ. ಕನ್ನಡ ಮೂಲದ ಈ ಮನೆತನದ ಒಂದು ಕಿರು ಶಾಖೆ ಮಾಸವಾಡಿ -140 ಎಂದರೆ ಡಂಬಳ, ಮುಂಡರಗಿ ಪ್ರದೇಶದಲ್ಲಿ 9 ನೇಯ ಶತಮಾನದಿಂದ 13 ನೇಯ ಶತಮಾನ ಆರಂಭದವರೆಗೂ ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಹಾಗೂ ಸೇಉಣ ಹಾಗೂ ಹೊಯ್ಸಳರ ಮಾಂಡಳಿಕರಾಗಿ ಆಳಿದರು.

ದೇವಗಿರಿಯ ಸೇಉಣ ವಂಶದ 19ನೇಯ ದೊರೆಯಾದ ಎರಡನೇಯ ಅಮರಮಲ್ಲುಗಿಯ (ಸು.1160-65) ಎರಡನೇಯ ಮಗನಾದ ಐದನೇಯ ಭಿಲ್ಲಮನು ತನ್ನ ಅಣ್ಣ ಕಾಲಿಯ ಬಲ್ಲಾಳನ (ಸು.1170-73) ಅಲ್ಪಕಾಲದ ಆಳ್ವಿಕೆಯ ನಂತರ ಪಟ್ಟವೇರಿದ್ದ

ಅವನ ಮಗನನ್ನು ಬದಿಗೊತ್ತಿ 1173 ರಲ್ಲಿ ಸೇಉಣ ವಂಶದ 22 ನೇಯ ಅರಸನಾದನು. ಆವರೆಗೆ ಮಾಂಡಳಿಕ ಹಂತದಲ್ಲಿದ್ದ ಸೇಉಣ ಸತ್ತೆಯನ್ನು ಸ್ವತಂತ್ರಗೊಳಿಸಲು ಹವಣಿಸಿ ತನ್ನ ಕಾಲದಲ್ಲಿ ಆಳುತ್ತಿದ್ದ ಕಲ್ಯಾಣದ ಕಲಚೂರಿಗಳು, ಮುಂದೆ ಮತ್ತೆ ಅಧಿಕಾರ ಪಡೆದ ಚಾಲುಕ್ಯ ನಾಲ್ಕನೇಯ ಸೋಮೇಶ್ವರ ಇವರನ್ನು ಧಿಕ್ಕರಿಸಿ ಸ್ವತಂತ್ರ ರಾಜನಾದನು. ಭಿಲ್ಲಮನು ಕಲ್ಯಾಣವನ್ನೂ ಗೆದ್ದು ತುಂಗಭದ್ರೆಯತ್ತ ಸಾಗಲು 1190ರಲ್ಲಿ ಹೊಯ್ಸಳ ವೀರಬಲ್ಲಾಳನ ವಿರುದ್ಧ ಗದಗು ತಾ॥ನ ಸೊರಟೂರಲ್ಲಿ ನಡೆದ ಉಗ್ರ ಕಾಳಗದಲ್ಲಿ ಸೋತನು. ಆದರೆ ಹೊಯ್ಸಳರು ರಾಯಚೂರು ಜಿಲ್ಲೆಯ ಮಾನ್ವಿಯ ವರೆಗೆ ಸಾಗಿಬಂದರೂ ಕಲ್ಯಾಣ ಅವರ ಕೈ ಸೇರಲಿಲ್ಲ. (ಸೊರಟೂರು ಕಾಳಗದ ವರ್ಷ 1190 ಎಂದು ಡಾ॥ ಶ್ರೀನಿವಾಸ ರಿತ್ತಿ ತೋರಿಸಿಕೊಟ್ಟಿದ್ದಾರೆ).

ಕಲಚೂರಿ ಸೋಮದೇವನನ್ನು ಸೋಲಿಸಿ ತನ್ನದೇ ನಾಣ್ಯಗಳನ್ನು ಟಂಕಿಸಿದ ಐದನೇಯ ಭಿಲ್ಲಮನು ನಾಲ್ಕನೇಯ ಸೋಮೇಶ್ವರನ ಸೇನಾನಿ ಬರ್ಮನ ಕೈಯಲ್ಲಿ ಸೋತರೂ (1183) ಮುಂದೆ ಭಿಲ್ಲಮನೇ ಸುಮಾರು 1186 ರಲ್ಲಿ ಕಲ್ಯಾಣವನ್ನು ಗೆದ್ದನು. ಪೂರ್ವದಲ್ಲಿ ಚೋಳ ಕುಲೋತ್ತುಂಗನನ್ನು ಸೋಲಿಸಿದನು. ದಕ್ಷಿಣದಲ್ಲಿ ಮುಖ್ಯವಾಗಿ ಬೆಳ್ವೊಲವನ್ನು ಗೆದ್ದು ತುಂಗಭದ್ರೆಯನ್ನು ದಾಟಿ ಸಾಗಿದರೂ ಸೊರಟೂರು ಪರಾಜಯ ಆತನ ಮುನ್ನಡೆಗೆ ತಡೆಯಾಗಿ ಆತನನ್ನು ಕೃಷ್ಣೆಯಿಂದ ಆಚೆಗೆ ಹೊಯ್ಸಳರು ಅಟ್ಟಿದರು. ಮುಂದೆ 1192ರಲ್ಲಿ ಭಿಲ್ಲಮನು ತೀರಿಕೊಂಡನು. ಭಿಲ್ಲಮನ ಎರಡು ಶಾಸನಗಳು ಧಾರವಾಡ ಜಿಲ್ಲೆಯಲ್ಲಿವೆ. 1190 ರ ಅಣ್ಣಿಗೇರಿ ಶಾಸನದಂತೆ ಆತನ ಅಧಿಕಾರಿ ಮಹಾಮಂಡಲೇಶ್ವರ ಬಾಚಿದೇವರಸನು ಅಣ್ಣಿಗೇರಿ ಅಮೃತೇಶ್ವರ ಮಂದಿರಕ್ಕೆ ಧಾನ್ಯದಾನ ನೀಡಿದನು. ಬಹುಶಃ ಅದೇ ವರ್ಷದ ಗದುಗಿನ ಶಾಸನದಂತೆ ಭಿಲ್ಲಮನು ಹೇರೂರಲ್ಲಿ ಬೀಡುಬಿಟ್ಟಿರಲು ಹಿರೇಹಂದಿಗೋಳ ಗ್ರಾಮವನ್ನು ಗದಗಿನ ತ್ರಿಕೂಟೇಶ್ವರ ದೇವಾಲಯಕ್ಕೆ ದಾನವಾಗಿ ಬಿಟ್ಟನು. ಈ ಭಿಲ್ಲಮನೇ ರಾಜಧಾನಿಯನ್ನು ಸಿಂದಿನೇರದಿಂದ ದೇವಗಿರಿಗೆ ಸ್ಥಳಾಂತರಿಸಿದವನು.

ಅವನ ಉತ್ತರಾಧಿಕಾರಿ ಹಾಗೂ ಮಗ ಜೈತುಗಿ ಅಥವಾ ಜೈತ್ರಪಾಲನು (1192-1200) ಕೃಷ್ಣಾನದಿಯನ್ನು ದಾಟುವ ಸಾಹಸ ಮಾಡಲಿಲ್ಲ. ಆದರೆ, ಕಾಕತೀಯ ಗಣಪತಿಯನ್ನು ಸೋಲಿಸಿದನು. ಖ್ಯಾತ ಗಣಿತಜ್ಞ ಭಾಸ್ಕರಾಚಾರ್ಯನ ಪುತ್ರ ಲಕ್ಷ್ಮೀಧರ ಈತನ ಮಂತ್ರಿಯಾಗಿದ್ದನು.

ಜೈತುಗಿಯ ಮಗ ಎರಡನೇಯ ಸಿಂಘಣನು ಸೇಉಣ ವಂಶದಲ್ಲೇ ಅತ್ಯಂತ ಗಣ್ಯ ದೊರೆ. ಈತ ದಕ್ಷಿಣದಲ್ಲಿ ಗೋವೆಯ ಹಾಗೂ ಹಾನಗಲ್ ಕದಂಬರನ್ನು ಸೋಲಿಸಿ ಲಕ್ಕುಂಡಿಯನ್ನು 1213 ರಲ್ಲಿ ಹೊಯ್ಸಳದಿಂದ ಕಸಿದುಕೊಂಡರು. ಬೆಳಗುತ್ತಿಯ ಸಿಂದರನ್ನೂ ತನ್ನ ಮಾಂಡಳಿಕರನ್ನಾಗಿ ಮಾಡಿ ತುಂಗಭದ್ರೆಯವರೆಗೂ ರಾಜ್ಯ ವಿಸ್ತರಿಸಿದನು. (1215) ಹೊಯ್ಸಳ ಎರಡನೇಯ ನರಸಿಂಹನು ತಮಿಳುನಾಡಿನ ರಾಜಕೀಯದಲ್ಲಿ ಮಗ್ನನಾಗಿರಲು ಆತನ ಗಮನ ಉತ್ತರದ ಕಡೆ ಹರಿಯುವಂತಿರಲಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲೂ ಈತನ ಆಡಳಿತ ವ್ಯಾಪಿಸಿತ್ತು. ಬಹುಶಃ ಈತನ ಜೊತೆ ಹೋರಾಡುತ್ತಲೇ ಬೆಳಗುತ್ತಿಯ ಸಿಂದ ಈಶ್ವರ 1229ರಲ್ಲಿ ಅಸುನೀಗಲು ಆ ಭಾಗದಲ್ಲಿ ತನ್ನ ಅಧಿಕಾರಿ ಹೊನ್ನಬೊಮ್ಮಿ ಸೆಟ್ಟಿಯನ್ನು ನೇಮಿಸಿ ಸೇಉಣ ಅಧಿಕಾರವನ್ನು ವಿರೋಧಿಸಿದ. ಸಿಂದ ಕೇಶವದೇವ, ಮುಂದೆ ಆತನ ಮಗ ಬೀರದೇವ ಇವರನ್ನು ಬಗ್ಗುಬಡಿದನು. 1247 ರಲ್ಲಿ ನ್ಯಾಮತಿಯಲ್ಲಿ ಸಿಂದರ ಜೊತೆ ನಡೆದ ಕೊನೆಯ ಯುದ್ಧದ ಉಲ್ಲೇಖವಿದ್ದು ಮುಂದೆ ಸಿಂದರು ಹೇಳ ಹೆಸರಿಲ್ಲದಾದರು. ಆದರೆ 1223 ರಿಂದ 1235ರ ನಡುವೆ ಸೇಉಣರಿಗೂ ಹೊಯ್ಸಳ ನರಸಿಂಹನಿಗೂ ತುಂಗಭದ್ರೆಯ ದಕ್ಷಿಣದಲ್ಲಿ ಯುದ್ಧಗಳು ನಡೆದವು. ಆದರೆ ಧಾರವಾಡ ಜಿ॥ ಪ್ರದೇಶದಲ್ಲಿ ಸಿಂಘಣನ ಹಿಡಿತಕ್ಕೆ ತೊಂದರೆಯಾಗಲಿಲ್ಲ. ವಾಸ್ತವವಾಗಿ ರಟ್ಟಿಹಳ್ಳಿಯ ಒಂದು ಶಾಸನದಂತೆ, ಸೇಉಣರ ಕೊಂಕಣದಲ್ಲಿದ್ದ ಅಧಿಕಾರಿ ಆರಿಯ ಮಲ್ಲಿಸೆಟ್ಟಿ ದ್ವಾರಸಮುದ್ರವನ್ನು ಗೆದ್ದು ಹೊಯ್ಸಳ ನರಸಿಂಹನಿಗೆ 12 ಆನೆಗಳನ್ನು ಗೆದ್ದುಕೊಂಡನೆಂದು ಹೇಳಿದ್ದು ಈತನು ಬೆಳ್ವೊಲ -300, ಪುಲಿಗೆರೆ-300 ಹಾಗೂ ಬನವಾಸಿ-12,000 ಗಳ ಮಾಂಡಲಿಕನಾಗಿದ್ದ. ಈತನಿಗೂ ಮೊದಲು 1222ರ ಶಾಸನದಂತೆ ಈ ಪ್ರದೇಶಗಳ ಆಡಳಿತವನ್ನು ವಂಕುವ ರಾಹುತ ನೋಡಿಕೊಳ್ಳುತ್ತಿದ್ದ. ಇದಕ್ಕೂ ಹಿಂದಿದ್ದ ಮಾಯಿದೇವ ಪಂಡಿತನೆಂಬ ಬನವಾಸಿಯ ಅಧಿಕಾರಿಯು ಲಕ್ಷ್ಮೇಶ್ವರ ಊರಿಗೆ 1215ರಲ್ಲಿ ದಾನವೊಂದನ್ನು ಮಾಡಿದ ವಿಚಾರ ಡಾ॥ ಶ್ರೀನಿವಾಸ ರಿತ್ತಿ ತೋರಿಸಿದ್ದಾರೆ.

ಧಾರವಾಡ ಜಿಲ್ಲೆಯ ಮೇಲೆ ಪೂರ್ತಿ ಹಿಡಿತ ಹೊಂದಿದ್ದ ಸಿಂಘಣನ ಶಾಸನಗಳ ಪೈಕಿ 1202 ರಲ್ಲಿ ಸೂಡಿ ಶಾಸನದಲ್ಲಿ ಕಿಸುಕಾಡು-70ಕ್ಕೆ ಸುಂಕವಿನಾಯತಿ ನೀಡಿದ ವಿಚಾರ, 1213ರಲ್ಲಿ ಗದಗಿನ ತ್ರಿಕೂಟೇಶ್ವರ ದೇವಾಲಯಕ್ಕೆ ಊರ 72ಮಹಾಜನಗಳು ನೀಡಿದ ಭೂದಾನಕ್ಕೆ ಅನುಮತಿ ನೀಡಿದ ಸಂಗತಿ, ಹಾಗೆಯೇ 1215ರಲ್ಲಿ ನಾಗಾವಿಯ ಮಹಾಬಲೇಶ್ವರ ದೇವಾಲಯಕ್ಕೆ ದಾನ

ನೀಡಿದ ಸಂಗತಿಗಳು ದಾಖಲಾಗಿವೆ. ಗುಡಿಗೇರಿಯ ತೆಲ್ಲಿಗ-50 ಒಕ್ಕಲು (ಗಾಣಿಗರ ಶ್ರೇಣಿ) ಆ ಊರ ಕಾಳೇಶ್ವರ ದೇವರಿಗೆ ನಂದಾದೀವಿಗೆಗೆ ಎಣ್ಣೆ ದಾನಮಾಡಿದ್ದಾರೆ. 1227ರಲ್ಲಿ ಸಂಗಯ್ಯ ಎಂಬಾತನ ಸೋಮನಾಥ ದೇವಾಲಯದ ಪರಿಸರದಲ್ಲಿ ರಮ್ಮೇಶ್ವರ ದೇವಾಲಯ ಸ್ಥಾಪಿಸಿದ್ದು ಹಾಗೂ ಬೀಚಸೆಟ್ಟಿಯೆಂಬ ದಂಡನಾಯಕನ ಮಗಳು ರಾಜಲದೇವಿ 1247ರಲ್ಲಿ ಶ್ರೀವಿಜಯಬಸದಿ ಜೀರ್ಣೋದ್ಧಾರ ಮಾಡಿ ಅದಕ್ಕೆ ದಾನಮಾಡಿದ ಶಾಸನಗಳು ಲಕ್ಷ್ಮೇಶ್ವರದಲ್ಲಿವೆ. ಈ ಬೀಚಸೆಟ್ಟಿಯು ದ್ವಾರಸಮುದ್ರವನ್ನು ಸೂರೆಮಾಡಿದ್ದನೆಂದು ಹರಳಹಳ್ಳಿಯ 1244-45ರ ತಾಮ್ರಪಟ ಹೇಳುತ್ತಿದ್ದು ಹರಳಹಳ್ಳಿಯಲ್ಲಿ ಒಂದು ಶಿವಾಲಯವನ್ನು ಈತನು ಕಟ್ಟಿಸಿದನು. ಸಿಂಘಣನ ಅಣ್ಣಿಗೇರಿ ಶಾಸನದಲ್ಲಿ ಆ ಊರ ರುದ್ರಯ್ಯ ಹಾಗೂ ಚಂದ್ರಯ್ಯ ಎಂಬುವರು ಧರ್ಮೇಶ್ವರ ದೇವಾಲಯ ನಿರ್ಮಿಸಿದರು. ಮಂತ್ರವಾಡಿ ಶಾಸನದಂತೆ ಹೊನ್ನಬೊಮ್ಮಸೆಟ್ಟಿಯು ಸೊನ್ನಲಿಗೆಯ (ಸೊಲ್ಲಾಪುರ) ಕಪಿಲಮಲ್ಲಿಕಾರ್ಜುನ ದೇವರಿಗೆ ಮಂತ್ರವಾಡಿ ಊರನ್ನು ದಾನಮಾಡಿದ ಉಲ್ಲೇಖವಿದೆ (1234). ಸಾತೇನಹಳ್ಳಿಯಲ್ಲಿ (ಹಾನಗಲ್ ತಾ||) 1214ರಲ್ಲಿ ನಾಡಪ್ರಭು ಬೊಮ್ಮಿಸೆಟ್ಟಿಯು ಶಂಕರನಾರಾಯಣ ದೇವಾಲಯವನ್ನು ಕಟ್ಟಿಸಿದನು. ಹಾನಗಲ್ಲು ಕದಂಬ ವಂಶದ ಮಲ್ಲಿದೇವನ ಪತ್ನಿ ಪದ್ಮಲದೇವಿ ಹುಲಗೂರಲ್ಲಿ ("ಹುಲ್ಲಂಗೂರು", ಶಿಗ್ಗಾಂವಿ ತಾ||) ಒಂದು ಅಗ್ರಹಾರ (ಬ್ರಹ್ಮಪುರಿ)ಯನ್ನು ಸ್ಥಾಪಿಸಿದಳು (1245). ಶಿಗ್ಗಾಂವಿ ತಾ||ನ ಚಿಕ್ಕಮಲ್ಲೂರಿನಲ್ಲಿ ಧವಳೇಶ್ವರ ದೇವಾಲಯಕ್ಕೆ ಹೊನ್ನಬೊಮ್ಮಿಸೆಟ್ಟಿ ಎಳಬಳ್ಳಿ ಗ್ರಾಮವನ್ನು ದಾನಮಾಡಿದನು. ಬಾಳಂಬೀಡು(ಚಿಕ್ಕೆರೂರ ಬಳಿ) ಶಾಸನದಂತೆ ದಂಡನಾಯಕ ಬಾಚಯ್ಯ ಪಂಡರಂಗೇಶ್ವರನಿಗೆ ದಾನ ನೀಡಿದ ಶಾಸನವಿದೆ. (ಇದು 'ಪಂಡರಿಗೆ' ಪಂಡರಪುರವೇ ಎಂದು ಸಂದೇಹ ಬರುತ್ತದೆ). ಹಾವೇರಿಯ ಸಿದ್ಧನಾಥ ದೇವಾಲಯಕ್ಕೆ ನೀಡಿದ ಮೂರು ದಾನಗಳನ್ನು ಉಲ್ಲೇಖಿಸುವ ಶಾಸನಗಳು ಸಿಂಘಣನ ಕಾಲದವು (1229-31). ಪಾಂಡ್ಯದೇವನೆಂಬಾತ (ಉಚ್ಚಂಗಿಯ ವಂಶವೇ ಹೇಗೆಂದು ತಿಳಿಯದು)ನ ವಿರುದ್ಧ ಹೋರಾಡಿ ಮಡಿದ ಐದು ಜನ ವೀರರನ್ನು ಹೆಸರಿಸುವ ವೀರಗಲ್ಲುಗಳು ಹಾವೇರಿ ತಾ|| ಕಳ್ಳಿಹಾಳದಲ್ಲಿ ಇವೆ (1236). ಸಿಂಘಣನ ಆಡಳಿತ ಧಾರವಾಡ ಜಿಲ್ಲೆಯಲ್ಲಿ ಭದ್ರವಾಗಿ ನೆಲೆಯಾಗಿ ಅನೇಕ ಜನಹಿತ ಕಾರ್ಯಗಳಿಗೆ ಬೆಂಬಲ ನೀಡಿದ ವಿವರ ಈ ಶಾಸನಗಳಿಂದ ತಿಳಿಯುತ್ತದೆ.

ಸಿಂಘಣನ ಮಗ ಜೈತುಗಿಯ ಪುತ್ರ ಕೃಷ್ಣ ಅಥವಾ ಕನ್ನರ ಸಿಂಘಣನ ಉತ್ತರಾಧಿಕಾರಿಯಾದ (1247-61). ಬೆಳಗುತ್ತಿಯ ಸಿಂದರನ್ನು ಈತ ನಾಮಶೇಷಗೊಳಿಸಿದ (1247). ಹೊಯ್ಸಳ ಸೋಮೇಶ್ವರನ ವಿರುದ್ಧ ಹೋರಾಡಿ ಚಿತ್ರದುರ್ಗ ಜಿಲ್ಲೆಯವರೆಗೂ ಈತನು ಸಾಗಿದ. ಈತನ ಕಾಲದಲ್ಲಿ ನಾಗಾವಿಯ ಮಹಾಬಲೇಶ್ವರ ದೇವರಿಗೆ ದಾನನೀಡಿದ ಶಾಸನ(1255),ಅದೇ ರೀತಿ ನರೇಗಲ್‌ನ ಕಲಿದೇವರಿಗೆ ದಾನ ನೀಡಿದ ತಾರೀಕಿಲ್ಲದ ಶಾಸನಗಳಿವೆ. ಈತನ ಅಧಿಕಾರಿ ಚಾವುಂಡರಾಯ ಹಾವೇರಿ ಅಗ್ರಹಾರದ ದತ್ತಿಯನ್ನು ನವೀಕರಿಸಿದ (1255). ಅಲ್ಲದೆ ಗೋಪಾಲ ದೇವರ ಹೂದೋಟಕ್ಕೆ ವಿಜಯಾಪುರ ಮಲ್ಲಿಸೆಟ್ಟಿ ಸುವರ್ಣ ದಾನಮಾಡಿದ ವಿಚಾರವಿದೆ.

ಈತನ ಉತ್ತರಾಧಿಕಾರಿ ಈತನ ತಮ್ಮನಾದ ಮಹಾದೇವ (1261-71)ನು. ಕೊಂಕಣದ ಶಿಲಾಹಾರ ಸೋಮೇಶ್ವರನನ್ನು ಸೋಲಿಸಿ ಕೊಂಕಣ ಚಕ್ರವರ್ತಿಯೆನಿಸಿದನು. ಹೊಯ್ಸಳರು ಈತನನ್ನು ಸೋಲಿಸಿದರೂ (1270) ಚಿತ್ರದುರ್ಗ ಜಿಲ್ಲೆಯಲ್ಲಿನ ಇವನ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳೂ ಹಾಗೆಯೇ ಉಳಿದವು. ಇವನ ಕಾಲದಲ್ಲಿ ತಿಪ್ಪರಸನು ನೂರುಂಬಾಡ(ರಟ್ಟೀಹಳ್ಳಿ)ದಲ್ಲಿ ಅಧಿಕಾರಿಯಾಗಿ ಇದ್ದ. ಈತನ ಮಹಾಪ್ರಧಾನ ದೇವರಸನು ಸೊನ್ನಲಿಗೆಯ (ಸೊಲ್ಲಾಪುರ) ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ಚಂಗೂರು ಗ್ರಾಮವನ್ನು ದಾನ ನೀಡಿದನೆಂದು ಸಂಗೂರು ಶಾಸನ ತಿಳಿಸುತ್ತದೆ (1265). ಇವನ ಚೌಡದಾನಪುರ ಶಾಸನದಲ್ಲಿ ಮಾಂಡಲಿಕ ಗುತ್ತರು ಅಲ್ಲಿನ ಮುಕ್ತೇಶ್ವರ ದೇವಾಲಯಕ್ಕೆ ದಾನಕೊಟ್ಟ ಉಲ್ಲೇಖವಿದೆ(1262-65). 1266ರಲ್ಲಿ ಸುಂಕದ ಅಧಿಕಾರಿ ಬೈಚರಸನು ಹಾವೇರಿಯ ಸಿದ್ಧನಾಥ ದೇವರಿಗೆ ಸುಂಕಗಳನ್ನು ದಾನ ನೀಡಿದ ವಿವರವಿದೆ. ಮಹಾದೇವನ ನಂತರ ಇವನ ಮಗ ಅಮಣನಿಗೆ ಪಟ್ಟವಾದರೂ ಕೃಷ್ಣನ ಮಗ ರಾಮಚಂದ್ರನು ಪಟ್ಟವನ್ನು ಕಸಿದುಕೊಂಡ (1271-1312). ರಾಮಚಂದ್ರನೂ ಉತ್ತರದಲ್ಲಿ ಮಾಳವ ಹಾಗೂ ಗುಜರಾತಿನ (ವಾಘೇಲವಂಶದ) ಅರಸನನ್ನು ಸೋಲಿಸಿದ. ಕುಮ್ಮಟದ ಸಿಂಗೆಯ ನಾಯಕನನ್ನು ಸೋಲಿಸಲಾರದೆ ಅವನ ಜೊತೆ ಸ್ನೇಹ ಮಾಡಿಕೊಂಡ. ಲಕ್ಷ್ಮೇಶ್ವರದ 1287ರ ಶಾಸನದಲ್ಲಿ ಕುಮ್ಮಟದ ಸಿಂಗೆಯನ ವಿರುದ್ಧ ನಡೆದ ಕದನದಲ್ಲಿ ಸೇಉಣ ಸೇನಾನಿ ದಾಮೆಯ ನಾಯಕನ ಮರಣದ ಉಲ್ಲೇಖವಿದೆ. ಸಿಂಗೆಯನ ಮಗ ಕಂಪಿಲ (ಖಂಡೆಯರಾಯ) ಇವನ ಜೊತೆ ಅನೇಕ ದಂಡಯಾತ್ರೆಗಳಲ್ಲಿ ಪಾಲುಗೊಂಡ. ಹೊಸಗುಂದ(ಶಿವಮೊಗ್ಗ ಜಿ||) ಸಾಂತರರು ಇವರ ಮಾಂಡಲಿಕರಾದರು. ಸೇಉಣ ಸೇನಾನಿ ಸಾಳ್ವ ತಿಕ್ಕಣ 1276ರಲ್ಲಿ ದ್ವಾರಸಮುದ್ರ (ಹೊಯ್ಸಳ ರಾಜಧಾನಿ)ದ ಮೇಲೆ ದಾಳಿಮಾಡಿದ. 1296ರಲ್ಲಿ ದೆಹಲಿ ಸುಲ್ತಾನ ಅಲ್ಲಾ

ಉದೀನ್ ಖಿಲ್ಜಿ ದೇವಗಿರಿಯ ಮೇಲೆ ದಾಳಿ ಮಾಡಿ ಕಪ್ಪ ಸಂಗ್ರಹಿಸಿದ. ಆದರ ನಂತರವೂ ರಾಮಚಂದ್ರನು ಹೊಯ್ಸಳ ಮೂರನೇಯ ಬಲ್ಲಾಳನ ವಿರುದ್ಧ ಎರಡುಬಾರಿ (1301 ಮತ್ತು 1304) ಯುದ್ಧ ನಡೆಸಿ ಶಕ್ತಿಕ್ಷಯ ಮಾಡಿಕೊಂಡ. ಮುಂದೆ ದೆಹಲಿಯ ಸೇನಾನಿ ಮಲಿಕ್ ಕಾಫರ್, ದೇವಗಿರಿಯ ಮೇಲೆ ದಾಳಿಮಾಡಿ ರಾಮಚಂದ್ರನನ್ನು ಬಂಧಿಸಿ ದೆಹಲಿಗೆ ಒಯ್ದು ದೆಹಲಿಯ ಸುಲ್ತಾನನ ಮಾಂಡಲಿಕನಾಗಲು ಒಪ್ಪಿಸಿದ. ಮುಂದೆ ಮಲಿಕ್ ಕಾಫರನು ಓರಂಗಲ್ ಮತ್ತು ದ್ವಾರಸಮುದ್ರಗಳ ಮೇಲೆ ದಾಳಿ ಮಾಡಿದಾಗ ಈತನು ಅವನಿಗೆ ನೆರವಾದ. 1312ರಲ್ಲಿ ರಾಮಚಂದ್ರ ತೀರಿಕೊಂಡ.

ರಾಮಚಂದ್ರನ ತಡಕೋಡ ಶಾಸನದಲ್ಲಿ ತನ್ನ ತಾಯಿಯ ಇಚ್ಛೆಯಂತೆ ಆ ಊರಲ್ಲಿ ಒಂದು ಬಸದಿಯನ್ನು ನಿರ್ಮಿಸಿದ ಉಲ್ಲೇಖವಿದೆ(1282). ಡಂಬಳದ ಭೋಗದೇವ ದೇವಾಲಯಕ್ಕೆ 1283ರಲ್ಲಿ ಭೂದಾನ ಮಾಡಲಾಗಿದೆ. ಅದೇ ರೀತಿ ಡಂಬಳದ ನಗರ ಜಿನಾಲಯಕ್ಕೆ ಸುಂಕವೊಂದನ್ನು 1289ರಲ್ಲಿ ಸೇನಾನಿ ಸಾಳುವ ಚಾವುಂಡ ದಾನನೀಡಿದ್ದಾನೆ. ಚೌಡದಾನಪುರದ ಮುಕ್ತೇಶ್ವರ ದೇವಾಲಯಕ್ಕೆ ಈತನ ಪ್ರಧಾನಿ ಪರಶುರಾಮ ದೇವನು ಭೂದಾನ ಕೊಡಿಸಿದ್ದಾನೆ. ಹಾವೇರಿಯ ಸಿದ್ದನಾಥ ದೇವಾಲಯಕ್ಕೆ ಸುಂಕದ ಅಧಿಕಾರಿ 1298ರಲ್ಲಿ ನೀಡಿದ ದಾನ ಶಾಸನವಿದೆ. ಮೆಣಸಿನಹಾಳು (1284) ಹಾಗೂ ಬೆನಕನಕೊಂಡದಲ್ಲಿ ಕದನದಲ್ಲಿ ಮಡಿದ ವೀರರ ಸ್ಮಾರಕ ಶಾಸನಗಳಿವೆ. ಮೆಣಸಿನಹಾಳಲ್ಲಿ ಸತ್ತವೀರರ ಹೆಸರು ಕಲಿಗ ಮತ್ತು ಸಿರಿಗ ಎಂದಿದ್ದು ಬೆನಕನಕೊಂಡದಲ್ಲಿ ವೇಳೆವಾಳಿ ಚೌಡಯ್ಯನಾಯಕ ಮತ್ತು ಅವನ ಹೆಂಡತಿಯ ಮರಣದ ಉಲ್ಲೇಖವಿದೆ. ಸರ್ವಾಧಿಕಾರಿ ಕನ್ನರದೇವನು ಹುಲಿಗೆರೆ(ಲಕ್ಷ್ಮೇಶ್ವರ) ಮತ್ತು ಪಾಂಡ್ಯನಾಡುಗಳ ಅಧಿಕಾರಿಯಾಗಿದ್ದ. ದಾಮೋದರ ದೇವ ರಾಣೆಯ ಎಂಬ ರಾಮಚಂದ್ರನ ವಿಶ್ವಾಸಿಕ ಅಧಿಕಾರಿ ಧಾರವಾಡ ಕೇಂದ್ರದಲ್ಲಿ ಇದ್ದ. ಸಾಳ್ವ ತಿಕ್ಕಮನು ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿದ್ದಾನೆ.

ರಾಮಚಂದ್ರನ ನಂತರ ಪಟ್ಟವೇರಿದ ಮೂರನೇಯ ಸಿಂಘಣನ ಕಾಲದಲ್ಲಿ ಮಲಿಕ್‌ಕಾಫರ್ 1313ರಲ್ಲಿ ದೇವಗಿರಿಯ ಮೇಲೆ ದಾಳಿಮಾಡಿ ಸಿಂಘಣನನ್ನು ಕೊಂದ. ಮುಂದೆ ರಾಮಚಂದ್ರನ ಅಳಿಯ ಹರಪಾಲದೇವನು ರಾಜ್ಯವನ್ನು ಮತ್ತೆ ಪುನರುಜ್ಜೀವನಗೊಳಿಸಲು ಯತ್ನಿಸಲು 1318ರಲ್ಲಿ ಅವನೂ ದೆಹಲಿ ಸುಲ್ತಾನರಿಂದ ಕೊಲ್ಲಲ್ಪಟ್ಟ. ಮೂರನೇಯ ಸಿಂಘಣನ ಮಗ ಮೂರನೇಯ ಮಲ್ಲುಗಿ 1334ರಲ್ಲಿ ದೆಹಲಿ ಸುಲ್ತಾನರ ಮಾಂಡಳಿಕನಾಗಿದ್ದನೆಂಬ ಶಾಸನವಿದೆ, ಎಂದು ಡಾ|| ಎ.ವಿ. ನರಸಿಂಹಮೂರ್ತಿ ತೋರಿಸಿದ್ದಾರೆ. ಆದರೆ ಸೇಉಣ ಸತ್ತೆ ಅವನ ನಂತರ ಮುಗಿಯಿತು.

ರಾಮಚಂದ್ರ ದೇವನ ನಂತರ ಧಾರವಾಡ ಜಿಲ್ಲೆಯಲ್ಲಿ ಸೇಉಣರ ಯಾವುದೇ ಶಾಸನವಿಲ್ಲ. ಸುಮಾರು 50 ವರ್ಷಗಳ ಕಾಲ ಧಾರವಾಡ ಜಿಲ್ಲೆಯು ಯಾವ ರಾಜರ ಬಿಗಿ ಹಿಡಿತಕ್ಕೂ ಒಳಪಡದೆ ಇಲ್ಲಿ ಅರಾಜಕತೆ ತಾಂಡವಾಡುತ್ತಿರಬಹುದು. ದೆಹಲಿ ಸುಲ್ತಾನರ ಹಿಡಿತವೂ ತೀರ ಸಡಿಲಾದ ಸ್ವರೂಪದ್ದಾಗಿತ್ತು. ಇಲ್ಲಿ ಇದ್ದ ಎಲ್ಲ ಮಾಂಡಲಿಕ ವಂಶಗಳನ್ನು ನಾಮಶೇಷ ಮಾಡಿದ ಸೇಉಣರು ಇಂಥ ರಾಜಕೀಯ ನಿರ್ವಾತದ ಸೃಷ್ಟಿಗೆ ಕಾರಣರಾದರೆನ್ನದೆ ವಿಧಿಯಿಲ್ಲ. ಹದಿನಾಲ್ಕನೇಯ ಶತಮಾನದ ಆರಂಭಕ್ಕೆ ಕಂಪಿಲಿಯ ಸಿಂಗೆಯ ನಾಯಕನು (1300-27) ಈ ನಿರ್ವಾತ ತುಂಬಲು ಯತ್ನಿಸಿರಬೇಕು. (ಇವನದು ಹೊಯ್ಸಳ ವಂಶದ ಒಂದು ಶಾಖೆಯೆಂದು ಸೀತಾರಾಮ ಜಾಗಿರ್ದಾರ ತೋರಿಸಿಕೊಟ್ಟಿದ್ದಾರೆ). ಆದರೆ ಆತನೂ ಅವನ ಮಗ ಕುಮಾರ ರಾಮನೂ ದೆಹಲಿಯ ಸೇನೆಯ ಜೊತೆ ಹೋರಾಡಿ ಅಸುನೀಗಿದರು. ಮುಂದಿನ ವಿಜಯನಗರದ ಕಾಲದಲ್ಲಿ ಧಾರವಾಡ ಜಿಲ್ಲೆಯ ಅನೇಕ ಕಡೆ ಕುಮಾರ ರಾಮನನ್ನು ದೈವೀಕರಿಸಿ ದೇವಾಲಯಗಳನ್ನು ಕಟ್ಟಿದ್ದನ್ನು ಕಂಡಾಗ ತಾವು ತಮ್ಮ ರಕ್ಷಕನನ್ನು ಕಳೆದುಕೊಂಡೆವೆಂಬ ಭಾವನೆ ಹಾಗೂ ಅವನ ಪ್ರಾಣ ತ್ಯಾಗಕ್ಕಾಗಿ ಅವನನ್ನು ಸ್ಥಳೀಕರು ದೈವೀಕರಿಸಿರಬೇಕೆಂಬ ಊಹೆಗೆ ಎಡೆ ಇದೆ. ಬಹುಶಃ ಆಗಲೇ ಹಂಪೆಯ ಪರಿಸರದಲ್ಲಿ ಇದ್ದ ಹರಿಹರ ಹಾಗೂ ಬುಕ್ಕರು ಹೊಯ್ಸಳರ ಇಲ್ಲವೆ ಕಂಪಿಲಿಯ ದೊರೆಗಳ ಪರವಾಗಿ ಧಾರವಾಡ ಜಿಲ್ಲೆಯಲ್ಲಿ ಪ್ರಭಾವ ಹೊಂದಿರಬೇಕು. ಆದರೆ ಇಂಥ ಊಹೆಗೆ ಶಾಸನಾಧಾರವೇನೂ ಇಲ್ಲ. 1334ರ ವರೆಗೆ ದೆಹಲಿ ಸುಲ್ತಾನರ ಮಾಂಡಲಿಕರಾಗಿ ಮುಂದುವರಿದಿದ್ದ ಸೇಉಣರಿಗೇ ತಾತ್ವಿಕವಾಗಿ ಆಗ ಈ ಪ್ರದೇಶ ಸೇರಿತ್ತೆಂದರೂ ಅವರು ಯಾವುದೇ ಪ್ರಭಾವವನ್ನು ಈ ಪ್ರದೇಶದ ಮೇಲೆ ಹೊಂದಿದ್ದರೆನ್ನಲು ಆಧಾರ ಕಾಣಿಸದು.

**ಮಾಸವಾಡಿಯ ಸೇಉಣರು**

ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಮಾಂಡಳಿಕನಾಗಿ ಸೇಉಣರ ಒಂದು ಶಾಖೆಯ ಕುಪ್ಪೆಅರಸ, ಪುಲಿಗೆರೆ-300ರಲ್ಲಿ 865 ಸುಮಾರಿಗೆ ಆಳುತ್ತಿದ್ದು 869ರವರೆಗೆ ಆತನು ಅಲ್ಲಿದ್ದ. ಮುಂದೆ ಎರಡನೇಯ ಕೃಷ್ಣನ ಕಾಲದಲ್ಲಿ ಅವನು ಕೊಗಳಿ -500 (ಬಳ್ಳಾರಿ ಜಿ||) ಮತ್ತು ಮಾಸವಾಡಿ-140 (ಡಂಬಳ ಮುಂಡರಗಿ ತಾ||ಪ್ರದೇಶ)ಯಲ್ಲಿ ಆಡಳಿತ ನಡೆಸಿದ. ಮೇವುಂಡಿ ಶಾಸನದಲ್ಲಿ ಆ ಊರ ಕುಪ್ಪೇಶ್ವರ ದೇವಾಲಯಕ್ಕೆ ಈತ ದಾನ ನೀಡಿದ್ದಾನೆ. ಅದನ್ನು ಈತನೇ ಕಟ್ಟಿಸಿರಬಹುದು. ಮುಂದೆ ಶಾಸನ ಉಲ್ಲೇಖಿಸುವ 'ಯಾದವಾನ್ವಯ' ಹಾಗೂ 'ದ್ವಾರಾವತೀ ಪುರವರಾಧೀಶ್ವರ' ನಾದ ಅಯ್ಯವರ್ಮರಸನು 1024ರಲ್ಲಿ ಚಾಳುಕ್ಯ ಜಗದೇಕಮಲ್ಲನ ಮಾಂಡಳಿಕನಾಗಿ ಕಾಣಿಸಿಕೊಳ್ಳುತ್ತಾನೆ. ಮುಂದೆ ಎರಡನೇಯ ಜಯಸಿಂಹನ ಮಾಂಡಳಿಕನಾಗಿ ನಾಗವರ್ಮನ ಉಲ್ಲೇಖವಿದೆ. ಸೇಉಣ ವಂಶದ ಅರಸು ಎಂದಿರುವ ಗೊಮ್ಮರಸ 1041ರಲ್ಲಿ ಕಾಣಿಸಿಕೊಳ್ಳುತ್ತಾನೆ. 1044 ರಲ್ಲಿ ಸತ್ತೂರು ಶಾಸನದಲ್ಲಿ ಎರಡನೇಯ ಕುಪ್ಪರಸನ ಉಲ್ಲೇಖವಿದೆ. ಈತನು ಮಾಸವಾಡಿ 140 ರ ಆಡಳಿತಗಾರ. ಇವರ ಉತ್ತರಾಧಿಕಾರಿ ಅಜ್ಜರಸ ಚಾಳುಕ್ಯ ರಾಜಪುತ್ರಿ ಅಕ್ಕಾದೇವಿಯ ಮಾಂಡಳಿಕನಾಗಿ 1050ರಲ್ಲಿ ಆಳುತ್ತಿದ್ದ ಬಗ್ಗೆ ಶಾಸನಾಧಾರವಿದೆ. ಚೋಳ, ಆಂಧ್ರ, ಮುಂತಾದ ಅರಸರ ವಿರುದ್ಧ ಚಾಳುಕ್ಯರು ನಡೆಸಿದ ಯುದ್ಧಗಳಲ್ಲಿ ಈತನು ಪಾಲ್ಗೊಂಡಂತೆ ಇದೆ. ಡಂಬಳದ ಅಜ್ಜಮೇಶ್ವರ ದೇವಾಲಯ ಈತನ ಸ್ಮಾರಕವಾಗಿರಬಹುದು.

ಅಜ್ಜರಸನ ಉತ್ತರಾಧಿಕಾರಿ ಅವನ ಮಗ ಮಾಧವ ಅಥವಾ ಮಾಚಿಭೂಪ(1054). ಈತನು ಸೋಮೇಶ್ವರ ಕಾಲದಲ್ಲಿ ಉಚ್ಛಂಗಿ ಪಾಂಡ್ಯರ ವಿರುದ್ಧ ನಡೆದ ಕಾಳಗದಲ್ಲಿ ಮೃತನಾಗಿರಬೇಕು. ಇವನ ಉತ್ತರಾಧಿಕಾರಿ ಸೋಮದೇವನು ಆರನೇಯ ವಿಕ್ರಮಾದಿತ್ಯನ ಮಹಾ ಸಾಮಂತ(1082). ಈತನ ನಂತರ ಆಳಿದವನು ಮಹೇಂದ್ರ(1091). ಮುಂದಿನ ಅರಸು ಎರಡನೇಯ ಗೊಮ್ಮರಸನ ವಿಚಾರ ಅವನ ಮಗನಾದ ಪೆರ್ಮಾಡಿಯ 1113ರ ಶಾಸನದಿಂದ ತಿಳಿಯುತ್ತದೆ. ಪೆರ್ಮಾಡಿಯ ಆಡಳಿತ 1147ವರೆಗೆ ನಡೆಯಿತು. ಇವನು 'ಸೇಉಣ ಭೀಮ' ಮುಂತಾದ ಬಿರುದುಗಳನ್ನು ಹೊಂದಿದ್ದ. ಈತನು ಆರನೇಯ ವಿಕ್ರಮಾದಿತ್ಯ ಮತ್ತು ಮುಂದೆ ಎರಡನೇಯ ಜಗದೇಕಮಲ್ಲನ ಮಾಂಡಳಿಕನಾಗಿದ್ದ. ಈತನಿಗೆ ಮಾಸವಾಡಿಯ ಜೊತೆ ಹಗರಟಗೆ -300ನ್ನು ಒಪ್ಪಿಸಲಾಗಿತ್ತು. (ಮುದ್ದೆಬಿಹಾಳ ಲಿಂಗಸುಗೂರು ತಾ||ಗಳ ಪ್ರದೇಶ).

ಪೆರ್ಮಾಡಿಯ ನಂತರ ಅವನ ಎರಡನೇಯ ಮಗ (ಮೂರನೇಯ) ಕುಪ್ಪನ 1147ರ ಶಾಸನವಿದೆ. ಬೂದಿಹಾಳದ ಕಲಿದೇವಸ್ವಾಮಿ ದೇವಾಲಯಕ್ಕೆ ಬಮ್ಮಿಸೆಟ್ಟಿ ಭೂಮಿ ಬಿಟ್ಟ ದಾನ ಶಾಸನವಿದು. (ಹಿರಿಮಗ ಒಂದನೇಯ ಹರಿಹರ ಆಳಿದಂತೆ ಇಲ್ಲ). ಕುಪ್ಪನು ತಾನು 'ಸಿಂಧ ಸೇಉಣ' ವಂಶದವನೆಂದು ಹೇಳಿಕೊಂಡಿದ್ದಾನೆ. ಈತನ ರಾಣಿ ರೆಮ್ಮಾದೇವಿಯ ಮಗ ಬಲ್ಲಾಳ ಮಾಸವಾಡಿಯಲ್ಲಿ ಸೇಉಣ ಸಿಂಘಣನ ಮಾಂಡಳಿಕನಾಗಿ ಆಳಿದ(1218). ಇದಕ್ಕೂ ಮೊದಲು ಅವನು ಹೊಯ್ಸಳ ಸ್ವಾಮ್ಯದಡಿ ಇದ್ದಿರಬೇಕು. ಈತನಿಗೆ ಇಬ್ಬರು ಗಂಡುಮಕ್ಕಳಿದ್ದರೂ ಬಲ್ಲಾಳನೇ ಈ ವಂಶದ ಕೊನೆಯ ಮಾಂಡಳಿಕ. ದೇವಗಿರಿಯ ಸಿಂಘಣ ಇವರ ಆಡಳಿತವನ್ನು ಕೊನೆಗೊಳಿಸಿದ. (ಡಾ|| ಶ್ರೀನಿವಾಸ ರಿತ್ತಿ ತಮ್ಮ 'ದಿ ಸೇಉಣಾಸ್' ಪುಸ್ತಕದಲ್ಲಿ ಈ ವಂಶದ ವಿಚಾರ ಚರ್ಚಿಸಿದ್ದಾರೆ).

**ಹೊಯ್ಸಳರು**

ದ್ವಾರಸಮುದ್ರ (ಹಳೇಬೀಡು)ದ ಹೊಯ್ಸಳರು ಕಲ್ಯಾಣದ ಚಾಳುಕ್ಯದ ಮಾಂಡಳಿಕರಾಗಿದ್ದರು. ಚಾಳುಕ್ಯ ಒಂದನೇಯ ಸೋಮೇಶ್ವರನು ಹೊಯ್ಸಳ ದೇವಿ ಎಂಬ ರಾಜಕುಮಾರಿಯನ್ನು ತನ್ನ ಈ ಮಾಂಡಳಿಕರ ವಂಶದಿಂದ ವರಿಸಿದ್ದ. ಹೊಯ್ಸಳ ಎರೆಯಂಗನು (1098-1102) ಚಾಳುಕ್ಯರ ಅನೇಕ ಉತ್ತರ ದಂಡಯಾತ್ರೆಗಳಲ್ಲಿ (ಧಾರಾ ಮುತ್ತಿಗೆ ಇತ್ಯಾದಿ) ಭಾಗವಹಿಸಿದ್ದನು. ಎರೆಯಂಗನ ಎರಡನೇಯ ಮಗ ವಿಷ್ಣುವರ್ಧನನು (1108-1142) ಗಂಗರಿಂದ ಚೋಳರು ಗೆದ್ದಿದ್ದ, ಹಾಗೂ ಕಲ್ಯಾಣ ಚಾಳುಕ್ಯರಿಂದ ಮತ್ತೆ ವಶಪಡಿಸಿಕೊಳ್ಳಲಾಗದ ಗಂಗವಾಡಿಯನ್ನು 1116 ರಲ್ಲಿ ವಶಪಡಿಸಿಕೊಂಡು ಅಸಾಧಾರಣ ಸಾಹಸತೋರಿದ. ಬನವಾಸಿ -12,000ರ ರಾಜದಾನಿ ಬಳ್ಳಿಗಾಮೆಯ ಸುಂದರಿ ಶಾಂತಲೆಯನ್ನು ಆತ ವರಿಸಿದ್ದನಲ್ಲದೇ ಅಲ್ಲಿಂದಲೇ ಬಂದ ಶಿಲ್ಪಿಗಳಾದ ದಾಸೋಜ ಮತ್ತು ಚಾವಣರಿಂದ ಬೇಲೂರಿನ ಖ್ಯಾತ ದೇವಾಲಯ ಕಟ್ಟಿಸಿದ್ದ. ಆತನಿಗೆ ಆಗ ಸ್ವತಂತ್ರನಾಗುವ ಅಭಿಲಾಷೆ ಉಂಟಾಗಿ ಕಲ್ಯಾಣದ ಚಾಳುಕ್ಯರ ಮಾಂಡಳಿಕರಾಗಿದ್ದ ಹೊಸಗುಂದದ ಸಾಂತರರನ್ನು ನೊಳಂಬವಾಡಿಯ ನೊಳಂಬರನ್ನು ಗೆದ್ದು (1117), ಮುಂದೆ

ತುಂಗಭದ್ರೆಯನ್ನು ದಾಟಿ 1118ರಲ್ಲಿ ಚಾಳುಕ್ಯರ ವಿರುದ್ಧ ಕಣ್ಣೇಗಾಲದಲ್ಲಿ ವಿಜಯ ಸಾಧಿಸಿ ಹಾನಗಲ್ ಕೋಟೆಯನ್ನು ಗೆದ್ದ. ಸಾಂತರರ ಸಾಂತಳಿಗೆ -1000 (ಶಿವಮೊಗ್ಗ ಜಿ||) ಹಾಗೂ ಚಾಳುಕ್ಯರ ಸಮೃದ್ಧಪ್ರಾಂತ ಬನವಾಸಿ-12,000ವನ್ನು ಪೂರ್ತಿ ಗೆಲ್ಲಲು ಯತ್ನಿಸಿ ಚಾಳುಕ್ಯ ಸೇನಾನಿ ಬೊಪ್ಪಣನನ್ನು ಹಳ್ಳೂರಲ್ಲಿ ಸೋಲಿಸಿದ. (1120). ಚಕ್ರವರ್ತಿ ವಿಕ್ರಮಾದಿತ್ಯನು ಆಗ ತನ್ನ ಸಮರ್ಥಮಾಂಡಳಿಕ ಯೆರಂಬರಗೆಯ ಸಿಂದ ಆಚರಸನ ಸೇನೆಯನ್ನು ಕಳುಹಿಸಲು ಆತ ವಿಷ್ಣುವರ್ಧನನನ್ನು ಸೋಲಿಸಿ ಬೆನ್ನಟ್ಟಿ ದ್ವಾರಸಮುದ್ರದವರೆಗೂ ಸಾಗಿದ. ಚಕ್ರವರ್ತಿ ವಿಕ್ರಮಾದಿತ್ಯನು ಗತಿಸಿದ ನಂತರ (1127) ಮತ್ತೆ ತುಂಗಭದ್ರೆಯನ್ನು ದಾಟಿದ ವಿಷ್ಣುವರ್ಧನನು ಲಕ್ಕುಂಡಿಯವರೆಗೂ ಸಾಗಿದ. ಹೆದ್ದೊರೆ(ಕೃಷ್ಣಾ?)ವರೆಗೆ ತಾನು ವಿಜಯಶಾಲಿಯಾಗಿ ಸಾಗಿದ, ಹಾಗೂ ಹಲಸಿಗೆ-12,000ವೂ (ಧಾರವಾಡ ಬೆಳಗಾವಿ ಜಿಲ್ಲೆಯ ಭಾಗಗಳು) ತನ್ನ ವಶದಲ್ಲಿವೆ ಎಂದು ವಿಷ್ಣುವರ್ಧನನ ಶಾಸನಗಳು ಹೇಳಿವೆ. ಆದರೆ ಧಾರವಾಡ ಜಿಲ್ಲೆಯಲ್ಲಿ ವಿಷ್ಣುವರ್ಧನನ ಒಂದು ಶಾಸನವೂ ದೊರೆತಿಲ್ಲ. ಅವನ ಆಕ್ರಮಣವೆಲ್ಲ ದಂಡಯಾತ್ರೆಯ ಸ್ವರೂಪದಲ್ಲೇ ಇರಬೇಕು. ಹಾನಗಲ್ ಕದಂಬರು ಅವನನ್ನು ಎದುರಿಸಿದ ವಿಚಾರ ಹಿಂದೆ ಚರ್ಚಿಸಿದೆ. ಈ ಪ್ರದೇಶವನ್ನು ತನ್ನ 'ಕಡಿತ'ದಲ್ಲಿ ಸೇರಿಸಿದ ಎಂದು ಒಂದು ವಿಷ್ಣುವರ್ಧನನ ಶಾಸನ ಹೇಳಿದರೂ ಶಾಂತಿಯುತ ಆಡಳಿತ ನಡೆಸಲು ಅವನಿಗೆ ಸಾಧ್ಯವಾಗಿರಲಿಕ್ಕಿಲ್ಲ. ವಾಸ್ತವವಾಗಿ 1141ರಲ್ಲಿ ಆತನು ಬಂಕಾಪುರದಲ್ಲಿ ತೀರಿಕೊಂಡ. ಯುದ್ಧದ ಕಾರಣವಾಗಿ ಮಡಿದನೆಂದು ಹೇಳಲು ಆಧಾರವಿಲ್ಲ. ಅವನ ಮಗ ನರಸಿಂಹ(1141-1173) ತುಂಗಭದ್ರೆಯನ್ನು ದಾಟಿದಂತೆ ಕಾಣಿಸದು.

ಎರಡನೇಯ ಬಲ್ಲಾಳನು (1173-1220) ತನ್ನ ರಾಜ್ಯವನ್ನು ಸಾಮ್ರಾಜ್ಯವಾಗಿ ಮಾಡಿದ ಸಾಹಸಿ. 1177ರಲ್ಲಿ ಉಚ್ಚಂಗಿಯನ್ನು ಗೆದ್ದು 1178ರಲ್ಲಿ ಹಾನಗಲ್‌ನ್ನು ವಶಪಡಿಸಿಕೊಂಡ. ಬೆಳ್ವೊಲದ ಸಮೃದ್ಧ ಪ್ರಾಂತಕ್ಕಾಗಿ ಅವನಿಗೂ ಕಲಚೂರಿಗಳೂ ಯುದ್ಧಗಳಾದವು. ಕಲಚೂರಿಗಳು ಅವನನ್ನು ಸೋಲಿಸಿ ಕಪ್ಪಕೊಡುವಂತೆ ಮಾಡಿದರು. ಆದರೆ ಕಲಚೂರಿಗಳ ಪತನಾನಂತರ ಬನವಾಸಿ-12,000ರ ರಾಜಧಾನಿ ಬೆಳ್ಗಾವಿ (ಬಳ್ಳಿಗಾಂವೆ)ಯನ್ನು ಗೆದ್ದು ಮುಂದೆ ತುಂಗಭದ್ರೆಯನ್ನು ದಾಟಿ 1187ರಲ್ಲಿ ಚಾಳುಕ್ಯ ನಾಲ್ಕನೇಯ ಸೋಮೇಶ್ವರನನ್ನು ಪರಾಜಯಗೊಳಿಸಿದ. 1190ರಲ್ಲಿ ಸೊರಟೂರಲ್ಲಿ ನಡೆದ ಭಾರೀ ರಕ್ತಸಿಕ್ತ ಕಾಳಗದಲ್ಲಿ ಸೇಉಣ ಭಿಲ್ಲಮನನ್ನು ಸೋಲಿಸಿದ. ರಾಯಚೂರು ಜಿಲ್ಲೆಯ ಮಾನ್ವಿವರೆಗೂ ಅವನು ಸಾಗಿದ. ಆದರೆ ಕಲ್ಯಾಣವನ್ನು ಗೆಲ್ಲುವುದು ಬಲ್ಲಾಳನಿಗೆ ಸಾಧ್ಯವಾಗಲಿಲ್ಲ.

ಲಕ್ಕುಂಡಿಯಲ್ಲೇ ನೆಲೆನಿಂತ ಅವನ ಆಳ್ವಿಕೆಯ ಸಾಕ್ಷಿ ಹೇಳುವ ಅನೇಕ ಶಾಸನಗಳು ಧಾರವಾಡ ಜಿಲ್ಲೆಯಲ್ಲಿವೆ. 1192ರಲ್ಲಿ ಅವನು ಗದಗಿನ ತ್ರಿಕೂಟೇಶ್ವರ ದೇವಾಲಯಕ್ಕೆ ಹೊಂಬಳಲು (ಹೊಂಬಳ) ಗ್ರಾಮದಾನಮಾಡಿದ. ಮೇವುಂಡಿಯ ವ್ಯಾಪಾರಿಗಳು ಭಿಲ್ಲೇಶ್ವರ ದೇವರಿಗೆ ನೀಡಿದ ದಾನದಲ್ಲಿ ಆತನ ಉಲ್ಲೇಖವಿದೆ (1196). ಲಕ್ಕುಂಡಿಯ ನಾಗನಭಾವಿಗೆ ಇಬ್ಬರು ಮಾಡಿದ ಸುವರ್ಣದಾನ ಶಾಸನದಲ್ಲೂ ಚಕ್ರವರ್ತಿಯಾಗಿ ಆತನನ್ನು ಹೇಳಿದೆ (1195). ಬಲ್ಲಾಳನ ದಂಡನಾಯಕ ಸಿಂಗಯ್ಯನು ಅಣ್ಣಿಗೇರಿಯ ಅಮೃತೇಶ್ವರ ದೇವರಿಗೆ ಭೂದಾನವನ್ನು 1196ರಲ್ಲಿ ಮಾಡಿದ್ದಾನೆ. 1202ರಲ್ಲಿ ನಾಲ್ವರು ದಂಡನಾಯಕರು ಇದೇ ದೇವಾಲಯಕ್ಕೆ ಭೂದಾನ ನೀಡಿದ್ದಾರೆ. ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯ ವೇದಿಕೆಯಲ್ಲಿ ಇರುವ ಶಾಸನ ಮಧುಸೂಧನ ದೇವಾಲಯಕ್ಕೆ ಆ ಊರ ಅಗ್ರಹಾರದ ಮಹಾಜನರು ನೀಡಿದ ದಾನವನ್ನು (1202) ಸೂಚಿಸುತ್ತದೆ. ಚೋಳರಿಂದ ಧ್ವಂಸವಾದ ಕಾಶಿವಿಶ್ವೇಶ್ವರ ದೇವಾಲಯವನ್ನು ಬಲ್ಲಾಳನು ಜೀರ್ಣೋದ್ಧಾರ ಮಾಡಿದನೆಂದು ಒಂದು ಅಭಿಪ್ರಾಯವಿದೆ. ಆದರೆ ಈಗಲೂ ಆ ದೇವಾಲಯ ಉಧ್ವಸ್ತ ಸ್ಥಿತಿಯಲ್ಲೇ ಇದೆ. ಕಲ್ಕೇರಿ (ಹಾನಗಲ್ ತಾ||)ಯ ನಾಡಪ್ರಭು ಹರಿಯಮ ಸೆಟ್ಟಿಯು ಮುಮ್ಮರಿ ದಂಡರಾದ ಕಾಚಿಯಸಾಹನಿ ಮತ್ತು ಅಮಿತೆಯ ಸಾಹನಿ ಇವರ ಸಮ್ಮುಖದಲ್ಲಿ 'ಕಲುಕೆರೆ'ಯ ಸೋಮನಾಥ ದೇವಾಲಯಕ್ಕೆ 1205 ರಲ್ಲಿ ಭೂದಾನ ನೀಡಿದ ದಾಖಲೆ ಇದೆ.

ಹಿರೇಕೆರೂರು ತಾ|| ಸಾತೇನಹಳ್ಳಿಯಲ್ಲಿ ದೊರೆತ ಹಲವು ಶಾಸನಗಳಂತೆ ಆ ಕಾಲದಲ್ಲಿ ಆ ಊರ ಪರಿಸರದಲ್ಲಿ ಬೊಮ್ಮ ಎಂಬಾತನು ನಾಗರಖಂಡ-70ನ್ನು ಹೊಯ್ಸಳ ಅಧಿಕಾರಿಯಾಗಿ ಆಳುತ್ತಿದ್ದು. ಆಗ ಅಲ್ಲಿ ಹರಿಹರೇಶ್ವರ ದೇವಾಲಯವನ್ನು ಕಟ್ಟಿದ ವಿಚಾರವಿದೆ (1204); ಸಾತೇನಹಳ್ಳಿ ದೊಡ್ಡ ವ್ಯಾಪಾರೀ ಕೇಂದ್ರವೆಂದು ಅಲ್ಲಿ ಹೇಳಿದೆ. 1203ರ ಪರಿಸರದಲ್ಲಿ ಇಲ್ಲಿ ಹೊಯ್ಸಳರಿಗೂ ಹಾನಗಲ್‌ನ ಕಾಮದೇವ ಕದಂಬನ ಸೈನ್ಯಕ್ಕೂ ನಡೆದ ಉಗ್ರ ಕಾಳಗಕ್ಕೆ ಸಂಬಂಧಿಸಿದ ವೀರಗಲ್ಲುಗಳಿಗೆ. ಹೊಸೂರಿನ ಮೊರಕೇಶ್ವರ ದೇವಾಲಯಕ್ಕೆ ಬಲ್ಲಾಳನ ಪ್ರಧಾನ ಮಂತ್ರಿ 1207ರಲ್ಲಿ ದಾನ ನೀಡಿದ ಶಾಸನವೂ ಇದೆ. ಮುಳಗುಂದದ ಮಹಾಜನರು ಅಲ್ಲಿನ ತೆಲ್ಲಿಗೇಶ್ವರ ದೇವರಿಗೆ 1207ರಲ್ಲಿ ದಾನನೀಡಿದ ಶಾಸನದಲ್ಲೂ ಚಕ್ರವರ್ತಿ ಬಲ್ಲಾಳನ ಉಲ್ಲೇಖವಿದೆ. 1215ರ ನಾಗಾವಿ ಶಾಸನ

ಆ ಊರ ಮಹಾಬಲೇಶ್ವರ ದೇವರಿಗೆ ಸಂದ ದಾನದ ಬಗ್ಗೆ ಹೇಳುತ್ತ ಬಲ್ಲಾಳನನ್ನು ಉಲ್ಲೇಖಿಸಿದೆ. ತಾರೀಕಿಲ್ಲದ ಬಳಗಾನೂರಿನ ಒಂದು ಶಾಸನದಲ್ಲಿ ಬೆಳ್ಳಾಳ ನಾಗಗಾವುಂಡನು ಆ ಊರಲ್ಲಿ ಅನ್ನಛತ್ರವೊಂದನ್ನು ನಡೆಸಲು ದಾನ ನೀಡಿದ ವಿವರವಿದೆ.

ಸೇಉಣ ಸಿಂಘಣನು 1213ರಲ್ಲಿ ಲಕ್ಕುಂಡಿಯನ್ನು ಗೆದ್ದು ಹೊಯ್ಸಳರನ್ನು ತುಂಗಭದ್ರೆಯ ಆಚೆ ಅಟ್ಟಿದ್ದರಿಂದ 1212 ರ ನಂತರ ಎರಡನೇಯ ಬಲ್ಲಾಳನ ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ಇಲ್ಲ. ಮುಂದೆ ಹೊಯ್ಸಳ ಎರಡನೇಯ ನರಸಿಂಹನು (1220-35) ಧಾರವಾಡ ಜಿಲ್ಲೆಯಲ್ಲಿ ಪ್ರವೇಶಿಸಲು ಯತ್ನಿಸಿದಂತೆ ಇಲ್ಲ. ಆತನೂ ಅವನ ಮಗ ಸೋಮೇಶ್ವರನೂ (1235-54) ತಮಿಳುನಾಡಿನ ರಾಜಕೀಯದಲ್ಲಿ ಮಗ್ನರಾಗಿದ್ದರು. ಮುಂದಿನ ಅರಸರಾದ ಮೂರನೇಯ ನರಸಿಂಹ (1254-91) ಹಾಗೂ ಮೂರನೇಯ ಬಲ್ಲಾಳ (1291-1343) ಇವರ ಕಾಲದಲ್ಲಿ ಸೇಉಣರು ತುಂಗಭದ್ರೆಯ ದಕ್ಷಿಣಕ್ಕೆ ತಮ್ಮ ನೆಲೆಗಳನ್ನು ಇಟ್ಟುದರಿಂದ ಹೊಯ್ಸಳರು ಧಾರವಾಡ ಜಿಲ್ಲೆಯನ್ನು ಪ್ರವೇಶಿಸುವ ಅವಕಾಶ ಇರಲಿಲ್ಲ.

ಸೇಉಣ ರಾಮಚಂದ್ರನು ದೆಹಲಿಯ ಸುಲ್ತಾನನ ಮಾಂಡಲಿಕನಾಗಿ ಮಲಿಕ್ ಕಾಫರನ ಜೊತೆ ದ್ವಾರ ಸಮುದ್ರದ ಮೇಲೆ ದಾಳಿಮಾಡಿದ್ದ ಸಂಗತಿ ಗಮನಿಸಿದೆ. ಮುಂದೆ ಸೇಉಣರು 1318ರ ನಂತರ ಮತ್ತೆ ಹೊಯ್ಸಳ ಬಲ್ಲಾಳನ ಬೆನ್ನು ಹತ್ತಿ ಹೊಳಲ್ಕೆರೆಯ ವರೆಗೆ ಬಂದಿರಲು ಅವನ ಸೈನ್ಯವನ್ನು 1304ರಲ್ಲಿ ಲಕ್ಕುಂಡಿವರೆಗೆ ಬೆನ್ನಟ್ಟಿ ಅಲ್ಲಿಯ ಕೋಟೆಯನ್ನು ಬಲ್ಲಾಳನು ಧ್ವಂಸಮಾಡಿದನು. ಕುಮ್ಮಟದ ಕಂಪಿಲರಾಯನ ವಿರುದ್ಧ 1318ರ ನಂತರ ಸಾಗಿದ ಯುದ್ದಗಳಿಂದ ಬಲ್ಲಾಳನಿಗೆ ಏನೂ ಲಾಭ ಆಗಲಿಲ್ಲ. ಇದರ ಹಿಂದೆಯೇ ದೆಹಲಿಯ ಸೇನೆ ದ್ವಾರಸಮುದ್ರವನ್ನು 1327ರಲ್ಲಿ ಸೂರೆಮಾಡಿತು. 1336ರಲ್ಲಿ ಮಧುರೆಯಲ್ಲಿ ಸ್ಥಾಪಿತವಾದ ದೆಹಲಿ ಸುಲ್ತಾನನ ಪ್ರತಿನಿಧಿಯೊಂದಿಗೆ ಹೋರಾಡುತ್ತ ಬಲ್ಲಾಳ ಅಸು ನೀಗಿದ (1343). 1346ರಲ್ಲಿ ಅವನ ಮಗ ವಿರೂಪಾಕ್ಷ ಬಲ್ಲಾಳನೂ ತೀರಿಕೊಂಡಾಗ ವಿಜಯನಗರದ ಉದಯಕ್ಕೆ ದಾರಿಯಾಯಿತು.

## ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯವು 1336ರಲ್ಲಿ ಸ್ಥಾಪಿತವಾಯಿತು, ಮತ್ತು ವಿದ್ಯಾರಣ್ಯರು ಅವರಿಗೆ ಸಹಾಯ ಮಾಡಿದರು ಎಂಬ ಹೇಳಿಕೆಗಳು ಇವೆ. ಆದರೆ ವಿಜಯನಗರ ಸ್ಥಾಪಕರಾದ ಸಂಗಮನ ಮಕ್ಕಳಾದ ಹರಿಹರ, ಬುಕ್ಕರು ತಮಗೆ ಏನಾದರೂ ಖಚಿತ ಅಧಿಕಾರವಿದೆಯೆಂದು ಹೇಳಿಕೊಂಡುದು 1346ರಲ್ಲಿ ಶೃಂಗೇರಿಯ ಗುರುಗಳಾದ ಭಾರತೀತೀರ್ಥರಿಗೆ ದಾನ ನೀಡಿದಾಗ. ಆ ವರ್ಷ ಹೊಯ್ಸಳ ವಿರೂಪಾಕ್ಷ ಬಲ್ಲಾಳನು ತೀರಿಕೊಂಡಿದ್ದ. ಹೀಗಿದ್ದರೂ ಹರಿಹರ, ಬುಕ್ಕರು ತಮ್ಮನ್ನು ಮುಂದಕ್ಕೂ ಮಹಾಮಂಡಳೇಶ್ವರರೆಂದು ಮಾತ್ರ ಕರೆದುಕೊಂಡಿದ್ದಾರೆ. 'ರಾಜಾಧಿರಾಜ' ಮುಂತಾದ ಪರಮಾಧಿಕಾರದ ಚಿಹ್ನೆಗಳು ಗೋಚರಿಸುವುದು ಬುಕ್ಕನ ಮಗ ಎರಡನೇಯ ಹರಿಹರನ ಶಾಸನಗಳಲ್ಲೇ. ಹೀಗಾಗಿ 1336ರಲ್ಲಿ ಸಾಮ್ರಾಜ್ಯ ಸ್ಥಾಪನೆ ಆಯಿತು ಎನ್ನುವಂತಿಲ್ಲ; ಆದರೆ ಇದು ಈಗ ಜನಪ್ರಿಯವಾಗಿ ಸ್ವೀಕೃತವಾದ ತಾರೀಕು.

ಸಂಗಮ ವಂಶದವರು ಕಾಳಾಮುಖಪಂಥಕ್ಕೆ ಸೇರಿದವರು. ಕಾಶೀವಿಲಾಸ ಕ್ರಿಯಾಶಕ್ತಿಗಳು ಅವರು ಗುರುಗಳು. ಹೀಗಿದ್ದರು ಹರಿಹರಾದಿ ಸಂಗಮ ಸೋದರರು ಶೃಂಗೇರಿಯಲ್ಲಿ ಶಂಕರರು ಸ್ಥಾಪಿಸಿದ್ದ 'ಧರ್ಮಪೀಠ'ದಲ್ಲಿ ಅನುಷ್ಠಾನ ಮಾಡಿಕೊಂಡಿರಲು ಭಾರತೀತೀರ್ಥರಿಗೆ ದಾನ ಕೊಡುವುದಕ್ಕೆ ಮುಂದೆ ಶೃಂಗೇರಿ ಮಠದ ಬಗ್ಗೆ ವಿಶೇಷ ಭಕ್ತಿ ತೋರಿದ್ದಕ್ಕೆ ಹೆಚ್ಚಿನ ಕಾರಣವಿರಬೇಕು. ದೆಹಲಿ ಸುಲ್ತಾನರ ದಾಳಿಯಿಂದ ನೆಲೆತಪ್ಪಿರಬಹುದಾದ ಆ ಸ್ವಾಮಿಗಳಿಗೆ 1346ರಲ್ಲಿ ಕೊಟ್ಟ ಈ ದಾನಕ್ಕೆ ಹೊಯ್ಸಳ ಮೂರನೇಯ ಬಲ್ಲಾಳನ ರಾಣಿ ಕೃಷ್ಣಾಯಿ ತಾಯಿ (ಕಿಕ್ಕಾಯಿ ತಾಯಿ) ಪೂರಕವಾಗಿ ದಾನವನ್ನು ಕೊಟ್ಟಿದ್ದಾಳೆ. (ಎ.ಕ.6 - ಎಸ್‌ಜಿ 1). ಬಹುಶಃ ಈ ಮಠದ ಶಿಷ್ಯರಾಗಿದ್ದ ತರುಣ ವಿದ್ಯಾರಣ್ಯರಿಂದ ಏನಾದರೂ ವಿಶೇಷ ಸಹಾಯ ಸಂಗಮ ವಂಶದವರಿಗೆ ದೊರೆತಿರಬೇಕು. ಮುಂದೆ ಬುಕ್ಕ , ಇಮ್ಮಡಿ ಹರಿಹರರ ಕಾಲದಲ್ಲಿ ವಿದ್ಯಾರಣ್ಯ ಹಾಗೂ ಅವರ ಸೋದರ ಸಾಯಣರ ನೇತೃತ್ವದಲ್ಲಿ ವೇದಗಳಿಗೆ ಭಾಷ್ಯ ಬರೆದು, 'ಪರಾಶರಮಾಧವೀಯ' (ವಿದ್ಯಾರಣ್ಯರು ಬರೆದುದು) ದಂಥ ರಾಜನೀತಿಯನ್ನು ತಿಳಿಸುವ ಕೃತಿಯನ್ನು ಬರೆದು ಸಾಹಸಿಗಳಾದ ಹರಿಹರ, ಬುಕ್ಕರ ರಾಜ್ಯಸ್ಥಾಪನೆಯ ಮುಂದೆ ಇದ್ದ ಗುರಿಯನ್ನು ಅವರು ತೋರಿಸಿರಬೇಕು. ಭಾರತೀಯ ಪರಂಪರೆಗೆ ದೆಹಲಿ ಸುಲ್ತಾನರ ದಾಳಿಯಿಂದ ಬಂದ ಅಪಾಯದಿಂದ ರಕ್ಷಿಸುವ ಹೊಣೆಯ ಮನವರಿಕೆಯಾದಾಗ ವಿಜಯನಗರದ ಅರಸರು ಎಲ್ಲ ಧರ್ಮಪಂಥಗಳ ರಕ್ಷಣೆಗೆ ಮುಂದಾದರು. ರಾಜಕೀಯ ನಿರ್ವಾತದ ಪರಿಸ್ಥಿತಿಯನ್ನು ನಿವಾರಿಸಿದರು. (ವಿದ್ಯಾರಣ್ಯರಿಂದ 'ಸರ್ವದರ್ಶನ ಸಂಗ್ರಹ',

ಸಾಯಣರಿಂದ 'ಯಜ್ಞತಂತ್ರಸುಧಾನಿಧಿ', 'ಪ್ರಾಯಶ್ಚಿತ್ತ ಸುಧಾನಿಧಿ', 'ಆಯುರ್ವೇದ ಸುಧಾನಿಧಿ' ಮುಂತಾದ ಕೃತಿಗಳ ರಚನೆ ಮಾಡಿಸಿದ್ದಕ್ಕೆ ಈ ಪರಂಪರೆಯ ರಕ್ಷಣೆಯ ಜವಾಬ್ದಾರಿಯ ಹಿನ್ನಲೆ ಇದೆ). ಕಂಪಿಲರಾಯ ಮತ್ತು ಕುಮಾರರಾಮರು ದೆಹಲಿ ಸುಲ್ತಾನರ ಜೊತೆ ಹೋರಾಡಿ ಮಡಿದಾಗ ಬಹುಶಃ ಮೂಲತಃ ಅವರ ಮತ್ತು ಮುಂದೆ ಅವರ ದಾಯಾದಿಗಳಾಗಿದ್ದ ಹೊಯ್ಸಳರ ಅಧಿಕಾರವನ್ನು ಹರಿಹರ ಬುಕ್ಕರು ಒಪ್ಪಿಕೊಂಡರು. ಹರಿಹರನ ಮಗಳನ್ನು ಹೊಯ್ಸಳ ಮೂರನೇಯ ಬಲ್ಲಾಳನ ಸೋದರಳಿಯ ಬಲ್ಲಪ್ಪ ವರಿಸಿದ್ದನೆಂಬ ಸಂಗತಿ 1346ರ ಶೃಂಗೇರಿ ಶಾಸನದಿಂದ ಸ್ಪಷ್ಟವಾಗುತ್ತದೆ. (ಎ.ಕ.-6, ಎಸ್‌ಜಿ1) ಶೃಂಗೇರಿಯಲ್ಲಿ ಸ್ವಾಮಿಗಳಿಗೆ ದಾನ ನೀಡಿದ ದಿನ ಹೊಯ್ಸಳ ರಾಣಿ ಹಾಜರಿದ್ದುದು ಹೊಯ್ಸಳರ ಜೊತೆ ಅವರಿಗೆ ಇದ್ದ ಸಂಬಂಧವನ್ನೂ ಸೂಚಿಸುತ್ತದೆ. ಕುಮಾರ ರಾಮನ ಬಗ್ಗೆ ಧಾರವಾಡ ಜಿಲ್ಲೆಯಲ್ಲಿ ಕಟ್ಟಿದ ವಿಜಯನಗರ ಕಾಲದ ಸ್ಮಾರಕಗಳಿಂದ (ಬಿದರಕಟ್ಟೆ, ವೀರಾಪುರ, ಸಂಗೂರು, ಲಕ್ಷ್ಮೇಶ್ವರ ಮುಂತಾದೆಡೆ ಈ ಬಗ್ಗೆ ಶಾಸನಗಳಿವೆ) ಅವನ ಬಗ್ಗೆ ಇದ್ದ ಭಕ್ತಿಯಿಂದಾಗಿ ಅವನ ಕಾರ್ಯವನ್ನು ಇವರು ಮುಂದುವರಿಸುವರೆಂಬ ಭಾವನೆ ಆ ಭಾಗದ ಜನರಲ್ಲಿ ಸಹಜವಾಗಿ ಮೂಡಿ, ಏನೂ ಪರಿಶ್ರಮ ಪಡದೆ ಈ ಪ್ರದೇಶದ ಜನರ ನಿಷ್ಠೆಯನ್ನು ಸಂಗಮ ಸೋದರರು ಪಡೆದಿರಬೇಕು. ಲಕ್ಷ್ಮೇಶ್ವರದಲ್ಲಿ ಕಂಪಿಲರಾಯನ (ಕುಮಾರರಾಮನ ತಂದೆ) ಸಾವಿಗಾಗಿ ಸಾರ್ವತ್ರಿಕವಾಗಿ ದುಃಖ ಸೂಚಿಸುವ ಶಾಸನವಿದೆ (ಎಸ್.ಐ.ಐ.ಒಂ, ಸಂ. 294). ಇದಲ್ಲದೆ ವಿಜಯನಗರದ ಅಧಿಕಾರಿಗಳೇ ಸಂಗೂರು, ಹಿರೇಕೆರೂರು ತಾ।।ನ ವೀರಾಪುರಗಳಲ್ಲಿ ಕುಮಾರರಾಮನ ಪ್ರತಿಮೆ ಸ್ಥಾಪಿಸಿದ್ದರು. ಕುಮಾರರಾಮನ ಪ್ರಾಣತ್ಯಾಗದ ಬಗ್ಗೆ ವ್ಯಾಪಕ ಸಹಾನುಭೂತಿ ಇದ್ದುದನ್ನು ವಿಜಯನಗರ ಸಾಮ್ರಾಜ್ಯವು ತನ್ನ ದೃಢತೆಗೆ ಬಳಸಿಕೊಂಡಿತೆಂದು ಭಾವಿಸಲು ಅವಕಾಶವಿದೆ. ಧಾರವಾಡ ಜಿಲ್ಲೆಯಲ್ಲಿ ಹರಿಹರ, ಬುಕ್ಕರ ಶಾಸನಗಳು ವಿರಳ. ಆದರೆ ಬೇರೆ ಇನ್ನಾವ ಅರಸರ ಆಡಳಿತ ಸೂಚಿಸುವ ಒಂದೂ ಶಾಸನವಿಲ್ಲ. ಆದರೆ ಉಧ್ವಸ್ಥವಾದ ಪರಂಪರೆಯ ರಕ್ಷಣೆಗೆ ವಿಜಯನಗರ ಶಕ್ತಿ ಒದಗಿಸಿದ್ದು ಶಾಸನಗಳಿಂದ ಸ್ಪಷ್ಟ. ಉದಾಹರಣೆಗೆ ಸೊರಟೂರಲ್ಲಿ ಪ್ರಾಚೀನ ಶಿವಾಲಯವೊಂದರ ಜೀರ್ಣೋದ್ಧಾರ (1356), ಅಥವಾ ಲಕ್ಷ್ಮೇಶ್ವರದ ಖ್ಯಾತ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ (1353)ದ ಬಗ್ಗೆ ಹೇಳಬಹುದು. ಸೋಮೇಶ್ವರ ದೇವಾಲಯದ ದಕ್ಷಿಣ ಪ್ರವೇಶ ದ್ವಾರವನ್ನು 1392 ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು.

ಹರಿಹರನಿಗೆ ಬುಕ್ಕ, ಕಂಪಣ, ಮುದ್ದಪ್ಪ ಮತ್ತು ಮಾರಪ್ಪ ಎಂಬ ಸೋದರರಿದ್ದು, 1339 ರಲ್ಲಿ ಆತ ಗುತ್ತಿಯಲ್ಲ ಆಡಳಿತಾಧಿಕಾರಿಯಾಗಿದ್ದ, ಹಾಗೂ 1340ರಲ್ಲಿ ಬಾದಾಮಿಯಲ್ಲಿ ಕೋಟೆ ಕಟ್ಟಿದ್ದ ಶಾಸನಗಳಿವೆ. ಹೊಯ್ಸಳ ಸತ್ತೆಯು ದುರ್ಬಲವಾಗುತ್ತಿರುವುದನ್ನು ಕಂಡು ತುಂಗಭದ್ರಾ ಪರಿಸರದುದ್ದಕ್ಕೂ ತನ್ನ ಅಧಿಕಾರ ಬಲಪಡಿಸಿಕೊಂಡ. ಕಂಪಣನನ್ನು ನೆಲ್ಲೂರಿನ ಅಧಿಕಾರಿಯಾಗಿ 1345ರಲ್ಲಿ ನೇಮಿಸಿದ. ಮಾರಪ್ಪ ಚಂದ್ರಗುತ್ತಿಯಿಂದ ಆಡಳಿತ ನಡೆಸುತ್ತಿದ್ದ. ಮುದ್ದಪ್ಪ ಮುಳಬಾಗಲಲ್ಲಿ ಇದ್ದ. ಆದರೆ 1347ರಲ್ಲಿ ದೇವಗಿರಿಯಲ್ಲಿದ್ದ ದೆಹಲಿ ಸುಲ್ತಾನನ ಸೇನಾನಿ ಅಲ್ಲಾ ಉದ್‌ದೀನ್ ಬಹಮನಿ ಬಂಡೆದ್ದು ಕಲ್ಬುರ್ಗಿಯಿಂದ ಸ್ವತಂತ್ರ ರಾಜ್ಯ ಸ್ಥಾಪಿಸಿದ. ಈ ಬಹಮನಿ ಸುಲ್ತಾನರ ರಾಜ್ಯ ಮುಂದಿನ ದಶಕದಲ್ಲೇ ವಿಜಯನಗರದ ಜೊತೆ ಹೋರಾಡಬೇಕಾಯಿತು. ಪೂರ್ವ ಪಶ್ಚಿಮ ಸಮುದ್ರಾಧೀಶ್ವರ ಎಂಬ ಬಿರುದಿನಿಂದ ಹರಿಹರನ ರಾಜ್ಯದ ವ್ಯಾಪ್ತಿಯ ಕಲ್ಪನೆ ಬರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಹರಿಹರನ ಪ್ರಥಮ ಶಾಸನ ಅಬ್ಬಲೂರಲ್ಲಿ ಇದ್ದು (1349) ಸಮುದ್ರ ಸಾಳ್ವ ವೀರ ಬಾಚಪ್ಪದೇವ ಎಂಬ ಅಧಿಕಾರಿಯ ಉಲ್ಲೇಖವಿದೆ. ಅದು ಒಂದು ವೀರಗಲ್ಲಾಗಿದ್ದು ತೀರಿಕೊಂಡ ವೀರನ ಹೆಸರು ಅಳಿಸಿಹೋಗಿದೆ. 1353ರ ಒಂದು ಶಾಸನದಲ್ಲಿ ಸಾವಣ್ಣ ಒಡೆಯನ ಉಲ್ಲೇಖವಿದ್ದು ಲಕ್ಷ್ಮೇಶ್ವರದ ಸೋಮಯ್ಯ (ಸೋಮೇಶ್ವರ) ದೇವಾಲಯದ ಜೀರ್ಣೋದ್ಧಾರವನ್ನು ಚಿಕ್ಕಕೆರೆಯ ನಾಯಕನು ಮಾಡಿದನೆಂದಿದೆ. ಇಲ್ಲಿ ಹೇಳಿದ್ದ ಸಾವಣ್ಣ ಒಡೆಯ ಕಂಪಣನ ಮಗ ಸಾವಣನಾಗಿರುವ ಸಾಧ್ಯತೆ ಇದೆ. 1412ರ ಲಕ್ಷ್ಮೇಶ್ವರದ ಒಂದು ಶಾಸನದಲ್ಲಿ ಹರಿಹರನ ಕಾಲದಲ್ಲೇ ಆ ಊರು ವಿಜಯನಗರಕ್ಕೆ ಸೇರಿತ್ತೆಂದು ಹೇಳಿದೆ. 1357ರ ಒಂದು ಶಾಸನದಲ್ಲಿ ಕುಮಾರ ವಿರುಪಣ ಒಡೆಯರು ಆಳುತ್ತಿದ್ದಾಗ ಮಾದರಸ ಚಟ್ಟನಹಳ್ಳಿ (ಹಿ.ಕೆ.ತಾ।।) ಭೈರವೇಶ್ವರ ದೇವರಿಗೆ ದಾನ ನೀಡಿದ ಶಾಸನವಿದೆ. ವಿರುಪಣ್ಣನು ವಿಜಯನಗರದ ಅರಸರ ಬಿರುದುಗಳನ್ನು ತಳೆದಿರುವುದರಿಂದ ಬುಕ್ಕನ ಮಗನಾಗಿರಬೇಕು (ಬುಕ್ಕ 1356 ರಿಂದ ಹರಿಹರನ ನಂತರ ನೇರ ಅಧಿಕಾರ ವಹಿಸಿಕೊಂಡ). ಈ ವಿರುಪಣ್ಣ ಪ್ರಾಂತಾಧಿಕಾರಿಯಾಗಿರಬಹುದು. ಮಾದರಸನು ಚಂದ್ರಗುತ್ತಿ, ಗೋವೆಗಳಿಂದ ಆಳುತ್ತಿದ್ದ ಮಾದರಸ ಒಡೆಯ ಅಥವಾ ಮಾಧವ ಮಂತ್ರಿ ಎಂಬಾತ. 1392 ರ ಲಕ್ಷ್ಮೇಶ್ವರ ಶಾಸನದಲ್ಲಿ ಸೋಮೇಶ್ವರ ದೇವಾಲಯದ ತೆಂಕಣ ಬಾಗಿಲ ಜೀರ್ಣೋದ್ಧಾರ ಮಾಡಿದ ವಿಚಾರವಿದ್ದು ಇದನ್ನು ಮಾಡಿದವರ ಹೆಸರುಗಳನ್ನು ಗಮನಿಸಿದಾಗ ಅವರು ಸಾಮ್ರಾಜ್ಯದ ಅಧಿಕಾರಗಳೇ ಅಥವಾ ಖಾಸಗಿ ವ್ಯಕ್ತಿಗಳೇ ಎಂದು ಸ್ಪಷ್ಟವಾಗುವುದಿಲ್ಲ. ಇದಕ್ಕೂ ಹಿಂದಿನ 1387ರ ಸುತಕೋಟಿ ಶಾಸನದಲ್ಲಿ ಚಕ್ರವರ್ತಿ ಎರಡನೇಯ ಹರಿಹರ (1377-1404) ನ ಉಲ್ಲೇಖವಿದ್ದು

ವೀರನೋರ್ವನ ಮರಣದ ವಿಚಾರವಿದೆ. ತಾರೀಕಿಲ್ಲದ ಹಿರೇಹಳ್ಳಿ (ಬ್ಯಾಡಗಿ ತಾ||) ಶಾಸನದಲ್ಲಿ ಎರಡನೇಯ ಹರಿಹರನ ಕಾಲದಲ್ಲಿ ವೀರನೊಬ್ಬನ ಮರಣದ ಉಲ್ಲೇಖವಿದ್ದು ವೀರನ ತಂದೆತಾಯಂದಿರ ಹೆಸರಿದೆ. ಇದರಲ್ಲಿಯೂ ಇನ್ನೊಂದು ತಾರೀಕಿಲ್ಲದ ಮುತ್ತಳ್ಳಿ (ತಾ||ಶಿಗ್ಗಾಂವ) ಶಾಸನದಲ್ಲಿಯೂ ಮೇಲೆ ಹೇಳಿದ ಮಾದರಸ ಒಡೆಯನ ಉಲ್ಲೇಖವಿದ್ದು ಇಲ್ಲಿ ಆತನು 'ಗೋವೆಯ ಮಾದರಸ' ಎಂದು ಸ್ಪಷ್ಟಪಡಿಸಿದ್ದು ಎರಡನೇಯ ಹರಿಹರನ ಕಾಲದಲ್ಲೇ ಸೂರಪ್ಪಯ್ಯ ಎಂಬವನಿಗೆ ಮುಕ್ತರಳ್ಳಿ ಗ್ರಾಮದ ದಾನಮಾಡಿದ ವಿವರವಿದೆ. ಇಲ್ಲಿ ಮಾದನ ಒಡೆಯನ ಮಗ ಸಿಂಗಿನಾಯಕನು ಸೂರಪ್ಪಯ್ಯನ ಮಗ ಜನ್ನಪ್ಪಯ್ಯನಿಗೆ ದಾನ ನೀಡಿದ ವಿಚಾರವೂ ಇದೆ. ಈ ಸೂರಪ್ಪಯ್ಯ ಜನ್ನಪ್ಪಯ್ಯರು ಯಾರೆಂದು ತಿಳಿಯದು. ಬಂಕಾಪುರದ ತಾರೀಕಿಲ್ಲದ ಒಂದು ಅಪೂರ್ವ ಶಾಸನದಲ್ಲೂ ಹರಿಹರ ಮತ್ತು ಮಾಧವ ಮಂತ್ರಿ (ಮಾದರಸ)ಯ ಉಲ್ಲೇಖವಿದೆ. ರೋಣ ತಾ||ಕಳಕಪ್ಪನ ಗುಡ್ಡದಲ್ಲೂ ಎರಡನೇಯ ಹರಿಹರನ ತ್ರುಟಿತ ಶಾಸನವಿದ್ದು, ಅಬ್ಬಿಗೇರಿಯಲ್ಲಿ ಮಾಧ್ವ ಬ್ರಾಹ್ಮಣನೊಬ್ಬನಿಗೆ ಹರಿಹರನು ಗ್ರಾಮದಾನ ನೀಡಿದ 1379ರ ಶಾಸನವಿದೆ. ಆದರೆ ಜಿಲ್ಲೆಯಲ್ಲಿನ ಹೆಚ್ಚಿನ ಶಾಸನಗಳು ತ್ರುಟಿತವಾಗಿದ್ದು ಈ ಕಾಲದ ಆಡಳಿತದ ವಿವರಗಳನ್ನು ತಿಳಿಯಲು ಕಷ್ಟವಾಗಿದೆ. 1403 ರ ಚಿಕ್ಕಣಜಿ ಶಾಸನದಲ್ಲಿ (ಬ್ಯಾಡಗಿ ತಾ||) ವೀರನೊಬ್ಬನು ಹರಿಹರನ ಕಾಲದಲ್ಲಿ ಮಡಿದ ಸಂಗತಿ ಇದೆ.

ಬುಕ್ಕನ ಕಾಲದಲ್ಲಿ (1356-77) ಅರ್ಕಾಟು ಪ್ರದೇಶದ ಶಂಬುವರಾಯನನ್ನು ಸೋಲಿಸಿದ್ದೂ ಮಧುರೆಯ ಸುಲ್ತಾನನನ್ನು 1371ರಲ್ಲಿ ಅವನ ಪುತ್ರ ಕಂಪಣ ಪರಾಭವಗೊಳಿಸಿದ್ದು ರಾಜ್ಯವು ದಕ್ಷಿಣದಲ್ಲಿ ವಿಸ್ತರಿಸಲು ನೆರವಾಯಿತು. ಬುಕ್ಕನ ಕಾಲದಲ್ಲೇ ಬಹಮನಿ ಹಾಗೂ ವಿಜಯನಗರಗಳ ನಡುವಣ ದೋಆಬ್‌ಯುದ್ಧ ಮೊದಲಿಟ್ಟಿತು. ಮುಜಾಹೀದ್ ಬಹಮನಿ ವಿಜಯನಗರದ ಆದೋನಿಗೆ ಮುತ್ತಿಗೆ ಇಕ್ಕಿದ. ವಿಜಯನಗರದ ಮೇಲೂ ದಾಳಿ ಮಾಡಿದ. ಬುಕ್ಕ ಇದೇ ಕಾಲಕ್ಕೆ ತೀರಿಕೊಂಡ. ವಿಜಯನಗರದ ಸೇನೆ ಮುಜಾಹಿದ್‌ನನ್ನು ಹಿಂದಕ್ಕಟ್ಟಿತು. ವೇದಗಳ ಬಗ್ಗೆ ಸಾಯಣರ ನೇತೃತ್ವದಲ್ಲಿ ಆರಂಭವಾದ ಭಾಷ್ಯ ಲೇಖನ ಬುಕ್ಕನ ಮಗ ಎರಡನೇಯ ಹರಿಹರನ ಕಾಲದಲ್ಲಿ (1377-1404) ಮುಗಿಯಿತು. 'ವೇದಮಾರ್ಗ ಪ್ರವರ್ತಕ' ಎಂಬುದು ಈ ರಾಜರಿಬ್ಬರೂ ಇದ್ದ ಬಿರುದುಗಳು. ಮುಜಾಹೀದ್ ಬಹಮನ್‌ಷಾ ತೀರಿಕೊಂಡ ಪರಿಸ್ಥಿತಿಯ ಲಾಭ ಪಡೆದು ಹರಿಹರನು ಕೊಂಕಣದಲ್ಲಿ ಗೋವೆಗೂ ಉತ್ತರಕ್ಕೆ ಚಾಉಲ್‌ವರೆಗೂ ರಾಜ್ಯ ವಿಸ್ತರಿಸಿದ. ಆಂಧ್ರದಲ್ಲಿ ಉದಯಗಿರಿ, ನೆಲ್ಲೂರು, ಗುಂಟೂರು ಪ್ರದೇಶ ಹಾಗೂ ವೆಳಮ ಅರಸರ ಪನಗಳ ಕೋಟೆಯನ್ನು ಗೆದ್ದ. ಕರೀಮ್‌ನಗರ ಜಿಲ್ಲೆಯವರೆಗೂ ಪೂರ್ವದಲ್ಲಿ ರಾಜ್ಯ ವಿಸ್ತರಿಸಿತು.

ಎರಡನೇಯ ಹರಿಹರನ ನಂತರ ಅವನ ಮಗ ವಿರೂಪಾಕ್ಷ (1404), ಎರಡನೇಯ ಬುಕ್ಕ (1405-06), ಹಾಗೂ ಕೊನೆಗೆ ದೇವರಾಯ (1406-22) ಇವರು ಆಳಿದರು. ಇವರೆಲ್ಲ ಎರಡನೇಯ ಹರಿಹರನ ಪುತ್ರರೇ. ದೇವರಾಯನು ತಂದೆಯ ಕಾಲದಲ್ಲೇ ಉದಯಗಿರಿಯ ರಾಜ್ಯಪಾಲನಾಗಿ ಬಹಮನಿ ಹಾಗೂ ರೆಡ್ಡಿ ಮತ್ತು ವೆಳಮ ರಾಜರ ವಿರುದ್ಧ ಹೋರಾಡಿದ್ದ. ಬಹಮನಿಗಳೂ ರೆಡ್ಡಿಗಳೂ ಒಟ್ಟಾಗಿ 1406 ರಲ್ಲಿ ವಿಜಯನಗರ ರಾಜ್ಯದ ಮೇಲೆ ದಾಳಿಮಾಡಿದರು (ಇದಕ್ಕೆ ಕಾರಣ ದೇವರಾಯನು ಮುದುಗಲ್ಲಿ ಅಕ್ಕಸಾಲಿಗನ ಮಗಳೊಬ್ಬಳನ್ನು ವರಿಸಬೇಕೆಂದು ಪಟ್ಟು ಹಿಡಿದು ಅವಳನ್ನು ರಾಜಧಾನಿಗೆ ತರಲು ಹೇಳಿದಾಗ ಆ ಹುಡುಗಿ ಮುಜಾಹಿದ್‌ನಿಂದ ಆಶ್ರಯ ಯಾಚಿಸಿದ್ದೇ ಕಾರಣ ಎಂಬ ಫರಿಶ್ತಾ ಹೇಳಿರುವ, ಈಗ ಕಟ್ಟುಕತೆಯೆಂದು ತಿಳಿದು ಬಂದಿರುವ, ಕಾರಣ ನೀಡಲಾಗಿದೆ). ಬಹಮನಿಯವರು ಬಂಕಾಪುರವನ್ನು ಗೆದ್ದರು. ಫಿರೋಜ್ ಬಹಮನಿಗೆ ದೇವರಾಯನು ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ಬಂಕಾಪುರವನ್ನು ಅವನಿಗೆ ಬಳುವಳಿಯಾಗಿ ಕೊಟ್ಟನೆಂದು ಫರಿಷ್ತಾ ಹೇಳಿದ್ದಾನೆ. (ಸೈಯದ್ ಅಲಿ, ನುನಿಸ್ ಮುಂತಾದ ಅಂದಿನ ಬರಹಗಾರರು ಅಕ್ಕಸಾಲಿಗನ ಮಗಳ ಪ್ರಕರಣ, ದೇವರಾಯನು ಬಹಮನಿಯವರ ಜೊತೆ ಬೀಗತನ ಮಾಡಿದ್ದು ಮುಂತಾದ ಸಂಗತಿ ಹೇಳಿಲ್ಲ). ಬಂಕಾಪುರ ಬಹಮನಿಯ ವಶವಾದಾಗ ಧಾರವಾಡ ಜಿಲ್ಲೆಯ ಎಷ್ಟು ಪ್ರದೇಶ ಅದರ ವ್ಯಾಪ್ತಿಗೆ ಸೇರಿತ್ತೆಂಬ ವಿವರ ತಿಳಿಯದು.

ರಾಚಕೊಂಡದ ವೆಳ್ಳಮ ಅರಸರ ಜೊತೆ ಸ್ನೇಹಮಾಡಿ ಫಿರೋಜ್ ವಿಜಯನಗರಕ್ಕೆ ಸೇರಿದ ರಾಜಮಹೇಂದ್ರಿಯನ್ನು ಗೆಲ್ಲಲು ಹೊರಟಾಗ ಅದು ಸುಲಭವಾಗಿ ಬಗ್ಗದಿರಲು ಒರಿಸ್ಸಾದ ಕಡೆ ಸಾಗಿದನು. ದೇವರಾಯನು ವೆಳಮ ರಾಜನ ಸ್ನೇಹಮಾಡಿ ಪನಗಲವನ್ನು ಗೆಲ್ಲಲು ಫಿರೋಜ್ ರಾಜಧಾನಿಗೆ ಮರಳಿದನು. ಆದರೆ ರಾಯ್ಚೂರ್ ದೋಆಬನ್ನು ಗೆಲ್ಲಲು ವಿಜಯನಗರದವರಿಗೆ ಸಾಧ್ಯವಾಗಲಿಲ್ಲ. ಆದರೆ ವೆಳಮ ಅರಸರು ಫಿರೋಜನ ಮಿತ್ರನಾದ ಕೊಂಡವೀಡಿನ ಪೆದ್ದ ಕೋಮಟಿ ವೇಮನನ್ನು ಸೋಲಿಸಿಕೊಂದರು. ವೆಳಮರ ಜೊತೆ ಸ್ನೇಹ ಸಾಧಿಸಿ ದೇವರಾಯನು ಆಂಧ್ರದಲ್ಲಿ ತನ್ನ ಹಿಡಿತವನ್ನು ವಿಸ್ತರಿಸಿದನು. ಪೊರ್ತುಗೀಸ್ ಪ್ರವಾಸಿ ನುನಿಸ್ ಹಾಗೂ ದೇವರಾಯನ ಕಾಲಕ್ಕೇ ಬಂದಿದ್ದ ಇಟಲಿಯ ನಿಕೊಲೊ ಕೊಂತಿ ದೇವರಾಯನ ಸಾಧನೆಗಳನ್ನು ಹೊಗಳಿದ್ದಾರೆ.

ದೇವರಾಯನ ಎರಡು ಶಾಸನಗಳು ಸಂಗೂರಲ್ಲಿ ಇದ್ದು ಮಾದರಸ ಎಂಬಾತ ಕುಮಾರ ರಾಮನಾಥನ ಸ್ಮಾರಕ ನಿರ್ಮಾಣ ಮಾಡಿದ ವಿಚಾರ ಹೇಳಿದರೆ (1408), ಇನ್ನೊಂದು (1413) ಯುದ್ಧದಲ್ಲಿ ಮಡಿದ ವೀರರ ವಂಶಸ್ಥರಿಗೆ ಭೂಮಿ ('ರಕ್ತಕೊಡಗೆ') ನೀಡಿದ ವಿಚಾರವಿದೆ. ಬಹುಶಃ ಇದು ಬಂಕಾಪುರದಲ್ಲಿ ನಡೆದ ಯುದ್ಧಕ್ಕೆ ಸಂಬಂಧಿಸಿರಬಹುದು. 1413ರ ಲಕ್ಷ್ಮೇಶ್ವರದ ಶಾಸನದಲ್ಲಿ ಅಲ್ಲಿನ ಶಂಖ ಜಿನಾಲಯ ಮತ್ತು ಸೋಮೇಶ್ವರ ದೇವಾಲಯದ ಆಡಳಿತಕ್ಕೆ ಸಂಬಂಧಪಟ್ಟವರಲ್ಲಿ ತಮಗೆ ಸೇರಿದ ಭೂಮಿಗೆ ಸಂಬಂಧಿಸಿ ಒಂದು ವಿವಾದ ಕಾಣಿಸಿರಲು ಮಹಾ ಪ್ರಧಾನ ನಾಗಣ್ಣ ದಣ್ನಾಯಕ ಮತ್ತು (ವಿಜಯನಗರದ) ಅರಮನೆಯ ಪುರೋಹಿತ ಸಂಗಮ ದೇವರು ಶಂಖ ಜಿನಾಲಯದ ಅಪಹೃತವಾಗಿದ್ದ ಭೂಮಿಯನ್ನು ಅದಕ್ಕೆ ಮರಳಿಸಿದರು.

ದೇವರಾಯನ ನಂತರ ಅವನ ಮಗ ರಾಮಚಂದ್ರ (1422-24) ಆಳಿದ; ಮುಂದೆ ತನ್ನ ತಂದೆ ವಿಜಯರಾಯನ ಕಾಲದಲ್ಲೇ ಆಡಳಿತದ ಭಾರಹೊತ್ತಿದ್ದ ಇಮ್ಮಡಿ ದೇವರಾಯನಿಗೆ (1424-46) ಪಟ್ಟವಾಯಿತು. ಸಂಗಮ ವಂಶದಲ್ಲೇ ಖ್ಯಾತನಾದ ಸಮರ್ಥ ದೊರೆ ಈತ. 1423ರಲ್ಲಿ ಬಹಮನಿ ಅರಸ (ಫಿರೋಜ್‌ನ ತಮ್ಮ) ಒಂದನೇಯ ಅಹ್ಮದ್‌ನನ್ನು ಸೋಲಿಸಿದ್ದರಿಂದ ಮುಂದೆ ಅಹ್ಮದ್ (1422-36) ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರ್‌ಗೆ ಸ್ಥಳಾಂತರಿಸಿದನು. ಕೊಂಡವೀಡಿನ ರೆಡ್ಡಿಗಳನ್ನು ಪೂರ್ತಿ ಸೋಲಿಸಿ 1432 ರಲ್ಲಿ ಕೊಂಡವೀಡು ಕೋಟೆಯನ್ನು ಗೆದ್ದನು. ಸಾಮ್ರಾಜ್ಯದ ಪೂರ್ವಗಡಿ ಕೃಷ್ಣಾನದಿಗೆ ತಲುಪಿತು. ವಿಜಯನಗರ ಮತ್ತು ಕಳಿಂಗದ ಗಜಪತಿಗಳ ನಡುವೆ ದ್ವಂದ್ವಕ್ಕೆ ನಾಂದಿಯಾಯಿತು. ಅವರನ್ನು ಮೂರು ಯುದ್ಧಗಳಲ್ಲಿ ಸೋಲಿಸಿ ದೇವರಾಯನು ಗಡಿಯ ರಾಜಮಹೇಂದ್ರಿಯನ್ನು ಉಳಿಸಿಕೊಂಡ. ಬಹಮನಿಗಳ ಜೊತೆ ಯುದ್ಧದಲ್ಲಿ ದೋಆಬ್‌ನ ಕೆಲ ಪ್ರದೇಶಗಳನ್ನು ಕಳೆದುಕೊಂಡರೂ ಮುದುಗಲ್ ಅವನ ವಶದಲ್ಲಿ ಇತ್ತು (1443). ಕೊಯಿಲೊನ್ (ಕೇರಳ), ಸಿಂಹಳದ ಅರಸರಿಂದ ಅವನು ಕಪ್ಪ ಪಡೆದ.

ಅವನ ಗಣ್ಯ ಸೇನಾನಿ ಹಾಗೂ ವಿದ್ವಾಂಸ ಲಕ್ಕಣ್ಣ ('ಶಿವತತ್ತ್ವ ಚಿಂತಾಮಣಿಯ' ಲೇಖಕ) ಮತ್ತು ಇನ್ನೊಬ್ಬ ಸೇನಾನಿ ಜಕ್ಕಣ್ಣ ವೀರಶೈವರಾಗಿದ್ದು ದೇವರಾಯನೂ ವೀರಶೈವ ಸಂಪ್ರದಾಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದ. ಸಾಮ್ರಾಜ್ಯದಲ್ಲಿ 101 ವಿರಕ್ತರು ಕಾಣಿಸಿಕೊಂಡು ವಚನಗಳ ಸಂಪಾದನೆ, ಸಂಗ್ರಹದಲ್ಲಿ ಮಹತ್ತರ ಪಾತ್ರವಹಿಸಿದರು. ಪರ್ಶಿಯದ ಅಬ್ದುರ್ ರಜಾಕ್ ಇದೇ ಕಾಲಕ್ಕೆ ರಾಜಧಾನಿಗೆ ಬಂದಿದ್ದು ರಾಜಧಾನಿಯ ವೈಭವ ಸಂಪತ್ತುಗಳನ್ನು ರಾಜನ ವ್ಯಕ್ತಿತ್ವವನ್ನೂ ಕೊಂಡಾಡಿದ್ದಾನೆ. 'ಜಗತ್ತಿನಲ್ಲಿ ಇಂಥ ನಗರವೇ ಇಲ್ಲ' ಎಂದಿದ್ದಾನೆ.

ಹಿರೇಕೆರೂರು ತಾ|| ಕಡೂರಿನ 1429ರ ಒಂದು ಶಾಸನದಲ್ಲಿ ಆ ಪ್ರದೇಶವು ಚಂದ್ರಗುತ್ತಿಯಲ್ಲಿದ್ದ ಗೋಪಿನಾಥ ನಾಯಕನ ಆಡಳಿತಕ್ಕೆ ಒಳಪಟ್ಟಿತ್ತೆಂದು ಹೇಳುತ್ತ ನಾಗರಸ ಎಂಬ ವೀರನ ಸ್ಮಾರಕವಾಗಿ ಸ್ಥಾಪಿಸಿದ ವೀರಗಲ್ಲನ್ನು ಉಲ್ಲೇಖಿಸುತ್ತದೆ. ರೋಣ ತಾ|| ಸವಡಿ ('ಸೈವಿಡಿ')ಯ ಶಾಸನವು ಆ ಊರು ಬಾದಾಮಿ ಸೀಮೆಗೆ ಸೇರಿದ್ದು ಚೌಡನಾಯಕನೆಂಬುವನು ಸವಡಿಯ ತ್ರೈಪುರುಷ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದನ್ನು ತಿಳಿಸುತ್ತದೆ (1431). ಬ್ಯಾಡಗಿ ತಾ|| ಕುಮ್ಮೂರಿನ ಶಾಸನವು ಚಂದ್ರಗುತ್ತಿಯ ಅಧಿಕಾರಿ ಮಲ್ಲರಸ ಒಡೆಯನನ್ನು ಉಲ್ಲೇಖಿಸಿ ಬಾಚನಾಯಕ ಎಂಬಾತನ ಮೇಲೆ ಮಲ್ಲರಸನು ದಾಳಿ ಮಾಡಿದನೆಂದು ಹೇಳುತ್ತದೆ (1441). ಬಾಚಯ ಅಥವಾ ಬೈಚಿಯನೂ ಸಾಮ್ರಾಜ್ಯದ ಅಧಿಕಾರಿಯಾಗಿದ್ದು ಈ ಅಂತಃಕಲಹಕ್ಕೆ ಕಾರಣ ತಿಳಿಯದು. ಕುಂದಗೋಳ ('ಕುಂಧಾಗಲ್ಲ') ಶಾಸನದಲ್ಲಿ ಇನ (ಸೂರ್ಯ)ವಂಶದ(?) ವಲ್ಲಭರಾಯನು ಹನುಮಂತ ದೇವರ ಗುಡಿ ಸ್ಥಾಪಿಸಿದ್ದನ್ನು ಹೇಳಿದೆ. ಈತನು ಸಾಮ್ರಾಜ್ಯದ ಅಧಿಕಾರಿ ಇದ್ದಂತಿದೆ. ಸರಿ ಸುಮಾರು ಇದೇ ಕಾಲದಲ್ಲಿ ಅವಸರದ ಬಾಲನಿಂಗೆಯ ನಾಯಕ ಎಂಬ ಅಧಿಕಾರಿಯ ಮಗ ಕಲ್ಲಪ್ಪ ಎಂಬಾತನು ಹಿರೇಕೆರೂರು ತಾ||ನಲ್ಲಿ ಗಂಗಾಪುರ ಊರನ್ನು ಸ್ಥಾಪಿಸಿ ಹನುಮಂತ ದೇವರ ಪ್ರತಿಷ್ಠೆ ಮಾಡಿದ ತಾರೀಕಿಲ್ಲದ ಶಾಸನವಿದೆ. 101 ವಿರಕ್ತರಲ್ಲಿ ಒಬ್ಬರಾದ ಕಲ್ಲುಮಠದ ಪ್ರಭುದೇವರೂ ತೋಂಟದ ಸಿದ್ದಲಿಂಗಯತಿಗಳೂ ಅಲ್ಲದೆ ಖ್ಯಾತ ವೀರಶೈವ ಕವಿ ಮಗ್ಗೆಯ ಮಾಯಿದೇವನೂ ಈ ಕಾಲದಲ್ಲಿ ಹಂಪೆಯಲ್ಲಿ ಇದ್ದಿರಬೇಕು. ತೋಂಟದ ಸಿದ್ದಲಿಂಗಯತಿಗಳು ತಂಬಳದಲ್ಲಿ ಮಠ ಸ್ಥಾಪಿಸಿ, ಮುಂದೆ ಗದಗಿನಲ್ಲೂ ಅದರ ಶಾಖೆ ಆಯಿತು. ಅವರು ಅಸಾಧಾರಣ ಮತ ಪ್ರಚಾರಕರು, ನಿತ್ಯ ಸಂಚಾರಿಗಳು.

ದೇವರಾಯನ ನಂತರ ಆಳಿದ ಅವನ ಮಗ ಮಲ್ಲಿಕಾರ್ಜುನ (1446-65) ಅಸಮರ್ಥನೂ ವ್ಯಸನಿಯೂ ಆಗಿದ್ದು ಕಳಿಂಗದ ಗಜಪತಿಗಳು ಅವನಿಂದ 1454ರಲ್ಲಿ ರಾಜ ಮಹೇಂದ್ರಿಯನ್ನೂ ಗೆದ್ದರು. ಮುಂದೆ ಉದಯಗಿರಿ, ಚಂದ್ರಗಿರಿಗಳನ್ನೂ ಗೆದ್ದರು. ಬಹಮನಿ ಅರಸರು 1450ರಲ್ಲಿ ರಾಜಧಾನಿಯವರೆಗೆ ಒಂದು ಅಪಾರ ಹಣ ಪಡೆದು ಮರಳಿದರು. ವೆಲಮ ಅರಸರು ಕರ್ನೂಲು

ಜಿಲ್ಲೆಯ ವೆಲುಗೋಡಿನವರೆಗೆ ಆಕ್ರಮಣ ಮಾಡಿದರು. ಕಳಿಂಗದ ಕಪಿಲೇಂದ್ರ ಗಜಪತಿ ಆಂಧ್ರದ ಅನೇಕ ಭಾಗಗಳನ್ನು ಗೆದ್ದು ರಾಮೇಶ್ವರದವರೆಗೂ ತನ್ನ ಸೈನ್ಯವನ್ನು ಕಳುಹಿಸಿದ. ಮಲ್ಲಿಕಾರ್ಜುನ ಪಟ್ಟಬಂಧದ ನೆನಪಿಗೆ ಧಾರವಾಡ ಬಳಿಯ ನರೇಂದ್ರದ ಹತ್ತಿರದ ಕುಂಭಾಪುರದಲ್ಲಿ 1448ರಲ್ಲಿ ನಂದಿಯ ಕಂಬ ನಿಲ್ಲಿಸಿದ ಉಲ್ಲೇಖವಿದೆ. ತಿಳವಳ್ಳಿಯ 1449ರ ಒಂದು ಶಾಸನ ಒಂದು ವೀರಗಲ್ಲಾಗಿದೆ. ಧಾರವಾಡದ ಈ ಪ್ರದೇಶವು ಗೋವೆಯ ಹೊನ್ನಪ್ಪ ಒಡೆಯರ ಅಧೀನರಾದ ಚಂದ್ರಗುತ್ತಿಯ ಅಧಿಕಾರಿ (ಹೆಸರು ಮಾಸಿದೆ)ಯ ಆಡಳಿತಕ್ಕೆ ಒಳಪಟ್ಟುದೆಂದು ತಿಳಿಯುತ್ತದೆ.

ಮಲ್ಲಿಕಾರ್ಜುನ ನಂತರ ಅವನ ದಾಯಾದಿ (ತಂದೆಯ ತಮ್ಮ ಪ್ರತಾಪರಾಯನ ಮಗ) ವಿರೂಪಾಕ್ಷ (1465-85) ಮಲ್ಲಿಕಾರ್ಜುನನ್ನು ಪಕ್ಕಕ್ಕೆ ತಳ್ಳಿ ಪಟ್ಟಕ್ಕೆ ಬಂದ. ಈತನೂ ದುರ್ಬಲ ಹಾಗೂ ವ್ಯಸನಿ ಅರಸನಾಗಿದ್ದು ಬಹಮನಿ ರಾಜ್ಯದ ಮಂತ್ರಿ ಮಹಮೂದ್ ಗಾವಾನನು ಗೋವೆಯಿಂದ ಆರಂಭಿಸಿ ಕೊಂಕಣವನ್ನು ಮಲಪ್ರಭೆಯ ಉತ್ತರದ ಬೆಳಗಾವಿ ಜಿಲ್ಲೆಯ ಭಾಗಗಳನ್ನು 1470ರಲ್ಲಿ ಗೆದ್ದ. ಬಹುಶಃ ಧಾರವಾಡ ಹುಬ್ಬಳ್ಳಿಗಳನ್ನು ಆತ ವಶಪಡಿಸಿಕೊಂಡ. ಆದರೆ ಮಲಪ್ರಭೆಯ ದಕ್ಷಿಣದ ಪ್ರದೇಶ ಹೆಚ್ಚುಕಾಲ ಬಹಮನಿಗಳ ವಶ ಇರಲಿಲ್ಲ.

ಇದೇ ಕಾಲದಲ್ಲಿ ಗಜಪತಿಯ ರಾಜ್ಯದಲ್ಲಿ ಅಂತಃಕಲಹವಾಗಲು ಅದರ ಲಾಭ ಪಡೆದು ಬಹಮನಿ ಸುಲ್ತಾನ ಮೂರನೇಯ ಮುಹಮ್ಮದ್ ಷಾ ರಾಜಮಹೇಂದ್ರಿ ಹಾಗೂ ಕೊಂಡವೀಡನ್ನು ಗೆದ್ದ. ಸಾಮ್ರಾಜ್ಯ ಕುಸಿಯುತ್ತಿರುವ ಈ ವಾತಾವರಣದಲ್ಲಿ ಸಾಮ್ರಾಜ್ಯದ ನಿಷ್ಠ ಸೇನಾನಿ ಚಂದ್ರಗಿರಿಯ ಮಾಂಡಳಿಕ ಸಾಳುವ ನರಸಿಂಹನು ವಿರೂಪಾಕ್ಷನ ಅಸಮರ್ಪಕ ಆಡಳಿತದಿಂದ ನೊಂದು ಪೂರ್ವ ಕರಾವಳಿಯಲ್ಲಿ ದಂಡೆತ್ತಿ ಸಾಗಿ ಗೋದಾವರಿಯವರೆಗೆ ಪ್ರದೇಶವನ್ನು ಗೆದ್ದುಕೊಂಡ. ಈ ಕಾಲದಲ್ಲಿ ಮುಹಮ್ಮದ್ ಷಾ ಮತ್ತೆ ಕಳಿಂಗಕ್ಕೆ ಭಂದು ಅಲ್ಲಿಂದ ದಕ್ಷಿಣಕ್ಕೆ ಕಾಂಚಿಯವರೆಗೂ ಸಾಗಿ ಕಾಂಚಿ ದೇವಾಲಯವನ್ನು ಲೂಟಿ ಮಾಡಿದ. ಗೋದಾವರಿ ತೀರದಿಂದ ಹಿಂದೆಗೆದಿದ್ದ ಸಾಳುವ ನರಸಿಂಹನೂ ಅವನ ಸೇನಾನಿ ನರಸನಾಯಕನೂ ನೆಲ್ಲೂರು ಜಿಲ್ಲೆಯ ಕಂದಕೂರಲ್ಲಿ ಬಹಮನಿ ಸೇನೆಯನ್ನು ತಡೆದು ಲೂಟಿಮಾಡಿದ ಸಂಪತ್ತನ್ನು ಮತ್ತೆ ಸೆಳೆದುಕೊಂಡರು. ಅವನನ್ನು ಬೆನ್ನಟ್ಟಿ ಪೆನುಕೊಂಡೆಗೆ ಬಂದ ಬಹಮನಿ ಸೇನೆಯನ್ನು ನರಸಿಂಹನು ಹಿಂದಕ್ಕಟ್ಟಿದನು. ಕೊಂಡವೀಡನ್ನೂ ಅವನು ಗೆದ್ದನು(1480).

ಸಾಮ್ರಾಜ್ಯದಲ್ಲಿ ಆದ ಈ ಅವ್ಯವಸ್ಥೆಯಿಂದ ನೊಂದು ವಿರೂಪಾಕ್ಷನ ಮಗ ಪ್ರೌಢರಾಯನು 1485ರಲ್ಲಿ ವ್ಯಸನಿಯಾದ ವಿರೂಪಾಕ್ಷನನ್ನು ಕೊಂದು ತಾನು ಪಟ್ಟವೇರಿದ. ಆದರೆ ಆತನಲ್ಲೂ ಸಾಮ್ರಾಜ್ಯದ ಅವ್ಯವಸ್ಥೆಯನ್ನು ಸುಧಾರಿಸಲು ಸಾಧ್ಯವಿಲ್ಲವಾಯಿತು. ಈ ಸಂಧಿಯನ್ನು ಬಳಸಿ ಸಾಳ್ವ ನರಸಿಂಹನು ತನ್ನ ಸೇನಾನಿ ನರಸನಾಯಕನನ್ನು ವಿಜಯನಗರಕ್ಕೆ ಸೈನ್ಯ ಸಮೇತ ಕಳುಹಿಸಲು ಕೆಲವೇಕಾಲ(1485)ಆಳಿದ್ದ ಪ್ರೌಢರಾಯನು ರಾಜಧಾನಿಯಿಂದ ಪಲಾಯನಮಾಡಲು ಸಾಳುವ ನರಸಿಂಹನು ರಾಜ್ಯಗ್ರಹಣ ಮಾಡಿದ (1485). 1470 ರಲ್ಲಿ ಗೆದ್ದ ಧಾರವಾಡ ಜಿಲ್ಲೆಯ ಬಹುಭಾಗ 1500ರವರೆಗೆ ಬಹಮನಿಗಳ ವಶ ಇದ್ದಿರಬೇಕು. ವಿರೂಪಾಕ್ಷನ ಯಾವುದೇ ಶಾಸನ ಜಿಲ್ಲೆಯಲ್ಲಿ ಕಂಡುಬಂದಿಲ್ಲ.

**ಸಾಳುವರು , ತುಳುವರು**

ಕೇವಲ ಐದಾರು ವರ್ಷ ಮಾತ್ರ ಆಳಿದ ಸಾಳುವ ನರಸಿಂಹನು ಸಾಮ್ರಾಜ್ಯವನ್ನು ಗತ ಘನತೆಗೆ ಒಯ್ಯಲು ಶ್ರಮಿಸಿದ. ಶ್ರೀ ವೈಷ್ಣವನಾದ ಆತ ಮಾಧ್ವ ಗುರು ಶ್ರೀಪಾದರಾಯರ ಭಕ್ತನಾಗಿದ್ದ. ಆತನ ಕಾಲದಲ್ಲಿ ಉಮ್ಮತ್ತೂರು, ಪಶ್ಚಿಮ ಕರಾವಳಿಗಳಲ್ಲಿ ದಂಗೆಗಳಾದವು. ಗಜಪತಿ ಕಪಿಲೇಂದ್ರ ಉದಯಗಿರಿಯನ್ನು ಗೆದ್ದ. ಆದರೆ, ಅವನು ಸೈನ್ಯವನ್ನು ಬಲಪಡಿಸಿ ಅಶ್ವದಳವನ್ನು ಸುಧಾರಿಸಿದ. 1491ರಲ್ಲಿ ಸಾಳ್ವ ನರಸಿಂಹನು ತೀರಿಕೊಳ್ಳಲು, ತನ್ನ ಅಪ್ರಾಪ್ತ ವಯಸ್ಕ ಮಗ ಸಾಳುವ ತಿಮ್ಮರಾಜನನ್ನು ತನ್ನ ನೆಚ್ಚಿನ ಸೇನಾನಿ ತುಳುವ ನರಸನಾಯಕ ವಶಕ್ಕೆ ಒಪ್ಪಿಸಿದ್ದ. ಆದರೆ ಶೀಘ್ರವೇ ನರಸನಾಯಕನ ಶತ್ರುವಾಗಿದ್ದ ಅಧಿಕಾರಿ ಒಬ್ಬನು ತಿಮ್ಮರಾಜನನ್ನು ಕೊಂದ. ಆಗ ನರಸನಾಯಕನು ಸಾಳುವ ನರಸಿಂಹನ ಎರಡನೇಯ ಮಗ ಎರಡನೇಯ ಸಾಳುವ ನರಸಿಂಹನನ್ನು ಪಟ್ಟದಲ್ಲಿ ಕುಳ್ಳಿರಿಸಿ, ತಾನೇ ಆಡಳಿತ ನಿರ್ವಹಿಸಿದ. ಇಷ್ಟೊತ್ತಿಗೆ ಬಹಮನಿ ರಾಜ್ಯವು ಒಡೆದು, ವಿಜಯನಗರದ ಗಡಿಯಲ್ಲಿ ವಿಜಾಪುರದ ಆದಿಲ್‌ಷಾಹಿಗಳ ಆಡಳಿತ ಬಂದಿತ್ತು (1489). ಸಾಮ್ರಾಜ್ಯದಲ್ಲಿ ಅನೇಕ ಬಂಡಾಯಗಳಾದರೂ ಗಜಪತಿಗಳ ಹಾಗೂ ವಿಜಾಪುರದವರ ದಾಳಿಯಿಂದ ಸಾಳುವ ನರಸಿಂಹ ಸಾಮ್ರಾಜ್ಯವನ್ನು ರಕ್ಷಿಸಿದ. ಪಶ್ಚಿಮ ಕರಾವಳಿಯ ಅರಬ್ಬರಿಂದ ಒಳ್ಳೆಯ ಕುದುರೆಗಳನ್ನು ಸೈನ್ಯಕ್ಕೆ ಖರೀದಿಸಿದ.

ಆದರೆ ವಯಸ್ಸಿಗೆ ಬಂದ ಇಮ್ಮಡಿ ನರಸಿಂಹನನ್ನು ಪೆನುಕೊಂಡ ಕೋಟೆಯಲ್ಲಿ ಕಣ್ಣುಕಾಪಿನಲ್ಲಿ ಇರಿಸಿದ. ಪೂರ್ವದಲ್ಲಿ ಶ್ರೀರಂಗಪಟ್ಟಣ, ಉತ್ತರದಲ್ಲಿ ಮಾನ್ವಿವರೆಗೆ ವಿಜಯ ಸಾಧಿಸಿದ. ಉದಯಗಿರಿಯನ್ನು ಮಾತ್ರ ಗಜಪತಿ ಗೆದ್ದುಕೊಂಡ.

1503ರಲ್ಲಿ ಆತನು ತೀರಿಕೊಳ್ಳಲು ಅವನ ಹಿರಿಮಗ ತುಳುವ ವೀರನರಸಿಂಹ ಪಟ್ಟವೇರಿದ. ಈತ ಪೆನುಕೊಂಡೆಯಲ್ಲಿ ಇದ್ದ ಇಮ್ಮಡಿ ಸಾಳುವ ನರಸಿಂಹನನ್ನು ಕೊಲ್ಲಿಸಿದ (1505). ವಿಜಾಪುರದ ಆದಿಲ್ ಖಾನ್ ಆದವಾನಿ, ಕರ್ನೂಲುಗಳನ್ನು ಗೆಲ್ಲಲು ಮಾಡಿದ ಯತ್ನಗಳನ್ನು ವಿಫಲಗೊಳಿಸಿದ. ಆದರೆ ರಾಜ್ಯದಲ್ಲಿ ಎಲ್ಲೆಡೆ ಬಂಡಾಯಗಳು ಸಾಗಿದವು. ನರಸನಾಯಕನ ಒಂದೇ ಒಂದು ಶಾಸನ ಧಾರವಾಡ ಜಿಲ್ಲೆಯ ಒಡೆಯನಪುರದಲ್ಲಿದ್ದು (1500) ಕಾಮೆಯ ಒಡೆಯ ಎಂಬಾತನಿಗೆ ಕೆಂಪಸೋಮನಾಯಕ ಎಂಬ ಅಧಿಕಾರಿ ಬಾಸೂರು, ಅರಳಿಕಟ್ಟೆ ಹಾಗೂ ಲಿಂಗಾಪುರ ಗ್ರಾಮಗಳನ್ನು ದಾನಮಾಡಿದನೆಂದಿದೆ. ಈ ಕಾಮೆಯ ಒಡೆಯನಿಂದಾಗಿ ಈ ಊರಿಗೆ ಒಡೆಯನಪುರ ಎಂದು ಹೆಸರು ಬಂದಿರಬೇಕು. ಈತ ವೀರಶೈವ ಜಂಗಮನಿರಬಹುದು.

ಕೃಷ್ಣದೇವರಾಯನು ತನ್ನ ಅಣ್ಣ ವೀರನರಸಿಂಹನ ನಂತರ (1509-1929) ಪಟ್ಟವೇರಿದ. ಸಮರ್ಥ ದೊರೆಯೆಂದು ಖ್ಯಾತನಾದ ಇವನು ಪಟ್ಟಕ್ಕೆ ಬಂದ ಕೂಡಲೇ ಗಜಪತಿಯನ್ನು ಸೋಲಿಸಿ ಆದಿಲ್‌ಖಾನನನ್ನು ದೋಣಿ, ಕೋವಿಲಕೊಂಡಗಳಲ್ಲಿ ಪರಾಭವಗೊಳಿಸಿ ಆ ವಿಜಯದ ನಂತರವೇ ಪಟ್ಟಾಭಿಷೇಕ ಮಾಡಿಸಿಕೊಂಡ (1510). (ಇಂಥ ಒಂದು ಯುದ್ಧದಲ್ಲಿ ವಿಜಾಪುರದ ಆದಿಲ್‌ಖಾನ್ ತೀರಿಕೊಂಡನೆಂಬ ಅಭಿಪ್ರಾಯವೂ ಇದೆ). ಆಮೇಲೆ ಶಿವನ ಸಮುದ್ರ, ಉಮ್ಮತ್ತೂರು, ಮಂಗಳೂರುಗಳಲ್ಲಿ ಕಾಣಿಸಿದ್ದ ಬಂಡಾಯಗಳನ್ನು ಹತ್ತಿಕ್ಕಿದ. ವಿಜಾಪುರದ ವಶವಿದ್ದ ಗೋವೆಯನ್ನು ಗೆಲ್ಲಲು ಪೋರ್ತುಗೀಸರಿಗೆ ನೆರವಾಗಿ ಅವರ ಜೊತೆ ಕುದುರೆ ವ್ಯಾಪಾರವನ್ನು ಕುದುರಿಸಿಕೊಂಡ. ಬರ್ಬೋಸ, ಪಾಯಿಸ್ ಮುಂತಾದ ಪೋರ್ತುಗೀಸ್ ಪ್ರವಾಸಿಗಳು ವಿಜಯನಗರಕ್ಕೆ ಬಂದು ಅವನನ್ನೂ ಅವನ ಸಾಮ್ರಾಜ್ಯದ ಘನತೆಯನ್ನು ಮನಸಾರೆ ಹೊಗಳಿದ್ದಾರೆ. ಭಟ್ಕಳ, ಗೋವೆ ಬಂದರುಗಳಿಂದ ನಡೆಯುವ ವ್ಯಾಪಾರಕ್ಕೆ ಧಾರವಾಡ ಜಿಲ್ಲೆಯ ಮಧ್ಯಮಾರ್ಗವಾಯಿತು. ರಾಯರ ಹುಬ್ಬಳ್ಳಿ (ಈಗಿನ ಹಳೇ ಹುಬ್ಬಳ್ಳಿ) ನೇಯ್ಗೆ, ಕೈಗಾರಿಕೆ, ವ್ಯಾಪಾರಗಳ ಕೇಂದ್ರವಾಯಿತು.

ಕೃಷ್ಣದೇವರಾಯನು ಗಜಪತಿಯನ್ನು ಸೋಲಿಸಿ ಅವನ ರಾಜಧಾನಿ ಕಟಕದವರೆಗೂ ವಿಜಯಶಾಲಿಯಾಗಿ ಸಾಗಿದ. ಅದೇ ರೀತಿ ವಿಜಾಪುರದ ಅರಸನನ್ನು ಸೋಲಿಸಿ 1520ರಲ್ಲಿ ನಾಲ್ಕುದಿನ ವಿಜಾಪುರ ರಾಜಧಾನಿಯಲ್ಲೇ ತಳವೂರಿದ. ರಾಯ್ಚೂರ್ ದೋಆಬನ್ನು ಪೂರ್ತಿ ವಶಪಡಿಸಿಕೊಂಡ. ಗುಲ್ಬರ್ಗ, ಬೀದರ್ (ಆಗ ಬಹಮನಿಗಳ ರಾಜಧಾನಿಯಾಗಿದ್ದರೂ ಬರೀದ್‌ಷಾಹಿಗಳ ವಶವಾಗಿತ್ತು)ಗಳನ್ನು ವಿಜಯಶಾಲಿಯಾಗಿ ಪ್ರವೇಶಿಸಿದ. ಮುಂದೆ 1522ರಿಂದ ಕೊನೆಗಾಲದವರೆಗೆ ಶಾಂತಿಯಿಂದ ಆಳಿದ. ಹಂಪೆಯ ವಿರೂಪಾಕ್ಷ ದೇವಾಲಯ ಕಲ್ಯಾಣ ಮಂಟಪ, ಕೃಷ್ಣಸ್ವಾಮಿ ದೇವಾಲಯದ ರಚನೆ, ವಿಠಲಸ್ವಾಮಿ ಹಾಗೂ ಹಜಾರ ರಾಮಸ್ವಾಮಿ ಮಂದಿರದ ವಿಸ್ತರಣೆ ಅವನ ಸಾಧನೆಗಳು. ಅವನು ಸ್ವತಃ ವಿದ್ವಾಂಸ,ಕವಿ. ತೆಲುಗು ಕವಿ ಪೆದ್ದನ, ಕನ್ನಡ ಕವಿ ತಿಮ್ಮಣ್ಣ ಅವನಿಂದ ಆಶ್ರಿತರು. ಮಾಧ್ವ ಸಂನ್ಯಾಸಿ ವ್ಯಾಸತೀರ್ಥರಿಗೆ ಆತ ಭಕ್ತನಾಗಿದ್ದ.

ನವಲಗುಂದ ತಾ॥ನ ಶಿಶುವಿನಹಾಳದಲ್ಲಿ ಸಿಕ್ಕ ತಾರೀಕಿಲ್ಲದ ಶಾಸನವನ್ನು ಗಮನಿಸಿದಾಗ ಅಲ್ಲಿನ ಕೃಷ್ಣರಾಯ ಸಮುದ್ರ ಅಗ್ರಹಾರ ಹಾಗೂ ಕೆರೆ ಅವನ ಕಾಲದ ರಚನೆಯೇ ಇರಬೇಕೆನಿಸುತ್ತದೆ. 1520ರ ಗದಗಿನಲ್ಲಿ ತಿಮ್ಮಪ್ಪನಾಯಕ ಅಯ್ಯ ಎಂಬುವನು ಅರವಟ್ಟಿಗೆಗಾಗಿ ಭೂದಾನ ನೀಡಿದ ಶಾಸನವಿದೆ. ರೋಣ ತಾ॥ ಗಾಡಗೋಳಿಯಲ್ಲಿನ ಹನುಮಂತ ದೇವರ ದೇವಾಲಯದ ಪೂಜಾದಿಗಳಿಗೆ ದಾನ ನೀಡಿದ್ದು ಈ ಶಾಸನದಲ್ಲಿ ಚಕ್ರವರ್ತಿಯ ಹೆಸರಿನ ವಿನಾ ಮತ್ತೆಲ್ಲ ಭಾಗ ನಷ್ಟವಾಗಿದೆ. ತೊರಗಲೆ (ತೊರಗಲ್) ದುರ್ಗಾಧಿಪತಿ ವೀರನರಸಿಂಗನಾಯಕ ಅಯ್ಯನ ಗುಮಗೋಳದ (ನವಲಗುಂದ ತಾ॥) ಯಾವುದೋ ದೇವಸ್ಥಾನಕ್ಕೋ ಕೆರೆಗೋ ದಾನಕೊಟ್ಟ ಬಗೆಗಿನ ತ್ರುಟಿತ ಶಾಸನವಿದೆ (1529). ಬಹುಶಃ ಸ್ಥಳೀಯ ಪಾಳೆಯಗಾರನಾಗಿದ್ದ ಇಮ್ಮಡಿ ಎಲ್ಲಪ್ಪ ನಾಯಕ ಎಂಬಾತನು ವ್ಯಕ್ತಿಯೊಬ್ಬನಿಗೆ ಭೂದಾನ ನೀಡಿದ ಶಾಸನ ಕಬನೂರಲ್ಲಿ (ಶಿಗ್ಗಾಂವಿ ತಾ॥) ಇದೆ. ಶಾಸನದಲ್ಲಿ ಚಕ್ರವರ್ತಿಯ ಹೆಸರಿದ್ದರೂ ತಾರೀಕಿಲ್ಲ. ಇದೇ ಇಮ್ಮಡಿ ಎಲ್ಲಪ್ಪ ನಾಯಕನು (ತನಗೆ ಹಾಲೂಡಿಸಿದ್ದ) ದಾಯಿಗೆ ಗ್ರಾಮವೊಂದನ್ನು ದಾನಮಾಡಿ ಶಾಸನ ಹನಮಾಪುರದಲ್ಲಿ ಇದೆ (1528;ರಾಣೆಬೆನ್ನೂರು ತಾ॥). ಬ್ಯಾಡಗಿ ತಾಲೂಕಿನ ಕಳಗೊಂಡ ಶಾಸನದಿಂದ ಬೋಳೆ ಮಲ್ಲರಸ (ಬಹುಶಃ ಒಬ್ಬ ಅಧಿಕಾರಿ)ನ ಗುಡ್ಡದ ತಿರುವಲ (ತಿರುಪತಿ ?) ದೇವಾಲಯಕ್ಕೆ ಗ್ರಾಮದಾನ ನೀಡಿದ ಉಲ್ಲೇಖವಿದೆ. ಕೆಲವು ದಶಕಗಳ ನಂತರ ವಿಜಯನಗರವು ಧಾರವಾಡ ಜಿಲ್ಲೆಯಲ್ಲಿ ಮತ್ತೆ ಪೂರ್ಣ ಅಧಿಕಾರ ಪಡೆಯಿತೆಂಬುದು ಕೃಷ್ಣದೇವರಾಯನ ಅನೇಕ ಶಾಸನಗಳನ್ನು ಜಿಲ್ಲೆಯಲ್ಲಿ ಕಂಡಾಗ ಅನಿಸುತ್ತದೆ. ನೆರೆಯ ಜಿಲ್ಲೆಯ ಸೌಂದತ್ತಿಯಲ್ಲೂ ಅವನ ಶಾಸನವಿದೆ.

ಕೃಷ್ಣದೇವರಾಯನ ನಂತರ ಅವನ ಮಲ ಸಹೋದರ ಅಚ್ಯುತರಾಯನಿಗೆ (1529-42) ಪಟ್ಟವಾಯಿತು. ಇವನು ಪಟ್ಟವೇರುವ ಕಾಲಕ್ಕೆ ಆದ ಗೊಂದಲದ ಲಾಭಪಡೆದು ವಿಜಾಪುರದ ಆದಿಲ್‌ಷಾ ರಾಯ್ಚೂರನ್ನು ಗೆದ್ದಿರಲು ಇವನು ಅದನ್ನು ಮತ್ತೆ ಗೆದ್ದುಕೊಂಡ(1535). ತಿರುವಾಂಕೂರಲ್ಲಿ ಆದ ಬಂಡಾಯವನ್ನು ಹತ್ತಿಕ್ಕಿದ. ಆತ ಸಮರ್ಥ ದೊರೆಯಾದರೂ ಸಾಮ್ರಾಜ್ಯದಲ್ಲಿ ಅನೇಕ ಬಂಡಾಯಗಳನ್ನು ಎದುರಿಸಬೇಕಾಯಿತು. ಹಂಪೆಯಲ್ಲಿ ಅಚ್ಯುತರಾಯ ದೇವಾಲಯ ಈತನ ರಚನೆ. ನುನಿಸ್ ಎಂಬ ಪೋರ್ತುಗೀಸ್ ಪ್ರವಾಸಿ ಇವನ ಕಾಲಕ್ಕೆ ಬಂದವನು.

ಅಚ್ಯುತರಾಯನ ಎರಡು ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ದೊರಕಿದ್ದು ಅವನು ಗದಗಿನಲ್ಲಿ ಹಾಗೂ ಅಣ್ಣಿಗೇರಿಯಲ್ಲಿ ಬ್ರಾಹ್ಮಣರಿಗೆ 'ಆನಂದ ನಿಧಿ' ಎಂಬ ಭಾರಿ ದಾನವನ್ನು ನೀಡಿದನೆಂದು 1539ರ ಆ ಊರುಗಳಲ್ಲಿ ದೊರೆತ ಶಾಸನಗಳು ತಿಳಿಸುತ್ತವೆ. ಗದುಗಿನ ಶಾಸನವು ವೀರನಾರಾಯಣ ದೇವಾಲಯದ ಪರಿಸರದಲ್ಲಿ ಇದ್ದು ಕುಮಾರವ್ಯಾಸನಿಗೆ ಪ್ರಸನ್ನನಾದ ವೀರನಾರಾಯಣ, ಎಂದು ಕವಿಯ ಹೆಸರನ್ನು ಹೇಳಿದೆ. ಈ ಪ್ರಾಚೀನ ದೇವಾಲಯವನ್ನು ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿದ ಲಕ್ಷಣಗಳಿದ್ದು ಮೂರ್ತಿಯೂ ಇದೇ ಕಾಲದಲ್ಲಿ ರಚಿತವಾಗಿದ್ದು ಪುನರ್ಪ್ರತಿಷ್ಠಾಪನೆಯಾಗಿರಬೇಕು. ಮೂಲ ದೇವಾಲಯ ಖಚಿತವಾಗಿಯೂ ಕಲ್ಯಾಣ ಚಾಳುಕ್ಯರದಿದ್ದು ಹೊರ ಮಂಟಪ, ಪ್ರವೇಶದ್ವಾರದ ಗೋಪುರ ವಿಜಯನಗರ ಶೈಲಿಯವು. (ಮೂರ್ತಿ ವಿಜಯನಗರ ಶೈಲಿಯದೆಂದು ಡಾ|| ಅ. ಸುಂದರ ಅಭಿಪ್ರಾಯಪಟ್ಟಿದ್ದಾರೆ.)

ಮುಂದಿನ ಚಕ್ರವರ್ತಿ ಸದಾಶಿವರಾಯನು ಅಚ್ಯುತರಾಯನ ಸೋದರನ ಪುತ್ರನಾಗಿದ್ದು, 1542ರಲ್ಲಿ ಪಟ್ಟವೇರಿದ. ಆದರೆ ಈತನು ನಾಮಮಾತ್ರ ಅರಸನಾಗಿದ್ದು ಆಡಳಿತವೆಲ್ಲ ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಯಲ್ಲಿ ಇತ್ತು. ಆಗ ದಖ್ಖಣದಲ್ಲಿ ಬಹಮನಿ ರಾಜ್ಯ ಒಡೆದು ಹುಟ್ಟಿಕೊಂಡ ಐದು ಷಾಹಿ ರಾಜ್ಯಗಳ (ವಿಜಾಪುರ, ಗೋಲ್ಕೊಂಡ, ಬೀದರ್, ಅಹ್ಮದ್ ನಗರ ಮತ್ತು ಬಿರಾರ್) ಒಳಜಗಳದ ಲಾಭ ಪಡೆದು ಇವನು ರಾಜ್ಯವನ್ನು ಕೃಷ್ಣೆಯ ಆಚೆಗೆ ವಿಸ್ತರಿಸಿದ. ಆದರೆ 1565ರ ಭಾರೀ ಕದನ ರಕ್ಕಸಗಿತಂಗಡಗಿ ಗ್ರಾಮಗಳ ನಡುವೆ ನಡೆದಾಗ ವಿಜಯನಗರ ಸೋತಿತು. ರಾಮರಾಯ ಮೃತನಾದ. ಅವನ ಸೋದರ ಅಳಿಯ ತಿರುಮಲ ಸದಾಶಿವರಾಯನೊಂದಿಗೆ ಪೆನುಗೊಂಡೆಗೆ ಪಲಾಯನ ಮಾಡಿದ. ವಿಜಯನಗರ ಸಾಮ್ರಾಜ್ಯ ಮತ್ತೆ ಹಲವು ದಶಕಗಳ ಕಾಲ ಮುಂದುವರಿದರೂ ಧಾರವಾಡ ಜಿಲ್ಲೆಯಲ್ಲಿ ಅವರ ಪ್ರಭಾವ ಉಳಿಯಲಿಲ್ಲ. ವಿಜಾಪುರದ ಆದಿಲ್ ಷಾಹಿಗಳು ಧಾರವಾಡ ಜಿಲ್ಲೆಯನ್ನು 1565 ರ ನಂತರ ಗೆದ್ದರು.

ಸದಾಶಿವರಾಯನ ಹತ್ತು ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ದೊರೆತಿದ್ದು ಅವುಗಳಲ್ಲಿ ಹೆಚ್ಚಿನವು ನಾವಿದರಿಗೆ (ಕ್ಷೌರಿಕರಿಗೆ) ಸುಂಕಗಳಲ್ಲಿ ವಿನಾಯತಿ ನೀಡಿದ ಶಾಸನಗಳೇ ಆಗಿವೆ. (ಇಂಥ ಶಾಸನಗಳು ಸಾಮ್ರಾಜ್ಯದ ಎಲ್ಲ ಕಡೆ ಇವೆ). ಹಿರೇಕೆರೂರಲ್ಲಿ ದೊರಕಿದ ಒಂದು ಶಾಸನದಂತೆ "ಸದಾಶಿವ ಮಹಾರಾಯರ ದಕ್ಷಿಣ ಭುಜಾದಂಡ......ರಾಮರಾಜೇಂದ್ರ ಮಹಾ ಅರಸರುಗಳು ಗಡ್ಡದ ಕೆಲಸಿಗಳಾದ ತಿಂಮೋಜ ಕೊಂಡೋಜ ಭದ್ರೋಜಯಿವರು ಮೂವರ ಕೆಲಸಕ್ಕೆ ಮೆಚ್ಚಿ ಮನ್ನಿಸಲಾಗಿ ಸದಾಶಿವರಾಯರು ಆಳುವಂಥ ರಾಜ್ಯವೊಳಗಣ ಗಡ್ಡದ ಕೆಲಸಿಗಳಿಗೆ ತೆರಿಗೆ ಸಿದ್ಧಾಯ ಮನೆವಣ ಕಾಣಿಕೆ ಕಡ್ಡಾಯ ಮದುವೆಯ ಸುಂಕ ಮಹನಉುಮಿಯ ಆಳು ಆ ಕಾಲಚಕ್ರ ಮುಂತಾಗಿ ತೆರುವಂತಾ ಹಣವ ಪಾಲಿಸಬೇಕು ಎಂದು ಬಿಂನಾಹ ಮಾಡಲಾಗಿ ತೆರುವಂತಾದು ಎಲ್ಲವನು" ಸರ್ವಮಾನ್ಯ ಮಾಡಿದರು, ಎಂದರೆ ವಿನಾಯತಿ ನೀಡಿದರು ಎಂದಿದೆ. ಇಂಥ ವಿನಾಯತಿಯನ್ನು ಪ್ರಕಟಿಸುವ ಸದಾಶಿವರಾಯನ ಕಾಲದ ಶಾಸನಗಳು ಅಮ್ಮಿನಭಾವಿ (1547), ದೇವರ ಹುಬ್ಬಳ್ಳಿ (1547), ಹೊಂಬಳ (1547), ಲಕ್ಷ್ಮೇಶ್ವರ (1547). ಗುಡಿಸಾಗರ (1548), ಗುತ್ತಲ (1548), ರಾಣೆಬೆನ್ನೂರು (1550) ಇಲ್ಲೆಲ್ಲ ಕಂಡು ಬಂದಿವೆ. ಲಕ್ಷ್ಮೇಶ್ವರ ಶಾಸನದಲ್ಲಿ 'ಲಕ್ಷುಮಕೇಶ್ವರ ನಾಡನೂರ ಇಪ್ಪತ್ತು ಗ್ರಾಮ ಅಗ್ರಹಾರ ದೇವಸ್ಥಾನ ಪುರದೊಳಗೆ' ಈ ವಿನಾಯತಿ ನೀಡಿದ ವಿವರವಿದೆ. ಗದಗ ತಾಲೂಕಿನ ಕೊಟುಮಚಗಿ ಗ್ರಾಮಕ್ಕೆ 'ಸದಾಶಿವ ಸಮುದ್ರ' ಎಂದು ಹೆಸರಿಟ್ಟಿದ್ದು ಬಹುಶಃ ಅಲ್ಲಿಯ ಕೆರೆಯನ್ನು ದುರಸ್ತಿಮಾಡಿ ಅಗ್ರಹಾರವನ್ನು ಆ ಕಾಲದಲ್ಲಿ ನವೀಕರಿಸಿರಬೇಕು. ಲಕ್ಷ್ಮೇಶ್ವರದ 1547ರ ಇನ್ನೊಂದು ಶಾಸನದಲ್ಲಿ ಹುಲಿಗೆರೆಯ ನಾಡ ಎಲ್ಲ ಜನರಿಗ ಮದುವೆ ಸುಂಕದ ಪೂರ್ತಿ ವಿನಾಯತಿ ನೀಡಿದ ಉಲ್ಲೇಖ ಇದೆ. ಸುಡಗಾಡ ಲಿಂಗಿಸೆಟ್ಟಿಯೆಂಬವನು ಪ್ರಜೆಗಳ ಪರವಾಗಿ ರಾಜಧಾನಿಗೆ ಹೋಗಿ ಬಿನ್ನಹ ಮಾಡಿದ್ದರಿಂದ ಈ ವಿನಾಯತಿ ಕೊಡಲಾಯಿತೆಂದು ಶಾಸನ ಹೇಳಿದೆ.

ವಿಜಯನಗರ ಸಾಮ್ರಾಜ್ಯವು ಜಿಲ್ಲೆಯಲ್ಲಿ ಹೇಳಿಕೊಳ್ಳುವಂಥ ಹೊಸದೇವಾಲಯಗಳನ್ನು ಕಟ್ಟಲಿಲ್ಲ. ಆದರೆ ಹಳೆಯ ಹಾಗೂ ನಾಶವಾದುವನ್ನು ದುರಸ್ತಿ ಮಾಡಿಸಲು ನೆರವಾಯಿತು. ಕೃಷ್ಣದೇವರಾಯನ ಕಾಲದಲ್ಲಿ ಕಂದಾಯ ನಿರ್ಣಯವನ್ನು ಕ್ರಮವಾಗಿ ಮಾಡಿದರು. ಇದು 'ರಾಯರೇಖೆ' ಎಂದು ಪ್ರಸಿದ್ಧವಾಗಿದ್ದು ಮುಂದಿನ ಬ್ರಿಟಿಷ್ ಅಧಿಕಾರಿಗಳಿಂದಲೂ ಹೊಗಳಲ್ಪಟ್ಟಿದೆ. ವಿಜಯನಗರದ ರಾಜರ ಅನೇಕ ಚಟುವಟಿಕೆಗಳ ಬಗ್ಗೆ ಖಚಿತ ದಾಖಲೆ ಇರದಿದ್ದರೂ ನೀರಾವರಿ, ವ್ಯಾಪಾರಗಳ ಹೆಚ್ಚಳಕ್ಕೆ ಅವರು ಕಾರಣರಿದ್ದರು. ನೇಯ್ಗೆ ಉದ್ಯಮ ಬೆಳೆಯಿತು. ಜಿಲ್ಲೆಯಲ್ಲಿ ಪ್ರವಾಸಮಾಡಿದ ಪಾಯಿಶನಂಥ ಪ್ರವಾಸಿ ಈ ಪ್ರದೇಶದ ಸಮೃದ್ಧಿ ಬಗ್ಗೆ ಹೇಳಿದ್ದಾನೆ. ಅನೇಕ ವೀರಶೈವ ಮಠಗಳು ಆಗ ನೆಲೆಗೊಂಡವು. ಮಾಧ್ವತತ್ತ್ವಜ್ಞಾನದ ಪ್ರಚಾರವೂ ಆಯಿತು. ಕನಕದಾಸ, ಸರ್ವಜ್ಞ, ಕುಮಾರವ್ಯಾಸರಂಥ ಗಣ್ಯ ಕವಿಗಳು ಧಾರವಾಡ ಜಿಲ್ಲೆಯಲ್ಲಿ ಕಾಣಿಸಿಕೊಂಡುದು ಆ ಕಾಲದ ಆರ್ಥಿಕ, ಬೌದ್ಧಿಕ ಸಮೃದ್ಧಿಗಳಿಗೆ ದ್ಯೋತಕ. ಸರ್ವಜ್ಞನಂತೂ ಬೆಳ್ವೊಲದ ಸಮೃದ್ಧಿಯನ್ನು ಹೊಗಳಿದ್ದಾನೆ. 1369ರಿಂದ 12 ವರ್ಷಗಳಲ್ಲಿ ಕಾಣಿಸಿದ ಉಗ್ರ ಕ್ಷಾಮಗಳು ಮಾತ್ರ ಭಯಾವಹವಾಗಿದ್ದವು. ನೀರಿಲ್ಲದೆ ರಾಸುಗಳು ಸತ್ತುವಲ್ಲದೆ ಸತ್ತ ಮನುಷ್ಯರ ಮೂಳೆ ತಲೆಬುರುಡೆಗಳು ಎಲ್ಲೆಡೆ ಹರಡಿದ್ದವು. ಬಹುಶಃ ಅನಂತರ ನೀರಾವರಿ ಸುಧಾರಣೆಗೆ ಹೆಚ್ಚಿನ ಯತ್ನ ಆಗಿರಬೇಕು. ಶಾಸನಗಳು ಅದನ್ನು ಹೇಳದಿದ್ದರೂ ಅಂಥ ಕೆಲವು ಸುಳಿವುಗಳು ಸಿಗುತ್ತವೆ. 'ಕೃಷ್ಣರಾಯ ಸಮುದ್ರ' 'ಸದಾಶಿವ ಸಮುದ್ರ' ದಾಖಲಾದ ಒಂದೆರಡು ಉದಾಹರಣೆಗಳಷ್ಟೆ. ಎಲ್ಲ ಕಾಮಗಾರಿ ಚಟುವಟಿಕೆಗಳ ಬಗ್ಗೆ ಶಿಲಾ ಶಾಸನಗಳ ದಾಖಲೆ ಸಿಗಲಾರದು. ರಾಯಾಪುರ ಕೆರೆ ಇದಕ್ಕೆ ಒಂದು ಉದಾಹರಣೆ. ಬ್ರಿಟಿಷರ ಕಂದಾಯದ ದಾಖಲೆಗಳಲ್ಲಿ ಈ ಕಾಲದಲ್ಲಿ ನೀರಾವರಿ ವ್ಯವಸ್ಥೆ ಸುಧಾರಿಸಲು ಮಾಡಿದ ಯತ್ನಗಳ ಉಲ್ಲೇಖವಿದೆ. ವಿಜಯನಗರದ ಪಾಳಯಗಾರ ಅಥವಾ ಮಂಡಲಾಧಿಕಾರಿಗಳಾಗಿ ಭುಜಂಗನಗರ(ಹಾವನೂರು), ಲಕ್ಷ್ಮೇಶ್ವರ, ಡಂಬಳ ಊರುಗಳಲ್ಲಿ ಇದ್ದ ಅಧೀನರ ವಿಚಾರ 'ವಿರೂಪಾಕ್ಷ ವಸಂತೋತ್ಸವದ ಚಂಪುವಿ'ನಿಂದ ತಿಳಿಯುತ್ತದೆ. ಇವರುಗಳು ಹಂಪೆಯ ಉತ್ಸವಕ್ಕೆ ಬಂದಿದ್ದರೆಂದು ಅದರಲ್ಲಿ ಹೇಳಿದೆ. ವಿರೂಪಾಕ್ಷ ಮಂದಿರದ ಎದುರಿಗಿರುವ ಭಾರೀ ಗಾತ್ರದ ಮುಖ್ಯ ಗೋಪುರವನ್ನು ಬಿಷ್ಟಪ್ಪಯ್ಯ ಎಂಬ ಅಧಿಕಾರಿ ಕಟ್ಟಿಸಿದನೆಂದು ಐತಿಹ್ಯವಿದ್ದು ಇವನು ಮುಂಡರಗಿ ತಾ|| ವಿಠಲಾಪುರದವನು.

## ಬಹಮನಿ ಅರಸರು

1347ರಲ್ಲಿ ಗುಲ್ಬರ್ಗಾದಲ್ಲಿ ಸ್ಥಾಪನೆಯಾದ ಬಹಮನಿ ಅರಸರಿಗೂ ವಿಜಯನಗರಕ್ಕೂ ಸತತ ಯುದ್ಧಗಳು ನಡೆದವು. ಆದರೆ ಧಾರವಾಡ ಜಿಲ್ಲೆಯಲ್ಲಿ ಅವರ ಪ್ರವೇಶವಾದುದು 15ನೇಯ ಶತಮಾನದ ನಂತರವೇ. 1406ರಲ್ಲಿ ಸುಲ್ತಾನ ಫಿರೋಜ್ (1397-1422) ಬಂಕಾಪುರವನ್ನು ವಿಜಯನಗರದಿಂದ ಗೆದ್ದುಕೊಂಡ ಎಂದು ಫರಿಶ್ತಾ ಹೇಳಿದ್ದು ಇದು ಎಷ್ಟರಮಟ್ಟಿಗೆ ಸತ್ಯವೆಂದು ತಿಳಿಯದು. ಆದರೆ ಬಂಕಾಪುರ ಪರಿಸರದಲ್ಲಿ ಆಕಾಲದ ವಿಜಯನಗರದ ಶಾಸನಗಳು ಇಲ್ಲ. ಎರಡನೇಯ ಹರಿಹರನ ತಾರೀಕಿಲ್ಲದ ಒಂದು ಶಾಸನ ಬಂಕಾಪುರದಲ್ಲಿ ದೊರೆತಿದೆ. ಆದುದರಿಂದ ಬಂಕಾಪುರ ಹಾಗೂ ಅದರ ಪರಿಸರ ಬಹಮನಿಯವರ ವಶ ಇದ್ದಿರಬಹುದು. ಆದರೆ ಇಮ್ಮಡಿ ದೇವರಾಯನ ಕಾಲಕ್ಕೆ ಇಡೀ ಧಾರವಾಡ ಜಿಲ್ಲೆ ವಿಜಯನಗರದ ವಶದಲ್ಲಿ ಇತ್ತು. ಹಿರೇಕೆರೂರು, ಬ್ಯಾಡಗಿ, ಕುಂದಗೋಳ ತಾಲೂಕುಗಳ ಪ್ರದೇಶಗಳಲ್ಲಿ ಅವನ ಶಾಸನಗಳು ಇವೆ. ಈ ಕಾಲಕ್ಕೆ (1426) ಬಹಮನಿಯವರ ರಾಜಧಾನಿ ದೂರದ ಬೀದರ್‌ಗೆ ಹೋಗಿತ್ತು.

ಆದರೆ ಬಹಮನಿ ರಾಜ್ಯದಲ್ಲಿ ಗಣ್ಯ ಅಧಿಕಾರಿಯಾಗಿದ್ದ ಮಹಮೂದ್ ಗಾವಾನನು ಬೆಳಗಾವಿ, ಗೋವೆ, ಕೊಂಕಣಗಳನ್ನು ಗೆದ್ದನಾದರೂ ಮಲಪ್ರಭಾದ ದಕ್ಷಿಣಕ್ಕೆ ಸುಲ್ತಾನರ ಅಧಿಕಾರವನ್ನು ವಿಸ್ತರಿಸಿದಂತೆ ಕಾಣಿಸದು. ಧಾರವಾಡ, ಹುಬ್ಬಳ್ಳಿಗಳನ್ನು 1470ರಲ್ಲಿ ಒಂದು ವೇಳೆ ಗೆದ್ದಿದ್ದರೂ ಅಲ್ಲಿ ಅವರು ಹೆಚ್ಚುಕಾಲ ಆಳಿದಂತೆ ಕಾಣಿಸದು. 1500ರ ನಂತರ ಇಡೀ ಜಿಲ್ಲೆ ವಿಜಯನಗರದ ವಶದಲ್ಲಿಯೇ ಇತ್ತು. (ಹಳೆಯ ಗ್ಯಾಸೆಟಿಯರ್‌ಗಳಲ್ಲಿ ನವಲಗುಂದದಲ್ಲಿ ಜಲಾಲ್‌ಖಾನ್ ಎಂಬ ಬಹಮನಿಯ ಆಡಳಿತಾಧಿಕಾರಿಯಿದ್ದ, ಅವನು 1454ರಲ್ಲಿ ಬಹಮನಿ ಸುಲ್ತಾನ ವಿರುದ್ಧ ಬಂಡೆದ್ದ, ಎಂಬ ದೀರ್ಘ ಕಥನ ನೀಡಿದ್ದು, ಈ ಘಟನೆಗಳು ನಡೆದುದು ಆಂಧ್ರ ಪ್ರದೇಶದ ನಲಗೊಂಡದಲ್ಲಿ, ನವಲಗುಂದದಲ್ಲಿ ಅಲ್ಲ).

ಬಂಕಾಪುರದಲ್ಲೇ 1472ರಲ್ಲಿ ವಿಜಯನಗರದ ಒಬ್ಬ ಮಾಂಡಳಿಕನಿದ್ದ; ಅವನೂ ಬೆಳಗಾವಿಯ ಮಾಂಡಳಿಕನೂ ವಿಜಯನಗರದ ಅರಸನ ಸೂಚನೆಯಂತೆ ಗೋವೆಯ ಮೇಲೆ ದಾಳಿ ಮಾಡ ಹೊರಟರು. ಇದರಿಂದ ಗಾವಾನ್ ಬೆಳಗಾವಿಯನ್ನು ವಶಪಡಿಸಿಕೊಂಡ, ಎಂದು ಫರಿಶ್ತಾ ಹೇಳಿದ್ದಾನೆ. 1510ರಲ್ಲಿ ಪೋರ್ತುಗೀಸರು ಗೋವೆಯನ್ನು ಗೆದ್ದರು. ಅಮೆರಿಕ ಖಂಡದಿಂದ ಅವರು ತಂದ ನೆಲಗಡಲೆ,

ಮೆಣಸಿನಕಾಯಿ, ಆಲೂಗಡ್ಡೆಗಳ ಕೃಷಿ 18-19ನೇಯ ಶತಮಾನದಲ್ಲಿ ನಿಧಾನವಾಗಿ ಧಾರವಾಡ ಜಿಲ್ಲೆಗೆ ಹರಡಿರಬೇಕು. ಮುಂದೆ ಬ್ಯಾಡಗಿ ಪರಿಸರ ಮೆಣಸಿನಕಾಯಿ ಬೆಳೆಗೆ ಖ್ಯಾತವಾಯಿತು.

## ಬಿಜಾಪುರದ ಆದಿಲ್‌ಷಾಹಿಗಳು

ಬಹಮನಿ ರಾಜ್ಯ ಒಡೆದು ಅಸ್ತಿತ್ವಕ್ಕೆ ಬಂದ ಐದು ರಾಜ್ಯಗಳಲ್ಲಿ ವಿಜಾಪುರದ (ಬಿಜಾಪುರ) ಆದಿಲ್‌ಷಾಹಿ ಮುಖ್ಯವಾದದ್ದು (1489). ವಿಜಯನಗರದ ಪರಾಭವ (1565)ದಲ್ಲೂ ಈ ರಾಜ್ಯ ಗಣ್ಯ ಪಾತ್ರವಹಿಸಿತ್ತು. ವಿಜಯನಗರದ ಪತನದ ನಂತರ ವಿಜಯನಗರದ ವಶದಲ್ಲಿದ್ದ ಧಾರವಾಡ ಜಿಲ್ಲೆ 1573 ವಿಜಾಪುರದ ಅಲಿ ಆದಿಲ್‌ಷಾನ ವಶಕ್ಕೆ ಬಂತು. ಇದಕ್ಕೆ ನಸರಾಬಾದ್ ಎಂದು ಹೆಸರಿಟ್ಟರು. ಧಾರವಾಡ ಜಿಲ್ಲೆಯನ್ನು ಕಿಶ್‌ವರ್‌ಖಾನ್ 1567-68ರಲ್ಲಿ ಕಟ್ಟಿದ ಎಂದು ಜುಬೇರಿ ಹೇಳಿದ್ದು ಧಾರವಾಡದಲ್ಲಿದ್ದ ವಿಜಯನಗರದ ಭದ್ರಕೋಟೆ ಗೆಲ್ಲಲಾಗದೆ ಮೊದಲು ಈತನು ಅದರ ಹೊರಗಿನ ಮಣ್ಣುಕೋಟೆ ('ಮಣಕಿಲಾ') ಕಟ್ಟಿರಬೇಕು. ಅವನು ತೊರಗಲ್ ಮತ್ತು ಧಾರವಾಡ ಕೋಟೆಗಳನ್ನೂ ಗೆದ್ದ. ಆಗ ಧಾರವಾಡದಲ್ಲಿ ಇದ್ದ ವಿಜಯನಗರದ ರಾಮರಾಯನು ನೇಮಿಸಿದ್ದ ಕಿಲ್ಲೇದಾರನು ಸ್ವತಂತ್ರನಾಗಲು ಯತ್ನಿಸುತ್ತಿರಲು ಬಿಜಾಪುರದವರು ಅದನ್ನು ಗೆದ್ದರೆಂದು ಫರಿಶ್ತಾ ಹೇಳಿದ್ದಾನೆ. ಅದನ್ನು ಗೆಲ್ಲಲು ಅಲಿ ಆದಿಲ್‌ಷಾ (1557-80) ಆರು ತಿಂಗಳು ಮುತ್ತಿಗೆ ಹಾಕಬೇಕಾಯಿತು. ಷಾ ಅಬ್ದುಲ್ ಹಸನ್ ಎಂಬ ಸೇನಾನಿ ಇಲ್ಲಿ ತೋರಿದ ದೌರ್ಬಲ್ಯದಿಂದಾಗಿ ಅವನ ಬದಲಿಗೆ ಮುಸ್ತಫಾ ಖಾನ್ ಎಂಬಾತನಿಗೆ 'ವಕಿಲುಸ್ಸಲ್ತನತ್' ಪದವಿ ನೀಡಿ ಮುಂದಿನ ನೇತೃತ್ವ ನೀಡಲಾಯಿತು. ದೇಶ್‌ಮುಖ್ ಲಿಂಗಾಜಿ ರಾಮಾಜಿ, ದೇಶಪಾಂಡೆ ಕೊನೇರಿ ದಾಸೊ ಹಾಗೂ ನಾಡಗೌಡ ಲಿಂಗೋಜಿ ರಾಯಾಜಿ ಇವರಿಗೆ ಧಾರವಾಡ ಪರಗಣೆಯನ್ನು ಕಂದಾಯ ಸಂಗ್ರಹಕ್ಕೆ ಬಿಜಾಪುರ ಸುಲ್ತಾನನು ಒಪ್ಪಿಸಿದನೆಂದು 1680ರ ಒಂದು ಮರಾಠಿ ಮೋಡಿದಾಖಲೆ ಹೇಳುತ್ತದೆ. 1680ರ ಒಂದು ಶಾಸನದಂತೆ ಧಾರವಾಡದ ಮೈಲಾರ ಲಿಂಗನ ಗುಡಿಯನ್ನು ಮಸೀದಿಯಾಗಿ ಆದಿಲ್ ಷಾ ಪರಿವರ್ತಿಸಿದ. ಬಂಕಾಪುರದಲ್ಲಿದ್ದ ವೆಲ್ಲಪ್ಪ ಎಂಬ ವಿಜಯನಗರದ ಅಧಿಕಾರಿಯನ್ನು ಸೋಲಿಸಿ ಮುಸ್ತಫಾಖಾನ್ ಅದನ್ನೂ ಗೆದ್ದುಕೊಂಡ. ಬಂಕಾಪುರ ವಿಜಾಪುರದವರ ಒಂದು ಗಣ್ಯ ಠಾಣ್ಯವಾಯಿತು. ಈ ಪರಿಸರ ಅನೇಕ ದೇವಾಲಯಗಳನ್ನು ಅಲಿ ಆದಿಲ್ ಷಾ ಕೆಡವಿದ ಎಂದು ಜುಬೇರಿ ಹೇಳಿದ್ದು ('ಬುಸಾತಿನ್ ಉಸ್ ಸಲಾತಿನ್') ಆಳವಾದ ಪಾಯತೋಡಿ ಬಂಕಾಪುರದಲ್ಲೂ ಹಾಗೂ ಸುತ್ತಲ ಪ್ರದೇಶಗಳಲ್ಲೂ ಅನೇಕ ಮಸೀದಿಗಳನ್ನು ಅವನು ರಚಿಸಿದನೆಂದು ತಿಳಿಸಿದ್ದಾನೆ. ಈ ಪರಿಸರದ ಅನೇಕ ವಿಜಯನಗರದ ವಶದಲ್ಲಿದ್ದ ಕೋಟೆಗಳನ್ನು ಗೆದ್ದು ಅಲ್ಲಿ ವಿಜಾಪುರದ ಧ್ವಜ ಏರಿಸಿದ್ದರಿಂದ ಮುಸ್ತಫಾ ಖಾನನಿಗೆ ಈ ಪ್ರದೇಶವನ್ನು ಜಾಗೀರಾಗಿ ಕೊಡಲಾಯಿತು. ಆ ಕಾಲದಲ್ಲಿ ಸ್ವತಃ ಅಲಿ ಆದಿಲ್ ಷಾ ಈ ಭಾಗದಲ್ಲಿ ಬಂದಿದ್ದನೆಂದು ಜುಬೇರಿ ತಿಳಿಸುತ್ತಾನೆ. ಈ ಭಾಗದಲ್ಲಿ ಮೂರು ವರ್ಷ ಇದ್ದು ಅಪಾರ ಐಶ್ವರ್ಯದೊಡನೆ ಅಲಿ ವಿಜಾಪುರಕ್ಕೆ ಮರಳಿದ. ಬಹುಶಃ 1565ರಲ್ಲಿ ನವಲಗುಂದದ ದೇಸಾಯಿ ಆಗಿದ್ದ ವಿಟ್ಟಗೌಡನು ವಿಜಾಪುರದವರಿಗೆ ನೆರವಾಗಲು, ಮುಂದೆ ಆತನಿಗೆ ಬೆಳಗಾವಿ ಜಿಲ್ಲೆಯ ಶಿರಸಂಗಿ, ಕೊಕಟ್ನೂರು, ತೊರಗಲ್‌ಗಳನ್ನೂ ನೀಡಲಾಗಿತ್ತು. ಆದರೆ 1573ರಲ್ಲಿ ವಿಟ್ಟಗೌಡನು ಬಂಡೆದ್ದು ವಿಜಾಪುರದವರಿಂದ ಕೊಲ್ಲಲ್ಪಟ್ಟ ಎಂದು ಫ್ಲೀಟರ ಪತ್ತೆ ಹಚ್ಚಿದ್ದ ತೊರಗಲ್‌ನ ಒಂದು ಕಾಗದದ ದಾಖಲೆ ಹೇಳುತ್ತದೆ. 1576ರ ಲಕ್ಷ್ಮೇಶ್ವರದ ಒಂದು ಶಾಸನದಲ್ಲಿ ಮಲ್ಲಿಕಾರ್ಜುನ ದೇವಾಲಯಕ್ಕೆ ಗೌಡಗೆರೆ ಗ್ರಾಮ ದಾನ ಮಾಡಿದ ವಿಚಾರವಿದೆ. ದಾನ ನೀಡಿದ ಅಧಿಕಾರಿ ಬರಿಗಿದೇವನಾಯಕ ಎಂಬಾತನಿದ್ದು "ಏದ್ಲಿಖಾನ ಪಾತಶಾಹಿ ನಮಗೆ ಅಮರ ಮೊಖಾಸಿ ನಾಯಕ ತನಕ್ಕೆ ಪಾಲಿಸಿಯಿದ ಹುಲಿಗೆರೆಯ ನಾಡ ಲಕ್ಷ್ಮಣೇಶ್ವರ ಸೀಮೆಯ ಒಳಗಣ ಗೌಡಗೆರೆ ಗ್ರಾಮ" ವನ್ನು ದಾನ ನೀಡಿದ್ದಾಗಿ ಹೇಳಿದ್ದು ಈ ಅಧಿಕಾರಿ ತನ್ನನ್ನು 'ಶ್ರೀ ಮನ್ಮಹಾರಾಜ ಶ್ರೀ ಬರಿಗಿದೇವನಾಯಕ' ಎಂದು ಕರೆದುಕೊಂಡಿದ್ದಾನೆ.

ಈ ಪ್ರದೇಶದಲ್ಲಿ ವಿಜಾಪುರದ ಹಿಡಿತ ಭದ್ರವಾದ ಮೇಲೆ ಲಕ್ಷ್ಮೇಶ್ವರ, ಗುತ್ತಲ, ಸವಣೂರು, ಡಂಬಳ, ಗೋವನಕೊಪ್ಪ, ಸೊರಟೂರು, ಅಮ್ಮಿನಭಾವಿ, ಶಿರಸಂಗಿ, ಕಿತ್ತೂರು, ಶಿರಹಟ್ಟಿ ಮುಂತಾದ ಸ್ಥಳಗಳಲ್ಲಿ ಜೈನ ಮತ್ತು ಲಿಂಗಾಯತ ದೇಸಾಯಿಗಳು ವಿಜಾಪುರದ ಮಾಂಡಲಿಕರಾಗಿ ಇದ್ದರು. ಹಿಂದೆ ಇದ್ದ ನಾಡಗೌಡ ಎಂಬ ಸ್ಥಾನಮಾನವೇ ದೇಸಾಯಿ, ಎಂದು ಜನಪ್ರಿಯವಾಗಿರಬೇಕು. 1644ರ ಒಂದು ಶಾಸನದಂತೆ ಭದ್ರಾಪುರದ ನಾಡಗೌಡನಾಗಿದ್ದ ದೇಸಾಯಿ ಬುಳ್ಳನ ಉಲ್ಲೇಖವಿದೆ. ಆದಿಲ್ ಷಾಹಿ ಆಡಳಿತದ ಕೆಲವು ಶಾಸನಗಳು ಅಣ್ಣಿಗೇರಿ, ಬಂಕಾಪುರ, ಸವಣೂರು ಹಾಗೂ ಲಕ್ಷ್ಮೇಶ್ವರಗಳಲ್ಲಿ ಸಿಗುತ್ತವೆ. ಇವರ ಕಾಲದ ಮಸೀದಿಗಳು ಬಂಕಾಪುರ, ಗದಗ, ಧಾರವಾಡ, ಸವಣೂರು, ಲಕ್ಷ್ಮೇಶ್ವರ, ಅಲ್ಲಾಪುರ, ರಾಣೆಬೆನ್ನೂರು ಮುಂತಾದ ಕಡೆಗಳಲ್ಲಿ ಈಗಲೂ ಇವೆ.

ಈ ವಂಶದ ಅಲಿ ಆದಿಲ್‌ಷಾ ವಿಜಾಪುರದ ಖ್ಯಾತ ಜಾಮಿ ಮಸೀದಿಯನ್ನು ಕಟ್ಟಿಸಿದ. ಅವನ ಉತ್ತರಾಧಿಕಾರಿಯಾದ ಎರಡನೇಯ ಇಬ್ರಾಹಿಂ (1580-1626) ಸಹಿಷ್ಣುವಾದ ಅರಸನೆಂದು ಖ್ಯಾತನಾಗಿದ್ದು ಅವನು ವಿಜಾಪುರದಲ್ಲಿ ಕಟ್ಟಿದ ಇಬ್ರಾಹಿಂ ರೋಜಾ ಪ್ರಸಿದ್ಧವಾಗಿದೆ. ಸಂಗೀತ ಪ್ರಿಯನಾದ ಈತನು ತನ್ನ ಆಸ್ಥಾನದಲ್ಲಿ 300 ಹಿಂದೂ ಸಂಗೀತಗಾರರಿಗೆ ಆಶ್ರಯ ನೀಡಿದ್ದನಲ್ಲದೆ 'ಕಿತಾಬ್ ಇ ನವರಸ್' ಎಂಬ ಸಂಗೀತ ಕೃತಿಯನ್ನು ಉರ್ದುವಿನಲ್ಲಿ ಬರೆದ. ಇದು ಹಿಂದೂ ಸಂಗೀತವನ್ನು ಮುಸಲ್ಮಾನರಿಗೆ ತಿಳಿಸಿ ಹೇಳುವ ಯತ್ನವಾಗಿದ್ದು ಸರಸ್ವತಿಯ ಸ್ತುತಿಯಿಂದ ಆರಂಭ ಆಗುತ್ತದೆ. ಈತನ ಕಾಲದಲ್ಲಿ (1600 ರಿಂದ) ಅಕ್ಬರನು ಈತನ ರಾಜ್ಯದ ಮೇಲೆ ದಂಡೆತ್ತಿ ಬರಲು ಇಬ್ರಾಹಿಂ ಆತನ ಜೊತೆ ಸಂಧಿಮಾಡಿ ಪೊಗದಿ ಕೊಡಲು ಒಪ್ಪಿ ತನ್ನ ಮಗಳನ್ನು ಅಕ್ಬರನ ಮಗ ದಾನ್ಯೇಲನಿಗೆ ಮದುವೆಮಾಡಿಕೊಟ್ಟ. 1619ರಲ್ಲಿ ಬೀದರ್ ಅನ್ನು ಇಬ್ರಾಹಿಂ ಗೆದ್ದುಕೊಂಡ. ಮಂಜುಖಾನನೆಂಬ ತನ್ನ ಸೇನಾನಿಯನ್ನು ಬಂಕಾಪುರ ಪ್ರದೇಶಕ್ಕೆ ಕಳುಹಿಸಿ ಆ ಭಾಗದಲ್ಲಿ ಆತ ವಿಜಾಪುರದ ಆಡಳಿತವನ್ನು ಬಿಗಿಗೊಳಿಸಿದ.

1599ರಲ್ಲಿ ಇವನ ಬಂಕಾಪುರ ಕೋಟೆಯಲ್ಲಿದ್ದ ಅಧಿಕಾರಿ ಖಾನ್ ಎ ಅಜಂ ಸವಣೂರು ತಾಲೂಕು ನೀಲಿಗಿ ಗ್ರಾಮದಲ್ಲಿ ಬಾವಿಯನ್ನು ನಿರ್ಮಿಸಿದ ಶಾಸನ ಸವಣೂರಲ್ಲಿ ಇದೆ. 1601ರಲ್ಲಿ ಹುಬ್ಬಳ್ಳಿ ಸೀಮೆ ಜಂಗಮರಿಗೆ ಸುಂಕದಾನ ನೀಡಿದ ಒಂದು ಶಾಸನ ಹಳೇ ಹುಬ್ಬಳ್ಳಿಯಲ್ಲಿ ಇದೆ. ಶಿಗ್ಗಾಂವಿಯ ಒಂದು ಶಾಸನವು ಅಲಿ ಮತ್ತು ಮಹಮ್ಮದರ ನಾಮಸ್ಮರಣೆ ಮಾಡುತ್ತದೆ. ಲಕ್ಷ್ಮೇಶ್ವರದ 1612ರ ಒಂದು ಶಾಸನದಂತೆ ಅಂಕುಶ್‌ಖಾನ್ ಎಂಬ ಅಧಿಕಾರಿ ಆ ಊರಲ್ಲಿ ಧರ್ಮಶಾಲೆ, ಬಾವಿಗಳನ್ನು ನಿರ್ಮಿಸಿದನೆಂಬ ವಿವರಣೆ ಇದೆ. ಈತನೇ ರಾಣೆಬೆನ್ನೂರಲ್ಲಿ ಮಸೀದಿ ಕಟ್ಟಿಸಿದನು.

ಇವನ ಉತ್ತರಾಧಿಕಾರಿ ಮಹಮ್ಮದ್ (1616-56) ದಕ್ಷಿಣದಲ್ಲಿ ದಂಡಯಾತ್ರೆ ನಡೆಸಿ ಕೆಳದಿ, ಬಸವಾಪಟ್ಟಣ, ಬೆಂಗಳೂರು ಮುಂತಾದ ರಾಜ್ಯದ ಅರಸರಿಂದ ಕಪ್ಪ ಸಂಗ್ರಹಿಸಿದ. ಕೋಲಾರದ ಗಡಿವರೆಗೂ ಸಾಗಿ, ಮುಂದೆ 1646ರಲ್ಲಿ ತಮಿಳು ನಾಡಿನ ವೆಲ್ಲೂರನ್ನು ಗೋಲ್ಕೊಂಡದ ಸೈನ್ಯದ ನೆರವಿನಿಂದ ಗೆದ್ದುಕೊಂಡ. ವಿಜಯನಗರದ ನಂತರ ಪೆನುಕೊಂಡ ಮುಂದೆ ಚಂದ್ರಗಿರಿಗಳನ್ನು ರಾಜಧಾನಿಯಾಗಿ ಹೊಂದಿದ್ದ ವಿಜಯದ ಅರಸರು ವೆಲ್ಲೂರಿನಿಂದ ಆಳುತ್ತಿರಲು ವೆಲ್ಲೂರನ್ನು ವಿಜಾಪುರದವರು ಗೆದ್ದುದರಿಂದ ವಿಜಯನಗರ ಸಾಮ್ರಾಜ್ಯ ನಾಮಶೇಷವಾಯಿತು. ಬೆಂಗಳೂರನ್ನು ಗೆದ್ದ ಈತನ ಸೇನಾನಿ ರಣದುಲ್ಲಾ ಖಾನನು ಬೆಂಗಳೂರು, ಕೋಲಾರ ಪ್ರದೇಶಗಳನ್ನು ಷಾಜಿ ಭೋಸ್ಲೆಗೆ ಜಾಗೀರಾಗಿ ಕೊಟ್ಟನು (1638). ಬೆಂಗಳೂರಿನಲ್ಲಿದ್ದ ವಿಜಯನಗರದ ಮಾಂಡಳಿಕ ಕೆಂಪೇಗೌಡನನ್ನು ಮಾಗಡಿಯಲ್ಲಿ ಇರುವಂತೆ ಮಾಡಿದನು.

ಮಹಮ್ಮದ್‌ಷಾ ವಿಜಾಪುರದ ಗೋಳಗುಂಬಜವನ್ನು ಕಟ್ಟಿದನು. ದಕ್ಷಿಣದ ದಂಡಯಾತ್ರೆಯಿಂದ ಕೈಸೇರಿದ ಅಪಾರ ಹಣದಿಂದ ಇಂಥ ಕಾಮಗಾರಿಗಳು ಸಾಧ್ಯವಾದವು. ಮಾಸೂರಿನ ಮಗದದಲ್ಲಿನ ಒಂದು ಕಲ್ಲಿನ ಮೇಲಿರುವ ಶಾಸನದಂತೆ (ಮಾಸೂರಿನ) ಕೋಟೆಯನ್ನು 1635ರಲ್ಲಿ ಮಹಮ್ಮದ್ ಷಾನ ಅಧಿಕಾರಿ ಮುಹಮ್ಮದ್ ಖಾನ್ ಕಟ್ಟಿದನು. 1636ರಲ್ಲಿ ತಾನು ಮುಘಲರ ಅಧೀನರಾಗಿರುವುದಾಗಿ ಮಹಮ್ಮದ್ ಷಾ ಒಪ್ಪಂದ ಮಾಡಿಕೊಂಡದ್ದರಿಂದ ಅವನು ತನ್ನ ಆಕ್ರಮಣಶೀಲತೆಯನ್ನು ದಕ್ಷಿಣದ ಕಡೆಗೆ ತೋರಬೇಕಾಯಿತು.

1638ರಲ್ಲಿ ಬ್ರಿಟೀಷರು ಈತನ ಜೊತೆ ಒಪ್ಪಂದ ಮಾಡಿಕೊಂಡು ಕಾಳೀನದಿಯ ದಂಡೆಯ (ಈಗಿನ ಕಾರವಾರದ ಹತ್ತಿರ) ಕಡವಾಡದಲ್ಲಿ ತಮ್ಮ ವ್ಯಾಪಾರೀ ಮಳಿಗೆ ತೆರೆದರು. ನದಿಯ ಮೂಲಕ ಕದ್ರಾವರೆಗೆ ಸಾಗಿ ಅಲ್ಲಿಂದ ಭೂಮಾರ್ಗದಿಂದ ಹುಬ್ಬಳ್ಳಿಗೆ ಹೇರು ಪ್ರಾಣಿಗಳಿಂದ ಸರಕನ್ನು ಸಾಗಿಸುತ್ತಿದ್ದರು. ಹುಬ್ಬಳ್ಳಿ (ಹಳೇ ಹುಬ್ಬಳ್ಳಿ)ಯಲ್ಲಿ ಬ್ರಿಟಿಷರು ಒಂದು ಮಳಿಗೆಯನ್ನು ತೆರೆದರು. ವಿಜಯನಗರದ ಕಾಲದಲ್ಲೇ ಗಣ್ಯ ನೇಯ್ಗೆ ಮತ್ತು ವ್ಯಾಪಾರದ ಕೇಂದ್ರವಾಗಿದ್ದ ಹುಬ್ಬಳ್ಳಿಯಿಂದ ಬಟ್ಟೆಯನ್ನು ಖರೀದಿಸಿ ಬ್ರಿಟೀಷರು ಕಡವಾಡದಿಂದ ರಫ್ತು ಮಾಡುತ್ತಿದ್ದರು. ಹುಬ್ಬಳ್ಳಿ ಇನ್ನಷ್ಟು ಮಹತ್ವದ ವ್ಯಾಪಾರ ಕೇಂದ್ರವಾಗಿ ಬೆಳೆಯಲು ದಾರಿಯಾಯಿತು. ಇದೇ ಕಾಲದಲ್ಲಿ ಕೊಂಕಣದ ವೆಂಗುರ್ಲಾ ಬಂದರಿನಲ್ಲಿ ಡಚ್ಚರು 1637 ರಲ್ಲಿ ಒಂದು ಮಳಿಗೆ ತೆರೆದಿದ್ದರು. ಅಣ್ಣಿಗೇರಿಯಲ್ಲಿರುವ 1646ರ ಒಂದು ಶಾಸನದಲ್ಲಿ ರುಸ್ತುಂ ಜಮಾನನು ರುಸ್ತುಂಪೇಟೆಯನ್ನು ಕಟ್ಟಿಸಿ 12 ವರ್ಷದ ಕೌಲಿನಿಂದ ವ್ಯಾಪಾರಿಗಳಿಗೆ ಬಿಟ್ಟುಕೊಟ್ಟ ವಿಚಾರವಿದೆ. ಮಹಮ್ಮದ್ ಷಾನ ಕಾಲದಲ್ಲೇ ಶಿವಾಜಿಯ ರಾಜ್ಯದ ಉತ್ತರದಲ್ಲಿ 1646ರಲ್ಲಿ ಬಂಡೆದ್ದು ತೋರಣ ಕಿಲ್ಲೆಯನ್ನು ಗೆದ್ದು ಮರಾಠ ಸತ್ತೆಗೆ ಅಡಿಪಾಯ ಹಾಕಿದನು.

ಮಹಮ್ಮದ್‌ಷಾನ ಉತ್ತರಾಧಿಕಾರಿ ಎರಡನೇಯ ಅಲಿ(1656-72) ಯ ಕಾಲದಲ್ಲಿ ಆತನು ದಖ್ಖಣದಲ್ಲಿ ಮುಘಲ್ ಸುಬೇದಾರನಾಗಿದ್ದ ಔರಂಗಜೇಬನ ದಾಳಿ ಎದುರಿಸಬೇಕಾಯಿತು. 1657ರಲ್ಲಿ ಅವನು ಬೀದರ್, (ಬಸವ) ಕಲ್ಯಾಣಗಳನ್ನು ಗೆದ್ದು ವಿಜಾಪುರಕ್ಕೆ ಮುತ್ತಿಗೆ ಹಾಕಿದ. ಆದರೆ, ದೆಹಲಿಯ ಕರೆ ಬಂದುದರಿಂದ ಔರಂಗಜೇಬನು ದಾಳಿಯನ್ನು ಹಿಂದೆಗೆದ. ಇದೇ ಕಾಲಕ್ಕೆ ಪ್ರಬಲಿಸಿದ ಶಿವಾಜಿಯ ಸೇನಾನಿ ನೇತಾಜಿ ಫಾಲ್ಕರ್ 1659-60ರಲ್ಲಿ ವಿಜಾಪುರಕ್ಕೆ ಸೇರಿದ್ದ ಕೇಂದ್ರಗಳಾದ ರಾಯಬಾಗ (ಬೆಳಗಾವಿ ಜಿಲ್ಲೆ), ಗದಗ ಹಾಗೂ ಲಕ್ಷ್ಮೇಶ್ವರಗಳನ್ನು ಸುಲಿಗೆ ಮಾಡಿದ. 1673 ಅಣ್ಣಾಜಿ ದತ್ತೋ ಎಂಬ ಶಿವಾಜಿಯ ಸೇನಾನಿ ವಿಜಾಪುರ ಪ್ರದೇಶಗಳನ್ನು ಲೂಟಿ ಮಾಡುತ್ತಿದ್ದಂತೆ ಹುಬ್ಬಳ್ಳಿಯನ್ನು ಮತ್ತೆ ಲೂಟಿ ಮಾಡಿದ. ಬ್ರಿಟಿಷ್ ದಾಖಲೆಗಳು ಹೇಳುವಂತೆ 2773 ಪೌಂಡ (ಸುಮಾರು 8000 ವರಾಹ) ಬೆಲೆಯ ವಸ್ತುಗಳನ್ನು ಬ್ರಿಟಿಷರ ಮಳಿಗೆಯಿಂದ ಸುಲಿಗೆ ಮಾಡಿದ. ಆಗ ಹುಬ್ಬಳ್ಳಿ ಶ್ರೀಮಂತ ನಗರವಾಗಿತ್ತು. ಶಿವಾಜಿ 1665ರಲ್ಲಿ ಮುಘಲರ ಜೊತೆ ಪುರಂದರ ಒಪ್ಪಂದ ಮಾಡಿಕೊಂಡದ್ದರಿಂದ ಮುಘಲರ ಶತ್ರುಗಳಾದ (ಆಗಲೇ ಕಂಗಾಲದ) ವಿಜಾಪುರದ ರಾಜ್ಯದಲ್ಲಿ ಅವನನ್ನು ತಡೆಯುವವರು ಯಾರೂ ಇರಲಿಲ್ಲ. ಇದೇ ಕಾಲಕ್ಕೆ 1674ರಲ್ಲಿ ಶಿವಾಜಿಯು ನರಗುಂದ, ಗಜೇಂದ್ರಗಡ ಹಾಗೂ ಬೆಳಗಾವಿ ಜಿಲ್ಲೆಯ ಪರಸಗಡ (ಸೌಂದತ್ತಿ ಬಳಿ), ಹೂಲಿ ಮುಂತಾದೆಡೆ ಕೋಟೆ ಕಟ್ಟಿ ಅಲ್ಲಿ ಸೈನ್ಯವನ್ನಿಟ್ಟ. ಧಾರವಾಡ ಪ್ರದೇಶದ ಮೇಲೆ ವಿಜಾಪುರದ ಹಿಡಿತ ಬಿಗಿಯಾಗಿ ಇರಲಿಲ್ಲ.

1673ರಲ್ಲಿ ವಿಜಾಪುರದ ಕೊನೆಯ ಅರಸು ಸಿಕಂದರ್ (1672-86) ಅಬ್ದುಲ್ ಕರಿಂಖಾನ್‌ನೆಂಬ ಪಠಾಣ ಸೇನಾನಿಗೆ ಬಂಕಾಪುರದ ಪರಿಸರದ 16 ಮಹಲುಗಳ ಜಾಗೀರನ್ನು ಕೊಟ್ಟ. ಈತನು ಬಹ್ಲೋಲ್ ಖಾನ್ ಎಂಬಾತನ ಮೊಮ್ಮಗ; ಕೊಪ್ಪಳದಲ್ಲಿ ಜಾಗಿರುದಾರನಾಗಿದ್ದವನೂ ಆದ ರಹೀಂಖಾನನ ಮಗ. ಮುಂದೆ 1685ರಲ್ಲಿ ಮುಘಲ್ ರಾಜಪುತ್ರ ಮುಆಜಂ ಧಾರವಾಡ, ಹುಬ್ಬಳ್ಳಿ ಕೋಟೆಗಳನ್ನು ಗೆದ್ದುದರಿಂದ ಬಹುಮಟ್ಟಿಗೆ ಧಾರವಾಡ ಜಿಲ್ಲೆಯಲ್ಲಿ ವಿಜಾಪುರದ ಪ್ರಾಬಲ್ಯ ಮುಗಿಯಿತು. 1686ರಲ್ಲಿ ವಿಜಾಪುರವನ್ನು ಗೆದ್ದು ಸಿಕಂದರನನ್ನು ಮುಘಲರು ಬಂಧಿಸಿದರು.

ಇದಕ್ಕೂ ಮೊದಲು ಧಾರವಾಡ ಜಿಲ್ಲೆಯ ಪೂರ್ವದ ನರಗುಂದ, ರೋಣ, ಗಜೇಂದ್ರಗಡ, ನವಲಗುಂದ ಪ್ರದೇಶಗಳು ಶಿವಾಜಿಯ ವಶದಲ್ಲಿ ಇದ್ದವು. 1677ರಲ್ಲಿ ತಂಜಾವೂರಿನ ದಂಡಯಾತ್ರೆಯಿಂದ ಮರಳಿದ ಶಿವಾಜಿ ಧಾರವಾಡ ಜಿಲ್ಲೆಯ ಪರಿಸರದಲ್ಲಿ ಇದ್ದಾಗ ವಿಜಾಪುರದ ಮಾಂಡಳಿಕನಾಗಿದ್ದ ಬೆಳವಡಿಯ ದೇಸಾಯಿ ಈಶಪ್ರಭುವನ್ನು ಕೊಂದುದೂ ಮುಂದೆ ಈಶಪ್ರಭುವಿನ ಪತ್ನಿ ಮಲ್ಲಮ್ಮನ ಕೈಯಲ್ಲಿ ಸೋತು (1678) ಅವಳ ಜೊತೆ ಸ್ನೇಹಮಾಡಿಕೊಂಡುದೂ ಪ್ರಸಿದ್ಧ ಪ್ರಸಂಗ. ಈ ಘಟನೆಯ ಸ್ಮಾರಕವಾಗಿ ಒಂದು ಶಿಲ್ಪ ಧಾರವಾಡ ತಾಲೂಕಿನ ಯಾದವಾಡದಲ್ಲಿ ಇದೆ. ನವಲಗುಂದ ತಾಲೂಕು ಭದ್ರಾಪುರ 1679ರ ಒಂದು ಕನ್ನಡ ಶಾಸನದಂತೆ ಶಿವಾಜಿಯು ಆ ಊರ ಗೌಡರು, ಶಾನಭೋಗರುಗಳಿಗೆ ಮಾಡಿದ ನೇಮಕಗಳ ಉಲ್ಲೇಖವಿದ್ದು ಆ ಪರಿಸರ ಅವನ ಆಡಳಿತಕ್ಕೆ ಒಳಪಟ್ಟಿತ್ತೆಂಬುದು ಸ್ಪಷ್ಟ. ಇದರಿಂದ ವಿಜಾಪುರದ ಆಡಳಿತ ಕೊನೆಯಾಗುವ ಕಾಲಕ್ಕೆ ಧಾರವಾಡ ಜಿಲ್ಲೆಯ ಕೆಲವು ಭಾಗ ಮುಘಲರ, ಕೆಲವು ಭಾಗ ಮರಾಠರ (ಶಿವಾಜಿ ಮತ್ತು ಅವನ ಮಗ ಸಂಬಾಜಿಯ) ವಶದಲ್ಲಿದ್ದವು. ಧಾರವಾಡ ಜಿಲ್ಲೆಯ ನರಗುಂದ ಹಾಗೂ ಬೆಳಗಾವಿ ಜಿಲ್ಲೆಯ ರಾಮದುರ್ಗ, ಮುರಗೋಡ ಪರಿಸರದಲ್ಲಿ ಮರಾಠರು ಅಧಿಕಾರ ಹೊಂದಿದ್ದ ಬಗೆಗೆ ಖಚಿತ ದಾಖಲೆಗಳಿವೆ.

ಪಾಶ್ಚಾತ್ಯರ ಆಗಮನದಿಂದ ಪಶ್ಚಿಮ ಕರಾವಳಿಯ ಬಂದರುಗಳ ಮೂಲಕ ಹೆಚ್ಚಿದ ವ್ಯಾಪಾರದಿಂದಾಗಿ ವಿಜಾಪುರದವರ ಆಡಳಿತದ ಕಾಲದಲ್ಲಿ ಧಾರವಾಡ ಜಿಲ್ಲೆಯಲ್ಲಿ ಕೃಷಿ ಮತ್ತು ಕೈಗಾರಿಕೆ (ವಿಶೇಷವಾಗಿ ನೇಯ್ಗೆ) ಹೆಚ್ಚಿನ ಪ್ರೋತ್ಸಾಹ ದೊರಕಿತು. ಹುಬ್ಬಳ್ಳಿಯು ಆಗ ಕಬ್ಬಿಣ ಮತ್ತು ಸಿಡಿಮದ್ದಿಗೆ ಬೇಕಾದ ಪೆಟ್ಲುಪ್ಪುಗಳ ವ್ಯಾಪಾರದ ದೊಡ್ಡ ಕೇಂದ್ರವೆಂದು ಒಂದು ಪೋರ್ತುಗೀಸ್ ದಾಖಲೆ ಹೇಳಿದೆ. ಅಲ್ಲಿಂದ ಈ ವಸ್ತುಗಳು ವಿಜಾಪುರಕ್ಕೆ ಹೋಗುತ್ತಿದ್ದವು. ಧಾರವಾಡ ಜಿಲ್ಲೆಯ ಕೆಲವೆಡೆ ಅಗರಬತ್ತಿ, ಕಾಗದಗಳ ಉತ್ಪನ್ನ ಆರಂಭವಾಯಿತು. ಮುಸಲ್ಮಾನ ಧರ್ಮವು ವ್ಯಾಪಕವಾಗಿ ಹರಡಿತು. ಆ ಕಾಲದಲ್ಲಿ ಷಿಯಾ ಪಂಥಕ್ಕೆ ವಿಜಾಪುರದಲ್ಲಿ ದೊರೆತ ಪ್ರೋತ್ಸಾಹದಿಂದ ಎಲ್ಲೆಡೆ ತಾಬೂತ್‌ಗಳನ್ನು ಇಟ್ಟು ಮೊಹರಂ ಆಚರಿಸುವ ಪದ್ಧತಿ ರೂಢಿಗೆ ಬಂದು ಇಂದೂ ಅದು ಸಾಗಿದೆ. ಹಿಂದುಗಳೂ ಈ ಉತ್ಸವದಲ್ಲಿ ಪಾಲುಗೊಳ್ಳುತ್ತಾರೆ. ಸೂಫಿ ಸಂತರ ಅನೇಕ ದರ್ಗಾಗಳು ನೆಲೆಗೊಂಡು ಅಲ್ಲಿ ಉರುಸುಗಳೂ ನಡೆಯುತ್ತಿವೆ. ವಿಜಾಪುರದ ಆಡಳಿತದ ಸ್ಮಾರಕವೆನ್ನುವಂತೆ 1947ರವರೆಗೂ ಸವಣೂರು ನವಾಬರು ಮುಂದುವರಿದರು.

ಈ ಕಾಲದಲ್ಲಿ ೧೫೬೬ರ ನಂತರ ಕೆಳದಿನಾಯಕರು ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ತಮ್ಮ ಪ್ರಭಾವ ವಿಸ್ತರಿಸಲು ಯತ್ನಿಸಿದರು. ಎರಡನೇಯ ವೆಂಕಟಪ್ಪ ನಾಯಕನು ಹಾನಗಲ್ಲಿನಲ್ಲಿ ತೊಲಗದ ಕಂಬವನ್ನು ತನ್ನ ವಿಜಯದ ಸ್ಮಾರಕವಾಗಿ ನಿಲ್ಲಿಸಿದನು. ಕೆಳದಿಯ ಒಂದೆರಡು ಶಾಸನಗಳು ಜಿಲ್ಲೆಯಲ್ಲಿವೆ. ಆದರೆ ವಿಜಾಪುರದವರ ಮುಂದೆ ಅವರ ವಿಸ್ತರಣೆ ತಾತ್ಕಾಲಿಕವಾಗಿತ್ತು.

## ಮುಘಲರ ಆಡಳಿತ

ವಿಜಾಪುರದ ಪತನದ ನಂತರ ಧಾರವಾಡದಲ್ಲಿ ಮುಘಲರ ಮತ್ತು ಮರಾಠರ ದ್ವಂದ್ವ ನಡೆಯಿತು. ಅಬ್ದುಲ್ ಕರೀಂಖಾನನ ಮಗ ಅಬ್ದುಲ್ ರಾವುಫ್‌ಖಾನ್ ಔರಂಗಜೇಬನಿಗೆ ಶರಣಾಗಿ ಅವರಿಂದ 22 ಮಹಲುಗಳ ಆಡಳಿತವನ್ನು ಪಡೆದುಕೊಂಡ. ಇದು ಒಂದು ಸರಕಾರವಾಗಿದ್ದು ಇದರ ಜೊತೆ ತೊರಗಲ್ ಮತ್ತು ಬಂಕಾಪುರ ಸರಕಾರಗಳೂ ಅವನಿಗೆ ಒಪ್ಪಿಸಲ್ಪಟ್ಟವು. 1677ರಲ್ಲೇ ಮುಘಲರು ಷಾ ಮುಹಮ್ಮದ್ ಖಾನ್ ಎಂಬಾತನಿಗೆ ಹುಬ್ಬಳ್ಳಿ ಹಾಗೂ ದೇವರ ಹುಬ್ಬಳ್ಳಿ (ಧಾರವಾಡ ತಾಲೂಕು)ಗಳನ್ನು ಜಾಗೀರಾಗಿ ನೀಡಿದ್ದರು. 1685ರಲ್ಲಿ ರಾಜಪುತ್ರ ಮುಆಜಂ ಸಂಭಾಜಿಗೆ ಸೇರಿದ್ದ ಧಾರವಾಡವನ್ನು ಗೆದ್ದಿದ್ದ. ಷೇರ್‌ಖಾನ್ 1701-02ರಲ್ಲಿ ಗದಗಿನಲ್ಲಿ ಮುಘಲರ ಫೌಜ್‌ದಾರವಾಗಿದ್ದ. ಇದೇ ವರ್ಷ (1701-02) ಔರಂಗಜೇಬನ ಮಗ ಬಿದರ್ ಬಖ್ತ್ ಮತ್ತು ಮರಾಠರಿಗೆ ಲಕ್ಷ್ಮೇಶ್ವರದ ಬಳಿ ಉಗ್ರ ಕದನವಾಯಿತು. ಬಹೀರ್ಜಿ ಘೋರ್ಪಡೆಯ ಮಗ ಭುಜಂಗರಾವ್ ಈ ಯುದ್ಧದಲ್ಲಿ ತೀರಿಕೊಂಡ.

ಔರಂಗಜೇಬನ ಮರಣದ (1707) ನಂತರವೂ ಧಾರವಾಡ ಜಿಲ್ಲೆಯಲ್ಲಿ ಮುಘಲರ ನೇರ ಪ್ರಭಾವ, ಚಟುವಟಿಕೆಗಳು ಇದ್ದೇ ಇದ್ದವು. ಸವಣೂರು ನವಾಬನು ಕೇವಲ ಮಾಂಡಳಿಕನಾಗಿದ್ದು ಮುಘಲ್ ಚಕ್ರವರ್ತಿ ಹಾಗೂ ಆತನ ಪುತ್ರರು ಇಲ್ಲೇ ಇದ್ದು ಅವರ ಸೇನೆಯ ಚಲನ ವಲನ ಮರಾಠರ ವಿರುದ್ಧ ಇದ್ದೇ ಇತ್ತು. ಬಿಜಾಪುರ ಕರ್ನಾಟಕ ಎಂಬ ಸುಭಾ(ರಾಜ್ಯ ಅಥವಾ ಪ್ರಾಂತ್ಯ)ದ ಭಾಗವಾಗಿದ್ದ ಈ ಪ್ರದೇಶದಲ್ಲಿ ಶಿರಾ, ಬೆಂಗಳೂರು ಕೋಲಾರಗಳ ವರೆಗಿನ ಪ್ರದೇಶಗಳು ಒಳಗೊಂಡಿದ್ದವು. ಕಾಸಿಂಖಾನ್ ಎಂಬಾತನು ಆಗ ಶಿರಾದಲ್ಲಿ ಮುಘಲ್ ಫೌಜ್‌ದಾರನಾಗಿದ್ದು 1696ರಲ್ಲಿ ದೊಡ್ಡೇರಿ ಕದನದಲ್ಲಿ ಮರಾಠರ ಕೈಯಲ್ಲಿ ಅವನು ಮರಣ ಹೊಂದಿದ್ದ. ಬಿಜಾಪುರ ಕರ್ನಾಟಕದಲ್ಲಿ 1696ಕ್ಕೂ ಮೊದಲು ಮೀರ್ ಬಕರ್ ಎಂಬಾತನು ದಿವಾನನಾಗಿದ್ದು ಆ ವರ್ಷ ಖಾನ್‌ಜಾದ್‌ಖಾನ್ (ಇತಿಹಾಸಕಾರ ಕಾಫಿಖಾನನ ಸೋದರನಿರಬೇಕು) ದಿವಾನನಾಗಿ ನೇಮಿಸಿದ್ದನು.

ಧಾರವಾಡದ ಬಗ್ಗೆ ಹೇಳುವುದಾದರೆ ಇಲ್ಲಿನ ಮಾಳಾಪುರ (ಈಗ ಧಾರವಾಡದ ಬಡಾವಣೆ, ಹಿಂದೆ ಪ್ರತ್ಯೇಕ ಗ್ರಾಮ) 1690ರಲ್ಲಿ ಔರಂಗಜೇಬನು ಷೇಕ್ ದಾವುದ್ ಎಂಬ ಮುಲ್ಲಾನಿಗೆ ನೀಡಿದ ಒಂದು ಭೂದಾನ ಪತ್ರದಲ್ಲಿ ಮಾಳಾಪುರ ಗ್ರಾಮವು ನಸಿರಾಬಾದ್ (ಧಾರವಾಡ ಪರಗಣೆಯಲ್ಲಿದ್ದು) ಧಾರವಾಡವು ಬಂಕಾಪುರ ಸರಕಾರ ಹಾಗೂ 'ದಾರ್ ಉಲ್ ಜಫರ್' ಸುಬಾ ಬಿಜಾಪುರಕ್ಕೆ ಸೇರಿದ್ದಾಗಿ ಹೇಳಿದೆ. ಆರಂಭದಲ್ಲಿ (1785) ಮಿರ್ಜಾ ಸೈಫುಲ್ಲಾ ಧಾರವಾಡದ ಕಿಲ್ಲೆದಾರನಾಗಿದ್ದ; ಮುಂದೆ ಧಾರವಾಡದ ಕಿಲ್ಲೇದಾರನಾಗಿ ಔರಂಗಜೇಬನ ಕಾಲದಲ್ಲಿ ಇದ್ದ ಸಿಯಾಲ್ ಖಾನ್ (1792), ನಂತರ ಇದ್ದ ಅಲಾಫ್ ಖಾನ್, ಮೊಹಿನ್ ಉದ್ದೀನ್ ಕಲಂದರ್ ಖಾನ್ ಮುಂತಾದವರ ಹೆಸರುಗಳು ಈ ಕೈಫಿಯತ್‌ನಲ್ಲಿ ಇದೆ.

ಮುಂದೆ 1713ರಲ್ಲಿ ಮುಹಮ್ಮದ್ ನಾಸರ್ ಎಂಬಾತನು ಕಿಲ್ಲೇದಾರನಾಗಿ ಇದ್ದನೆಂದು ತಿಳಿಯುತ್ತದೆ. ಮೇಲೆ ಹೇಳಿದ ಮುಲ್ಲ (ಹಾಗೂ ಅವನ ವಂಶಜರು) ಮೊಹರಂ ಕಾಲಕ್ಕೆ ವಿಧಿಗಳನ್ನು ನಡೆಸುವುದು, ಮದುವೆಗಳನ್ನು ನಡೆಸುವುದು, ಮಸೀದಿಗಳಲ್ಲಿ ದೀಪಗಳಿಗೆ ಎಣ್ಣೆ ಒದಗಿಸುವುದು ಈ ಜವಾಬ್ದಾರಿಗಳನ್ನು ವಹಿಸಬೇಕಿತ್ತು. ಕಾಲಕ್ರಮದಲ್ಲಿ ಧಾರವಾಡ ಜಿಲ್ಲೆಯಲ್ಲಿ ಮುಘಲರ ನೇರಪ್ರಭಾವ ಇರಲಿಲ್ಲ, ಸವಣೂರು ನವಾಬರಿಗೆ ಅದು ಸೇರಿತ್ತು. 1753ರಲ್ಲಿ ಪೇಶ್ವೆ ನಾನಾಸಾಹೇಬ (ಬಾಳಾಜಿರಾವ್) ಗೆದ್ದುಕೊಳ್ಳುವವರೆಗೆ ಧಾರವಾಡ ಕಿಲ್ಲೆ ನವಾಬನ ವಶದಲ್ಲೇ ಇತ್ತು. (ಈ ಕಿಲ್ಲೆ ಮಾತ್ರ ನೇರ ಮುಘಲರ ವಶವಿತ್ತೆಂದು ಹೇಳಲು ಅವಕಾಶವೂ ಇದೆ). ಅಲಾಫ್ ಖಾನನ ನಂತರ ಮುಹಮ್ಮದ್ ನಸರುಲ್ಲಾ (1719-33), ಮುಂದೆ 1753ರವರೆಗೆ ಪೃಥ್ವೀಸಿಂಗ್ ಧಾರವಾಡದ ಕಿಲ್ಲೇದಾರರಾಗಿ ಇದ್ದರು.

ಒಂದು ಮುಘಲ್ ದಾಖಲೆಯಂತೆ ('ಜೇಹ್ ಬೆ ದೇಹಿ') ಬಿಜಾಪುರ ಸುಬಾದಲ್ಲಿ 18 ಸರಕಾರ (ಜಿಲ್ಲೆ)ಗಳೂ 281 ಮಹಲು (ತಾಲೂಕು)ಗಳೂ ಇದ್ದವು. ಈ ಪೈಕಿ ಬಂಕಾಪುರ ಸರಕಾರದಲ್ಲಿ ಇದ್ದ 16 ಮಹಲುಗಳಿದ್ದು ಗುರುತಿಸಲು ಸಾಧ್ಯವಾದ ಮಹಲುಗಳ ಹೆಸರುಗಳು ಇವು: ಬಂಕಾಪುರ (ಹವೇಲಿ ಎಂದರೆ ಪಟ್ಟಣ), ರಾಯರ ಹುಬ್ಬಳ್ಳಿ ('ರಾಯ್ಬುಪಲ್ಲಿ') ಕಾರಡಗಿ, ಹರಿಹರ, ಲಕ್ಷ್ಮೇಶ್ವರ,

ನಸೀರಾಬಾದ್ (ಧಾರವಾಡ), ಕುಂದಗೋಳ ('ಕೊಂದನೂಲ'), ಮಿಶ್ರಿಕೋಟೆ, ಹಳಿಯಾಳ ('ಹಳ್ಳಿಹಾಳ') ಮತ್ತು ಹೊನ್ನಾಳಿ. ('ರತನ್‌ಪಲ್ಲಿ', 'ಮುಕ್ಷರನ್', 'ಮಹಪುರ್', 'ಹಲಿಕಲ್' ಮತ್ತು 'ನರ್ಲಿಕಲ್' ಗುರುತಿಸಲು ಆಗಿಲ್ಲ). ಈ ಪೈಕಿ ಹರಿಹರ, ಹೊನ್ನಾಳಿ, ಹಳಿಯಾಳ ಈಗ ಧಾರವಾಡ ಜಿಲ್ಲೆಯಲ್ಲಿ ಇಲ್ಲ. ('ರತನ್‌ಪಲ್ಲಿ' ಬಹುಶಃ ರಟ್ಟೀಹಳ್ಳಿ, 'ಹಲಿಕಲ್', ಹಾನಗಲ್, 'ನರ್ಲಿಕಲ್', ನರೇಗಲ್, 'ಮುಕ್ಷರನ್' ಮಾಸೂರು ಆಗಿರುವ ಸಾಧ್ಯತೆ ಇದೆ. (ಇದು ಡಾ॥ ನಯೀಂ ಅವರ "ಮುಘಲ್ ಎಡ್ಮಿನಿಸ್ಟ್ರೇಶನ್ ಇನ್ ಡೆಕ್ಕನ್" ಪು.29-30 ರಿಂದ).

ಇದಲ್ಲದೆ ಶಿವಾಜಿಯ ವಶದಲ್ಲಿದ್ದ ಎಂಟು ಕರ್ನಾಟಕದ 'ಪ್ರಾಂತ'ಗಳನ್ನು ಸು.1680ಕ್ಕೆ ಸಂಬಂಧಿಸಿ ಡಾ॥ ಚಿಟ್ನಿಸ್ ಗುರುತಿಸಿದ್ದು ಇವುಗಳಲ್ಲಿ ಈಗಿನ ಧಾರವಾಡ ಜಿಲ್ಲೆಗೆ ಸಂಬಂಧಿಸಿದವುಗಳು ಗದಗ, ಲಕ್ಷ್ಮೇಶ್ವರ, ನವಲಗುಂದ, ಬೆಟಗೇರಿ (ಉಪ್ಪಿನ ಬೆಟಗೇರಿ ?)ಗಳು ಸೇರಿವೆ (ಬೆಳಗಾವಿ, ಸಂಪಗಾವಿ, ಕೊಪ್ಪಳ, ಹಳಿಯಾಳ ಉಳಿದ ಪ್ರಾಂತಗಳು). (ಚಿಟ್ನಿಸ್ ಅವರ "ಗ್ಲಿಂಪ್ಸಸ್ ಆಫ್ ಮರಾಠಾ ಸೋಶಿಯೋ ಇಕೊನಾಮಿಕ್ ಹಿಸ್ಟರಿ," ಪು. 13).

**ಸವಣೂರು ನವಾಬರು**

ಸವಣೂರಿನ ನವಾಬರ ಇತಿಹಾಸ ತಿಳಿಯಲು 1841ರಲ್ಲಿ ಪ್ರಕಟವಾದ 'ದಿಲೇರ್‌ಜಂಗೀ' ಎಂಬ ಪರ್ಷಿಯನ್ ಕೃತಿ ಮುಖ್ಯ ಆಧಾರವಾಗಿದೆ. ಸಿಕಂದರ್ ಆದಿಲ್‌ಷಾನ ಕಾಲದಲ್ಲಿ ಅವನ ಸೇನಾನಿ ಅಬ್ದುಲ್ ಕರೀಂಖಾನ್ ಮರಾಠರ ವಿರುದ್ಧ ನ್ನಡೆಸಿದ ಯಶಸ್ವೀ ಹೋರಾಟಗಳಿಗಾಗಿ 22 ಮಹಲ್‌ಗಳನ್ನು ಒಳಗೊಂಡ ಜಾಗೀರನ್ನು ಕೊಟ್ಟು ಆದಿಲ್‌ಷಾ ಆತನನ್ನು ಬಂಕಾಪುರಕ್ಕೆ ಕಳುಹಿಸಿದನು. ಆತನ ಮಗನಾದ ಅಬ್ದುಲ್ ರಾಉಫ್ ಖಾನ್ (1678-1714) ವಿಜಾಪುರದ ಪತನವಾದಾಗ ಮುಘಲರಿಗೆ ಶರಣಾಗಿ ಅವರ ಮಾಂಡಳಿಕತ್ವವನ್ನು ಸ್ವೀಕರಿಸಲು ಔರಂಗಜೇಬನು 'ದಿಲೇರ್ ಖಾನ್ ಬಹಾದೂರ್‌ಜಂಗ್' ಎಂಬ ಬಿರುದುಕೊಟ್ಟು ಬಂಕಾಪುರ, ಅಜಂನಗರ (ಬೆಳಗಾವಿ) ಮತ್ತು ತೊರಗಲ್‌ಗಳನ್ನು ಒಳಗೊಂಡ 22 ಮಹಲುಗಳ ಅಧಿಕಾರವನ್ನು ಆತನಿಗೆ ಕೊಟ್ಟನು. ಮೂಲದಲ್ಲಿ ಈತನ ಆಡಳಿತವು ಕೃಷ್ಣಾದಿಂದ ತುಂಗಭದ್ರಾ ನದಿಗಳ ನಡುವಿನ ಈಗಿನ ಧಾರವಾಡ, ಬೆಳಗಾವಿ ಜಿಲ್ಲೆಗಳ ಭಾಗಗಳನ್ನು ಒಳಗೊಂಡಿತ್ತು.

ಈತನು 1690ರಲ್ಲಿ ತನ್ನ ಕೇಂದ್ರವನ್ನು ಸವಣೂರಿಗೆ ಬದಲಾಯಿಸಿದನು (ಶ್ರಾವಣಮಾಸದಲ್ಲಿ ತನ್ನ ರಾಜಧಾನಿಯನ್ನು ಬದಲಾಯಿಸಿದ್ದರಿಂದ ಸವಣೂರು ಎಂದು ರಾಜಧಾನಿಗೆ ಆ ಹೆಸರಿಟ್ಟರು ಎಂದು ಹೇಳಿಕೆ ಇದ್ದರೂ ಸವಣೂರು ಎಂಬ ಹೆಸರು ಸವಣೂರು 1081ರ ಶಾಸನದಲ್ಲೇ ಉಲ್ಲೇಖಿತಗೊಂಡಿದ್ದು ಇದೊಂದು 200 ಮಹಾಜನರಿದ್ದ ಅಗ್ರಹಾರವಾಗಿತ್ತು) ಹಾವನೂರು, ಗುತ್ತಲ, ಶಿರಹಟ್ಟಿ, ಲಕ್ಷ್ಮೇಶ್ವರ, ಜಾಲಿಹಾಳ, ಹಳೇಹುಬ್ಬಳ್ಳಿ, ಮುಳಗುಂದ, ಡಂಬಳ, ಸೊರಟೂರು, ಗದಗ ಮುಂತಾದ ಸ್ಥಳಗಳ ದೇಸಾಯಿಗಳು ಈತನಿಗೆ ಅಧೀನರಾಗಿದ್ದರು. ಈತನ ಹಲವಾರು (12?) ಗಂಡುಮಕ್ಕಳಲ್ಲಿ ಫತೇಖಾನ್ (1714), ಅಬ್ದುಲ್ ಯಾದ್‌ಖಾನ್ (1714-15) ಮತ್ತು ಕೊನೆಯದಾಗಿ ಅಬ್ದುಲ್ ಗಫಾರ್ ಖಾನ್ (1715-19) ಇವರುಗಳು ಅನುಕ್ರಮವಾಗಿ ಈತನ ನಂತರ ಆಡಳಿತ ನಡೆಸಿದರು. ಕೊನೆಯಾತನು ತೀರಿಕೊಂಡಾಗ ಈತನ ತಮ್ಮ ಸತ್ತಾರಖಾನ್ (1719-24) ಪಟ್ಟವೇರಿದರೂ ಗಫಾರ್‌ಖಾನನ ಮಗ ಮಜೀದ್ ಖಾನನನ್ನು ಉತ್ತರಾಧಿಕಾರಿಯಾಗಿ ಗೊತ್ತುಪಡಿಸಿದ್ದು ಆತನು ಅಪ್ರಾಪ್ತ ವಯಸ್ಕನಾಗಿದ್ದನು. ಮಜೀದ್ ಖಾನನು ಪ್ರಾಯಕ್ಕೆ ಬಂದರೂ ಸತ್ತಾರ್‌ಖಾನ್ ಆಡಳಿತವನ್ನು ಬಿಟ್ಟುಕೊಡದಿರಲು ಪ್ರಜೆಗಳು ಒತ್ತಡ ತಂದು ಮಜೀದ್ ಖಾನನಿಗೆ (1724-49) ಪಟ್ಟಕೊಡಿಸಿದರು. ಭಾರೀ ಕೆರೆ ಮೋತಿ ತಲಾವ ಕಟ್ಟಿಸಿದ್ದು, ಸವಣೂರಿನ ವಿಶಾಲ ಬೀಳು ಭೂಮಿಯನ್ನು ಕೃಷಿಗೆ ಒಳಪಡಿಸಿದ್ದು, ಹಾಗೂ ಹೊಸ ಹುಬ್ಬಳ್ಳಿ ಪೇಟೆ (ಮಜೀದ್‌ಪುರ ಓಣಿ) ತಲೆ ಎತ್ತುವಂತೆ ಮಾಡಿ ಅಲ್ಲಿ ವ್ಯಾಪಾರಿಗಳಿಗೆ ಅನುಕೂಲ ಮಾಡಿದ್ದು ಇವನ ಗಣ್ಯ ಸಾಧನೆಗಳು.

ಈತನ ಕಾಲದಲ್ಲಿ ನಿಜಾಂ ಉಲ್ ಮುಲ್ಕ್ ಹೈದರಾಬಾದಿನಲ್ಲಿ ದಖ್ಖಣದ ಸುಬೇದಾರನಾಗಿ ಬಂದನು. ಮರಾಠರು (ಛತ್ರಪತಿ ಶಾಹು, ಶಿವಾಜಿಯ ಮಗ ಸಾಂಬಾಜಿಯ ಪುತ್ರ) ದಕ್ಷಿಣದ ಆರು ಮುಘಲ್ ಸುಬಾಗಳಿಂದ ಚೌತ್ ಮತ್ತು ಸರ್ದೇಶ್‌ಮುಖಿ ಎಂಬ ಕಂದಾಯದ ಭಾಗಗಳನ್ನು ಸಂಗ್ರಹಿಸುವ ಸನದನ್ನು 1719 ರಂದು ಮುಘಲ್ ಬಾದ್‌ಷಾನಿಂದ ಪಡೆದಿದ್ದನು. ಇದರಿಂದ ಸವಣೂರ ನವಾಬರೂ ಇತರ ಮುಘಲ್ ಮಾಂಡಲಿಕರೂ ಮರಾಠರು (ಪೇಶ್ವೆ) ಮತ್ತು ನಿಜಾಮ ಹೀಗೆ ಇಬ್ಬರ ಒತ್ತಡಕ್ಕೆ ಒಳಗಾಗುವ ಇಕ್ಕಟ್ಟಿಗೆ ಸಿಲುಕಿದರು. ಮೂರನೇಯ ಶಕ್ತಿಯಾಗಿ ಕೊಲ್ಹಾಪುರದ ಮರಾಠರು (ರಾಜಾರಾಮನ ವಂಶಸ್ಥರು) ಇದ್ದರು. ತನ್ನ ವಿರುದ್ಧ ಬಂದ

ಚಿಮಾಜಿ ಅಪ್ಪಾ (ಪೇಶ್ವೆ ನಾನಾ ಸಾಹೇಬನ ತಮ್ಮ) ಅಬ್ದುಲ್ ಮಜೀದ್ ಖಾನನನ್ನು ಸೋಲಿಸಿ ಅವನಿಂದ ಬೆಳಗಾವಿ ಜಿಲ್ಲೆಯ ಪ್ರದೇಶದ ಕಿತ್ತೂರು ಮುಂತಾದ ಮಹಲುಗಳನ್ನು ಚೌತಾಯಿಗಾಗಿ ಕಸಿದುಕೊಂಡನು. ಮುಂದಿನ ನವಾಬ ಅಬ್ದುಲ್ ಹಕೀಂಖಾನ್ (1749-94) ಪೇಶ್ವೆಯ ಅಧಿಕಾರವನ್ನು ತಿರಸ್ಕರಿಸಲು ಯತ್ನಿಸಿ ಮತ್ತೆ ಪೇಶ್ವೆ ನಾನಾಸಾಹೇಬನ ಕೈಯಲ್ಲಿ 1756 ರಲ್ಲಿ ಸೋತನು. ಇದರಿಂದ ಬೆಳಗಾವಿ ಕೋಟೆ ಅವನ ಕೈಬಿಟ್ಟಿತು. ಆದರೆ ಆತನಿಗೂ ಪೇಶ್ವೆಗೂ ಸ್ನೇಹವಾಗಿ ನಾನಾಸಾಹೇಬನು ಕೆಲಕಾಲ ಸವಣೂರಲ್ಲಿ ತಂಗಿರಲು ಆತನ ಪತ್ನಿ ತನ್ನ ಎರಡನೇಯ ಮಗ ಮಾಧವರಾಯನನ್ನು ಸವಣೂರಲ್ಲೇ ಹೆತ್ತಳು. ಮುಂದೆ ಹಕೀಂ ಖಾನನು ಬಾಣಂತಿಯನ್ನು ಸವಣೂರಲ್ಲಿ ಇರಿಸಿಕೊಂಡು ಮೂರು ತಿಂಗಳ ನಂತರ ಅಮೂಲ್ಯ ಉಡುಗರೆಗಳೊಂದಿಗೆ ತಾಯಿ ಮಗನನ್ನು ಪುಣೆಗೆ ಕಳುಹಿಸಿದನು. ಮುಂದೆ ಪೇಶ್ವೆಯಾದ ಖ್ಯಾತ ಮಾಧವರಾಯನು ಹಕೀಂ ಖಾನನ್ನು 'ಮಾಮಾ' ಎಂದು ಕರೆಯುತ್ತಿದ್ದನೆಂದು ಐತಿಹ್ಯವಿದೆ. 1764ರಲ್ಲಿ ಹೈದರ್ ಅಲಿ ಕೆಳದಿಯನ್ನೂ ಸೋಂದಾ ರಾಜ್ಯವನ್ನೂ ವಶಪಡಿಸಿಕೊಂಡನು. ಸೋಂದಾ ರಾಜನೂ ಸವಣೂರಿನ ಸುಪರ್ದಿಯಲ್ಲಿ ಇದ್ದನು. ಮುಂದೆ ಹೈದರ್ ಸವಣೂರಿನ ಮೇಲೆ ದಾಳಿ ಮಾಡಲು ಸವಣೂರಿನ ದಿವಾನ ಖಂಡೇರಾಯನ ಮಧ್ಯಸ್ಥಿಕೆಯಿಂದ ಹೈದರ್‌ನಲ್ಲಿ ನವಾಬನಿಗೆ ಸ್ನೇಹವಾಯಿತು. (1761ರ ಪಾಣಿಪತ ಕದನದಲ್ಲಿ ಭಾರಿ ಸೋಲನ್ನುಂಡ ಮರಾಠರು ತಮ್ಮ ಪ್ರಭಾವಲಯದಲ್ಲಿದ್ದ ಪ್ರದೇಶಗಳಾದ ಕೆಳದಿ, ಸೋಂದಾ, ಸವಣೂರುಗಳ ಮೇಲೆ ಆದ ಹೈದರನ ಆಕ್ರಮಣವನ್ನು ತಡೆಯುವ ಸ್ಥಿತಿಯಲ್ಲಿ ಇರಲಿಲ್ಲ.) ಹೈದರ್ ಅಲಿಯ ಎರಡನೇಯ ಮಗ ಕರೀಂಖಾನನಿಗೆ ಸವಣೂರಿನ ರಾಜ ಪುತ್ರಿಯನ್ನು ಸವಣೂರಿನ ರಾಜಪುತ್ರ ಖೈರ್‌ಖಾನನಿಗೆ ಹೈದರ್ ಅಲಿಯ ಮಗಳನ್ನೂ ಕೊಟ್ಟು ಮದುವೆಗಳಾದವು. ಅಬ್ದುಲ್ ಹಕೀಂಖಾನನು ಉತ್ತರಾದಿ ಮಠದ ಸ್ವಾಮಿಗಳಾದ ಸತ್ಯಬೋಧತೀರ್ಥರಿಗೆ ನಿಕಟನಾಗಿದ್ದು, ಸತ್ಯಬೋಧರ ಸಮಾಧಿಯೂ ಸವಣೂರಲ್ಲಿ ಇದೆ.

ಆದರೆ ಪೇಶ್ವೆ ಮಾಧವರಾಯನು ಪ್ರಬಲಿಸಿ ಹೈದರ್ ಅಲಿಯನ್ನು ಸೋಲಿಸಲಾಗಿ ಸವಣೂರು ನವಾಬನು ಪೇಶ್ವೆಗಳಿಗೆ ತಲೆಬಾಗಬೇಕಾಗಿ ಬಂತು. ಇದರಿಂದ ಟಿಪ್ಪು ಸುಲ್ತಾನ್ 1786ರಲ್ಲಿ ಸವಣೂರನ್ನು ವಶಪಡಿಸಿಕೊಳ್ಳಲು ಹಕೀಂಖಾನ್ ಪುಣೆಗೆ ಓಡಿಹೋಗಿ ಪೇಶ್ವೆಯ ಆಶ್ರಯ ಪಡೆಯಬೇಕಾಯಿತು. 1787ರ ಗಂಜೇಂದ್ರಗಡ ಒಪ್ಪಂದದಂತೆ ಟಿಪ್ಪುವು ಸವಣೂರನ್ನು ಮರಳಿಸಬೇಕಾಗಿ ಬಂತು. ಆದರೆ ನವಾಬನು ಪುಣೆಯಲ್ಲೇ ಉಳಿದನು. ಮಲಪ್ರಭಾದ ಉತ್ತರಕ್ಕಿದ್ದ ಸವಣೂರಿನ ಭಾಗಗಳನ್ನು ತಾನು ಇಟ್ಟುಕೊಂಡು ಪೇಶ್ವೆಯು ಹಕೀಂಖಾನನಿಗೆ ವರ್ಷಾಶನವನ್ನು ಕೊಟ್ಟನು. ಹಕೀಂಖಾನನು 1794ರಲ್ಲಿ ನಿಧನ ಹೊಂದಿದನು. ಮುಂದೆ ಟಿಪ್ಪುವಿನ ಪತನಾನಂತರ ಹಕೀಂಖಾನನ ಪುತ್ರ ಅಬ್ದುಲ್ ಖೈರ್‌ಖಾನನಿಗೆ 1806ರ ಸುಮಾರಿಗೆ 25 ಗ್ರಾಮಗಳನ್ನು ಒಳಗೊಂಡ ಸವಣೂರು ಸಂಸ್ಥಾನವನ್ನು ಪೇಶ್ವೆಗೆ ಅಧೀನವಾಗಿ ಇರುವ ಷರತ್ತಿನಂತೆ ಕೊಟ್ಟರು. (ಆ ಹಳ್ಳಿಗಳ ಪಟ್ಟಿ ಅಧ್ಯಾಯ ಒಂದರಲ್ಲಿ ಬಂದಿದೆ). 1818ರಲ್ಲಿ ಪೇಶ್ವೆಯ ಪತನಾನಂತರ ಸವಣೂರು ಬ್ರಿಟಿಷರ ಆಶ್ರಿತ ಸಂಸ್ಥಾನವಾಯಿತು.

ನವಾಬ ಖೈರಖಾನರು 1827ರಲ್ಲಿ ತೀರಿಕೊಂಡಾಗ ಅವನ ತಮ್ಮ ಮುನ್ವರ ಖಾನ್ 1833ರವರೆಗೆ ಆಳಿದನು. ದಿಲೇರಖಾನ ಆಧುನಿಕ ಶಿಕ್ಷಣ ಪಡೆದವನಾಗಿದ್ದು ಭೂಕಂದಾಯವನ್ನು ಪುನರ್ನಿರ್ಣಯ ಮಾಡಿದ್ದು ಇವನ ಉಲ್ಲೇಖನೀಯ ಸಾಧನೆ. 'ದಿಲೇರ್‌ಜಂಗಿ' ಕೃತಿ ಬರೆದು ಮುದ್ರಿಸಲು (1841) ಇವನೇ ಕಾರಣ. ಇವನ ಉತ್ತರಾಧಿಕಾರಿ ಇವನ ಮಗ ಖೈರ್ ಖಾನ್ (1862-68) ಅಕಾಲ ಮರಣಕ್ಕೆ ತುತ್ತಾಗಲು ಅವನ ಅಪ್ರಾಪ್ತ ವಯಸ್ಕ ಮಗ ಛೋಟೆ ದಿಲೇರ್‌ಖಾನನಿಗೆ ಪಟ್ಟವಾಯಿತು. ಆತನೂ ಮಕ್ಕಳಿಲ್ಲದೆ ತೀರಿಕೊಂಡಾಗ ಉತ್ತರಾಧಿಕಾರಕ್ಕಾಗಿ ಜಗಳಗಳಾಗಲು ಬ್ರಿಟಿಷರ ಮಧ್ಯಸ್ಥಿಕೆಯಿಂದ ತಬ್ರೇಜಖಾನ ಪಟ್ಟವನ್ನು ಪಡೆದರು (1885-1892). ಅವರ ಅಲ್ಪ ಕಾಲದ ಆಡಳಿತ ನಡೆಸಿ ತೀರಿಕೊಳ್ಳಲು ಅವರ ಅಪ್ರಾಪ್ತ ವಯಸ್ಕ ಪುತ್ರ ಅಬ್ದುಲ್ ಮಜೀದ್ ಖಾನರಿಗೆ ಪಟ್ಟವಾಗಿ ಅವರು ವಯಸ್ಸಿಗೆ ಬರುವ ತನಕ ಅವರ ತಾಯಿಯ ತಂದೆ ದಾದಾ ಮಹಮ್ಮದ್ ಖಾನ್ ರಾಜರಕ್ಷಕರಾಗಿದ್ದರು. ಉತ್ತಮ ಆಧುನಿಕ ಶಿಕ್ಷಣ ಪಡೆದವರೂ ಪೋಲೋ, ಕ್ರಿಕೆಟ್ ಮುಂತಾದ ಕ್ರೀಡೆಗಳಲ್ಲಿ ಪರಿಣತರೂ ಆದ ಅವರು 1912 ಪಟ್ಟಾಭಿಷಕ್ತರಾದರು. ಸವಣೂರಲ್ಲಿ 1917ರಲ್ಲಿ ಮಜೀದ್ ಹೈಸ್ಕೂಲನ್ನು ಸ್ಥಾಪಿಸಿದವರು ಅವರೇ ಆಗಿದ್ದು ಖ್ಯಾತ ಕವಿ, ವಿದ್ವಾಂಸ ಡಾ॥ ಗೋಕಾಕರು ಆ ಹೈಸ್ಕೂಲಿನ ವಿದ್ಯಾರ್ಥಿಗಳಲ್ಲಿ ಒಬ್ಬರು. ಮಜೀದ್‌ಖಾನರು ಮೋತಿ ತಲಾವ ಕೆರೆಯನ್ನು ದುರಸ್ತಿಮಾಡಿಸಿದರು. ಊರಲ್ಲಿ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿದರು. ಕೃಷಿಗಾಗಿ ಟ್ರಾಕ್ಟರ್ ಬಳಸಲು ಪ್ರೋತ್ಸಾಹ ನೀಡಿದರು. ಸಂಸ್ಥಾನದ ವರಮಾನವನ್ನು ಒಂದರಿಂದ ಮೂರು ಲಕ್ಷ ರೂಪಾಯಿಗಳಿಗೆ ಏರಿಸಿದರು. 1948ರ ಮಾರ್ಚ್ 8ರಂದು ಸವಣೂರು ಸಂಸ್ಥಾನ ಭಾರತ ಒಕ್ಕೂಟದಲ್ಲಿ ಸೇರಿತು.

## ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್

ಮೈಸೂರು ಸಂಸ್ಥಾನದಲ್ಲಿ ಚಿಕ್ಕದೇವರಾಜ ಒಡೆಯರು ತೀರಿಕೊಂಡ ಮೇಲೆ (1704) ದುರ್ಬಲ ಅರಸರು ಪಟ್ಟವೇರಿ, ದಳವಾಯಿಗಳೆಂಬ ಅಧಿಕಾರಿಗಳು ಪ್ರಬಲಿಸಿದರು. ಈ ದಳವಾಯಿಗಳು ಮನಬಂದಂತೆ ದುಸ್ಸಾಹಸಗಳನ್ನು ಮಾಡಿ, ಆರ್ಕಾಟ್ ಉತ್ತರಾಧಿಕಾರ ಯುದ್ಧದಲ್ಲಿ ತೊಡಗಿ ಮೈಸೂರು ಸಂಸ್ಥಾನಕ್ಕೆ ಅಪಾರ ನಷ್ಟ ಉಂಟುಮಾಡಿದರು. ಸೈನಿಕರಿಗೆ ಸಂಬಳ ಕೊಡಲಾಗದೆ ಅವರು ಅರಮನೆ ಎದುರು ಧರಣಿ ಹೂಡಲು ಸಮರ್ಥಸೇನಾನಿ ಹೈದರ್ ಪರಿಸ್ಥಿತಿಯನ್ನು ನಿಭಾಯಿಸಿದ. ಚೌತಾಯಿ ವಸೂಲಿಗೆ ಬಂದ ಮರಾಠರನ್ನು ಸೋಲಿಸಿದ. ತಾನೇ ಸರ್ವ ಅಧಿಕಾರವನ್ನು ಪಡೆಯಬೇಕೆಂಬ ಆಸೆ ಸಹಜವಾಗಿ ಹೈದರನಲ್ಲಿ ಮೊಳೆಯಿತು.

ಮೂರನೇಯ ಪಾಣೀಪತ್ ಕದನದಲ್ಲಿ (1761) ಮರಾಠರಿಗೆ ಆದ ಸೋಲಿನಿಂದ ಚೇತರಿಸಿಕೊಳ್ಳಲು ಅವರಿಗೆ ಕೆಲ ವರ್ಷಗಳ ಬೇಕಾದವು. ಅದೇ ಕಾಲಕ್ಕೆ ಶ್ರೀರಂಗಪಟ್ಟಣ, ಬೆಂಗಳೂರು ಪರಿಸರಗಳಲ್ಲಿ ಇದ್ದ ಮರಾಠಾ ಸೇನಾನಿ ವಿಸಾಜಿ ಕೃಷ್ಣ ಬಿನಿವಾಲೆ, (ಅಧಿಕಾರವನ್ನು ಮೈಸೂರು ಅರಸರಿಂದ ಸೆಳೆದುಕೊಳ್ಳ ಬಯಸಿದ್ದ) ಹೈದರ್ ಅಲಿಯನ್ನು ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರ ವಿನಂತಿಯಂತೆ ಸೋಲಿಸಿದ (1760). ಹೈದರ್ ಆನೆಕಲ್‌ನಲ್ಲಿ ಆಶ್ರಯ ಪಡೆದಿದ್ದ. ಹಾಗೂ ವಿಸಾಜಿಯ ಜೊತೆ ಮಾತುಕತೆ ನಡೆಸುತ್ತಿದ್ದ. ಆದರೆ 1761ರ ಜನವರಿಯಲ್ಲಿ ಆದ ಪಾಣಿಪತ್ ದುರಂತದ ವಾರ್ತೆ ತಿಳಿದು ವಿಸಾಜಿ ಪುಣೆಗೆ ಮರಳಿದಾಗ ಹೈದರ್‌ಗೆ ಮರಾಠರ ದುಸ್ಥಿತಿ ತಿಳಿಯಿತು. ಮೈಸೂರು ಅರಸರು ಹೈದರ್‌ಗೆ ತಲೆಬಾಗಿ ಆತನನ್ನು 'ಕಾರ್ಯಕರ್ತ' ಎಂದು ನೇಮಿಸಿದರು. ಹೈದರ್ ಮೈಸೂರಿನ ಸರ್ವಾಧಿಕಾರಿಯಾಗಿ ಮುಂದೆ ಹೈದರಾಬಾದ್‌ನ ಬಲಾಸತ್ ಜಂಗನಿಗೆ ಮರಾಠರನ್ನು ಸೋಲಿಸಲು ನೆರವಾಗಿ ಶಿರಾದ ನವಾಬಗಿರಿ ಪಡೆದ. ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಮಡಕಶಿರಾ, ಪೆನುಕೊಂಡಗಳನ್ನು ಗೆದ್ದು (1762) ಮುಂದೆ ಕೆಳದಿ ಸಂಸ್ಥಾನವನ್ನು ವಶಪಡಿಸಿಕೊಂಡ (1763). ಆಗ ಅಪಾರ ಸಂಪತ್ತನ್ನೂ ಪಡೆದ. ನಂತರ ಸೋದೆಯನ್ನು ಗೆದ್ದ. ಮರಾಠರ ಜೊತೆ ಸಂಬಂಧ ಹೊಂದಿದ್ದ ಈ ರಾಜ್ಯಗಳನ್ನು ರಕ್ಷಿಸಲು ಮರಾಠರು ಆಗ ಅಸಮರ್ಥರಾಗಿದ್ದರು. ಅಲ್ಲಿಂದ ತುಂಗಭದ್ರೆ ದಾಟಿ ಸವಣೂರನ್ನು ಮುತ್ತಿದ. ಸವಣೂರು ನವಾಬನನ್ನು ಸೋಲಿಸಿದ. ಹೈದರನ ಸೇನಾನಿ ಧಾರವಾಡವನ್ನು ಗೆದ್ದು ಕೃಷ್ಣಾನದಿಯ ವರೆಗೆ ವಿಜಯಶಾಲಿಯಾಗಿ ಸಾಗಿದ. ಆದರೆ ಹೈದರನ ಕುದುರೆ ಸವಾರರ ತೀವ್ರ ಓಡಾಟದಿಂದ ಸಾಕಷ್ಟು ಹಳ್ಳಿ ಪಳ್ಳಿ ಬೆಳೆಗಳ ನಾಶ ಜಿಲ್ಲೆಯಲ್ಲಿ ಆಯಿತೆಂದು ಒಂದು ಮರಾಠಿ ದಾಖಲೆ ಹೇಳುತ್ತದೆ. ಅವನು ಧಾರವಾಡಕ್ಕೆ ಖುರ್ಷಿದ್ ಸವಾದ್ ಎಂಬ ಹೆಸರು ಕೊಟ್ಟನಂತೆ.

ಆದರೆ ಮುಂದೆ ಅಧಿಕಾರ ವಹಿಸಿದ ಪೇಶ್ವೆ ಮಾಧವರಾವ್ (1762-73) ಮೊದಲು ಮೀರಜ್‌ನ ಗೋಪಾಲರಾವ್ ಪಟವರ್ಧನನನ್ನು ಧಾರವಾಡಕ್ಕೆ ಕಳುಹಿಸಲು ಧಾರವಾಡದ ಸೇನಾನಿ ಫಜಲ್ ಉಲ್ಲಾ ಆತನನ್ನು ಸೋಲಿಸಿದ. ಆದರೆ ಸ್ವತಃ ಮಾಧವರಾಯನು ತನ್ನ ಸೇನೆ ಸಹಿತ ಕೃಷ್ಣೆಯನ್ನು ದಾಟಿ (ಮೇ 1764) ಫಜಲ್ ಉಲ್ಲಾನನ್ನು ಸೋಲಿಸಿ ಅಟ್ಟಿಸಿಕೊಂಡು ಬಂದ. ಹೈದರ್ ಮತ್ತು ಫಜಲ್ ಉಲ್ಲಾ ರಟ್ಟೀಹಳ್ಳಿಯಲ್ಲಿ ತಳ ಊರಿದರು. ಪೇಶ್ವೆಯು ಮಳೆಗಾಲದಲ್ಲಿ ಧಾರವಾಡ ಬಳಿ ನರೆಂದ್ರದಲ್ಲಿ ತಳ ಊರಿ ಮಳೆಗಾಲದ ನಂತರ ಹೈದರನನ್ನು ಶಿವಮೊಗ್ಗ ಜಿಲ್ಲೆಯ ಅನವಟ್ಟಿಯಲ್ಲಿ ಸೋಲಿಸಲು ಹೈದರ್ ಸವಣೂರನ್ನು ತ್ಯಜಿಸಲು ಒಪ್ಪಿದ. 35 ಲಕ್ಷ ರೂ.ಗಳನ್ನು ಮರಾಠರಿಗೆ ನೀಡಿದ. ಧಾರವಾಡ ಕೋಟೆಯನ್ನು ಈ ಮೊದಲೇ ಮರಾಠರು ಗೆದ್ದಿದ್ದರು. 1773 ರ ವರೆಗೆ ಧಾರವಾಡ ಮರಾಠರ ವಶ ಉಳಿಯಿತು.

ಆದರೆ 1773 ರಲ್ಲಿ ಮಾಧವರಾವ್ ಪೇಶ್ವೆ ಮರಣ ಹೊಂದಲು ಹೈದರ್ ತನ್ನ ಮಗ ಟಿಪ್ಪುವನ್ನು ಮತ್ತೆ ತುಂಗಭದ್ರೆಯಿಂದ ಉತ್ತರಕ್ಕೆ ಕಳುಹಿಸಿದ. ಜೊತೆಗೆ ಆಗ ಪೇಶ್ವೆಯಾಗಿದ್ದ ನಾರಾಯಣರಾಯನ ಚಿಕ್ಕಪ್ಪ ರಾಘೋಬ (ರಘುನಾಥರಾವ್) ಜೊತೆ ಗುಪ್ತ ಒಪ್ಪಂದ ಮಾಡಿಕೊಂಡು ಕೃಷ್ಣಾವರೆಗಿನ ಪ್ರದೇಶ ಪಡೆಯಲು ಅವನ ಅನುಮತಿ ಪಡೆದ. ಹೈದರ್ ಬಂಕಾಪುರ, ಸವಣೂರುಗಳನ್ನು ಗೆದ್ದು ಮಳೆಯ ಕಾರಣದಿಂದ ಹಿಂಜರಿದ (ಜೂನ್ 1776). ಆದರೆ ಪುಣೆಯಲ್ಲಿ ಅಧಿಕಾರದಲ್ಲಿದ್ದ ರಾಘೋಬಾನ ವಿರುದ್ಧ ಪಕ್ಷದವರಿಗೆ ಈ ವಿಚಾರ ತಿಳಿದು ಹೈದರನನ್ನು ಹಿಂದಕ್ಕಟ್ಟಲು ಕೋನೇರ್‌ರಾವ್ ಪಟವರ್ಧನನ ನೇತೃತ್ವದಲ್ಲಿ ದೊಡ್ಡ ಸೈನ್ಯ ಕಳುಹಿಸಲು ಈ ಸೈನ್ಯ ಸಂಶಿ ಬಳಿ ಹೈದರನ ಸೇನಾನಿ ಮುಹಮ್ಮದ್ ಅಲಿಯನ್ನು 1777ರಲ್ಲಿ ಎದುರಿಸಿ, ಭಾರೀ ರಕ್ತಪಾತದೊಂದಿಗೆ ಸೋತಿತು. ಕೋನೇರ್‌ರಾವ್ ಸತ್ತು ಪಾಂಡುರಂಗರಾವ್ ಪಟವರ್ಧನ್ ಎಂಬ ಸೇನಾನಿ ಬಂಧಿತನಾದ.

ಇದರ ಹಿಂದೆಯೇ ನಿಜಾಮನ ನೆರವು ಪಡೆದು ಮಿರ್ಜಿಯ ಪರಶುರಾಮಭಾವು ಪಟವರ್ಧನ್ 1778ರಲ್ಲಿ ಮತ್ತೆ ಹೈದರನ ವಿರುದ್ದ ಸಾಗಿದ. ಆದರೆ ನಿಜಾಮನು ಹೈದರನಿಂದ ಲಂಚಪಡೆದು ಹಿಂದಿರುಗಲು ಪರಶುರಾಮ್‌ಭಾವು ಕೃಷ್ಣಾನದಿ ದಾಟದೆ ತಾಸ್‌ಗಾಂವ್‌ನಿಂದ ಮರಳಿದ. ಹೈದರ್ 1778ರಲ್ಲಿ ಧಾರವಾಡವನ್ನು ಗೆದ್ದು ಮಲಪ್ರಭಾವರೆಗಿನ ಪ್ರದೇಶದ ಸ್ವಾಮ್ಯ ಪಡೆದ. ನರಗುಂದ, ನವಲಗುಂದ, ಶಿರಹಟ್ಟಿ, ಜಾಲಿಹಾಳದ ದೇಸಾಯಿಗಳನ್ನು ಅಧೀನರಾಗಿ ಮಾಡಿಕೊಂಡು ಸವಣೂರು ನವಾಬನ ಜೊತೆ ಸ್ನೇಹ, ರಕ್ತಸಂಬಂಧ ಬೆಳೆಸಿದ (1779); ಕಿತ್ತೂರಿನ ದೇಸಾಯಿಗೆ ನೆರವು ನೀಡಿ ಆತ ಮರಾಠರಿಂದ ಗೋಕಾಕವನ್ನು ಗೆಲ್ಲುವಂತೆ ಹೈದರ್ ಮಾಡಿದ (1778). ಇದಲ್ಲದೆ ಮರಾಠರಿಂದ ತಾನು ಗೆದ್ದ ಬೆಳಗಾವಿ ಜಿಲ್ಲೆಯ ಭಾಗಗಳನ್ನು ಸವಣೂರಿನ ನವಾಬ ಹಕೀಂಖಾನನಿಗೆ ಕೊಟ್ಟ.

1779ರಲ್ಲಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ತೊಡಗಿದ ಪುಣೆಯ ಮರಾಠರು ಕೃಷ್ಣೆಯ ವರೆಗಿನ ಪ್ರದೇಶವನ್ನು ಇಟ್ಟುಕೊಳ್ಳಲು ಅವನಿಗೆ ಅವಕಾಶ ಕೊಟ್ಟರು. ಅವನು 11 ಲಕ್ಷ ರೂ. ವಾರ್ಷಿಕವಾಗಿ ಈ ಪ್ರದೇಶದ ಕಂದಾಯವನ್ನು ಮರಾಠರಿಗೆ ಕೊಡಬೇಕೆಂದಾಯಿತು. ಈ ಕಾಲದಲ್ಲಿ ಹೈದರನ ಕಿರುಕುಳ ತಾಳಲಾರದೆ ನವಲಗುಂದದ ಲಿಂಗಪ್ಪ ದೇಸಾಯಿ ಪುಣೆಗೆ ಓಡಿಹೋದ. ಕಿತ್ತೂರು ದೇಸಾಯಿಯನ್ನು ಪರಶುರಾಮಭಾವು ಬಂಧಿಸಿದ (1779). ಮರಾಠರಿಗೂ ಇಂಗ್ಲಿಷ್‌ರಿಗೂ ಸಾಲ್‌ಬಾಯ್ ಒಪ್ಪಂದವಾದಾಗ ಪುಣೆಯಲ್ಲಿ ಕಾರುಭಾರಿಯಾಗಿದ್ದ ನಾನಾ ಪಡ್ನೀಸನು ತುಂಗಭದ್ರಾ ವರೆಗಿನ ಪ್ರದೇಶ ಬಿಟ್ಟುಕೊಡಲು ಹೈದರನನ್ನು ಒತ್ತಾಯಿಸಲು ಹೈದರ್ ಅದಕ್ಕೆ ಒಪ್ಪಲಿಲ್ಲ. ಆಗ ಬ್ರಿಟಿಷರ ಜೊತೆ ನಡೆದ ಯುದ್ಧ ಸಾಗಿರಲು ಹೈದರ್ 1782ರಲ್ಲಿ ಅನಾರೋಗ್ಯದಿಂದ ತೀರಿಕೊಂಡ. 1784ರಲ್ಲಿ ಇಂಗ್ಲಿಷರ ವಿರುದ್ಧ ಯುದ್ಧ ಮುಗಿದಾಗ ಮರಾಠರು ತಮಗೆ ಬರಬೇಕಾದ ಕಂದಾಯ ಬಾಕಿ ಮತ್ತು ತುಂಗಭದ್ರೆಯ ಉತ್ತರ ಪ್ರದೇಶಗಳ ಮರಳಿಕೆಗೆ ಒತ್ತಾಯಿಸಲು ಟಿಪ್ಪು ಅದಕ್ಕೆ ಒಪ್ಪದೆ (1782 ರಿಂದ ಮರಾಠರ ಪಕ್ಷ ವಹಿಸಿದ್ದ) ಸವಣೂರು ನವಾಬನನ್ನು ಶಿಕ್ಷಿಸಲು ಮುಂದಾದಾಗ ಆತನು (ಹಕೀಂ ಖಾನ್) 1786ರಲ್ಲಿ ಪುಣೆಗೆ ಓಡಿಹೋದ. ಅಲ್ಲದೆ 1785ರ ಮಾರ್ಚ್‌ನಲ್ಲಿ ಟಿಪ್ಪು ನರಗುಂದ ದೇಸಾಯಿ ವೆಂಕಟರಾವ್ ಭಾವೆಯಿಂದ ಹೆಚ್ಚಿನ ಪೊಗದಿ ಕೇಳಿ ನರಗುಂದವನ್ನು ಮುತ್ತಿದ. ಅದೇ ರೀತಿ ರಾಮದುರ್ಗ, ಕಿತ್ತೂರುಗಳ ಮೇಲೂ ದಾಳಿಮಾಡಿದ. ನರಗುಂದದ ಮುತ್ತಿಗೆ ಮುಂದುವರಿಸಿ ಅಕ್ಟೋಬರ್‌ನಲ್ಲಿ ವೆಂಕಟರಾವ್ ಭಾವೆ, ಅವನ ದಿವಾನ ಕಾಳೋಪಂತ ಹಾಗೂ ಕಾಳೋಪಂತನ ವಿವಾಹಿತ ಮಗಳನ್ನು ಸೆರೆಹಿಡಿದು ಸೇನಾನಿ ಬುರಾನ್ ಉದ್ದೀನ್ ಸಾಗಿಸಿದ. ನರಗುಂದ ಟಿಪ್ಪುವಿನ ವಶವಾಯಿತು.

ರಾಮದುರ್ಗ, ನರಗುಂದ, ಕಿತ್ತೂರುಗಳು (1781) ಹೀಗೆ ಟಿಪ್ಪುವಿನ ವಶವಾದವು. ಕಿತ್ತೂರಿನ ಮಲ್ಲಸರ್ಜ ಟಿಪ್ಪುವಿನ ಬಂಧನಕ್ಕೆ ಒಳಗಾದರೂ ತಪ್ಪಿಸಿಕೊಂಡು ಪುಣೆಗೆ ಓಡಿಹೋದ.

1786ರಲ್ಲಿ ಮಾರಾಠರೂ ನಿಜಾಮನು ಟಿಪ್ಪುವಿನ ವಿರುದ್ಧ ಸಂಧಿಮಾಡಿಕೊಂಡರು. ತುಕೋಜಿ ಹೋಳ್ಕರ್ ಮತ್ತು ಬೆಹರೆ ಕಿತ್ತೂರನ್ನು ಗೆಲ್ಲಲಾಗದಿದ್ದರೂ ಸವಣೂರವರೆಗೆ ಸಾಗಿದರು. ಹರಿಪಂತ್ ಫಡ್ಕೆ ಬಾದಾಮಿಯನ್ನು ಟಿಪ್ಪುವಿನಿಂದ ಗೆದ್ದ. ಟಿಪ್ಪುವಿನ ಸೇನೆಯನ್ನು ವರದಾ ನದಿಯ ಆಚೆಗೆ ಆನವಟ್ಟಿಗೆ ಅಟ್ಟಿದರು. 1786 ಕೊನೆಗೆ ಸವಣೂರಿನ ಕಡೆ ನಿಜಾಮನ ಸೇನೆಯ ಜೊತೆ ಬಂದ ಹರಿಪಂತನನ್ನು ಸೋಲಿಸಿ ಟಿಪ್ಪು ಸವಣೂರನ್ನು ಗೆದ್ದು ಬಂಕಾಪುರಕ್ಕೆ ಮೊಹರಂ ಆಚರಣೆಗೆಂದು ತೆರಳಿದ. ಹರಿಪಂತನು ಶಿರಹಟ್ಟಿಯನ್ನು ಗೆದ್ದ. 1796ರ ನವಂಬರ್‌ನಲ್ಲಿ ಟಿಪ್ಪುವಿನ ಸೇನೆ (ಮೊಹಿನ್ ಉದ್ದೀನನ ನಾಯಕತ್ವದಲ್ಲಿ) ಮುಂಡರಗಿಯನ್ನು ಗೆದ್ದು ಸುಲಿಯಿತು. ಹಾಗೇ ಟಿಪ್ಪು ಮರಾಠರ ವಿರುದ್ಧ ನೇರ ಸಾಗಿ ಗದಗಿನ ಮೂಲಕ ಕೊಪ್ಪಳಕ್ಕೆ ನಡೆದು ಬಹಾದೂರ್ ಬಂಡಾವನ್ನು ಗೆದ್ದ. ಆದರೆ ಮರಾಠರು ಗಜೇಂದ್ರಗಡದ ಕಡೆ ಸಾಗಿದರು. ಇಂಗ್ಲಿಷರಿಗೂ ಮರಾಠರಿಗೂ ಒಪ್ಪಂದವಾಗುವುದೆಂಬ ಭಯದಿಂದ 1787ರಲ್ಲಿ ಗಜೇಂದ್ರಗಡ ಒಪ್ಪಂದವನ್ನು ಟಿಪ್ಪು ಮರಾಠರ ಜೊತೆ ಮಾಡಿಕೊಂಡ. ನರಗುಂದ, ಬಾದಾಮಿ, ಕಿತ್ತೂರುಗಳನ್ನು ಮರಾಠರಿಗೆ ಮರಳಿಸಿದ. ಆದರೆ 1787ರಲ್ಲಿ ಕಿತ್ತೂರನ್ನು ಮತ್ತೆಗೆದ್ದ. ಧಾರವಾಡ ಅವನ ವಶದಲ್ಲೇ ಉಳಿಯಿತು. ಈ ಪ್ರದೇಶಕ್ಕಾಗಿ ಟಿಪ್ಪು ಮರಾಠರಿಗೆ ಪೊಗದಿ ಕೊಡಲು ಒಪ್ಪಿ 30 ಲಕ್ಷ ರೂ. ಪಾವತಿ ಮಾಡಿದ.

ಟಿಪ್ಪು ತನ್ನ ವಶವಿದ್ದ ಧಾರವಾಡ ಪ್ರದೇಶದ ಕಂದಾಯ ವ್ಯವಸ್ಥೆಯ ಸುಧಾರಣೆಗಾಗಿ 'ಗಜಮೋಜಣಿ' (33 ಇಂಚಿನ ಗಜದಿಂದ) ಎಂಬ ಅಳತೆಮಾಡಿಸಿದ. ಧಾರವಾಡದ ಶುಕ್ರವಾರ ಪೇಟೆಯ ವೆಂಕಟೇಶ ದೇವರ ಪ್ರತಿಷ್ಠಾಪನೆ ಇದೇ ಕಾಲಕ್ಕೆ ಆಗಿ ಇದರ ಪೂಜಾದಿ

ವ್ಯವಸ್ಥೆಗಳಿಗೆ ಒಂದು ಬೇಳೆ ಭೂಮಿಯನ್ನು ನವಲೂರು ಗ್ರಾಮದಿಂದ ಸರಕಾರ ದಾನಮಾಡಿತು. ಹಿಂದೆ ಔರಂಗಜೇಬನು ಧಾರವಾಡದ ಪೀರ್ಜಾದೆ, ಮುಲ್ಲಾ ಖತೀಬ್ ಮತ್ತು ಖಾಜಿಗೆ ನೀಡಿದ್ದ (1696) ಜೋಡಿ ಇನಾಮನ್ನು ಸರ್ವಮಾನ್ಯ ಇನಾಮಾಗಿ ಟಿಪ್ಪು ಪರಿವರ್ತಿಸಿದ. ಇಲ್ಲಿ ಒಂದು ಟಂಕಸಾಲೆಯನ್ನು ಟಿಪ್ಪು ಆರಂಭಿಸಿದ. 1784 ರಿಂದ 1790 ಧಾರವಾಡ ಜಿಲ್ಲೆ ಟಿಪ್ಪುವಿನ ವಶವಿತ್ತು (ಡಾ॥ ಸಾವಂತ್ ಅವರ ಅಪ್ರಕಟಿತ ಪ್ರಬಂಧ).

ಮುಂದೆ ನಡೆದ ಮೂರನೇಯ ಆಂಗ್ಲೊ ಮೈಸೂರು ಯುದ್ಧ(1790-92)ದ ಕಾಲಕ್ಕೆ ಬ್ರಿಟಿಷರಿಗೂ ಮರಾಠರಿಗೂ ಸಂಧಿಯಾಗಿ ಬ್ರಿಟಿಷ್ ಸೇನಾನಿ ಕ್ಯಾಪ್ಟನ್ ಲಿಟ್ಲ್ ಮತ್ತು ಪರಶುರಾಮಭಾವು ಪಟವರ್ಧನ ಒಟ್ಟಾಗಿ 1790ರ ಆಗಸ್ಟ್‌ನಲ್ಲಿ ಕೃಷ್ಣೆಯನ್ನು ದಾಟಿ ಸೆಪ್ಟೆಂಬರ್ 18 ಕ್ಕೆ ಧಾರವಾಡ ಕೋಟೆಯನ್ನು ಮುತ್ತಿದರು. ಟಿಪ್ಪುವಿನ ಕಿಲ್ಲೆದಾರ ಬದ್ರುಜ್ಜಮಾನನು ತನ್ನ 10,000 ಸೈನ್ಯದೊಡನೆ ಕಿಲ್ಲೆಯನ್ನು ರಕ್ಷಿಸಲು ಪ್ರಬಲವಾಗಿ ಹೋರಾಡಿದ. ಆರು ತಿಂಗಳ ಮುತ್ತಿಗೆಯ ನಂತರ ಏಪ್ರಿಲ್ 3(1791) ಕ್ಕೆ ಕೋಟೆ ಮರಾಠರ ವಶವಾಯಿತು. ಮುಂದೆ ಕುಸುಗಲ್, ಹುಬ್ಬಳ್ಳಿಗಳೂ ಮರಾಠರ ವಶವಾದವು. ಇಂಗ್ಲಿಷ್ ಮತ್ತು ಮರಾಠಾ ಸೇನೆ ತುಂಗಭದ್ರೆಯನ್ನು ದಾಟಿತು. ಮತ್ತೆ ತುಂಗಭದ್ರೆಯನ್ನು ದಾಟಲು ಟಿಪ್ಪುವಿಗೆ ಸಾಧ್ಯವಾಗಲಿಲ್ಲ. ಧಾರವಾಡ ಜಿಲ್ಲೆ ಮರಾಠರ ವಶವಾಯಿತು.

**ಧೋಂಡಿಯಾ ವಾಘ್**

ಮುಘಲರ ದಂಡಯಾತ್ರೆ, ಮರಾಠರ ಚಟುವಟಿಕೆಗಳು, ಹೈದರ್ ಮತ್ತು ಟಿಪ್ಪುಗಳ ಆಕ್ರಮಣ, ಅದಕ್ಕೆ ಮರಾಠರ ಪ್ರತಿಭಟನೆ, ಹೀಗೆ 18 ನೇಯ ಶತಮಾನವೆಲ್ಲ ಧಾರವಾಡ ಜಿಲ್ಲೆಯಲ್ಲಿ ಯುದ್ಧ, ದಂಡಯಾತ್ರೆ, ಸುಲಿಗೆಗಳ ಅವಧಿಯೇ ಆಯಿತು. 1801ರಲ್ಲಿ ತುಂಗಭದ್ರೆಯ ಪರಿಸರದಲ್ಲಿ ಸಂಚರಿಸಿದ ಬುಕನನ್ ಹೇಳುವಂತೆ ಈ ಪ್ರದೇಶ ಹಿಂದೆ ಸಮೃದ್ಧಿಯದಾಗಿದ್ದರೂ ಬಂಜರಾಗುತ್ತ ಸಾಗಿದೆ. 'ಜನ ಬಡವರು ಮತ್ತು ಮಾನಸಿಕವಾಗಿಯೂ ದುರ್ಬಲ ಮನಸ್ಸಿನವರು. ವಿವಾಹ ವಿಧಿಗಳಿಗೆ ವೆಚ್ಚ ಮಾಡಲು ಅಸಮರ್ಥರಾಗಿ, ಸೀರೆ ಉಡುಗೊರೆ ಕೊಟ್ಟು ಜೋಡಿಗಳಾಗಿ ಬಾಳಲು ನಿರ್ಧರಿಸುತ್ತಾರೆ.' ಇಂಥ ಅವ್ಯವಸ್ಥೆಯ ಸ್ಥಿತಿಯಲ್ಲಿ ಕಾಣಬಂದವನು ಆ ಯುಗದ ಪ್ರತಿನಿಧಿ ಧೋಂಡಿಯಾ ವಾಘ್. ಚನ್ನಗಿರಿ (ಶಿವಮೊಗ್ಗ ಜಿಲ್ಲೆ)ಯ ಪವಾರ್ ಮನೆತನಕ್ಕೆ ಸೇರಿದವನಾದ ಇವನು ಟಿಪ್ಪುವಿನ ಸೈನ್ಯದಲ್ಲಿ ಇದ್ದ. 1790ರಲ್ಲಿ ಟಿಪ್ಪುವನ್ನು ತ್ಯಜಿಸಿ ಕೆಲವೊಂದು ಪುಂಡರ ಜೊತೆ ಸೇರಿ ಧಾರವಾಡ ಜಿಲ್ಲೆಯಲ್ಲಿ ಸುಲಿಗೆ ಆರಂಭಿಸಿದ. ಈ ಪ್ರದೇಶವು (ಕುಂದಗೋಳ, ಶಿರಹಟ್ಟಿ, ಗುಡಗೇರಿ) ಪರಶುರಾಮಪಂತ ಪಟವರ್ಧನನ ವಶದಲ್ಲಿ ಇತ್ತು. ಅವನು1792ರ ಮೈಸೂರಿನ ವಿಜಯದ ನಂತರ ಮರಳಿದಾಗ ಕೊಲ್ಲಾಪುರದ ಛತ್ರಪತಿಯ ವಿರುದ್ಧ ಹೋರಾಡಬೇಕಾಯಿತು. ಆದರೆ ಪುಣೆಯಿಂದ ಕಳುಹಿಸಿದ್ದ ಸೇನಾನಿ ಧೋಂಡೋಪಂತ ಗೋಖಲೆ 1794ರಲ್ಲಿ ಧೋಂಡಿಯಾನನ್ನು ಸೋಲಿಸಲು ಧೊಂಡಿಯಾ ಟಿಪ್ಪುವಿನ ಕಡೆ ಹೋದ. ಆದರೆ ಧೊಂಡೋಪಂತ ಗೋಖಲೆಯ ಪುಂಡಾಟ ಈ ಭಾಗದಲ್ಲಿ ಸಾಗಿತು. ಆತನನ್ನು ಈ ಪ್ರದೇಶದಲ್ಲಿ ಶಾಂತಿ ಕಾಪಾಡಲು ನೇಮಿಸಿದ್ದರೆ ನವಲಗುಂದ, ಗದಗುಗಳ ದೇಸಾಯರನ್ನು ಪದಚ್ಯುತಗೊಳಿಸಿ ಅವರ ದೇಸಗತಿಯನ್ನು ಈತ ತನ್ನ ವಶ ಇಟ್ಟುಕೊಂಡ. ಡಂಬಳದ ಭೀಮರಾಯನೆಂಬಾತನು ಧೊಂಡೋಪಂತನ ನೆರವಿನಿಂದ ಅನೇಕ ಸ್ಥಳಗಳನ್ನು ಲೂಟಿ ಹೊಡೆದ.

ಧೋಂಡಿಯಾ ವಾಘನು ಟಿಪ್ಪುವಿನ ಆಶ್ರಯಕ್ಕೆ ಮರಳಲು ಆತನು ಈತನಿಗೆ ಮುಸಲ್ಮಾನನಾಗಲೂ ಒತ್ತಾಯಿಸಿದ್ದನೆಂದೂ ಅವನು ಒಪ್ಪದಿರಲು ಅವನನ್ನು ಬಲಾತ್ಕಾರದಿಂದ ಮತಾಂತರಿಸಿ ಬಂಧೀಖಾನೆಗೆ ಅಟ್ಟಿದನೆಂದು ಹೇಳಲಾಗುತ್ತದೆ. ಟಿಪ್ಪುವಿನ ಪತನವಾದಾಗ ಆತನು ಶ್ರೀರಂಗಪಟ್ಟಣದಿಂದ ಬಿಡುಗಡೆಹೊಂದಿ ಶಿವಮೊಗ್ಗ ಜಿಲ್ಲೆಗೆ ಓಡಿಹೋಗಿ ಭಾರೀ ಸೈನ್ಯ ಸೇರಿಸಿ ಶಿಕಾರಿಪುರದ ಪರಿಸರದಲ್ಲಿ ಸ್ವಾತಂತ್ರ್ಯ ಘೋಷಿಸಿ 'ಉಭಯ ಲೋಕಾಧೀಶ್ವರ' ಎಂದು ಬಿರುದು ತಳೆದನು. ತಮಿಳುನಾಡು, ಕೇರಳ, ಕರ್ನಾಟಕದಲ್ಲಿ ಆಗ ಭಾರೀ ಬ್ರಿಟಿಷ್ ವಿರೋಧಿ ದಂಗೆಗಳಾಗಲು ಕರ್ನಾಟಕದಲ್ಲೂ ಧೋಂಡಿಯಾ, ಬಲಂನ ಕೃಷ್ಣಪ್ಪನಾಯಕ, ದಕ್ಷಿಣ ಮತ್ತು ಉತ್ತರ ಕನ್ನಡದ ಕೆಲವು (ಸೋಂದಾ ಇತ್ಯಾದಿ) ಕೂಟಗಳು ಇವರ ಜೊತೆ ಸೇರಿಕೊಂಡರು. ('ಸೌತ್ ಇಂಡಿಯನ್ ರಿಬೆಲ್ಲಿಯನ್' ಎಂದು ಈ ಬಗ್ಗೆ ಪ್ರೊ॥ ಕೆ. ರಾಜಯ್ಯನ್ ಪುಸ್ತಕ ಬರೆದಿದ್ದಾರೆ). ಬ್ರಿಟಿಷ್ ವರದಿಗಳನ್ನು ಒಪ್ಪುವುದಾದರೆ ಧೋಂಡಿಯಾದ ಜೊತೆ 90,000 ಕುದುರೆ ದಳ ಹಾಗೂ 80,000 ಕಾಲುದಳವಿತ್ತು.

ಮೊದಲು 1799ರಲ್ಲಿ ಶಿವಮೊಗ್ಗದಿಂದ ಧಾರವಾಡ ಜಿಲ್ಲೆಗೆ 300 ಅನುಯಾಯಿಗಳ ಜೊತೆ ಬಂದ ಅವನು ಧೊಂಡೋಪಂತ ಗೋಖಲೆಯ ಸೇನೆಯಲ್ಲಿ ಸೇರಬಯಸಿದ. ಧೊಂಡೋಪಂತನು ಅವನಿಗೆ ಸೊಪ್ಪು ಹಾಕದಿರಲು ಸವಣೂರು ಪ್ರದೇಶದಿಂದ ಕೊಲ್ಲಾಪುರಕ್ಕೆ

ತೆರಳಿ ಅಲ್ಲಿ ಛತ್ರಪತಿಯ ಸೇನೆ ಸೇರಿದ. ಆದರೆ ಅಲ್ಲಿಂದ ಜಗಳಾಡಿ ಸ್ಥಳತ್ಯಜಿಸಿ ದಾರಿಯಲ್ಲಿ ಸಿಕ್ಕ ಆಶ್ರಯವಿಲ್ಲದೆ ಪುಂಡರನ್ನೂ ಟಿಪ್ಪುವಿನ ಸೈನ್ಯದಿಂದ ಕೆಲಸ ಕಳೆದುಕೊಂಡವರನ್ನೂ ಕೂಡಿಸಿಕೊಂಡು ತನ್ನ ಭಾರೀ ಸೈನ್ಯದೊಂದಿಗೆ ಶಿವಮೊಗ್ಗಕ್ಕೆ ಹೋಗಿ ಅಲ್ಲಿಂದ ಭಾರಿ ತಂಡದೊಂದಿಗೆ ಧಾರವಾಡ ಜಿಲ್ಲೆ ಪ್ರವೇಶಿಸಿದ. ಸವಣೂರು, ಅಲ್ಲಿಂದ 1800ರ ಮೇಯಲ್ಲಿ ಡಂಬಳಕ್ಕೆ ಹೋದ. ಹಾವನೂರಿನ ವಿನಾ ಜಿಲ್ಲೆಯ ದಕ್ಷಿಣ ಭಾಗದ ಎಲ್ಲ ಕೋಟೆಗಳನ್ನು ಜೂನ್‌ನಲ್ಲಿ ಗೆದ್ದ. ಔರಂಗಾಬಾದ್, ಕಡಪಾ, ಹೈದರಾಬಾದ್‌ಗಳಿಂದ ಕೆಲಸ ಕಳೆದುಕೊಂಡ ಸೈನಿಕರು ಅವನನ್ನು ಸೇರಿಕೊಂಡರು.

ಧೋಂಡಿಯಾನನ್ನು ಹಾಗೇ ಬಿಟ್ಟರೆ ಮರಾಠರ ಜೊತೆ ಗಡಿ ನಿರ್ಧರಿಸುವುದು ಕಷ್ಟವಾಗುವುದು, ಹಾಗೂ ಬ್ರಿಟಿಷರು ಗೆದ್ದ ಸೋಂದಾ ಮುಂತಾದ ಸ್ಥಳಗಳಲ್ಲಿ ಶಾಂತಿ ಕಾಪಾಡಲು ತೊಡಕಾಗುವುದು ಎಂದು ಕ॥ ಆರ್ಥರ್ ವೆಲ್ಲೆಸ್ಲಿಯನ್ನು ಧೋಂಡಿಯಾನನ್ನು ಅಡಗಿಸಲು ಬ್ರಿಟಿಷರು ನೇಮಿಸಲು ಆತನು ಶ್ರೀರಂಗಪಟ್ಟಣದಿಂದ ಜೂನ್ 16ಕ್ಕೆ ಹರಿಹರಕ್ಕೆ ಬಂದು 20ರ ರಾತ್ರಿ ಧೋಂಡಿಯಾನ ಜನ ತ್ಯಜಿಸಿದ್ದ ಐರಣಿಕೋಟೆಯನ್ನು ಗೆದ್ದ. ಮುಂದೆ ಒಂದು ವಾರದಲ್ಲಿ ರಾಣೆಬೆನ್ನೂರು ಕೋಟೆಯನ್ನು ಇಂಗ್ಲಿಷ್ ಸೇನೆ ವಶಪಡಿಸಿಕೊಂಡಿತು. ಈ ಪ್ರದೇಶಗಳನ್ನೆಲ್ಲ ಬ್ರಿಟಿಷರಿಗೆ ನೆರವಾದ ಮರಾಠಾ ಸೇನಾನಿ ಅಪ್ಪಾಸಾಹೇಬ್ ಪಟವರ್ಧನನಿಗೆ ಬಿಟ್ಟುಕೊಟ್ಟರು. ಜೂನ್ 19ಕ್ಕೆ ಧೋಂಡ್ಯಾ ಹುಬ್ಬಳ್ಳಿ ತಲುಪಿದ. ಇದೇ ಕಾಲಕ್ಕೆ ಪುಣೆಯಿಂದ ಬಂದ ಧೋಂಡೋಪಂತ ಗೋಖಲೆಯನ್ನು ಧಾರವಾಡ ಮತ್ತು ಹಳಿಯಾಳಗಳ ನಡುವೆ ನಡೆದ ಘರ್ಷಣೆಯಲ್ಲಿ ಧೋಂಡಿಯಾ ಕೊಂದುಬಿಟ್ಟ (ಜೂನ್ 30). ಅಲ್ಲಿಂದ ಕಿತ್ತೂರಿನೆಡೆ ಸಾಗಿದ್ದ ಧೋಂಡಿಯಾ ವೆಲ್ಲೆಸ್ಲಿಯ ಆಗಮನದ ವಾರ್ತೆ ಕೇಳಿ ಕುಂದಗೋಳಕ್ಕೆ ವಾಪಸ್ ಬಂದ. ಆದರೆ ವೆಲ್ಲೆಸ್ಲಿಯ ಅಪಾರ ಸೈನ್ಯದ ವಾರ್ತೆಯನ್ನು ಕೇಳಿ ಕುಂದಗೋಳದಲ್ಲಿ 600 ಜನರನ್ನು ಬಿಟ್ಟು ಪೂರ್ವಕ್ಕೆ ಕಣವಿಗೆ ಹೋಗಿ ಜುಲೈ 17 ಕ್ಕೆ ಅಣ್ಣಿಗೇರಿ ತಲುಪಿದ. ಜುಲೈ 26 ಕ್ಕೆ ಡಂಬಳ ಕೋಟೆಯಲ್ಲಿದ್ದ ಧೋಂಡಿಯಾನ ಸುಮಾರು 1000 ಅನುಯಾಯಿಗಳನ್ನು ಮರಾಠಾ ಮತ್ತು ಇಂಗ್ಲಿಷ್ ಸೈನ್ಯ ಸೋಲಿಸಿ ಕೋಟೆಯನ್ನು ಮರಾಠರ ವಶಕ್ಕೆ ಕೊಟ್ಟರು. (ಅಲ್ಲಿದ್ದ ಮರಾಠಾ ಕಿಲ್ಲೇದಾರರನ್ನು ಮೇ 4 ಕ್ಕೆ ತಾನು ಕೋಟೆ ಗೆದ್ದಾಗ ಧೋಂಡಿಯಾ ಬಂಧಿಸಿದ್ದ). ಕೋಟೆಯಲ್ಲಿದ್ದ ಶ್ರೀನಿವಾಸ ವೆಂಕಟಾದ್ರಿ ಎಂಬ ಧೋಂಡಿಯಾನ ಅನುಯಾಯಿಗೆ ನೇಣುಹಾಕಿದರು. ಅಣ್ಣಿಗೇರಿಯಿಂದ ಸೌಂದತ್ತಿಗೆ ಹೋಗಿ ಧೋಂಡಿಯಾ, ಮುನವಳ್ಳಿ, ಕಿತ್ತೂರು, ಖಾನಾಪುರಗಳ ಮುಖಾಂತರ ಮುಂದೆ ಘಟಪ್ರಭಾದ ಉದ್ದಕ್ಕೂ ಸಾಗಿ ಬಾದಾಮಿಗೆ ತಲುಪಿದ. ವೆಲ್ಲೆಸ್ಲಿ ಆತನನ್ನು ಬೆನ್ನಟ್ಟಿದ. ಆಗಸ್ಟ್‌ನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಧೋಂಡಿಯಾ ಮತ್ತು ವೆಲ್ಲೆಸ್ಲಿಗೆ ಅನೇಕ ಕದನಗಳಾದವು. ಮುಂದೆ ರಾಯ್ಚೂರು ಜಿಲ್ಲೆ ಪ್ರವೇಶಿಸಿದ ಅವನನ್ನು ಕೋಣಗಲ್ ಎಂಬಲ್ಲಿ ಸೆಪ್ಟೆಂಬರ್ 9 ಕ್ಕೆ (1800) ಬ್ರಿಟಿಷ್ ಸೈನ್ಯವು ಕೊಂದಿತು. ಧೋಂಡಿಯಾನ ವಿರುದ್ಧ ವೆಲ್ಲೆಸ್ಲಿ ನಡೆಸಿದ ದೀರ್ಘ ಹೋರಾಟ ಅಪಾರ ವೆಚ್ಚದ್ದೂ, ಶ್ರಮದ್ದೂ ಆಯಿತು. ಈ ಪ್ರದೇಶವು ಆಗ ಮರಾಠರ ವಶದಲ್ಲಿದ್ದು ಮರಾಠರ ಕೊನೆಗಾಲದಲ್ಲಿ ಅವರ ಆಡಳಿತ ಎಷ್ಟು ದುರ್ಬಲ ಮತ್ತು ಅಸಮರ್ಥವಾಗಿತ್ತು ಎಂಬುದಕ್ಕೆ ಈ ಘಟನೆಗಳು ಸಾಕ್ಷಿ ಹೇಳುತ್ತವೆ.

## ಮರಾಠರು : ಪೇಶ್ವೆಯರ ಆಳ್ವಿಕೆ

ಶಿವಾಜಿಯು ಮರಾಠಾ ಸತ್ತೆಯ ಸ್ಥಾಪಕ. ಅವನೂ ಅವನ ಮಗ ಸಂಭಾಜಿಯೂ ಧಾರವಾಡ ಜಿಲ್ಲೆಯಲ್ಲಿ ನಡೆಸಿದ ಚಟುವಟಿಕೆಗಳ ಬಗ್ಗೆ ಸೂಚ್ಯವಾಗಿ ಹಿಂದೆ ಹೇಳಿದೆ. ಮುಘಲರು ಶಿವಾಜಿಯ ವಿರುದ್ಧ ಕಳುಹಿಸಿದ್ದ ಬಹಾದೂರ್‌ಖಾನ್ ಎಂಬ ಸೇನಾನಿಯನ್ನು ಶಿವಾಜಿ ಲಂಚಕೊಟ್ಟು ಒಲಿಸಿಕೊಂಡಿದ್ದ (1679). ವಿಜಾಪುರದ ಪತನವಾಗುವ ಮೊದಲೇ ಬೆಳಗಾವಿ, ಧಾರವಾಡ ಜಿಲ್ಲೆಯ ಭಾಗಗಳು ಮರಾಠರ ವಶವಾಗಿ ಧಾರವಾಡ ಜಿಲ್ಲೆಯಲ್ಲಿ ಇದ್ದ ಶಿವಾಜಿಯ ನಾಲ್ಕು ಪ್ರಾಂತ(ಮಹಲ್)ಗಳ ವಿಚಾರ ಹಿಂದೆ ಹೇಳಿದೆ. 1685ರಲ್ಲಿ ಮುಘಲರು ಧಾರವಾಡ ಕಿಲ್ಲೆಯನ್ನು ಗೆದ್ದುಕೊಂಡ ನಂತರ ಈ ಇಡೀ ಪ್ರದೇಶ ಸವಣೂರು ನವಾಬನ ವಶವಾದ ವಿಚಾರ ಕೂಡ ಮೇಲೆ ಬಂದಿದೆ (ಧಾರವಾಡ ಕಿಲ್ಲೆ ಮಾತ್ರ ಮುಘಲರ ವಶ ಇದ್ದಿರಬಹುದು). 1705ರಲ್ಲಿ ಮರಾಠಾ ಸತ್ತೆಯ ಮುಖ್ಯಸ್ಥೆ (ರಾಜಾರಾಮನ ಪತ್ನಿ) ತಾರಾಬಾಯಿಯು ಹಿಂದೂರಾವ್ ಘೋರ್ಪಡೆಗೆ ವಹಿಸಿದ್ದ 23 ಪರಗಣೆಗಳಲ್ಲಿ ಗದಗ, ಹಾಲಿಹಾಳ, ನವಲಗುಂದ, ಲಕ್ಷ್ಮೇಶ್ವರ, ಕಡಕೋಳ (ಕಟಕೋಳ ?)ಗಳೂ ಸೇರಿದ್ದವು. ನಡುವೆ ಈ ಪ್ರದೇಶ ಸತಾರಾಕ್ಕೆ ಸೇರಿದ್ದೇ ಕೊಲ್ಹಾಪುರದ ಛತ್ರಪತಿಗೆ ಸೇರಿದ್ದೆ ಎಂಬ ಅನಿಶ್ಚಿತತೆ 1731ರ ವರ್ಣಾ ಒಪ್ಪಂದದ ನಂತರ ಉಪಸ್ಥಿತವಾಗಿತ್ತು. ಸವಣೂರು ನವಾಬನ ರಕ್ಷಣೆಗೆ ನಿಜಾಮನ ಮೇಲಾಧಿಕಾರಿಯಾಗಿ ಇದ್ದುದರಿಂದ ದಕ್ಷಿಣದ ಸುಬೆಗಳಿಂದ ಚೌತಾಯಿ ಮುಂತಾದ ತೆರಿಗೆಗಳನ್ನು ಸಂಗ್ರಹಿಸುವ ಮರಾಠರ ಪ್ರಯತ್ನಗಳನ್ನು ಅವನು 1746ರಲ್ಲೇ ಪ್ರತಿಭಟಿಸಿ ಬಾಬೂಜಿ ನಾಯಕನೆಂಬ ಮರಾಠ ಸರದಾರನನ್ನು ಸೋಲಿಸಿದ್ದ.

ಪೇಶ್ವೆಯಾಗಿ ಮೊದಲನೇಯ ಬಾಜೀರಾಯನು (ಬಾಳಾಜಿ ವಿಶ್ವನಾಥನ ಮಗ) 1720ರಲ್ಲಿ ಶಾಹುವಿನಿಂದ ನೇಮಕಗೊಂಡಾಗ ಅವನು ತನ್ನ ರಾಜನೀತಿ ಪರಿಣತಿ ಮತ್ತು ಪರಾಕ್ರಮಗಳಿಂದ ಮರಾಠರ ಇತಿಹಾಸದಲ್ಲಿ ಎರಡನೇಯ ಶಿವಾಜಿಯೆಂಬ ಕೀರ್ತಿಗೆ ಪಾತ್ರನಾದ. ಉತ್ತರದಲ್ಲಿ ದಂಡಯಾತ್ರೆ ಮಾಡಿ ಮುಘಲ್ ಬಾದಷಾ ಮುಹಮ್ಮದ್ ಷಾ (1719-48)ನನ್ನು ಸೋಲಿಸಿದ. ಇದೇ ಕಾಲಕ್ಕೆ ಒಮ್ಮೆ ಚಿತ್ರದುರ್ಗದವರೆಗೆ (1725-26) ಇನ್ನೊಮ್ಮೆ ಶ್ರೀರಂಗಪಟ್ಟಣದವರೆಗೆ ದಂಡಯಾತ್ರೆ ಮಾಡಿ ಚೌತಾಯಿ ವಸೂಲಿ ಕೈಗೊಂಡಾಗ, ಮೊದಲನೇಯ ಸಲ ಚಿತ್ರದುರ್ಗದಿಂದ ಮರಳುವಾಗ ಹಂದಿಗೋಳ, ಗದಗ, ಕುರ್ತುಕೋಟಿ ಮುಳಗುಂದಗಳಿಂದ 1726ರ ಮೇ ತಿಂಗಳಲ್ಲಿ ಹಾದುಹೋಗಿದ್ದ. ಎರಡನೇಯ ಬಾರಿ ಶ್ರೀರಂಗಪಟ್ಟಣದ ದಂಡಯಾತ್ರೆಯ ಕಾಲಕ್ಕೆ ಸೋದೆಯಿಂದ ಬಿದನೂರಿಗೆ ಹೋಗುವಾಗ ಲಕ್ಷ್ಮೇಶ್ವರ ದ್ವಾರಾ ಹೋಗಿದ್ದರೂ ಮರಳುವ ಕಾಲಕ್ಕೆ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಿಂದ ಹಾದು ಹೋದನೇ ವಿನಾ ಧಾರವಾಡ ಜಿಲ್ಲೆಗೆ ಕಾಲಿಡಲಿಲ್ಲ.

1731ರಲ್ಲಿ ನಿಜಾಮನ ಜೊತೆ ಮಾಡಿಕೊಂಡ ಒಪ್ಪಂದದಂತೆ ತಾನು ಉತ್ತರ ಭಾರತದಲ್ಲಿ ವಿಸ್ತರಣೆ ಮಾಡಬೇಕು, ನಿಜಾಮನ ದಕ್ಷಿಣ ಭಾರತವನ್ನು ತನ್ನ ಕಾರ್ಯಕ್ಷೇತ್ರವಾಗಿ ಮಾಡಿಕೊಳ್ಳಬೇಕು, ಎಂದು ನಿರ್ಣಯ ಮಾಡಿಕೊಂಡುದರಿಂದ ಭಾಜೀರಾವ್ ದಕ್ಷಿಣ ಭಾರತದ ಕಡೆ (ಧಾರವಾಡ ಜಿಲ್ಲೆಯಕಡೆ) ಮತ್ತೆ ಗಮನಹರಿಸಲಿಲ್ಲ. ಆದರೆ 1737ರಲ್ಲಿ ದೆಹಲಿಯ ಮೇಲೆ ಬಾಜೀರಾಯನು ದಾಳಿ ಮಾಡಿದಾಗ ನಿಜಾಮನು ಮುಘಲರ ನೆರವಿಗೆ ಧಾವಿಸಿದ್ದರಿಂಡ ಈ ಒಪ್ಪಂದದ ಮಹತ್ವ ಉಳಿಯಲಿಲ್ಲ. ಆಗ ಬಾಜೀರಾವ್ ಬೋಪಾಲದಲ್ಲಿ ನಿಜಾಮನನ್ನು ಸೋಲಿಸಿದ. ಮುಂದೆ ಬಾಜೀರಾಯನ ಗಮನ ಪೋರ್ತುಗೀಸರ ಜೊತೆ (ಬೆಸ್ಸಿನ್, ಸಾಲ್ಸೆಟ್‌ನಲ್ಲಿ) ಹೋರಾಡುವುದರಲ್ಲಿ ಕಳೆಯಿತು. 1740ರಲ್ಲಿ ತನ್ನ 42 ವಯಸ್ಸಿನಲ್ಲಿ ಆತ ತೀರಿಕೊಂಡ. ಅವನ ಮಗ ಬಾಳಾಜಿರಾವ್ ಅಥವಾ ನಾನಾಸಾಹೇಬ್ (1742-61) ಭಾಜೀರಾಯನಂಥ ಧೀರನೂ ಪರಾಕ್ರಮಿಯೂ ಆಗಿರಲಿಲ್ಲ. ಆತನ ಕಾಲದಲ್ಲಿ ಸವಣೂರು ನವಾಬನನ್ನು ಪೇಶ್ವೆಯ ತಮ್ಮ ಚಿಮಾಜಿ ಅಪ್ಪಾ ಸೋಲಿಸಿ ಪೇಶ್ವೆಯ ಮಾಂಡಳಿಕನನ್ನಾಗಿ ಮಾಡಿಕೊಂಡ. ಹುಬ್ಬಳ್ಳಿ, ಬಂಕಾಪುರ, ಹಾನಗಲ್ ಮಹಲ್‌ಗಳನ್ನು ಮಾತ್ರ ನವಾಬನಿಗೆ ಬಿಟ್ಟುಕೊಟ್ಟು ಧಾರವಾಡ, ನವಲಗುಂದ, ಗದಗ, ರಾಣೆಬೆನ್ನೂರು, ಕೋಡ ಮಹಲ್‌ಗಳನ್ನು ಪೇಶ್ವೆ ಕಸಿದುಕೊಂಡ. ಬೆಳಗಾವಿ ಪ್ರದೇಶ ಪುನಃ ನವಾಬನ ಕೈತಪ್ಪಿತು. ಆದರೆ ಈ ಒಪ್ಪಂದ ಕಾರ್ಯರೂಪಕ್ಕೆ ಬಾರದ್ದರಿಂದ ಇನ್ನೊಮ್ಮೆ ಸ್ವತಃ ಬಾಳಾಜಿರಾಯನೇ ದಂಡೆತ್ತಿ ಬಂದು (ಮೇ, 1753) ತಿಂಗಳ ಮುತ್ತಿಗೆಯ ನಂತರ ನಿಜಾಮನ ನೆರವನ್ನು ಪಡೆದು ಸವಣೂರನ್ನು ವಶಪಡಿಸಿಕೊಂಡ. ಸವಣೂರು ನವಾಬನಿಗೆ ಹಿಂದೆ ಒಪ್ಪಂದದಂತೆ ಒಳಪಟ್ಟ ಪ್ರದೇಶಗಳನ್ನು ಬಿಟ್ಟುಕೊಟ್ಟು ತನ್ನ ವಶಕ್ಕೆ ಬಂದ ಪ್ರದೇಶಗಳನ್ನು ಬೇರೆ ಬೇರೆ ದೇಸಾಯಿಯರಿಗೆ ಕೊಟ್ಟ. ಆಗಲೇ ಧಾರವಾಡ ಬಳಿಯ ಮೈಲಾರಲಿಂಗ ದೇವಾಲಯವನ್ನು ಬಿಜಾಪುರದವರು ಹಿಂದೆ ಮಸೀದಿಯಾಗಿ ಪರಿವರ್ತಿಸಿದ್ದನ್ನು ಮತ್ತೆ ದೇವಾಲಯವಾಗಿ ಮಾಡಲಾಯಿತು.

ಈ ಕಾಲಕ್ಕೆ ಪ್ರಾಬಲ್ಯಕ್ಕೆ ಬಂದವರು ಪೇಶ್ವೆಯ ಸಂಬಂಧಿಗಳಾಗಿದ್ದ ಇಚಲಕರಂಜಿಯ ಜಾಗಿರ್ದಾರ ಘೋರ್ಪಡೆಯ ಬಳಿ ಅರ್ಚಕನಾಗಿದ್ದ ಹರಭಟ್ಟನ ಮಕ್ಕಳಾದ ಗೋವಿಂದ, ರಾಮಚಂದ್ರ ಹಾಗೂ ತ್ರಿಂಬಕ ಪಟವರ್ಧನರು. ಇವರು ಪೇಶ್ವೆಯ ಸೈನ್ಯದಲ್ಲಿ ಪರಾಕ್ರಮಿಗಳಾಗಿ ಖ್ಯಾತರಾದರು. ಗೋವಿಂದ ಪಟವರ್ಧನನ ಮಗ ಗೋಪಾಲನಿಗೆ ಸವಣೂರಿನ ದಂಡಯಾತ್ರೆಯ ಕಾಲದಲ್ಲಿ ತೋರಿದ ಪರಾಕ್ರಮಕ್ಕಾಗಿ ದಕ್ಷಿಣದಲ್ಲಿ ನವಾಬನಿಂದ ಪಡೆದ ಶಿರಹಟ್ಟಿ ಮುಂತಾದ ಪ್ರದೇಶಗಳನ್ನು ಜಾಗೀರಾಗಿ ಪೇಶ್ವೆ ನೀಡಿದ. ಗೋವಿಂದ ಪಟವರ್ಧನ ಮಿರ್ಜಿಯ ಜಾಗಿರ್ದಾರನಾದ. 1771ರಲ್ಲಿ ಈತನು ತೀರಿಕೊಂಡಾಗ ಆತನ ಮಗ ಗಂಗಾಧರ ಮಿರ್ಜಿಯ ಜಾಗಿರ್ದಾರನಾದ. ಗೋವಿಂದನ ಇನ್ನೊಬ್ಬ ಮಗ ಪಾಂಡುರಂಗ ಹಾಗೂ ಮುಂದೆ ಪಾಂಡುರಂಗನ ಮಗ ಚಿಂತಾಮಣಿ ಸಾಂಗಲಿಯ ಜಾಗಿರ್ದಾರರಾದರು. (ಹರಭಟ್ಟನ ಹಿರಿಯ ಮಗ) ರಾಮಚಂದ್ರ ಪಟವರ್ಧನನ ಮಗ ಪರಶುರಾಮಭಾವು ಬಹಳ ಪ್ರಸಿದ್ಧ ಸೇನಾನಿಯಾಗಿದ್ದು ತಾಸಗಾಂವ ಆತನ ಕೇಂದ್ರವಾಯಿತು. ಈ ಬೇರೆ ಬೇರೆ ಶಾಖೆಗಳಾಗಿ ಸೇರಿದವರಿಗೆ ಮುಂದೆ ಸಾಂಗಲಿಗೆ ಸೇರಿದ ಶಿರಹಟ್ಟಿ ಮಹಲ್, ಮೀರಜ್‌ಗೆ ಸೇರಿದಂತೆ ಗುಡಗೇರಿ ಗ್ರಾಮಗಳ ಗುಂಪು, ಪರಶುರಾಮಪಂತನ ಪುತ್ರರಲ್ಲಿ ಗಣಪತಿರಾವ್‌ಗೆ ಮುಂದೆ ತಾಸಗಾಂವ್, ಹರಿ ಪಟವರ್ಧನ್‌ಗೆ ಜಮಖಂಡಿ ಇವೆಲ್ಲ ಜಾಗೀರಾದವು. ಕುಂದಗೋಳ ಮಹಲ್ ಜಮಖಂಡಿಗೆ ಸೇರಿತ್ತು. ಈ ಪಟವರ್ಧನ ಮನೆತನಕ್ಕೆ ಕೊಲ್ಹಾಪುರದ ಪರಿಸರದಲ್ಲಿ ಒಂದು ಜಾಗೀರನ್ನು ಕೊಲ್ಹಾಪುರದ ಛತ್ರಪತಿಗೆ ತಡೆಯೊಡ್ಡುವ ಉದ್ದೇಶದಿಂದ ಬಾಳಾಜಿರಾವ್ ಮತ್ತು ಮಾಧವರಾವ್ ವಿತರಿಸಿದ್ದರು. ಅವರ ಬೇರೆ ಬೇರೆ ಶಾಖೆಗಳು ಕೊಲ್ಹಾಪುರದ ಪರಿಸರದ ಸಾಂಗ್ಲಿ, ಮೀರಜ್, ಜಮಖಂಡಿ, ತಾಸಗಾಂವ್‌ಗಳಲ್ಲಿ ನೆಲೆಸಿದ್ದವು. 1763ರಲ್ಲಿ ತಾಸಗಾಂವ ಜಾಗೀರು ಗೋವಿಂದರಾವ್ ಮತ್ತು ಅವನ ತಮ್ಮನ ಮಕ್ಕಳಾದ ಪರಶುರಾಮಭಾವು ಮತ್ತು ನೀಲಕಂಠರಿಗೆ ಕೊಡಲ್ಪಟ್ಟು ಅವರು 800 ಸವಾರರನ್ನು ಸಿದ್ಧವಿಡಬೇಕೆಂದು ನಿಯಮಿಸಲಾಗಿತ್ತು.

ಅದೇ ರೀತಿ ತುಂಗಭದ್ರಾ ತೀರದಲ್ಲಿ (ಧಾರವಾಡ ಜಿಲ್ಲೆಯಲ್ಲಿ) ಇದೇ ವಂಶದವರಿಗೆ ನೀಡಿದ ಜಾಗೀರುಗಳು ಶಿರಹಟ್ಟಿ, ಲಕ್ಷ್ಮೇಶ್ವರ, ಗುಡಗೇರಿ, ಕುಂದಗೋಳಗಳಲ್ಲಿ ಹಂಚಿಹೋಗಿದ್ದವು. ಇದು ಹೈದರನನ್ನು ತಡೆಯುವ ಉದ್ದೇಶದಿಂದ ಮಾಡಿದ್ದ ವ್ಯವಸ್ಥೆ (ಈ ಪ್ರತೀ ಭಾಗದಲ್ಲಿ ಇದ್ದ ಗ್ರಾಮಗಳ ವಿವರವನ್ನು ಅಧ್ಯಾಯ 1 ರಲ್ಲಿ ಕೊಟ್ಟಿದೆ). ಇದರಲ್ಲಿ ಹುಬ್ಬಳ್ಳಿಯೂ ಸೇರಿದ್ದು ಅದು ಸಾಂಗಲಿಯವರ ಪಾಲಿಗೆ ಬಂತು. ಹಳೇ ಹುಬ್ಬಳ್ಳಿ ಪೇಶ್ವೆಯ ಸಂಬಂಧಿ ಫಡ್ಕೆ ಎಂಬಾತನ ವಶವಿತ್ತು. ಈ ಎಲ್ಲಾ ಪಟವರ್ಧನ್ ಮನೆತನದ ಸಮರ್ಥ ಸೇನಾನಿಗಳು ಹೈದರನ ಮತ್ತು ಟಿಪ್ಪುವಿನ ವಿರುದ್ಧ ನಡೆದ ಯುದ್ಧಗಳಲ್ಲಿ ಉತ್ಸಾಹದಿಂದ ಪಾಲುಗೊಂಡಿದ್ದರು. ನೀಲಕಂಠ (ತ್ರಿಂಬಕನ ಮಗ) ಮೋತಿತಲಾವ್‌ನಲ್ಲಿ ಹೈದರನ ವಿರುದ್ಧ ನಡೆದ ಯುದ್ಧದಲ್ಲಿ ಹತನಾಗಿದ್ದ (1771). ಗೋವಿಂದನ ಮಗ ಪಾಂಡುರಂಗರಾವ್ ಹೈದರನ ವಿರುದ್ಧ ಸಂಶಿಯಲ್ಲಿ ನಡೆದ (1776) ಕಾಳಗದಲ್ಲಿ ಬಂಧಿತನಾದ. ಆದರೆ ಪರಶುರಾಮ ಪಂತನು ನಿಜಾಮನ ನೆರವಿನಿಂದ ಹೈದರನ ಬೆನ್ನಟ್ಟಲು, ಹೈದರ್ ನಿಜಾಮನ ಸೇನೆಗೆ ಲಂಚಕೊಟ್ಟು ನಿಷ್ಕ್ರಿಯಗೊಳಿಸಿ ಧಾರವಾಡ ಕೋಟೆ ಗೆದ್ದ ವಿಚಾರ ಹಿಂದೆ ಹೇಳಿದೆ. ವಿಜಾಪುರದವರೆಗೆ ಅವನ ಪ್ರಾಬಲ್ಯ ಬೆಳೆಯಿತು. ಆದರೆ ಕೃಷ್ಣಾ ನದಿಯವರೆಗಿನ ತಾನು ಗೆದ್ದ ಪ್ರದೇಶಕ್ಕೆ ಹೈದರ್ ವಾರ್ಷಿಕ 11 ಲಕ್ಷ ರೂ.ಮೊಗದಿ ಕೊಡಲು ಒಪ್ಪಿದ್ದನ್ನು ಆಗಲೇ ಗಮನಿಸಿದೆ. ಹೈದರನ ಮರಣಾನಂತರ ಟಿಪ್ಪುವಿನ ಕಾಟ ತಾಳಲಾರದೆ ಸವಣೂರು ನವಾಬನು ಮರಾಠರ ಸಖ್ಯ ಬೆಳೆಸಿದನು. ಟಿಪ್ಪು ನರಗುಂದ, ಬಾದಾಮಿ, ಕಿತ್ತೂರುಗಳನ್ನು ಗೆದ್ದು 1790ರಲ್ಲಿ ಈ ಎಲ್ಲ ಪ್ರದೇಶವನ್ನು ಕಳೆದುಕೊಂಡ ಸಂಗತಿಯನ್ನು ಗಮನಿಸಿದೆ. ಮುಂದೆ ಧೋಂಡಿಯಾವಾಘನ ಜೊತೆ ನಡೆದ ಯುದ್ಧದಲ್ಲಿ ಮರಾಠರಿಗೆ ಬ್ರಿಟಿಷರು ನೆರವಾದರೂ, ಈ ಕಾಲದಲ್ಲಿ ಪೇಶ್ವೆ ಮತ್ತು ಪಟವರ್ಧನರ ನಡುವಣ ಸಂಬಂಧ ಕೆಡುತ್ತ ಬಂತು.

ಮಾಧವರಾಯನ ನಂತರ ಪೇಶ್ವೆಯ ಗಾದಿಗೆ ಬಂದ ಅವನ ತಮ್ಮ ನಾರಾಯಣರಾಯನು (1772-73) ಅವನ ಚಿಕ್ಕಪ್ಪ ರಾಘೋಬಾನ ಪಿತೂರಿಯಿಂದ ಕೊಲೆಯಾಗಿ ರಾಘೋಬನೇ ಗಾದಿಗೆ ಬಂದರೂ (1773) ಕೊಲೆಗಾರನೆಂದು ತಿಳಿದುಬಂದ ಅವನನ್ನು ನಾನಾ ಫಡ್ನವೀಸನ ನೇತೃತ್ವದ ಬಾರಾಭಾಯಿ (12 ಸೋದರರು) ಎಂಬ ಪುಣೆದರ್ಬಾರಿನ ಮುತ್ಸದಿಗಳ ತಂಡ ಅಧಿಕಾರದಿಂದ ದೂರವಿರಿಸಿ ಮಾಧವರಾಯನ ಮರಣೋತ್ತರ ಪುತ್ರ ಸವಾಯ್ ಮಾಧವರಾಯನ ಹೆಸರಲ್ಲಿ ಆಡಳಿತ ನಡೆಸಲು ಆರಂಭಿಸಲು ಪುಣೆಯ ಆಡಳಿತ ದುರ್ಬಲವಾಗಿ ಬೇರೆ ಬೇರೆ ಕಡೆ ಕಂದಾಯ ಸಂಗ್ರಹಕ್ಕಾಗಿ ನೇಮಿಸಿದ್ದ ಜಾಗಿರ್ದಾರರು ಧಾರವಾಡ ಪ್ರದೇಶದಲ್ಲಿ ಪುಂಡಾಟ ನಡೆಸಲು ಆರಂಭಿಸಿದರು.

ಇಚಲಕರಂಜಿಯ ಜಾಗೀರ್ದಾರ ಘೋರ್ಪಡೆಯ ಪತ್ನಿ ಅನುತಾಯಿಯು (ಈ ವಂಶಕ್ಕೆ ಬಾಜೀರಾಯನ ಸೋದರಿ ಅನುತಾಯಿಯನ್ನು ಮದುವೆ ಮಾಡಿಕೊಟ್ಟಿತ್ತು) ಬಾಳಾಜಿರಾಯನು 1753ರಲ್ಲಿ ಧಾರವಾಡವನ್ನು ಗೆದ್ದಾಗ ಬಾಳಾಜಿರಾಯನ ಸೈನ್ಯದ ಜೊತೆಹೋಗಿದ್ದು ಧಾರವಾಡವನ್ನು ತನ್ನ ಜಾಗೀರಾಗಿ ಪಡೆದಳು; ಮುಂದೆ ಹೈದರ್ ಅದನ್ನು ಆಕ್ರಮಿಸಿದಾಗ ಅದು ಘೋರ್ಪಡೆಗಳ ಕೈತಪ್ಪಿತ್ತು. ಕೊಲ್ಲಾಪುರದ ಪ್ರದೇಶದ ಮೇಲೆ ಘೋರ್ಪಡೆ ಒತ್ತುವರಿ ನಡೆಸಲು ಕೊಲ್ಲಾಪುರದ ಛತ್ರಪತಿ ಎರಡನೇಯ ಶಿವಾಜಿ ಪ್ರತಿಭಟಿಸಿದ. ಹಾಗೂ ಕಿತ್ತೂರ ದೇಸಾಯಿ ವೀರಪ್ಪಗೌಡನ ಜೊತೆ ಸ್ನೇಹಮಾಡಿದ. ಪೇಶ್ವೆ ಹಾಗೂ ಹೈದರನ ವಿರುದ್ಧ ಬಂಡೇಳುವ ಮನಃಸ್ಥಿತಿಯಲ್ಲಿ ಇವರಿಬ್ಬರೂ ಇದ್ದರು. ಇಚಲಕರಂಜಿ ಮತ್ತು ಕೊಲ್ಲಾಪುರಗಳ ನಡುವಿನ ಜಗಳವನ್ನು ಶಮನಮಾಡಲು ಕೋನ್ಹೇರಿರಾವ್ ಪಟವರ್ಧನನನ್ನು ಪುಣೆದರ್ಬಾರ್ ನೇಮಿಸಲು ಕೊನ್ಹೇರಿರಾವ್ ವೀರಪ್ಪಗೌಡನನ್ನು ಸೋಲಿಸಿ ಅವನಿಂದ ಭಾರೀ ಯುದ್ಧ ಪರಿಹಾರ ಕೇಳಿದ. ಮತ್ತೆ ಕೊಲ್ಲಾಪುರದ ಮೇಲೆ ದಾಳಿಯಿಟ್ಟು ಅಲ್ಲಿನ ಮಠವನ್ನು ಸುಲಿದ. ಆಗ ಕೊಲ್ಲಾಪುರದ ಛತ್ರಪತಿಯು ಹೊರದೂಡಲ್ಪಟ್ಟ ಪೇಶ್ವೆ ರಾಘೋಬಾನ ನೆರವಿನಿಂದ ಪಟವರ್ಧನನ ಸೇನೆ ವಶಪಡಿಸಿಕೊಂಡಿದ್ದ ಚಿಕ್ಕೋಡಿ, ನಾಗರಮನೋಳಿಗಳನ್ನು ಬಿಡಿಸಿಕೊಂಡನು. ಆಗ ಖ್ಯಾತ ಸೇನಾನಿ ಮಹದಾಜಿ ಸಿಂಧ್ಯಾನನ್ನೇ ಪುಣೆ ದರ್ಬಾರ್ ಕೊಲ್ಲಾಪುರದ ವಿರುದ್ಧ ಕಳುಹಿಸಿಕೊಡಲು ಕೊಲ್ಲಾಪುರದವರು ಸಂಧಿಮಾಡಿ ಚಿಕ್ಕೋಡಿ, ನಾಗರಮನೋಳಿಗಳನ್ನು ಬಿಟ್ಟುಕೊಟ್ಟು ಯುದ್ಧ ಪರಿಹಾರಕ್ಕೆ 15 ಲಕ್ಷ ರೂ. ಕೊಡಲು ಒಪ್ಪಿದರು (1778).

1796ರಲ್ಲಿ ಎಳೆಯ ಪೇಶ್ವೆ ಸವಾಯ್ ಮಾಧವರಾವ್ ಆತ್ಮಹತ್ಯೆ ಮಾಡಿಕೊಳ್ಳಲು ರಾಘೋಬಾನ ಮಗ ಎರಡನೇಯ ಬಾಜೀರಾವ್ ಪೇಶ್ವೆಯಾದ. ಕೆಲಕಾಲ ನಾನಾಫಡ್ನವೀಸನೇ ಅಧಿಕಾರ ನಿರ್ವಹಿಸಿದ. ಆದರೆ ಆತನ ನಿಧನದ ನಂತರ (1800) ಪುಣೆಯ ಆಸ್ಥಾನದಲ್ಲಿ ಆಳುದುಳಿದ ಬಿಗುವು, ಮುತ್ಸದಿತನಗಳು ಮಾಯವಾದುವು. ಪೇಶ್ವೆ ಬಾಜೀರಾಯನು ತನ್ನ ತಂದೆ ರಾಘೋಬನಂತೆ ವೀರನೇನೂ ಅಲ್ಲ, ಆದರೆ ತಂದೆಯ ಒಳಸಂಚುಗಳ ವೃತ್ತಿಯಲ್ಲಿ ಪರಿಣತ. ಇದರಿಂದ ಮರಾಠಾ ಸತ್ತೆಯ ಪತನಕ್ಕೆ ದಾರಿಯಾಯಿತು.

**ಪಟವರ್ಧನರು**

ಪೇಶ್ವೆಯ ಅನೇಕ ಯುದ್ಧಗಳಲ್ಲಿ ಗಣ್ಯಪಾತ್ರವಹಿಸಿದ್ದ ಪಟವರ್ಧನರಲ್ಲಿ ತಾಸಗಾಂವಿನ ಪರಶುರಾಮ ಭಾವು 1792 ರಲ್ಲಿ ಟಿಪ್ಪುವಿನ ಪರಾಜಯದಲ್ಲಿ ಗಣ್ಯ ಪಾತ್ರ ವಹಿಸಿದವನು. ಆದರೆ ಇಚಲಕರಂಜಿಯ ಅನುತಾಯಿ ಘೋರ್ಪಡೆ ಪೇಶ್ವೆಯ ಸಂಬಂಧಿಯಾಗಿದ್ದು ಕೊಲ್ಲಾಪುರದ ರಾಜಕಾರಣದಲ್ಲಿ ಚಂಚು ಪ್ರವೇಶಮಾಡಿದಳು. ಪೇಶ್ವೆಗೂ ಕೊಲ್ಲಾಪುರಕ್ಕೂ ಒಳ್ಳೆಯ ಸಂಬಂಧವಿದ್ದರೂ ಗಮನಿಸದೆ, ಕೊಲ್ಲಾಪುರದ ತಂಟೆಕೋರ ಅಧೀನ ಅಧಿಕಾರಿ ಕಾಗಲದ ಘಾಟಗೆಯ ಮಾತಿನಂತೆ ಮಿರ್ಜಿಯ ಪಟವರ್ಧನರ ನೆರವು ಪಡೆದು ಕೊಲ್ಲಾಪುರಕ್ಕೆ ಸೇರಿದ ಚಿಕ್ಕೋಡಿಯಲ್ಲಿ ಪುಂಡಾಟಿಕೆಗೆ ಅವಕಾಶ ಮಾಡಿಕೊಟ್ಟಳು. ಕೊಲ್ಲಾಪುರದ ಎರಡನೇಯ ಶಿವಾಜಿ 1760ರಲ್ಲಿ ತೀರಿಕೊಂಡಾಗ ಮೂರನೇಯ ಶಿವಾಜಿ ಎಂಬಾತ ಪಟ್ಟವೇರಿದನು. ಗೋವಿಂದರಾವ್ ಪಟವರ್ಧನನಿಗೆ 1761ರಲ್ಲಿ ಮಿರ್ಜಿಯನ್ನು ಜಾಗೀರಾಗಿ ಕೊಟ್ಟಾಗ ಪುಣೆ ಕೊಲ್ಲಾಪುರಗಳ ನಡುವೆ ಭಿನ್ನಮತ ಹೆಚ್ಚಿತು.

ಪಾಣಿಪತ್ ಕದನ (1761) ಮುಗಿದು ಬಾಳಾಜಿರಾಯನ ಮರಣವಾದ ನಂತರ ಹೈದರ್ ಪ್ರಬಲಿಸಿ ಕೊಲ್ಲಾಪುರದ ಜೊತೆ ಗುಪ್ತ ಸಂಬಂಧ ಬೆಳೆಸಲು ಪುಣೆಯ ಜೊತೆ ಛತ್ರಪತಿಯ ಸಂಬಂಧ ಇನ್ನು ಕೆಟ್ಟಿತು. 1762ರಲ್ಲಿ ಎಳೆಯ ಮೂರನೇಯ ಶಿವಾಜಿಯ ತಾಯಿ ಜೀಜಾಬಾಯಿ ಪೇಶ್ವೆ ಮಾಧವರಾಯನ ಜೊತೆ ಸ್ನೇಹಮಾಡಲು ತನ್ನ ವಶವಿದ್ದ ಬೆಳಗಾವಿ ಜಿಲ್ಲೆಯ ನಾಲ್ಕು ಪರಗಣೆಗಳನ್ನು ಆಕೆಗೆ ಮರಳಿಸಿ ಏಳು ಲಕ್ಷ ರೂ. ಪಡೆಯಲು ಒಪ್ಪಿದನು. ಆದರೆ ಈ ಹಣವನ್ನು ಆಕೆ ಸಾಲಪಡೆದು ಕೊಟ್ಟಿದ್ದು ಸಾಲಿಗರು ರಾಣಿಗೆ ಕಿರುಕುಳ ಕೊಡುತ್ತಿರಲು, ಇದನ್ನು ತಪ್ಪಿಸಬೇಕೆಂದು ಮಾಧವರಾಯನು ಚಿಕ್ಕೋಡಿ ಮತ್ತು ನಾಗರಮನೋಳಿಗಳನ್ನು ಕಂದಾಯ ವಸೂಲಿಗಾಗಿ ಪರಶುರಾಮ ಭಾವು ಪಟವರ್ಧನನಿಗೆ ಬಿಟ್ಟುಕೊಡಲು ಇದರಿಂದ ಕೊಲ್ಲಾಪುರದವರಿಗೆ ತೀವ್ರ ಅಸಮಾಧಾನವಾಗಿ, ಸಾಧ್ಯ ಇದ್ದಷ್ಟು ಹಣವನ್ನು ಪೇಶ್ವೆಗೆ ನಗದಾಗಿ ಕೊಟ್ಟು ಈ ಪ್ರದೇಶಗಳನ್ನು ತನಗೆ ಮರಳಿಸಲು ರಾಣಿ ವಿನಂತಿಸಿದಳು. ಪೇಶ್ವೆ ಅದರಂತೆ 1767ರಲ್ಲಿ ಪರಶುರಾಮ ಭಾವುವಿಗೆ ಸೂಚನೆ ನೀಡಿದ. ಆದರೆ ಪರಶುರಾಮಭಾವು ಈ ಮಾತಿಗೆ ವಿಧೇಯನಾಗಿ ನಡೆಯಲಿಲ್ಲ. ಪೇಶ್ವೆ ಅಸೌಖ್ಯಬಿದ್ದು 1772ರಲ್ಲಿ ತೀರಿಕೊಂಡು ಮುಂದೆ ಆದ ಘಟನಾವಳಿಗಳನ್ನು ಹಿಂದೆ ಹೇಳಿದೆ. ಕೊನೆಗೆ 1778ರಲ್ಲಿ ಕೊಲ್ಲಾಪುರದವರು ಪೇಶ್ವೆಗೆ ರೂ.15 ಲಕ್ಷವನ್ನು ಯುದ್ಧ ಪರಿಹಾರವಾಗಿ ನೀಡಿ ಶಾಂತಿ ಸ್ಥಾಪನೆಯಾದರೂ, ಮೂರನೇಯ ಆಂಗ್ಲೋ ಮೈಸೂರು ಯುದ್ಧದ ನಂತರ ಪರಶುರಾಮಭಾವು ಕೊಲ್ಲಾಪುರ ಪ್ರದೇಶದ ಮೇಲೆ ಒತ್ತುವರಿ ನಡೆಸಲಾರಂಭಿಸಿದನು. ಪುಣೆಯಲ್ಲಿ ಅಧಿಕಾರದಲ್ಲಿದ್ದ ನಾನಾಫಡ್ನವೀಸನಿಗೂ ಪರಶುರಾಮಭಾವುವಿಗೂ ಒಳ್ಳೆಯ ಸಂಬಂಧಗಳಿರದ್ದರಿಂದ ಅವನು ಛತ್ರಪತಿಗೆ ಪರಶುರಾಮ ಭಾವುವಿನ ವಿರುದ್ಧ ಹೋರಾಡಲು ಪ್ರೋತ್ಸಾಹ ನೀಡಿದ್ದ. ಆಗ ಛತ್ರಪತಿ ಪರಶುರಾಮ ಭಾವುವಿನ ತಾಸಗಾಂವ್ ಅನ್ನು ಗೆದ್ದು ಅಲ್ಲಿನ ಅರಮನೆಯನ್ನು ಸುಟ್ಟು, ಚಿಕ್ಕೋಡಿ, ನಾಗರ ಮನೋಳಿಗಳನ್ನು ವಶಪಡಿಸಿಕೊಂಡು ಗೋಕಾಕವನ್ನು 1798ರಲ್ಲಿ ಗೆದ್ದು ಸತಾರಾ ಕಡೆ ಸಾಗಲು ಪರಶುರಾಮ ಭಾವು ಮತ್ತು ಫಡ್ನವೀಸ್ ಮತ್ತೆ ಕೈಜೋಡಿಸಿದರು. ಪರಶುರಾಮ ಭಾವು ಗೋಕಾಕದ ಕಡೆಯಿಂದ ಕೊಲ್ಲಾಪುರಕ್ಕೆ ಸಾಗಲು ಪಟ್ಟಣಕುಡಿಯಲ್ಲಿ ಯುದ್ಧದಲ್ಲಿ ಹತನಾದ. ಪುಣೆಯ ಸೇನೆ ರಾಮಚಂದ್ರ ಪಟವರ್ಧನನ ನೇತೃತ್ವದಲ್ಲಿ ಕೊಲ್ಲಾಪುರ ಮುತ್ತಿತು. ಆಗ ನಾನಾಫಡ್ನವೀಸ್ ತೀರಿಕೊಳ್ಳಲು, ಎರಡನೇಯ ಬಾಜೀರಾವ್ ಮುತ್ತಿಗೆ ಹಿಂತೆಗೆದುಕೊಳ್ಳಲು ಹೇಳಿದನು (1800). ಆದರೆ ಈ ಪ್ರದೇಶದಲ್ಲಿ ಭಾರಿ ಪುಂಡನಾದ ನಿಪ್ಪಾಣಿಯ ದೇಸಾಯಿ ಬಾಜೀರಾಯನ ಪ್ರಚೋದನೆಯಿಂದ 1812ರಲ್ಲಿ ಕೊಲ್ಲಾಪುರದ ಮೇಲೆ ದಾಳಿಮಾಡಿ ಕೊಲ್ಲಾಪುರದ ಛತ್ರಪತಿ ಬ್ರಿಟಿಷರ ತೆಕ್ಕೆಗೆ ಬೀಳುವಂತೆ ಮಾಡಿದ. ಮುಂದೆ ಪೇಶ್ವೆಯ ವಿರುದ್ಧ ಬ್ರಿಟಿಷರು ನಡೆಸಿದ ಯುದ್ಧದಲ್ಲಿ ಛತ್ರಪತಿ ಬ್ರಿಟಿಷರಿಗೆ (1818) ನೆರವಾಗಿ ಚಿಕ್ಕೋಡಿ, ನಾಗರಮನೋಳಿಗಳನ್ನು ಮತ್ತೆ ಪಡೆದರೂ ಕೊಲ್ಲಾಪುರದ ಮುಂದಿನ ಅರಸರಾದ ಶಂಭು (1812-21) ಹಾಗೂ ಷಾಜಿ (1821-37) ಹಾಗೂ ನಾಲ್ಕನೇಯ ಶಿವಾಜಿ (1837-66) ತಮ್ಮ ಅನೇಕ ಚಟುವಟಿಕೆಗಳಿಂದ ಬೆಳಗಾವಿ ಜಿಲ್ಲೆಯಲ್ಲಿದ್ದ ತಮ್ಮ ಹೆಚ್ಚಿನ ಭಾಗಗಳನ್ನು ಕಳಕೊಂಡರು. ಒಟ್ಟಿನಲ್ಲಿ ಮರಾಠಾ ಸತ್ತೆ ದುರ್ಬಲವಾಗಲು ಈ ವಂಶದ ಮಹತ್ವಾಕಾಂಕ್ಷೆಗಳೂ ಕಾರಣವಾದವು.

ಪರಶುರಾಮ ಪಟವರ್ಧನನ ಮರಣಾನಂತರ ಅವನ ಮಗ ರಾಮಚಂದ್ರನು ಕೊಲ್ಲಾಪುರದ ಮುತ್ತಿಗೆಗಾಗಿ ಪೇಶ್ವೆಯ ನೆರವು ಕೇಳಲು, ಪೇಶ್ವೆಯು ಪಟವರ್ಧನನಿಗೆ ನೆರವು ನೀಡಬೇಕೆಂದು ಉತ್ತರ ಕರ್ನಾಟಕದ ತನ್ನ ಸರ್ ಸುಬೇದಾರ ದೊಂಡೋಪಂತ ಗೋಖಲೆಗೆ ತಿಳಿಸಿದನು. ಆತನು ಧೋಂಡಿಯಾ ವಾಘನ ವಿರುದ್ಧ ಕಾರ್ಯಾಚರಣೆಯಲ್ಲಿರಲು ಪಟವರ್ಧನನೂ ಅವನ ಜೊತೆ ಸೇರಿದನು. ಗೋಖಲೆ ಈ ಕಾರ್ಯಾಚರಣೆಯಲ್ಲಿ ಹತನಾದರೂ ಚಿಂತಾಮಣರಾವ್ ಪಟವರ್ಧನ್ ವೆಲ್ಲೆಸ್ಲಿಗೆ ನೆರವಾಗಲು

ಧೋಂಡಿಯಾನ ವಿರುದ್ಧ ನಡೆದ ಕಾರ್ಯಾಚರಣೆ ಮುಗಿದ ನಂತರ ಪಟವರ್ಧನರಿಗೆ ಸೇರಿದ್ದ ಧೋಂಡಿಯಾ ಗೆದ್ದ ಪ್ರದೇಶಗಳನ್ನು ವೆಲ್ಲೆಸ್ಲಿ ಅವರಿಗೆ ಮರಳಿಸಿದನು. ಆದರೆ ಬಾಜೀರಾಯನ ಧೂರ್ತತನದಿಂದ ಎಲ್ಲ ಪ್ರದೇಶಗಳ ಮರಳಿಸುವಿಕೆ ನಿಧಾನವಾಗಿ 1811ರಲ್ಲಿ ಪಟವರ್ಧನರ ಧಾರವಾಡ, ಬೆಳಗಾವಿ, ಸಾಂಗಲಿ ಜಿಲ್ಲೆಯ ಪ್ರದೇಶಗಳು ಪಟವರ್ಧನರಿಗೆ ಸಿಕ್ಕು ಅವರು ಪೇಶ್ವೆಯ ವಿರುದ್ಧ ಬ್ರಿಟಿಷರ ಮಿತ್ರರಾದರು. ಪೇಶ್ವೆಯನ್ನು 1818ರಲ್ಲಿ ಬ್ರಿಟಿಷರು ಸೋಲಿಸಿದಾಗ ಅವರು ತಮಗೆ ಸೇರಿದ ಸಾಂಗಲಿ, ಹಿರೇಮಿರ್ಜಿ, ಜಮಖಂಡಿ, ಕಿರೇಮಿರ್ಜಿ (ಬುಧಗಾಂವ್) ಮುಂತಾದ ಪ್ರದೇಶಗಳನ್ನು ಉಳಿಸಿಕೊಂಡರು. ಆದ್ದರಿಂದ ಧಾರವಾಡ ಜಿಲ್ಲೆಯಲ್ಲಿ ಅವರ ಮಹಲುಗಳಾಗಿದ್ದ ಶಿರಹಟ್ಟಿ, ಲಕ್ಷ್ಮೇಶ್ವರ, ಕುಂದಗೋಳ, ಗುಡಿಗೇರಿಗಳು ಅವರ ಸಂಸ್ಥಾನಗಳ ಭಾಗವಾಗಿ ಉಳಿದವು. 1824ರಲ್ಲಿ ಸೈನ್ಯ ಸಹಾಯ ಮೈತ್ರಿಯಂತೆ ತಾನು ಕೊಡಬೇಕಾದ ಪೊದಿಯ ಬದಲು ಹೊಸ ಹುಬ್ಬಳ್ಳಿ ಹಾಗೂ 47 ಗ್ರಾಮಗಳನ್ನು (ಒಟ್ಟು ಉತ್ಪನ್ನ 62,500 ರೂ.) ಸಾಂಗಲಿಯ ಚಿಂತಾಮಣರಾವ್ ಪಟವರ್ಧನ್ ಬ್ರಿಟಿಷರಿಗೆ ಬಿಟ್ಟುಕೊಟ್ಟನು.

### ಪೇಶ್ವೆಯ ಪತನ

ಬಾಜೀರಾವ್ ಪೇಶ್ವೆ ಮತ್ತು ಪಟವರ್ಧನರ ನಡುವಿನ ದ್ವೇಷ ಎಷ್ಟಿತ್ತೆಂದರೆ ಧೋಂಡಿಯಾ ವಾಘನ ಸೋಲಿನ ನಂತರ, ಈ ಯುದ್ಧದಲ್ಲಿ ಬ್ರಿಟಿಷರಿಗೆ ನೆರವಾಗಿ ಸತ್ತಿದ್ದ ಪೇಶ್ವೆಯ ಸರ್ ಸುಬೇದಾರ ಧೋಂಡೋಪಂತ ಗೋಖಲೆಯ ಸೋದರನಪುತ್ರ ಬಾಪು ಗೋಖಲೆಗೆ ಪಟವರ್ಧನನಿಗೆ ಸೇರಿದ ಪ್ರದೇಶಗಳನ್ನು ಸುಲಿಯುವಂತೆ ಪೇಶ್ವೆ ಹೇಳಿದ. 1802ರಲ್ಲಿ ಬಾಪುವು ಸವಣೂರು, ಹಾವೇರಿಗಳನ್ನು ಸೂರೆ ಮಾಡಿದ. ಇದೇ ಕಾಲಕ್ಕೆ ಇಂದೋರಿನ ಹೋಳ್ಕರನು ಪೇಶ್ವೆಯನ್ನು ಪುಣೆಯಿಂದ ಹೊರದೂಡಲು ಬಾಜೀರಾಯನು ಬ್ರಿಟಿಷರ ಜೊತೆ ಬೆಸ್ಸೀನ್ ಒಪ್ಪಂದಮಾಡಿಕೊಂಡು ಅವರ ಅಧೀನನಾಗಲು ಸಮ್ಮತಿ ಕೊಟ್ಟ (1802). ಅವರ ಸೈನ್ಯಕ್ಕೆ ಕೊಡಬೇಕಾದ ಸಹಾಯ ಧನಕ್ಕೆ 10.22 ಲಕ್ಷ ರೂ ಉತ್ಪನ್ನದ ಸವಣೂರು ಹಾಗೂ 5.57 ಲಕ್ಷ ರೂ. ಉತ್ಪನ್ನದ ಬಂಕಾಪುರವನ್ನು ಬಿಟ್ಟುಕೊಟ್ಟನಾದರೂ ಮುಂದೆ 1803ರಲ್ಲಿ ಈ ಪ್ರದೇಶಗಳ ಬದಲಿಗೆ ಬುಂದೇಲ್‌ಖಂಡವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟ.

ಬಾಜೀರಾಯನನ್ನು ನೆಲೆಗೊಳಿಸಿ ಧಾರವಾಡಕ್ಕೆ ಬಂದ ವೆಲ್ಲೆಸ್ಲಿ ಧಾರವಾಡ ಜಿಲ್ಲೆಯ ಅರಾಜಕತೆಯಿಂದ ದಂಗಾದ. ಅಪ್ಪಾಸಾಹೇಬ ಪಟವರ್ಧನ (ನಾಲ್ಕು ಲಕ್ಷ ಉತ್ಪನ್ನದ ಪ್ರದೇಶ), ನರಗುಂದ ಹಾಗೂ ರಾಮದುರ್ಗದ ವೆಂಕಟರಾವ್ ಭಾವೆ (1,25,000 ರೂ. ಉತ್ಪನ್ನದ ಪ್ರದೇಶ), ನವಲಗುಂದ ಮತ್ತು ಗದಗ ಪ್ರದೇಶ (ಐದು ಲಕ್ಷ ರೂ. ಉತ್ಪನ್ನ) ಹೊಂದಿದ್ದ ಬಾಪು ಗೋಖಲೆ ಹಾಗೂ ದಕ್ಷಿಣ ಬಿಜಾಪುರದಲ್ಲಿ ಇದ್ದ ಗಣಪತರಾವ್ ಪಾನಸೆ (ರಾಣೆಬೆನ್ನೂರು ಹಾಗೂ ಹಾನಗಲ್‌ಗಳ 1,20,000 ಉತ್ಪನ್ನದ ಪ್ರದೇಶ) ಆಡಳಿತಗಾರರಾಗಿದ್ದರು. ಕೊನೆಯದರ ಮಾಲಿಕ ಪುಣೆಯಲ್ಲಿ ಇರುತ್ತಿದ್ದ ರೂಪಾರಾಮ್ ಚೌಧುರಿ ಎಂಬಾತ ಧಾರವಾಡದಲ್ಲಿ 1794ರಿಂದ ಕಿಲ್ಲೇದಾರನಾಗಿದ್ದ ಬಾಪೂಜಿ ಸಿಂಧೆ, ಬೆಟಗೇರಿ, ಮಾರದಗಿಗಳ 1,20,000 ರೂ. ಉತ್ಪನ್ನದ ಪ್ರದೇಶ ಹೊಂದಿದ್ದ. ಪೇಶ್ವೆಯ ದತ್ತಕ ಸೋದರ ಅಮೃತರಾವ್ ಅಣ್ಣಿಗೇರಿ ಹಾಗೂ ಪರಸಗಡ (ಈಗ ಬೆಳಗಾವಿ ಜಿ॥)ಗಳನ್ನು (50,000 ರೂ. ಉತ್ಪನ್ನ) ಹೊಂದಿದ್ದ. ಅದಲ್ಲದೆ ಈ ಎಲ್ಲ ಅಧಿಕಾರಿಗಳು ಪೇಶ್ವೆಗೆ ತಲೆಬಾಗದೆ ಅರೆಬರೆ ಸ್ವಾಯತ್ತರಾಗಿ ಇದ್ದರು; ಇವರಲ್ಲಿ ದ್ವಂದ್ವಗಳಿಗೂ ಕೊನೆ ಇರಲಿಲ್ಲ. ಇವರ ಹಿಡಿತವಿಲ್ಲದ ಪೇಶ್ವೆ ಹಾಗೂ ಈ ಕಂದಾಯ ಸಂಗ್ರಹವನ್ನು ಗುತ್ತಿಗೆಗೆ ಪಡೆದಿದ್ದ ಅಧಿಕಾರಿಗಳ ನಡುವೆ ಸಿಕ್ಕ ಜನರ ಪಾಡು ಗರಗಸದ ಅಲಗುಗಳ ನಡುವೆ ಸಿಕ್ಕಂತೆ ಇತ್ತು. 1814ರಲ್ಲಿ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಕಳುಹಿಸಲಾದ ಪೇಶ್ವೆಯ ಅಧಿಕಾರಿ ತ್ರಿಂಬಕಜಿ ಡೇಂಗ್ಲೆಗೆ ಯಾರೂ ತಲೆಬಾಗಲು ಸಿದ್ಧರಿರಲಿಲ್ಲ.

1817ರಲ್ಲಿ ಪೇಶ್ವೆ ಮಾಡಿಕೊಂಡ ಪುಣೆ ಒಪ್ಪಂದದಂತೆ ಧಾರವಾಡ, ಕುಸುಗಲ್‌ಗಳನ್ನು ಬ್ರಿಟಿಷರಿಗೆ ಅವರ ಸೈನ್ಯದ ವೆಚ್ಚಕ್ಕಾಗಿ ಬಿಟ್ಟುಕೊಟ್ಟ. ಪಿಂಡಾರಿಗಳ ವಿರುದ್ಧ ಕಾರ್ಯಾಚರಣೆಗೆ ಮುಂದಾಗಬೇಕಾದ ಬ್ರಿಟಿಷರಿಗೆ ಈ ಭೂಮಿಯಿಂದ ಅನುಕೂಲವಾಯಿತು. ಸರ್ ಥಾಮಸ್ ಮನ್ರೋ, ಬ್ರಿ. ಪ್ರಿಜ್ಲರ್‌ನ ಜೊತೆ ಧಾರವಾಡಕ್ಕೆ ಸಾಗಿದ. ಮುಂಚೂಣಿಯಾಗಿ ಬಂದಿದ್ದ ಮೇಜರ್ ನೆವಾಲ್ ಧಾರವಾಡಕ್ಕೆ ಜುಲೈ 1817ರಲ್ಲಿ ತಲಪುವಾಗ ಮನ್ರೊ ಧಾರವಾಡ ಕೋಟೆಯನ್ನು ವಶಪಡಿಸಿಕೊಂಡಿದ್ದ. ಮೇಜರ್ ನೆವಾಲ್ ಧಾರವಾಡ, ಕುಸುಗಲ್ ಹಾಗೂ ರಾಣೆಬೆನ್ನೂರನ್ನೂ ಗೆದ್ದ. ಏಕೆಂದರೆ ಬಾಜೀರಾಯನು ಮತ್ತೆ ಬ್ರಿಟಿಷರ ವಿರುದ್ಧ ಯುದ್ಧ ಸಾರಿದ್ದ.

ಬ್ರಿಟಿಷರಿಗೆ ಬಿಟ್ಟಿದ್ದ ಪ್ರದೇಶವನ್ನು ಮತ್ತೆ ಗೆಲ್ಲಲು ತನ್ನ ಅಧಿಕಾರಿ ಕಾಶೀರಾವ್ ಗೋಖಲೆಗೆ ಬಾಜೀರಾವ್ ಆಜ್ಞಾಪಿಸಿದ. ಆದರೆ ಸ್ಥಳೀಯ ಜನರ ಸಹಕಾರ ಲಭಿಸಿದ್ದರಿಂದ ತನ್ನಲ್ಲಿದ್ದ ಮಿತಬಲದಿಂದ ಈ ಪ್ರದೇಶ ಗೆಲ್ಲಲು ಮನ್ರೋಗೆ ಕಷ್ಟವಾಗಲಿಲ್ಲ. ಪೇಶ್ವೆಯ ಪ್ರದೇಶದಲ್ಲಿ ಸ್ಥಳೀಯರನ್ನೇ ಅಮಲ್ದಾರರನ್ನಾಗಿ ನೇಮಿಸಿ ಇಂಥ 25 ಅಮಲ್ದಾರರನ್ನು ತಯಾರುಮಾಡಿ ಅವರ ನೆರವಿನಿಂದ ಸಾಧ್ಯವಿದ್ದಷ್ಟು ಪೇದೆಗಳನ್ನು ಭರ್ತಿ ಮಾಡಿದ. ಡಿಸೆಂ. 19ಕ್ಕೆ (1817) ಕಾಶೀರಾವ್ ಗೋಖಲೆಯ ಮಗನ ವಶವಿದ್ದ ನವಲಗುಂದವು ರಾಮರಾವ್ ಎಂಬ ಬ್ರಿಟಿಷರ ಅಮಲ್ದಾರನ ವಶವಾಯಿತು. ನವಲಗುಂದಕ್ಕೆ ಬಾದಾಮಿಯಿಂದ ಬಂದ ಕಾಶೀರಾವ್‌ನನ್ನು ಮನ್ರೋ ಧಾರವಾಡದಿಂದ ಬಂದು ಹಿಂದಕ್ಕಟ್ಟಿದ. ಆಗ ಬಳ್ಳಾರಿಯಿಂದ ಬಂದ ಸೇನೆಯ ನೆರವಿನಿಂದ ಜನವರಿ 6 ಕ್ಕೆ (1818) ಗದುಗು, 8 ಕ್ಕೆ ಡಂಬಳ, 14 ಕ್ಕೆ ಹುಬ್ಬಳ್ಳಿ, 15 ಕ್ಕೆ ಮಿಶ್ರಿಕೋಟೆಗಳನ್ನು ಗೆದ್ದ. ಜ.18 ಕ್ಕೆ ಸೋಂದಾ, ನಂತರ ಹಳಿಯಾಳ (ಇವೆರಡೂ ಕೆನರಾ ಜಿಲ್ಲೆಯ ಭಾಗವಾಗಿ 1799 ರಲ್ಲಿ ಟಿಪ್ಪುವಿನ ಪತನಾ ನಂತರ ಬ್ರಿಟಿಷರಿಗೆ ಸೇರಿದ್ದವು), ಅಲ್ಲಿಂದ ನವಲಗುಂದ, ಹುಲ್ಲೂರು, ಮಾರ್ಗವಾಗಿ ರೋಣ ತಲುಪಿ ಅಲ್ಲಿ ಮನ್ರೋ ಬೀಡು ಬಿಟ್ಟ. (ಫೆ.8). ಫೆ 10 ಕ್ಕೆ ಬ್ರಿಟಿಷ್‌ರು ಉತ್ತರದಲ್ಲಿ ಸತಾರಾ ಗೆದ್ದು, ಫೆ.11 ಕ್ಕೆ ಪೇಶ್ವೆಯನ್ನು ಪದಚ್ಯುತಗೊಳಿಸಿದಾಗ ಧಾರವಾಡ ಜಿಲ್ಲೆ ಬ್ರಿಟಿಷ್‌ರ ವಶಬಂದಂತೆ ಆಯಿತು. ಮುಂದೆ ವಿಜಾಪುರ, ಸೊಲ್ಲಾಪುರ, ಬೆಳಗಾವಿಗಳಲ್ಲಿ ಬ್ರಿಟಿಷ್ ಧ್ವಜ ಏರಿಸುವ ಕೆಲಸವನ್ನು ಮನ್ರೊ ಮೇ 15 ರ ಒಳಗೆ ಮುಗಿಸಿದ. ಜೂನ್ 15 ಕ್ಕೆ ಆತ ಹುಬ್ಬಳ್ಳಿಗೆ ಮರಳಿದ. ಲೆ॥ ಕ॥ ನೆವಾಲ್ ಧಾರವಾಡ ಕೋಟೆಯನ್ನು ವಹಿಸಿಕೊಂಡ. ಹುಬ್ಬಳ್ಳಿ ಆಗ ಸಾಂಗಲಿಯ ಪಟವರ್ಧನರ ವಶವಿದ್ದು ಮುಂದೆ ಆತ ಅದನ್ನು ಬ್ರಿಟಿಷ್‌ರಿಗೆ ಬಿಟ್ಟುಕೊಟ್ಟ. ಈ ಪ್ರದೇಶಗಳಿಗೆ ಬ್ರಿಟಿಷರು ಮನ್ರೋನನ್ನು ಕಮಿಶನರ್ ಆಗಿ ನೇಮಿಸಿದರು.

## ಮರಾಠರ ಆಡಳಿತ

ಬ್ರಿಟಿಷರು 1818ರಲ್ಲಿ ಗೆದ್ದ ಕರ್ನಾಟಕದ ಪ್ರದೇಶಗಳಲ್ಲಿನ ಈಗಿನ ಧಾರವಾಡ ಬೆಳಗಾವಿ ವಿಜಾಪುರ ಜಿಲ್ಲೆಗಳ ಪ್ರದೇಶಗಳಿದ್ದವು. ಅಲ್ಲದೆ ಸವಣೂರು, ನರಗುಂದ, ಕಿತ್ತೂರು, ರಾಮದುರ್ಗ, ಮುಧೋಳ, ಜಮಖಂಡಿ, ಕಾಗವಾಡ, ನಿಪ್ಪಾಣಿ, ಚಿಂಚಣಿ ಮುಂತಾದ ಪ್ರದೇಶಗಳೂ, ಈಗ ಮಹಾರಾಷ್ಟ್ರದಲ್ಲಿರುವ ಸಾಂಗಲಿ, ಮಿರ್ಜಿ, ಬುಧಗಾಂವ್ (ಕಿರೇ ಮಿರ್ಜಿ)ಗಳಿಗೆ ಸೇರಿದ ಪ್ರದೇಶಗಳೂ ಸಂಸ್ಥಾನಗಳಾಗಿ ಇದ್ದವು. ಬ್ರಿಟಿಷರಿಗೆ ಒಳಪಟ್ಟು ಇದ್ದ ಪ್ರದೇಶಗಳಲ್ಲಿ ಮರಾಠರ ಕಾಲದಲ್ಲಿ ಇದ್ದ ಧಾರವಾಡ, ಹುಬ್ಬಳ್ಳಿ, ಅಗಡಿ, ಗದಗ, ಲಕ್ಷ್ಮೇಶ್ವರ, ಡಂಬಳ, ಅಮ್ಮಿನಭಾವಿ ಮುಂತಾದ ಪ್ರದೇಶಗಳ ದೇಸಾಯಿಯರೂ ಇದ್ದರು. ಕೃಷ್ಣಾ- ತುಂಗಭದ್ರಾ ನಡುವಿನ ದೋಆಬ್ ಪ್ರದೇಶವನ್ನು ಮರಾಠರು 13 ತಾಲೂಕು (ಪರಗಣಾ)ಗಳಾಗಿ ವಿಭಜಿಸಿದ್ದು ಇವನ್ನು ನೋಡಲು ಕಾಮ್‌ವೀಸ್‌ದಾರ್ ಅಥವಾ ಮಾಮಲೇದಾರನೆಂಬ ಅಧಿಕಾರಿ ಇದ್ದನೆಂದು ಡಾ॥ ಚಿಟ್ನಿಸ್ ಹೇಳಿದ್ದಾರೆ. ಇದರಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ ಇದ್ದ ತಾಲೂಕುಗಳು ನವಲಗುಂದ, ನರಗುಂದ, ನಂದವಾಡಿ (ನಲವಡಿ ?), ಧಾರವಾಡ, ಗದಗ ಮತ್ತು ಸವಣೂರು. ಧಾರವಾಡವು ಇಚಲಕರಂಜಿ ಘೋರ್ಪಡೆಗೂ ನರಗುಂದವು ಭಾವೆ ಮನೆತನಕ್ಕೂ ಜಾಗೀರಾಗಿದ್ದು ಅವು ಪೇಶ್ವೆಯ ನೇರ ಆಡಳಿತಕ್ಕೆ ಒಳಪಟ್ಟಿದ್ದವು.

ಶಿವಾಜಿಯಿಂದ ರಾಜಾರಾಮನ ಕಾಲದವರೆಗೆ ರಾಮಚಂದ್ರಪಂತ ಅಮಾತ್ಯನು ಈ ಪ್ರದೇಶದ ಆಡಳಿತಾಧಿಕಾರಿಯಾಗಿದ್ದನು. ಇಡೀ ಕನ್ನಡ ಪ್ರದೇಶ ಸುಬಾ ಕರ್ನಾಟಕ ಎನಿಸಿತ್ತು. ಪೇಶ್ವೆಯ ಕಾಲದಲ್ಲಿ ಮೊದಲು ಮೋರೋಬಾಪೂಜಿ ಸರ್‌ಸುಬೇದಾರನಾದನು. 1775ರಲ್ಲಿ ಈ. ಸ್ಥಾನಕ್ಕೆ ಯಶವಂತರಾವ್ ಸಿಂಧೆ, ಮುಂದೆ 1787ರಲ್ಲಿ ಲಕ್ಷ್ಮಣ್ ಬಾಬುರಾವ್, 1804 ರಲ್ಲಿ ತ್ರಿಂಬಕಜಿ ಡೇಂಗಳೆ ನೇಮಕಗೊಂಡರು. 1808ರಿಂದ ಆನಂದರಾವ್ ರಾಮಚಂದ್ರ ಕೆಲಕಾಲವಿದ್ದು ಡೇಂಗಳೆ ಮತ್ತೊಮ್ಮೆ ನೇಮಕಗೊಂಡು 1818ರವರೆಗೆ ಅವನೇ ಇದ್ದ. ವ್ಯಾಪಾರೀ ಪೇಟೆಗಳ ನಿರ್ವಹಣೆಗೆ ಪಟ್ಟಣಶೆಟ್ಟಿ ಎಂಬ ಸ್ಥಳೀಯ ವ್ಯಾಪಾರಿಯನ್ನು ನೇಮಿಸುತ್ತಿದ್ದು ಕಿಲ್ಲೆಗಳಿಗೆ ಕಿಲ್ಲೇದಾರನಿರುತ್ತಿದ್ದ. ಬಾಪೂಜಿ ಸಿಂಧೆ ಎಂಬ ಧಾರವಾಡದ ಕಿಲ್ಲೇದಾರನ ಹೆಸರು ಕಾಣಬರುತ್ತದೆ. ಕಸಬಾ ಅಥವಾ ಕೃಷಿ ಪ್ರಧಾನ ವಸತಿಯ ಕೇಂದ್ರಗಳಿಗೆ ಪ್ರತ್ಯೇಕ ಅಧಿಕಾರಿ ಇರುತ್ತಿದ್ದ. 1795ರಲ್ಲಿ ಹಾವೇರಿಯಲ್ಲಿ ಹಿಂದಿನ ಕಸಬಾ ಊರೇ ಅಲ್ಲದೆ ಪ್ರತ್ಯೇಕ ಪೇಟೆಯನ್ನು ('ಪೇಟ್') ಸ್ಥಾಪಿಸಿದ್ದನ್ನು ಡಾ॥ ಚಿಟ್ನಿಸ್ ಗುರುತಿಸಿದ್ದಾರೆ. ಇಲ್ಲಿ ಹೊರಊರಿನಿಂದ ಬಂದು ಆಗ ನೆಲಸಿದ ರೈತರ ಹೆಸರುಗಳೂ ಲಭ್ಯವಿವೆ. ಆದರೆ ಅದು ವ್ಯಾಪಾರೀ ಪೇಟೆಯಾಗಿತ್ತು. ಅಲ್ಲಿ ವೀರಶೈವ ಮಠ ಸ್ಥಾಪನೆಗೆ ಪೇಶ್ವೆ ನೆರವಿತ್ತ.

ಪರಗಣ, ಸೀಮೆ, ಪ್ರಾಂತ ಎಂಬ ಶಬ್ದಗಳನ್ನು ನಾನಾ ಪ್ರಸಂಗಗಳಲ್ಲಿ ಬಳಸಿದ್ದಾರೆ. 1640 ರಲ್ಲಿ ಲಕ್ಷ್ಮೇಶ್ವರ ಪರಗಣೆಯನ್ನು ಸೀಮೆಯೆಂದೂ ಕರೆದುದನ್ನು ಡಾ॥ ಚಿಟ್ನಿಸ್ ತೋರಿಸಿದ್ದಾರೆ. ಒಂದು ದಾಖಲೆಯಲ್ಲಿ ರಾಯರಹುಬ್ಬಳ್ಳಿ 'ಪರಗಣಾ' ಎಂದಿದ್ದುದು ಇನ್ನೊಂದೆಡೆ ಅದನ್ನೇ 'ಸೀಮೆ' ಎಂದಿದೆ. ಹಿಂದಿನ 'ನಾಡಗೌಡಕಿ' ಎಂಬ ಶಬ್ದವನ್ನು 'ಮಿರಾಶಿ' ಎಂದೂ ಬಳಸಿದ್ದಾರೆ. ಪರಗಣಾದ

ಕೆಳಗೆ 'ಮಹಲ್' ಅಥವಾ 'ತರಫ್' ಮತ್ತು 'ಕರಿಯಾತ್' ಎಂಬ ಭಾಗಗಳಿದ್ದುವೆಂದು ಡಾ|| ಸಾವಂತ್ ಹೇಳಿದ್ದಾರೆ. ಧಾರವಾಡ ಪರಗಣಾದಲ್ಲಿ ಧಾರವಾಡ ಮಹಲ್ ಇತ್ತು. ಅದೇ ರೀತಿ ಬೇರೆಡೆ ಇದ್ದ ತರಫ್ ಮಾರಡಗಿ, ಕರಯಾತ್ ಬೆಟಗೇರಿ ಮುಂತಾದ ಉಲ್ಲೇಖಗಳನ್ನೂ ಅವರು ಹೇಳಿದ್ದಾರೆ.

1794ರ ಧಾರವಾಡದ ಒಂದು ದಾಖಲೆಯಲ್ಲಿ ಕಿಲ್ಲೆದಾರ್ (ಬಾಪೂಜಿಸಿಂಧೆ), ಹವಾಲ್ದಾರ್ (ಬಾಪೂರಾವ್), ಸರ್ನೋಬತ್ (ಕೇದಾರ್‌ಜಿ ಪವಾರ್), ಕಾರ್ಖಾನೀಸ್ (ಹೈಬತ್‌ರಾವ್ ಶಂಕರ್), ಹೀಗೆ ಅಧಿಕಾರಿಗಳ ಸರಣಿಯೇ ಕಿಲ್ಲೆಯಲ್ಲಿ ಕಾಣಬರುತ್ತಿದೆ. ಧಾರವಾಡ ಮತ್ತು ಲಕ್ಷ್ಮೇಶ್ವರಗಳಲ್ಲಿ ಪೇಶ್ವೆಯರ ಕಾಲದ ಟಂಕಸಾಲೆಗಳೂ ಇದ್ದವು. ಈ ಕಾಲದ ಧಾರವಾಡ ಪರಗಣೆ (ಇದರಲ್ಲಿ 33 ಗ್ರಾಮ 11 ಉಪಗ್ರಾಮಗಳಿದ್ದವು)ಯ ದಾಖಲೆಗಳನ್ನು ಗಮನಿಸಿ ಡಾ|| ಚಿಟ್ನಿಸ್ ಅವರು ಹೇಳುವುದೇನೆಂದರೆ, ಕಿಲ್ಲೇದಾರನಾಗಿ ಮರಾಠಾ ಜಾತಿಯವರೂ ಹಳ್ಳಿಗಳಲ್ಲಿ ಬ್ರಾಹ್ಮಣ, ಮರಾಠಾ ಅಥವಾ ಲಿಂಗಾಯತರೂ ಅಧಿಕಾರಿಗಳಾಗಿದ್ದರು. ಪಟೇಲ (ಪಾಟೀಲ್) ಹುದ್ದೆಯಲ್ಲಿ ಲಿಂಗಾಯತ ಅಥವಾ ಮರಾಠಾ ಹಾಗೂ ಶಾನುಬೋಗ(ಕುಲಕರಣಿ)ನಾಗಿ ಬ್ರಾಹ್ಮಣರಿದ್ದು ಬಾರಾಬಲೂತಿ ಎಂಬ ಆಯಗಾರರಲ್ಲಿ ಊರಿನ ಎಲ್ಲ ವೃತ್ತಿಸಂಬಂಧಿ ಜಾತಿಗಳ ಪ್ರತಿನಿಧಿಗಳು ಇದ್ದರು. ವಿಜಯನಗರ ಮತ್ತು ಅದರ ಹಿಂದೆ ಇದ್ದ ಗ್ರಾಮಸಭೆಗಳು ಇದ್ದುವೇ ಎಂದು ಖಚಿತವಾಗದಿದ್ದರೂ ಊರಿನ ಬಗ್ಗೆ ನಿರ್ಣಯ ಕೈಕೊಳ್ಳುವಾಗ ಅಸ್ಪೃಶ್ಯ ಜಾತಿಯವರೂ ಸೇರಿ ಬಾರಾಬಲೂತಿಯನ್ನು ವಿಚಾರಿಸುವ ಸಂಪ್ರದಾಯವಿತ್ತು. ಇದು ಆದಿಲ್ ಷಾಹಿಗಳ ಕಾಲದಿಂದಲೂ ಮುಂದುವರಿದಿತ್ತು. ಬಹುಶಃ ಆಗಲೇ ಗ್ರಾಮ ಸಭೆಗಳ ಮಹತ್ವ ಕುಂದಿತ್ತು. 1754ರಲ್ಲಿ ಧಾರವಾಡದಲ್ಲಿ ಪೇಟೆ ರಚಿಸಿಕೊಳ್ಳಲು ಪೇಶ್ವೆಕೊಟ್ಟ ಕೌಲುನಾಮೆಯಂತೆ ಅನುಮತಿ ಪಡೆದವರಲ್ಲಿ ವಿರಾಟ್ ಶೇಟಿ, ರದ್ದು ಶೇಟ್ಯಾ, ಶಿವಲಿಂಗಪ್ಪ ಹುಬ್ಬಳ್ಳಿ, ಅಯ್ಯಣ್ಣ ವಹಲಿ, ಬಸವಲಿಂಗಪ್ಪ ಆಗಡಿ, ಕೊಕಣ ಅಣ್ಣಿಗೇರಿ, ವೆಂಕಣ್ಣ ಮಲಕಂದ ನೀರಗಾರ್ ಮತ್ತು ಮುದ್ದಪ್ಪ ಹಾಗೂ ಇತರರು ಎಂದು ಹೇಳಿದ್ದು ಇವರಿಗೆ ಏಳು ವರ್ಷಗಳವರಗೆ ಅಂಗಡಿ ನೆಲಗಟ್ಟಿನ ಕಂದಾಯ ವಿನಾಯತಿ ನೀಡಲಾಗಿತ್ತು. (ಇದು ಮಂಗಳವಾರ ಪೇಟೆ). ವಿರಾಟ್ ಶೇಟ್‌ಗೆ ಬಂಗಾರ, ಬೆಳ್ಳಿ ನಾಣ್ಯಗಳ ಟಂಕಸಾಲೆ ನಡೆಸಲು ಅಧಿಕಾರ ನೀಡಲಾಗಿತ್ತು. ಬರುವ ಸಾಮಾನುಗಳಿಗೆ ಒಂದು ವರ್ಷ ಸುಂಕ (ಜಕಾತ್) ವಿನಾಯತಿ ನೀಡಲಾಯಿತು. ತಮ್ಮ ಪೇಟೆಯ ನ್ಯಾಯತೀರ್ಮಾನದ ಹಕ್ಕು ವ್ಯಾಪಾರಿಗಳಿಗೆ ಇತ್ತು.

ಕೋಟೆಯಲ್ಲಿರುವ ಜನ ತಮಗೆ ಈಗಿನ ಪೇಟೆಗೆ ಹೋಗಲು ಕಷ್ಟವಾಗುವುದೆಂದು ತಿಳಿಸಲು ಕೋಟೆಯ ಈಶಾನ್ಯಕ್ಕೆ ಹೊಸದೊಂದು ಪೇಟೆ ಕಟ್ಟಿ ಅದಕ್ಕೆ ಪೇಶ್ವೆಯ ಸೋದರ ಖ್ಯಾತ ಸೇನಾನಿ ಸದಾಶಿಭಾವುವಿನ ಹೆಸರಲ್ಲಿ ಸದಾಶಿವಪೇಟ್ ಎಂದು ಹೆಸರಿಟ್ಟರು. (ಅದೇ ಈಗಿನ ರವಿವಾರಪೇಟೆ ಆಗಿದೆ).

ಧಾರವಾಡ ಪರಗಣೆಯ ಬಗ್ಗೆ ಡಾ||ಸಾವಂತ್ ಅವರ ಸಂಶೋಧನೆಗಳನ್ನು ಗಮನಿಸಿದಾಗ ಸರಕಾರವು ಧಾರವಾಡದ ವೆಂಕಟೇಶ, ಉಳವಿ ಬಸವಪ್ಪ, ನರಸಿಂಹ, ದುರ್ಗಾದೇವಿ, ಮಾರುತಿ ಮುಂತಾದ ದೇವಾಲಯಗಳಿಗೆ 'ಮೊಯಿನಿ' ಎಂಬ ದೇಣಿಗೆ (ತಸದೀಕ್) ಕೊಡುತ್ತಿದ್ದುದು ಕಾಣಬರುತ್ತದೆ. ಮೊಹರಂ ಹಬ್ಬದ ಪ್ರಯುಕ್ತ ಅಶುರ್‌ಗೆ (ಚಪ್ಪರಕ್ಕೆ) ನಾಲ್ಕು ರೂ., ಬೆಂಕಿ ಉರಿಸಲು (ಅಲಾವೆ) 2 1/2 ರೂ.ಗಳನ್ನು ಕಿಲ್ಲೆದಾರನು ಸರಕಾರದ ಖಾತೆಯಿಂದ ಕೊಟ್ಟ ವಿಚಾರ 1794ರ ದಾಖಲೆಯಿಂದ ತಿಳಿಯುತ್ತವೆ. ಮಾಳಾಪುರದ ಮಸೀದಿಗೆ ವಾರ್ಷಿಕ 12 ರೂ. ದೇಣಿಗೆ ಸರಕಾರದಿಂದ ಸಲ್ಲುತ್ತಿತ್ತು. " ಈ ಕಾಲದಲ್ಲಿ ಧಾರವಾಡದಲ್ಲಿ ವ್ಯಾಪಾರವು ಚುರುಕಾಗಿದ್ದು ಸ್ಥಳೀಯ ವ್ಯಾಪಾರಿಗಳೇ ಹೆಚ್ಚು ಕ್ರಿಯಾಶೀಲರಾಗಿದ್ದರು" ಎಂದು ಡಾ|| ಸಾವಂತ್ ಹೇಳಿದ್ದು, ಮಂಗಳವಾದ ಪೇಟೆ ಒಂದರಿಂದಲೇ 1763-64 ರಲ್ಲಿ ರೂ. 1114 ವ್ಯಾಪಾರಿ (ವೃತ್ತಿ) ತೆರಿಗೆ ಸಂಗ್ರಹವಾಗುತ್ತಿದ್ದು ಈ ಪೈಕಿ ನೇಕಾರರಿಂದ 170 ರೂ., ಕಂಚುಗಾರರಿಂದ 159 ರೂ., ಹೊಲಿಗೆಯವರಿಂದ 7 ರೂ., ಜವಳಿವ್ಯಾಪಾರಿಗಳಿಂದ 35 ರೂ., ಸುಣಗಾರರಿಂದ 28 ರೂ., ಎಂದು ಮುಂತಾಗಿ ವಿವರ ನೀಡಿದ್ದಾರೆ.

ಧಾರವಾಡ, ಹುಬ್ಬಳ್ಳಿ, ಬೆಟಗೇರಿ, ನವಲಗುಂದ, ರಾಣೆಬೆನ್ನೂರು, ಮೋಟೆಬೆನ್ನೂರು, ನರಗುಂದ, ಗದಗ, ಲಕ್ಷ್ಮೇಶ್ವರ, ಸವಣೂರು ಹಾವೇರಿಗಳು ಪೇಶ್ವೆಯರ ಕಾಲದ ಮುಖ್ಯ ವ್ಯಾಪಾರ ಕೇಂದ್ರಗಳು. ನವಲಗುಂದ ಹತ್ತಿ ವ್ಯವಸಾಯ, ಬಟ್ಟೆ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು.

ಪೇಶ್ವೆಯರ ಕಾಲದಲ್ಲಿ ಆಡಳಿತವನ್ನು ನೋಡಿಕೊಳ್ಳಲು ಮರಾಠಿ ಅಧಿಕಾರಿಗಳನ್ನು ಕಳುಹಿಸುತ್ತಿದ್ದು ಎಲ್ಲಾ ದಾಖಲೆಗಳು ಮರಾಠಿಯಲ್ಲಿ ಆದುವು. ಆದರೆ, ಪುಣೆ ಅಥವಾ ಅದರ ಪರಿಸರದಿಂದ ಬಂದ ಈ ಅಧಿಕಾರಿಗಳಿಂದ ಆಡಳಿತದಲ್ಲಿ ಮಾತ್ರ ಬಿಗುವು ಇರಲಿಲ್ಲ. ಕೇಂದ್ರ ಸರಕಾರದ ಹಿಡಿತ ಅಷ್ಟೊಂದು ಇಲ್ಲದೆ ಅಧಿಕಾರಿಗಳು ಪದವಿಯ ದುರುಪಯೋಗ, ಕರ್ತವ್ಯದ ಕಡೆ ನಿರ್ಲಕ್ಷ

ಮಾಡಿದ್ದು ಕಂಡು ಬರುತ್ತದೆ, ಎಂದು ಡಾ।। ಚಿಟ್ನಿಸ್ ಹೇಳಿದ್ದಾರೆ. ವಿಶೇಷತಃ 1800 ರ ನಂತರ, ಮುಖ್ಯವಾಗಿ ಎರಡನೇಯ ಬಾಜಿರಾಯನ ಕಾಲದಲ್ಲಿ ಈ ಪ್ರದೇಶದಲ್ಲಿ ಅರಾಜಕತೆಯೇ ಇದ್ದಂತೆ ಇತ್ತು.

ಆದರೆ 1790ರಲ್ಲಿ ಪ್ರದೇಶವನ್ನು ಸಂದರ್ಶಿಸಿದ ಮೂರ್ ಎಂಬ ಬರಹಗಾರ ಹೇಳುವಂತೆ ಧಾರವಾಡ ಊರಿನ ಪರಿಸರ ಸಮೃದ್ಧ ಪ್ರದೇಶವಾಗಿತ್ತು. ಇದಕ್ಕಿಂತ ಶ್ರೀಮಂತವಾದ ತೋಟಗಳು ಬೇರೆಡೆ ಇರಲಿಲ್ಲ. ದನಕರು ಸಮೃದ್ಧವಾಗಿದ್ದು ಮೇವು ಹುಲುಸಾಗಿತ್ತು. ಭೂಮಿಯನ್ನು ಉತ್ಕೃಷ್ಟವಾಗಿ ಕೃಷಿ ಮಾಡುತ್ತಿದ್ದರು. ಹುಬ್ಬಳ್ಳಿ ಹಸಿರಿನಿಂದ ತುಂಬಿದ್ದು ನೀರಿನ ಕೊರತೆ ಇರಲಿಲ್ಲ. ಹುಬ್ಬಳ್ಳಿ ಗಣ್ಯ ವ್ಯಾಪಾರೀ ಕೇಂದ್ರವಾಗಿತ್ತು. ಗೋವೆಯ ಜೊತೆ ಆಯಾತ ನಿರ್ಯಾತ ಸಂಬಂಧ ಹೊಂದಿತ್ತು. ಇಲ್ಲಿ ಒಳ್ಳೆಯ ಸಾಲಕೊಡಬಲ್ಲ ಸಾಹುಕಾರರು(ಬ್ಯಾಂಕರ್ಸ್) ಇದ್ದು ದೂರದ ನಗರಗಳ ಸಂಪರ್ಕ ಹೊಂದಿದ್ದರು. ಸವಣೂರಿನ ಪರಿಸರದಲ್ಲೂ ಹಳ್ಳಿಗಳೆಲ್ಲ ಸಮೃದ್ಧ ಕೃಷಿಯಿಂದ ಕೂಡಿದ್ದವು. ಮೋಟೆಬೆನ್ನೂರು ತುಂಬಾ ಚಟುವಟಿಕೆಯ ವ್ಯಾಪಾರೀ ಪೇಟೆಯಾಗಿದ್ದು ಮೈಸೂರಿನ ಜೊತೆ ಸಂಪರ್ಕ ಹೊಂದಿತ್ತು. ರಾಣೆಬೆನ್ನೂರು ಕೂಡ ಮಹತ್ವದ ವ್ಯಾಪಾರೀ ಪಟ್ಟಣವಾಗಿದ್ದು ಇದರ ಪರಿಸರದಲ್ಲಿ ವಿಶಾಲ ತೋಟಗಳೂ ತೋಪುಗಳೂ ಇದ್ದವು. ಶಾಂತಿ ಕಾಲದಲ್ಲಿ ಈ ಪ್ರದೇಶದಲ್ಲಿ ಪಶುಸಂಪತ್ತು ಪುಷ್ಕಳವಾಗಿತ್ತು. ಕುರಿಗಳು ರೂಪಾಯಿಗೆ ನಾಲ್ಕು, ಕೋಳಿಗಳು ರೂಪಾಯಿಗೆ 20 ಸಿಗುತ್ತಿದ್ದವು. ಮೀನನ್ನು ತಿನ್ನುವವರೇ ಇರಲಿಲ್ಲ. ಜೀವನಾವಶ್ಯಕ ವಸ್ತುಗಳ ಪೂರೈಕೆ ಸದಾ ವಿಪುಲವಾಗಿದ್ದು ಅವುಗಳನ್ನು ಜನ ದಾಸ್ತಾನು ಮಾಡಬೇಕಾಗಿರಲಿಲ್ಲ. 160 ಪೌಂಡ್ (80 ಸೇರು) ಜೋಳದ ಬೆಲೆ ಒಂದು ರೂಪಾಯಿ. ಆದರೆ ತರಕಾರಿ, ಹಣ್ಣುಗಳು, ಧಾನ್ಯದಷ್ಟು ವಿಪುಲವಾಗಿ ಸಿಗವು. ತೆಂಗಿನ ತೋಟ ವಿಪುಲ; ಬಾಳೆಹಣ್ಣು ಸಾಕಷ್ಟು ಲಭ್ಯ; ಅಕ್ಕಿ ದ್ವಿದಳಧಾನ್ಯ ಅಷ್ಟೊಂದಿಲ್ಲ, ಎಂದೆಲ್ಲ ವಿವರಣೆ ನೀಡಿದ್ದಾನೆ. (ಈತ ಕ್ಯಾಪ್ಟನ್ ಲಿಟ್ಲ್ ಜೊತೆ ಇದ್ದ).

## ಬ್ರಿಟಿಷರ ವಶದಲ್ಲಿ

ಬ್ರಿಟಿಷರು ಆಡಳಿತವನ್ನು ವಹಿಸಿಕೊಂಡ ಹಿನ್ನಲೆಯಲ್ಲೇ 1818ರ ಜುಲೈ ಡಿಸೆಂಬರ್ ತಿಂಗಳಲ್ಲಿ ವಾಂತಿಭೇದಿ (ಕಾಲರಾ) ಪಿಡುಗು ಆರಂಭವಾಗಿ ಜಿಲ್ಲೆಯಲ್ಲಿ ತುಂಬ ಹಾನಿಮಾಡಿತು. ಹುಬ್ಬಳ್ಳಿಯಲ್ಲಿ ಬೀಡುಬಿಟ್ಟ ಇಂಗ್ಲಿಷ್ ಸೈನ್ಯದಲ್ಲಿ ನೂರಕ್ಕೂ ಮೇಲ್ಪಟ್ಟು ಬಿಳಿಯ ಸೈನಿಕರೇ ತೀರಿಕೊಂಡರು. ಇದೇ ಕಾಲಕ್ಕೆ ಅನಾರೋಗ್ಯದಿಂದ ಬಳಲಿದ ಮನ್ರೋ ಬಳ್ಳಾರಿಗೆ ಮರಳಲು ಅವರ ಸ್ಥಾನದಲ್ಲಿ ಬಳ್ಳಾರಿಯ ಜಿಲ್ಲಾಧಿಕಾರಿಯಾಗಿದ್ದ ಚ್ಯಾಪ್ಲಿನ್ 'ಕೃಷ್ಣಾನದಿಯ ದಕ್ಷಿಣದ ಮರಾಠಾ ದೇಶದ' ಪ್ರಿನ್ಸಿಪಾಲ್ ಕಲೆಕ್ಟರ್ ಎಂದು ನೇಮಕಗೊಂಡ. ಈತ ಮುಂಬೈಯಲ್ಲಿದ್ದ ಎಲ್ಫಿನ್‌ಸ್ಟನ್‌ನ ಅಧೀನ ಅಧಿಕಾರಿಯಾದ. ಈಗಿನ ಬೆಳಗಾವಿ ವಿಜಾಪುರ, ಸೊಲ್ಲಾಪುರ ಜಿಲ್ಲೆಗಳೂ ಧಾರವಾಡ ಕೇಂದ್ರದ ಈ ಪ್ರದೇಶದಲ್ಲಿ ಸೇರಿದ್ದವು. ಹುಬ್ಬಳ್ಳಿಯಲ್ಲಿ ಜ।। ಪ್ರಿಜ್ಲರ್ ಹಾಗೂ ಧಾರವಾಡದಲ್ಲಿ ನೆವಾಲ್ ತಮ್ಮ ಸೇನೆಯೊಡನೆ ಇದ್ದರು. ಚ್ಯಾಪ್ಲಿನ್ ಬದಲಿಗೆ 1819ರಲ್ಲಿ ಥ್ಯಾಕರೆಯೇ ಜಿಲ್ಲಾಧಿಕಾರಿಯಾಗಿ ಬಂದವನು 1824ರಲ್ಲಿ ಕಿತ್ತೂರಿನಲ್ಲಿ ಚನ್ನಮ್ಮಾಜಿಯ ವಿರುದ್ಧ ಹೋರಾಟದಲ್ಲಿ ಹತನಾದ. ಕಿತ್ತೂರು ಸಂಸ್ಥಾನದ ಪ್ರದೇಶ ಈಗ ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿದೆ. 1793ರಲ್ಲಿ 285 ಗ್ರಾಮಗಳನ್ನು 4.10 ಲಕ್ಷ ರೂ. ವಾರ್ಷಿಕ ಉತ್ಪನ್ನವನ್ನೂ ಹೊಂದಿದ್ದ ಇದರ ದೇಸಾಯಿ ಮಲ್ಲಸರ್ಜ 1824 ರಲ್ಲಿ ದತ್ತಕನೊಬ್ಬನನ್ನು ಸ್ವೀಕರಿಸಿ ತೀರಿಕೊಂಡಾಗ ಆತನ ದತ್ತಪುತ್ರನನ್ನು ಬ್ರಿಟಿಷರು ಮಾನ್ಯ ಮಾಡಲಿಲ್ಲ. ಕಲೆಕ್ಟರ್ ಥ್ಯಾಕರೆ ಅದರ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡು ದೇಸಾಯಿಯ ವಾಡೆಯ ಖಜಾನೆಗೆ ಬೀಗ ಮುದ್ರೆ ಹಾಕಿ ಕಾವಲನ್ನಿಟ್ಟ. ಮಲ್ಲಿಸರ್ಜನ ಪತ್ನಿ ಚನ್ನಮ್ಮಾಜಿ ಇದನ್ನು ತೀವ್ರವಾಗಿ ಪ್ರತಿಭಟಿಸಲು ಅವಳ ಜೊತೆ ಮಾತುಕತೆಗೆಂದು ಹೋದ ಥ್ಯಾಕರೆ ತೀರ ಒರಟಾಗಿ ನಡೆದುಕೊಳ್ಳಲು ಕಿತ್ತೂರಸೇನೆ ಥ್ಯಾಕರೆ, ಬ್ಲ್ಯಾಕ್, ಸ್ಯುಯೆಲ್, ಡೈಟನ್ ಮುಂತಾದ ಏಳು ಅಧಿಕಾರಗಳನ್ನು ಕೊಂದಿತು. ಅವರ ಸಮಾಧಿಗಳು ಧಾರವಾಡದಲ್ಲಿ ಇವೆ. ಆಗ ದಕ್ಷಿಣ ವಿಭಾಗದ ಕಮಿಶನರ್ ಆಗಿದ್ದ ಚ್ಯಾಪ್ಲಿನ್ ಮುಂದೆ ಭಾರೀ ಸೈನ್ಯ ಕೂಡಿಸಿ ದೇಸಾಯಿನಿ ಚನ್ನಮ್ಮಾಜಿಯನ್ನು ಡಿಸೆಂಬರ್ (1824) ಸೋಲಿಸಿ ಬಂಧಿಸಿದ. ಕಿತ್ತೂರ ಆಡಳಿತ ಧಾರವಾಡದ ಆಡಳಿತಕ್ಕೆ ಬಂತು. 1830 ರಲ್ಲಿ ಮೇಲೆ ಹೇಳಿದ ಎಲ್ಲ ಪ್ರದೇಶವನ್ನು ಮುಂಬೈ ಪ್ರಾಂತದ ಒಂದು ಜಿಲ್ಲೆಯಾಗಿ ಮಾನ್ಯ ಮಾಡಿದರು. ಧಾರವಾಡ ಇದರ ಕೇಂದ್ರವಾಗಿತ್ತು. 1836ರಲ್ಲಿ ಬೆಳಗಾವಿಯನ್ನು ಇದರಿಂದ ಪ್ರತ್ಯೇಕಿಸಿ ಬೇರೆ ಜಿಲ್ಲೆಯಾಗಿ ಮಾಡಿದರು. 1839 ರಲ್ಲಿ ನಿಪ್ಪಾಣಿಯ ದೇಸಾಯಿಯ ಪ್ರದೇಶವನ್ನು ಬೆಳಗಾವಿ ಜಿಲ್ಲೆಗೆ ಸೇರಿಸಿದಾಗ ಅಣ್ಣಿಗೇರಿ ಪರಿಸರದ ಅವನಿಗೆ ಸೇರಿದ್ದ 13 ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಿದರು.

ಇದೇ ಕಾಲದಲ್ಲಿ 1818 ರಲ್ಲಿ ವಶಪಡಿಸಿಕೊಂಡಿದ್ದ ಧಾರವಾಡ ಪರಿಸರದ (ಕೃಷ್ಣೆಯ ದಕ್ಷಿಣದ) ಪ್ರದೇಶವನ್ನು ಕನ್ನಡ ಪ್ರದೇಶವೆಂದು ಮನಗಂಡ ಮನ್ರೋ ಇದನ್ನು ಕನ್ನಡ ಜಿಲ್ಲೆಯಾದ ಬಳ್ಳಾರಿಯ ಜೊತೆಗೆ ಮದ್ರಾಸ್ ಪ್ರಾಂತ (ಅಧಿಪತ್ಯ)ಕ್ಕೆ

ಸೇರಿಸಬೇಕೆಂದು ಸೂಚಿಸಿದ್ದ (1826). ಆದರೆ, ಈ ಪ್ರದೇಶದಲ್ಲಿ ಕೃಷ್ಣೆಯ ಉತ್ತರಕ್ಕಿರುವ ಅನೇಕ ಮರಾಠಾ ಸಂಸ್ಥಾನಿಕರ ಪ್ರದೇಶಗಳು ಇರುವುದರಿಂದ ಹಾಗೂ ಅವರಿಗೆ ಪುಣೆ, ಮುಂಬೈಗಳ ಜೊತೆ ನಿಕಟತಮ ಸಂಪರ್ಕವಿರುವುದರಿಂದ ಈ ಪ್ರದೇಶಗಳನ್ನು ದೂರದ ಮದ್ರಾಸಿಗೆ ಸೇರಿಸದೆ ಮುಂಬೈ ಅಧಿಪತ್ಯದಲ್ಲಿ ಮುಂದುವರಿಸಬೇಕೆಂಬ ನಿರ್ಣಯವಾಗಿ ಅದರಂತೆ 1830ರಲ್ಲಿ ಧಾರವಾಡ ಜಿಲ್ಲೆಯಾಯಿತು. 1829ರಲ್ಲಿ ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ಬಂಡುಹೂಡಿದ್ದ ಸಂಗೊಳ್ಳಿ ರಾಯಣ್ಣನನ್ನು ಬಂಧಿಸಿ ಏಪ್ರಿಲ್, 1830ರಲ್ಲಿ ಧಾರವಾಡಕ್ಕೆ ತರಲಾಗಿತ್ತು. ಅದೇ ವರ್ಷ ಫೆಬ್ರವರಿಯಲ್ಲಿ ಕಿತ್ತೂರ ದೇಸಾಯಿನಿ ವೀರಮ್ಮನನ್ನು ತಂದು ಕುಸುಗಲ್‌ನಲ್ಲಿ ಬಂಧನದಲ್ಲಿ ಇಡಲಾಗಿತ್ತು. ರಾಯಣ್ಣನ ವಿಚಾರಣೆ ಕೂಡ ಡಿಸೆಂಬರ್ 16 ಕ್ಕೆ ಧಾರವಾಡದಲ್ಲಿ ಆಯಿತು.

ಮರಾಠರ ಆಡಳಿತ ಕಾಲದಲ್ಲಿ ಕಂದಾಯ ಸಂಗ್ರಹವನ್ನು ಹರಾಜು ಹಾಕುತ್ತಿದ್ದು ಅನೇಕ ಸರದಾರರೂ ಶ್ರೀಮಂತರೂ ಸಾಲಕೊಡುವ ಸಾಹುಕಾರರಿಂದ ಹಣ ಪಡೆದು ಅನೇಕ ಬಾರಿ ಕಂದಾಯವಸೂಲಿಯನ್ನು ಅವರಿಗೇ ವಹಿಸುತ್ತಿದ್ದರು. ಇದರಿಂದ ಎಷ್ಟೋ ಬಾರಿ ಆಡಳಿತದ ಜವಾಬ್ದಾರಿ ಇಲ್ಲದ ಈ ಜನ ಮಾಡುವ ಸುಲಿಗೆಯಿಂದ ಪ್ರಜೆಗಳು ಬೇಸತ್ತು ಊರು ಬಿಟ್ಟಿದ್ದರು. 1818-21 ರ ನಡುವೆ ಇಡೀ ವಿಶಾಲ ಜಿಲ್ಲೆಯ 71 ಗ್ರಾಮಗಳಲ್ಲಿ ಮತ್ತೆ ವಸತಿಗೆ ಜನರನ್ನು ಆಕರ್ಷಿಸಿ ಕೃಷಿ ಕಾರ್ಯ ಆರಂಭಿಸಲಾಯಿತು. ಮತ್ತು 1821 ರಿಂದ ಈ ಭಾಗದಲ್ಲಿ ಭೂಕಂದಾಯ ನಿರ್ಣಯ (ಸೆಟ್ಲ್‌ಮೆಂಟ್) ಆರಂಭಿಸಲಾಯಿತು. ಭೂಮಿಯನ್ನು ಕ್ರಮವಾಗಿ ಅಳತೆ ಮಾಡಿದರು. 1823 ರಲ್ಲಿ ಸಾಕಷ್ಟು ಮಳೆ ಬಾರದೆ ಕ್ಷಾಮದ ಪರಿಸ್ಥಿತಿ ಸೃಷ್ಟಿಯಾಯಿತು.

1828 ರಲ್ಲಿ ಜಿಲ್ಲೆಯಲ್ಲಿ ಇದ್ದ ತಾಲೂಕುಗಳನ್ನು 21 ರಿಂದ 19 ಕ್ಕೆ ಇಳಿಸಿದರು. ಪ್ರತೀ ತಾಲೂಕಿಗೆ ಒಬ್ಬ ಅಮಲ್ದಾರ (ಮಾಮ್ಲತ್‌ದಾರ)ನಿದ್ದ. ಭೂಮಿಯನ್ನು ಅಳತೆ ಮಾಡಿ ಕಂದಾಯ ಗೊತ್ತುಪಡಿಸುವುದು ಸಾಗಿತ್ತು. 1836ರಲ್ಲಿ ಮಳೆ ಬಾರದೆ ಜನ ತೊಂದರೆಪಟ್ಟರೂ 1837 ರಲ್ಲಿ ಒಳ್ಳೆಯ ಮಳೆಬಂತು. ಆದರೆ 1838 ರಲ್ಲಿ ಮತ್ತೆ ಮಳೆ ಇಲ್ಲದ ಸ್ಥಿತಿ ಬಂತು.

ಬ್ರಿಟಿಷರ ಆಗಮನದ ಪೂರ್ವದಲ್ಲಿ ಇಡೀ ದೇಶದಲ್ಲಿ ಇದ್ದಂತೆ ಧಾರವಾಡ ಜಿಲ್ಲೆಯಲ್ಲೂ ಮನೆ ಮನೆಯಲ್ಲೂ ಹೆಂಗಸರು ನೂಲುತ್ತಿದ್ದರು. ಒಬ್ಬ ದಿನವಿಡೀ ನೂಲುವ ವ್ಯಕ್ತಿಗೆ ಹೊಲದಲ್ಲಿ ಕೆಲಸ ಮಾಡುವವನಷ್ಟೇ ಕೂಲಿ ಸಿಗುತ್ತಿತ್ತು. ಹೀಗಾಗಿ ಹೆಂಗಸರು ತಮ್ಮದೇ ದುಡಿಮೆಯಿಂದ ಸಾಮಾಜಿಕ ಸ್ಥಾನಮಾನ ಹೊಂದಿದ್ದರು. ಹತ್ತಿ ಬೆಳೆವ ನಾಡಾದ ಧಾರವಾಡ ಜಿಲ್ಲೆ ನೂಲುವ ಮತ್ತು ನೇಯ್ಗೆಯ ಉದ್ಯೋಗಕ್ಕೆ ಖ್ಯಾತವಾಗಿತ್ತು. ಆದರೆ ಇಂಗ್ಲೆಂಡ್‌ನಲ್ಲಾದ ಕೈಗಾರಿಕಾ ಕ್ರಾಂತಿ ಮತ್ತು ಅಲ್ಲಿನ ಆಯಾತ ತೆರಿಗೆ (ಟ್ಯಾರಿಫ್) ನೀತಿಯಿಂದ ಬಟ್ಟೆ ಉದ್ಯಮ ಬಹುಮಟ್ಟಿಗೆ ಹಾಳಾಯಿತು. ಮೇಲುವರ್ಗದವರು ನೂಲುವುದು ಪೂರ್ತಿ ನಿಂತುಹೋಗಿ ಮಹಿಳೆಯರು ತಮ್ಮ ದುಡಿಮೆ ಕಳೆದುಕೊಂಡು ಪುರುಷರಿಗೆ ಪೂರ್ತಿ ಆರ್ಥಿಕವಾಗಿ ಅಧೀನರಾದರು. ಆದರೆ ಧಾರವಾಡ ಜಿಲ್ಲೆಯಲ್ಲಿ ಸಿದ್ಧವಾಗುವ ರೇಷ್ಮೆ ಸೀರೆ, ಖಣ, ರುಮಾಲುಗಳಿಗೆ ವಿಶಿಷ್ಟ ದೇಶೀಯ ಮಾರುಕಟ್ಟೆ ಇದ್ದುದರಿಂದ ನೇಯ್ಗೆ ಪೂರ್ತಿ ಕಣ್ಮರೆ ಆಗಲಿಲ್ಲ. ಅಣ್ಣಿಗೇರಿ, ಉಪ್ಪಿನ ಬೆಟಗೇರಿ, ಡಂಬಳ, ಗದಗ ಬೆಟಗೇರಿ, ಗರಗ, ಹುಬ್ಬಳ್ಳಿ, ನರಗುಂದ, ನವಲಗುಂದ, ಲಕ್ಕುಂಡಿಗಳು ಕಲಾಬತ್‌ನ ಬಟ್ಟೆ, ಸೀರೆಗಳ ಉತ್ಪನ್ನದಲ್ಲಿ ಪ್ರಸಿದ್ಧವೆಂದು 1884ರ ಗ್ಯಾಸೆಟಿಯರ್ ಹೇಳಿದೆ. (ಪು.375). ಆಗ 2400 ನೇಯ್ಗೆಯವರು ಇದ್ದರು ಎಂದು ತಿಳಿಯುತ್ತದೆ. ಆದರೆ 1872ರ ನಂತರ ಸ್ಥಳೀಯರು ಕೈಯಿಂದ ನೂತ ನೂಲಿನ ಬಳಕೆ ನಿಂತಿತು ಎಂದೂ ಹೇಳಿದೆ. ಅವರೆಗೆ (1872) ನೂಲುತ್ತಿದ್ದವರು ಮುಖ್ಯವಾಗಿ ಅಸ್ಪೃಶ್ಯ ಜಾತಿಯ ಮಹಿಳೆಯರು ಎಂದಿದ್ದು ಆಗಲೇ ಚರಕದಿಂದ ನೂಲುವುದು ಮೇಲ್ಜಾತಿಯವರಿಗೆ ಲಾಭಕರವಲ್ಲವಾಗಿ ಅವರು ಅದನ್ನು ಬಿಟ್ಟು ತೀರ ಬಡವರಾದ ಅಸ್ಪೃಶ್ಯ ಜಾತಿಯವರಷ್ಟೇ ಅದನ್ನು 1872 ರವರೆಗೆ ಮಾಡುತ್ತಿದ್ದು (ಆಗ ನೂಲುತ್ತಿದ್ದವರು 1.14 ಲಕ್ಷ) ಅವರೂ ಅದನ್ನು ಕೈಬಿಟ್ಟರು. ಆದರೆ ನೇಕಾರರಿಗೆ ಆಗ ಯಂತ್ರದಿಂದ ಬರುವ ಅಗ್ಗದ ಮುಂಬೈಯ ನೂಲು ಸಿಕ್ಕು ತಮ್ಮ ವೃತ್ತಿ ಕುದುರಿದರೂ ಇದು ಅಲ್ಪಕಾಲಿಕವಾದ ಪರಿಸ್ಥಿತಿ. 1876ರ ಕ್ಷಾಮ ಅವರನ್ನು ಹಿಪ್ಪೆ ಹಿಂಡಿಮಾಡಿತು. ರೇಷ್ಮೆಯು ಸಿಗದೆ, ಉತ್ಪನ್ನವಾದ ಬಟ್ಟೆಕೊಳ್ಳುವವರಿಲ್ಲದೆ ಹೊಟ್ಟೆಪಾಡಿಗೆ ಅವರು ನೇಯ್ಗೆಯ ಸಲಕರಣೆಗಳನ್ನೂ ಮಾರಿ ಅಭಾವ ಕಾಮಗಾರಿಗಳಿಗಾಗಿ ಕೂಲಿಗಳಾಗಿ ಹೋದರು. ಸಾವಿರಾರು ನೇಕಾರರು ಉಪವಾಸಬಿದ್ದು ಸತ್ತರು. ಆದರೆ ಈ ಕಾಲದಲ್ಲಿ ಹತ್ತಿಯ ಕಾಳು ಬಿಡಿಸುವ ಜಿನ್ನಿಂಗ್ ಉದ್ಯಮದಲ್ಲಿ ಸಾಕಷ್ಟು ಮಹಿಳೆಯರು ತೊಡಗಿದ್ದರು. ಈ ಕಾಲದಲ್ಲಿ ಅಮೆರಿಕನ್ ಹತ್ತಿಯನ್ನು ಧಾರವಾಡ ಜಿಲ್ಲೆಯಲ್ಲಿ ಬೆಳೆಯುವ ಯತ್ನ ಸರಕಾರದಿಂದ ವಿಶೇಷವಾಗಿ ಪ್ರೋತ್ಸಾಹ ಪಡೆಯಿತು. ಲ್ಯಾಂಕಶಯರ್ ಗಿರಣಿಗಳಿಗೆ ಈ ಹತ್ತಿ ಬೇಕಿತ್ತು. 1858-60 ರಲ್ಲಿ 600 ಹಸ್ತ ಚಾಲಿತ ಜಿನ್‌ಗಳು ಕಾರ್ಯಾಚರಣೆಯಲ್ಲಿ ಇದ್ದವು. ಆದರೆ ಸ್ಥಳೀಯ

ಉದ್ಯಮದ ನಷ್ಟದಿಂದ ಆದ ನಿರುದ್ಯೋಗ ಇನ್ನೂ ವ್ಯಾಪಕವಾಗಿತ್ತು. (ಜಿಲ್ಲೆಯಲ್ಲಿ ಅಮೆರಿಕನ್ ಹತ್ತಿ ಬೆಳೆ 1842 ರಲ್ಲಿ ಕೇವಲ ಎರಡು ಎಕ್ರೆ ಇದ್ದುದು 1878ರಲ್ಲಿ 2.46 ಲಕ್ಷ ಎಕ್ರೆ ಆಯಿತು).

ಬ್ರಿಟಿಷ್‌ರ ಆಗಮನದ ನಂತರ ಶಿಕ್ಷಣ, ಸಾರಿಗೆ, ವೈದ್ಯಕೀಯದ ಕಡೆ ಗಮನ ಹರಿಸಿದರು. ಆವರೆಗೆ ಸಾಲಿಮಠ, ಕೂಲೀಮಠ ಎಂಬ ಹೆಸರಿನ ಖಾಸಗಿ ಶಾಲೆಗಳೇ ಇದ್ದವು. ಅಲ್ಲಿ ಶಿಕ್ಷಣ ಸಾರ್ವತ್ರಿಕವಾಗಿರಲಿಲ್ಲ. ಆದರೆ 1826ರಲ್ಲಿ ಸರಕಾರ ಧಾರವಾಡ ಮತ್ತು ಹುಬ್ಬಳ್ಳಿಗಳಲ್ಲಿ ಒಂದೊಂದು ಮರಾಠಿ ಶಾಲೆಯನ್ನು ತೆರೆಯಿತು. (ಅಲ್ಲಿ ಶುಲ್ಕವನ್ನು ತೆರಬೇಕಾಗಿತ್ತು). 1835ರಲ್ಲಿ ಈ ಎರಡೂ ಊರುಗಳಲ್ಲಿ ಒಂದೊಂದು ಕನ್ನಡ ಶಾಲೆ ತೆರೆದರು. 1836ರಲ್ಲಿ ರಾಣೆಬೆನ್ನೂರಲ್ಲಿ ಒಂದು ಕನ್ನಡ ಶಾಲೆ ತೆರೆದರು. 1848ರಲ್ಲಿ ಧಾರವಾಡದಲ್ಲಿ ಮೊದಲ ಇಂಗ್ಲೀಷ್ ಶಾಲೆ ಆರಂಭವಾಯಿತು. 1855-56 ರ ಹೊತ್ತಿಗೆ ಜಿಲ್ಲೆಯಲ್ಲಿ ಈ ಇಂಗ್ಲೀಷ್ ಶಾಲೆ ಮತ್ತು ಟ್ರೇನಿಂಗ್ ಶಾಲೆ ಸೇರಿ 14 ಶಾಲೆಗಳಾದವು. ಇದು ಮರಾಠೀ ಪ್ರದೇಶವೆಂದು ಬ್ರಿಟಿಷರಿಗೆ ನಂಬಿಕೆಯಿದ್ದ ಕಾಲದಲ್ಲಿ ಎಲಿಯಟ್ ಎಂಬ ಇಂಗ್ಲೀಷ್ ಅಧಿಕಾರಿ ಇದು ಕನ್ನಡ ಪ್ರದೇಶವೆಂದು ಹೇಳಿ, ತಾನೇ ಶ್ರಮಪಟ್ಟು ಈ ಕನ್ನಡ ಶಾಲೆಗಳನ್ನು ಮೊದಲು ತೆರೆಯಲು ಬಹಳ ಮುತುವರ್ಜಿವಹಿಸಿದನು. ಮುಂದೆ ಡೆಪ್ಯೂಟಿ ಚೆನ್ನಬಸಪ್ಪನವರೆಂಬ ಶಿಕ್ಷಣ ಇಲಾಖೆಯ ಅಧಿಕಾರಿ 1869ರಲ್ಲಿ ಧಾರವಾಡಕ್ಕೆ ಬಂದಾಗ ಇಲ್ಲಿ ಕನ್ನಡ ಶಾಲೆಗಳು ಬೆಳೆಯಲು ವಿಶೇಷ ಕಾರಣವಾಯಿತು. ಇದಲ್ಲದೆ 1867ರಲ್ಲಿ ಮೊದಲ ಬಾಲಿಕಾ ಶಾಲೆ ಧಾರವಾಡದಲ್ಲಿ ಆರಂಭವಾಗಿ ಮುಂದಿನ 15 ವರ್ಷಗಳಲ್ಲಿ ಜಿಲ್ಲೆಯಲ್ಲಿ ಅವುಗಳ ಸಂಖ್ಯೆ 11 ಕ್ಕೆ ಏರಿತು. 1856ರಲ್ಲಿ ಧಾರವಾಡದಲ್ಲಿ ಅಧ್ಯಾಪಕರಿಗೆ ತರಬೇತಿ ನೀಡುವ ನಾರ್ಮಲ್ ಶಾಲೆ ಆರಂಭವಾಯಿತು. 1861ರಲ್ಲಿ ಅದು ಬೆಳಗಾವಿಗೆ ಸ್ಥಳಾಂತರಿಸಲ್ಪಟ್ಟರೂ 1875ರಲ್ಲಿ ಅದು ಧಾರವಾಡಕ್ಕೆ ಬಂತು. ಈ ಟ್ರೇನಿಂಗ್ ಕಾಲೇಜು ಬೌದ್ಧಿಕವಾಗಿ ಒಂದು ವಿಶ್ವವಿದ್ಯಾಲಯದಂತೆ ಆಗ ಕೆಲಸ ಮಾಡಿತು. ಕನ್ನಡ ಅಧ್ಯಾಪಕರ ತರಬೇತಿಗೆ ವಿಶೇಷ ಗಮನ ನೀಡಿತು. ರಾಷ್ಟ್ರೀಯ ಜಾಗೃತಿ, ಕನ್ನಡ ಭಾಷೆಯ ಬಗ್ಗೆ ಜಾಗೃತಿ, ಪುಸ್ತಕಗಳ ಲೇಖನ, ಪತ್ರಿಕೋದ್ಯಮ, ರಂಗಭೂಮಿ ಹಾಗೂ ಸಂಗೀತದಂಥ ಚಟುವಟಿಕೆಗಳಿಗೆಲ್ಲ ಈ ಸಂಸ್ಥೆಯೇ ಸ್ಫೂರ್ತಿ ನೀಡಿತೆಂದು ಹೇಳಬಹುದು. (ಶಿಕ್ಷಣದ ವಿಸ್ತರಣ ಬಗ್ಗೆ ಅಧ್ಯಾಯ 13 ರಲ್ಲಿ ನೋಡಿ). ಇದೇ ಕಾಲಕ್ಕೆ ಧಾರವಾಡಕ್ಕೆ ಬಂದ (1836) ಬಾಸೆಲ್ ಮಿಶನ್ ತನ್ನದೇ ಆ್ಯಂಗ್ಲೊ ವರ್ನಾಕ್ಯುಲರ್ ಶಾಲೆಗಳನ್ನು ತೆರೆಯಿತು. ಶಿಕ್ಷಣದ ಬಗ್ಗೆ ಆಸ್ಥೆಯುಳ್ಳ ಹೆಬಿಕ್, ಮೋಗ್ಲಿಂಗ್, ಕಿಟೆಲ್, ಝಿಗ್ಲರ್, ಉತ್ತಂಗಿ ಚೆನ್ನಪ್ಪ ಮುಂತಾದವರ ಪ್ರಯತ್ನದಿಂದ ಶೈಕ್ಷಣಿಕ ಮತ್ತು ಬೌದ್ಧಿಕ ಕ್ಷೇತ್ರದಲ್ಲಿ ಹೊಸಗಾಳಿ ಬೀಸಿತು.

1848ರಲ್ಲಿ ಆರಂಭವಾದ ಧಾರವಾಡದ ಇಂಗ್ಲೀಷ್ ಶಾಲೆ ಜಿಲ್ಲೆಯಲ್ಲಿ ಅಂದೊಂದೇ ಇತ್ತು. ಬಾಸೆಲ್ ಮಿಶನ್‌ನವರು 1863ರಲ್ಲಿ ಒಂದು ಹೈಸ್ಕೂಲನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಬೇರೆ ಹೈಸ್ಕೂಲು ಜಿಲ್ಲೆಯಲ್ಲಿ ಇರಲಿಲ್ಲ. ಈ ಎರಡು ಸಂಸ್ಥೆಗಳಿಂದಾಗಿ ಜಿಲ್ಲೆಯ ವಿವಿಧ ತಾಲೂಕುಗಳ ದೇಸಾಯರು, ದೇಶಪಾಂಡೆಯವರು, ನಾಯಕರು, ಮುಂತಾದ ಶ್ರೀಮಂತ ಜಮೀನುದಾರರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಧಾರವಾಡದಲ್ಲಿ ಬಂದು ಮನೆಮಾಡಿ ನೆಲಸುವಂತಾಯಿತು. ಇವರೇ ಧಾರವಾಡದಲ್ಲಿ ನಡೆವ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಚಟುವಟಿಕೆಗಳಿಗೆ ನೀರೆರೆಯುವ ಉತ್ಸಾಹಿಗಳಾಗಿ ಧಾರವಾಡ ಉತ್ತರ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವಾಗಿ (ರಾಜಾಶ್ರಯವಿರದಿದ್ದರೂ) ಬೆಳೆಯಲು ಸಾಧ್ಯವಾಯಿತು. ಧಾರವಾಡದಲ್ಲಿದ್ದ ಮುರಘಾಮಠ, ಮುಂದೆ ಬೆಳೆದ ಸಾಂಸ್ಕೃತ ಪಾಠಶಾಲೆ ಮುಂತಾದವು ಇದಕ್ಕೆ ಪೋಷಕವಾದವು.

ಬ್ರಿಟಿಷರು ಬಂದಾಗ ಆರಂಭಿಸಿದ ಭೂಕಂದಾಯ ನಿರ್ಣಯದ ಸೆಟ್ಲ್‌ಮೆಂಟ್ ಮೊದಲ ಸುತ್ತು 1851 ರ ಸುಮಾರಿಗೆ ಮುಗಿಯಿತು. ಇದಲ್ಲದೆ 1841 ರಿಂದ 1855 ರವರೆಗೆ ಪಕ್ಕಾ ಸರ್ವೇಕ್ಷಣೆ ಆಯಿತು. ಇದರಿಂದ ಭೂ ಮಾಲಿಕರ ಸಾಲದ ಹೊರೆ ಕಡಿಮೆಯಾಯಿತು. ಪಟ್ಟಣಗಳ ಹತ್ತಿರವಿರುವ ಭೂಮಿಯ ಮೌಲ್ಯ ಹೆಚ್ಚಿತು. ರೈತರು ಹೆಚ್ಚು ದನಕರುಗಳನ್ನು ಸಾಕಲು ಸಾಧ್ಯವಾಗಿ, ಭೂಮಿಗೆ ಹೆಚ್ಚಿನ ಗೊಬ್ಬರ ಸಿಕ್ಕುವಂತಾಯಿತು. ಕಂದಾಯ ಬಾಕಿ ಇಲ್ಲದಂಥ ಸ್ಥಿತಿ ಬಂತು. 1840ರ ಕಂದಾಯದ ಆದಾಯಕ್ಕಿಂತ 1854 ರ ಆದಾಯ ಹೆಚ್ಚಿತ್ತಲ್ಲದೆ, 1840-41ರಲ್ಲಿ ಕಂದಾಯ ಬಾಕಿ 21,843 ರೂ ಇದ್ದು 1854-55 ರಲ್ಲಿ ರೂ.166 ಕ್ಕೆ ಇಳಿಯಿತು. ಇದೆಲ್ಲವೂ ಆಗಿನ ಸರಕಾರ ಮಾಡಿರುವ ವರದಿ. 1843 ರಲ್ಲಿ ಕೃಷಿಪ್ರದೇಶ ಜಿಲ್ಲೆಯಲ್ಲಿ 587,693 ಎಕ್ರೆ ಇದ್ದುದು 1855-56 ರಲ್ಲಿ 10,76,350 ಎಕ್ರೆ ಆಯಿತು ಎಂದೂ ಈ ವರದಿ ಹೇಳುತ್ತದೆ (ಧಾರವಾಡ ಜಿಲ್ಲೆ ಗ್ಯಾಸೆಟಿಯರ್ 1884, ಪು.525-27) (ಈ ಎಲ್ಲ ಅಂಕೆ ಸಂಖ್ಯೆಗಳು ಬ್ರಿಟಿಷರ ನೇರ ಆಡಳಿತಕ್ಕೆ ಸಂಬಂಧಿಸಿವೆ. ಕುಂದಗೋಳ, ಶಿರಹಟ್ಟಿ, ಗುಡಗೇರಿ, ಲಕ್ಷ್ಮೇಶ್ವರ ಪರಿಸರದ ಸುಮಾರು ನೂರಕ್ಕೂ ಮೇಲ್ಪಟ್ಟು ಗ್ರಾಮಗಳೂ 4-5 ಪಟ್ಟಣಗಳೂ ಸೇರಿಲ್ಲ). ಆದರೆ 1852 ರಲ್ಲಿ ನೇಮಿಸಲ್ಪಟ್ಟ

ಇನಾಂ ಕಮಿಶನ್ ಅನೇಕ ಜಮೀನ್ದಾರರ ಇನಾಮುಗಳನ್ನು ಕಸಿದುಕೊಂಡು ಕಾಲಕ್ರಮದಲ್ಲಿ ನಾನಾ ರೀತಿಯ ಅಸಮಾಧಾನಗಳು ಹೊಗೆಯಾಡಲು ದಾರಿಯಾಯಿತು. ಮುಂದೆ 1874 ರಿಂದ ಸರ್ವೆಯ ಪರಿಷ್ಕರಣ (ರಿವಿಜನ್ ಸರ್ವೆ) ಆರಂಭವಾಯಿತು (ಈ ಬಗ್ಗೆ ಅಧ್ಯಾಯ ಎಂಟು ನೋಡಿ).

ಈ ಅವಧಿಯಲ್ಲಿ 1851 ರ ಕಾನೂನಿನಂತೆ ಹುಬ್ಬಳ್ಳಿ (1855), ಧಾರವಾಡ (1856), ರಾಣೆಬೆನ್ನೂರು (1858), ಗದಗ ಬೆಟಗೇರಿ (1859), ನರಗುಂದ (1871), ನವಲಗುಂದ (1870) ಈ ಊರುಗಳಲ್ಲಿ ಪುರಸಭೆಗಳು ಆರಂಭ ಆದುವು. 1873 ರ ಕಾನೂನಿನಂತೆ ಬ್ಯಾಡಗಿ, ಹಾವೇರಿ, ಹಾನಗಲ್‌ಗಳಲ್ಲಿ ಪುರಸಭೆಗಳಾಗಿ, ಮುಂದೆ ಹಾನಗಲ್ ಪುರಸಭೆ ರದ್ದಾಯಿತು.

'ಧಾರವಾಡ ವೃತ್ತ' ವೆಂಬ ಮರಾಠೀ ಪತ್ರಿಕೆ ಧಾರವಾಡದ ಮೊದಲ ಪತ್ರಿಕೆ. 'ಭಾವಾ' ಎಂಬುದು ಇನ್ನೊಂದು. ಅನಂತರ 'ಚಂದ್ರೋದಯ' (1877) ವೆಂಬ ಜಿಲ್ಲೆಯ ಮೊದಲ ಕನ್ನಡ (ಕಲ್ಲಚ್ಚಿನ) ಪತ್ರಿಕೆ ಆರಂಭವಾಯಿತು. 1818ರ ನಂತರ 1865-66 ರಲ್ಲಿ ಜಿಲ್ಲೆಯಲ್ಲಿ ಕಾಲೆರಾ ಹರಡಿ 10,024 ಜನ ಸತ್ತರು. 1869ರಲ್ಲಿ ಇನ್ನೊಮ್ಮೆ ಕಾಲೆರಾ ಬಂದು 1,459 ಜನ ತೀರಿಕೊಂಡರು. ಈ ಪೈಕಿ ಧಾರವಾಡ ಊರಲ್ಲೇ 305 ಜನ ಸತ್ತರು. 1876-78 ರ ಕ್ಷಾಮವು ಜಿಲ್ಲೆಯಲ್ಲಿ ಉಗ್ರವಾಗಿತ್ತು. ಸಾವಿರಾರು ಜನರ ಸಾವಿಗೆ ಕಾರಣವಾಯಿತು. ಕಾಲೆರಾ ಕೂಡ ಇದೇ ಕಾಲಕ್ಕೆ ಹರಡಿತು. ಸ್ಥಳೀಯ ಕೈಮಗ್ಗ ಮುಂತಾದ ಕೈಗಾರಿಕೆಗಳು ಮುಕ್ಕಾದವು. 1830ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ಸಿವಿಲ್ ಆಸ್ಪತ್ರೆಯ ವಿನಾ ಗದಗ (1864) ಹುಬ್ಬಳ್ಳಿ (1859) ಹಾವೇರಿಗಳಲ್ಲಿ (1874) ಅನುದಾನಿತ ಆಸ್ಪತ್ರೆಗಳಾದವು.

**ನರಗುಂದ ಬಂಡಾಯ**

ಬ್ರಿಟಿಷರ ಆಡಳಿತಕ್ಕೆ ಜಿಲ್ಲೆಯಲ್ಲಿ ತೀವ್ರ ಸಶಸ್ತ್ರ ಪ್ರತಿಭಟನೆ 1858 ರಲ್ಲಿ ಕಾಣಿಸಿತು. ನರಗುಂದದಲ್ಲಿ ಪೇಶ್ವೆಯ ಕಾಲಕ್ಕೂ ಹಿಂದಿನಿಂದ ಛತ್ರಪತಿ ಶಾಹುವಿನಿಂದ (1711) ನೇಮಿಸಲ್ಪಟ್ಟ ಭಾವೆ ಮನೆತನದ ಜಾಗಿರ್ದಾರರು ನರಗುಂದದಲ್ಲಿ ಇದ್ದರು. ರಾಮರಾವ್ ಭಾವೆಗೆ 1711 ರಲ್ಲಿ ಶಾಹು ಒಂದು ಗ್ರಾಮ ಇನಾಂ ಕೊಟ್ಟಿದ್ದು ಸವಣೂರು ನವಾಬನು ಕೊಣ್ಣೂರು ತರಫ್ ಅನ್ನೂ ಕೊಟ್ಟಿದ್ದನು. ರಾಮರಾಯನು ರಾಮದುರ್ಗದಲ್ಲಿ (ಈಗಿನ ಬೆಳಗಾವಿ ಜಿ.।।) ಇದ್ದರೆ ಅವನ ಸೋದರ ಬಳವಂತರಾವ್ ನರಗುಂದದಿಂದ ಆಡಳಿತ ನಡೆಸುತ್ತಿದ್ದು (1760) ನಡುವೆ 1740-42 ರಲ್ಲಿ ಮಧ್ಯೆ ಎರಡನೇಯ ದಾದಾಜಿರಾವ್ ಆಡಳಿತ ನಡೆಸುತ್ತಿದ್ದ. ಮುಂದೆ ರಾಮದುರ್ಗದಲ್ಲಿ ಅನೇಕ ಕಲಹ, ರಕ್ತಪಾತಗಳಾಗಿ 1760-63 ರ ನಡುವೆ ಭಾಸ್ಕರರಾವ್ ಭಾವೆ ನರಗುಂದದ ಜಾಗಿರ್ದಾರನಾಗಿದ್ದ. ಅವನ ಮಗ ವೆಂಕಟರಾವ್ (1773-85) ನರಗುಂದದಲ್ಲಿ ಇದ್ದು ಟಿಪ್ಪುವಿನ ಕಾಲದಲ್ಲಿ ನರಗುಂದವನ್ನು ಕಳಕೊಂಡರೂ 1792 ರಲ್ಲಿ ಪೇಶ್ವೆ ಸವಾಯ್ ಮಾಧವರಾಯನು ಅವನಿಗೂ ಅವನ ಸಂಬಂಧಿ ನರಗುಂದ ರಾಮರಾವ್ ಭಾವೆಗೂ ಮತ್ತೆ ಜಾಗೀರನ್ನು ಪ್ರದಾನ ಮಾಡಿದ. 1809 ರಲ್ಲಿ ಪೇಶ್ವೆ ಎರಡನೇಯ ಭಾಜೀರಾಯನು ನರಗುಂದ ಮತ್ತು ರಾಮದುರ್ಗಗಳ ನಡುವೆ ಪ್ರದೇಶಗಳ ವಿಭಜನೆ ಮಾಡಿದಾಗ ನರಗುಂದದ ವೆಂಕಟರಾಯನ ಮಗ ಮೂರನೇಯ ದಾದಾಜಿರಾವ್ ಭಾವೆಗೆ (1817-42) 33 ಗ್ರಾಮಗಳು ಸಂದವು. ಆತನ ಮಗ ಎರಡನೇಯ ಭಾಸ್ಕರರಾವ್ (1842-58) ಬ್ರಿಟಿಷರ ವಿರುದ್ಧ ಬಂಡೆದ್ದ ಪ್ರಸಂಗ ಪ್ರಸಿದ್ಧ. ಬ್ರಿಟಿಷರು, ಪಟವರ್ಧನರಂತೆ ಈತನಿಗೂ ತನ್ನ ಸಂಸ್ಥಾನವನ್ನು ಮುಂದುವರಿಯಗೊಟ್ಟಿದ್ದರು.

ಭಾಸ್ಕರರಾವ್ ಅಥವಾ ಬಾಬಾಸಾಹೇಬ್ ಭಾವೆಯು ತೀರ ಬುದ್ಧಿವಂತನೆಂದೂ 3-4 ಸಾವಿರ ಸಂಸ್ಕೃತ ಕೃತಿಗಳನ್ನುಳ್ಳ ಪುಸ್ತಕ ಭಂಡಾರವನ್ನು ಪಡೆದಿದ್ದನೆಂದೂ ಬ್ರಿಟಿಷ್ ದಾಖಲೆಗಳು ಈತನ ಬಗ್ಗೆ ಹೇಳಿವೆ. 1846ರಲ್ಲಿ ಈತನು ದತ್ತಕ ಪಡೆಯಲು ಬ್ರಿಟಿಷರ ಅನುಮತಿ ಪಡೆಯಲು ಯತ್ನಿಸಿ ವಿಫಲನಾಗಿ ಬ್ರಿಟಿಷರ ವಿರುದ್ದ ಕೆಂಡಕಾರ ತೊಡಗಿದನು. ಗದಗ ತಾಲೂಕಿನ ಮುಂಡರಗಿಯ ಪಾರಂಪರಿಕ ಜಿಲ್ಲಾಧಿಕಾರಿ (ತಹಶಿಲ್ದಾರ) ಭೀಮರಾವ್ ನಾಡಗೀರ್ ಮತ್ತು ಸೊರಟೂರಿನ ದೇಶಮುಖನೂ ಅವನ ಸ್ನೇಹಿತರಾಗಿದ್ದರು ಎಂದು ಬ್ರಿಟಿಷ್ ದಾಖಲೆಗಳು ಹೇಳುತ್ತವೆ. ನರಗುಂದ/ರಾಮದುರ್ಗ ಆಗ ಬ್ರಿಟಿಷರ ವಶವಿದ್ದ ಆನೆಗೊಂದಿ ಹಾಗೂ ಇನ್ನೂ ಅನೇಕ ದೇಸಾಯಿಗಳೂ ಬಂಡಾಯದ ವಿಚಾರ (1857ರ ಮೇ ಯಲ್ಲಿ ಉತ್ತರ ಭಾರತದಲ್ಲಿ ಆರಂಭ ಆದುದು)ದಲ್ಲಿ ಇದ್ದರೆಂಬ ಗುಮಾನಿ ಸರಕಾರಕ್ಕೆ ಇದ್ದರೂ 1857 ಮತ್ತು 1858 ಆರಂಭದ ತಿಂಗಳುಗಳು ಏನು ಘಟನೆಗಳಿಲ್ಲದೇ ಸಂದವು ಎಂದು ಬ್ರಿಟಿಷ್ ದಾಖಲೆಗಳು

ಹೇಳಿವೆ. ಶಿರಹಟ್ಟಿ ಮತ್ತು ಹಮ್ಮಿಗ್ಗಿಯ ದೇಸಾಯಿ ಕೆಂಚನಗೌಡ ಇವರ ಜೊತೆ ಸೇರಿದ್ದು ಅವನು ಅಪಾರ ಶಸ್ತ್ರಾಸ್ತ್ರ ಸಂಗ್ರಹಿಸಿದ್ದ. ಗೋವನಗೊಪ್ಪದ ದೇಸಾಯಿ ಕೂಡ ಇವರ ಒಳಸಂಚಿನಲ್ಲಿದ್ದ. ನಾನಾಸಾಹೇಬ ಪೇಶ್ವೆ ಬ್ರಹ್ಮಾವರ್ತ (ಕಾನಪುರದಿಂದ) ಬರೆದ ಬಂಡಾಯಕ್ಕೆ ಪ್ರೇರಣೆ ನೀಡುವ ಪತ್ರದ ಪ್ರತಿಗಳು ಮುಂಡರಗಿ ಭೀಮರಾಯನ ವಶದಲ್ಲಿದ್ದು ಮುಂದೆ ಬ್ರಿಟಿಷರಿಗೆ ದೊರೆತಿವೆ. ಡಂಬಳ ದೇಸಾಯಿಯ ನೆರವನ್ನು ಬಾಬಾಸಾಹೇಬನು ಕೇಳಿದ್ದನಲ್ಲದೆ ತೊರಗಲ್‌ನ ಜನ ಬಂಡೇಳುವರೆಂದು ನಿರೀಕ್ಷಿಸಿದ್ದ.

ತನ್ನಲ್ಲಿ ಇರುವ ಎಲ್ಲ ಶಸ್ತ್ರಾಸ್ತ್ರಗಳನ್ನು ಫಿರಂಗಿಗಳನ್ನೂ ಧಾರವಾಡಕ್ಕೆ ಕಳುಹಿಸಬೇಕೆಂದು ಬ್ರಿಟಿಷ್ ಕಲೆಕ್ಟರ್ ಓಗಿಲ್ವಿ ಬಾಬಾಸಾಹೇಬನಿಗೆ ಆದೇಶ ನೀಡಿದ. ಅದರಂತೆ ಬಂಡಿಗಳಲ್ಲಿ ಹೇರಿ ಶಸ್ತ್ರಾಸ್ತ್ರ ಮದ್ದು ಗುಂಡನ್ನು ಮೇ 7ಕ್ಕೆ ಸಾಗಿಸುವಾಗ ದಾರಿಯಲ್ಲಿ ಜಗಾಪುರದಲ್ಲಿ ಅವು ಲೂಟಿಯಾದುವೆಂದು ತಿಳಿಸಿದ ಬಾಬಾಸಾಹೇಬ ವಾಸ್ತವವಾಗಿ ತಾನೇ ಅದನ್ನು ಲೂಟಿಮಾಡಿಸಿದ. ಮೂರು ದೊಡ್ಡ ಫಿರಂಗಿಗಳನ್ನು ಮಳೆಯ ಕಾರಣ ಸಾಗಿಸಲು ಸ್ವಲ್ಪ ಕಷ್ಟವೆಂದು ನೆಪ ಹೇಳಿ ತಾನೇ ಇರಿಸಿಕೊಂಡು ಮುಂದೆ ಅದನ್ನು ತನ್ನ ಕೋಟೆಯ ಮೇಲೆ ಏರಿಸಿದ (ಮೇ 28 ). ಈ ವಿಚಾರ ಅಂದು ವರದಿಮಾಡಿದ ನವಲಗುಂದದ ಮಾಮಲತ್‌ದಾರನು ತನ್ನ ಖಜಾನೆಯಲ್ಲಿನ ಹಣವನ್ನು ಹಿಂದಿನ ದಿನ ಧಾರವಾಡಕ್ಕೆ ಕಳುಹಿಸಿದ್ದಾಗಿ ತಿಳಿಸುತ್ತಾನೆ.

**ಮುಂಡರಗಿ ಭೀಮರಾಯ**

ಶಿರಹಟ್ಟಿಯ ಕೆಂಚನಗೌಡನ ಹಮ್ಮಿಗ್ಗಿಯಲ್ಲಿರುವ ವಾಡೆಯಲ್ಲಿ ಶಸ್ತ್ರಾಸ್ತ್ರ ಸಂಗ್ರಹ ಮಾಡಲಾಗಿದೆಯೆಂಬ ವಾರ್ತೆ ತಿಳಿದು ಡಂಬಳದಿಂದ ಚೀಫ್‌ಕಾನ್‌ಸ್ಟೇಬಲ್ ಒಬ್ಬನನ್ನು ಹಮ್ಮಿಗ್ಗೆಗೆ ಕಳುಹಿಸಿದರು. ಅಲ್ಲಿ ಅಪಾರ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳ ಸಂಗ್ರಹವಿರುವುದನ್ನು ನೋಡಿ ಡಂಬಳದಿಂದ ಹೋದ ಬ್ರಿಟಿಷ್ ನೌಕರ ಅದನ್ನೆಲ್ಲ ವಾಡೆಯಲ್ಲಿ ಕೂಡಿಹಾಕಿ ಅದಕ್ಕೆ ಬೀಗಮುದ್ರೆ ಮಾಡಿ, ಅಲ್ಲಿ ಪಹರೆ ನಿಲ್ಲಿಸಿ ಧಾರವಾಡಕ್ಕೆ ವರದಿಮಾಡಿದ. ಇದನ್ನು ತಿಳಿದ ಮುಂಡರಗಿ ಭೀಮರಾಯನು* (ಈತನು ಹಿಂದೆ ತಹಶೀಲ್ದಾರನಾಗಿ ಬ್ರಿಟಿಷ್ ಸರಕಾರದ ನೌಕರಿಯಲ್ಲಿ ಹರಪನಹಳ್ಳಿ, ಬಳ್ಳಾರಿಗಳಲ್ಲಿ ಇದ್ದು 1854 ರಲ್ಲಿ ವಜಾ ಮಾಡಲ್ಪಟ್ಟಿದ್ದ; ಆತ ವಿದ್ಯಾವಂತನಾಗಿದ್ದು ಇಂಗ್ಲೀಷ್ ಭಾಷೆ ಬಲ್ಲವನು) ಪಹರೆಯವನನ್ನು ಕೊಂದು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಡಂಬಳದ ಖಜಾನೆಯ ಮೇಲೆ ದಾಳಿ ಮಾಡಿದ. ಅಲ್ಲಿದ್ದ ಹಣವನ್ನು ಮೊದಲೇ ಗದಗಿಗೆ ಕಳುಹಿಸಿದ್ದರು. ಆನೆಗೊಂದಿಯ ಜಾಗಿರ್ದಾರನೂ ಈತನ ಜೊತೆ ಸೇರುವನೆಂದು ನಿರೀಕ್ಷೆ ಇತ್ತು. ಹೆಚ್ಚುಜನ ಅವರ ಜೊತೆ ಸೇರಲು (300-400 ಜನ) ಇವರು ಗದಗನ್ನು ಆಕ್ರಮಿಸಿ ಅಂಚೆ ಮತ್ತು ತಂತಿ ಕಛೇರಿಯನ್ನು ಸುಲಿಗೆ ಮಾಡಿದರು. ಅಲ್ಲಿಗೆ ಪೋಲೀಸ್ ಪಡೆ ಬರುತ್ತಿದೆಯೆಂದು ತಿಳಿದು ಕೆಂಚನಗೌಡನೂ ಭೀಮರಾಯನೂ ಕೊಪ್ಪಳಕ್ಕೆ ಸಾಗಲು ಆ ಊರಲ್ಲಿ ಆಸರೆಪಡೆದಿದ್ದ ಭೀಮರಾಯನ ಇಬ್ಬರು ಹೆಂಡಿರನ್ನು ಮಕ್ಕಳನ್ನು ಕೊಪ್ಪಳದ ತಹಶಿಲ್ದಾರನು ತನ್ನ ವಶಕ್ಕೆ ತೆಗೆದುಕೊಂಡನು. ಜೂನ್ 30 ಕ್ಕೆ ಭೀಮರಾವ್ ಹಾಗೂ ಕೆಂಚನಗೌಡ ಕೊಪ್ಪಳದ ಕೋಟೆಯನ್ನು ವಶಪಡಿಸಿಕೊಂಡರು.

ಬಳ್ಳಾರಿ, ರಾಯ್ಚೂರು, ಧಾರವಾಡ ಮತ್ತು ಹೈದರಾಬಾದ್‌ಗಳಿಂದ ಬ್ರಿಟಿಷರ ಸೈನ್ಯವನ್ನು ಕೊಪ್ಪಳಕ್ಕೆ ನುಗ್ಗಿಸಿದರು. ಮೇಜರ್ ಹ್ಯೂಸ್ ನೇತೃತ್ವದಲ್ಲಿ ಮೇ 31 ಕ್ಕೆ ಸೈನ್ಯ ಜಮಾಯಿಸಿ ಕೋಟೆ ಸುತ್ತು ನಿಲ್ಲಿಸಿದರು. ಕೋಟೆಯ ಕಾವಲುಗಾರ ಭೀಮರಾಯನನ್ನು ವಂಚಿಸಿ ಬಾಗಿಲು ತೆಗೆಯಲು, ಈ ವಾರ್ತೆ ಕೇಳಿದ ಕೆಂಚನಗೌಡ ಮತ್ತು ಭೀಮರಾವ್ ಹೆಬ್ಬಾಗಿಲ ಬಳಿ ಬಂದು ವಂಚಕರನ್ನು ಕಡಿದೊಗೆದು ಬ್ರಿಟಿಷರ ಸೈನ್ಯವನ್ನು ಎದುರಿಸಲು ಹೊರನುಗ್ಗಿ ಹೋರಾಟ ನಡೆಸಿದರು. ಕೆಲ ತಾಸುಗಳ ಘರ್ಷಣೆಯ ನಂತರ ಕೋಟೆಯಲ್ಲಿನ ಮದ್ದುಗುಂಡು ತೀರಲು, ಭೀಮರಾವ್ ಕೆಂಚನಗೌಡನನ್ನು ಕೊಂದು ತಾನೂ ಗುಂಡು ಹಾಕಿಕೊಂಡನೆಂದು ಹೇಳಲಾಗುತ್ತದೆ. ಮುಂದೆ ಜೂನ್ 1ರ ಮಧ್ಯಾಹ್ನ 3ಕ್ಕೆ ಇಡೀ ಕೋಟೆ ಬ್ರಿಟಿಷ್ ಸೈನ್ಯದ ವಶವಾಗಿ 150 ಜನ ಬಂಡಾಯಗಾರರು

---

* ಸುಮಾರು 70 ಜನರನ್ನು ಒಟ್ಟುಗೂಡಿಸಿ ಹಮ್ಮಿಗ್ಗಿಗೆ ಹೋಗಿ ಭೀಮರಾಯನು 1857 ರಲ್ಲೇ ಬಂಡಾಯ ಹೂಡಲು ನಿರ್ಣಯಿಸಿ ಡಂಬಳ ಪರಿಸರದಲ್ಲಿ ಕೆರೆ ತೋಡಿಸುವ ನೆಪದಲ್ಲಿ 300-400 ಜನರನ್ನು ಕೂಡಿಸಿದ್ದಾನೆಂದು ಬಳ್ಳಾರಿ ಜಿಲ್ಲಾಧಿಕಾರಿಯಿಂದ ಓಗಿಲ್ವಿಗೆ ತಂತಿ ಬಂದಿರಲು (1.8.1857) ಕಲೆಕ್ಟರ್ ಓಗಿಲ್ವಿಯು ಭೀಮರಾಯನನ್ನು ಸೊರಟೂರು ದೇಸಾಯಿಯನ್ನು ಧಾರವಾಡಕ್ಕೆ ಕರೆಸಿರಲು ಇಬ್ಬರೂ ಅತ್ಯಂತ ಚತುರತೆಯಿಂದ ಸರಕಾರಕ್ಕೆ ತಾವು ನಿಷ್ಠರೆಂದು ತೋರಿಸಿಕೊಂಡರು. ಮುಂದೆ ಎಂಟುತಿಂಗಳು ಯಾವುದೇ ವಿಧದ ಘಾತಕ ಚಟುವಟಿಕೆಯ ಲಕ್ಷಣಗಳನ್ನು ಅವರುಗಳು ತೋರಿರಲಿಲ್ಲ ಎಂದು ಹೈದರಾಬಾದ್ ಸರಕಾರದ ವಶದಲ್ಲಿದ್ದ ದಾಖಲೆಗಳು ಹೇಳುತ್ತವೆ (ಫ್ರೀಡಂ ಸ್ಟ್ರಗ್ಲ್ ಇನ್ ಹೈದರಾಬಾದ್, ಪು.109-111.

ಬಂಧಿತರಾದರು. ಭೀಮರಾಯನು ಯಾವುದೇ ಪಾಳಯಪಟ್ಟಿಗೆ ಸಂಬಂಧಪಟ್ಟವನಾಗಿರದೆ ವಿದ್ಯಾವಂತ ನಾಗರಿಕನಾಗಿದ್ದು ನಿಸ್ವಾರ್ಥ ಭಾವದಿಂದ ಹೋರಾಡಿ, ಶರಣಾಗದೆ ಪ್ರಾಣಾರ್ಪಣೆ ಮಾಡಿದನು.

**ನರಗುಂದದ ಪತನ**

ಇತ್ತ ಬಾಬಾಸಾಹೇಬನ ಯುದ್ಧ ಸಿದ್ಧತೆಯ ವಾರ್ತೆ ಕೇಳಿ ದಕ್ಷಿಣ ಭಾಗದ ಕಮಿಶನರ್ ಮ್ಯಾನ್ಸನ್ ಮಹಾರಾಷ್ಟ್ರದ ಕುರುಂದವಾಡದಲ್ಲಿ ಮೇ 20 ರಂದು ಇದ್ದವನು ರಾಮದುರ್ಗಕ್ಕೆ ಬಂದು ರಾಮದುರ್ಗದ ಭಾವೆಗೆ ನರಗುಂದದವರ ಜೊತೆಗೆ ಸೇರಬಾರದೆಂದು ತಿಳಿಸಿದ. ಕೆಲವೇ ಅನುಯಾಯಿಗಳ ಜೊತೆ ಮುಂದೆ ನರಗುಂದಕ್ಕೆ ಸಾಗಲು ಸೂರೇಬಾನನಲ್ಲಿ ಬೀಡುಬಿಟ್ಟ. ಆ ವಾರ್ತೆ ತಿಳಿದಿದ್ದ ಬಾಬಾಸಾಹೇಬನು ರಾತ್ರಿ ಅಲ್ಲಿಗೆ ಬಂದು ಮ್ಯಾನ್ಸನ್ ಇದ್ದ ಸ್ಥಳಕ್ಕೆ ಮುತ್ತಿಗೆ ಹಾಕಲು ಪಲ್ಲಕಿಯಲ್ಲಿ ಮಲಗಿದ್ದ ಮ್ಯಾನ್ಸನ್ ಗುಂಡುಹಾರಿಸಿ ಒಬ್ಬನ ಹತ್ಯೆಗೆ ಕಾರಣನಾದಾಗ ಬಾಬಾಸಾಹೇಬನು ಅವನನ್ನು ಬಂಧಿಸಿ, ಅವನ ತಲೆ ಕಡಿಸಿದನು (ಮೇ 29). ಇನಾಂ ಕಮಿಶನ್‌ನ ಸದಸ್ಯನಾಗಿದ್ದ ಮ್ಯಾನ್ಸನ್ ಬಾಬಾಸಾಹೇಬನ ಅನೇಕ ಗ್ರಾಮಗಳನ್ನು ಕಸಿದುಕೊಳ್ಳಲು ಕಾರಣನಾಗಿ ಬಾಬಾಸಾಹೇಬನು ಅವನ ಮೇಲೆ ತೀರ ಕ್ರುದ್ಧನಾಗಿದ್ದ. ಮ್ಯಾನ್ಸನ್‌ನ ತಲೆಕಡಿದು, ದೇಹವನ್ನು ಹತ್ತಿರದಲ್ಲಿ ಚಳಿ ಕಾಯಿಸಲು ಹಾಕಿದ್ದ ಬೆಂಕಿಯಲ್ಲಿ ಎಸೆದು, ಅವನ ತಲೆಯನ್ನು ತಂದು ನರಗುಂದದ ಕೋಟೆಯ ಬಾಗಿಲಮೇಲೆ ಇಟ್ಟರು. ಮ್ಯಾನ್ಸನ್ ಜೊತೆ ಇದ್ದ 14 ಸವಾರರೂ ಕೊಲ್ಲಲ್ಪಟ್ಟರು.

ಆದರೆ ತನ್ನ ವಿಶ್ವಾಸಿಕರಾದ ಕೃಷ್ಣಾಜಿ ಜೋಶಿ ಮತ್ತು ಬನ್ಯಾಬಾಪು ತನ್ನ ಎಲ್ಲ ಚಟುವಟಿಕೆಗಳ ವಿವರವನ್ನು ಗುಪ್ತವಾಗಿ ಮ್ಯಾನ್ಸನ್‌ಗೆ ತಿಳಿಸುತ್ತಿದ್ದರೆಂಬ ಸಂಗತಿ ಮ್ಯಾನ್ಸನ್ ಬಳಿ ದೊರೆತ ಕಾಗದ ಪತ್ರಗಳಿಂದ ಬಾಬಾಸಾಹೇಬನಿಗೆ ಗೊತ್ತಾಯಿತು. ಅಲ್ಲದೆ ಕೋಟೆಯಲ್ಲಿದ್ದ ಮದ್ದುಗುಂಡನ್ನು (ಸಿಡಿಮದ್ದಿನ ಪುಡಿ) ಹಾಳುಗೆಡವಲಾಗಿತ್ತೆಂದೂ ಅವನಿಗೆ ಕಂಡುಬಂತು. ಬಾಬಾಸಾಹೇಬನು ತನ್ನ ಸ್ನೇಹಿತ ಮುಂಡರಗಿ ಭೀಮರಾಯನಿಗೆ ನೆರವಿಗೆ ಹೇಳಿ ಕಳುಹಿಸಲು ಅವನಾಗಲೇ ಕೊಪ್ಪಳ ತಲುಪಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಮಗ್ನನಾಗಿದ್ದ. ಭೀಮರಾಯನು ಕೊಪ್ಪಳವನ್ನು ಮುತ್ತಿದಾಗ ಬಾಬಾಸಾಹೇಬನು ಧಾರವಾಡವನ್ನು ಮುತ್ತಬೇಕೆಂಬುದು ಪೂರ್ವ ಯೋಜನೆಯಾಗಿತ್ತು. ಮ್ಯಾನ್ಸನ್‌ನ ಕೊಲೆಯ ವಾರ್ತೆ ತಿಳಿದ ತಕ್ಷಣ ಧಾರವಾಡದಿಂದ ಸೇನೆ ಕಳುಹಿಸಲು ಅದು ನರಗುಂದ ಬಳಿ ಅಮರಗೋಳದಲ್ಲಿ ಬೀಡುಬಿಟ್ಟಿತು. ಕರ್ನಲ್ ಮಾಲ್ಕಂನ ನೇತೃತ್ವದಲ್ಲಿ ಇನ್ನೊಂದು ಪಡೆ ಕೊಪ್ಪಳದಿಂದ ಬಂದು ಮೇ 31 ಕ್ಕೆ ಅವರು ನರಗುಂದ ಮುತ್ತಿದರು. ಹಾಗೂ ಜೂನ್ 1 ರಂದು ಕೋಟೆಯೆಡೆಗೆ ಸಾಗಿದರು. ತಮ್ಮನ್ನು ಎದುರಿಸಿದ ಸುಮಾರು 700 ಜನರನ್ನು ಎದುರಿಸಿ 70 ಜನರನ್ನು ಕತ್ತರಿಸಿ ಹಾಕಿದರು. ಮರುದಿನ ಕೋಟೆಯನ್ನು ಹೊಕ್ಕು ಅರಮನೆಯನ್ನು ತಲುಪಿದಾಗ ಅಲ್ಲಿ ಯಾರೂ ಇರಲಿಲ್ಲ. ಅಲ್ಲಿನ ಅಮೂಲ್ಯ ಗ್ರಂಥಾಲಯವನ್ನು ಬ್ರಿಟಿಷ್ ಸೇನೆ ಸುಟ್ಟುಹಾಕಿತು. ಈಗಾಗಲೇ ವಂಚನೆಗಳಿಂದ ನಿರಾಶನಾದ ಬಾಬಾಸಾಹೇಬ ತನ್ನ ಹೋರಾಟ ವ್ಯರ್ಥವೆಂದು ಕೋಟೆಯಿಂದ ತಪ್ಪಿಸಿಕೊಂಡಿದ್ದ. ಮುಂದೆ ಅವನನ್ನು ತೊರಗಲ್ ಬಳಿ ಅಡವಿಯಲ್ಲಿ ಬಂಧಿಸಿದರು. ಅವನ ತಾಯಿ ಯಮುನಬಾಯಿ ಹಾಗೂ ಪತ್ನಿ ಸಾವಿತ್ರಿಬಾಯಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರು. ಇವರ ದೇಹ ಮುಂದೆ ಬೂದಿಹಾಳದಲ್ಲಿ ಸಿಕ್ಕಿತು. ಬಾಬಾಸಾಹೇಬನನ್ನು ಬೆಳಗಾವಿಯಲ್ಲಿ ವಿಚಾರಣೆಗೊಳಪಡಿಸಿ ಜೂನ್ 12 ಕ್ಕೆ ಫಾಶಿಗೆ ಹಾಕಿದರು.

ಹೀಗೆ 1857-58 ರ ಹೋರಾಟದಲ್ಲಿ ಧಾರವಾಡ ಜಿಲ್ಲೆಯ ಅಧ್ಯಾಯ ಜೂನ್ ಮೊದಲವಾರದಲ್ಲೇ ಮುಗಿಯಿತು. ಈ ಎರಡೂ ಹೋರಾಟಗಳಿಗೆ ಸಂಬಂಧಿಸಿ 40 ಜನರಿಗೆ ನೇಣು ಹಾಕಿದರಲ್ಲದೆ ಇನ್ನೂ ಸುಮಾರು 100 ಜನರನ್ನು ವಿವಿಧ ಅವಧಿಯ ಶಿಕ್ಷೆ ಮತ್ತು ದ್ವೀಪಾಂತರ ವಾಸಕ್ಕೆ ಒಳಪಡಿಸಿದರು. ಕೊಪ್ಪಳ ಮತ್ತು ನರಗುಂದದಲ್ಲಿ ಬಂಧಿತರಾದ ಸುಮಾರು ನೂರು ಜನರನ್ನು ಸೈನಿಕ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿ ಗುಂಡಿಟ್ಟು ಕೊಂದರು. ಭೀಮರಾಯನ ಕುಟುಂಬೀಯರಿಗೆ ಪಿಂಚಣಿ ನೀಡಲಾಯಿತು. ಅವರ ಆಸ್ತಿ ಪಾಸ್ತಿಗಳನ್ನು ಮಾತ್ರ ಕಸಿದುಕೊಳ್ಳಲಾಯಿತು. ನರಗುಂದಕ್ಕೆ ಸೇರಿದ 41 ಗ್ರಾಮಗಳನ್ನು ಬ್ರಿಟಿಷರು ತಮ್ಮ ವಶಕ್ಕೆ ತೆಗೆದುಕೊಂಡರು (ಮುಂದೆ ಅದು ನರಗುಂದ ಪೇಟಾ ಆಯಿತು). ಈ ಕಾಲಕ್ಕೆ ಧಾರವಾಡದ ಕೋಟೆಯು ಬಂಡಾಯಗಾರರ ವಶಕ್ಕೆ ಹೋದೀತೆಂದು ಬ್ರಿಟಿಷರು ಅದರ ಕೆಲವು ಭಾಗ ಒಡೆದು ಹಾಕಿದರು.

ಈ ಕಾಲದಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಾರ್ವಕಾಲಿಕವಾಗಿ ಬಳಕೆಯಾಗಬಲ್ಲ ಬಂಡಿ ದಾರಿಗಳು 1844 ರವರೆಗೂ ಇರಲಿಲ್ಲ. ಮಳೆಗಾಲದಲ್ಲಿ ಇವುಗಳ ಸಂಪರ್ಕ ತಪ್ಪುತ್ತಿತ್ತು. ಹೇರು ಪ್ರಾಣಿಗಳಿಂದಲೇ ಸಾರಿಗೆ ಸಾಧ್ಯವಿತ್ತು. 1856 ರ ಹೊತ್ತಿಗೆ ಹುಬ್ಬಳ್ಳಿಯಿಂದ ಹರಿಹರದವರೆಗೆ ಸರ್ವಋತು ರಸ್ತೆ ನಿರ್ಮಾಣವಾಗಿತ್ತು. 1866 ರಲ್ಲಿ ಪುಣೆ ಬೆಂಗಳೂರು ರಸ್ತೆಯ ವರದಾನದಿಗೆ ಸೇತುವೆ ಕಟ್ಟಿದರು. ಇದಲ್ಲದೆ ಹುಬ್ಬಳ್ಳಿಯಿಂದ ಮುಂಡಗೋಡ, ಶಿರಸಿ, ದೇವಿಮನೆ ಘಟ್ಟದಿಂದ ಕುಮಟಾ ಬಂದರು ತಲುಪಲು ಒಂದು ರಸ್ತೆಯಿತ್ತು. ಸ್ಥಳೀಯ ಸಂಸ್ಥೆಗಳಿಂದ ರಸ್ತೆ ರಚನೆ ಕಾರ್ಯ 1866 ರಿಂದ ಆರಂಭವಾಗಿ ಸೇತುವೆಗಳ ಕಟ್ಟುವಿಕೆ ಕೂಡ ಆರಂಭವಾಯಿತು.

**ಅರಳೆಯ ಉಬ್ಬರ**

ಆ ಕಾಲದಲ್ಲಿ ಈ ಪ್ರದೇಶದಲ್ಲಿ ಆದ ಒಂದು ವಿಲಕ್ಷಣ ಸಂಗತಿ ಎಂದರೆ 'ಅರಳೆಯ ಉಬ್ಬರ' ಅಥವಾ 'ಕಾಟನ್ ಬೂಮ್': ಅಮೆರಿಕದಲ್ಲಿ ನಡೆದ ಯಾದವೀ ಯುದ್ಧದ ಕಾಲಕ್ಕೆ ಆ ದೇಶದಿಂದ ಇಂಗ್ಲೆಂಡ್‌ಗೆ ಬರುವ ಹತ್ತಿಯ ಆಮದು ನಿಂತುದರಿಂದ ಭಾರತದ ಹತ್ತಿಯ ಮೇಲೆ ಹೆಚ್ಚಿನ ಅವಲಂಬನವಾಯಿತು. ಪ್ರಮುಖ ಹತ್ತಿ ಬೆಳೆಯುವ ಜಿಲ್ಲೆಯಾದ ಧಾರವಾಡ ಪ್ರದೇಶದಲ್ಲಿ ಆಗ ಕಾಣಿಸಿಕೊಂಡ ಅರಳೆ ಉಬ್ಬರದಿಂದ ಜಿಲ್ಲೆ ಸಾಕಷ್ಟು ಏರಿಳಿತಗಳನ್ನು ಕಂಡಿತು. ಆವರೆಗೂ ಖಂಡಿಗೆ ಸುಮಾರು 75 ರಿಂದ 100 ರೂ ಇದ್ದ ಅಮೆರಿಕನ್ ತಳಿಯ ಅರಳೆಯ ಬೆಲೆ 1863 ರಲ್ಲಿ 380 ರೂ, 1864 ರಲ್ಲಿ 465 ರೂ. ಆಯಿತು. ರೈತರು ಅರಳೆಯನ್ನೇ ಬೆಳೆಯ-ಹತ್ತಿ ರೈತರು ಕೈಯಲ್ಲಿ ಹಣದ ಓಡಾಟ ಮಿತಿಮೀರಿ ಹೆಚ್ಚಿತು. 'ಹತ್ತಿಬಿತ್ತಿ ರೈತ ಹಾಳಾದ' ಎಂಬ ಮಾತು ಅತಿಯಾಗಿ ಹರಿದ ಹಣದ ಹೊಳೆಯಿಂದ ಆದ ದುಷ್ಪರಿಣಾಮವನ್ನು ಸೂಚಿಸುತ್ತದೆ. ಶ್ರೀಮಂತ ರೈತರು ಎಷ್ಟು ಅಪವ್ಯಯಕ್ಕೆ ತೊಡಗಿದರೆಂದರೆ, ಒಂದು ಉಲ್ಲೇಖದಂತೆ ಎತ್ತುಗಳ ಕೊಂಬುಗಳಿಗೆ ಬಂಗಾರದ ಅಣಸು ಮಾಡಿಸಿದರಂತೆ. ಜಗಳ, ಖಟ್ಲೆಗಳು ಹೆಚ್ಚಿ, ವಕೀಲ ವೃತ್ತಿಗೆ ಅನೇಕರು ನುಗ್ಗುವಂತಾಯಿತು. ಭೂಮಿಯ ಬೆಲೆ ಹೆಚ್ಚಿತು. ಅತಿಯಾದ ವರದಕ್ಷಿಣೆ ರೂಢಿಗೆ ಬಂತು. ಇದೇ ಕಾಲಕ್ಕೆ ಉಳಿತಾಯದ ಸ್ವಭಾವವೂ ಬೆಳೆದು ಕೂಡು ಬಂಡವಾಳದ ಸಂಸ್ಥೆಗಳು ಅನೇಕರ ಉಳಿತಾಯವನ್ನು ಆಕರ್ಷಿಸಿದ್ದವು.

ಇದಲ್ಲದೆ ಹತ್ತಿ ಸಾಗಣೆಕೆಗೆ ಒಳ್ಳೆಯ ರಸ್ತೆಗಳಾದವು. ಅರಳೆ ಉಬ್ಬರ ಇತರಕಡೆ ಇಳಿದರೂ ಧಾರವಾಡದಲ್ಲಿ ಅಂಥ ಭಾರೀ ಇಳಿತವಾಗಲಿಲ್ಲ. ಹತ್ತಿ ಬೆಳೆ ವ್ಯಾಪಕವಾದುದರಿಂದ ಭಾರತದಲ್ಲೇ ನೂಲುವ, ನೇಯುವ ಗಿರಣಿಗಳಾದವು. ಸ್ಥಳೀಯ ಜಾತಿಯ ಹತ್ತಿಗೆ ಮುಂಬೈ, ಮುಂದೆ ಸೊಲ್ಲಾಪುರದ ಹೊಸ ಗಿರಣಿಗಳಲ್ಲಿ ಬೇಡಿಕೆ ಬಂತು. ಇದಲ್ಲದೆ ಸ್ಥಳೀಯವಾಗಿ ಜಿಲ್ಲೆಯಲ್ಲಿ ನಾಲ್ಕು ಉಗಿಯಂತ್ರ ಚಾಲಿತ ಯಾಂತ್ರಿಕ ಜಿನ್ನಿಂಗ್ ಘಟಕಗಳು ಸ್ಥಾಪನೆಗೊಂಡವು. ಎಸ್.ಎಂ. ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ 1881ರಲ್ಲಿ ಹುಬ್ಬಳ್ಳಿಯಲ್ಲಿ ಹುಟ್ಟಿತು. ಆದರೆ 1880 ರ ನಂತರ ಹತ್ತಿಯ ಬೆಲೆಯಲ್ಲಿ ಹಾಗೂ ಬೆಳೆಯಲ್ಲಿ ಇಳಿತವಾಯಿತು. ಆದರೂ ಧಾರವಾಡ ಜಿಲ್ಲೆಯಲ್ಲಿ ನೇಯ್ಗೆ ಹಾಗೂ ಜಿನ್ನಿಂಗ್ ಉದ್ಯಮ ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದವು. ಮುಂಬೈಗೆ ರೈಲು ಸಂಪರ್ಕ ಬೆಳೆಯಲು (1887) ಕೂಡ ಇದೇ ಕಾರಣವಾಯಿತು. ಧಾರವಾಡದಿಂದ ವಾಸ್ಕೊ (ಗೋವಾ)ಗೆ ಕೂಡ ರೈಲು ಸಂಪರ್ಕ 1889 ರಲ್ಲಿ ಆಯಿತು. 1888 ರಲ್ಲಿ ಹುಬ್ಬಳ್ಳಿಯಲ್ಲಿ ರೈಲ್ವೆ ವರ್ಕ್ ಶಾಪ್ ಆರಂಭವಾಯಿತು. ಹುಬ್ಬಳ್ಳಿ ಹೀಗೆ ಕೈಗಾರಿಕಾ ನಗರವಾಯಿತು. ಧಾರವಾಡದಲ್ಲಿ ಸದರ್ನ್ ಮರಾಠಾ ರೈಲ್ವೇಯ ಆಡಳಿತ ಕಚೇರಿ ಕೂಡ 1888 ರಲ್ಲಿ ಬಂತು.

1876-78 ಉಗ್ರ ಕ್ಷಾಮದ ಕಾಲದಲ್ಲಿ ಅನೇಕ ಕಾಮಗಾರಿಗಳನ್ನು ಆರಂಭಿಸಿ ರಸ್ತೆಗಳನ್ನು ವಿಸ್ತರಿಸಲಾಯಿತು. ಕ್ಷಾಮದ ಕಾಲದಲ್ಲಿ ಬ್ರಿಟಿಷ್ ಪ್ರದೇಶದಲ್ಲಿರುವ ಧಾರವಾಡ ಜಿಲ್ಲೆಯಲ್ಲೇ 60,000 ಮೇಲ್ಪಟ್ಟು ಜನ ಉಪವಾಸ ಸತ್ತಿದ್ದು ಆಗಿನ ಸಂಸ್ಥಾನ ಪ್ರದೇಶಗಳ ಸಹಿತ ಆಗಿನ ಇಡೀ ಜಿಲ್ಲೆಯ ಪ್ರದೇಶದಲ್ಲಿ ಒಂದು ಲಕ್ಷ ಜನರಾದರೂ ಸತ್ತಿರಬಹುದು. ಮುಂಬೈ ಸರಕಾರದ ವಾರ್ಷಿಕ ವರದಿಯಂತೆ 1876-77 ರಲ್ಲಿ (ಕ್ಷಾಮ ಆರಂಭವಾಗುವ ವರ್ಷದ ಹಿಂದಿನ ವರ್ಷ) ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಧಾರವಾಡ ಜಿಲ್ಲೆಯಲ್ಲಿ ಸತ್ತವರ ಸಂಖ್ಯೆ 31,726 (ಇದು ಸಹಜ ಮರಣಗಳ ಸಂಖ್ಯೆ). ಆದರೆ 1877-78 ರಲ್ಲಿ ಕ್ಷಾಮ ಉಲ್ಬಣಿಸಿದಾಗ ಒಟ್ಟು ಸತ್ತವರು 83,857 (ಎಂದರೆ 50,000 ಕ್ಕೂ ಮೇಲ್ಪಟ್ಟು ಜನ ಕ್ಷಾಮದಿಂದ ತೀರಿಕೊಂಡಿರಬೇಕು). 1878-79 ರ ಮರಣಗಳ ಸಂಖ್ಯೆ 42,365; 1879-80 ರಲ್ಲಿ ಒಟ್ಟು ಮರಣಗಳು 24,550. 1881 ರಲ್ಲಿ ಜಿಲ್ಲೆಯ ಜನಸಂಖ್ಯೆ 8,82,907 ಇದ್ದು, 1872 ರ ಜನಸಂಖ್ಯೆಗಿಂತ 1,06,764 ರಷ್ಟು ಕಡಿಮೆ ಆಗಿದ್ದು ಈ ಇಳಿತಕ್ಕೆ ಕ್ಷಾಮ ಇಲ್ಲವೆ ವಲಸೆ ಕಾರಣವೆಂದು 1884 ರ ಜಿಲ್ಲಾ ಗ್ಯಾಸಿಟಿಯರ್ ಹೇಳುತ್ತದೆ (ಪು.45)

ಅಭಾವ ಕಾಮಗಾರಿಗಳಲ್ಲಿ ನೀರಾವರಿ ಕೆಲಸಗಳನ್ನೂ ಕೈಗೊಂಡರು. ಇದರಲ್ಲಿ ವಿಜಯನಗರ ಕಾಲದ ಡಂಬಳದ ಕೆರೆಯನ್ನು ವಿಸ್ತರಿಸಲಾಯಿತು. ಮೆಡ್ಲೇರಿ ಮತ್ತು ಅಸುಂಡಿ ಕೆರೆಗಳ ಕೆಲಸವನ್ನು ಆಗಲೇ ಆರಂಭಿಸಿದಂತೆ ತೋರುತ್ತದೆ.

## ರಾಷ್ಟ್ರೀಯ ಜಾಗೃತಿ

ಪೇಶ್ವೆಯರ ಬ್ರಾಹ್ಮಣ ಪ್ರಭಾವದ ಆಡಳಿತ ಮತ್ತು ಕೊನೆಯ ಪೇಶ್ವೆ ಬಾಜೀರಾಯನ ದುರಾಡಳಿತ, ಮೇಲಿಂದ ಮೇಲೆ ಪೇಶ್ವೆಯ ಸೇನಾನಿಗಳೂ ಇತರರೂ ನಡೆಸುತ್ತಿದ್ದ ಪುಂಡ ಪೋಕರಿ ದಂಡಯಾತ್ರೆ ಮತ್ತು ಸುಲಿಗೆ, ಕಂದಾಯ ಸಂಗ್ರಹವನ್ನು ಹರಾಜು ಮಾಡುವ ಪದ್ಧತಿ, ಇದರಿಂದಾಗಿ ಬೇಸತ್ತಿದ್ದ ಜನರಿಗೆ ಬ್ರಿಟಿಷರ ಆಡಳಿತ ಆರಂಭದಲ್ಲಿ ಅಪ್ಯಾಯಮಾನವೆನಿಸಿದರೂ ಅವರ ವಸಾಹತುಶಾಹೀ ಧೋರಣೆ, ಪ್ರಕೃತಿ ಪ್ರಕೋಪಗಳು, ಗೃಹ ಕೈಗಾರಿಕೆಗಳ ಮೇಲೆ ಅದರ ಪರಿಣಾಮ, ಕಂದಾಯ ನೀತಿ ಮುಂತಾದವುಗಳಿಂದ ಕಾಲಕ್ರಮದಲ್ಲಿ ಬ್ರಿಟಿಷ್ ವಿರೋಧಿ ಭಾವನೆಗಳು ಬೆಳೆದು, ನಿಧಾನವಾಗಿ ರಾಷ್ಟ್ರೀಯ ಭಾವನೆಗಳು ಜಿಲ್ಲೆಯಲ್ಲಿ ವಿಕಸಿಸಲು ಹಾದಿಯಾಯಿತು. ಆದರೂ 1930 ಕ್ಕೆ ಮೊದಲು ರಾಷ್ಟ್ರೀಯ ಭಾವನೆ ಅಷ್ಟೊಂದು ಸಾರ್ವತ್ರಿಕವಾಗಿರಲಿಲ್ಲ. ಆದರೆ 1942 ರಲ್ಲಿ ಅತ್ಯಂತ ವ್ಯಾಪಕವಾಯಿತು. ಆದರೆ ರಾಷ್ಟ್ರೀಯ ಜಾಗೃತಿಯು ಅಥವಾ ಸ್ವಾತಂತ್ರ್ಯ ಚಳುವಳಿಯ ಕಲ್ಪನೆಯು ಜಿಲ್ಲೆಯಲ್ಲಿ ಎಲ್ಲ ವರ್ಗಗಳ ಮನಸ್ಸನ್ನು ಆಕರ್ಷಿಸಲು ದೀರ್ಘಕಾಲ ಹಿಡಿಯಿತು.

ಬ್ರಿಟಿಷರು ಸ್ಥಾಪಿಸಿದ ಶಾಂತಿ, ಕಾನೂನುಬದ್ಧವೆಂದು ತೋರುವ ಆಡಳಿತ, ಸಾರ್ವತ್ರಿಕ ಶಿಕ್ಷಣಕ್ಕೆ ಹಾಕಿದ ಬುನಾದಿ, ಬ್ರಾಹ್ಮಣೇತರರಿಗೂ ಸಾಕಷ್ಟು ಪ್ರಮಾಣದಲ್ಲಿ ನೌಕರಿ ಕೊಡುವಲ್ಲಿ ತೋರಿದ ಒಲವು, ಸುಧಾರಿಸಿದ ಸಾರಿಗೆ ಹಾಗೂ ಸಂಪರ್ಕ ವ್ಯವಸ್ಥೆ ಇವುಗಳು ಒಂದು ಕಡೆ ಜನರ ಒಲವಿಗೆ ಪಾತ್ರವಾದುವು. ಅಸಮಾಧಾನ, ಅಸಂತೋಷದ ಪ್ರಕಟಣೆ ಆದಾಗ ಕಿತ್ತೂರು ಚನ್ನಮ್ಮ, ಸಂಗೊಳ್ಳಿರಾಯಣ್ಣ, ಬಾಬಾಸಾಹೇಬ ಭಾವೆ, ಮುಂಡರಗಿ ಭೀಮರಾಯ, ಇವರನ್ನು ಬಗ್ಗುಬಡಿದ ಹಾಗೂ ಟಿಪ್ಪು, ಪೇಶ್ವೆಯರಂಥ ರಾಜಸತ್ತೆಗಳನ್ನು ಮೂಲೆಪಾಲು ಮಾಡಿದ ಈ ಸರಕಾರದ ವಿರುದ್ಧ ಶಸ್ತ್ರ ಎತ್ತಿ ಯಶ ಕಾಣುವುದು ಸಾಧ್ಯವಿಲ್ಲವೆಂದೂ ಜನರಿಗೆ ತಿಳಿದಿತ್ತು. ಬ್ರಿಟಿಷ್ ಸತ್ತೆ ಸೂರ್ಯಮಂಡಲದಷ್ಟು ಚಿರ ಎಂಬ ಭಾವನೆ ಬಂದಿತ್ತು.

ಇನಾಂ ಕಮಿಶನ್ ನೇಮಿಸಿದಾಗ (1843-44) ಜಿಲ್ಲೆಯಲ್ಲಿ 6,80,943 ಎಕ್ರೆಯಷ್ಟು ಭೂಮಿಯನ್ನು ದಾಖಲೆಗಳಿಲ್ಲವೆಂದು ಕಸಿದುಕೊಳ್ಳಲಾಗಿತ್ತು. ಬಾಬಾಸಾಹೇಬ, ಮುಂಡರಗಿ ಭೀಮರಾಯ ಮುಂತಾದ ಕೆಲವರು ಸಶಸ್ತ್ರ ಪ್ರತಿಭಟನೆ ತೋರಿದ್ದರೂ ಇತರ ಭೂಮಿಯನ್ನು ಕಳೆದುಕೊಂಡ ಸಾವಿರಾರು ಕುಟುಂಬಗಳು ತಲೆತಲಾಂತರವಾಗಿ ಬ್ರಿಟಿಷ್ ಸರಕಾರದ ಬಗ್ಗೆ ದ್ವೇಷವನ್ನು ಮೌನವಾಗಿ ಬೆಳೆಸಿಕೊಂಡು ಬಂದಿದ್ದರು.

ಉಗ್ರ ಕ್ಷಾಮ ಬಂದಾಗ ಭೂಕಂದಾಯ ಸಂಗ್ರಹವನ್ನು ಮುಂದೂಡಿದರೇ ವಿನಾ ಮನ್ನಾ ಮಾಡಲಿಲ್ಲ. ಅಭಾವ ಕಾಮಗಾರಿ ನಡೆಸಿದರೂ ಕಾಯಂ ಉದ್ಯೋಗ ಆದಾಗಿರದೆ, ಅನೇಕ ಕೈಕಸುಬುದಾರರು (ನೇಯ್ಗೆ ಇತ್ಯಾದಿ) ಮತ್ತೆ ಚೇತರಿಸಿಕೊಳ್ಳಲಿಲ್ಲ. ಇದಕ್ಕೂ ಮೊದಲೇ ಯಂತ್ರೋತ್ಪಾದಿತ ನೂಲು ಬಂದು 1810-15 ರ ಸುಮಾರಿಗೆ ಲಕ್ಷಾಂತರ ಜನ ನೂಲುವ ಕಾಯಕಕ್ಕೆ ಎರವಾಗಿದ್ದರು. ಆದರೂ ಒಂದು ಲಕ್ಷಕ್ಕೂ ಮೇಲ್ಪಟ್ಟು ಜನ ಈ ವೃತ್ತಿ ನಡೆಸುತ್ತಿದ್ದು, 1872 ರ ನಂತರ ದೇಶೀಯ ಗಿರಣಿಗಳ ನೂಲು ಬಂದಾಗ ಕೆಳಜಾತಿಯ ನೂಲುವ ಸಾವಿರಾರು ಬಡವರೂ ಕ್ರಮೇಣ ಈ ಉದ್ಯೋಗಕ್ಕೆ ಎರವಾದ ಸಂಗತಿ ಗಮನಿಸಿದೆ. 1872 ರಲ್ಲೂ ಧಾರವಾಡ ಜಿಲ್ಲೆಯಲ್ಲಿ 1,14,416 ಜನ ನೂಲುತ್ತಿದ್ದರೆಂದರೆ ಅಚ್ಚರಿಯಾದೀತು (ಜನಗಣತಿ ವರದಿ).

1873ರ ಉಪ್ಪಿನ ಕಾನೂನಿನಿಂದ ಕಲ್ಲುಪ್ಪು ತಯಾರಿಸುವ ನೂರಾರು ಉಪ್ಪಾರರು ಉದ್ಯೋಗ ಕಳೆದುಕೊಂಡುದಲ್ಲದೆ ಉಪ್ಪೂ ತುಟ್ಟಿಯಾಯಿತು. ವಿದೇಶದಿಂದ ಕಾಗದ ಬಂದಾಗ ಧಾರವಾಡ ಗದಗ, ಗುತ್ತಲ, ಹುಬ್ಬಳ್ಳಿ, ಕರ್ಜಗಿ, ನವಲಗುಂದ, ರಾಣೆಬೆನ್ನೂರು ಮುಂತಾದ ಊರುಗಳಲ್ಲಿ ಕೇಂದ್ರೀಕೃತವಾಗಿದ್ದ (ಜಿ.ಗ್ಯಾ.1884,ಪು.388) ಕಾಗದದ ಉದ್ದಿಮೆ ಕಣ್ಮರೆಯಾಯಿತು. 1876ರಿಂದ ದೀಪ ಉರಿಸಲು ಸೀಮೆ (ಚಿಮಣಿ) ಎಣ್ಣೆ ಆಯಾತವಾಗಲು ಆರಂಭ ಆದಾಗ ದೀಪ ಉರಿಸುವ ಉದ್ದೇಶಕ್ಕೆ ಬಳಸುವ ಎಣ್ಣೆಯ ಪ್ರಮಾಣ ಕಡಿಮೆಯಾಗಿ ಇದರಿಂದ ಗಾಣಿಗ ವೃತ್ತಿ ಕೈಕೊಳ್ಳುವವರ ಉದ್ಯಮಕ್ಕೆ ಬಹಳ ಏಟು ಬಿತ್ತು. (ಜಿ.ಗ್ಯಾ.1884, ಪು.386).

ಭೂಮಿಯ ಅಳತೆ ಥ್ಯಾಕರೆಯ ಕಾಲದಲ್ಲಿ ಸರಿಯಾಗಿ ಆಗಿದ್ದರು ಭೂಮಿಯ ವರ್ಗೀಕರಣ ತಪ್ಪಾಗಿ ಆಗಿ ಅದರಿಂದ ಕಂದಾಯ ಆಕರಣೆಯೂ ದೋಷಯುಕ್ತವಾಗಿದ್ದು ಈ ತೇಪೆಯ ಕಂದಾಯ ಆಕರಣೆ 1843 ರವರೆಗೆ ನಡೆದು ಸ್ಥಳೀಯ ನೌಕರರ ಲಂಚಗುಳಿತನಕ್ಕೆ ದಾರಿಯಾಯಿತು, ಎಂದು ಚೋಕ್ಸಿ (ಪು.25) ಹೇಳಿದ್ದಾರೆ.

ಭೂ ಕಂದಾಯ ನಿರ್ಣಯ 1843-44 ರಲ್ಲಿ ಮೊದಲ ಬಾರಿ ಪೂರ್ತಿಗೊಂಡಾಗ 5,68,328 ಎಕ್ರೆ ಭೂಮಿ ಅಳತೆಯಾಗಿ ಇಡೀ ಜಿಲ್ಲೆಯಲ್ಲಿ 8.25 ಲಕ್ಷ ರೂ ಕಂದಾಯ ನಿಗದಿ ಆಯಿತು; ಆದರೆ ವಾಸ್ತವ ಸಂಗ್ರಹ 9.68 ಲಕ್ಷ ಆಗಲು ಉತ್ಪನ್ನ ಜಾಸ್ತಿಯಾಯಿತೆಂದು ಅಧಿಕಾರಿಗಳು ಬೆನ್ನುತಟ್ಟಿಕೊಂಡರು. ಆಗಾಗ ಮಳೆಯ ಸ್ಥಿತಿ ಚೆನ್ನಾಗಿರದೆ ರೈತರ ಕಷ್ಟ ಕೇಳುವವರಿಲ್ಲದಂತೆ ವಾಸ್ತವ ಸ್ಥಿತಿ ಇತ್ತು. ಬ್ರಿಟಿಷ್ ಸರಕಾರದ ಆರಂಭದ ದಿನಗಳಲ್ಲಿ ಕಂದಾಯ ನಿಗದಿಪಡಿಸಿ ನಿರ್ದಿಷ್ಟ ಮೊತ್ತ ಮಾತ್ರ ವಸೂಲು ಮಾಡುವ ನ್ಯಾಯಪರ ಸರಕಾರ ಇದು, ಎಂಬ ಭಾವನೆ ಬೆಳೆದುದರ ಬೆನ್ನಲ್ಲೇ ಮಳೆಬಾರದ ಕಾಲದಲ್ಲಿ ಕಂದಾಯ ಸೂಟು(ಮಾಫಿ) ಬಿಡುವ ಹಿಂದಿನ ಸಂಪ್ರದಾಯ ಇಲ್ಲದೆ ಹೋಯಿತು. 1881-82ರಲ್ಲಿ ಮುಗಿದ ಕಂದಾಯದ ನಿರ್ಣಯದಂತೆ (ಸೆಟ್ಲ್‌ಮೆಂಟ್) 12,73,437 ಎಕ್ರೆ ಭೂಮಿ ಜಿಲ್ಲೆಯಲ್ಲಿ ಕೃಷಿಗೆ ಯೋಗ್ಯವೆಂದು ಅಳತೆಮಾಡಿ 15.97 ಲಕ್ಷ ರೂ. ಒಟ್ಟು ಮೊತ್ತ ನಿಗದಿತವಾಗಿ 15.80 ಲಕ್ಷ ರೂ. ವಸೂಲಿ ಮಾಡಲಾಗಿತ್ತು. ವಾಸ್ತವವಾಗಿ ನೇಕಾರರೇ ಮುಂತಾದ ಕೈಗಾರಿಕೆಗಳಲ್ಲಿ ತೊಡಗಿದ್ದ ಜನರೂ ತಮ್ಮ ಉದ್ಯೋಗಕ್ಕೆ ಎರವಾಗಿ ಕೃಷಿಗೆ ತೊಡಗಬೇಕಾಗಿ ಬಂದು ಪಾಳು ಭೂಮಿ, ಬೀಳು ಭೂಮಿ ಕೃಷಿ ಮಾಡಲು ಆರಂಭಿಸಿದ್ದರು. ಹೀಗಾಗಿ ಕೃಷಿಯ ವಿಸ್ತರಣೆಯಾದರೂ ಆ ಭೂಮಿ ಫಲವತ್ತಾಗಿರದೆ ಕೃಷಿ ಲಾಭದಾಯಕವಾಗಿರಲಿಲ್ಲ. ಕೃಷಿಯ ಮೇಲೆ ಒತ್ತಡ ಮಾತ್ರ ಹೆಚ್ಚಿತು; ಹಾಗೂ ಅರ್ಥ ವ್ಯವಸ್ಥೆ ಈ ಜಿಲ್ಲೆಯಲ್ಲಿ ಹೆಚ್ಚು ಕೃಷಿ ಪ್ರಧಾನವಾಯಿತು. ಆದರೆ ಜೋಳದಂಥ ಧಾನ್ಯದ ಬೆಳೆಯನ್ನೇ ಗಮನಿಸಿದರೆ 1833 ರಲ್ಲಿ ರೂಪಾಯಿಗೆ 54 ಪೌಂಡ್ ಇದ್ದ ಜೋಳದ ಬೆಲೆ ಇಳಿಯುತ್ತ ಸಾಗಿ 1838 ರಲ್ಲಿ ರೂ.ಗೆ102 ಪೌಂಡ್ ಆಗಿ 1841 ರಲ್ಲಿ ರೂ.ಗೆ 120 ಪೌಂಡ್ ಆಯಿತು (ಚೋಕ್ಸಿ, ಪು.26). ಈ ಕಾಲದಲ್ಲಿ ರೈತರು ಭೂಕಂದಾಯ ಕೊಡುವುದು ಕಷ್ಟವಾಯಿತು. 'ಭಾರವಾದ ಕಂದಾಯ ಆಕರಣೆಯೇ ರೈತರ ಬಡತನಕ್ಕೆ ಕಾರಣ' ಎಂದು ಈ ಕಾಲದಲ್ಲಿ ಬಂದ ಪ್ರತಿಯೊಬ್ಬ ಗಣ್ಯ ಬ್ರಿಟಿಷ್ ಅಧಿಕಾರಿ ಹೇಳಿದ್ದಾನೆ, ಎಂದು ಚೋಕ್ಸಿ ಹೇಳುತ್ತಾರೆ. ಜಿಲ್ಲೆಯಲ್ಲಿ ಅಕ್ಕಿಬೆಳೆಯ ಕಣಜವೆನಿಸಿದ ಕೋಡ ತಾಲೂಕಿನಲ್ಲಿ 1848 ರಲ್ಲಿ ಬೀಳು ಭೂಮಿಯಾಗಿ ಗದ್ದೆಗಳಲ್ಲಿ ಕಾಡು, ಬಯಿನೆ (ಸಿಂಧಿ) ಮರಗಳಿಂದ ತುಂಬಿದ್ದವು. ಜಾರ್ಜ್ ವಿಂಜೇಟ್ ಎಂಬ ಅಧಿಕಾರಿ ಕೃಷಿಯ ಬಗ್ಗೆ ಹೇಳುತ್ತ ಕರ್ನಾಟಕವು 'ಬಹಳ ಘನತೆ ಕಳೆದುಕೊಂಡ ಸ್ಥಿತಿಯಲ್ಲಿ ಇದೆ' ಎಂದಿದ್ದಾನೆ. ಎರಡನೇಯ ಬಾರಿ ಆದ ಕಂದಾಯ ನಿರ್ಣಯದ ಕಾಲಕ್ಕೆ ಅರಳೆ ಉಬ್ಬರವಾದುದರಿಂದಲೂ ಧಾನ್ಯಗಳ ಬೆಲೆ ಹೆಚ್ಚುತ್ತ ಸಾಗಿದ್ದರಿಂದಲೂ ರೈತರ ಸ್ಥಿತಿ ಸುಧಾರಿಸಿದಂತೆ ಕಂಡರೂ, 1870 ರ ನಂತರ ಪರಿಸ್ಥಿತಿ ಮತ್ತೆ ಕೆಡುತ್ತ ಹೋಯಿತು. ಜೋಳದ ಬೆಲೆ, ಚೋಕ್ಸಿಯವರು ತೋರಿದ್ದಂತೆ 1865 ರಲ್ಲಿ ರೂಪಾಯಿಗೆ 19 ಸೇರು ಇದ್ದು 1875ರಲ್ಲಿ 29 ಸೇರು ಆಯಿತು. ಇದಕ್ಕೆ ಕೈಗಾರಿಕೆಗಳ ಕ್ಷೇತ್ರದಲ್ಲಿ (ಕೈಕಸುಬುಗಳು) ಹಿಂಜರಿತ ಮುಖ್ಯ ಕಾರಣ. 1876-78 ರ ಕ್ಷಾಮವಂತೂ ಎಲ್ಲರನ್ನು ದಿಕ್ಕುಗೆಡಿಸಿ ಕೈಗಾರಿಕೆಗಳ (ಮುಖ್ಯವಾಗಿ ನೇಯ್ಗೆ) ಕ್ಷೇತ್ರಕ್ಕೆ ಭಾರೀ ಏಟು ಕೊಟ್ಟಿತು. ಜೊತೆಗೆ 1875-76 ರಲ್ಲಿ ಸರಾಸರಿ 31 ಇಂಚು ಮಳೆ ಆದಾಗ ಒಟ್ಟು ಕಂದಾಯ ಸಂಗ್ರಹ 19.60 ಲಕ್ಷ ರೂ. ಆಗಿದ್ದರೆ 1876-77 ರಲ್ಲಿ ಮಳೆ ಸರಾಸರಿ 16 ಇಂಚೇ ಆಗಿದ್ದರೂ ಕಂದಾಯ ಸಂಗ್ರಹ 20.16 ಲಕ್ಷ ರೂ. ಆಗಿತ್ತು.

ರೈತರಿಗೆ ಹತ್ತಿ ಬೆಳೆಯಲು ಸರಕಾರ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿತ್ತು. ಆದರೆ ಜಿಲ್ಲಾ ಗ್ಯಾಸೆಟಿಯರ್ ತಿಳಿಸುವಂತೆ (1884, ಪು.283) ಹತ್ತಿಯು ಭೂಮಿಯನ್ನು ಬೇಗ ಸತ್ವಹೀನಗೊಳಿಸುತ್ತದೆ. ಮತ್ತು ಹತ್ತಿಯ ಬೆಲೆ ಅತಿಯಾದಾಗ ರೈತನಿಗೆ ಬೀಜ ಬಿಡಿಸಲು ನೀಡಬೇಕಾದ ಕೂಲಿಯೂ ಸಿಗದಂಥ ಸನ್ನಿವೇಶ. 1880 ರಿಂದ ಹತ್ತಿ ಬೆಳೆಯುವ ಬಗ್ಗೆ ಉತ್ಸಾಹ ಕುಂದಿತೆಂದು ಇದೇ ಗ್ಯಾಸೆಟಿಯರ್ ಹೇಳಿದೆ. ಆದರೆ ಧಾನ್ಯಕ್ಕೂ ಅಂಥ ಆಕರ್ಷಕ ಬೆಲೆ ಇರಲಿಲ್ಲ. ಕಾಲರಾ ರೋಗ ಮುಂಬೈ ರಾಜ್ಯದಲ್ಲಿ ಸಾವಿರಾರು ಜನರನ್ನು ಕೊಲ್ಲುತ್ತಿತ್ತು. ಇಡೀ ರಾಜ್ಯದಲ್ಲಿ 1875 ರಲ್ಲಿ 47,555 ಜನ ಸತ್ತರೆ 1877 ರಲ್ಲಿ 57,252 ಜನ ಸತ್ತರು. ಇದು 30-40 ಸಾವಿರದ ಪ್ರಮಾಣದಲ್ಲಿ ಸಾಗುತ್ತ 1897 ರಲ್ಲಿ 57,109 ಜನರನ್ನು ಬಲಿ ತೆಗೆದುಕೊಂಡಿತು. ಇಪ್ಪತ್ತು ವರ್ಷಗಳ ಅವಧಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಇದರಿಂದಾದ ಮರಣ ಪ್ರಮಾಣ ಶೇ.3.86 ಹಾಗೂ ಇದು ಜಿಲ್ಲೆಗಳ ಪೈಕಿ ಅತ್ಯಧಿಕ ಎಂದು ಹೇಳಿದೆ. ಕೃಷಿಕಾರ್ಯ ಮಾಡಲು ಕಾರ್ಮಿಕರು ಸಿಗದ ಸ್ಥಿತಿ ಬಂತು. ಜೊತೆಗೆ 1897 ರಲ್ಲಿ ಬಂದ ಪ್ಲೇಗ್ ಜಿಲ್ಲೆಯಲ್ಲಿ 38 ಜನರನ್ನು ಬಲಿತೆಗೆದುಕೊಂಡರೆ 1898 ರಲ್ಲಿ 27,764 ಜನರನ್ನು ಬಲಿತೆಗೆದುಕೊಂಡಿತು. ಈ ಸಂಖ್ಯೆ ಇಡೀ ಮುಂಬೈ ರಾಜ್ಯದ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚಿನ

ಪ್ರಮಾಣದ್ದಾಗಿತ್ತು. ಜಿಲ್ಲೆಯ 120 ಗ್ರಾಮ ಮತ್ತು ಪಟ್ಟಣಗಳಲ್ಲಿ ಅದು ಕಾಣಿಸಿತ್ತು. ಇದಲ್ಲದೆ ಜಿಲ್ಲೆಯ ಸಂಸ್ಥಾನೀ ಪ್ರದೇಶಗಳಿಗೆ ಸಂಬಂಧಿಸಿದಂತೆ ಕುಂದಗೋಳ ಮಹಲಿನ ಮಾಹಿತಿ ಸಿಕ್ಕುತ್ತಿದ್ದು ಅಲ್ಲಿ ಸತ್ತ 2,385 ಜನರ ಸಂಖ್ಯೆ ಇಲ್ಲಿ ಸೇರಿಲ್ಲ. (ಶಿರಹಟ್ಟಿ, ಲಕ್ಷ್ಮೇಶ್ವರ, ಗುಡಿಗೇರಿ ಪ್ರದೇಶಗಳ ಮಾಹಿತಿ ಇಲ್ಲ). ಇದರ ಜೊತೆ ಕ್ಷಾಮ ಹಾಗೂ ಅದರ ಹಿಂದೆಯೇ 1898 ಧಾರವಾಡ ಜಿಲ್ಲೆಯಲ್ಲಿ ಮಾತ್ರ ಕಾಲರಾ ಬಂದು ಜಿಲ್ಲೆಯಲ್ಲಿ 4,054 ಜನ ಸತ್ತರು (ಈ ಮಾಹಿತಿ ಎಲ್ಲವೂ ಮುಂಬೈ ಸರಕಾರದ ವಾರ್ಷಿಕ ಆಡಳಿತ ವರದಿಯಿಂದ ಸಂಗ್ರಹಿಸಿದ್ದು). ಇದರಲ್ಲಿ ಗದಗ ಪಟ್ಟಣದಲ್ಲಿ 342 ಸಾವಾದರೆ ಕರ್ಜಗಿ ಸರ್ಕಲ್‌ನಲ್ಲಿ 733 ಹಾಗೂ ಹಾನಗಲ್ ಸರ್ಕಲ್ (ಹೋಬಳಿ)ನಲ್ಲಿ 591 ಸಾವುಗಳಾದವು. (1898-99ರ ವರದಿ, ಪು.234). ಪ್ಲೇಗ್‌ನ ಹಾವಳಿ ಅಲ್ಲಿಗೂ ನಿಲ್ಲದೆ ಪ್ರತೀವರ್ಷ ಸಾವುಗಳಾಗುತ್ತಲೇ ಇದ್ದು 1901-02 ರಲ್ಲಿ 35,889, 1902-03 ರಲ್ಲಿ 34,679 ಹಾಗೂ 1903-04 ರಲ್ಲಿ 39,339 ಜನ ಸತ್ತರು. (ಜಿ।। ಗ್ಯಾಸೆಟಿಯರ್‌ನ ಪುರವಣಿ, 1904 ಪು.3).

ಇಡೀ ಮುಂಬೈ ರಾಜ್ಯದಲ್ಲಿ ಹೊಸ ರೋಗವಾದ ಪ್ಲೇಗ್‌ಗೆ ಬ್ರಿಟೀಷರೇ ಕಾರಣವೆಂಬ ಅಭಿಪ್ರಾಯ ಬೆಳೆದು ಪ್ಲೇಗ್ ಪರಿಹಾರ ಕ್ರಮವಾಗಿ ಕೈಕೊಂಡ ಪ್ರತಿರೋಧದ ಸರಕಾರೀ ಚಟುವಟಿಕೆಗಳು ತೀರ ಹಿಂಸಾತ್ಮಕವಾಗಿ ಉಗ್ರ ಪ್ರತಿಭಟನೆಗೆ ಕಾರಣವಾಗಿದ್ದವು. ಜನರನ್ನು ವಾಸದ ಮನೆ ಬಿಡಿಸಿ ಬಯಲು ಪ್ರದೇಶಗಳಿಗೆ ಕಳುಹಿಸಲು ಪುಣೆಯಲ್ಲಿ ಸೈನಿಕರನ್ನು ಬಳಸಿದಾಗ ಬಿಳಿಯ ಸೈನಿಕರು ನಡೆಸಿದ ಅತಿಕ್ರಮಗಳು ತೀವ್ರ ಪ್ರತಿಭಟನೆಗೆ ಕಾರಣವಾಗಿ, ರ‍್ಯಾಂಡ ಮತ್ತು ಆಯರ್ಸ್ಟ್ ಎಂಬ ಇಬ್ಬರು ಬಿಳಿಯ ಅಧಿಕಾರಗಳನ್ನು ಪುಣೆಯಲ್ಲಿ ಚಾಫೇಕರ್ ಸೋದರರು ಕೊಂದರು. 'ಕೇಸರಿ' ಪತ್ರಿಕೆಯಲ್ಲಿ ಟಿಳಕರು ಬರೆದ ಲೇಖನಗಳು ಎಲ್ಲೆಡೆ ಪ್ರತಿಧ್ವನಿತವಾದವು. ಉತ್ತರ ಕರ್ನಾಟಕದಲ್ಲಿ ಟಿಳಕರು ಮತ್ತು ಅವರ 'ಕೇಸರಿ' (1881) ಪತ್ರಿಕೆಗಳೇ ರಾಷ್ಟ್ರೀಯ ಜಾಗೃತಿಗೆ ವಿಶೇಷ ಕಾರಣವಾಗಿದ್ದವು.

"1896 ಮತ್ತು 1897 ನೇಯ ಇಸ್ವಿಗಳೆಂದರೆ ದೇಶವನ್ನು ಅನೇಕ ರೀತಿ ಅಲ್ಲೋಲಕಲ್ಲೋಲ ಮಾಡಿದ ವರ್ಷಗಳು. ಹಿಂದುಸ್ಥಾನದಲ್ಲಿ ಮೊದಲಿಗೆ ಮುಂಬಯಿ ಪಟ್ಟಣಕ್ಕೆ ಪ್ಲೇಗು ಬಂದದ್ದು 1896 ನೆಯ ಇಸ್ವಿಯ ನವೆಂಬರ್ ತಿಂಗಳಲ್ಲಿ. ಹಾಹಾ ಎನ್ನುವುದರೊಳಗೆ ಅದು ಪುಣೆಯಲ್ಲಿ ಹಬ್ಬಿ ಹಾಹಾಕಾರವನ್ನು ಉಂಟುಮಾಡಿತು....ಇತ್ತ ಧಾರವಾಡ ಬೆಳಗಾವಿಯ ಕಡೆ ಅದು ಹಬ್ಬಬಾರದೆಂದು ಉಗಿಬಂಡಿಯೊಳಗಿಂದ ಬರುವ ಪ್ರವಾಸಿಕರಿಗೆ ಕ್ವಾರಂಟಾಯಿನ ಮುಂತಾದವುಗಳ ಮೂಲಕ ತೊಂದರೆಯಾಯಿತು. ಇಷ್ಟಾದರೂ 1897 ನೆಯ ಆಕ್ಟೋಬರ್ ಸುಮಾರಕ್ಕೆ ಹುಬ್ಬಳ್ಳಿ ಬಂದೇ ಬಿಟ್ಟಿತು. 1897 ನೇಯ ಇಸ್ವಿಯ ಕೊನೆಯ ಒಳಗಾಗಿ ಧಾರವಾಡ, ಹುಬ್ಬಳ್ಳಿ ಮತ್ತು ಗದಗು ಈ ಊರುಗಳಲ್ಲಿ ಸಿಗ್ರಿಗೇಶನ್ ಕ್ಯಾಂಪ್ ಚಾಲೂ ಆಗಿತ್ತು. ಏಪ್ರಿಲ್ ತಿಂಗಳಲ್ಲಿ ಧಾರವಾಡದ ಮಾರ್ಕೆಟಿನಲ್ಲಿ ಸೋಲ್ಜರರು ಬಂದರೆಂಬ ಹೂಲಿ ಹುಟ್ಟಿ ಜನ ದಿಕ್ಕಾಪಾಲಾಗಿ ಓಡಿಹೋದರು. ಹುಬ್ಬಳ್ಳಿಯಲ್ಲಿ ಪ್ಲೇಗು ನಿಲ್ಲಿಸುವುದಕ್ಕೆ ಓಣಿ ಓಣಿಗಳೇ ಸುಡಲ್ಪಡುತ್ತಿದ್ದವು", ಎಂದು ಆಲೂರು ವೆಂಕಟರಾಯರು ಪರಿಸ್ಥಿತಿಯನ್ನು ಕಣ್ಣಾರೆ ಕಂಡು ವರ್ಣಿಸಿದ್ದು ಮುಂದೆ "ಆ ಕಾಲದಲ್ಲಿಯೇ ಪ್ಲೇಗಿನ ಮಂತ್ರಿಯಾಗಿ ದುಷ್ಕಾಳ ರಾಯರೂ ಬಂದೇ ಬಿಟ್ಟರು. 1896-97 ನೆಯ ಇಸ್ವಿಗಳೆಂದರೆ ಭಯಂಕರ ಬರಗಾಲದ ಕಾಲ. ಧಾರವಾಡ ಪಟ್ಟಣದಲ್ಲಿ ಆಗ ದರೋಡೆಯ ಮೇಲೆ ದರೋಡೆಗಳು. 1897 ನೆಯ ಇಸ್ವಿಯಲ್ಲಿ ಹುಬ್ಬಳ್ಳಿಯ ಪೇಟೆಯು ದುಷ್ಕಾಳದ ಮೂಲಕ ಎರಡು ಸಲ ಲೂಟು ಮಾಡಲ್ಪಟ್ಟಿತು. ಜನರು ಅಷ್ಟು ಅನ್ನಾನ್ನಗತಿಕರಾಗಿದ್ದರು" (ನನ್ನ ಜೀವನ ಸ್ಮೃತಿಗಳು ಪು.32). ಇದರ ಹಿಂದೆಯೇ ಮಿಡಿತೆಗಳ ಹಾವಳಿಯಾಗಿ ಇದ್ದಬಿದ್ದ ಬೆಳೆ ನಾಶವಾಯಿತು.

ಈ ಎಲ್ಲ ಹಿನ್ನಲೆಯಲ್ಲಿ ಬ್ರಿಟಿಷ್ ವಿರೋಧಿ ಭಾವನೆ ರೈತರಲ್ಲೂ ಕಸಬುದಾರರಲ್ಲೂ ಭೂಮಾಲಿಕರಲ್ಲೂ ಬೆಳೆಯುತ್ತ ಬಂತು. ಇದೇ ಕಾಲಕ್ಕೆ ಶಿಕ್ಷಣದ ಪ್ರಮಾಣವೂ ಪತ್ರಿಕೆಗಳ ಸಂಖ್ಯೆಯಲ್ಲೂ ಹೆಚ್ಚಿ ನಗರ ಭಾಗಗಳಲ್ಲಿ ವಿಚಾರವಂತರು ಬೆಳೆದು ರಾಷ್ಟ್ರೀಯ ಚಟುವಟಿಕೆಗಳು ಪ್ರಾರಂಭವಾದವು. 1885 ರಲ್ಲಿ ಆರಂಭವಾದ ಕಾಂಗ್ರೆಸ್ ಮತ್ತು ಲೋಕಮಾನ್ಯರ 'ಕೇಸರಿ'ಗಳ ಪ್ರಭಾವದಿಂದ ವಿವಿಧ ಸ್ವರೂಪದ ಸಂಘ ಸಂಸ್ಥೆಗಳು ಹುಟ್ಟಿ ಸಭೆ, ಉತ್ಸವ ಮುಂತಾದ ಚಟುವಟಿಕೆಗಳು ರಾಷ್ಟ್ರೀಯತೆಯ ಪೋಷಣೆಗೆ ಕಾರಣವಾದವು.

**ರಾಷ್ಟ್ರೀಯ ಚಟುವಟಿಕೆಗಳ ಆರಂಭ**

"ನಾನು ಸುಮಾರು 25 ವರುಷದವನಿದ್ದಾಗ ರಾಷ್ಟ್ರೀಯ ಸಭೆ ಸ್ಥಾಪಿತವಾಯಿತು. ಆದರೆ ದೇಶದಲ್ಲಿ ನಿಜವಾಗಿ ಚಳುವಳಿಯು ಹಬ್ಬಿದ್ದು 1895-96 ರ ಸುಮಾರಕ್ಕೆ" ಎಂದು ಆಲೂರು ವೆಂಕಟರಾಯರು ಹೇಳಿದ್ದು ಧಾರವಾಡ ಜಿಲ್ಲೆಯ ಮಟ್ಟಿಗೂ ನಿಜ.

ಮಹಾರಾಷ್ಟ್ರದಿಂದ ಬರುತ್ತಿದ್ದ "ಜ್ಞಾನಪ್ರಕಾಶ" (1849), "ಇಂದು ಪ್ರಕಾಶ" (1852) ಬೆಳಗಾವಿಯಿಂದ ವೆಂಕಟ ರಂಗೋ ಕಟ್ಟಿಯವರು ಹೊರಡಿಸಿದ್ದ ಕನ್ನಡ "ಕರ್ನಾಟಕ ಪತ್ರ" (1881), ಟಿಳಕರ 'ಕೇಸರಿ' (1881) ಇವೆಲ್ಲ ಆ ಕಾಲದಲ್ಲಿ ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿಗಳಲ್ಲಿ ಪ್ರಸಾರವಿದ್ದ ಪತ್ರಿಕೆಗಳು. 1885 ರ ಮುಂಬೈ ಸರಕಾರದ ವಾರ್ಷಿಕ ವರದಿಯಂತೆ 'ಕೇಸರಿ' ಆಗ ಮುಂಬೈ ಪ್ರಾಂತದಲ್ಲೇ ಅತ್ಯಂತ ಅಧಿಕ ಪ್ರಸಾರದ (4,700) ಪತ್ರಿಕೆ. ಸರಕಾರದ ಪುನರ್ವಿಮರ್ಶಿತ ಕಂದಾಯ ನಿರ್ಣಯ (ರಿವಿಜನ್ ಸೆಟ್ಲಮೆಂಟ್) ಪತ್ರಿಕೆಗಳಿಂದ ಆ ವರ್ಷ ತೀವ್ರ ಟೀಕೆಗೆ ಒಳಗಾಗಿದೆ, ಎಂದು ಅದೇ ವರದಿ ಹೇಳುತ್ತದೆ (ಎ.ಎ.ರಿ. 1885-86, ಪು.181). ಅಲ್ಲದೆ ಸರಕಾರವು ಜಾರಿಗೆ ತಂದ ಅರಣ್ಯ ಕಾನೂನಿನ ಬಗ್ಗೆ ಧಾರವಾಡ ಮುಂತಾದ ಜಿಲ್ಲೆಯ ಜನರಲ್ಲಿ ಅಸಮಾಧಾನ ವ್ಯಕ್ತವಾಗಿದೆ, ಎಂದು ವರದಿ ಹೇಳುತ್ತದೆ.

ಪತ್ರಿಕೆಗಳೇ ವಿದ್ಯಾವಂತರಲ್ಲಿ ಜನಜಾಗೃತಿಗೆ ಕಾರಣವಾಗಿದ್ದು ಮುಂದಿನ 10 ವರ್ಷಗಳಲ್ಲಿ 'ಕೇಸರಿ'ಯ ಪ್ರಸಾರ 13,000 ವಾಯಿತು. ರಂ.ರಾ. ದಿವಾಕರರು ಹೇಳಿರುವಂತೆ ಲೋಕಮಾನ್ಯ ಟಿಳಕರ 'ಕೇಸರಿ' ಮರಾಠಿ ಭಾಷೆಯ ಪತ್ರಿಕೆ ಜನಪ್ರಿಯವಾಗಿದ್ದು ಮುಂದೆ ಎಲ್ಲ ಭಾಷಾ ಪತ್ರಿಕೆಗಳಿಗೂ 'ಕೇಸರಿ' ಎಂಬ ಸಾಮಾನ್ಯ ಹೆಸರು 'ಪೇಪರ್' ಎಂಬಂತೆ ಬಳಸಲ್ಪಡುತ್ತಿತ್ತು. ಇದಲ್ಲದೆ "ವೃತ್ತಾಂತ ಮಂಜರಿ" (1885) "ಲೋಕಬಂಧು" (1880) ಹಾಗೂ "ರಸಿಕ ರಂಜನಿ", ಗದಗ (1884) ಹಾಗೂ "ಹುಬ್ಬಳ್ಳಿ ವೃತ್ತ" ಮುಂತಾದ ಪತ್ರಿಕೆಗಳೂ ಜಿಲ್ಲೆಯಲ್ಲಿ ಇದ್ದವು ಎಂದು ಡಾ|| ಹಾವನೂರ್ ಹೇಳಿದ್ದಾರೆ. ಧಾರವಾಡದಿಂದ 'ಚಂದ್ರೋದಯ' ಎಂಬ ಕನ್ನಡ ಪತ್ರಿಕೆ 1876 ರಿಂದ ಹೊರಡುತ್ತಿದ್ದು ಹುಚ್ಚಯ್ಯಾ ವಿಭೂತಿ ಇದರ ಪ್ರಕಾಶಕರು. ಮುಂದೆ 'ಕರ್ನಾಟಕ ಪತ್ರ' (ಕಟ್ಟಿಯವರು 1883 ರಲ್ಲಿ ಬೆಳಗಾವಿಯಿಂದ ಧಾರವಾಡಕ್ಕೆ ತಂದುದು), 'ಕರ್ನಾಟಕ ವೃತ್ತ' (1895, ಮುದವೀಡ ಕೃಷ್ಣರಾವ್), 'ರಾಜಹಂಸ' (1891, ಬಳವಂತರಾವ್ ಜಠಾರ) 'ಧನಂಜಯ' (ದಿನಪತ್ರಿಕೆ, 1895), ನಾಗಭೂಷಣ (1896), 'ಚಂದ್ರೋದಯ' ಇವೆಲ್ಲ ಆ ಕಾಲದ ಕನ್ನಡ ಪತ್ರಿಕೆಗಳಾಗಿದ್ದು ಅವು 'ಕೇಸರಿ'ಯನ್ನೇ ಹೆಚ್ಚಾಗಿ ಅನುಸರಿಸುತ್ತಿದ್ದವು. ಗದಗಿನಿಂದ 'ಸತ್ಯವೃತ್ತ' (1888) ಪ್ರಕಟವಾಗಿ ಅಲ್ಪ ಕಾಲ ನಡೆಯಿತು. 'ಭವಾನಿ ತಲವಾರ' ಎಂಬ ಶಿವಾಜಿಗೆ ಸಂಬಂಧಿಸಿದ ಗೀತೆ ಪ್ರಕಟಿಸಿದ್ದಕ್ಕೆ 1898 ರಲ್ಲಿ 'ರಾಜಸಿಂಹ' ಕಛೇರಿ ಝಡ್ತಿಯಾಗಿ ಕೆಲಕಾಲ ಪತ್ರಿಕೆ ನಿಂತಿತು. ಈ ಕಾಲದಲ್ಲಿ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಮುಖ್ಯ ಅಧ್ಯಾಪಕರಾಗಿದ್ದ ಖರೆ ಎಂಬ ಪ್ರಚ್ಛನ್ನ ಕ್ರಾಂತಿಕಾರರೇ ಮುದವೀಡು ಕೃಷ್ಣರಾವ್, ಗದಿಗೆಯ್ಯ ಹೊನ್ನಾಪುರಮಠ, ಹೊಸಕೇರಿ ಅಣ್ಣಾಚಾರ್ಯ ಮುಂತಾದವರಿಗೆ ರಾಷ್ಟ್ರೀಯ ದೀಕ್ಷೆ ನೀಡಿದವರು. ಮೇಲೆ ಹೇಳಿದ ಪತ್ರಿಕೆಗಳಲ್ಲಿ ದುಡಿಯುತ್ತಿದ್ದವರಲ್ಲಿ ಇವರುಗಳೇ ಮುಖ್ಯರು. ಶಿವರಾಮಪಂತ ಖಾನೋಳಕರ 'ಧನಂಜಯ'ದ ಪಾಲುಗಾರರಲ್ಲಿ ಒಬ್ಬರು. ಆಗಿನ ಪತ್ರಿಕೆಗಳು ಜನಜಾಗೃತಿ ಸರಕಾರದ ಟೀಕೆಗಳಲ್ಲಿ ಮುಖ್ಯ ಪಾತ್ರವಹಿಸಿದ್ದವು. 1890ರ ಕಾಂಗ್ರೆಸ್ಸಿಗೆ ಅಧ್ಯಕ್ಷರು ಯಾರಾಗಬೇಕೆಂದು 'ಚಂದ್ರೋದಯ' ಪತ್ರಿಕೆ ಚರ್ಚಿಸಿದೆ. ಇಂಗ್ಲೆಂಡ್ ರಷ್ಯಗಳ ನಡುವಿನ ಯುದ್ಧ ಅದರ ವೆಚ್ಚವನ್ನು ಅದು ಉಗ್ರವಾಗಿ ಟೀಕಿಸಿದೆ. ಬ್ರಿಟಿಷ್ ಅಧಿಕಾರಿಗಳ ದುಬಾರಿ ಸಂಬಳ ಭತ್ತೆಗಳ ಬಗ್ಗೆ ಲೇಖನಿ ಹಿರಿದಿದೆ.

1893 ರಲ್ಲಿ ಎ.ಓ. ಹ್ಯೂಂ (ಕಾಂಗ್ರೆಸ್ಸಿನ ಸ್ಥಾಪಕರಲ್ಲಿ ಒಬ್ಬರು) ಬೆಳಗಾವಿ (16.12.1893) ಮತ್ತು ಧಾರವಾಡಗಳನ್ನು ಸಂದರ್ಶಿಸಿ ರಾಜಕೀಯ ಚಟುವಟಿಕೆಗಳಿಗೆ ಚಾಲನೆ ನೀಡಿದ್ದರು.

ಸಹಜವಾಗಿ ರಾಷ್ಟ್ರೀಯ ಚಳುವಳಿಯ ಮುಖ್ಯ ಕೇಂದ್ರ ಬೌದ್ಧಿಕ ಚಟುವಟಿಕೆಗಳ ಕೇಂದ್ರವಾದ ಧಾರವಾಡವೇ ಆಗಿತ್ತು. ಇಲ್ಲಿನ ಸರಕಾರೀ ಹೈಸ್ಕೂಲು, ಬಾಸೆಲ್ ಮಿಶನ್ ಹೈಸ್ಕೂಲು, ಟ್ರೇನಿಂಗ್ ಕಾಲೇಜು, ನ್ಯೂ ಇಂಗ್ಲೀಷ್ ಸ್ಕೂಲ್ (1882), ಮುಂತಾದ ಶೈಕ್ಷಣಿಕ ಸವಲತ್ತುಗಳಿಂದಾಗಿ ಜಿಲ್ಲೆಯ ನಾಲ್ಕು ಕಡೆಯಿದ್ದ ಭೂಮಾಲೀಕ ಶ್ರೀಮಂತರು ಇಲ್ಲಿ ನೆಲೆಸಿದ್ದರು. ಇದಲ್ಲದೆ ಬಾಸೆಲ್ ಮಿಶನ್‌ನ ಜರ್ಮನ್ ವಿದ್ವಾಂಸರು ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಮಹತ್ವ ನೀಡಿ ವಿದ್ಯಾವಂತ ಆಜ್ಞರಲ್ಲಿ ಉತ್ಸಾಹ ಮೂಡಿಸುತ್ತಿದ್ದರು. ಇವೆಲ್ಲದರ ಪರಿಣಾಮವಾಗಿ ಧಾರವಾಡದಲ್ಲಿ (ಆ ಭಾಗದ ಪ್ರಥಮ ಸ್ನಾತಕೋತ್ತರ ಪದವೀಧರ) ಆರ್.ಹೆಚ್. ದೇಶಪಾಂಡೆ (ಮೊದಲ ಎಂ.ಎ. ಪಡೆದವರಾಗಿ 'ಎಂ.ಎ. ದೇಶಪಾಂಡೆ' ಎಂದು ಪರಿಚಿತರು) ಅವರ ಪ್ರಯತ್ನದಿಂದ 1890 ರಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಜಾಗೃತಿಗೆ, ಪರೋಕ್ಷವಾಗಿ ರಾಷ್ಟ್ರೀಯ ಜಾಗೃತಿಗೆ ಕಾರಣವಾಯಿತು. ವಿದ್ಯಾವರ್ಧಕ ಸಂಘಕ್ಕೆ ಅಧ್ಯಕ್ಷರಾಗಿ ಗಣ್ಯ ವಕೀಲ ಮುಂಬೈವಾಸಿ ಶಾಮರಾವ್ ಕಾಯ್ಕಿಣಿ, ಝಿಗ್ಲರ್ ಮುಂತಾದವರಿದ್ದರು. ಮುಂದೆ ಆಲೂರು ವೆಂಕಟರಾಯರು 1905ರ ನಂತರ ಅದರಲ್ಲಿ ಗಣ್ಯ ಪಾತ್ರ ವಹಿಸಲಾರಂಭಿಸಿದರು. ಪುಣೆಯಲ್ಲಿ ಶಿಕ್ಷಣ ಪಡೆದಿದ್ದ ಅವರು ದೇಶ ಹಾಗೂ ಭಾಷಾಭಿಮಾನಗಳೆರಡನ್ನೂ

ಮೈಗೂಡಿಸಿಕೊಂಡವರು. ಈ ಕಾಲದಲ್ಲಿ ಪ್ರಕಟವಾದ ಫ್ಲೀಟರ ಕನ್ನಡ ಜಿಲ್ಲೆಗಳ ಇತಿಹಾಸ (ಇಂಗ್ಲೀಷ್‌ನಲ್ಲಿ) ಮುಂದೆ 1901 ರಲ್ಲಿ ಪ್ರಕಟವಾದ ಸ್ಯುಯೆಲ್ಲರ ವಿಜಯನಗರದ ಇತಿಹಾಸ ('ಎ ಫಾರ್‌ಗಾಟನ್ ಎಂಪಯರ್') ಜನಜಾಗೃತಿಗೆ ಸಾಕಷ್ಟು ಹಿನ್ನೆಲೆ ಒದಗಿಸಿತು. ಧಾರವಾಡದಲ್ಲಿ ಸ್ಥಾಪಿತವಾದ ರೈಲ್ವೆ ಕಛೇರಿ (1888)* ರಂಗಭೂಮಿಯ ಚಟುವಟಿಕೆಗೂ ನೀರೆರೆಯಿತು. ಸಾಹಿತ್ಯ, ಇತಿಹಾಸಗಳ ಅಧ್ಯಯನ, ರಂಗಭೂಮಿ, ಕ್ರಿಡೆ, ಸಂಗೀತ ಮುಂತಾದ ಚಟುವಟಿಕೆಗಳಿಗೆ ಮಹಾರಾಷ್ಟ್ರದಲ್ಲಿ ನಡೆಯುತ್ತಿದ್ದ ಚಟುಪಟಿಕೆಗಳಿಂದ ಪ್ರೇರಣೆ ಸಿಕ್ಕು ಮಿತ್ರ ಸಮಾಜ ಕ್ಲಬ್ (1895-96?) ,ಗೋರಕ್ಷಣೆಯ ಸಂಸ್ಥೆ, ಪ್ರಾಚ್ಯ ಕ್ರೀಡಾ ಸಂವರ್ಧಕ ಮಂಡಲ (1895), ಗಾಯನ ಪಾಠಶಾಲಾ (1896), ವಕ್ತೃತ್ವೋತ್ತೇಜಕ ಸಭಾ (1896) ಇಂಥ ಸಂಸ್ಥೆಗಳು ಧಾರವಾಡದಲ್ಲಿ ಮೂಡಿದವು. ಗಣಪತಿ ಉತ್ಸವ, ಶಿವಾಜಿ ಉತ್ಸವಗಳೂ 1895 ರಿಂದಲೇ ಧಾರವಾಡ, ಹುಬ್ಬಳ್ಳಿ ಮತ್ತು ಇತರ ಊರುಗಳಲ್ಲಿ ಆರಂಭವಾದವು. ವಿದ್ಯಾವರ್ಧಕ ಸಂಘವೇ ಅಲ್ಲದೆ ನ್ಯೂ ಇಂಗ್ಲಿಷ್ ಸ್ಕೂಲ್ (1882), ಗುರುನಾಥರಾವ್ ಪಾಠಕ ಶ್ರಮದಿಂದ ಸ್ಥಾಪನೆಯಾದ ಸಂಸ್ಕೃತ ಪಾಠಶಾಲೆ (1849; 1896 ರಲ್ಲಿ ಕಾಲೇಜಾಯಿತು) ಮುಂತಾದ ಸಂಸ್ಥೆಗಳೂ ರಾಷ್ಟ್ರೀಯ ಚಟುವಟಿಕೆಗೆ ಪೋಷಕವಾಗಿದ್ದವು. ಧಾರವಾಡದಲ್ಲಿ ಗುರುನಾಥರಾವ್ ಪಾಠಕ, ಕೃಷ್ಣಾಜಿ ಗುರೂಜಿ ಮುಂತಾದ ಹಿರಿಯರು ರಾಷ್ಟ್ರೀಯ ಹಾಗೂ ಸಾರ್ವಜನಿಕ ಕಾರ್ಯಗಳಲ್ಲಿ ಆಗ ಗಣ್ಯರೆನಿಸಿದ್ದ ಹಿರಿಯರು. ಲೇಲೇಯವರು ಸ್ಥಾಪಿಸಿದ್ದ ನ್ಯೂ ಇಂಗ್ಲಿಷ್ ಸ್ಕೂಲ್ (1882) ಮುಂದು ವಿಕ್ಟೋರಿಯಾ ಹೈಸ್ಕೂಲಾಯಿತು. ಶಿವಾಜಿ ಉತ್ಸವ, ಗಣೇಶ ಉತ್ಸವ, ಮುಂದೆ ಆಲೂರರು ಆರಂಭಿಸಿದ್ದ ನಾಡಹಬ್ಬಗಳಲ್ಲಿ ಸಾಮೂಹಿಕ ಗಾನಸ್ಪರ್ಧೆ, ಆಟೋಟಗಳ ಸ್ಪರ್ಧೆ, ನಾಟಕ, ಸಂಗೀತ ಮುಂತಾದ ಚಟುವಟಿಕೆಗಳು ಹುಬ್ಬಳ್ಳಿ, ಹಾವೇರಿ, ಗದಗ ಮುಂತಾದ ಊರುಗಳಲ್ಲೂ ಸಾಗಿದವು. 1897 ರಲ್ಲಿ ಕುಂದಗೋಳದಲ್ಲಿ ಶಿವಾಜಿ ಜಯಂತಿ ಉತ್ಸವವಾಯಿತು. ಗದಗಿನಲ್ಲಿ 1896 ರಲ್ಲಿ ಸಂಸ್ಕೃತ ಪಾಠಶಾಲೆ ಆರಂಭವಾಯಿತು. ಅದೇ ಊರಲ್ಲಿ 1887ರಲ್ಲಿ ಹುಯಿಲಗೋಳ ಶ್ರೀನಿವಾಸರಾಯರ ಯತ್ನದಿಂದ ಯಂಗ್‌ಮೆನ್ಸ್ ಫೂಟ್‌ಬಾಲ್ ಕ್ಲಬ್ ಆರಂಭವಾಯಿತು. ಮುಂದೆ ಇದು ಕಲಾ ವಿಲಾಸೀ ಸಂಘವೂ ಆಗಿ ರಾಷ್ಟ್ರೀಯ ವೃತ್ತಿಯ ನಾಟಕಗಳನ್ನು ಆಡುತ್ತಿತ್ತು.

1899 ರಲ್ಲಿ ಪ್ಲೇಗಿನ ವಿರುದ್ಧ ಮೈಲಿ ಚುಚ್ಚುವ ಕ್ರಮದಿಂದ ಧಾರವಾಡದಲ್ಲಿ ಒಂದು ರೀತಿಯ ರಾಜಕೀಯ ಸ್ವರೂಪದ ಚಳವಳಿಯಾಯಿತು. 1898 ರಲ್ಲಿ ಜೈಲು ಸೇರಿದ್ದ ಟಿಳಕರು 1899 ರಲ್ಲಿ ಬಿಡುಗಡೆ ಆಗಿ ಬಂದಿದ್ದರು. ಅವರ ಲೇಖನಗಳು ಜನರನ್ನು ಕೆರಳಿಸುವಂತೆ ಇದ್ದವು. ಪ್ಲೇಗ್ ಮೈಲಿಯು (ವ್ಯಾಕ್ಸಿನೇಶನ್) ಇನ್ನೂ ಪ್ರಾಯೋಗಿಕ ಸ್ಥಿತಿಯಲ್ಲಿ ಇದ್ದು ಅದರಿಂದ ಆಗುತ್ತಿದ್ದ ಪಾರ್ಶ್ವ ಪರಿಣಾಮಗಳು ವಿಲಕ್ಷಣವಾಗಿ, ಜನರು ನಾನಾ ರೀತಿಯ ತೀವ್ರತರ ದೈಹಿಕ ತೊಂದರೆಗಳಿಗೆ ಒಳಗಾಗಲು ಕೃಷ್ಣಾಜಿ ಗುರೂಜಿ ಈ ಬಗ್ಗೆ ಧಾರವಾಡದಿಂದ ಒಂದು ಪತ್ರ ಬರೆದು 'ಕೇಸರಿ'ಯಲ್ಲಿ ಮುದ್ರಿಸಿದರು. ಧಾರವಾಡದ ಕನ್ನಡ ಪತ್ರಿಕೆಗಳು ('ಕರ್ನಾಟಕದ ವೃತ್ತ' ಹಾಗೂ 'ರಾಜಹಂಸ') ಈ ಬಗ್ಗೆ ಲೇಖನ ಬರೆದವು. ಇದೆಲ್ಲದರ ಪರಿಣಾಮವಾಗಿ 1900 ರಲ್ಲಿ ಒತ್ತಾಯದಿಂದ ವ್ಯಾಕ್ಸಿನೇಶನ್ ಮಾಡದಿರಲು ಸರಕಾರೀ ಆದೇಶ ಬಂತು. ಚಳವಳಿಗಳಿಂದ ಸರಕಾರ ನಿಲುವನ್ನು ಬದಲಾಯಿಸಲು ಬರುವುದೆಂಬ ಬಗ್ಗೆ ರಾಷ್ಟ್ರೀಯ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮೂಡಿತು. 1902 ರಲ್ಲಿ ಧಾರವಾಡದಲ್ಲಿ ಥಿಯೊಸಫಿಕಲ್ ಸೊಸೈಟಿ ಆರಂಭವಾಯಿತು. ಅಲ್ಲಿನ ಭಾಷಣಗಳು ಭಾರತೀಯ ಧರ್ಮ, ಪರಂಪರೆಗಳನ್ನು ಟೀಕಿಸುವವರಿಗೆ ಪಾಶ್ಚತ್ಯರಿಂದಲೇ ಸಿಗುತ್ತಿದ್ದ ಉತ್ತರಗಳನ್ನು ಕೇಳಲು ಜನರಿಗೆ ಅವಕಾಶವಾಯಿತು. ಈ ಕಾಲಕ್ಕೆ ಕಾಂಗ್ರೆಸ್ಸಿನ ಅಧೀವೇಶನಗಳಿಗೂ ಇತರ ರಾಜಕೀಯ ಸಮ್ಮೇಳನಗಳಿಗೂ ಧಾರವಾಡದಿಂದ ಕಾರ್ಯಕರ್ತರು ಹೋಗುತ್ತಿದ್ದು 1902 ರಲ್ಲಿ ಸತಾರಾದಲ್ಲಿ ನಡೆದ ಮುಂಬೈ ಪ್ರಾಂತರ ರಾಜಕೀಯ ಪರಿಷತ್ತಿಗೆ ಅನೇಕ ಧಾರವಾಡ ಜಿಲ್ಲೆಯ ಜನ ಹೀಗೆ ಹೋಗಿದ್ದರು. ಇದಕ್ಕೂ ಪೂರ್ವದಲ್ಲಿ 1895 ರಲ್ಲಿ ಇಂಥದೇ ಸಮ್ಮೇಳನ ದಿನ್‌ಷಾ ವಾಚಾ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಆಗಿತ್ತು.

1901 ರಲ್ಲಿ ಸರಕಾರವು ತಂದ ಹೊಸ ಭೂಕಂದಾಯ ಮಸೂದೆಯನ್ನು ಪ್ರತಿಭಟಿಸಿ ಧಾರವಾಡದಲ್ಲಿ ಭಾರಿ ಸಭೆಯು ಜುಲೈ 17 ಕ್ಕೆ ನಡೆಯಿತು. ಅದೇ ವರ್ಷ ಧಾರವಾಡದ ರಾಷ್ಟ್ರೀಯ ಮನೋವೃತ್ತಿಯ ಜನ ಕರ್ನಾಟಕ ಎಜುಕೇಶನ್ ಸೊಸೈಟಿ (1882) ಸ್ಥಾಪಿಸಿದ್ದ ನ್ಯೂ ಇಂಗ್ಲಿಷ್ ಸ್ಕೂಲನ್ನು ವಿಕ್ಟೋರಿಯಾ ಹೈಸ್ಕೂಲೆಂದು ಹೆಸರಿಟ್ಟು ತಮ್ಮ ವಶಕ್ಕೆ ತೆಗೆದುಕೊಂಡರು (ಅದೇ ಈಗಿನ ವಿದ್ಯಾರಣ್ಯ ಹೈಸ್ಕೂಲು).

---

* ಆ ಕಛೇರಿಯ ಬಗ್ಗೆ ಆಲೂರರು ಹೀಗೆ ಹೇಳಿದ್ದಾರೆ: 'ಅಲ್ಲಿಯ ಕಾರಕೂನರೇ ಮುಂತಾದವರು ಸುಶಿಕ್ಷಿತರಿದ್ದು, ಸರಕಾರೀ ನವಕರರಷ್ಟು ನಿರ್ಬಂಧಗಳು ಅವರಿಗೆ ಇದ್ದಿರಲಿಲ್ಲ, ಆದ ಕಾರಣ ಅವರು ಚಳವಳಿಗಳಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು.'

1902 ರ ಸತಾರಾ ಪರಿಷತ್ತಿನ ನಂತರ 1903 ರಲ್ಲಿ ಧಾರವಾಡದಲ್ಲಿ ಮುಂಬೈ ಪ್ರಾಂತ ರಾಜಕೀಯ ಪರಿಷತ್ತು ನಡೆದು ಲೋಕಮಾನ್ಯರ ಮಿತ್ರರಾದ ದಾಜಿ ಆಬಾಜಿ ಖರೆ ಅಧ್ಯಕ್ಷರಾದರು. ಸ್ವಾಗತ ಸಮಿತಿಯ ಅಧ್ಯಕ್ಷರು ಅಠವಲೆ ಪಾಂಡುರಂಗರಾಯರು. ಗದಿಗೆಯ್ಯ ಹೊನ್ನಾಪುರಮಠ ಸ್ವಾಗತ ಸಮಿತಿ ಕಾರ್ಯದರ್ಶಿಗಳಲ್ಲಿ ಒಬ್ಬರು. ಟಿಳಕರೂ ಈ ಪರಿಷತ್ತಿಗೆ ಬಂದಿದ್ದರು. ಅಲ್ಲದೆ ಫಿರೋಜ್ ಷಾ ಮೆಹ್ತಾ, ದಿನಶಾ ವಾಚಾ, ಗೋಪಾಲಕೃಷ್ಣ ಗೋಖಲೆ ಇವರುಗಳೂ ಬಂದಿದ್ದರು. ಅದ್ದೂರಿಯಿಂದ ನಡೆದ ಈ ಪರಿಷತ್ತು ಜಿಲ್ಲೆಯಲ್ಲಿ ವಿಶೇಷ ಜಾಗೃತಿಗೆ ಕಾರಣವಾಯಿತು. ವಕೀಲ ಗುರುನಾಥರಾವ್ ಪಾಠಕ್ ಇದಕ್ಕಾಗಿ , ತುಂಬ ಹಣ ಖರ್ಚುಮಾಡಿದರು.

ಈ ಹಿನ್ನೆಲೆಯಲ್ಲಿ ವಂಗಭಂಗದ ಸೂಚನೆ ಬಂದು ಈ ಬಗ್ಗೆ ಸಾಕಷ್ಟು ಪ್ರತಿಕ್ರಿಯೆ, ಉಗ್ರ ಚಳುವಳಿಗಳು ಮಹಾರಾಷ್ಟ್ರ, ಪಂಜಾಬ್, ಬಂಗಾಳಗಳಲ್ಲಿ ಆದರೂ ಆ ಕಾಲದಲ್ಲಿ ಕರ್ನಾಟಕದಲ್ಲಿ ಇನ್ನೂ ಅದರ ಬಿಸಿ ಏರಿರಲಿಲ್ಲ. ಅದೇ ಆಗ ವಕೀಲ ಶಿಕ್ಷಣ ಮುಗಿಸಿ ಪುಣೆ, ಮುಂಬೈಗಳಲ್ಲಿನ ಉಗ್ರ ಚಳವಳಿಗಳ ವಾತಾವರಣವನ್ನು ಕಂಡು ಧಾರವಾಡಕ್ಕೆ ಮರಳಿದ ಆಲೂರು ವೆಂಕಟರಾಯರಿಂದ ಧಾರವಾಡದ ಅಂದಿನ ಸ್ಥಿತಿಯು "ಕಾಲೇಜದಿಂದ ಕರ್ನಾಟಕಕ್ಕೆ ಬಂದ ಕೂಡಲೇ ಕತ್ತಲೆ ಕವಿದ ಕಟ್ಟಡವಿಯಲ್ಲಿ ಕಣ್ಣು ಕಟ್ಟಿ ಬಿಡಲ್ಪಟ್ಟವರಂತೆ ನನ್ನ ಅವಸ್ಥೆ ಆಗುತ್ತಿತ್ತು," (ನ.ಜೇ.ಸ್ಮೃತಿಗಳು, ಪು.72) ಎಂದು ವರ್ಣಿಸಲ್ಪಟ್ಟಿದ್ದು "ಸ್ವದೇಶ ಚಳವಳಿಯು ಎಷ್ಟೇ ಜೋರಿನಲ್ಲಿದ್ದರೂ, ಧಾರವಾಡಕ್ಕೆ ಅದರ ತೆರೆಗಳು ಬಲವಾಗಿ ಬಂದು ಅಪ್ಪಳಿಸಿರಲಿಲ್ಲ. ಸಾಯಂಕಾಲಕ್ಕೆ ಸಾರ್ವಜನಿಕ ಸಭೆಗಳನ್ನು ಮಾಡಿದರೆ ಸಾಕಾಗುತ್ತಿತ್ತು", ಎಂದು ಅವರು ಹೇಳಿದ್ದು (ಪು. 87) "ಬಂಗಾಲವು ಎರಡೇ ಭಾಗಗಳಾಗಿ ಮಾಡಲ್ಪಟ್ಟರೆ ಬಂಗಾಲಿಗಳು ಇಷ್ಟು ವಿಲಕ್ಷಣವಾದ ಚಳವಳಿಯನ್ನು ಮಾಡುತ್ತಿರಲು, ಹರಿದು ಹರಪಡಿಯಾಗಿ ಹೋದರೂ ಕರ್ನಾಟಕವೂ ಇನ್ನು ಎಚ್ಚತ್ತಿಲ್ಲವಲ್ಲಾ" ಎಂದು ಹಲುಬಿದ್ದಾರೆ. ಅಲ್ಲದೆ "ಕರ್ನಾಟಕವು ಘೋರ ನಿದ್ರೆ ಮಾಡುತ್ತಿರುವುದಕ್ಕೆ ಅದು ಒಡೆದು ತುಂಡಾಗಿರುವುದೇ ಮುಖ್ಯ ಕಾರಣವೆಂಬ ಕಲ್ಪನೆಯು ಆಗ ನನ್ನ ಮನಸ್ಸಿನಲ್ಲಿ ಝಗ್ಗನೆ ಮಿಂಚಿನಂತೆ ಹೊಳೆಯಿತು." ಎಂದು ವಿವರಿಸಿದ್ದಾರೆ (ಪು. 88).

ಮುಂದೆ ಅದೇ ವರ್ಷ ಹಂಪೆಯನ್ನು ಸಂದರ್ಶಿಸಿದ ಅವರು ಅಲ್ಲಿನ ಪ್ರಾಚೀನ ಭವ್ಯ ವಿಜಯನಗರ ಸಾಮ್ರಾಜ್ಯದ ಅವಶೇಷಗಳನ್ನು ಕಂಡು ವಿಜಯನಗರದ ಇತಿಹಾಸದಿಂದ ಉತ್‌ಸ್ಫೂರ್ತರಾಗಿ ಏಕೀಕರಣ ಮತ್ತು ಸ್ವಾತಂತ್ರ್ಯ ಇವೆರಡಕ್ಕೂ ಕೂಡಿಯೇ ಚಳವಳಿಯನ್ನು ನಡೆಸಬೇಕೆಂದು ಕಂಡುಕೊಂಡು ಕಾರ್ಯಾರಂಭ ಮಾಡಿದರು. ವಿದ್ಯಾವರ್ಧಕ ಸಂಘದ ಕಾರ್ಯಕರ್ತರಾಗಿ 1907 ಮತ್ತು 1908ರಲ್ಲಿ ಅಲ್ಲಿ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ಏರ್ಪಡಿಸಿದರು. ಏಕೀಕರಣದ ಪರ 'ವಾಗ್ಭೂಷಣ' ಪತ್ರಿಕೆಯಲ್ಲಿ ಲೇಖನ ಬರೆದರು (1907). ಕರ್ನಾಟಕದ ಇತಿಹಾಸದ ಅಧ್ಯಯನಕ್ಕೆ ತೊಡಗಿ 1917ರಲ್ಲಿ 'ಕರ್ನಾಟಕ ಗತವೈಭವ' ಪ್ರಕಟಿಸಿದರು. ನಾಡಹಬ್ಬ ಹಾಗೂ ಕರ್ನಾಟಕದ ವಿವಿಧ ಕವಿ, ಸಂತರಾದಿ ಗಣ್ಯರಿಗೆ ಸಂಬಂಧಿಸಿ ಉತ್ಸವಗಳನ್ನು ಆಚರಿಸಲು ಪ್ರೇರೇಪಣೆ ನೀಡಿ 'ಕರ್ನಾಟಕ ಕುಲಪುರೋಹಿತ'ರೆನಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೂ (1915) ಕಾರಣಕರ್ತರಾಗಿ ದುಡಿದರು. ಮುಂದೆ ನಡೆದ ಸಾಹಿತ್ಯ ಸಮ್ಮೇಳನಗಳು ಕನ್ನಡ ಬುದ್ಧಿಜೀವಿಗಳಲ್ಲಿ ಭಾವೈಕ್ಯಕ್ಕೆ ದಾರಿಮಾಡಿದ ವಿಚಾರ ಸರ್ವವಿದಿತ; 1915ರಲ್ಲಿ ಏಕೀಕರಣವನ್ನು ಗುರಿಯಾಗಿ ಹೊಂದಿದ್ದ 'ಕರ್ನಾಟಕ ಸಭೆ' ಧಾರವಾಡದಲ್ಲಿ ಹೊನ್ನಾಪುರಮಠ ಅವರ ಮನೆಯಲ್ಲಿ ಸೇರಿದ ಸಭೆಯಲ್ಲಿ ಆರಂಭವಾಗಲು ಆಲೂರರು ಕಾರಣ.

ಹೀಗೆ ಸ್ವಾತಂತ್ರ್ಯ ಚಳವಳಿ ಹಾಗೂ ಏಕೀಕರಣ ಚಳವಳಿಗಳು ಜೊತೆ ಜೊತೆಯಾಗಿ ಎರಡೂ ಬಲವತ್ತರವಾಗಿ ಇಡೀ ಕರ್ನಾಟಕದಲ್ಲಿ ಬೆಳೆಯಲು ಆಲೂರರು ಮೂಲ ಕಾರಣರಾಗಿ ಧಾರವಾಡವೇ ಇದಕ್ಕೆ ಕೇಂದ್ರವಾಗಿತ್ತು. "ಧಾರವಾಡವೇ ರಾಷ್ಟ್ರೀಯ ನವಜಾಗೃತಿಯ ಬೀಡಾಗಿತ್ತು. ವಿಶೇಷತಃ ಕನ್ನಡ, ಕರ್ನಾಟಕ, ಕರ್ನಾಟಕ ಏಕೀಕರಣ ಇವುಗಳ ಬಗ್ಗೆ ಇಡೀ ಕರ್ನಾಟಕದಲ್ಲಿ ನವ ಜೀವನವನ್ನು ಹುಟ್ಟಿಸಿದ ಶ್ರೇಯಸ್ಸು ಆಗಿನ ಧಾರವಾಡದ ಮುಖಂಡರಿಗೆ ಸೇರುವುದು" ಎಂದು ಡಾ॥ ರಂ.ರಾ. ದಿವಾಕರರು ಒಂದೆಡೆ ಹೇಳಿದ್ದು (ಹೊನ್ನಪುರ, ಪು. 20) ಆಲೂರರ ಸಾಧನೆಯಾದ ಏಕೀಕರಣದ ಗುರಿ ಎಷ್ಟು ಸಮರ್ಪಕವಾಗಿ ರಾಷ್ಟ್ರೀಯ ಜಾಗೃತಿಗೂ ನೆರವಾಯಿತು ಎಂಬ ವಿಚಾರ ಒತ್ತಿ ಹೇಳುತ್ತ "ಸುಮಾರು 1905ರಿಂದ 1920ರವರೆಗಿನ ಕಾಲದಲ್ಲಿ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟ ಕರ್ನಾಟಕದ ಕಾರ್ಯಕರ್ತರು ಎರಡು ಕನಸುಗಳನ್ನು ಕಂಡರು, ಎರಡು ಕಲ್ಪನೆಗಳನ್ನು ಕಟ್ಟಿದರು, ಎರಡು ನಕಾಶೆಗಳನ್ನು ಮುಂದಿಟ್ಟುಕೊಂಡರು, ಒಂದು ಭಾರತದ ಸ್ವಾತಂತ್ರ್ಯ, ಇನ್ನೊಂದು ಕರ್ನಾಟಕದ ಏಕೀಕರಣ', ಎಂದು ಈ ಬಗೆಗಿನ ಸನ್ನಿವೇಶದ ಚಿತ್ರವನ್ನು ನಮ್ಮ ಮುಂದಿಡುತ್ತಾರೆ ('ಕರ್ನಾಟಕ ಏಕೀಕರಣದ ಕಥೆ' ಪು. 1 ). ಧಾರವಾಡದಲ್ಲಿ ಆಗ ಕನ್ನಡದ ಹಾಗೂ

ರಾಷ್ಟ್ರೀಯ ಚಳವಳಿಗಳೆರಡರಲ್ಲೂ ಮುಖ್ಯ ಪಾತ್ರ ವಹಿಸುತ್ತಿದ್ದ ಆಲೂರರು, ಮುದವೀಡು ಕೃಷ್ಣರಾವ್ ಮತ್ತು ವೆಂಕಟರಾವ್, ನರಗುಂದ ರಾಮರಾಯರು, ಕಡಪಾ ರಾಘವೇಂದ್ರರಾಯರು, ನಾ ಶ್ರೀ. ರಾಜಪುರೋಹಿತ ಹಾಗೂ ದೇಶಪಾಂಡೆ ನಾರಾಯಣರಾಯರನ್ನು 'ಕನ್ನಡದ ಸಪ್ತರ್ಷಿ'ಗಳೆಂದು ಕರೆಯಲಾಗುತ್ತಿತ್ತು. (ಸ್ವಾ.ಸಂ.ಸ್ಮೃ.III ಪು. 325)

ಆದರೆ ಈ ಕಾಲದಲ್ಲಿ ಸ್ವಾತಂತ್ರ್ಯ ಚಳವಳಿಯು ಧಾರವಾಡದಲ್ಲಿ ತೀವ್ರವಾಗಿತ್ತಾದರೂ ಜಿಲ್ಲೆಯ ಉಳಿದ ಕೇಂದ್ರಗಳಲ್ಲಿ ಇರಲೇ ಇಲ್ಲವೆಂದು ಭಾವಿಸಲಾಗದು. ಉಳಿದ ಪಟ್ಟಣಗಳಲ್ಲೂ ಒಂದಲ್ಲ ಒಂದು ರೀತಿಯ ಚಟುವಟಿಕೆ ನಡೆದಿದ್ದರೂ ಧಾರವಾಡದಲ್ಲಿ ಅದು ತಕ್ಕಮಟ್ಟಿಗೆ ತೀವ್ರವಾಗಿ ಇತ್ತು.

ಹುಬ್ಬಳ್ಳಿಯಲ್ಲೂ ರಾಷ್ಟ್ರೀಯ ಚಟುವಟಿಕೆಗಳು ಸಾಗಿದ್ದವು. ಶಾಲಾ ವಿದ್ಯಾರ್ಥಿಯಾಗಿದ್ದ ನಾ.ಸು.ಹರ್ಡೀಕರರು ಆಗ ಲ್ಯಾಮಿಂಗ್ಟನ್ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದು 1904ರ ಸುಮಾರಿಗೆ ಆರ್ಯಬಾಲ ಸಭಾ ಎಂಬ ಎಳೆಯರ ಸಂಘಟನೆ ಆರಂಬಿಸಿ ಓರಗೆಯ ಬಾಲಕರಿಗೆ ಅಂಗಸಾಧನೆ, ವಾಚನಾಲಯ, ವಂಗಭಂಗದ ಹಿನ್ನೆಲೆಯಲ್ಲಿ ಸ್ವದೇಶಿ ವಸ್ತುಗಳ ಮಾರಾಟದ ಪ್ರಚಾರ ಸಭೆ ಮುಂತಾದವನ್ನು ನಡೆಸುತ್ತಿದ್ದರು. ಗಣೇಶೋತ್ಸವ, ಶಿವಾಜಿ ಉತ್ಸವ, ಸ್ವದೇಶಿ ಆಟಗಳು ಇವೆಲ್ಲವನ್ನೂ ಸಂಘಟಿಸುತ್ತಿದ್ದರು. ಕಲಘಟಗಿಗೂ ಹೋಗಿ ಶಿವಾಜಿ ಉತ್ಸವ ನಡೆಸಿದರು. 1906ರ ಸುಮಾರಿಗೆ ವಿಶ್ವನಾಥ್‌ರಾವ್ ಜೋಶಿ ಎಂಬ ವಕೀಲರು ಚಳವಳಿಯ ಚಟುವಟಿಕೆಯಲ್ಲಿ ಮುಂದಾದರು. ಎಲ್ಲ ಸಾರ್ವಜನಿಕ ಕಾರ್ಯಗಳಲ್ಲಿ ಉತ್ಸಾಹದಿಂದ ಹುಬ್ಬಳ್ಳಿಯಲ್ಲಿ ಭಾಗವಹಿಸುತ್ತಿದ್ದ ಹರ್ಡೀಕರರು ಇನ್ನೂ 14 ವರ್ಷದ ಬಾಲಕರಾಗಿದ್ದಾಗ ಹುಬ್ಬಳ್ಳಿಯ ರಾಬರ್ಟ್‌ಸನ್ ಮಾರ್ಕೆಟಿಗೆ ಭಾರಿ ಬೆಂಕಿ ಬಿದ್ದಾಗ ಅದನ್ನು ನಂದಿಸಲು ತೋರಿದ ಅಪಾರ ಧೈರ್ಯ ಸಾಹಸಗಳಿಂದ ಬೆಂಕಿಯಿಂದ ನೊಂದ ವ್ಯಾಪಾರಿಗಳಲ್ಲಿ ಮುಂದೆ ತೀರ ಜನಪ್ರಿಯರಾದರು.

ಈ ಬೆಂಕಿ ಪ್ರಕರಣವು ಹುಬ್ಬಳ್ಳಿಯ ಇತಿಹಾಸದಲ್ಲಿ ಮಹತ್ವದ್ದು. ಒತ್ತೊತ್ತಾಗಿದ್ದ ಸಂದಿಗೊಂದಿಗಳ ಪೇಟೆ ನಾಶವಾಗಿ ಈಗಿನ ವಿಶಾಲ ದುರ್ಗದ ಬೈಲಿನ ಹೊಸ ಮಾರುಕಟ್ಟೆ ರೂಪ ತಾಳಲು ಈ ಅಗ್ನಿಕಾಂಡ ಕಾರಣವಾಯಿತು. ಇದೇ ಕಾಲಕ್ಕೆ ಹರ್ಡೇಕರ್ ಮಂಜಪ್ಪನವರು 'ಧನುರ್ಧಾರಿ' (1904) ಪತ್ರಿಕೆಯನ್ನು ಕೆಲವು ಕಾಲ ಇಲ್ಲಿಂದ ನಡೆಸಿದರು. ಮುಂದೆ ಬಿಂದೂರಾವ್ ಮುತಾಲಿಕ ದೇಸಾಯಿ ಎಂಬವರು 'ಕನ್ನಡ ಕೇಸರಿ' (1906) ಪತ್ರಿಕೆ ಆರಂಭಿಸಲು ಹರ್ಡೀಕರರು ಅದರಲ್ಲಿ ಲೇಖನ ಬರೆಯುತ್ತಿದ್ದರು. ಇದು ಮರಾಠಿ 'ಕೇಸರಿ'ಯ ಅನುಕರಣೆಯೇ ಆಗಿತ್ತು. ಮುಂದೆ 1908ಕ್ಕೆ ಹುಬ್ಬಳ್ಳಿಗೆ ಬಂದ ರಂಗರಾವ್ ದಿವಾಕರರು ಟಿಳಕರಿಗೆ ಶಿಕ್ಷೆ ಆದಾಗ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ರಾಮರಾವ್ ಶೆವಡೆ (ಆಗ ಬೇರೆ ಊರಿಗೆ ಶಿಕ್ಷಣಕ್ಕೆ ತೆರಳಿದ್ದ ಹರ್ಡೀಕರರ ಸಂಬಂಧಿ), ವಿಷ್ಣು ಟೆಂಬೆ, ಮಧ್ವರಾವ್ ಕಬ್ಬೂರ್ ಇವರ ಜೊತೆ ಒಂದು ದಿನ ಶಾಲೆ ತ್ಯಜಿಸಿ ಶಾಲೆಯಿಂದ ದಂಡಕ್ಕೆ ಒಳಪಟ್ಟರು. ಊರಲ್ಲಿ ತಕ್ಕಮಟ್ಟಿಗೆ ರಾಷ್ಟ್ರೀಯ ವಾತಾವರಣ ಇತ್ತು.

1907ರಲ್ಲಿ ಟಿಳಕರು ಧಾರವಾಡಕ್ಕೆ ಬಂದು ಈಗಿನ ಅಂಜುಮಾನ್ ಮೈದಾನದಲ್ಲಿ ಭಾಷಣ ಮಾಡಿದರು. ಗದಿಗೆಯ್ಯ ಹೊನ್ನಾಪುರ ಮಠ ಅವರು ಆಗ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. (ಹೊನ್ನಪುರ, ಪು. 36). "ರಾಷ್ಟ್ರೀಯ ಕಾಂಗ್ರೆಸ್ಸಿಗೆ ಬೆಂಬಲಕೊಟ್ಟ ಮೊದಲ ವೀರಶೈವ ವೀರಾಳು", ಎಂದು ಆರ್.ವಿ. ಜಠಾರರು ಗದಿಗೆಯ್ಯನವರನ್ನು ಉಲ್ಲೇಖಿಸಿದ್ದಾರೆ. ('ಹೊನ್ನಪುರ', ಪು. 39). ಟಿಳಕರ ಬಂಧನವಾದಾಗ ಕಲಘಟಗಿ ತಾಲೂಕಿನ ಮಿಶ್ರಿಕೋಟಿಯಂಥ ಊರಲ್ಲೂ ಆಗ ರಾಷ್ಟ್ರೀಯ ಚಟುವಟಿಕೆಗಳು ಆರಂಭವಾಗಿದ್ದು. ಹಾವೇರಿಯಲ್ಲಿ ಕೃಷ್ಣಾಚಾರ್ಯ ಕೊಲ್ಲಾಪುರ ಅವರು ವಂಗಭಂಗದ ಪ್ರತಿಭಟನಾರ್ಥ ಚಳವಳಿ ಆರಂಭಿಸಿ ಮನೆಮನೆಯಿಂದ ಅಕ್ಕಿ ಸಂಗ್ರಹಿಸಿ (ಮುಷ್ಟಿಫಂಡ್) ಟಿಳಕರಿಗೆ ಹಣ ಕಳುಹಿಸುತ್ತಿದ್ದರು (ಸ್ವಾ.ಸಂ.ಸ್ಮೃ.I, ಪು. 758). ಇದೇ ಕಾಲಕ್ಕೆ ಧಾರವಾಡದಿಂದ ಬಂದ ನಾಯಕರು ಪರದೇಶಿ ವಸ್ತುಗಳ ಬಹಿಷ್ಕಾರದ ಬಗ್ಗೆ ಉಪನ್ಯಾಸ ನೀಡುತ್ತಿದ್ದರು. ಆಲೂರು ವೆಂಕಟರಾಯರು ಆಗ ತಮ್ಮ ವಕೀಲಿಯನ್ನು ತ್ಯಜಿಸಿದ್ದರು.

1905-06ರಿಂದ ಆರಂಭವಾದ ಸ್ವದೇಶಿ ಚಳವಳಿಯ ಚಟುವಟಿಕೆಗಳು ಹಲವು ರೂಪ ತಳೆದವು. ಹಲವೆಡೆ ರಾಷ್ಟ್ರೀಯ ಶಾಲೆಗಳು ಆರಂಭವಾದವು. ಧಾರವಾಡದಲ್ಲಿ ಕರ್ನಾಟಕ ನೂತನ ವಿದ್ಯಾಲಯವೆಂಬ ರಾಷ್ಟ್ರೀಯ ಶಾಲೆಯನ್ನು ಆಲೂರರು ಆರಂಭಿಸಿದರು (1908). ಇಂಥದೇ ಶಾಲೆಗಳು ಹುಬ್ಬಳ್ಳಿ (ಭುರ್ಸೆ ಎಂಬವರ ಪ್ರಯತ್ನದಿಂದ), ನವಲಗುಂದ (ರಾಮಭಾವು ಜೋಶಿ, ಜೀವಪ್ಪ ಆನೆಗೊಂದಿ ಇವರ ಯತ್ನದಿಂದ) ನರಗುಂದ, ಹಾನಗಲ್, ಆಗಡಿಗಳಲ್ಲಿ (ಟೆಂಬೆ ಮುಂತಾದವರಿಂದ), ಆರಂಭವಾದವು.

(ನ.ಜೀ.ಸ್ಮೃತಿಗಳು, ಪು. 118). ಅಗಡಿಯ ಆನಂದವನದ ಶೇಷಾಚಲ ಸದ್ಗುರು ಆಶ್ರಮದ ಪ್ರೇರಣೆಯಿಂದ 'ಸದ್ಬೋಧ ಚಂದ್ರಿಕೆ' (1907) ಮಾಸ ಪತ್ರಿಕೆಯನ್ನೂ ಶೇಷಾಚಲ ಗ್ರಂಥ ಮಾಲೆಯನ್ನೂ ಗಳಗನಾಥರು ಆರಂಭಿಸಿದ್ದು ಸರ್ವವಿದಿತ. ಮಹಾರಾಷ್ಟ್ರದ ಇತಿಹಾಸದ ಬಗ್ಗೆ ಶೇಷಾಚಲ ಗ್ರಂಥ ಮಾಲೆ ಪ್ರಕಟಿಸಿದ ಕನ್ನಡ ಕಾದಂಬರಿಗಳು ತರುಣರಲ್ಲಿ ದೇಶ ಭಕ್ತಿಯನ್ನು ಬಡಿದೆಬ್ಬಿಸಿದವು. (ವಾಟವೆ ಎಂಬ ಹಾವೇರಿ ತಾಲೂಕಿನ ಸ್ವಾತಂತ್ರ್ಯ ಯೋಧರು ಹೇಳುವಂತೆ "ನಮ್ಮ ಭಾಗದಲ್ಲಿ ತರುಣರಲ್ಲಿ ದೇಶಭಕ್ತಿ ಹೊಡೆದೆಬ್ಬಿಸಿದ್ದು ಗಳಗನಾಥರ ಕಾದಂಬರಿಗಳು" ಸ್ವಾ.ಸಂ.ಸ್ಮೃ.III, ಪು. 397). ಮುಂದೆ ಗಳಗನಾಥರು ಗುತ್ತಲಕ್ಕೆ ಬಂದು ಅಧ್ಯಾಪಕರಾದರು. ಹಾನಗಲ್ಲಿನಲ್ಲಿ ಬಾಳಂಭಟ್ಟ ಹಾವನೂರರು ಗಣೇಶ ಉತ್ಸವವನ್ನು ಈ ಶತಮಾನದ ಆರಂಭದಿಂದ ನಡೆಸುತ್ತಿದ್ದು ಶ್ರೀನಿವಾಸರಾವ್ ಕೋಟಿ, ಶ್ಯಾಮಾಚಾರ್ಯ ಹಾನಗಲ್, ಹನುಮಂತ ಕುಲಕರ್ಣಿ, ರಂಗಾಚಾರ್ಯ ಗದಗಕರ ಇವರೆಲ್ಲ ಆರಂಭದ ದಿನದ ನಾಯಕರು (ಸ್ವಾ.ಸಂ.ಸ್ಮ.1 ಪು. 826 ). ಈ ಕಾಲದಲ್ಲಿ ಎಲ್ಲ ದೊಡ್ಡ ಊರುಗಳಲ್ಲೂ ಒಂದಲ್ಲ ಒಂದು ವಿಧದ ರಾಷ್ಟ್ರೀಯ ಚಟುವಟಿಕೆಗಳು ನಡೆಯುತ್ತಿದ್ದು ಕೇಂದ್ರ ಪಟ್ಟಣಗಳಿಂದ ನಾಯಕರು ಸಣ್ಣ ಊರುಗಳಿಗೂ ಹೋಗಿ ಪ್ರಚಾರ ನಡೆಸುತ್ತಿದ್ದರು.

ಇದೇ ಕಾಲಕ್ಕೆ ಸ್ವದೇಶಿ ಚಳುವಳಿಯೂ ಆರಂಭವಾಯಿತು. ಪುಣೆಯಲ್ಲಿ ಪರದೇಶಿ ವಸ್ತ್ರದ ಹೋಳಿಯಾಯಿತು (1906). ಧಾರವಾಡ ಜಿಲ್ಲೆಯಲ್ಲಿ ರಾಷ್ಟ್ರೀಯ ಶಾಲೆಗಳ ಆರಂಭದ ಜೊತೆಗೇ ಕಡ್ಡಿಪೆಟ್ಟಿಗೆ, ಪೆನ್ಸಿಲ್, ಹಂಚಿನ ಕಾರ್ಖಾನೆಗಳ ಸ್ಥಾಪನೆ ಸ್ವದೇಶಿ ವಸ್ತ್ರ (ಖಾದಿ) ಉತ್ಪಾದನೆ, ಅದೇ ರೀತಿ ಸಕ್ಕರೆ, ಬಳೆ, ಶೀಗೆಕಾಯಿಪುಡಿ ತಯಾರಿಸುವ ಯತ್ನಗಳೂ ನಡೆದುವೆಂದು ಆಲೂರರು ಹೇಳಿದ್ದು "ವಿಲಾಯತಿ ವಸ್ತ್ರವು ಅಸ್ಪೃಶ್ಯ ಕೋಟಿಯಲ್ಲಿ ಸೇರಿತು. ಪರದೇಶಿ ಸಕ್ಕರೆಗೆ ಬಹಿಷ್ಕಾರ ಬಿದ್ದಿತು. ಚಿಮಿಣಿ ಎಣ್ಣೆಗೂ ಆಗ ಬಹಿಷ್ಕಾರ ಬಿದ್ದಿತ್ತು; ನಾವು ಮನೆಯಲ್ಲಿ ಹುಲಗಲ ಎಣ್ಣೆಯನ್ನು ಉಪಯೋಗಿಸುತ್ತಿದ್ದೆವು. ಹೆಣ್ಣುಮಕ್ಕಳ ಪರದೇಶಿ ಬಳೆಗಳನ್ನು ಒಡೆಯುವ ಕೆಲಸವು ಭರದಿಂದ ನಡೆದಿತ್ತು. ಟ್ರೇನಿಂಗ್ ಕಾಲೇಜಿನಲ್ಲಿ ಗ್ಲಾಸಿನ ದೀಪಗಳು ಮಾಯವಾದವು, ಒಳ್ಳೆಯಣ್ಣೆ, ಹುಲಗಲ ಎಣ್ಣೆಯ ಸಮೆ (ಕಾಲುದೀಪ)ಗಳು ಕಂಗೊಳಿಸಿದವು" (ನ.ಜಿ.ಸ್ಮೃ. ಪು. 119).

ಇದಲ್ಲದೆ ಗಣಪತಿ ಉತ್ಸವ, ಶಿವಾಜಿ ಉತ್ಸವ, ರಾಷ್ಟ್ರೀಯ ಶಾಲೆ, ಪೈಸಾಫಂಡ್ ಸಂಗ್ರಹ (ಟಿಳಕರಿಂದ ಪ್ರೇರಿತ), ಮದ್ಯಪಾನ ನಿಷೇಧ, ಹೀಗೆ ಅನೇಕ ಚಳವಳಿಗಳು ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ಸಾಗಿದವೆಂದು ಆಲೂರರು ತಿಳಿಸಿದ್ದಾರೆ. "ಹೀಗೆ ಮುಂಚಿನಂತೆ ಅನೇಕ ವರುಷಗಳವರೆಗೆ ಉತ್ತರ ಕರ್ನಾಟಕದಲ್ಲಿ ಜನಜೀವನವು ಲೋಕಮಾನ್ಯರ ಮುಖಂಡತ್ವದಲ್ಲಿ ಸಾಗಿತು", ಎಂದೂ ಟಿಳಕರಿಂದ ಪಡೆದ ಸ್ಫೂರ್ತಿಯ ವಿಚಾರವನ್ನು ಅವರು ಒತ್ತಿ ಹೇಳಿದ್ದಾರೆ. ಆದರೆ ಬೆಳಗಾವಿಯಲ್ಲಿ ಈ ಕಾಲದಲ್ಲಿ ನಡೆದಂತೆ ಕಾನೂನುಭಂಗಿಸಿ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿ ಬಂಧನಗಳು ಧಾರವಾಡದಲ್ಲಿ ಆಗಲಿಲ್ಲ. ಹಾಲಗೆರೆ (ಧಾರವಾಡದ ಒಂದು ಕೆರೆ ಇದ್ದ ಮೈದಾನ) ಯಲ್ಲಿ ಪಿತ್ರೆ ವಕೀಲರು, ಜೋಶಿ, ಕೃಷ್ಣರಾವ್ ಮುದುವೀಡ್‌ಕರ್, ಹೊನ್ನಾಪುರಮಠ, ಬಿಂದೂರಾವ್ ಮುತಾಲಿಕ್ ದೇಸಾಯಿ ಇವರುಗಳು ಭಾಷಣ ನಡೆಸುತ್ತ ಪ್ರಚಾರ ನಡೆಸಿದ್ದರು ಎಂದ ಆಲೂರರು "ನಾನೂ ಸ್ವದೇಶೀ ಚಳುವಳಿಯ ಬಗ್ಗೆ ಧಾರವಾಡ ಜಿಲ್ಲೆಯಲ್ಲೆಲ್ಲ ಉಪನ್ಯಾಸಗಳನ್ನು ಕೊಡುತ್ತ ತಿರುಗಿದೆ", ಎಂದಿದ್ದಾರೆ (ನ.ಜೀ.ಸ್ಮೃ.ಪು. 120)*

1907 ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ಸಿಗೆ ಆಲೂರರು ಅಣ್ಣಾಚಾರ್ಯ ಹೊಸಕೇರಿಯವರೂ ಹೋಗಿದ್ದು ಅಲ್ಲಿ ಟಿಳಕರ ವಿರುದ್ಧ ಸೌಮ್ಯವಾದಿಗಳು ಮಾಡಿದ್ದ ಆಕ್ರಮಣ, ಹೊಡೆದಾಟಗಳಲ್ಲಿ ಟಿಳಕರ ಪರ ಇವರುಗಳೂ ಕರ್ನಾಟಕದ ಇತರ ಪ್ರತಿನಿಧಿಗಳೂ (ಶ್ರೀನಿವಾಸರಾವ್ ಕೌಜಲಗಿ ಇತ್ಯಾದಿ) ಪಾಲುಗೊಂಡು ಪೋಲೀಸರ ಕಣ್ಣಿಗೂ ಬಿದ್ದುದು ಗಮನಾರ್ಹ. 1910ರಲ್ಲಿ ಮುಂಬೈ ಸರಕಾರ ತಂದ ಅನರ್ಥಕಾರಿ ಶಿಕ್ಷಣ (ಪರ್ನಿಶಿಯಸ್ ಎಜುಕೇಶನ್) ಪ್ರತಿಬಂಧಿಸುವ ಆಜ್ಞೆಯಿಂದ ಜಿಲ್ಲೆಯ ಎಲ್ಲಾ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳೂ ಮುಚ್ಚಿದವು. ಆಲೂರರು ಮತ್ತೆ ವಕೀಲ ವೃತ್ತಿ ಆರಂಭಿಸಿದರು. ಆದರೆ ವಿಕ್ಟೋರಿಯಾ ಹೈಸ್ಕೂಲಿಗೆ ಗಣ್ಯ ದೇಶಭಕ್ತ ಹುಕ್ಕೇರಿಕರ ರಾಮರಾಯರು ಪ್ರಿನ್ಸಿಪಾಲರಾಗಿ ಬಂದುದರಿಂದ (1912) ಧಾರವಾಡದ ಮಟ್ಟಿಗೆ ದೇಶಭಕ್ತಿ ಪ್ರಸಾರದ ಕಾರ್ಯ ನಿಲ್ಲಲಿಲ್ಲ. ಧಾರವಾಡದಲ್ಲಿನ ಆಗಿನ ಮೂರು ಹೈಸ್ಕೂಲುಗಳಲ್ಲಿ ಅದು ಒಂದಾಗಿತ್ತು.

---

* "ಬೂಟುಹೇಟು ಫಿರಂಗೇರು ಬಂದರೋ । ಪರದೇಶಿ ಸಕ್ಕರೆ ಬಿಳಿ ಬಟ್ಟೆ ತಂದರೋ । ನಮ್ಮ ದೇಶ ಹಾಳು ಮಾಡಿದರೋ । ನೋಡಿರೋ । ಎಂದು 10-12 ಸ್ವಯಂ ಸೇವಕರು ಸವಣೂರ ಬೀದಿಯಲ್ಲಿ ಬಂದು ಹಾಡು ಹೇಳಿ ಪ್ರಚಾರ ಮಾಡಿದರು. ಆಗ ಆಲೂರ ವೆಂಕಟರಾಯರು ಅವರನ್ನು ಅಲ್ಲಿಗೆ ಕರೆದು ತಂದಿದ್ದರು." ಎಂದು ಆ ಕಾಲದ ತಮ್ಮ ಅನುಭವವನ್ನು ಶ್ರೀನಿವಾಸರಾವ್ ಮಂಗಳವೇಡೆ ಹೇಳಿದ್ದಾರೆ. "ನಾನು ಆ ಹಾಡಿನಿಂದ ಆಕರ್ಷಿತನಾಗಿ ಜಯಕಾರ ಮಾಡುತ್ತ ಊರಲ್ಲಿ ಸುತ್ತಾಡಿದೆ", ಎಂದು ಮಂಗಲವೇಡೆ ಹೇಳಿದ್ದಾರೆ. (ಸ್ವಾ.ಸಂ.ಸ್ಮ.III, ಪು. 1374)

1907ರಲ್ಲಿ ಸದರ್ನ್ ಮರಾಠಾ ಕೋಆಪರೇಟಿವ್ ಬ್ಯಾಂಕ್ ಧಾರವಾಡದಲ್ಲಿ ಆರಂಭವಾಯಿತು. (ಈಗ ಮಹಾಲಕ್ಷ್ಮಿ ಬ್ಯಾಂಕ್ ಎನಿಸಿದೆ).

1909ರಲ್ಲಿ ಧಾರವಾಡದಲ್ಲಿ ಕೃಷಿ ಪ್ರದರ್ಶನ ಸರಕಾರದ ವತಿಯಿಂದ ಆದಾಗ ಇಲ್ಲಿ ಒಂದು ಕಾಲೇಜು ಆರಂಭಿಸಬೇಕೆಂಬ ಹಿಂದಿನ ವಿಚಾರಕ್ಕೆ ಚಾಲನೆ ಸಿಕ್ಕು 1917ರಲ್ಲಿ ಕರ್ನಾಟಕ ಕಾಲೇಜು ಆರಂಭವಾಯಿತು. ಇದಕ್ಕಾಗಿ ಅರಟಾಳ ರುದ್ರಗೌಡ, ರೊದ್ದ ಶ್ರೀನಿವಾಸರಾವ್ ಮುಂತಾದವರು ಶ್ರಮಿಸಿದ್ದರು.

1908ರಲ್ಲಿ ಮುಜಫರ್‌ಪುರ, 1909ರಲ್ಲಿ ನಾಸಿಕ (ಜಾಕ್ಸನ್) ಮುಂತಾದ ಕಡೆ ಯುರೋಪಿಯನ್ ಅಧಿಕಾರಿಗಳ ಕೊಲೆಗಳಾದಾಗ ಇದಕ್ಕೆ ರಾಷ್ಟ್ರೀಯ (ಅರ್ಥಾತ್ ರಾಜದ್ರೋಹದ) ವಿಚಾರಗಳ ಪ್ರಚಾರವೇ ಕಾರಣವೆಂದು ತಿಳಿದು 1910ರಂದು ಮುಂಬೈ ಸರಕಾರವು ಪ್ರೆಸ್ ಆ್ಯಕ್ಟ್ ಮಂಜೂರು ಮಾಡಲು ಧಾರವಾಡ ಜಿಲ್ಲೆಯ 'ಧಾರವಾಡ ವೃತ್ತ', 'ಚಂದ್ರೋದಯ', 'ಹಿಂದೂಸ್ಥಾನ ಸಮಾಚಾರ್', 'ರಾಜಹಂಸ', 'ಕ್ಷೇಮ ಸಮಾಚಾರ', 'ಕನ್ನಡ ಕೇಸರಿ' (ಹುಬ್ಬಳ್ಳಿ), 'ಲೋಕಬಂಧು' (ಧಾರವಾಡ) ಮುಂತಾದ ಪತ್ರಿಕೆಗಳು ನಿಂತು ಹೋದವು. ಈ ಕಾಲಕ್ಕೆ ಟಿಳಕರು ಮಂಡಾಲೆಯಲ್ಲಿ ಜೈಲುವಾಸ ಅನುಭವಿಸುತ್ತಿದ್ದು (1908-1914) ರಾಷ್ಟ್ರೀಯ ಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ಇರದಂತೆ ಆಗಿತ್ತು. ಕರ್ನಾಟಕದ ಹೆಚ್ಚಿನ ರಾಷ್ಟ್ರೀಯ ಕಾರ್ಯಕರ್ತರು ಟಿಳಕರ ತೀವ್ರಗಾಮೀ ಪಕ್ಷದ ಅನುಯಾಯಿಗಳಾಗಿದ್ದರು.

ಆದರೆ 1914ರಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಳದ ಸ್ಥಾಪನೆ, 1915ರಲ್ಲಿ ಕರ್ನಾಟಕ ಸಭೆಯ ಸ್ಥಾಪನೆ, ಆಲೂರರ 'ಕರ್ನಾಟಕ ಗತವೈಭವ' (1917) ಪ್ರಕಟಣೆ ಈ ಕಾಲದ ಕೆಲವು ಉಲ್ಲೇಖನೀಯ ಘಟನೆಗಳು.*

## ಹೋಂರೂಲ್ ಲೀಗ್

ಟಿಳಕರು, ಅನ್ನಿಬೆಸೆಂಟರು ಬೇರೆ ಬೇರೆ ಹೋಂರೂಲ್ ಲೀಗ್‌ಗಳನ್ನು ಆರಂಭಿಸಿದರು. ಹುಬ್ಬಳ್ಳಿಯಲ್ಲಿ ಇದ್ದ ಬೆಸೆಂಟರ್ ಅನುಯಾಯಿಗಳಾದ ಡಾ|| ಗೋರೆ, ಡಾ|| ಗೋಖಲೆ ಹಾಗೂ ತಬೀಬ್ ಅವರು ಬೆಸೆಂಟರ ಹೋಂರೂಲ್ ಲೀಗ್‌ನ ಚಟುವಟಿಕೆ ಆರಂಭಿಸಿದರು. ಆದರೆ ಟಿಳಕರ ಹೋಂರೂಲ್ ಲೀಗ್ ಕರ್ನಾಟಕದಲ್ಲಿ ಪ್ರಬಲವಾಗಿ ಅದರ ಪ್ರಚಾರಕ್ಕಾಗಿ ಟಿಳಕರು ಧಾರವಾಡ, ಹುಬ್ಬಳ್ಳಿ, ಗದಗುಗಳಿಗೂ ಬಂದಿದ್ದರು (1916). 1917ರ ಫೆ. 18ಕ್ಕೆ ಹುಬ್ಬಳ್ಳಿಯಲ್ಲಿ ಹೋಂ ರೂಲ್ ಲೀಗ್ ಶಾಖೆ ಆರಂಭವಾಯಿತು.

ಆಲೂರು ವೆಂಕಟರಾವ್, ಕೃಷ್ಣರಾವ್ ಮುದವೀಡು, ಕಡಪಾ ರಾಘವೇಂದ್ರ ರಾವ್, ಹಾಗೂ ಗದಿಗೆಯ್ಯಾ ಹೊನ್ನಾಪುರಮಠ ಮುಂತಾದವರು ಈ ಹೊಸ ಚಳವಳಿಗೆ ಬೆಂಬಲವಾಗಿ ನಿಂತರು. ಹೋಮರೂಲ್ ಚಳವಳಿ ಆರಂಭ ಆದಾಗ ಅದನ್ನು 'ಕರ್ನಾಟಕ ಪ್ರಾಂತೀಯ ಹೋಮ ರೂಲ ಲೀಗ' ಎಂದು ಕರೆಯಬೇಕು ಮತ್ತು ಅದರ ಪ್ರಕಾರ ಸಾಹಿತ್ಯವೆಲ್ಲ ಕನ್ನಡದಲ್ಲಿ ಇರಬೇಕೆಂದು ಆಲೂರರು ಪಟ್ಟು ಹಿಡಿದರು. ಈ ನಿಲುವು "ಗಣ್ಯ ಐತಿಹಾಸಿಕ ಮಹತ್ವದ್ದು" ಎಂದಿರುವ ರಂ.ರಾ. ದಿವಾಕರರು (ಸ್ವಾ.ಸಂ.ಸ್ಮ.III ಪು. 273) ಜನರ ಭಾಷೆಯಲ್ಲಿ ಪ್ರಚಾರ ಮಾಡದೆ ಯಾವ ಚಳವಳಿಯೂ ಯಶಸ್ವಿಯಾಗದು ಎಂಬ ದೃಷ್ಟಿ ಹಾಗೂ ಭಾಷಾವಾರು ಪ್ರಾಂತರಚನೆಗೆ ನಾಂದಿಯಾಗುವಂಥ ಈ ಕ್ರಮ ಇಂಥ ನಿಲುವಿಗೆ ಕಾರಣವೆಂದಿದ್ದಾರೆ.

1916ರಲ್ಲಿ ಟಿಳಕರು ಧಾರವಾಡಕ್ಕೆ ಬಂದಿರಲು ಅವರ ಸಾರ್ವಜನಿಕ ಭಾಷಣದ ಮೇಲೆ ಪ್ರತಿಬಂಧ ಹೇರಿರಲು ಮಾಳಮಡ್ಡಿಯಲ್ಲಿ ಒಂದು ಖಾಸಗಿ (ವಕೀಲ ಬಳ್ಳಾರಿ ರಾಮರಾವ್) ಮನೆಯ ವಿಶಾಲ ಆವರಣದಲ್ಲಿ ಅವರ ಭಾಷಣ ನಡೆಯಿತು. ಮಧ್ವರಾವ್ ಕಬ್ಬೂರ, ಗೋವಿಂದರಾವ್ ಗುತ್ತಲ, ದ.ಪ. ಕರಮರಕರ್ ಮುಂತಾದವರು ಆಗ ಚಳವಳಿಯಲ್ಲಿ ಸ್ವಯಂ ಸೇವಕರಾಗಿ ಸೇರಿಕೊಂಡರು ಎಂದು ದಿವಾಕರರು ಹೇಳಿದ್ದಾರೆ. "ಟಿಳಕರು ಧಾರವಾಡಕ್ಕೆ ಭೆಟ್ಟಿಕೊಟ್ಟಾಗ ಊರೊಳಗಿನ ಪ್ರಮುಖ ಓಣಿಗಳಿಂದ ಅವರ ಮೆರವಣಿಗೆಯಾಗಿ, ಸಂಸ್ಕೃತ ಪಾಠಶಾಲೆಯಲ್ಲಿ ಅವರಿಗೆ ಮಾನಪತ್ರ ನೀಡಲಾಯಿತು" ಎಂದು ಈ ಬಗ್ಗೆ ಕರಮರಕರರು

* "ಆಲೂರರ 'ಗತವೈಭವ' ಓದಿ ಹೇಳಿದಾಗ ಅನೇಕ ವಿದ್ಯಾರ್ಥಿಗಳು ತನ್ಮಯರಾಗಿ ಕಣ್ಣೀರು ಸುರಿಸುತ್ತಿದ್ದರು" (ಕಲ್ಲನಗೌಡ ಪಾಟೀಲ, ಹಂಸಭಾವಿಶಾಲೆ ವಿದ್ಯಾರ್ಥಿಗಳ ಬಗ್ಗೆ ಸ್ವಾ.ಸಂ.ಸ್ಮ. I, ಪು. 833; ಇದೇ ರೀತಿ ಮಾತುಗಳು ಇದೇ ಪುಸ್ತಕದ ಸಂ. III, ಪು. 308 ಹಾಗೂ 597 ರಲ್ಲಿ ಬಂದಿವೆ).

ಹೇಳಿದ್ದಾರೆ. (ಸ್ವಾ.ಸಂ.ಸ್ಮ III ಪು. 333 ). ಇದೆ ರೀತಿ ಹುಬ್ಬಳ್ಳಿಯಲ್ಲಿ ಊರ ಹೊರಗೆ ಪಿಂಜರಾಪೋಲ್ (ಸಿದ್ಧಾರೂಢ ಆಶ್ರಮದ ಬಳಿ) ಟಿಳಕರ ಭಾಷಣವಾಯಿತು. ಸಿದ್ಧಾರೂಢ ಸ್ವಾಮಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು.

"1916 ಪೂರ್ವದಲ್ಲಿ ರಾಷ್ಟ್ರೀಯ ಜಾಗೃತಿ ಇರಲಿಲ್ಲ. ಟಿಳಕರು ನಮ್ಮ ಊರಿಗೆ ಅಕಸ್ಮಾತ್ ಭೆಟ್ಟಿ ಕೊಟ್ಟದ್ದು ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಯಲು ಕಾರಣವಾಯಿತು. ನಮ್ಮ ಊರಿನ ಆಗಿನ ಮುಖಂಡರಾದ ಅನಂತರಾವ್ ಜಾಲೀಹಾಳ ವಕೀಲ, ಡಾ|| ವೆಂಕಟರಾವ್ ಹುಯಿಲಗೋಳ, ಇವರು ಲೋಕಮಾನ್ಯ ಟಿಳಕರ ಭಾಷಣದ ವಿರ್ಪಾಡು ಮಾಡಿದರು....... ಲೋಕಮಾನ್ಯ ಟಿಳಕರು ಮಾಡಿದ ಭಾಷಣದಿಂದ ಜನರಲ್ಲಿ ವಿದ್ಯುತ್ ಸಂಚಾರವಾಯಿತು," ಎಂದು ಗದಗಿನ ವಕೀಲ ಸ್ವಾತಂತ್ರ್ಯ ಯೋಧ ಶ್ರೀನಿವಾಸ ಮಳಗಿ ಹೇಳಿದ್ದಾರೆ (ಸ್ವಾ.ಸಂ.ಸ್ಮ. 1 ಪು. 689). ಈ ಭಾಷಣವನ್ನು ಆಲೂರು ವೆಂಕಟರಾಯರು ಭಾಷಾಂತರ ಮಾಡಿದರೆಂದು ಬೇರೆ ಮೂಲಗಳಿಂದ ತಿಳಿಯುತ್ತದೆ. ಆವರೆಗೆ ಯಂಗ್‌ಮೆನ್ಸ್ ಫುಟ್‌ಬಾಲ್ ಕ್ಲಬ್, ಸರಸ್ವತಿ ವಾಚನಾಲಯ, ಸರಸ್ವತಿ ಪ್ರೂಟ್‌ಬಾಲ ಕ್ಲಬ್ ಹಾಗೂ ಕಲಾ ವಿಲಾಸೀ ನಾಟ್ಯ ಸಂಘಗಳು ಒದಗಿಸಿದ್ದ ಹಿನ್ನೆಲೆಯಲ್ಲಿ ಗದಗಿನಲ್ಲಿ ಟಿಳಕರ ಆಗಮನಾನಂತರ ಜಲಿಯಾನ್‌ವಾಲಾ ಬಾಗ್ ಹತ್ಯಾಕಾಂಡ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಇಬ್ಬರು ಗದಗಿನ ಗಣ್ಯರೇ ಅಲ್ಲದೆ ಡಾ|| ವಾಸುದೇವರಾವ ಉಮಚಗಿ ಅವರೂ ಕಾಂಗ್ರೆಸ್ಸಿನ ಪ್ರಮುಖರಾದರು. "1920 ರ ಸುಮಾರಿಗೆ ಜಾಲಿಹಾಳ ಅನಂತರಾಯರು ಪ್ರಥಮ ವರ್ಗದ ವಕೀಲರೆಂದು ಪ್ರಸಿದ್ಧರಾಗಿದ್ದರು. ತಿಂಗಳಿಗೆ ಸಾವಿರಾರು ರೂ.ಗಳ ಆದಾಯವಿತ್ತು. ಗದಗ, ಮುಂಡರಗಿ ರೋಣ ಈ ತಾಲೂಕಿನ ಮೂಲೆಗಳೆಲ್ಲ ಅವರಿಗೆ ಗೊತ್ತಾಗಿದ್ದವು," ಎಂದು ಈ ಭಾಗದಲ್ಲಿ ರಾಷ್ಟ್ರೀಯತೆಯ ವಿಚಾರ ಪ್ರಸಾರವಾಗಲು ಕಾರಣವನ್ನು ಹೇಳಲಾಗಿದೆ ('ಗದಗಿನ ಪರಿಸರದ ಸ್ವಾತಂತ್ರ್ಯ ಹೋರಾಟಗಾರರ ಇತಿಹಾಸ', ಪು. 8 )

ಹೋಂರೂಲ್ ಲೀಗಿನ ಕರ್ನಾಟಕ ಶಾಖೆಗೆ ಗಂಗಾಧರರಾವ್ ದೇಶಪಾಂಡೆ (ಬೆಳಗಾವಿ) ಅಧ್ಯಕ್ಷರಾಗಿ ಆಲೂರು ವೆಂಕಟರಾಯರು ಕಾರ್ಯದರ್ಶಿಗಳಾದರು. ಈ ಕಾಲದಲ್ಲಿ ಹೋಂ ರೂಲ್‌ನ ಪ್ರಚಾರಕ್ಕಾಗಿ ಐದಾರು ಹೊತ್ತಿಗೆಗಳನ್ನು ಕನ್ನಡದಲ್ಲಿ ಪ್ರಕಟಿಸಲಾಯಿತು. ಧಾರವಾಡದಲ್ಲಿ ಉಗ್ರ ಇನ್‌ಫ್ಲುಯೆಂಜಾ ವ್ಯಾಧಿ ಹರಡಿದಾಗ ಹೋಂರೂಲ್ ಲೀಗಿನ ವತಿಯಿಂದ ಒಂದು ಆಸ್ಪತ್ರೆ ನಡೆಸಿ ಆಲೂರರು, ಶ್ರೀನಿವಾಸರಾವ್ ಜೋಗ್ ಅವರೂ ನೂರಾರು ಜನರಿಗೆ ಔಷಧಿ ಉಪಚಾರ ನೀಡಿದರು. ಇದೇ ಅವಧಿಯಲ್ಲಿ ಶಾಂತಕವಿಗಳು (ಬಾಳಾಚಾರ್ಯ ಸಕ್ಕರಿ) ಹೋಂರೂಲ್‌ನ ಪರವಾಗಿ ಎಲ್ಲೆಡೆ ಜಿಲ್ಲೆಯಲ್ಲೂ ಹೊರಗೂ ಹರಿಕತೆಗಳನ್ನು ನಡೆಸಿದ್ದು ಉಲ್ಲೇಖನೀಯ. 'ವಿದ್ಯಾರಣ್ಯ'ರ ಬಗ್ಗೆ ಅವರ ಹರಿಕಥೆ ಜನಪ್ರಿಯವಾಗಿತ್ತು.

## ಅಸಹಕಾರ ಚಳವಳಿ

ಜಲಿಯನ್ ವಾಲಾ ಹತ್ಯಾಕಾಂಡದಿಂದ ಇಡೀ ದೇಶದಲ್ಲಿ ತೀವ್ರ ಬ್ರಿಟೀಷ್ ವಿರೋಧಿ ಬಿಸಿ ವಾತಾವರಣ ಉಂಟಾಯಿತು. 1920 ರ ಆಗಸ್ಟ್ 1 ಕ್ಕೆ ಟಿಳಕರು ತೀರಿಕೊಂಡಾಗ ಎಲ್ಲೆಡೆ ದುಃಖ ಪ್ರದರ್ಶನ, ಸಾರ್ವಜನಿಕ ಶ್ರದ್ಧಾಂಜಲಿ ಕಾರ್ಯಕ್ರಮಗಳಾದವು. ಆ ಮಹಾನ್ ದೇಶ ಭಕ್ತರ ಮರಣ ಲಕ್ಷಾಂತರ ತರುಣ ಮನಗಳನ್ನು ಕಲಕಿತು. ಆಗ ಧಾರವಾಡದ ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ವಾಮನ ಹೊದಿಕೆ ಅವರ ಹೇಳಿಕೆ ಸುತ್ತಲ ಪರಿಸ್ಥಿತಿಯ ಪರಿಚಯ ನೀಡುತ್ತದೆ: "ಟಿಳಕರ ನಿಧನದ 13 ನೆಯ (ಶ್ರಾದ್ಧ) ದಿನದಂದು ಅಪೂರ್ವ ಮೆರವಣಿಗೆಯೊಂದಿಗೆ ಸಾವಿರಾರು ಜನರು ಮಂದಿರ ಸೇರಿ ವಿಧವಿಧದ ದೇಶಭಕ್ತಿಯ ಪ್ರತಿಜ್ಞೆ ಸ್ವೀಕರಿಸಿದರು. ಸಕ್ಕರೆ ತಿನ್ನಲಿಕ್ಕಿಲ್ಲ, ಚಹಾಕುಡಿಯಲಿಕ್ಕಿಲ್ಲ, ಬೀಡಿ ಸೇದಲಿಕ್ಕಿಲ್ಲ, ವಿದೇಶಿ ಬಟ್ಟೆ ಧರಿಸಲಿಕ್ಕಿಲ್ಲ, ಎಂಬಿತ್ಯಾದಿ...." (ಸ್ವಾ.ಸಂ.ಸ್ಮ.I ಪು. 204). ಆಗ ಮುಂಬೈಯಲ್ಲಿ ಇದ್ದು ಮುಂದೆ ಹುಬ್ಬಳ್ಳಿಗೆ ಬಂದ ಉಮಾಬಾಯಿ ಕುಂದಾಪುರರು ಹೇಳುವಂತೆ, "ಲೋಕಮಾನ್ಯ ಟಿಳಕರು ತೀರಿಕೊಂಡಾಗ ಮುಂಬೈಯಲ್ಲಿ ನಾನೂ ಇದ್ದೆ. ಅಂದಿನ ಶ್ಮಶಾನ ಯಾತ್ರೆಯ ಪ್ರಸಂಗದಲ್ಲಿ ನಾನೂ ಚಳವಳಿ ಸೇರಬೇಕೆಂದು ನಿರ್ಧಾರ ಮಾಡಿದೆ" (ಮೇಲಿನದೆ, ಪು. 678), ಎಂದು ಅಂದಿನ ಅಪೂರ್ವ ಪ್ರೇರಕ ವಾತಾವರಣದ ಬಗ್ಗೆ ಹೇಳಿದ್ದಾರೆ.

### ಖಿಲಾಫತ್ - ಅಸಹಕಾರ

ಒಂದನೇಯ ಮಹಾಯುದ್ಧ ಮುಗಿದಾಗ 'ಶಾಂತಿದಿನ' ಎಂದು ವಿಜಯೋತ್ಸವ ಆಚರಿಸಬೇಕೆಂಬ ಸರಕಾರದ ಕರೆಗೆ ಕಾಂಗ್ರೆಸ್ 1919ರಲ್ಲಿ ಪ್ರತಿಭಟನೆ ಸೂಚಿಸಿತು. ತುರ್ಕಿಯ (ಖಲೀಫನ) ಕೊನೆಯಾದುದರಿಂದ ಮುಸಲ್ಮಾನರೂ ಈ ಬಗ್ಗೆ ಅಸಮಾಧಾನಗೊಂಡಿದ್ದರು. "ಡಿಸೆಂಬರ್ 22 ರಂದು (1919) ಧಾರವಾಡದಲ್ಲಿ ಈ ಬಗ್ಗೆ ನಡೆಸಿದ ಮೆರವಣಿಗೆಯಲ್ಲಿ ಹೆಚ್ಚಿನ

ಉತ್ಸಾಹ ಕಾಣಿಸಲಿಲ್ಲ, ಸರಕಾರೀ ನೌಕರರಷ್ಟೇ ಇದ್ದರು ಬ್ರಾಹ್ಮಣರೂ ಮುಸಲ್ಮಾನರೂ ಅದರಲ್ಲಿ ಪಾಲುಗೊಳ್ಳಲಿಲ್ಲ" ಎಂದು ಸರಕಾರೀ ವರದಿ ತಿಳಿಸುತ್ತದೆ. "ಡಿಸೆಂಬರಾ 15ರಂದು ಹುಬ್ಬಳ್ಳಿಯಲ್ಲಿ ಶಾಂತಿ ದಿನದ ಆಚರಣೆಯ ವಿರುದ್ಧ ಅಬುಬಕರ್ ಹಾಜೀ ಜಾಫರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶಾಂತಿ ದಿನ ಆಚರಣೆ ಖಂಡಿಸಿ, ಹಿಂದೂ ಮುಸ್ಲಿಂ ಐಕ್ಯವನ್ನು ಒತ್ತಾಯಿಸಿ ಠರಾವಾಯಿತು. ಮಿರ್ಜಾ ಮುಹಮ್ಮದ್ ಅಲಿ ಬೇಗ್ ಠರಾವನ್ನು ಮಂಡಿಸಿ (ಹೋಂರೂಲ್ ಲೀಗ್ ಕಾರ್ಯದರ್ಶಿ) ಶ್ರೀನಿವಾಸ ವಿಷ್ಣು ತಬೀಬ್ ಠರಾವನ್ನು ಅನುಮೋದಿಸಿದರು" ಎಂದು ವರದಿ ಹೇಳುತ್ತದೆ.

ಮಾರ್ಚ್ 26 ರಂದು (1919) ಖಿಲಾಫತ್ ದಿನಾಚರಣೆಯನ್ನು ಹುಬ್ಬಳ್ಳಿಯಲ್ಲಿ ಮಾಡಲಾಗಿದ್ದು ಇದಕ್ಕೆ ಕರೆಕೊಟ್ಟು 26 ಹಿಂದೂಗಳೂ ಮುಸಲ್ಮಾನರೂ ಸಹಿ ಮಾಡಿದ ಕರಪತ್ರ ಹೊರಡಿಸಿದರು. ಅಂದು ಸಭೆಯು ನಡೆಯಿತು.* ಹೀಗೆ ಗಾಂಧೀಜಿ ಅಸಹಕಾರ ಚಳವಳಿ ಹೂಡಿ ಹಿಂದೂ ಮುಸ್ಲಿಂ ಐಕ್ಯತಾ ಸಾಧನೆಗಾಗಿ1920 ರಲ್ಲಿ ಕರೆ ನೀಡಿರಲು ಅದಕ್ಕೆ ಬೇಕಾದ ಹಿನ್ನೆಲೆ 1919 ರಲ್ಲಿ ಜಿಲ್ಲೆಯಲ್ಲಿ ರೂಪು ತಾಳಿತ್ತು. ಟಿಳಕರೂ ಖಿಲಾಫತ್ ಚಳವಳಿಗೆ ಬೆಂಬಲ ಸೂಚಿಸಿದ್ದರು.

ಟಿಳಕರ ನಿಧನದ ನಂತರ ಟಿಳಕಯುಗ ಮುಗಿದು ಗಾಂಧೀಯುಗ ಆರಂಭವಾಯಿತು. ಟಿಳಕರಂತೆ ತೀವ್ರಗಾಮಿಗಳಾದ ಗಾಂಧೀಜಿ ಅಹಿಂಸಾಮಾರ್ಗದ ಸತ್ಯಾಗ್ರಹ ವಿಧಾನವನ್ನು ಮುಂದಿಟ್ಟರು. ಸರಕಾರದ ದಬ್ಬಾಳಿಕೆಯಿಂದ ನಿಂತಿದ್ದ ಪತ್ರಿಕೆಗಳಲ್ಲಿ ಕೆಲವು ಮತ್ತೆ ಆರಂಭವಾದವು. 'ರಾಜಹಂಸ' (ಸಂ|| ಜಠಾರ), 'ವಿಜಯ' (ಸಂ|| ಹೊಸಕೇರಿ, 1920), ಶುಭೋದಯ (1918, ಕೆ. ವಾಸುದೇವಾಚಾರ್ಯ), 'ಕರ್ನಾಟಕ ವೃತ್ತ' (ಮುದವೀಡು ಕೃಷ್ಣರಾವ್), ವಾಗ್ದೇವಿ (1916, ಹೊನ್ನಾಪುರಮಠ) ಹಾಗೂ 'ಕರ್ಮವೀರ' (ಸಂ|| ದಿವಾಕರ 1921) ಇವೆಲ್ಲ ಆ ಕಾಲದ ಸ್ಥಳೀಯ ಪತ್ರಿಕೆಗಳು.

1920ರ ಮೇ ತಿಂಗಳಲ್ಲಿ ಧಾರವಾಡದಲ್ಲಿ ಪ್ರಥಮ ಕರ್ನಾಟಕ ರಾಜಕೀಯ ಪರಿಷತ್ತು ಮೈಸೂರಿನ ಮಾಜಿ ದಿವಾನ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಬ್ಯಾಹಟ್ಟಿ ಸುಬ್ಬರಾಯರು (ಹುಬ್ಬಳ್ಳಿ) ಇದರ ಸ್ವಾಗತಾಧ್ಯಕ್ಷರಾಗಿದ್ದರು. "ಉಳವಿ ಬಸಪ್ಪನ ಗುಡ್ಡದ ಮೇಲೆ ಭವ್ಯವಾದ ಸಭಾಂಗಣ....... ಸ್ವಯಂ ಸೇವಕರಿಗಾಗಿ ಕೊಟ್ಟಿದ್ದ ಟೊಪ್ಪಿಗೆ, ಬ್ಯಾಜ್, ರಾಷ್ಟ್ರೀಯ ವಾತಾವರಣ ಮತ್ತು ಆ ಓಡಾಟ, ಇವೆಲ್ಲ ನನಗೆ ಹೊಸದೆನಿಸಿದವು. ಸಭೆ ಸೇರಲಿರುವ ಮೊದಲ ದಿನ ಇಳಿಹೊತ್ತಿನಲ್ಲಿ ವಿ.ಪಿ. ಮಾಧವರಾಯರು ರೇಲಿನಿಂದ ಆಗಮಿಸಿದರು...... ವೈಭವಯುತವಾಗಿ ಮೆರವಣಿಗೆಯೂ ನಡೆಯಿತು..... ಕನ್ನಡ ಮಾತೆಯ ಅಂದಿನ ಜಯಘೋಷವು ರೋಮಹರ್ಷಕವಾಗಿತ್ತು" ಎಂದು ಸಮ್ಮೇಳನದಲ್ಲಿ ಸ್ವಯಂ ಸೇವಕರಾಗಿ ಬೆಳಗಾವಿ ಜಿಲ್ಲೆಯಿಂದ ಬಂದಿದ್ದ ಬೆಟಗೇರಿ ಕೃಷ್ಣಶರ್ಮ ಹೇಳಿದ್ದಾರೆ ('ಹೊನ್ನಪುರ', ಪು. 16). ರಾಷ್ಟ್ರೀಯ ಚಟುವಟಿಕೆಯನ್ನು ಬಲಗೊಳಿಸಲು ಹಾಗೂ ಕರ್ನಾಟಕವನ್ನು ಒಂದು ಪ್ರದೇಶವಾಗಿ ಕಾಂಗ್ರೆಸ್ ಸಂಸ್ಥೆಯು ಮಾನ್ಯ ಮಾಡುವಂತೆ ಒತ್ತಾಯಿಸಲು ನಾಗಪುರದಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ಅ.ಭಾ. ಕಾಂಗ್ರೆಸ್ಸಿಗೆ ಅತ್ಯಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳು ಕರ್ನಾಟಕದಿಂದ ಭಾಗವಹಿಸಲು ಸಮ್ಮೇಳನದಲ್ಲಿ ಠರಾವು ಮಾಡಲಾಯಿತು. ಇದರ ಹಿಂದೆಯೇ ಗಣ್ಯನಾಯಕರು, ವಿಶೇಷವಾಗಿ ಕಡಪಾ ರಾಘವೇಂದ್ರರಾಯರು ಕರ್ನಾಟಕದಲ್ಲೆಲ್ಲ ಸಂಚಾರ ಮಾಡಿ ನಾಗಪುರಕ್ಕೆ ಹೆಚ್ಚು ಪ್ರತಿನಿಧಿಗಳು ಬರುವಂತೆ ಹುರಿದುಂಬಿಸಿ ಭಾಷಣ ಮಾಡಿದರು. ಇದರಿಂದಾಗಿ ನಾಗಪುರ ಕಾಂಗ್ರೆಸ್ಸಿಗೆ ಕರ್ನಾಟಕದಿಂದ ಅತ್ಯಧಿಕ ಪ್ರತಿನಿಧಿಗಳು (ಸುಮಾರು 800) ತೆರಳಿ ಅಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತೀಯ ಸಮಿತಿಯನ್ನು (ಕೆ.ಪಿ.ಸಿ.ಸಿ) ಕಾಂಗ್ರೆಸ್ಸು ನೀಡಿ ಗಂಗಾಧರರಾವ್ ದೇಶಪಾಂಡ್ ಕೆ.ಪಿ.ಸಿ.ಸಿ. ಅಧ್ಯಕ್ಷರಾದರು. ಕೆ.ಪಿ.ಸಿ.ಸಿ.ಯ ಪ್ರಾಂತೀಯ ಕಾರ್ಯಾಲಯವನ್ನು ಗದಗಿನಲ್ಲಿ ತೆರೆದರು. ವಿನಾಯಕರಾವ್ ಜೋಶಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ಆಲೂರರು ಉಪಾಧ್ಯಕ್ಷರಾಗಿದ್ದರು; ಒಂದು ವರ್ಷದ ನಂತರ ಆಲೂರರ ಬದಲಿಗೆ ರಂ.ರಾ. ದಿವಾಕರರು ಉಪಾಧ್ಯಕ್ಷರಾದರು. ರಾಮರಾವ್ ಹುಕ್ಕೇರಿಕರರು ಕಾರ್ಯದರ್ಶಿಗಳಾದರು. ಖಿಲಾಫತ್ ಚಳವಳಿಗೆ ಕಾಂಗ್ರೆಸ್ ಬೆಂಬಲ ಸೂಚಿಸಿದ್ದರಿಂದ ಕಾಂಗ್ರೆಸ್‌ನಲ್ಲಿ ಮುಸಲ್ಮಾನರು ಆಗ ವಿಶೇಷ ಸಂಖ್ಯೆಯಲ್ಲಿ ಸೇರಿಕೊಂಡರು.

ಏಡೆಡ್ ಕಾಲೇಜ್ ಒಂದನ್ನು ಧಾರವಾಡದಲ್ಲಿ 1920 ರಲ್ಲಿ ಕರ್ನಾಟಕ ಎಜುಕೇಶನ್ ಸೊಸೈಟಿಯು ಆರಂಭಿಸಿತು. ರ್‍ಯಾಂಗ್ಲರ್ ಕಟ್ಟಿ ಅದರ ಪ್ರಿನ್ಸಿಪಾಲರಾದರು. ಬಳವಂತರಾವ್ ದಾತಾರರೂ ದಿವಾಕರರೂ ಅಲ್ಲಿ ಕೆಲಕಾಲ ಅಧ್ಯಾಪಕರಾಗಿದ್ದರು. ಆದರೆ ಒಂದು

* ಮೇಲಿನ ವರದಿಗಳಿಗೆ ಆಧಾರ 'ಸೋರ್ಸ್ ಮೆಟೀರಿಯಲ್ ಫಾರ್ ಎ ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್, ಖಿಲಾಫತ್ ಮೂವ್‌ಮೆಂಟ್ 1920-21' (1982) : ಪು 167

ವರ್ಷ ಅದು ನಡೆದು ಮುಂದೆ ನಿಂತು ಹೋಯಿತು. ಅಸಹಕಾರ ಪರ್ವದ ಹಿನ್ನೆಲೆ ಈ ಕಾಲೇಜು ಮುಚ್ಚಲು ಕಾರಣವಾಗಿತ್ತು. ಅಸಹಕಾರ ಚಳವಳಿ ನಡೆದಾಗ ಧಾರವಾಡದಲ್ಲಿನ ವಿಕ್ಟೋರಿಯಾ ಹೈಸ್ಕೂಲು ಮುಚ್ಚಿ 1920 ರಲ್ಲಿ ರಾಷ್ಟ್ರೀಯ ಹೈಸ್ಕೂಲು ಸ್ಥಾಪಿಸಲು ಹುಕ್ಕೇರಿಕರರೇ ಅದಕ್ಕೆ ಮುಖ್ಯೋಪಾಧ್ಯಾಯರಾಗಿ ಹಳೆಯ ವಿಕ್ಟೋರಿಯಾ ಹೈಸ್ಕೂಲಿನ ಕೆಲ ಅಧ್ಯಾಪಕರು ಬೇರೆ ಶಾಲೆ ತೆರೆದರು. ಹುಕ್ಕೇರಿಕರರು ತೆರೆದ ಶಾಲೆಯಲ್ಲಿ ಶಂ.ಬಾ.ಜೋಶಿ, ಬೇಂದ್ರೆ, ಖಾನೋಳ್ಕರ್ ಇವರೆಲ್ಲ ಅಧ್ಯಾಪಕರಾಗಿದ್ದರು. 1927 ರವರೆಗೆ ಈ ಶಾಲೆ ನಡೆಯಿತು. ಇದೇ ರೀತಿ ಹುಬ್ಬಳ್ಳಿಯಲ್ಲಿ ಬಾಲಕರ ರಾಷ್ಟ್ರೀಯ ಶಾಲೆಯೇ ಅಲ್ಲದೆ ಟಿಳಕ ಕನ್ಯಾ ಶಾಲೆ 1922 ರಲ್ಲಿ ಸ್ಥಾಪನೆಗೊಂಡಿತು. ಇದರ ಜವಾಬ್ದಾರಿಯನ್ನು ಉಮಾಬಾಯಿ ಕುಂದಾಪುರ ಮುಂದೆ ಹೊತ್ತರು. ಗದಗಿನಲ್ಲಿ ಧಾರವಾಡದಿಂದ ವಕೀಲಿ ತ್ಯಜಿಸಿ ಬಂದ ಡಂಬಳ ಶ್ರೀನಿವಾಸರಾವ್ ಅವರ ನೇತೃತ್ವದಲ್ಲಿ (1921) ರಾಷ್ಟ್ರೀಯ ಹೈಸ್ಕೂಲು ಆರಂಭಿಸಲು ಶ್ರೀನಿವಾಸಾಚಾರ್ಯ ಮಳಗಿ (ಧಾರವಾಡದ ಕಟ್ಟಿ ಕಾಲೇಜು ತ್ಯಜಿಸಿ ಬಂದ ವಿದ್ಯಾರ್ಥಿ), ಬಿಂದಾಚಾರ್ಯ ಜೋಶಿ, ಕಾಂತಾಚಾರ್ಯ ಜೋಶಿ, ಧಾರವಾಡ ವಿಕ್ಟೋರಿಯಾ ಹೈಸ್ಕೂಲಿನಿಂದ ಬಂದ ಶ್ರೀನಿವಾಸರಾವ್ ಸಾಹುಕಾರ್ ಮತ್ತು ಅನಂತರಾವ್ ಸಾಹುಕಾರ್ ಸೋದರರು, ಡಂಬಳ ವೆಂಕಟರಾವ್, ಖಾಂಡೇಕರ್ ಮುಂತಾದವರು ಅಧ್ಯಾಪಕರಾಗಿದ್ದರು. ಗದಗ ಬೇಟಗೇರಿಯಲ್ಲಿ ಒಟ್ಟು ಐದು ಪ್ರಾಥಮಿಕ ರಾಷ್ಟ್ರೀಯ ಶಾಲೆಗಳನ್ನೂ ಆಗ ತೆರೆದರು. ಹಾವೇರಿಯಲ್ಲಿ ಮಖನ್‌ಲಾಲ್ ಗುಪ್ತ ಅವರ ಯತ್ನದಿಂದ ರಾಷ್ಟ್ರೀಯ ಶಾಲೆ ಆರಂಭವಾಯಿತು. ಪುರುಷೋತ್ತಮಾಚಾರ್ಯ ರಾಯಚೂರ ವಕೀಲರು, ರಾಮಾಚಾರ್ಯ ಗುಡಿ, ಚಿಮ್ಮಲಗಿ, ಪಿ.ಜಿ. ಗಣಪುಲೆ, ಶ್ರೀನಿವಾಸರಾವ್ ತೊರಗಲ್, ಕೃಷ್ಣರಾವ್ ತೊರಗಲ್, ಅಧ್ಯಾಪಕರಾಗಿದ್ದ ಈ ಶಾಲೆ ಕೆಲಕಾಲ ನಡೆಯಿತು. ಹಾನಗಲ್‌ನಲ್ಲಿ ಶಾಮಚಾರ್ಯ ಹಾನಗಲ್ ಎಂಬವರ ನೇತೃತ್ವದಲ್ಲಿ ರಾಷ್ಟ್ರೀಯ ಶಾಲೆ ಆರಂಭವಾಯಿತು. ಇವರು ಕಾಲೇಜು ತ್ಯಜಿಸಿ ಬಂದಿದ್ದರು. ರಾ.ವೆ. ಕರಗುದರಿ, ದತ್ತಪ್ಪ ಕಪಿಲೇಶ್ವರ, ವಾಮನರಾವ್ ದೇಸಾಯಿ, ಅ.ನಾ. ಕುಂದಾಪುರ ಇಲ್ಲಿ ಕಲಿಸುತ್ತಿದ್ದರು. ಮಲ್ಲಾರಿ ಭಟ್ಟ ಕಾಗಿನೆಲ್ಲಿ ಹೆಣ್ಣುಮಕ್ಕಳಿಗೆ ಹಾನಗಲ್‌ನಲ್ಲಿ ಶಾಲೆ ತೆರೆದರು. ಮಿಶ್ರಿಕೋಟಿಯಲ್ಲಿ (1925) ಕೃಷ್ಣಾಜಿ ಮುರಹರ ಕುಲಕರ್ಣಿ ಅಧ್ಯಾಪಕರಾಗಿ ಸ್ಥಾಪಿಸದ ಶಾಲೆ 1929ರವರೆಗೆ ನಡೆಯಿತು.

ಕಲ್ಕತ್ತಾದಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನ ನಡೆದು (1920, ಸೆಪ್ಟೆಂಬರ್) ಅಸಹಕಾರ ಮತ್ತು ಖಿಲಾಫತ್ ಚಳವಳಿಗಳ ನಿರ್ಣಯವಾದ ನಂತರ ಈ ಎಲ್ಲ ಸಂಗತಿಗಳು ನಡೆದವು. ಗಾಂಧೀಜಿ ಆ ವರ್ಷ ಅಕ್ಟೋಬರ್‌ನಲ್ಲಿ ಬೆಳಗಾವಿಗೆ ಬಂದು ಖಾನಾಪುರ, ನಂದಗಡ, ಅಳ್ನಾವರ (ಧಾರವಾಡ ಜಿಲ್ಲೆ), ಹಳಿಯಾಳ (ಉ.ಕ. ಜಿಲ್ಲೆ) ಮುಖಾಂತರ ಧಾರವಾಡ, ಹುಬ್ಬಳ್ಳಿ, ಗದಗುಗಳನ್ನು ಸಂದರ್ಶಿಸಿದರು. ಎಲ್ಲೆಡೆ ಭಾರೀ ಸಾರ್ವಜನಿಕ ಸಭೆಗಳಾಗಿ ಟಿಳಕ ಸ್ವರಾಜ್ಯ ನಿಧಿಗೆ ಹಣವೂ ಸಂಗ್ರಹ ಆಯಿತು. ಗದಗಿನಲ್ಲಿ ಗುರುರಾವ್ ಕುರ್ತಕೋಟಿ ವಕೀಲರ ಅಧ್ಯಕ್ಷತೆಯಲ್ಲಿ ಮುನ್ಸಿಪಲ್ ಮೈದಾನಿನಲ್ಲಿ ಸಭೆ ಆಯಿತು. ಶೌಕತ್ ಅಲಿ ಕೂಡ ಭಾಷಣ ಮಾಡಿದರು. ಗದಗಿನಲ್ಲಿ ಆಗ ಬಿಂಕದಕಟ್ಟಿ ಭೀಮಪ್ಪ, ರಾಮಚಂದ್ರಪ್ಪ ಕುಷ್ಟಗಿ, ಗೋವಿಂದಪ್ಪ ಕುಷ್ಟಗಿ, ಕಳ್ಳಿ ತಿಪ್ಪಣ್ಣ ಶಾಸ್ತ್ರಿ, ಎಚ್ಚರಪ್ಪ ಕುಂದರಗಿ ಇವರೆಲ್ಲ ಕಾಂಗ್ರೆಸ್ ಸೇರಿದರು. ಮುಂದೆ ಜಾಲಿಹಾಳ ಅನಂತರಾಯರು ಪಾದಯಾತ್ರೆಯಿಂದ ಹಳ್ಳಿಹಳ್ಳಿಗೆ ಕಾಂಗ್ರೆಸ್ ಸಂದೇಶ ಮುಟ್ಟಿಸಿದರು. (*ಗದಗ ಪರಿಸರ......*ಪು. 10-11).

ನಾಗಪುರ ಕಾಂಗ್ರೆಸ್ಸಿನ ಠರಾವಿನಂತೆ ಅಸಹಕಾರ ಆಂದೋಲನ ಆರಂಭವಾಗಿ ಸರಕಾರಿ ನೌಕರಿ, ಶಾಲೆ ಕಾಲೇಜು ತ್ಯಾಗ ಅನೇಕರಿಂದ ನಡೆಯಿತು; ವಕೀಲಿ ತ್ಯಾಗವೂ ಆಯಿತು. ಗದಗಿನಲ್ಲಿ ಅನಂತರಾವ್ ಜಾಲಿಹಾಳ, ಧಾರವಾಡದಲ್ಲಿ ಆಲೂರು ವೆಂಕಟರಾವ್ (ಇವರು 1911 ರಲ್ಲಿ ಮತ್ತೆ ವಕೀಲಿ ಆರಂಭಿಸಿದ್ದರು), ಅವರ ಜೊತೆಗಾರ ಮುದವೀಡು ವೆಂಕಟರಾವ್ ಹಾಗೂ ಕೆ.ಬಿ. ಅಂಕಲಗಿ, ಕಡಪಾ ರಾಘವೇಂದ್ರರಾವ್, ಡಂಬಳ ಶ್ರೀನಿವಾಸರಾವ್, ಗೋವಿಂದರಾವ್ ಗುತ್ತಲ, ವಿಠಲರಾವ್ ಜೋಶಿ, ಹುಬ್ಬಳ್ಳಿಯ ವಿಶ್ವನಾಥರಾವ್ ಜೋಶಿ, ಹಾವೇರಿಯ ಪುರುಷೋತ್ತಮಾಚಾರ್ಯ ರಾಯಚೂರ ಮುಂತಾದವರು ವಕೀಲಿ ತ್ಯಜಿಸಿದರು. ಧಾರವಾಡದ ಬಿ.ಆರ್. ಪಟವರ್ಧನ ಸರಕಾರೀ ವಕೀಲಿಗೆ ರಾಜೀನಾಮೆ ಕೊಟ್ಟರು. ಈ ಎಲ್ಲ ವಕೀಲರು ಪೂರ್ಣಕಾಲೀನ ಕಾರ್ಯಕರ್ತರಾಗಿ ಕಾಂಗ್ರೆಸ್ಸಿನಲ್ಲಿ ಕೆಲಸಮಾಡಿದರು.

ಜಯರಾಮಾಚಾರ್ಯ (ವಾಡಪ್ಪಿ) ಕೊಪ್ಪಳ ಎಂಬವರು ಈ ಕಾಲದಲ್ಲಿ ರೈಲ್ವೇಯಲ್ಲಿ ಇದ್ದ ನೌಕರಿ ತ್ಯಜಿಸಿ ಎಲ್ಲೆಡೆ ಕಾಂಗ್ರೆಸ್ಸಿನ ಪ್ರಚಾರಕ್ಕಾಗಿ ಪ್ರಭಾವಶಾಲೀ ಹರಿಕಥೆಗಳನ್ನು ನಡೆಸಿದರು. ಮುದವೀಡು ಕೃಷ್ಣರಾಯರೂ, ಶಾಂತಕವಿಗಳೂ ಈ ಕೆಲಸ ಮಾಡುತ್ತಲೇ ಇದ್ದರು. ಮುಂದೆ ಗದಗಿನ (ಬೆಟಗೇರಿ) ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳು ಜಯರಾಮಾಚಾರ್ಯರಿಂದ ಸ್ಫೂರ್ತಿ ಪಡೆದು ಇದೇ ರೀತಿ ಹರಿಕತೆ ಮಾಡಿ ರಾಷ್ಟ್ರೀಯ ಜಾಗೃತಿ ಮಾಡಿದರು. ಎಲ್ಲೆಡೆ ತಾಲೂಕು ಮಟ್ಟದ ಸಮಿತಿಗಳಾದವು. ಹುಬ್ಬಳ್ಳಿ ತಾ॥ ಸಮಿತಿಗೆ 1922 ರಲ್ಲಿ

ಹುಬ್ಬಳ್ಳಿಗೆ ಅಮೆರಿಕದಿಂದ ಮರಳಿದ ಡಾ॥ ಹರ್ಡೀಕರರೇ ಕಾರ್ಯದರ್ಶಿಗಳು. ಹಾವೇರಿ ತಾಲೂಕು ಸಮಿತಿಗೆ ಶಂಕರಪ್ಪ ತಾಂಡೂರ ಅಧ್ಯಕ್ಷರು, ಗೋವಿಂದಾಚಾರ್ಯ ಅಗ್ನಿಹೋತ್ರಿ ಕಾರ್ಯದರ್ಶಿಗಳು. ಅಗ್ನಿಹೋತ್ರಿಯವರೇ ಅಲ್ಲಿನ ಖಾದೀ ಭಂಡಾರವನ್ನೂ ನೋಡಿಕೊಳ್ಳುತ್ತಿದ್ದರು. ಶಿಗ್ಗಾಂವಿಯಲ್ಲಿ ದಿಗಂಬರರಾವ್ ಹಳೇಪೇಟೆ, ಬಂಕಾಪುರದ ಗುಂಡೇರಾವ್ ಸವಣೂರ್, ಕ್ಯಾಲಕೊಂಡದ ತಿಪ್ಪೇರಾವ್ ಕುಲಕರ್ಣಿ, ಶಂಕರ ದೀಕ್ಷಿತ್ ಮುಂತಾದವರನ್ನು ಒಳಗೊಂಡ ತಾಲೂಕು ಸಮಿತಿಯಾಗಿ ಅಲ್ಲಿ ಖಾದಿ ಭಂಡಾರ, ಮಾರುತಿ ವಾಚನಾಲಯವನ್ನೂ ತೆರೆದರು. ಹಾನಗಲ್‌ನಲ್ಲೂ ಇದೇ ರೀತಿ ತಾ॥ ಸಮಿತಿ ರಚಿಸಿದರು. ಮಲ್ಲಪ್ಪ ಅಕ್ಕಿ (ಅಧ್ಯಕ್ಷ) ಹಾಗೂ ಅ.ನಾ. ಕುಂದಾಪುರ ಕಾರ್ಯದರ್ಶಿಯಾಗಿದ್ದರು. ಅಬ್ದುಲ್ ರಜಾಕ್‌ಸಾಹೇಬ್ ಪಟವೇಗಾರ್, ಶಮ್ಸುಖಾನ ಪಠಾಣ ಮುಂತಾದವರು ಸಮಿತಿಯಲ್ಲಿ ಇದ್ದ ಕೆಲವರು. ನವಲಗುಂದದಲ್ಲಿ 1922ರಲ್ಲಿ ಜೀವಪ್ಪ ಆನೆಗೊಂದಿಯವರ ಅಧ್ಯಕ್ಷತೆಯಲ್ಲಿ ತಾಲೂಕು ಕಾಂಗ್ರೆಸ್ ಸಮಿತಿ ಆಯಿತು. ಅಲ್ಲಿ ವಿದ್ಯಾರಣ್ಯ ವಾಚನಾಲಯ ರಾಷ್ಟ್ರೀಯ ಚಟುವಟಿಕೆಯ ಕೇಂದ್ರವಾಯಿತು.

### ಧಾರವಾಡ ಗೋಳಿಬಾರ್

ಸಭೆ ಮೆರವಣಿಗೆಗಳೇ ಅಲ್ಲದೆ ಸೇಂದಿ ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಆ ಕಾಲದಲ್ಲಿ ಬಿರುಸಾಗಿ ಸಾಗಿತು. ಪತ್ರಿಕೆಗಳೂ ಈ ವಿಚಾರ ಉಗ್ರವಾಗಿ ಬರೆಯುತ್ತಿದ್ದವು. ಜಿಲ್ಲಾಧಿಕಾರಿಯಾದ ಪೇಂಟರ್ ಎಂಬಾತನು ದಬ್ಬಾಳಿಕೆ ಆರಂಭಿಸಿದನು. ಸಾರಾಯಿ ಪಿಕೆಟಿಂಗ್‌ಗೆ ಸಂಬಂಧಿಸಿ ಇಬ್ಬರು ಖಿಲಾಫತ್ ಸ್ವಯಂ ಸೇವಕರಿಗೆ ಆರು ತಿಂಗಳ ಶಿಕ್ಷೆಯನ್ನು ವಿಧಿಸಲು ಅದರ ಪ್ರತಿಭಟನಾರ್ಥ 1ನೇ ಜುಲೈ 1921ರಂದು ಧಾರವಾಡದಲ್ಲಿ ಹರತಾಳ ಆಚರಿಸಿದರು. ಒಂದು ಪ್ರತಿಭಟನಾ ಸಭೆಯೂ ನಡೆಯಿತು. ಆಗ ಸಾರಾಯಿ ಅಂಗಡಿ ಸುಡಲು ಯತ್ನಿಸಿದರು, ದೊಂಬಿ ಮಾಡಿದರು ಎಂದೆಲ್ಲ ಕಾರಣ ಹೇಳಿ ಪೋಲೀಸರು ಗೋಳಿಬಾರು ಮಾಡಿ ಮೂವರು ಖಿಲಾಫತ್ ಕಾರ್ಯಕರ್ತರನ್ನು ಕೊಂದರು; 39ಜನರಿಗೆ ಗಾಯವಾಯಿತು.* ಈ ಬಗ್ಗೆ ಸರಕಾರವು ವಿಚಾರಣೆ ನಡೆಸಬೇಕೆಂಬ ಬೇಡಿಕೆ ಬಂದಾಗ ಸರಕಾರವು ಹಾಗೆ ಮಾಡದಿರಲು ಅ.ಭಾ.ಕಾಂಗ್ರೆಸ್ ಸಮಿತಿಯೇ ಅಬ್ಬಾಸ್ ತಯಬ್ಜಿ, ಭವಾನಿಶಂಕರ್ ನಿಯೋಗಿ ಮತ್ತು ಎಸ್.ಎಸ್.ಸೆಟ್ಲೂರ್ ಇವರನ್ನು ಒಳಗೊಂಡ ವಿಚಾರಣಾ ಆಯೋಗ ನೇಮಿಸಿತು. ಇಡೀ ದೇಶದಲ್ಲಿ ಈ ಘಟನೆಗೆ ವಿಶೇಷ ಪ್ರಚಾರ ಸಿಕ್ಕಿತು.

ಈ ಸಂಬಂಧವಾಗಿ ಸರಕಾರವು 29 ಜನರನ್ನು ಬಂಧಿಸಿ ದೊಂಬಿಯ ನೆಪಹೇಳಿ 27 ಜನರ ಮೇಲೆ ಸುಳ್ಳು ಖಟ್ಲೆ ಹಾಕಿತು. ಈ ಖಟ್ಲೆ ದೀರ್ಘಕಾಲ ನಡೆದಿರಲು ಅದೇ ಕಾಲಕ್ಕೆ ಲಾಲಾ ಲಜಪತರಾಯ್ ಧಾರವಾಡಕ್ಕೆ ಬಂದು ಕೈದಿಗಳನ್ನೆಲ್ಲ ಕಂಡು ಅವರಿಗೆ ಧೈರ್ಯ ಹೇಳಿ ಸಾರ್ವಜನಿಕ ಭಾಷಣ ಕೂಡ ಮಾಡಿದರು. ಬಂಧಿತರ ನೈತಿಕ ಧೈರ್ಯ ಕಂಡು ತನಗೆ ಸಂತಸವಾಗಿದೆ ಎಂದೂ ಅವರು ಪ್ರಕಟಿಸಿದರು.

ಖಟ್ಲೆ ಹಾಕಲ್ಪಟ್ಟ ಜನರಲ್ಲಿ ರಂ.ರಾ.ದಿವಾಕರ, ಹನುಮಂತರಾವ್ ದೇಸಾಯಿ, ಗೋಪಾಳರಾವ್ ದೇಶಪಾಂಡೆ ಹಾಗೂ ಮದಾರ್ ಸಾಬ್ ಕಟಗಾರ್ ನಿರಪರಾಧಿಗಳೆಂದು ಬಿಡುಗಡೆಯಾದರು. ಮಧ್ವರಾವ್ ಕಬ್ಬೂರ್, ವೆಂಕಟರಾವ್ ಮುದುವೀಡ್‌ಕರ್, ಧಾರವಾಡ ಪುರ ಸಭೆಯ ಅಧ್ಯಕ್ಷ ದಾಮೋದರ ಹರ್ಲೇಕರ್, ಅಬ್ದುಲ್ಲಾ ಖಲಾಸಿ (ಖಿಲಾಫತ್ ಸಮಿತಿ ಅಧ್ಯಕ್ಷರು) ಹಾಗೂ ಅಬ್ದುಲ್ ರಹಿಮಾನ್ ರೋಟೀವಾಲಾ ಇವರಿಗೆ ತಲಾ ಮೂರು ವರ್ಷ ಕಠಿಣ ಶಿಕ್ಷೆಯಾಯಿತು. ಅನಂತ ದಾಬಡೆ, ಉಸ್ಮಾನ್ ಮುಲ್ಲಾ, ಸುಲ್ತಾನ್ ಮೊಹಿದಿನ್ ರಾಯದುರ್ಗ, ಶೇಕ್ ಮೋಹಿದ್ದೀನ್ ದರ್ಜಿ, ಅಬ್ದುಲ್ ಖಾದರ್ ಅತ್ತಾರ್, ಮೊಹಮ್ಮದ್ ಹುಸೇನ್ ರೋಟಿವಾಲಾ, ಅಬ್ದುಲ್ ವಾಜುದ್ದೀನ್ ದರೋಗ, ನರಸಿಂಗ ನಾರಾಯಣ ಭಿಸೆ, ಶಾಲಂಭಟ್ ಖಿಂಡಭಟ್ ಹಾಗೂ ಬುಡಾನ್ ಚಪ್ಪರಬಂದ್ ಇವರುಗಳಿಗೆ ತಲಾ ಎರಡು ವರ್ಷ ಕಠಿಣ ಸಜೆ ಆಯಿತು. ತಿರುಮಲರಾವ್ ಜೋಶಿ, ವಾಮನ ಜಠಾರ್, ಅಣ್ಣಾಚಾರ್ಯ ಹೊಸಕೇರಿ, ಮಧ್ವಾಚಾರ್ಯ ಕಲಕೇರಿ, ಮಾಧವ ಕಮಲಾಪುರ, ಇಮಾಮ್ ಮಣಿಯಾರ್, ಮೊಹಮ್ಮದ್ ಸಾಬ್ ಸೌದಾಗರ್ (ಖಿಲಾಫತ್ ಗ್ರಂಥಾಲಯದ ಕಾರ್ಯದರ್ಶಿ) ಹಾಗೂ ಗೋವಿಂದಾಚಾರ್ಯ ಗುತ್ತಲ ಇವರಿಗೆ ತಲಾ ಒಂದು ವರ್ಷ ಕಠಿಣ ಶಿಕ್ಷೆ ಆಯಿತು. (ಮುಂಬೈ ಹೋಂ ಪೊಲಿಟಿಕಲ್ ಫೈಲ್, ನಂ. 88-1921ರಂದು).

* ತೀರಿಕೊಂಡವರ ಹೆಸರುಗಳು ಮಲ್ಲಿಕ್‌ಸಾಬ್ ಬಿನ್ ಮರ್ದಾನ್‌ಸಾಬ್, ಗೌಸಸಾಬ್ ಬಿನ್ ಖಾದರ್‌ಸಾಬ್ ಮತ್ತು ಅಬ್ದುಲ್ ಖಾದರ್ ಚುರ್‌ತಾಯಿ.

ಗೋವಿಂದರಾವ್ ಗುತ್ತಲರು ವಕೀಲಿ ತ್ಯಜಿಸಿದ್ದ ನಾಯಕರಾಗಿದ್ದು, ಜೂನ್ 14 ರಂದು ಸೇಂದಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡುವ ಕಾಲಕ್ಕೆ ಅಲ್ಲಿನ ಪಾರ್ಸಿ ಕಂಟ್ರಾಕ್ಟರನಿಂದ ಹೊಡೆತಕ್ಕೆ ಒಳಗಾಗಿ ಗಾಯಗೊಂಡು ದೀರ್ಘಕಾಲ ಚಿಕಿತ್ಸೆ ಪಡೆಯುತ್ತಿದ್ದರು. ಅವರೂ ಈ ಸುಳ್ಳು ಖಟ್ಲೆಯಲ್ಲಿ ಸೇರಿಸಲ್ಪಟ್ಟಿದ್ದರು. ಇದು ದಬ್ಬಾಳಿಕೆಯಿಂದ ಜನರನ್ನು ಹೆದರಿಸಲು ಮತ್ತು ಜಾತಿಭೇದಮಾಡಿ ಬ್ರಾಹ್ಮಣರನ್ನು ಮುಸಲ್ಮಾನರನ್ನೂ ದೇಶದ್ರೋಹಿಗಳೆಂದು ಹಿಂಸೆಗೊಳಪಡಿಸುವ ಯತ್ನವಾಗಿತ್ತು. "ಬ್ರಿಟಿಷ್ ಆಳರಸರು ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ವೈಮನಸ್ಸನ್ನು ಹುಟ್ಟಿಸಿದ್ದರು..... ಆ ಕಾಲಕ್ಕೆ ಮುಸಲ್ಮಾನ ಸಮಾಜವು ಖಿಲಾಫತ್ ಕಾರಣದಿಂದ ಕಾಂಗ್ರೆಸ್ಸಿಗೆ ಎಂದರೆ ಬಹುಸಂಖ್ಯೆ ಬ್ರಾಹ್ಮಣ ಮುಂದಾಳುಗಳಿಗೆ ಬೆಂಬಲ ಕೊಡುತ್ತಿದ್ದರು. ಆದ್ದರಿಂದ ಪೇಂಟರನಿಗೆ ಖೊಟ್ಟಿ ಖಟ್ಲೆಯನ್ನು ರಚಿಸುವಾಗ್ಗೆ ಲಿಂಗಾಯುತ ಸಾಕ್ಷೀದಾರರ ಸಹಾಯಬೇಕಿತ್ತು. ಆದ್ದರಿಂದ ಅವನು 29 ಜನರನ್ನು ಕೈದು ಮಾಡಿದ್ದರೂ ಲಿಂಗಾಯತರ ಪೈಕಿ ಒಬ್ಬನನ್ನೂ ಕೈದು ಮಾಡಿರಲಿಲ್ಲ..... ಗೋಳಿಬಾರಿನಲ್ಲಿ ಗಾಯಗೊಂಡವರಲ್ಲಿ (ಸಾರಾಯಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡುತ್ತಿದ್ದ ಅಥವಾ ನೋಡುತ್ತಿದ್ದವರಲ್ಲಿ) ಅನೇಕ ಜನ ಲಿಂಗಾಯುತರಿದ್ದರೆಂಬ ಸಂಗತಿ ಮರೆಯಲಾಗದ್ದು.... ಕೈದು ಮಾಡಲ್ಪಟ್ಟ 29 ಜನರಲ್ಲಿ 15 ಜನ ಬ್ರಾಹ್ಮಣರು, 13 ಮುಸಲ್ಮಾನರು ಹಾಗೂ ಒಬ್ಬನೇ ಒಬ್ಬ ಮರಾಠಾ ಇದ್ದರು." ಎಂದು ಸ್ವಾತಂತ್ರ್ಯಯೋಧ ರಘುನಾಥ ವಾಮನ ಜಠಾರರು ಹೇಳಿದ್ದಾರೆ. (ಸ್ವಾ.ಸಂ.ಸ್ಮೃ. I, ಪು. 593). ಹನುಮಂತರಾವ್ ದೇಸಾಯಿ ಎಂಬವರನ್ನು ನಿರ್ದೋಷಿಯೆಂದು ಬಿಡುಗಡೆ ಮಾಡಿದ ಸೆಶನ್ ಜಜ್ "ಇವರ ವಿರುದ್ಧ ಸಾಕ್ಷಿಕೊಟ್ಟ 19 ಜನರ ಪೈಕಿ 13 ಜನ ಸಾಕ್ಷಿದಾರರು ಜಾತಿ ದ್ವೇಷದ ಮೂಲಕ ಸಾಕ್ಷಿ ಕೊಟ್ಟಿದ್ದಾರೆ," ಎಂದಿರುವರು.

ಈ ಗೋಳಿಬಾರು ನಡೆದ ದಿನ ಮುದವೀಡು ಕೃಷ್ಣರಾಯರು ಹರಿಕತೆ ಮಾಡಲು ಹಳಿಯಾಳಕ್ಕೆ ಹೋಗಿದ್ದರು. ಆರೋಪಿಗಳಾದ ಅವರ ವಿರುದ್ಧ 19 ಸಾಕ್ಷಿಗಳಿವೆಯೆಂದು ಅವರಿಗೆ ಜಾಮೀನು ನಿರಾಕರಿಸಲಾಯಿತು. ಆದರೆ ಆ ದಿನ (ಜುಲೈ 1) ಅವರು ಹಳಿಯಾಳದಲ್ಲಿದ್ದರೆಂದು ಹಳಿಯಾಳ ಪೋಲೀಸರ ಡೈರಿಯಲ್ಲಿ ಇದ್ದುದನ್ನು ಕಂಡು ಅವರನ್ನು ಬಿಡುಗಡೆ ಮಾಡಿದರು. ಆರೋಪಿತರಲ್ಲಿ ಗುತ್ತಲ ಅವರಂತೆ ವಾಮನರಾವ್ ಜಠಾರ್ ಆಗ ಹಾಸಿಗೆ ಹಿಡಿದು ಮಲಗಿದ್ದರು. ಅಣ್ಣಾಚಾರ್ಯ ಹೊಸಕೇರಿಯವರಿಗೆ ಕಾಲು ಕುಂಟು, ಹಾಗೂ ಮಧ್ವರಾವ್ ಕಲಕೇರಿ, ತಿರುಮಲರಾವ್ ಜೋಶಿ ಮತ್ತು ಅನಂತರಾವ್ ದಾಬಡೆ ತೀರ ವೃದ್ಧರು. "ಇವರೆಲ್ಲರೂ ಒಂದೆರಡು ಮಣದಷ್ಟು ತೂಕದ ಕಲ್ಲುಗಳನ್ನು ಶೆರೆದಂಗಡಿ ಮೇಲೆ ಒಗೆದರು, ಲೂಟಿ ಮುಂತಾದ ಹೇಯ ಗುನ್ಹೆಗಳನ್ನು ಮಾಡಿದರೆಂದು ಸಂಪೂರ್ಣವಾಗಿ ಸುಳ್ಳು ಸುಳ್ಳು ಹೇಳಲಿಕ್ಕೆ ಕೆಲ ಸಾಕ್ಷಿದಾರರು ಹಿಂಜರಿಯಲಿಲ್ಲ" (ಸ್ವಾ.ಸಂ.ಸ್ಮೃ.1,ಪು. 592-94). ಯಾವ ಆಪಾದಿತನೂ ತನ್ನ ಪರ ವಕೀಲನನ್ನು ಇಡಬಾರದೆಂದು ಕಾಂಗ್ರೆಸ್ಸು ಸೂಚಿಸಿದ್ದರಿಂದ ಎಲ್ಲ ಬಂಧಿತ ಕಾರ್ಯಕರ್ತರೂ ಅದರಂತೆ ನಡೆದು ಜೈಲು ಸೇರಿ ಅಪಾರ ತ್ಯಾಗ, ಸ್ಥೈರ್ಯಗಳನ್ನು ತೋರಿದರು.

"ಗೋಳಿಬಾರ ಆದ ಸಂಜೆ ನಾನು ಖಿಲಾಫತ್ ಮೈದಾನ್ ಎಂಬ ಬಯಲಿನಲ್ಲಿ ಜಾಹೀರ ಸಭೆಯಲ್ಲಿ (ವಿನಾಯಕರಾವ್ ಜೋಷಿಯವರ ಅಧ್ಯಕ್ಷತೆಯಲ್ಲಿ) ಮಾತನಾಡುತ್ತಲಿದ್ದೆ. ಬೆಜವಾಡಾ ಕಾಂಗ್ರೆಸ್ ಸಭೆಯ ನಿರ್ಣಯದಂತೆ ಧಾರವಾಡ ಜಿಲ್ಲೆಯಲ್ಲಿ ಆದ ಕಾರ್ಯದ ವಿವರಗಳನ್ನು ಇಂತಿಷ್ಟು ರಾಟೆಗಳ ಸ್ಥಾಪನೆ, ಇಂತಿಷ್ಟು ಕಾಂಗ್ರೆಸ್ ಸಭಾಸದರ ಸೇರ್ಪಡೆ, ಇಂತಿಷ್ಟು ಟಿಳಕ ಸ್ವರಾಜ್ಯ ನಿಧಿಯ ಸಂಗ್ರಹ ಇತ್ಯಾದಿ ವಿವರ ಕೊಡುತ್ತಿದ್ದೆ" ಎಂದ ರಂ.ರಾ.ದಿವಾಕರರು ತಾನು ಗೋಳಿಬಾರ್ ನಡೆದ ಸ್ಥಳದಿಂದ ಅರ್ಧಮೈಲು ದೂರದಲ್ಲಿ ಇದ್ದರೂ ತಮ್ಮ ಮೇಲೆ ಸರಕಾರ ಸುಳ್ಳು ಖಟ್ಲೆ ಹಾಕಿತು ಎಂದು ತಿಳಿಸುತ್ತ, "ಈ ಘಟನೆಯ ಮೂಲಕ ಧಾರವಾಡ ಹಾಗೂ ಕರ್ನಾಟಕಗಳು ಭಾರತದ ಮುಖಂಡರ ಮತ್ತು ಜನ ಸಾಮಾನ್ಯರ ಮನಸ್ಸನ್ನು ಆಕರ್ಷಿಸಿತು," ಎಂದಿರುವರು (ಸ್ವಾ.ಸಂ.ಸ್ಮೃ. III, ಪು. 274).

ಧಾರವಾಡ ಗೋಳೀಬಾರಿನ ಪ್ರತಿಕ್ರಿಯೆ ತೀವ್ರವಾಗಿತ್ತು. ಅನೇಕ ವರ್ಷ ಅದರ ದಿನಾಚರಣೆ ಮಾಡಲಾಗುತ್ತಿತ್ತು. ಅದು ಜನ ಜಾಗೃತಿಗೆ ದೊಡ್ಡ ಕಾರಣವಾಯಿತು. "ಜುಲೈ ತಿಂಗಳ ಮೊದಲು ಉಯದ ದಿವಸವು 1 ಒಲೆಯ ಹತ್ತಿಸುವುದು ಅಂದು ಮಂದ ಬುದ್ಧಿಯು ।।" ಎಂಬ ಲಾವಣಿಯಿಂದ ಹರತಾಳ, ಉಪವಾಸಗಳಿಗೆ ಪ್ರತೀವರ್ಷ ಕರೆಕೊಡಲಾಗುತ್ತಿತ್ತು. ಅಸಹಕಾರ ವರ್ಷದಲ್ಲಿ ಶಿಕ್ಷೆಗೊಳಗಾದವರು ಕರ್ನಾಟಕದಲ್ಲಿ ಧಾರವಾಡದವರೇ ಹೆಚ್ಚು. ನಿರ್ದೋಷಿಯಾಗಿ ಬಿಡುಗಡೆ ಆದ ದಿವಾಕರರ ಬಗ್ಗೆ ಆಲೂರು ವೆಂಕಟರಾಯರು 'ಭೂರಕ್ಸಾಯ ಸ್ವಾಹಾ' ಎಂದು ಸರಕಾರ ಕೈಕೊಂಡ ತಪ್ಪು ಕ್ರಮ (ದಿವಾಕರರ ಬಂಧನ) ವನ್ನು (ಬ್ಯೂರಾಕ್ರೆಸಿಯನ್ನು 'ಭೂರಕ್ಸ' ಎಂದು ಉದ್ದೇಶಿಸಿ ಬರೆಯಲಾಗಿತ್ತು) ಖಂಡಿಸಿ 'ಕರ್ಮವೀರ'ದಲ್ಲೂ ಬರೆದ ಸಂಪಾದಕೀಯಕ್ಕಾಗಿ ಮತ್ತೆ ದಿವಾಕರರು ಬಂಧಿತರಾಗಿ ರಾಜದ್ರೋಹಕ್ಕಾಗಿ ಒಂದು ವರ್ಷ ಶಿಕ್ಷೆ ಪಡೆದರು. ಅಲ್ಲಿಂದ ಬಿಡುಗಡೆ ಆಗಿ ಬಂದ ದಿವಾಕರರಿಗೆ ನಂತರ (ರಾಷ್ಟ್ರೀಯ

ಶಾಲೆಯಲ್ಲಿ ಅಧ್ಯಾಪಕರಾಗಿದ್ದ) ಶ್ರೀಧರ ಖಾನೋಲ್ಕರ ಬರೆದ ದೇಶಭಕ್ತಿಪರ ಲಾವಣಿ 'ದೇಶಿಯಧುಮದುಮ್ಮೆ' ಪ್ರಕಟಿಸಿದ್ದಕ್ಕಾಗಿ ಮತ್ತೆ ಎರಡು ವರ್ಷ ಶಿಕ್ಷೆ ಆಯಿತು.

ಗೋಲಿಬಾರ್ ಖಟ್ಲೆಯಲ್ಲಿ ಆಪಾದಿತರಲ್ಲಿ 6-7 ಜನ ಪತ್ರಕರ್ತರೇ ಇದ್ದರು. ಅವರಲ್ಲಿ ದಿವಾಕರರು ಒಬ್ಬರು. 'ಕರ್ಮವೀರ'ದ ಸಂಪಾದಕ ಹಾಗೂ ಪ್ರಕಾಶಕರು (ಮಧ್ವರಾವ್ ಕಬ್ಬೂರ) ಒಮ್ಮೆ ಜಿಲ್ಲಾಧಿಕಾರಿ ಪೇಂಟರನನ್ನು ಕಾಣಹೋದಾಗ 'ಐ ಯಾಂ ಥರ್ಸ್‌ಟಿ ಆಫ್ ಯುವರ್ ಬ್ಲಡ್' ಎಂದು ಆತನು ಬೆದರಿಸಿದ್ದು ಅದರಂತೆ ಅವನು ಕ್ರಮ ಕೈಕೊಂಡಿದ್ದನು. ಆದರೆ ಇದರಿಂದ ಪತ್ರಿಕೆಗಳು ಬೆದರಲಿಲ್ಲ. ಜಲಿಯಾನ್‌ವಾಲಾ ದುರಂತಕ್ಕೆ ಕಾರಣನಾದ ಡೈಯರ್‌ನ ಜೊತೆ ಪೇಂಟರ್‌ನನ್ನು ಹೋಲಿಸಿ 'ಡೈಯರ್ ಎಂದರೂ ಬಣಗಾರನೇ ಪೇಂಟರ್ ಎಂದರೂ ಬಣಗಾರನೇ' ಎಂದು ಅಂದಿನ ಪತ್ರಿಕೆಗಳು ಬರೆದವು. (ಆ ಕಾಲದಲ್ಲಿ ಜೈಲಿನಲ್ಲಿದ್ದ ಸಂಪಾದಕರುಗಳೆಲ್ಲರ ಪರ ಧಾರವಾಡದ ಪತ್ರಿಕೆಗಳಿಗೆ ಆಲೂರರೇ ಲೇಖನ ಬರೆಯುತ್ತಿದ್ದರು).

## ಸೇವಾದಳ ಸ್ಥಾಪನೆ

ಚೌರಿಚೌರಾ ಘಟನೆಯ ನಂತರ ಮಹಾತ್ಮರು ಅಸಹಕಾರವನ್ನು ಹಿಂದೆಗೆದರು. ಎಲ್ಲೆಡೆ ಚಳವಳಿ ತಣ್ಣಗಾಗಿತ್ತು. ಆದರೆ ನಾಗಪುರದಲ್ಲಿ ರಾಷ್ಟ್ರಧ್ವಜವನ್ನು ಸೈನಿಕರು ಅವಮಾನಿಸಿದ ಪ್ರಸಂಗದಿಂದ ಅಲ್ಲಿ ಧ್ವಜ ಸತ್ಯಾಗ್ರಹ 1923 ರಲ್ಲಿ ನಡೆದು ಎಲ್ಲ ಪ್ರಾಂತ್ಯಗಳಂತೆ ಕರ್ನಾಟಕದಿಂದಲೂ ಧಾರವಾಡ ಜಿಲ್ಲೆಯಿಂದಲೂ ಸತ್ಯಾಗ್ರಹಿಗಳು ಹೋದರು. ನೂರಾರು ಜನ ಬಂಧಿತರಾದರು. ಆಗ ಒಂದು ತಂಡದ ನಾಯಕರಾಗಿ ಹುಬ್ಬಳ್ಳಿಯಿಂದ ಹೋಗಿದ್ದ ಡಾ॥ಹರ್ಡೀಕರರು ಹಿಂದುಸ್ತಾನೀ ಸೇವಾದಳ ಸ್ಥಾಪನೆಯ ಕಲ್ಪನೆಯನ್ನು ಪಡೆದರು. "ಆಗಿನ ಕಾರಾವಾಸ ನರಕ ಸದೃಶವಾಗಿತ್ತು. ಅರೆಬೆಂದ ಕೆಲವು ಹಸಿಬಿಸಿ ತರುಣರು ಕ್ಷಮಾ ಪತ್ರ ಬರೆದು ಕೊಟ್ಟರೆಂಬ ಸುದ್ದಿ ನಮ್ಮ ಕಿವಿಗೆ ಬಿತ್ತು. ಇದರ ಕಾರಣವನ್ನು ನಾವು ಕೆಲವರು ವಿವೇಚಿಸಿದೆವು ಮತ್ತು ದೇಶದಲ್ಲಿಯ ತರುಣರ ಸಂಘಟನೆ ಮಾಡಿ ಅವರಿಗೆ ಶಿಸ್ತು, ಸಂಯಮ, ಕಷ್ಟ ಸಹಿಷ್ಣುತೆ, ಶರೀರ ಬಲವರ್ಧನೆ ಇವೆಲ್ಲವುಗಳನ್ನು ಒದಗಿಸುವ ಒಂದು ಸಂಘಟನೆಯನ್ನು ಕಟ್ಟಬೇಕೆಂದು ನಿರ್ಧರಿಸಿದೆವು," ಎಂದು ಸೇವಾದಳದ ಸ್ಥಾಪನೆಯ ಹಿನ್ನೆಲೆಯನ್ನು ಡಾ॥ಹರ್ಡೀಕರರು ಹೇಳಿದ್ದಾರೆ (ಸ್ವಾ.ಸಂ.ಸ್ಮೃ. III, ಪು. 262).

ಮುಂದೆ ಕಾಕಿನಾಡ ಕಾಂಗ್ರೆಸ್ ಕಾಲಕ್ಕೆ ಈ ಬಗ್ಗೆ ಸ್ವಯಂಸೇವಕ ಸಮ್ಮೇಳನ ನಡೆಸಿ ಜವಾಹರಲಾಲ್ ನೆಹರೂ ಅಧ್ಯಕ್ಷರಾಗಿ ಡಾ॥ ಹರ್ಡೀಕರರು ಕಾರ್ಯದರ್ಶಿಗಳಾಗಿ ಹಿಂದೂಸ್ಥಾನೀ ಸೇವಾದಳದ ಅ.ಭಾ.ಕೇಂದ್ರ ಹುಬ್ಬಳ್ಳಿಯಲ್ಲಿ ಆಯಿತು. ಧಾರವಾಡ ಜಿಲ್ಲೆಯಿಂದ ಒಡಮೂಡಿದ ಈ ಸಂಸ್ಥೆ ಅಖಿಲ ಭಾರತ ಮಟ್ಟದಲ್ಲಿ ಉಲ್ಲೇಖನೀಯ ಕೆಲಸ ಮಾಡಿತು. ಲೋಕರೆ, ಕೆ.ಎ.ವೆಂಕಟರಾಮಯ್ಯ, ಮಹಾಶಬ್ದೆ, ಏಕಾಂಬರ್ ಅಯ್ಯರ್ ಮುಂತಾದ ಕಾರ್ಯಕರ್ತರು ಕಾಂಗ್ರೆಸ್ ಅಧಿವೇಶನಗಳಲ್ಲಿ ಸ್ವಯಂಸೇವಕರನ್ನು ತರಬೇತಿ ಮಾಡಲು ಬೇರೆ ಬೇರೆ ಪ್ರಾಂತಗಳಿಗೆ ಹುಬ್ಬಳ್ಳಿಯಿಂದ ಹೋಗಿ ಶಿಸ್ತಿನ ಸಿಪಾಯಿಗಳನ್ನು ಸಾವಿರಾರು ಸಂಖ್ಯೆಯಲ್ಲಿ ಸಿದ್ಧ ಪಡಿಸಿದರು. 1930ರ ಉಪ್ಪಿನ ಸತ್ಯಾಗ್ರಹ, 1932ರ ಕಾನೂನು ಭಂಗ ಸತ್ಯಾಗ್ರಹದಲ್ಲಿ ಸಮರ್ಥವಾಗಿ ದುಡಿದು ಸೇವಾದಳದವರು ಅಪೂರ್ವ ಕಾರ್ಯ ಮಾಡಿದರು. ಜಾತ್ರೆ, ಸಮ್ಮೇಳನಗಳಲ್ಲಿ ಜನಜಂಗುಳಿಯ ನಿಯಂತ್ರಣಕ್ಕೆ ತಾವಾಗಿ ತೆರಳುತ್ತಿದ್ದರು. ಬರಗಾಲ, ಪ್ರವಾಹಗಳ ಕಾಲದಲ್ಲಿ ನಿಸ್ಪೃಹತೆಯಿಂದ ಪರಿಹಾರ ಕಾರ್ಯಗಳಲ್ಲಿ ಕೆಲಸ ಮಾಡುತ್ತಿದ್ದರು. 1934ರ ಬಿಹಾರ ಭೂಕಂಪದ ಕಾಲಕ್ಕೆ ಅಲ್ಲಿ ಹೋಗಿ ಪರಿಹಾರ ಕಾರ್ಯದಲ್ಲಿ ಶ್ರಮಿಸಿದರು. ಸರಕಾರವು 1932ರಲ್ಲಿ ಪ್ರತಿಬಂಧಿಸಿದ ಈ ಸಂಘಟನೆಯ ಮೇಲಿನ ಪ್ರತಿಬಂಧವನ್ನು ಹಿಂದೆಗೆಯದಿದ್ದರೂ ಆಗ ತರಬೇತಾದ ತರುಣರು ಕರ್ನಾಟಕದ ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಉತ್ತಮ ಕಾರ್ಯ ಮಾಡಿದರು. 'ವಾಲಂಟಿಯರ್' ಎಂಬ ಆಂಗ್ಲ ಮಾಸಪತ್ರಿಕೆ (1924) ಯನ್ನು ಕೆಲಕಾಲ ಸೇವಾದಳ ಹುಬ್ಬಳ್ಳಿಯಿಂದ ಪ್ರಕಟಿಸುತ್ತಿತ್ತು. ಮೈಸೂರು ಸರಕಾರ ಮೈಸೂರಿನ ಕಾಂಗ್ರೆಸ್ ಪರ ಜನಪ್ರಿಯ ಪತ್ರಿಕೆ 'ಪ್ರಜಾಮತ' ವನ್ನು ಬಹಿಷ್ಕರಿಸಿದಾಗ ಹುಬ್ಬಳ್ಳಿಯಿಂದ ಅದನ್ನು ಪ್ರಕಟಿಸಲು ಡಾ॥ ಹರ್ಡೀಕರರು ನೆರವಾದರು (1937). (ಇದಲ್ಲದೆ 1937 ರಿಂದ 'ಹುಬ್ಬಳ್ಳಿ ಗೆಜೆಟ್' ಎಂಬ ಪಾಕ್ಷಿಕ ಪತ್ರಿಕೆಯನ್ನು ಆರಂಭಿಸಿ ಮುಂದೆ 1946 ರಿಂದ ಅದನ್ನು 'ಜಯ ಹಿಂದ್' ಎಂಬ ಹೆಸರಿನ ಸಾಪ್ತಾಹಿಕವಾಗಿ ಪರಿವರ್ತಿಸಿದರು). ಹುಬ್ಬಳ್ಳಿಯಲ್ಲಿ ಹತ್ತಿ ಗಿರಣಿಯ ಕಾರ್ಮಿಕ ಸಂಘಟನೆಗೂ ಅವರು ದುಡಿದರು. ಶಂಕರರಾವ್ ಜೋಶಿ, ದೇವಪುರೆ ಅದರ ಇತರ ನಾಯಕರಲ್ಲಿ ಕೆಲವರು.

ಅಸಹಕಾರ ಪರ್ವದಲ್ಲಿ ಜಿಲ್ಲೆಯಲ್ಲಿ ಬೇರೆ ಬೇರೆ ಕಡೆ ನಡೆದ ಗಣ್ಯ ಕಾರ್ಯಕ್ರಮಗಳಲ್ಲಿ 1921ರಲ್ಲಿ ಧಾರವಾಡ ಜಿಲ್ಲಾ ರಾಜಕೀಯ ಪರಿಷತ್ತು ನವಲಗುಂದದಲ್ಲಿ ಗಂಗಾಧರರಾವ್ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಆಯಿತು. ಜೀವಪ್ಪ ಆನೆಗೊಂದಿ ಸ್ವಾಗತಾಧ್ಯಕ್ಷರು. ಅಲ್ಲಿ ಮಾಡಿದ ಭಾಷಣಕ್ಕಾಗಿ ಗಂಗಾಧರರಾಯರಿಗೆ ಆರು ತಿಂಗಳ ಶಿಕ್ಷೆಯಾಯಿತು.

1923 ರಲ್ಲಿ ಧಾರವಾಡ ಜಿಲ್ಲಾ ರಾಜಕೀಯ ಪರಿಷತ್ತು ಹಾನಗಲ್‌ನಲ್ಲಿ ಶ್ರೀನಿವಾಸರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಆಯಿತು. ಮಲ್ಲಪ್ಪ ಅಕ್ಕಿ ಸ್ವಾಗತಾಧ್ಯಕ್ಷರು. ಪಂಡಿತ ತಾರಾನಾಥ, ಕಾರ್ನಾಡ್ ಸದಾಶಿವರಾವ್, ಗಂಗಾಧರರಾವ್ ದೇಶಪಾಂಡೆ ಇದರಲ್ಲಿ ಪಾಲುಗೊಂಡರು.

ಇಂಥದೇ ಜಿಲ್ಲಾ ರಾಜಕೀಯ ಪರಿಷತ್ತನ್ನು 1924 ಹಾವೇರಿಯಲ್ಲಿ ಹರ್ಡೇಕರ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಕಾಲಕ್ಕೆ ಡಾ॥ ಹರ್ಡೀಕರರು ಸೇವಾ ದಳದ ಶಿಬಿರವನ್ನು ನಡೆಸಿದರು. ಹನುಮಾನ್ ವ್ಯಾಯಾಮಶಾಲೆ (ಪ್ರೇರಕರು ನಾರಾಯಣಾಚಾರ್ಯ ಆನವಟ್ಟಿ) ಹಾಗೂ ಬಸವೇಶ್ವರ ವ್ಯಾಯಾಮ ಶಾಲೆ (ಚನ್ನಬಸವಯ್ಯ ಹಾಲಯ್ಯಗೋಳ) ಸ್ಥಾಪಿಸಿ ಹಾವೇರಿಯಲ್ಲಿ ತರುಣರನ್ನು ದೇಶದ ಕಾರ್ಯಕ್ಕೆ ಆಕರ್ಷಿಸಲು ಆರಂಭಿಸಿದರು. 'ಬಸವರಾಜ' ಎಂಬ ಪತ್ರಿಕೆಯನ್ನೂ ಮುಂದೆ (1928) ಹಾಲಯ್ಯಗೋಳ ಅವರು ರಾಷ್ಟ್ರೀಯ ವಿಚಾರಗಳ ಪ್ರಚಾರಕ್ಕೆಂದು ಆರಂಭಿಸಿದರು. ಜಿಲ್ಲೆಯ ದಕ್ಷಿಣ ಭಾಗದಲ್ಲಿ ಹಾವೇರಿ ಕಾಂಗ್ರೆಸ್ಸಿನ ಒಂದು ಪ್ರಬಲ ಕೇಂದ್ರವಾಗಿ ಬೆಳೆಯ ಹತ್ತಿತು. ವೆಂಕಟೇಶ ಚವಟಿ ಅವರು ಕಾಂಗ್ರೆಸ್ ಕಛೇರಿ ಕಟ್ಟಲು 11 ಗುಂಟೆ ಜಮೀನು ಕೊಟ್ಟರು.

1924ರಲ್ಲಿ ಕರ್ನಾಟಕದಲ್ಲಿ ನಡೆಯಬೇಕಾಗಿದ್ದ ಕಾಂಗ್ರೆಸ್ ಅಧಿವೇಶನ ಧಾರವಾಡ, ವಿಜಾಪುರ, ಮಂಗಳೂರು ಮುಂತಾದೆಡೆ ಆಗಬೇಕೆಂದಾಗಿ ಕೊನೆಗೆ ಬೆಳಗಾವಿಯಲ್ಲಿ ಆಯಿತು. ಮಹಾತ್ಮಾಗಾಂಧಿ ಅಧಿವೇಶನಾಧ್ಯಕ್ಷರು ಧಾರವಾಡ ಜಿಲ್ಲೆಯಿಂದ ಸಾವಿರಾರು ಜನ ಅದಕ್ಕೆ ತೆರಳಿದರು. ದೇಶದ ಎಲ್ಲ ಗಣ್ಯ ನಾಯಕರು ಅದಕ್ಕೆ ಬಂದಿದ್ದರು. 'ವಿಜಯನಗರ' ಎಂದು ಹೆಸರಿಟ್ಟ ವಿಶಾಲ ಸ್ಥಳದಲ್ಲಿ ಭವ್ಯವಾಗಿ ಅಧಿವೇಶನದ ವ್ಯವಸ್ಥೆ ಮಾಡಲಾಗಿತ್ತು. ಈ ಭಾರೀ ಆಕರ್ಷಣೆಯ ಕಾರ್ಯಕ್ರಮಕ್ಕೆ ಕೇವಲ ಪ್ರೇಕ್ಷಕರಾಗಿ ಹೋದ ಜನರೂ ಕೂಡ ಕಾಂಗ್ರೆಸ್ಸಿನ ಕಡೆ ಆಕರ್ಷಿತರಾದರು. "ಅಲ್ಲಿನ ಭಾರೀ ಜನಸ್ತೋಮ, ಸ್ವಯಂಸೇವಕರ ಕವಾಯತು, ಡಾ॥ ಹರ್ಡೀಕರರಂಥ ನಾಯಕರು ಕುದುರೆಯ ಮೇಲೆ ಕೂತು ನಡೆಸುತ್ತಿದ್ದ ಓಡಾಟ, ನಾಯಕರ ಭಾಷಣ ಇವನ್ನೆಲ್ಲ ಕಂಡು ನನಗೂ ಸ್ಫೂರ್ತಿ ಬಂದು ದೇಶಕ್ಕಾಗಿ ದುಡಿಯಬೇಕೆಂಬ ಹುಮ್ಮಸ್ಸು ಬಂತು," ಎಂದಿರುವ ಆಗ 13 ವರ್ಷದ ಬಾಲಕರಾಗಿದ್ದ ಶಂಕರ ಕುರ್ತಕೋಟಿ, ತಮ್ಮ ಕುರ್ತಕೋಟಿ ಊರಿನಿಂದಲೇ 50 ಜನ ಅಧಿವೇಶನಕ್ಕೆ ಹೋಗಿದ್ದರು, ಎಂದಿದ್ದಾರೆ. (ಸ್ವಾ.ಸಂ.ಸ್ಮ. I, ಪು. 637)

1924 ರ ಅಂತ್ಯದಲ್ಲಿ ನಡೆದ ಬ್ರಾಹ್ಮಣೇತರ ಪರಿಷತ್ತಿಗೂ, ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೂ ನೋಡಲಿಕ್ಕೆ ತಾನು ಹೋಗಿರದಿದ್ದಲ್ಲಿ "ನನ್ನ ಜೀವನದಲ್ಲಿ ಒಂದು ದೊಡ್ಡ ತುಂಬಲಾರದ ಕೊರತೆ ಉಳಿದು ಬಿಡುತ್ತಿತ್ತು. ಬೆಳಗಾವಿ ಅಧಿವೇಶನ ನೋಡಿದ ನಂತರ ನನ್ನ ರಾಷ್ಟ್ರೀಯ ಭಾವನೆಗಳಿಗೆ ಪ್ರೋತ್ಸಾಹ ದೊರೆತು ದೇಶಕ್ಕಾಗಿ ನಾನೂ ಏನಾದರೂ ಮಾಡಬೇಕೆಂಬ ವಿಚಾರ ಕುದುರಿತು," ಎಂದು ಕಲ್ಲನಗೌಡ (ಕೆ.ಎಫ್.) ಪಾಟೀಲರು ಹೇಳಿದ್ದಾರೆ (ನೆನಪಿನ ಒರತೆ I, ಪು. 26 )

## ಬ್ರಾಹ್ಮಣೇತರ ಚಳವಳಿ

ಪೇಶ್ವೆಯರ ರಾಜ್ಯ, ಎರಡನೇಯ ಬಾಜೀರಾಯನ ದುರಾಡಳಿತ, ಆ ಕಾಲದಲ್ಲಿ ಬ್ರಾಹ್ಮಣರಿಗೆ ಆಡಳಿತದಲ್ಲಿ ನೀಡಿದ ಹೆಚ್ಚಿನ ಸ್ಥಾನಮಾನ, ಮರಾಠಿ ಭಾಷೆಗೆ ನೀಡಿದ ಮಹತ್ವ ಇವೆಲ್ಲವುಗಳಿಂದ ಮುಂಬೈ ಕರ್ನಾಟಕ ಪ್ರದೇಶದ ಬಹು ಜನರು ಬ್ರಿಟಿಷರ ಆಡಳಿತವನ್ನು ಸ್ವಾಗತಿಸುವಂತೆ ಆಗಿತ್ತು. ಬುದ್ಧಿ ಜೀವಿಗಳಲ್ಲಿ ಗಣ್ಯರಾದ ಬ್ರಾಹ್ಮಣರಲ್ಲಿ ಕೆಲವರು ಬ್ರಿಟೀಷರ ದುರಾಡಳಿತವನ್ನು ಗಮನಿಸಿ ಅದನ್ನು ಟೀಕಿಸಿ ಸ್ವಾತಂತ್ರ್ಯದ ಬಯಕೆಯನ್ನು ವ್ಯಕ್ತಪಡಿಸಿದಾಗ ಬ್ರಾಹ್ಮಣೇತರರು ಅದನ್ನು ಸಂಶಯದಿಂದ ಕಂಡರು. ಬ್ರಾಹ್ಮಣರು ಕಳೆದುಹೋದ ಪೇಶ್ವೆಯ ರಾಜ್ಯವನ್ನು ಮತ್ತೆ ಪಡೆಯಲು ನಡೆಸಿದ ಫಿತೂರಿ ಈ ಸ್ವಾತಂತ್ರ್ಯದ ಬೇಡಿಕೆ, ಎಂದು ಅವರು ನಂಬಿದ್ದರು. ಶಿಕ್ಷಣವು ಸಾರ್ವತ್ರಿಕವಾಗಿ ಬ್ರಾಹ್ಮಣೇತರರಿಗೂ ಸರಕಾರಿ ನೌಕರಿ ಲಭಿಸುವ ಅವಕಾಶಗಳು ಹೆಚ್ಚಿದಾಗ ಬ್ರಾಹ್ಮಣರಿಗೆ ಸರಕಾರೀ ನೌಕರಿಯ ಕ್ಷೇತ್ರದಲ್ಲಿ ಇದ್ದ ಏಕಸ್ವಾಮ್ಯ ಕೊನೆಯಾಗುತ್ತಿದೆ ಎಂದು ಅವರು ಭಾವಿಸಿದರು. ಮತ್ತು ಸ್ವಾತಂತ್ರ್ಯದ ಬಗೆಗಿನ ಎಲ್ಲ ಬೇಡಿಕೆಗಳನ್ನು ಅವರು ಖಂಡಿಸಿದರು. ಕಾಂಗ್ರೆಸ್ಸಿನಲ್ಲೇ ಇದ್ದ ಸೌಮ್ಯವಾದಿಗಳಾದ ಗೋಖಲೆ, ಚಂದಾವರ್ಕರ್ ಮುಂತಾದ ನಾಯಕರೇ ದೇಶವು

ಸ್ವಾತಂತ್ರ್ಯಕ್ಕೆ ಇನ್ನೂ ಪಕ್ವವಾಗಿಲ್ಲವೆಂದು ಭಾವವಿಸಿರಲು ಬ್ರಾಹ್ಮಣೇತರ ನಾಯಕರು ಸ್ವಾತಂತ್ರ್ಯದ ಕಲ್ಪನೆಯನ್ನು ಖಂಡಿಸಿದ್ದರಲ್ಲಿ ಅಚ್ಚರಿಯಿಲ್ಲ. ಇದಲ್ಲದೆ ಬ್ರಾಹ್ಮಣ್ಯದ ಖಂಡನೆಯನ್ನು ಬ್ರಾಹ್ಮಣೇತರರು ಮಾಡಿದಾಗ ಕಾಂಗ್ರೆಸ್ಸಿನಲ್ಲಿ ಆಗ ಇದ್ದ ಗಣ್ಯ ಬ್ರಾಹ್ಮಣ ನಾಯಕರು ಸ್ವಾತಂತ್ರ್ಯ ಚಳವಳಿಯಷ್ಟೇ ಉಗ್ರವಾಗಿ ಚಾತುರ್ವರ್ಣ್ಯ, "ಬ್ರಾಹ್ಮಣ್ಯ"ಗಳ ಸಮರ್ಥನೆಗೆ ಯತ್ನಿಸಿದ್ದು ಹಾಸ್ಯಾಸ್ಪದವಾದ ತೊಡಕಾಗಿತ್ತು. ಆದರೆ ಕಾಲಕ್ರಮದಲ್ಲಿ ಈ ನಿಲುವು ಮೆಲ್ಲನೆ ಕಳಚಿತು. ಆಗ ಆಲೂರು ವೆಂಕಟರಾಯರಂಥ ಗಣ್ಯರು ಗಾಂಧೀಜಿಯವರ ಕೆಲವೊಂದು ಸಾಮಾಜಿಕ ಕಲ್ಪನೆಗಳನ್ನು ವಿರೋಧಿಸಿ ಕಾಂಗ್ರೆಸ್‌ನ ಕಾರ್ಯಸಮಿತಿಗೆ ರಾಜೀನಾಮೆ ನೀಡಿದ್ದೂ ಇಲ್ಲಿ ಗಮನಿಸಬೇಕಾದದ್ದು. ಆಲೂರರ ದೇಶಭಕ್ತಿಯಾಗಲೀ ಬ್ರಾಹ್ಮಣೇತರರ ಬಗ್ಗೆ ಇದ್ದ ಒಲವಾಗಲೀ ಕಡಿಮೆಯದಲ್ಲ. ಆದರೆ ವಿವಿಧ ರೀತಿಯ ವೈಚಾರಿಕ ಗೊಂದಲ ಇಂಥ ನಿಲುವಿಗೆ ಕಾರಣ; ಆದರೆ ಅವರ ಚಟುವಟಿಕೆಗಳು ಹಾಗೇ ಸಾಗಿದವು.

ಸರಕಾರವೂ ಬ್ರಾಹ್ಮಣ- ಬ್ರಾಹ್ಮಣೇತರರಲ್ಲಿ ವೈಷಮ್ಯ ಹೆಚ್ಚಿಸಲು ಹೇಗೆ ಯತ್ನಿಸುತ್ತಿತ್ತು, ಎಂಬುದು ಧಾರವಾಡ; ಗೋಳೀಬಾರ್ ಪ್ರಕರಣದಲ್ಲಿ ಸ್ಪಷ್ಟವಾಗಿದೆ. ಬ್ರಾಹ್ಮಣರ ವಿರುದ್ಧ ಸುಳ್ಳು ಖಟ್ಲೆಗಳನ್ನು ಹಾಕಿ ಬ್ರಾಹ್ಮಣೇತರರಿಂದ ಅವರನ್ನು ಕೆಲವೊಮ್ಮೆ ದುಡ್ಡು, ಆಮಿಷಗಳಿಂದ ಒಲಿಸಿ ಸಾಕ್ಷ್ಯ ಹೇಳಿಸಿದ ಸಂಗತಿ ಹಿಂದೆ ಉಲ್ಲೇಖಿಸಿದೆ. ಧಾರವಾಡದ ಹಿರಿಯ ಬ್ರಾಹ್ಮಣೇತರ ರಾಷ್ಟ್ರೀಯ ನಾಯಕರಾದ (ಟಿಳಕರ ಸಹಪಾಠಿ) ಗದಿಗೆಯ್ಯ ಹೊನ್ನಾಪುರಮಠ ಅವರ ನಿಕಟ ಸಂಬಂಧಿಯೊಬ್ಬರು ಗದಿಗೆಯ್ಯನವರ ನಿಕಟ ಮಿತ್ರರಾಗಿದ್ದ ಕಾಂಗ್ರೆಸ್ ನ್ಶಾಯಕರ ವಿರುದ್ಧ ಈ ಖಟ್ಲೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದರಿಂದ ಗದಿಗೆಯ್ಯನವರು ನೊಂದು ತಮ್ಮ ಕಾಂಗ್ರೆಸ್ ಮಿತ್ರರ ಎದುರಿಗೆ ಮುಖಭಂಗ ಹೊಂದಿ ಕಾಂಗ್ರೆಸ್ ಚಟುವಟಿಕೆಗಳಿಂದ ಕೆಲವು ಕಾಲ ಹಿಂದೆ ಸರಿಯುವಂತೆ ಆಯಿತು. (ಹೊನ್ನಪುರ ಪು. 77-78; ಈ ಕೃತಿಯಲ್ಲಿ ಆ ಸಂಬಂಧಿಯ ಹೆಸರೂ ಹೇಳಿದೆ).

ಈ ಕಾಲದಲ್ಲಿ ಮದ್ರಾಸ್, ಮುಂಬೈ, ಕೊಲ್ಹಾಪುರ, ಪುಣೆಗಳಲ್ಲಿ ಬ್ರಾಹ್ಮಣೇತರರ ಸಂಘಟನೆಗಳು ನಡೆದವು. ಮುಖ್ಯವಾಗಿ ಬ್ರಾಹ್ಮಣೇತರ ಜಾತಿಗಳು ಸಂಘಟಿತರಾಗಿ ತಮ್ಮ ತಮ್ಮ ಜಾತಿಯ ಹಿಂದುಳಿದ ಜನ ಶಿಕ್ಷಣ ಪಡೆದು ಮುಂದೆ ಬರಬೇಕು, ಹಾಗೂ ಸರಕಾರೀ ನೌಕರಿ, ಪ್ರಜಾಪ್ರತಿನಿಧಿ ಸಂಸ್ಥೆಗಳಲ್ಲೂ ಆಯ್ಕೆಗೊಂಡು, ಅಧಿಕಾರ ಗ್ರಹಿಸಿ ತಮ್ಮ ಹಿಂದುಳಿದ ವರ್ಗಗಳ ಪ್ರಗತಿಗಾಗಿ ನೀತಿ, ಧೋರಣೆ ರೂಪಿಸಬೇಕು, ಹಾಗೂ ನಗರಪಟ್ಟಣಗಳಿಗೆ ಆಚಿನ ಹಳ್ಳಿಗಳ ಕೃಷಿಕರಾಗಿ ವರ್ಗಗಳ ಹಿತರಕ್ಷಣೆ ಆಗಬೇಕು, ಎಂಬುದೂ ಅವರ ಆಶಯವಾಗಿತ್ತು. ಮಹಾರಾಷ್ಟ್ರದಲ್ಲಿ (ಪುಣೆ) ಮಹಾತ್ಮ ಫುಲೆ ಅವರು ಆರಂಭಿಸಿದ ಸತ್ಯಶೋದಕ ಸಮಾಜ, ಜಮಖಂಡಿಯವರಾದ ವಿಠಲ ರಾಮಜಿ ಶಿಂಧೆ ಎಂಬವರು ಪುಣೆಯಲ್ಲಿ ಸ್ಥಾಪಿಸಿದ ಡಿಪ್ರೆಸ್ಟ್ ಕ್ಲಾಸಸ್ ಮಿಶನ್ ಸೊಸೈಟಿ (1906) ಇವುಗಳ ಪ್ರಭಾವ ಕರ್ನಾಟಕದಲ್ಲೂ ಆಗದೆ ಇರಲಿಲ್ಲ. ಶಿಂಧೆಯವರ ಸಂಸ್ಥೆಯ ಶಾಖೆಯನ್ನು ಹುಬ್ಬಳ್ಳಿಯಲ್ಲೂ ತೆರೆದರು. ಇದಲ್ಲದೆ ಬೇರೆ ಬೇರೆ ಬ್ರಾಹ್ಮಣೇತರ ಜಾತಿಯವರು ತಮ್ಮ ಜಾತಿಗಳಿಗೆ ಅನುಗುಣವಾಗಿ ಸಂಘಟನೆಗಳನ್ನು ಕಟ್ಟಿ ಶಿಕ್ಷಣ ಸಂಸ್ಥೆ, ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದರು. ಈ ಪೈಕಿ 1883ರಲ್ಲಿ ಧಾರವಾಡದಲ್ಲಿ ಸ್ಥಾಪಿಸಿದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಮುಖ್ಯವಾದುದು. "ಅಡಕೀ ಓಣಿಯಲ್ಲಿದ್ದ ಚೆನ್ನಮಲ್ಲಪ್ಪ ಟೆಂಗಿನಕಾಯ ಅವರ ಮನೆಯಲ್ಲಿ ಸಭೆ ಸೇರಿ ಸೆಪ್ಟೆಂಬರ್ 30ಕ್ಕೆ ಸ್ಥಾಪನಾ ನಿರ್ಣಯವಾಯಿತು", ಗಿಲಗಂಚಿ ಗುರುಸಿದ್ದಪ್ಪ ಮತ್ತು ಅರಟಾಳ ರುದ್ರಗೌಡ ಎಂಬ ವೀರಶೈವ ಗಣ್ಯ ನಾಯಕರು ಇದರ ಸ್ಥಾಪನೆಗೆ ಕಾರಣರಾಗಿದ್ದು ಈ ಸಂಸ್ಥೆ ವೀರಶೈವ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣಕ್ಕೆ ಹಣದ ನೆರವು ನೀಡುತ್ತಿತ್ತು. ಇಂಗ್ಲೆಂಡಿಗೆ ವ್ಯಾಸಂಗಕ್ಕೆ ಹೋಗುವವರಿಗೂ ಧನ ಸಹಾಯ ನೀಡುತ್ತಿದ್ದು ಮಹಾರಾಷ್ಟ್ರದ ಬಾರ್ಶಿ ತಾಲೂಕಿನ ಹೊಸಾಳಿ ಎಂಬವವರಿಗೆ ಐ.ಸಿ.ಎಸ್. ತರಬೇತಿಗೆ ಕಳುಹಿಸಿದ್ದು ಇದಕ್ಕೆ ಮೊದಲ ಉದಾಹರಣೆ. ಇದಲ್ಲದೆ 1893 ರಲ್ಲಿ ಬೆಳಗಾವಿ ಮತ್ತು ಧಾರವಾಡಗಳಲ್ಲಿ ಮರಾಠಾ ವಿದ್ಯಾ ಪ್ರಸಾರಕ ಮಂಡಳವೆಂಬ ಸಂಸ್ಥೆ ಆರಂಭವಾಗಿ ಅದು ಧಾರವಾಡದಲ್ಲಿ ಒಂದು ಮಾಧ್ಯಮಿಕ ಶಾಲೆಯನ್ನು ತೆರೆದಿರಲು ಅದು 1897ರ ಪ್ಲೇಗ್‌ನಿಂದ ಮುಚ್ಚಿಹೋಯಿತು.

ವೀರಶೈವ ವಿದ್ಯಾಭಿವೃದ್ಧಿ ಸಂಘವು 1922ರಲ್ಲಿ ಧಾರವಾಡದಲ್ಲಿ ಕೆ.ಎಲ್.ಇ.ಸೊಸೈಟಿ ಆರಂಭ ಮಾಡಿದ ಆರ್.ಎಲ್.ಎಸ್. ಹೈಸ್ಕೂಲಿಗೆ ನೆರವು ನೀಡಿತಲ್ಲದೆ ಲಿಂಗಾಯತ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ತೆರೆಯಿತು. ಇದಕ್ಕೂ ಮಹತ್ವದ ಸಂಗತಿಯೆಂದರೆ 1904 ಮೇ 13 ಕ್ಕೆ ಧಾರವಾಡದಲ್ಲಿ ಹಾನಗಲ್ ಶ್ರೀ ಕುಮಾರಸ್ವಾಮಿಗಳ ಹಿರಿತನದಲ್ಲಿ ಶಿರಸಂಗಿ ಲಿಂಗರಾಜರ ಅಧ್ಯಕ್ಷತೆಯಲ್ಲಿ ನಡೆದ ಪ್ರಥಮ ವೀರಶೈವ ಮಹಾಸಭೆಯ ಅಧಿವೇಶನ. ವೀರಶೈವರು ಕೇವಲ ಒಕ್ಕಲುತನವನ್ನೇ ಅವಲಂಬಿಸದೆ ವ್ಯಾಪಾರ ಉದ್ದಿಮೆಗಳಲ್ಲೂ ಆಸ್ಥೆವಹಿಸಬೇಕೆಂದು ಲಿಂಗರಾಜರು ಕರೆಕೊಟ್ಟರು. ಈ ಸಂಸ್ಥೆಯು ವೀರಶೈವರ ಸರ್ವತೋಮುಖ ಪ್ರಗತಿಗಾಗಿ ವಿವಿಧ ಸ್ವರೂಪದ

ಚಟುವಟಿಕೆಗಳನ್ನು ಆರಂಭಿಸಿತು. ಮುಂದೆ ಇದರ 11ನೇಯ ಅಧಿವೇಶನವು ಧಾರವಾಡದಲ್ಲೇ ಫ.ಗು. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಆದರೆ 1916ರಲ್ಲಿ ಬೆಳಗಾವಿಯಲ್ಲಿ ಆರಂಭಿಸಲ್ಪಟ್ಟ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ ಇನ್ನೂ ಹೆಚ್ಚು ವ್ಯವಸ್ಥಿತವಾಗಿ ವೀರಶೈವರ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿತು. ಆಗ ನಡೆದ ಸಂಘಟನೆಗಳ ರಾಜಕೀಯ ನಿಲುವನ್ನು ಸೂಚಿಸಲು ಧಾರವಾಡದ ವೀರಶೈವ ವಿದ್ಯಾಭಿವೃದ್ಧಿ ಸಂಘದವರು 1913ರಲ್ಲಿ ಮುಂಬೈ ಗವರ್ನರರಿಗೆ ಬರೆದ ಪತ್ರದಿಂದ ಕೆಲವೊಂದು ಭಾಗಗಳನ್ನು ಇಲ್ಲಿ ಉದ್ಧರಿಸ ಬಹುದು. "ಮುಂಬೈ ಸರಕಾರದವರು ನಮ್ಮಲ್ಲಿ ಯೋಗ್ಯರಾದವರಿಗೆ ಮೇಲ್ತರದ ಮತ್ತು ಜವಾಬುದಾರಿಯ ಸ್ಥಳಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದಕ್ಕಾಗಿ ನಾವು ಕೃತಜ್ಞತಾಪೂರ್ವಕವಾಗಿ ಸರಕಾರದವರನ್ನು ನೆನೆಸುತ್ತೇವೆ...... ನಮ್ಮ ಈಗಿನ ಪ್ರಗತಿಗೆ ಕಾರಣವಾದ ದಯಾಭರಿತವಾದ ಬ್ರಿಟಿಷ್ ಸಾಮ್ರಾಜ್ಯಕ್ಕೆ ನಾವು ಋಣಿಯಾಗಿದ್ದೇವೆ. ಬ್ರಿಟಿಷ್ ಸಿಂಹಾಸನಕ್ಕೆ ನಮ್ಮ ಸಮಾಜದವರು ಅತ್ಯಂತ ದೃಢವಾದ ರಾಜನಿಷ್ಠೆಯಿಂದ ವರ್ತಿಸುತ್ತಿರುವರೆಂದು ನಾವು ಮಹಾಪ್ರಭುಗಳಿಗೆ ಖಂಡಿತವಾಗಿ ಹೇಳುತ್ತೇವೆ...." (ಲಿಂ.ವಿ.ಸಂ; ಶತಮಾನೋತ್ಸವ, ಪು. 21)

ಇದೇ ಕಾಲಕ್ಕೆ ನೆರೆಯ ಬೆಳಗಾವಿಯಲ್ಲಿ ನಾಮದೇವ ಶಿಂಪಿ ಸಮಾಜದ ಸಮ್ಮೇಳನ (ಮೇ 1915), ಮರಾಠಾ ಶಿಕ್ಷಣ ಸಮಾಜದ ಸಮ್ಮೇಳನ (1915) ಇವು ನಡೆದು ಅದರ ಪರಿಣಾಮವೂ ಬ್ರಾಹ್ಮಣೇತರ ಚಳವಳಿಯ ಮೇಲೆ ಆಯಿತು. ಮುಂಬೈ ಕೇಂದ್ರವಾಗಿ ಇದ್ದ ಮೊಹಮ್ಮಡನ್ ಎಜುಕೇಶನ್ ಕಾನ್ಫರೆನ್ಸ್‌ನ ಆರನೇಯ ಸಮ್ಮೇಳನವು 1917ರ ಏಪ್ರಿಲ್ 16-17ಕ್ಕೆ ಧಾರವಾಡದಲ್ಲಿ ಆಯಿತು. ಇದೇ ಸಮಯಕ್ಕೆ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಆರಂಭವಾಗುವ ಹಿನ್ನೆಲೆಯಲ್ಲಿ (1917) ಮುರುಘಾರಾಜೇಂದ್ರ ಪ್ರಸಾದ ನಿಲಯ ಶುರುವಾಯಿತು (1916). ಮದ್ರಾಸಿನ ಜಸ್ಟಿಸ್ ಪಕ್ಷ (1916) ದ ಹಾಗೂ ಮೈಸೂರಿನ 'ಪ್ರಜಾಮಿತ್ರ ಮಂಡಳಿ' (1917) ಗಳ ಪ್ರಭಾವವೂ ಈ ಭಾಗದಲ್ಲಿ ಆಯಿತು.

ಈ ಎಲ್ಲ ವಿವಿಧ ಚಳುವಳಿಗಳ ಕಲಶದಂತೆ ಮುಂಬೈ ರಾಜ್ಯ ಬ್ರಾಹ್ಮಣೇತರ ಪರಿಷತ್ತನ್ನು ಹುಬ್ಬಳ್ಳಿಯಲ್ಲಿ ಸಿದ್ದಪ್ಪ ಕಂಬಳಿ ವಕೀಲರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಸಂಘಟಿಸಲಾಯಿತು. ಇದನ್ನು ಕೊಲ್ಹಾಪುರದ ಮಹಾರಾಜ ಶಾಹುರಾಜೆ ಉದ್ಘಾಟಿಸಿದರು. ಮದ್ರಾಸಿನ ಜಸ್ಟಿಸ್ ಪಕ್ಷ (ಬ್ರಾಹ್ಮಣೇತರ ಪಕ್ಷ)ದ ನಾಯಕ ತ್ಯಾಗರಾಜ ಚೆಟ್ಟಿ ಇದರ ಅಧ್ಯಕ್ಷರು. ಜೈನ ಮುಖಂಡ ಅಣ್ಣಾ ಸಾಹೇಬ್ ಲಠ್ಠೆ, ಮರಾಠಾ ನಾಯಕರಾದ ಮಹಾರಾಷ್ಟ್ರದ ಕೇಶವರಾವ್ ಜೇಧೆ ಇದರಲ್ಲಿ ಪಾಲುಗೊಂಡರು. "ಬಹು ಸಂಖ್ಯಾತ ಸಮಾಜದಲ್ಲಿ ಆ ಪರಿಷತ್ತು ಹೊಸಹುಮ್ಮಸ್ಸು ಮೂಡಿಸಿತು. ಈ ಜನರಿಗೆ ತಮ್ಮತನದ ಅರಿವನ್ನು ತಂದು ಕೊಟ್ಟಿತು. ಪರಿಷತ್ತು ಭಾರೀ ಯಶಸ್ಸಿನಿಂದ ವಿಜೃಂಭಿಸಿತು. ಹುಬ್ಬಳ್ಳಿ ಮತ್ತು ಕಂಬಳಿಯವರಿಗೆ ಒಮ್ಮೆಗೆ ವಿಶೇಷ ಪ್ರಾಧಾನ್ಯ ಲಭಿಸಿದವು," ಎಂದು ಪಾಟೀಲ ಪುಟ್ಟಪ್ಪ ಹೇಳಿದ್ದಾರೆ ('ಸರ್ ಸಾಹೇಬರು', ಪು. 40).

ಮರುವರ್ಷ ದೇವಾಸದ ಮಹಾರಾಜರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಪರಿಷತ್ತು ನಡೆಯಿತು. ಕಾಂಗ್ರೆಸ್ ಚುನಾವಣೆಗಳನ್ನು ಬಹಿಷ್ಕರಿಸಿದ್ದರಿಂದ (ಅಸಹಕಾರ ನಿರ್ಣಯದಂತೆ) 1923ರಲ್ಲಿ ಮುಂಬೈ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಈ ಪಕ್ಷವು ಬಹುಮತ ಪಡೆಯಿತು.

ಬ್ರಾಹ್ಮಣೇತರ ಪರಿಷತ್ತಿನ ಕಾರ್ಯದಲ್ಲಿ ಕಂಬಳಿಯವರಿಗೆ ನೆರವಾಗುತ್ತಿದ್ದ ಅನ್ಯಗಣ್ಯರೆಂದರೆ ರಾವ್ ಬಹಾದೂರ್ ಬಿ.ಎಲ್. ಪಾಟೀಲ (ಧಾರವಾಡ), ಎ.ಎಫ್. ಪಠಾಣ, ಸಿದ್ದಪ್ಪ, ಬಣಗಾರ, ಡಾ|| ಕುರಡೀಕೇರಿ ಮುಂತಾದವರು.

ಇದೇ ಕಾಲಕ್ಕೆ ಸತ್ಯಶೋಧಕ ಸಮಾಜದ ಹತ್ತನೇಯ ಸಮ್ಮೇಳನವು ಅದೇ ವರ್ಷ ಬೆಳಗಾವಿಯಲ್ಲಿ ಬಿ.ವಿ. ಜಾಧವರ ಅಧ್ಯಕ್ಷತೆಯಲ್ಲಿ ನಡೆಯಿತು. ಬ್ರಾಹ್ಮಣೇತರ ಪರಿಷತ್ತಿನ ನಾಲ್ಕನೇಯ ಸಮ್ಮೇಳನ ಬೆಳಗಾವಿಯಲ್ಲಿ 1924 ರಲ್ಲಿ ಎ. ರಾಮಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ಆಯಿತು. ಅಣ್ಣಾಸಾಹೇಬ ಲಠ್ಠೆ ಸ್ವಾಗತಾಧ್ಯಕ್ಷರು.

ಇದಕ್ಕೆ ಮೊದಲೇ 1921ರಲ್ಲಿ ಕಂಬಳಿಯವರು ಹುಬ್ಬಳ್ಳಿ ನಗರ ಸಭೆಗೆ ಆರಿಸಿ ಬಂದು 1921ರಲ್ಲಿ ಅದರ ಪ್ರಥಮ ಚುನಾಯಿತ ಅಧ್ಯಕ್ಷರಾದರು. ಹುಬ್ಬಳ್ಳಿಯಲ್ಲಿ ಮಹಬೂಬ್ ಅಲೀಖಾನ್ ಎಂಬವರು ಅವರ ಜೊತೆಗಾರರು. ಅಲ್ಲದೆ 1923 ರಲ್ಲಿ ಮುಂದೆ

ವಿಧಾನ ಪರಿಷತ್ತಿಗೆ ಕಂಬಳಿಯವರು ಆರಿಸಿ ಬಂದು 1923 ರಲ್ಲಿ ಅದರ ಉಪ ಸಭಾಪತಿಗಳೂ 1926ರಲ್ಲಿ ಸಭಾಪತಿಗಳೂ ಆದರು. ಜಿಲ್ಲಾ ಲೋಕಲ್ ಬೋರ್ಡ್‌ಗೂ ಅಧ್ಯಕ್ಷರಾದರು (1926-28). 1924 ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನದ ಕಾಲಕ್ಕೇ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿಗೆ ಅಧ್ಯಕ್ಷರಾದರು. ಮತ್ತು 1930ರಲ್ಲಿ ಮುಂಬೈ ರಾಜ್ಯದಲ್ಲಿ ಶಿಕ್ಷಣ ಸಚಿವ ಪದವಿಗೂ ಏರಿದರು. ಸರಕಾರ ಮುಚ್ಚಬೇಕೆಂದಿದ್ದ ಕರ್ನಾಟಕ ಕಾಲೇಜನ್ನು ಉಳಿಸಿ ಅದನ್ನು ಪ್ರಥಮ ದರ್ಜೆಗೆ ಏರಿಸುವಂತೆ ಮಾಡಿದ್ದೂ ಧಾರವಾಡದಲ್ಲಿ ಕನ್ನಡ ಸಂಶೋಧನೆ ಸಂಸ್ಥೆ ಸ್ಥಾಪಿಸಿದ್ದೂ (ಕೆ.ಆರ್.ಐ.) ಅವರ ಮುಖ್ಯ ಸಾಧನೆಗಳು.

ಅಲ್ಲದೆ ಕಂಬಳಿ ಮತ್ತು ಅರಟಾಳ ರುದ್ರಗೌಡರ ನೆರವಿನಿಂದ ಧಾರವಾಡದಲ್ಲಿ ರಾವ್ ಬಹದೂರ ಶಾಂತಿವೀರಪ್ಪ ಮೆಣಸಿನಕಾಯಿ ಅವರು 1916ರಲ್ಲಿ ಧಾರವಾಡ ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕ್ ಸ್ಥಾಪಿಸಿದರು. ಹೀಗೆ ಬ್ರಾಹ್ಮಣೇತರ ಸಮಾಜದಲ್ಲಿ ಜಾಗೃತಿ, ಶೈಕ್ಷಣಿಕ ಪ್ರಗತಿಗೆ ಬ್ರಾಹ್ಮಣೇತರ ಪರಿಷತ್ತು ಮತ್ತು ಅದರ ನಾಯಕರು ವಿಶೇಷವಾಗಿ ಶ್ರಮಿಸಿ ಜಿಲ್ಲೆಯ ಬಹುಮುಖ ಪ್ರಗತಿಗೆ ಕಾರಣರಾದರು. ಆ ಕಾಲದಲ್ಲಿ ಬೆಳಗಾವಿಯಲ್ಲಿ ಆರಂಭವಾದ ಕೆ.ಎಲ್.ಇ. (1916) ಸೊಸೈಟಿ ಇಡೀ ಕರ್ನಾಟಕದಲ್ಲಿ ಇಂದಿಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಗಣ್ಯ ಕಾರ್ಯ ಮಾಡುತ್ತಿದೆ.

ಆದರೆ ಬ್ರಾಹ್ಮಣೇತರರ ಕಾಂಗ್ರೆಸ್ ವಿರೋಧೀ ಧೋರಣೆ ರಾಷ್ಟ್ರೀಯ ಚಳವಳಿಯ ತೀವ್ರ ಬೆಳವಣಿಗೆಗೆ ಘಾತಕವಾಯಿತು. ಕಾಂಗ್ರೆಸ್ಸನ್ನು ಎಲ್ಲೆಡೆ ಬ್ರಾಹ್ಮಣರ ಸಂಘಟನೆಯೆಂದು ಖಂಡಿಸಲಾಗುತ್ತಿತ್ತು. ವಿಜಾಪುರ, ನಿಪ್ಪಾಣಿಗಳಲ್ಲಿ ಬಂದಿದ್ದ ಗಾಂಧೀಜಿ ಭಾಷಣ ಮಾಡುತ್ತಿದ್ದಾಗ ಅವರನ್ನು ಬ್ರಾಹ್ಮಣರ ಕೈಗೊಂಬೆಯೆಂದು ಛೇಡಿಸಲಾಯಿತು. 1920ರಲ್ಲಿ ಹುಬ್ಬಳ್ಳಿಗೆ ಬಂದ ಅವರು ಸಿದ್ದಪ್ಪ ಕಂಬಳಿಯವರನ್ನು ಬೇಟಿ ಮಾಡಿ ಗುಪ್ತವಾಗಿ ಮಾತುಕತೆ ನಡೆಸಿದರು. "ಬ್ರಾಹ್ಮಣೇತರ ಚಳವಳಿಯ ಈ ನಾಯಕರು ಗಾಂಧೀಜಿಯವರ ಜೊತೆ ಏಕಾಂತದಲ್ಲಿ ಒಂದು ಗಂಟೆ ನಡೆಸಿದ ಚರ್ಚೆಯ ವಿವರವು ಹಿಂದಿನಿಂದ ನಮಗೆ ತಿಳಿಯಿತು. ಬ್ರಾಹ್ಮಣರು ಸ್ವಾತಂತ್ರ್ಯ ಚಳವಳಿಯ ನಾಯಕತ್ವ ವಹಿಸಿದ್ದು ನಿಜ. ಆದರೆ ಅವರು ಸ್ವಾರ್ಥಿಗಳಾಗಿದ್ದು ಅವರಲ್ಲಿ ಕೆಲವರು ಚಳವಳಿಯಲ್ಲೂ ಅವರಲ್ಲಿ ಕೆಲವರ ಸಂಬಂಧಿಗಳು ಸರಕಾರೀ ನೌಕರಿಯಲ್ಲೂ ಇರುವರು. ಇದು ಬ್ರಾಹ್ಮಣರ ವಂಚಕ ಬುದ್ಧಿಗೆ ಉದಾಹರಣೆ ಎಂದು ಕಂಬಳಿ ಹೇಳಿದರಂತೆ. ಬ್ರಾಹ್ಮಣರೆಲ್ಲ ಈಗ ಸಾಕಷ್ಟು ವಿದ್ಯಾವಂತರಾಗಿದ್ದು ನವಕರಿಗಳನ್ನು ಗಳಿಸಿಬಿಟ್ಟಿದ್ದಾರೆ. ಬ್ರಾಹ್ಮಣೇತರರಿಗೆ ನೌಕರಿ ಸಿಗಬಾರದೆಂದೇ ಈ ಶೈಕ್ಷಣಿಕ ಬಹಿಷ್ಕಾರದ ಸೋಗಿನ ಚಳವಳಿ ಆರಂಭಿಸಿದ್ದಾರೆ ಎಂದೂ ಹೇಳಿದರಂತೆ." (ರಂ.ರಾ.ದಿವಾಕರ. ಸ್ವಾ.ಸಂ.ಸ್ಮೃ.III, ಪು. 274). ಈ ಸಂಗತಿ ತಿಳಿಸಿದ ದಿವಾಕರರು "1930ರವರೆಗೆ ಬ್ರಾಹ್ಮಣೇತರರಲ್ಲಿ ಗಣ್ಯರಾದವರಾರೂ ಕಾಂಗ್ರೆಸ್ಸಿಗೆ ಹೆಚ್ಚಾಗಿ ಸೇರಲಿಲ್ಲ. ಬ್ರಾಹ್ಮಣರು, ಇತರ ಕೆಲವು ಜಾತಿಯವರು ಹಾಗೂ ಖಿಲಾಫತ್ ಚಳವಳಿಯ ಕಾರಣ ಮುಸಲ್ಮಾನರು ಇವರಷ್ಟೆ ಆಗ ಕಾಂಗ್ರೆಸ್ಸಿನಲ್ಲಿ ಹೆಚ್ಚಾಗಿ ಸೇರಿದವರು" ಎಂದಿದ್ದಾರೆ (ಅದೇ ಪುಟ).

ಧಾರವಾಡದ ಗದಿಗೆಯ್ಯ ಹೊನ್ನಾಪುರಮಠ, ಅಬ್ಬಿಗೇರಿಯ ಸಂಗನಗೌಡ ಪಾಟೀಲ್ ಹಾಗೂ ಕರವೀರಪ್ಪ ಕುಲಕರ್ಣಿ ಇವರುಗಳು ಸಹಕರಿಸಿ 1920ರಲ್ಲಿ ಮೇ ತಿಂಗಳಲ್ಲಿ ಧಾರವಾಡದಲ್ಲಿ ನಡೆಸಿದ್ದ ರಾಜಕೀಯ ಪರಿಷತ್ತನ್ನು ಬ್ರಾಹ್ಮಣೇತರ ಸಂಘಟನೆಯವರು ವಿರೋಧಿಸಿದರು. "ಬ್ರಾಹ್ಮಣೇತರ ಪಾರ್ಟಿಯ ಜನರು ಒಂದು ಪ್ರಕಟಣೆ ಹೊರಡಿಸಿ ಹೊರಗೆಲ್ಲ ಹಂಚುತ್ತಿದ್ದರು. "ಸಂಗನಗೌಡ ಪಾಟೀಲ, ಕರವೀರಪ್ಪ ಕುಲಕರ್ಣಿ ಅವರು ಈ ಸಭೆಯನ್ನು ಒಪ್ಪುತ್ತಿಲ್ಲ; ಅವರು ಬೇಡವೆಂದರೂ ಅವರ ಹೆಸರು ಆಮಂತ್ರಣ ಪತ್ರಿಕೆಯಲ್ಲಿ ಪ್ರಿಂಟಾಗಿದೆ"..... ಆಗ ಥಟ್ಟನೆ ವಕೀಲ ಹೊನ್ನಾಪುರಮಠ ಅವರು ಎದ್ದುನಿಂತ "ಬೇಡ ಅಂದವರ ಯಾರ ಹೆಸರನ್ನೂ ನಾವು ಹಾಕಿಲ್ಲ. ಈ ಬಗ್ಗೆ ಕರವೀರಪ್ಪ ಕುಲಕರ್ಣಿ ಮತ್ತು ಸಂಗನಗೌಡ ಪಾಟೀಲರೇ ಸಭೆಯೆದುರು ಬಂದು ಸ್ಪಷ್ಟೀಕರಣ ನೀಡಲಿ", ಎಂದು ಸಿಂಹಧ್ವನಿಯಲ್ಲಿ ಹೇಳಿದಾಗ ಇಡೀ ಗದ್ದಲ ಶಾಂತವಾಯಿತು" ಎಂದಿರುವ ಬೆಟಗೇರಿ ಕೃಷ್ಣಶರ್ಮ"ಮೇಲೆ ಹೇಳಿದ ಇಬ್ಬರು ಸ್ಪಷ್ಟೀಕರಣ ನೀಡಿದ ಮೇಲೆ ಕೂಗಾಡುತ್ತ ಕರಪತ್ರ ಹಂಚುವುದು ನಿಂತಿತು", ಎಂದು ಹೇಳಿದ್ದಾರೆ. ("ಹೊನ್ನಪುರ" ಪು. 18)

ಧಾರವಾಡ ಗೋಳೀಬಾರು ಪ್ರಕರಣದಿಂದ ಕಾಂಗ್ರೆಸ್ ಮತ್ತು ಬ್ರಾಹ್ಮಣೇತರ ನಾಯಕರಲ್ಲಿ ವೈಮನಸ್ಯ ಇನ್ನಷ್ಟು ಹೆಚ್ಚಿತು. ಇದಕ್ಕೂ ಹಿಂದೆ ಹುಬ್ಬಳ್ಳಿಯ ಮೂರು ಸಾವಿರಮಠದ ಸ್ವಾಮಿಗಳ ಅಡ್ಡಪಲ್ಲಕ್ಕಿ ಮೆರವಣಿಗೆ(ಸುಮಾರು 1900ರಲ್ಲಿ)ಗೆ ಕೂಡಲಿ ಶೃಂಗೇರಿ ಮಠದ ಭಕ್ತರು ವಿರೋಧ ಮಾಡಿ ಪ್ರಕರಣ ಕೋರ್ಟಿನ ಕಟ್ಟೆಹತ್ತಿ ವೀರಶೈವರು ವಿಜಯಶಾಲಿಗಳಾದುದು, ಮುಂತಾದ ಅನೇಕ ಪ್ರಕರಣಗಳಲ್ಲಿ ಬ್ರಾಹ್ಮಣ ಸಮಾಜದವರು ವೀರಶೈವರನ್ನು ಕೆರಳಿಸಿದ್ದರು. ವೀರಶೈವರು ಆಗಾಗ ವ್ಯಾಸನ ತೋಳು ಮೆರವಣಿಗೆ ಎಂಬ ಉತ್ಸವ ನಡೆಸಿ ಬ್ರಾಹ್ಮಣರ ಅವಹೇಳನ ಮಾಡಲು ಯತ್ನಿಸಿದ್ದ ಈ ಪ್ರಕರಣ ಬೆಳಗಾವಿ ಜಿಲ್ಲೆಯ ಅಥಣಿಯಿಂದ 1913ರಲ್ಲಿ

ಕೋರ್ಟು ಹತ್ತಿ ಒಂದು ದಶಕಗಳ ಕಾಲ ನಾನಾ ರೀತಿಯ ಕಹಿ ಭಾವನೆಗಳನ್ನು ಉತ್ತರ ಕರ್ನಾಟಕದಲ್ಲಿ ಮೂಡಿಸಿತ್ತು. ಬೆಳಗಾವಿ ಜಿಲ್ಲೆಯ ಯೆಡೂರು ವೀರಭದ್ರ ದೇವಾಲಯದ ಅರ್ಚಕರು ವೀರಶೈವ ಜಂಗಮರಾಗಿದ್ದು ಅದು ಅಕ್ರಮವೆಂದು ಬ್ರಾಹ್ಮಣರು ಕೋರ್ಟಿನ ಕಟ್ಟೆ ಹತ್ತಿ ಹಗರಣ ಮಾಡಿ ಸೋತರು. ಇದೇ ಕಾಲದಲ್ಲಿ ಕೊಲ್ಹಾಪುರದ ಶಾಹು ಮಹಾರಾಜರು ಬ್ರಾಹ್ಮಣೇತರ ಚಳವಳಿಗೆ ತಮ್ಮ ಸರಕಾರೀ ಯಂತ್ರವನ್ನೇ ಬಳಸಿ ಸಕ್ರಿಯ ಬೆಂಬಲ ನೀಡುತ್ತಿದ್ದರು (*ಬೆಳಗಾವಿ ಜಿಲ್ಲೆ ಗ್ಯಾಸೆಟಿಯರ್* 1987, ಪು. 137-38).

**ಸಮಾಜವ್ಯಾಪಿ ಕಾಂಗ್ರೆಸ್**

ಆದರೂ ಕೆಲವೊಂದು ವೀರಶೈವರು ಆರಂಭದಿಂದಲೂ ಕಾಂಗ್ರೆಸ್ಸಿಗೆ ಸೇರಿದ್ದರು. ಅವರಲ್ಲಿ ಕರ್ಜಗಿಯ ಪರಮಣ್ಣಾ ಹೊಸಮನಿಯವರು ಗಣ್ಯರು. ಊರೂರು ತಿರುಗಿ ಹೋದಲ್ಲೆಲ್ಲ ಲಿಂಗಾಯತ ಗಣ್ಯರನ್ನು ಕಂಡು ಕಾಂಗ್ರೆಸ್ ಸೇರಲು ಅವರು ವಿನಂತಿಸುತ್ತಿದ್ದರು. ಆ ಕಾಲದಲ್ಲಿ ಒಬ್ಬ ಲಿಂಗಾಯತ ವಕೀಲರು ನೀಡಿದ ಪ್ರತಿಕ್ರಿಯೆಯನ್ನು ಅವರು ಉದ್ಧರಿಸಿದ್ದಾರೆ. "ಈ ಬ್ರಿಟಿಷ್ ಸರಕಾರದವರು ನಮ್ಮ ಜನರಿಗೆ ಒಳ್ಳೊಳ್ಳೆ ಹುದ್ದೆಗಳನ್ನೂ ದೊಡ್ಡ ದೊಡ್ಡ ಪದವಿಗಳನ್ನೂ ಕೊಟ್ಟು ಗೌರವಿಸುತ್ತಿದ್ದಾರೆ. ನಮ್ಮ ಮಕ್ಕಳಿಗೆಲ್ಲಾ ಸ್ಕಾಲರ್‌ಶಿಪ್ ಕೊಟ್ಟು ಮುಂದೆ ತರುತ್ತಿದ್ದಾರೆ. ಇಂಥದರಲ್ಲಿ ಕಾಂಗ್ರೆಸಿಗೆ ಮದ್ದತ ಮಾಡಿದರೆ, ನಾವು ಕಡೆತನಕ ಹಿಂದುಳಿಯ ಬೇಕಾಗುತ್ತದೆ". ಹೀಗೆ ಹೇಳಿದ ವಕೀಲರು ಪರಮಣ್ಣನವರಿಗೆ ಈಗಲೇ ಚಳವಳಿ ಬಿಟ್ಟು ಮನೆಗೆ ಹೋಗಿರಿ, ಎಂದು ಬೋಧಿಸಿದರಂತೆ (1921, 'ಸ್ವಾಸಂಸ್ಮ.' III, ಪು. 382). ಪರಮಣ್ಣ ಹೊಸಮನಿಯವರು 1923ರಿಂದಲೇ ಕರ್ಜಗಿಯಲ್ಲಿ ಒಂದು ಸ್ವಯಂಸೇವಕ ಸಂಘ, ವಾಚನಾಲಯ ಸ್ಥಾಪಿಸಿ ಸಮಾಜ ಸೇವೆ ಕೈಕೊಂಡರು. ಅಧ್ಯಾಪಕ ವೃತ್ತಿ ಬಹಿಷ್ಕರಿಸಿದ್ದ ಸಾಲಿ ರಾಮ ಚಂದ್ರರಾಯರೂ ಅವರ ಊರಿಗೆ ಬಂದು ಅವರ ಜೊತೆ ಸೇರಿಕೊಂಡರು. ಮುಂದೆ ಹಾವೇರಿ ಸ್ಟೇಶನ್ ಬಳಿ ಗಾಂಧೀ ತತ್ವದಂತೆ ನಡೆವ ಒಂದು ಆಶ್ರಮ ಕಟ್ಟಿ ಗಾಂಧೀಪ್ರಣೀತ ಚಟುವಟಿಕೆ ನಡೆಸಿದರು. ಈ ವಾತಾವರಣ ಎಷ್ಟು ತೀವ್ರವಾಗಿತ್ತೆಂದರೆ, ಆ ಕಾಲದಲ್ಲಿ ಗದಗಿನಲ್ಲಿ ಇದ್ದ ರಾಯಚೂರ ಜಿಲ್ಲೆಯ ವೀರಭದ್ರಪ್ಪ ಶಿರೂರ ಅವರು ಲಾಹೋರ ಕಾಂಗ್ರೆಸ್ಸಿನಲ್ಲಿ ಆದ ನೆಹರೂರ ಭಾಷಣದಿಂದ ಪ್ರಭಾವಿತರಾಗಿ ಖಾದಿ ತೊಡಲು ಪ್ರಾರಂಭಿಸಿದರು (1929). "ಆಗ ನನ್ನ ಈ ಬದಲಾವಣೆಯನ್ನು ಕಂಡು ಅನೇಕರು ನಾನಾ ರೀತಿಯಾಗಿ ನನ್ನನ್ನು ಅಪಾರ್ಥ ಮಾಡಿದರು. ಕೆಲವರು ಖಾದಿ ಹಾಕುವುದು ದ್ರೋಹವೆಂದೂ ನಿಮ್ಮಂಥ ನೌಕರರಿಗೆ ಇದು ತರವಲ್ಲವೆಂದೂ ಬುದ್ಧಿಕೂಡ ಹೇಳಿದರು" (ಶಿರೂರ ವೀರಭದ್ರಪ್ಪನವರು, ಪು. 8 ).

ಆದರೆ ರಾಷ್ಟ್ರೀಯ ನಾಯಕರ ಸತತ ಪ್ರವಾಸ, ಭಾಷಣಗಳು, 'ಕರ್ಮವೀರ', 'ವಿಜಯ', 'ರಾಜಹಂಸ', 'ಧನಂಜಯ', 'ವಾಗ್ದೇವಿ', 'ಸದ್ಬೋಧ ಚಂದ್ರಿಕೆ' (ಅಗಡಿ), 'ಕರ್ನಾಟಕ ವೈಭವ' (ವಿಜಾಪುರ), 'ಲೋಕಮತ' (ಹುಬ್ಬಳ್ಳಿ, ಸಂಪಾದಕ-ವಿ.ಬಿ. ಪುರಾಣಿಕ). ಮುಂತಾದ ಪತ್ರಿಕೆಗಳ ಬರಹ ತರುಣರ ಮನವನ್ನು ಬದಲಾಯಿಸಹತ್ತಿದವು. ಧಾರವಾಡ ಹುಬ್ಬಳ್ಳಿಗಳಲ್ಲಿ ಹಳ್ಳಿಗಳಿಂದ ಬಂದ ಬ್ರಾಹ್ಮಣೇತರ ವಿದ್ಯಾರ್ಥಿಗಳು ಸ್ಥಳೀಯ ನಾಯಕರಾದ ಗಂಗಾಧರರಾವ್ ದೇಶಪಾಂಡೆ, ಆಲೂರರು, ಕಡಪಾ ರಾಘವೇಂದ್ರರಾವ್, ಮುದವೀಡು ಕೃಷ್ಣರಾವ್, ಪರಮಣ್ಣಾ ಹೊಸಮನಿ ಹಾಗೂ ರಾಷ್ಟ್ರೀಯ ನಾಯಕರಾದ ಕೆ.ಎಫ್. ನರಿಮನ್ (1928ರಲ್ಲಿ ಧಾರವಾಡದಲ್ಲಿ ನಡೆದ ರಾಜಕೀಯ ಪರಿಷತ್ತಿಗೆ ಬಂದವರು), ಸಿ. ರಾಜಗೋಪಾಲಾಚಾರಿ, ಮುಂತಾದವರ ಭಾಷಣಗಳು ಹಾಗೂ ಇತರ ಪತ್ರಿಕೆಗಳಲ್ಲಿ ಬರುವ ಗಾಂಧಿ ನೆಹರೂ ವಿಚಾರಗಳಿಂದ ಪ್ರಭಾವಿತರಾದರು. ಹುಬ್ಬಳ್ಳಿಯಲ್ಲಿ ಹರ್ಡೀಕರರು ಸೇವಾದಳದ ಕಾರ್ಯ, ಕಾರ್ಮಿಕ ಸಂಘಟನೆಗಳಿಂದ ಸಾರ್ವಜನಿಕರ ಒಲವುಗಳಿಸಿಕೊಂಡರು. ಧಾರವಾಡದಲ್ಲಿ ರಾಷ್ಟ್ರೀಯ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಹುಕ್ಕೇರಿಕರರ ಪ್ರಭಾವವೂ ಇತ್ತು. ಇಂಥ ಕಾಲದಲ್ಲಿ 1927-28 ರಲ್ಲಿ ಸೈಮನ್ ಕಮಿಶನ್‌ನ ವಿರುದ್ಧ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಧಾರವಾಡ ಹುಬ್ಬಳ್ಳಿ, ಹಾವೇರಿ, ಗದಗಿನಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಮೆರವಣಿಗೆ ನಡೆಸಿ ಪಾಲು ಗೊಂಡರು. 1929ರಲ್ಲಿ ಹುಬ್ಬಳ್ಳಿಯಿಂದ ಬೈಲಹೊಂಗಲದ ಎಲ್.ಎಸ್.ಪಾಟೀಲರು 'ತರುಣ ಕರ್ನಾಟಕ' ದಿನ ಪತ್ರಿಕೆ ಆರಂಭವಾಯಿತು.

ಧಾರವಾಡದಲ್ಲಿ ವಿದ್ಯಾರ್ಥಿಗಳಾಗಿದ್ದ ಕೆಲವು ಬ್ರಾಹ್ಮಣೇತರ ತರುಣರು ರಾಷ್ಟ್ರೀಯ ಕಾರ್ಯ ಮಾಡುವ ಉದ್ದೇಶದಿಂದ 1927ರ ಸುಮಾರಿಗೆ ಭಾರತೀಯ ತರುಣ ಸಂಘವೆಂಬ ರಾಷ್ಟ್ರೀಯ ವಿಚಾರದ ಸಂಘಟನೆ ಕಟ್ಟಿದರು. ಎನ್.ಬಿ. ಹಿರೇಮಠ ಇದರ ಸ್ಥಾಪಕ ಅಧ್ಯಕ್ಷರು (ಬಂಕಾಪುರ ಬಳಿಯ ಶಿವಪೇಟೆಯವರು). ಜಿ.ವಿ.ಹಳ್ಳಿಕೇರಿ, ವೆಂಕಟೇಶ ಮಾಗಡಿ, ಸಿದ್ದಲಿಂಗಯ್ಯ ಕಜರಿಸ್ವಾಮಿ, ಕೆ.ಎಫ್. ಪಾಟೀಲ, ಮೈಲಾರ ಮಹಾದೇವಪ್ಪ ಇವರೆಲ್ಲ ಇದರ ಕಾರ್ಯಕರ್ತರಾಗಿದ್ದವರು. "ಧಾರವಾಡದಲ್ಲಿ ವಿಕ್ಟೋರಿಯಾ ಹೈಸ್ಕೂಲಿಗೆ ಶಿಕ್ಷಣಕ್ಕೆ

ಬಂದಾಗ ರಾಷ್ಟ್ರೀಯ ವಿಚಾರಗಳಿಂದ ಪ್ರಭಾವಿತನಾದೆ. ಅಲ್ಲಿ ಉಪಾಧ್ಯಾಯರಾಗಿದ್ದ ಕವಿವರ್ಯ ಬೇಂದ್ರೆ, ಕೆ.ಎಸ್. ಜೋಶಿ, ಸಖಾರಾಮ ಪಂಜೇಕರ (ಕೃಷ್ಣಾಬಾಯಿ ಪಂಜೇಕರರ ಯಜಮಾನರು) ಹಾಗೂ ವಿಶೇಷವಾಗಿ ಇತಿಹಾಸದ ಪಾಠ ಹೇಳುತ್ತಿದ್ದ ಮಧ್ವಾಚಾರ್ಯ ಕಟ್ಟಿ ಇವರುಗಳ ಕಲಿಕೆ ನನ್ನ ಮೇಲೆ ವಿಶೇಷ ಪ್ರಭಾವ ಬೀರುತ್ತಿತ್ತು. ಈ ಕಾಲದಲ್ಲಿ ಧಾರವಾಡದಲ್ಲಿ 'ಕರ್ಮವೀರ' ಓದುತ್ತಿದ್ದೆನಲ್ಲದೆ ಊರಲ್ಲಿ ನಡೆಯುತ್ತಿದ್ದ ಕಾಂಗ್ರೆಸ್‌ನ ಸಭೆಗಳಿಗೆ ತಪ್ಪದೆ ಹೋಗುತ್ತಿದ್ದೆ. ಹುಕ್ಕೇರಿಕರ, ದಿವಾಕರ, ಕರಮರಕರರಿಗೆ ನನ್ನ ಮೇಲೆ ವಿಶೇಷ ಆಸ್ಥೆ ಇತ್ತು", ಎಂದಿರುವ ವೆಂಕಟೇಶ ಮಾಗಡಿ ಸಾಯಮೆನ್ ಕಮಿಶನ್ ಬಹಿಷ್ಕಾರದ ಕಾರ್ಯಕ್ರಮದಳಲ್ಲಿ ತಾವು ಪಾಲುಗೊಂಡುದನ್ನೂ ಭಾರತೀಯ ತರುಣ ಸಂಘದ ಸ್ಥಾಪನೆಯ ಹಿನ್ನೆಲೆಯನ್ನೂ ಹೇಳಿದ್ದಾರೆ. ಇದೇ ರೀತಿಯ ಪ್ರತಿಕ್ರಿಯೆ ರಾಣೆಬೆನ್ನೂರಿನವರಾದ ಪಾಟೀಲ ಕಲ್ಲನಗೌಡ (ಕೆ.ಎಫ್. ಪಾಟೀಲ) ರದು. ತಾವು ಬೆಳಗಾವಿ ಕಾಂಗ್ರೆಸ್ಸಿಗೆ ಹೋಗಿ ಪ್ರಭಾವಿತರಾದರೂ ಕಾಂಗ್ರೆಸ್ಸಿನ ಸಕ್ರಿಯ ಚಟುವಟಿಕೆಗಳಲ್ಲಿ ಪಾಲುಗೊಳ್ಳಲಿಲ್ಲ. 1928 ರಲ್ಲಿ ಸೈಮನ್ ಪ್ರತಿಭಟನಾ ಸಭೆಯಲ್ಲಿ ಪಾಲುಗೊಂಡುದಲ್ಲದೆ ಧಾರವಾಡದಲ್ಲಿ ಸಿ. ರಾಜಗೋಪಾಲಾಚಾರ್ಯರ ಭಾಷಣ ಮೊದಲ ಸಲ ಹೇಳಿ ಅಂದಿನಿಂದ ಖಾದಿಧಾರಿಯಾಗುವ ಪ್ರತಿಜ್ಞೆ ತೊಟ್ಟುದಾಗಿ ಹೇಳಿದ್ದಾರೆ. ಅವರು ಭಾರತೀಯ ತರುಣ ಸಂಘದ ಕಾರ್ಯಕರ್ತರೂ ಆದರು. ("ನೆನಪಿನ ಒರತೆ", I, ಪು. 35).

ಇದೇ ಕಾಲದಲ್ಲಿ ಸಾಹಿತ್ಯ ಬೌದ್ಧಿಕ ಕ್ಷೇತ್ರದಲ್ಲೂ ಧಾರವಾಡದಲ್ಲಿ ಬದಲಾವಣೆಗಳಾಗುತ್ತಿದ್ದವು. ಬೇಂದ್ರೆಯವರ ಸುತ್ತು ಗೆಳೆಯರ ಗುಂಪು ಬೆಳೆಯಿತು. ಕನ್ನಡ ಸಾಹಿತಿಗಳ ಯಾತಾಯಾತ ಹೆಚ್ಚಾಯಿತು. ವಿಜಾಪುರ ಜಿಲ್ಲೆಯ ಧೂಲಾ, ಮಧುರಚನ್ನ, ಕಾಪಸೆ ರೇವಪ್ಪ, ಇದರ ಪ್ರಭಾವಕ್ಕೆ ಒಳಗಾದರು. ಬಸವನಾಳ, ಹಳಕಟ್ಟಿ, ಗದ್ದಿಗಿಮಠ, ಹರ್ಡೇಕರ್, ಮುಂತಾದವರ ಸಾಹಿತ್ಯಿಕ ಸಾಧನೆಗಳನ್ನು ಸಾರ್ವತ್ರಿಕವಾಗಿ ಗೌರವಿಸಲಾಗುತ್ತಿತ್ತು. 1920-30ದಶಕದಲ್ಲಿ ಸಮಾಜ ವಿರಸಗಳಿಂದ ಸರಸ ಸಮರಸಗಳಿಗೆ ತಿರುಗುತ್ತಲಿತ್ತು. 'ನರಗುಂದ ಬಂಡಾಯ' (ಹುಯಿಲುಗೋಳ ನಾರಾಯಣರಾವ್ ಕೃತ) ಹಾಗೂ ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದ ನಾಟಕಗಳು ವೃತ್ತಿರಂಗಭೂಮಿಯಿಂದ ಅಭಿನಯಿಸಲ್ಪಟ್ಟು ಜನರನ್ನು ಬಡಿದೆಬ್ಬಿಸಿದವು. ವಾಮನರಾವ್ ಮಾಸ್ತರರ ಕಂಪನಿ ರಾಷ್ಟ್ರೀಯ ನಾಟಕಗಳನ್ನು ಆಡುತ್ತಿತ್ತು. 'ನರಗುಂದ ಬಂಡಾಯ' ನಾಟಕಕ್ಕೆ ಪ್ರತಿಬಂಧ ಹಾಕಿದಾಗ ಅದನ್ನು 'ಮಾಲ್ಕಂ ವಿಜಯ' ಎಂದು ಆಡುತ್ತಿದ್ದರು. ಗರೂಡ ಸದಾಶಿವರಾಯರು, ಅಬ್ಬಿಗೇರಿ ಕಂಪನಿ, ಶಿರಹಟ್ಟಿ ಕಂಪನಿ ಇತರ ಸಂಸ್ಥೆಗಳು; ವಾಮನರಾವ್ ಮಾಸ್ತರರ ಕಂಪನಿ ಆಡುತ್ತಿದ್ದ 'ಎರಡನೇಯ ಬಾಜೀರಾವ್' ನಾಟಕ ನೋಡಿ (ಸಂ. 1928) "ಮೊಟ್ಟ ಮೊದಲು ನನ್ನಲ್ಲಿ ಬ್ರಿಟಿಷ್ ಆಡಳಿತ ಬಗ್ಗೆ ದ್ವೇಷ ಭಾವನೆ ಉಂಟಾಯಿತು", ಎಂದು ಅಂದಾನೆಪ್ಪ ದೊಡ್ಡಮೇಟಿಯವರು ಹೇಳಿದ್ದು, "1929ರ ನವೆಂಬರ್ ಅವಧಿಯಲ್ಲಿ ಇರಬೇಕು. ಅಬ್ಬಿಗೇರಿ ಕಂಪನಿಯವರ ವೀರರಾಣಿ ಕಿತ್ತೂರ ಚೆನ್ನಮ್ಮ ನೋಡಿದ ಮೇಲಂತೂ ನನ್ನಲ್ಲಿ ಆಗಲೇ ಒಡಮೂಡುತ್ತಿದ್ದ ದೇಶಪ್ರೇಮ ಬ್ರಿಟೀಷ್ ದ್ವೇಷಗಳು ಕೆರಳಿ ನಿಂತವು..." ಎಂದು ಅವರೇ ಹೇಳಿದ್ದಾರೆ. ("*ದೊಡ್ಡಮೇಟಿ ಅಂದಾನಪ್ಪನವರು*", ಪು. 19-20). ದೊಡ್ಡಮೇಟಿ ಅಂದಾನಪ್ಪನವರು ಕಾಂಗ್ರೆಸ್ ಸೇರಿದಾಗ ಇಡೀ ರೋಣ ತಾಲೂಕೇ ಕಾಂಗ್ರೆಸ್ ಪರವಾಯಿತು.

ಕರ್ನಾಟಕ ಲಿಂಗಾಯತ ಎಜುಕೇಶನ್ (ಕೆ.ಎಲ್.ಇ.) ಸೊಸೈಟಿಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಕಚವಿಯ (ಹಿರೇಕೆರೂರು ತಾಲೂಕು) ವೀರನಗೌಡ ಪಾಟೀಲರು ಆರಂಭದಿಂದ ಕಾಂಗ್ರೆಸ್ಸಿನ ಬಗ್ಗೆ ಸಹಾನುಭೂತಿ ಹೊಂದಿದ್ದರೂ ಒಮ್ಮೆಗೇ ಚಳವಳಿಗೆ ದುಮುಕಿದವರಲ್ಲ. "ಕರ್ನಾಟಕದಲ್ಲಿ ವೀರಶೈವರದು ದೊಡ್ಡ ಸಮಾಜ. ಕಾಂಗ್ರೆಸ್ಸಿನ ಕೆಲಸದಲ್ಲಿ ಜಾತೀಯ ಬಣ್ಣ ಬಳಿದು ಕೊಂಡಿತ್ತು; ನಾನು ಏನು ಮಾಡಬೇಕು ಎಂಬ ವಿಚಾರದಲ್ಲಿ ಬಿದ್ದೆ. 1928 ರಲ್ಲಿ ದಿವಾಕರ, ಮುದವೀಡು ಕೃಷ್ಣರಾಯರು ಮುಂತಾದವರೆಲ್ಲರ ಕೂಡಿ ಕಲ್ಕತ್ತೆ ಕಾಂಗ್ರೆಸ್ಸಿಗೆ ಹೋದೆನು. ಕಾಂಗ್ರೆಸ್ ವಾತಾವರಣ, ಮುಖಂಡರ ದರುಶನದಿಂದ ನನ್ನ ರಾಷ್ಟ್ರೀಯ ಆಂದೋಲನಕ್ಕೆ ಇನ್ನೂ ಹೆಚ್ಚು ಚಾಲನೆ ಪ್ರೋತ್ಸಾಹನೆ ದೊರೆಯಿತು..... ಈ ಬಗ್ಗೆ ವಿಚಾರಮಂಥನ ನಡೆದೇ ಇದ್ದಾಗ 1930ರಲ್ಲಿ ಕರ್ನಾಟಕ ಬ್ರಾಹ್ಮಣೇತರ ಸಮ್ಮೇಲನ ಕರೆದರು. ಅದರಲ್ಲಿ ಬಹು ಸಂಖ್ಯಾತ ಜನರು (ಲಿಂಗಾಯತರು) ಕಾಂಗ್ರೆಸ್ಸಿನಲ್ಲಿ ಸೇರ ಬಾರದೆಂದರು..... ಈ ನಿರ್ಣಯದಿಂದ ನನಗೆ ಆಘಾತವಾಯಿತು. ಈ ಬಹು ದೊಡ್ಡ ಸಮಾಜ ಮುಂದಾಗದಿದ್ದರೆ ಕರ್ನಾಟಕದಲ್ಲಿ ಸ್ವರಾಜ್ಯ ಆಂದೋಲನ ಮುನ್ನಡೆಯುವುದೆಂತು ? ಇದನ್ನೆಲ್ಲ ಗಮನಿಸಿ ನಾನು ಕರ್ನಾಟಕದ ಮಧ್ಯಸ್ಥಳ, ವ್ಯಾಪಾರಕೇಂದ್ರ ಹುಬ್ಬಳ್ಳಿಗೆ ಬಂದು ನೆಲೆಸಲು ನಿರ್ಧರಿಸಿದೆ. ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿಯ ನಿಯಮಕ್ಕನುಗುಣವಾಗಿ ಅದರ ಆಜೀವ ಸದಸ್ಯತ್ವ ಪಡೆಯಲು ನನಗೆ ಕೆಲವೇ ದಿನಗಳು ಕಡಿಮೆ ಇದ್ದರೂ ಅದನ್ನು ಲಕ್ಷಿಸದೆ ಅದಕ್ಕೆ ರಾಜೀನಾಮೆ ಇತ್ತು ಕಾಂಗ್ರೆಸ್ಸು ಸೇರುವುದಾಗಿ ಘೋಷಿಸಿದೆನು. ಯಾವ ಸಂಸ್ಥೆಯನ್ನು ಆದರ್ಶವಾಗಿ ಕಟ್ಟಿದ್ದೆನೋ ಅದನ್ನು ಬಿಡುವುದೆಂದರೆ ಸಾಮಾನ್ಯ ಮಾತಾಗಿರಲಿಲ್ಲ. 1930ರಲ್ಲಿ ಕರಾಚಿ ಕಾಂಗ್ರೆಸ್ಸಿಗೆ ಹೋದವನು ವಲ್ಲಭಭಾಯಿ ಪಟೇಲರ ಕಾರ್ಯಕ್ಷೇತ್ರ ಬಾರಡೋಲಿಗೂ ಹೋಗಿ ಬಂದೆ.... ಸರದಾರರು ರೈತರ ಮಕ್ಕಳು,

ಪದವೀಧರರು, ಅವರು ಸಂಘಟಿಸಿದ್ದ ಈ ಚಳವಳಿ (1928ರ ಬರ್ಡೋಲಿ ಸತ್ಯಾಗ್ರಹ) ಯಿಂದ ಪ್ರೇರಿತನಾಗಿ ನಾನು ಕರ್ನಾಟಕಕ್ಕೆ ಹಿಂದಿರುಗಿ ಹಿರೇಕೆರೂರಲ್ಲಿ ಕಾರ್ಯಪ್ರವೃತ್ತನಾಗಬೇಕೆಂದು ನಿಶ್ಚಯಿಸಿದೆನು". (ಸ್ವಾ.ಸಂ.ಸ್ಮ.I, ಪು. 294-95). ಮುಂದೆ ಹಿರೇಕೆರೂರು ತಾಲೂಕಿನಲ್ಲಿ ವೀರನಗೌಡರು ಕರನಿರಾಕರಣ ಚಳವಳಿ ಸಂಘಟಿಸಿ 1930-31ರಲ್ಲಿ 'ಸರದಾರ' ಎನಿಸಿದರು.

ಇದೇ ರೀತಿ ಆ ಕಾಲದಲ್ಲಿ ಕಾಂಗ್ರೆಸ್ ಸೇರಿದ ಗಣ್ಯರಲ್ಲಿ ಗದಗಿನ ಸಿ.ಎಸ್.ಹುಲಕೋಟಿ, ಹಂಸಬಾವಿಯ ತಿಮ್ಮಪ್ಪ ನೇಸ್ವಿ ಹಾಗೂ ಬ್ರಾಹ್ಮಣೇತರ ಪರಿಷತ್ತಿನ ಗಣ್ಯ ನಾಯಕರಾಗಿದ್ದ ಸಿದ್ದಪ್ಪ ಹೊಸಮನಿ (ಹಾವೇರಿ) ಉಲ್ಲೇಖನೀಯರು. ಸಿದ್ದಪ್ಪ ಹೊಸಮನಿಯವರು 1934 ರಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷರಾದರಲ್ಲದೆ ಕಾಂಗ್ರೆಸ್‌ನಿಂದ ಕೇಂದ್ರ ಲೇಜಿಸ್ಲೆಟಿವ್ ಎಸೆಂಬ್ಲಿಗೂ ಆರು ಜಿಲ್ಲೆಗಳ ಪ್ರತಿನಿಧಿಗಳಾಗಿ ಆರಿಸಿ ಬಂದರು. ನೇಸ್ವಿಯವರು ಕೃಷಿ ಪದವೀಧರರಾಗಿದ್ದು ಹಂಸಭಾವಿಯಲ್ಲಿ ಒಂದು ಖಾಸಗಿ ಶಾಲೆಯ ಅಧ್ಯಾಪಕರಾಗಲು (1928-32) ಅಲ್ಲಿ ಕೆ.ಎಫ್. ಪಾಟೀಲರೂ ಅಧ್ಯಾಪಕರಾಗಿ ಬಂದರು. ಈ ಶಾಲೆಯಲ್ಲಿ ಮೈಲಾರ ಮಹಾದೇವಪ್ಪ ಮುಂತಾದ ದೇಶಭಕ್ತ ತರುಣರ ತಂಡವೇ ತಯಾರಾಯಿತು. ಹಿಂದೂಸ್ತಾನೀ ಸೇವಾದಳ ಸೇರಿ ಮಾಗಡಿ, ಕರಿಯಪ್ಪ ಸಂಗೂರ, ಮೂರು ಸಾವಿರಪ್ಪ ಇಟಗೇರಿ ಇವರೆಲ್ಲ ಗಣ್ಯ ತರಬೇತಾದ ಕಾರ್ಯಕರ್ತರಾದರು. 1931ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಸೇವಾದಳದ ಶಿಬಿರದಲ್ಲಿ ಹಲವಾರು ನವತರುಣರು ತರಬೇತಿ ಪಡೆದು ಅಲ್ಲಿಗೆ ಬಂದಿದ್ದ ನೆಹರೂರಿಂದಲೇ ಪ್ರಶಸ್ತಿ ಪಡೆದರು (1931 ರ ಮೇ. 12.)

## ಕಾನೂನುಭಂಗ ಚಳವಳಿ

ಲಾಹೋರ್ ಕಾಂಗ್ರೆಸ್ಸಿನ ಠರಾವಿನಂತೆ ಜನವರಿ 26 (1930)ಕ್ಕೆ ಎಲ್ಲೆಡೆ ಹೊಸ ತ್ರಿವರ್ಣ ಧ್ವಜ ಹಾರಿಸಿ ಸ್ವಾತಂತ್ರ್ಯ ದಿನ ಆಚರಿಸಬೇಕೆಂಬ ಸೂಚನೆಯಂತೆ ಸೇವಾದಳ ಧಾರವಾಡ, ಹುಬ್ಬಳ್ಳಿ, ಗದಗ ಹೀಗೆ ಎಲ್ಲ ಶಹರುಗಳಲ್ಲಿ ಈ ಕಾರ್ಯಕ್ರಮ ಸಂಘಟಿಸಿತು. ಸೇವಾದಳದ ಕಾರ್ಯಕರ್ತ ಗುರುನಾಥ ಜೋಶಿ ತಮ್ಮ ಊರಾದ ಕಲಘಟಗಿಗೆ ತೆರಳಿ ಧ್ವಜಾರೋಹಣ ಮಾಡಿದರು. ಬಹುಜನ ಸಮಾಜದಲ್ಲಿ ಮನಃ ಪರಿವರ್ತನೆಯಾಗುತ್ತಿದ್ದ ಈ ಸಂದಿಗ್ಧ ಸ್ಥಿತಿಯ ಉತ್ಸಾಹದ ಹಿನ್ನೆಲೆಯಲ್ಲಿ 1930ರಲ್ಲಿ ಉಪ್ಪಿನ ಸತ್ಯಾಗ್ರಹದಿಂದ ಆರಂಭಿಸಿ ಕಾನೂನುಭಂಗ ಚಳವಳಿ ಆರಂಭವಾಗಲು ಧಾರವಾಡ ಜಿಲ್ಲೆಯ ಗದಗ, ಹುಬ್ಬಳ್ಳಿ, ಧಾರವಾಡ, ಹಾವೇರಿ, ಅಗಡಿ, ರಾಣೆಬೆನ್ನೂರು ಮುಂತಾದ ಕಡೆಗಳಿಂದ ನೂರಾರು ತರುಣ ತರುಣಿಯರು ಸೇವಾದಳದ ನೇತೃತ್ವದಲ್ಲಿ ಕೆ.ಪಿ.ಸಿ.ಸಿ. ಅಂಕೋಲಾ (ಉತ್ತರ ಕನ್ನಡ)ದಲ್ಲಿ ಸಂಘಟಿಸ ಬೇಕೆಂದಿದ್ದ ಉಪ್ಪಿನ ಸತ್ಯಾಗ್ರಹಕ್ಕೆ ಕಾಲ್ನಡೆಯಿಂದ ತೆರಳಿ ಆ ಜಿಲ್ಲೆಯಲ್ಲಿ ಅಪೂರ್ವ ಸಾಧನೆ ಮಾಡಿದರು. ಏಪ್ರಿಲ್ 13 ರಿಂದ 45 ದಿನ ಅಲ್ಲಿ ನಿತ್ಯ ಉಪ್ಪಿನ ಸತ್ಯಾಗ್ರಹವಾಯಿತು. ಡಾ|| ಹರ್ಡೀಕರರು ಅಲ್ಲೇ ಬಂಧಿತರಾದರು.

ಧಾರವಾಡ ಜಿಲ್ಲೆಯಲ್ಲೂ ಧಾರವಾಡದಲ್ಲಿ ಏಪ್ರಿಲ್ 15ಕ್ಕೆ ಧಾರವಾಡದಲ್ಲಿ ದಿವಾಕರರು ಅಂಕೋಲಾದಿಂದ ತರಲಾದ ಕರಮುಕ್ತ ಉಪ್ಪನ್ನು ಸಾರ್ವಜನಿಕ ಸಭೆಯಲ್ಲಿ ಹರಾಜು ಹಾಕಿ ಬಂಧಿತರಾದರು. ಮುಂದೆ ಕರಮರಕರೂ ಉಪ್ಪು ಮಾರಿದರು. ಅವರನ್ನು ಬಂಧಿಸಲಿಲ್ಲ. ಅದೇ ರೀತಿ ನವಲಗುಂದ ಬಳಿ ಬೆಣ್ಣೆಹಳ್ಳದಲ್ಲಿ ನವಲಗುಂದದ ಕಾರ್ಯಕರ್ತರು ಉಪ್ಪು ತಯಾರಿಸಿ ಮಾರಿದರು. ಯಾರನ್ನೂ ಬಂಧಿಸಲಿಲ್ಲ, ಕಿರೇಸೂರು, ಯಾವಗಲ್ಲುಗಳಲ್ಲೂ ಉಪ್ಪು ತಯಾರಿಸಿದರು. ಇದರಲ್ಲಿ ಗದಗಿನ ಸ್ವಯಂಸೇವಕರು ಪಾಲುಗೊಂಡಿದ್ದರು. ಪರಮಣ್ಣ ಹೊಸಮನಿಯವರು ಘಟಪರ್ತಿಗೆ ಹೋಗಿ ಸೌಳುಮಣ್ಣು ತಂದು ಹಾವೇರಿಯಲ್ಲಿ ಉಪ್ಪು ತಯಾರಿಸಿ ಮಾರಿದರು. ಅಲ್ಲದೆ 12 ಸ್ವಯಂ ಸೇವಕರ ಗುಂಪು ಸಂಘಟಿಸಿ ಅಂಕೋಲೆಗೆ ಸತ್ಯಾಗ್ರಹಕ್ಕೆ ಕಳುಹಿಸಿದರು. ಆ ವಾತಾವರಣ ಎಷ್ಟೊಂದು ಕಾವಿನದಾಗಿತ್ತೆಂದರೆ ಪರಮಣ್ಣ ಅವರೇ ಹೇಳುವಂತೆ "ಇಲ್ಲಿಯವರೆಗೆ ಕಾಂಗ್ರೆಸ್ಸನ್ನು ವಿರೋಧಿಸುತ್ತಿದ್ದ ಬ್ರಾಹ್ಮಣೇತರ ಪಾರ್ಟಿಯವರು ಈ ಚಳವಳಿಯಿಂದ ಪ್ರಭಾವಿತರಾಗಿ ಸತ್ಯಾಗ್ರಹಕ್ಕೆ ಮುಂದೆ ಬಂದರು. ನನ್ನ ಅಣ್ಣ (ವಾಸ್ತವವಾಗಿ ದಾಯಾದಿ) ಎಸ್. (ಸಿದ್ದಪ್ಪ) ಕೆ. ಹೊಸಮನಿ ರಾಷ್ಟ್ರೀಯ ಆಂದೋಲನಕ್ಕೆ ಸೇರಿದ್ದು ಇದೇ ಕಾಲದಲ್ಲಿ (1930). ಆಗಿನಿಂದ ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಹೊಸರೂಪವೇ ಬಂತು." (ಸ್ವಾ.ಸಂ.ಸ್ಮ.III, ಪು. 387).

ಇದರ ಹಿಂದೆಯೇ ಸಿಂಧೀ ಗಿಡಗಳನ್ನು ಕಡೆಯುವ ಅರಣ್ಯ ಸತ್ಯಾಗ್ರಹ ಹಾಗೂ ಸಾರಾಯಿ ಅಂಗಡಿ ಮತ್ತು ವಿದೇಶೀ ವಸ್ತುಗಳ (ವಿಶೇಷತಃ ಬಟ್ಟೆ) ಮಾರಾಟದ ವಿರುದ್ಧ ಪಿಕೆಟಿಂಗ್ ನಡೆಸಿದರು. ಎಲ್ಲೆಡೆ ಸಭೆ ಮೆರವಣಿಗೆಗಳಿಂದ ವಾತಾವರಣ ಬಿಸಿಯೇರುವಂತೆ ಆಯಿತು. ಕೆ.ಪಿ.ಸಿ.ಯ ಒಂದು ವರದಿಯಂತೆ "ಧಾರವಾಡ ಜಿಲ್ಲೆಯ ಬಂಕಾಪುರ, ಶಿಗ್ಗಾಂವಿ, ಹಾವೇರಿ, ಹಾನಗಲ್ ಮುಂತಾದ ಭಾಗಗಳಲ್ಲಿ ಕಾನನ ಸತ್ಯಾಗ್ರಹವು ಉತ್ತಮವಾಗಿ ನಡೆಯಿತು. ಹಾವೇರಿ ಸಮೀಪದ ಕಲ್ಲೇದೇವರು ಮತ್ತು ಬುಡಪ್ಪನ ಹಳ್ಳಿ ಎಂಬಲ್ಲಿ ಹಾವೇರಿ, ರಾಣೆಬೆನ್ನೂರಿನವರು ಪ್ರತೀ ಸೋಮವಾರ ಅಡವಿಯ ಸತ್ಯಾಗ್ರಹವನ್ನು ಕೈಕೊಳ್ಳುವುದೆಂದು ನಿರ್ಧರಿಸಿದ್ದರು. ಈ

ಕಾರ್ಯಕ್ರಮವು ನಡೆದು ಸುಮಾರು 75 ಸತ್ಯಾಗ್ರಹಿಗಳು ಈ ಬಗ್ಗೆ ಸೆರೆಮನೆಗೆ ತೆರಳಿದರು. ಹುಲಬನ್ನಿ[1] ನಿರಾಕರಣವು ಮೇಲೆ ಹೇಳಿದ ಸ್ಥಳಗಳಲ್ಲಿ ಸಾರ್ವತ್ರಿಕವಾಗಿ ನಡೆಯಿತು. ಹಾನಗಲ್ಲ ತಾಲೂಕಿನ ಸುಮಾರು 20 ಹಳ್ಳಿಗಳಲ್ಲಿ ಹುಲಬನ್ನಿ ಸಂಪೂರ್ಣ ನಿರಾಕರಿಸಿದರು. ಹಾವೇರಿ ತಾಲೂಕಿನ ಆಲದಕಟ್ಟಿ, ಕಬ್ಬೂರ, ಸಂಗೂರ, ನಾಗನೂರ, ಬೆಂಚೀಹಳ್ಳಿ ಮುಂತಾದ ಗ್ರಾಮಗಳಲ್ಲಿ ಜನರು ಹುಲಬನ್ನಿ ಲೀಲಾವನ್ನು ಹಿಡಿಯಲಿಲ್ಲ.[2] ಶ್ರೀ ಪರಮಣ್ಣ ಹೊಸಮನಿ, ಶ್ರೀ ವೆಂಕಟೇಶ ಚವಟಿ ಮತ್ತು ಗೋವಿಂದಾಚಾರ್ಯ ಅಗ್ನಿಹೋತ್ರಿಯವರು ವ್ಯಾಖ್ಯಾನದಿಂದಲೂ ಮನೆ ಮನೆಗೆ ಹೋಗಿಯೂ ಯಾರೂ ಲೀಲಾವಿಗೆ ನಿಲ್ಲಕೂಡದೆಂದು ಹೇಳಿದ್ದರು..... ಬಂಕಾಪುರ ತಾಲೂಕಿನ ಧುಂಡಸಿ ಕೇಂದ್ರವಾಗಿ ಮಾಡಿಕೊಂಡು ನವಂಬರದಲ್ಲಿ ಮೂರುಸಲ ಕಾನನದ ಮೇಲೆ ಮುತ್ತಿಗೆ ಹಾಕಿ ಸತ್ಯಾಗ್ರಹದ ದೌಡುಗಳಾದವು..... ಹಾನಗಲ್ಲ ತಾಲೂಕಿನ ಬಮ್ಮನಹಳ್ಳಿಯವರು ಹುಲಬನ್ನಿಯ ನಿರಾಕರಣ ಮತ್ತು ಗಂಧದ ಗಿಡಗಳ ಸಂಹಾರಮಾಡಿದರು..." (*ಕರ್ನಾಟಕದಲ್ಲಿ ಸತ್ಯಾಗ್ರಹದ ವರದಿಯು*, 1930-31, ಪು. 16-17).

ಚಳವಳಿ ಎಷ್ಟು ವ್ಯಾಪಕವಾಯಿತೆಂದರೆ, ಶಿಗ್ಗಾಂವಿ ತಾಲೂಕಿನಲ್ಲಿ ನೀರಲಗಿ ಗ್ರಾಮದಲ್ಲಿ ಜುಲೈ ತಿಂಗಳಲ್ಲಿ ಸತ್ಯಾಗ್ರಹ ಮಾಡಹೋದ ಕೆಲವು ಸ್ವಯಂಸೇವಕರನ್ನು ಸಿಂದಿಗಿಡದ ಗುತ್ತಿಗೆದಾರರು ಹೊಡೆಯಿಸಲು, ಮುಂದಿನ ಸೋಮವಾರವೇ ಬಂಕಾಪುರದಲ್ಲಿ ಆಗ ಇದ್ದ, ಮುದವೀಡು ಕೃಷ್ಣರಾಯರೂ ಕೃಷ್ಣಾಬಾಯಿ ಪಂಜೇಕರರು ಶಿಗ್ಗಾಂವಿಗೆ ಬಂದರು. "ಅಂದೇ ಸತ್ಯಾಗ್ರಹ ಮಾಡುವುದು ನಿರ್ಧರಿಸಿದ ಪ್ರಕಾರ ಮೆರವಣಿಗೆ ಹೊರಡುವುದು ತಯಾರು ಮಾಡಲಾಯಿತು. ಮೆರವಣಿಗೆಯ ಮುಂದೆ ಒಂದು ದೊಡ್ಡ ಕುದುರೆಯ ಮೇಲೆ ಮುದವೀಡು ಕೃಷ್ಣರಾಯರು ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದು ಹೊರಟಾಗ ಹೆಂಗಳೆಯರು ಅವರಿಗೆ ಕುಂಕುಮ ತಿಲಕವನ್ನಿಟ್ಟು ಆರತಿಯನ್ನು ಮಾಡಿ ನಮ್ಮ ಭವ್ಯ ಸೇನೆಗೆ ಶುಭಕೋರಿದರು. ಅಂದಿನ ಮೆರವಣಿಗೆಯಲ್ಲಿ ಸುಮಾರು 800-1000 ಜನ ಕೊಡ್ಲಿಧಾರಿಗಳಾಗಿ ಶಿಸ್ತಿನ ಸಿಪಾಯಿಗಳಂತೆ ಹೊರಟಿರುವುದನ್ನು ಕಂಡರೆ ಯಾರಿಗಾದರೂ ರೋಮಾಂಚನವಾಗುವುದು". ನೀರಲಗಿಯು ಶಿಗ್ಗಾಂವಿಯಿಂದ ಮೂರುವರೆ ಮೈಲು ದೂರದಲ್ಲಿ ಇದ್ದು ಬಾಜಾಬಜಂತ್ರಿ ಸಹಿತ ನಡೆದ ಈ ಮೆರವಣಿಗೆಯನ್ನು ತಡೆಯಲು ತಾಲೂಕಾಧಿಕಾರಿಗಳು ಸಶಸ್ತ್ರ ಪೋಲೀಸ್ ಪಡೆಯೊಂದಿಗೆ ನಿಂತಿರಲು ಮುದವೀಡರು ಅದನ್ನು ಲಕ್ಷಿಸಲಿಲ್ಲ. ಅವರು ಸೂಚಿಸಿದಂತೆ "ನಮ್ಮ ಕೊಡ್ಲಿಧಾರಿ ಪರಶುರಾಮ ಸೈನ್ಯವು ಪಟಪಟನೇ ಗಿಡಗಳನ್ನು ಕಡಿದು ಉರುಳಿಸ ಹತ್ತಿದರು. ಆಗಿನ ಕೊಡಲಿಗಳ ಶಬ್ದ ಗಿಡಗಳ ಉರುಳುವಿಕೆಯ ನಾದ ಎಂಥ ಮನುಷ್ಯರಿಗೂ ಭಯ, ಆಶ್ಚರ್ಯಗಳನ್ನು ಉಂಟು ಮಾಡುತ್ತಿತ್ತು". ಪೋಲೀಸ್ ಅಧಿಕಾರಿ ಸ್ಥಳ ಬಿಟ್ಟನು. 11 ಗಂಟೆಯಿಂದ 5 ಗಂಟೆಯವರೆಗೆ 25,000 ಶೇಂದಿ ಗಿಡಗಳು ಉರುಳಿದವು. "ಈ ಮೊದಲೇ ನಮ್ಮ ಕಾರ್ಯಕ್ಕೆ ಅಡ್ಡಿಯನ್ನುಂಟು ಮಾಡಿದ ಶೇಂದಿಗಿಡದ ಗುತ್ತಿಗೆದಾರನು ಈ ದೃಶ್ಯ ಮತ್ತು ಉರುಳಿದ ಶೇಂದಿಗಿಡದ ಸಂಖ್ಯೆಯನ್ನು ಕಂಡು ಎದೆಯೊಡೆದು ಕೊಂಡೇ ಸತ್ತನು". ಮುಂದೆ ಐದು ವಾರಗಳವರೆಗೆ ಪ್ರತೀ ಸೋಮವಾರ ಈ ಸತ್ಯಾಗ್ರಹ ಮುಂದುವರಿಸಲು ಶಿಗ್ಗಾಂವಿ ಪರಿಸರದಲ್ಲಿ 80,000 ರಿಂದ 1,00,000 ಈಚಲ ಮರಗಳು ಉರುಳಿದವು, ಎಂದು ಪ್ರತ್ಯಕ್ಷದರ್ಶಿ ಅನಂತಭಟ್ಟ ಹುರುಳಿಕುಪ್ಪಿ ಹೇಳಿದ್ದಾರೆ. (ಸ್ವಾ.ಸಂ.ಸ್ಮ.I, ಪು. 819-20). ಇದೇ ಕಾಲಕ್ಕೆ ಬ್ರಿಟಿಷ್ ಸರಕಾರವು ರಾಜನಿಷ್ಠರ ಸಭೆಯೊಂದನ್ನು ಅಕ್ಟೋಬರ್ 20 (1930)ರಲ್ಲಿ ಶಿಗ್ಗಾಂವಿಯಲ್ಲಿ ನಡೆಸಲು ಯತ್ನಿಸಿದಾಗ ಸಭೆಯಲ್ಲಿ 200 ರಷ್ಟು ಗೌಡ, ಕುಲಕರ್ಣಿ, ತಳಾರ, ವಾಲೀಕಾರರು ಮಾತ್ರ ಸೇರಿರಲು, ದರ್ಬಾರಿನ ಮೊದಲೇ ಸತತ ಪ್ರಚಾರಮಾಡಿ ಆದಿನ 3,000 ದಷ್ಟು ಜನ ಸೇರಿ ಪ್ರತಿಭಟನೆ ತೋರಿದರಲ್ಲದೆ ಸಭೆ ಆರಂಭವಾದಂತೆ ಜೆ.ಆರ್. ಸ್ವಾಮಿ ಎಂಬ ಬೆಂಗಳೂರಿನಿಂದ ಬಂದಿದ್ದ ಸೇವಾದಳದ ಸ್ವಯಂಸೇವಕರು ಕಪ್ಪು ಬಾವುಟ ತೋರಿಸಿ ಪ್ರತಿಭಟಿಸಲು ದರ್ಬಾರಿಗೆ ಬಂದಿದ್ದ ಜಿಲ್ಲಾ ಕಲೆಕ್ಟರರು ಬಂಧಿಸಿದ್ದ ಸ್ವಾಮಿಯವರ ಬಿಡುಗಡೆಗೆ ಸೂಚನೆ ನೀಡಿ ನಡುವೆಯೇ ತೆರಳಿದರು. ಇದೇ ರೀತಿ 1930ರ ನವೆಂಬರ್‌ನಲ್ಲಿ ಧುಂಡಸಿಯಲ್ಲಿ ಸಾವಿರಾರು ಜನ ಸೇರಿ ಗಂಧದ ಮರ ಕಡಿದರು. ಕಡಿದ ಗಂಧದ ಮರದ ಬಗ್ಗೆ ಪಂಚನಾಮೆ (ಮಹಜರ್) ನಡೆಸಲು ಪೋಲೀಸರು ಯತ್ನಿಸಿದಾಗ ಪಂಚರಾಗಲೂ ಯಾರೂ ಮುಂದೆ ಬರಲಿಲ್ಲ. ಸಾವಿರಾರು ಜನರನ್ನು ಬಂಧಿಸಲಾಗದೆ ಪೋಲೀಸರು ಕೆಲವರನ್ನು ಮಾತ್ರ ಬಂಧಿಸಿದರು. ಬಂಧಿತರನ್ನು ಶಿಗ್ಗಾಂವಿ ಲಾಕಪ್ಪಿಗೆ ಒಯ್ಯುವಾಗ ಜನ ಹಿಂಬಾಲಿಸಲು ಲಾಠಿಚಾರ್ಜಮಾಡಿದರೂ ಪ್ರಯೋಜನವಾಗಲಿಲ್ಲ. ಬಂಧಿತರು ತಾವಾಗಿ ಮರುದಿನ ಕಛೇರಿಗೆ ಹಾಜರಾಗುವುದಾಗಿ ಹೇಳಿದಾಗ ಅವರನ್ನು ಬಿಡುಗಡೆ ಮಾಡಲು ನೆರೆದ ಸಾವಿರಕ್ಕೂ ಮೇಲ್ಪಟ್ಟ ಜನ ಚದುರಿದರು. (ಮೇಲಿನದೇ, ಪು. 823-24).

---

1. ಸರಕಾರೀ ಅರಣ್ಯದಲ್ಲಿ ಮೇಯಲು ಹೋಗುವ ದನಕರುಗಳಿಗಾಗಿ ಕೊಡುವ ವಾರ್ಷಿಕ ಸುಂಕ (ಬಾಲಕ್ಕೆ ಎರಡಾಣೆಯಂತೆ ಇತ್ತು).
2. ಇದರ ವಸೂಲಿಯ ಗುತ್ತೆಯನ್ನು ವರ್ಷಕ್ಕೊಮ್ಮೆ ಹರಾಜು ಹಾಕುತ್ತಿದ್ದರು.

ಈ ಕೆಲವೇ ಉದಾಹರಣೆಗಳಿಂದ ಜಿಲ್ಲೆಯ ಎಲ್ಲೆಡೆ ಚಳವಳಿ ಎಷ್ಟು ಉಗ್ರವಾಗಿತ್ತೆಂಬುದರ ಪರಿಚಯ ಆಗಬಹುದು. ಆದರೆ ಆಗ ಇದ್ದ ಜಿಲ್ಲಾ ಕಲೆಕ್ಟರ್ ಅಬ್ಬಟ್ ಸೌಮ್ಯ ಸ್ವಭಾವದವರಿದ್ದರು. ಬಹುಶಃ ಅವರಿಗೆ 1921 ರ ಗೋಳೀಬಾರಿನ ಪ್ರಕರಣದ ಪುನರಾವೃತ್ತಿ ಆಗುವುದು ಬೇಕಾಗಿರಲಿಲ್ಲ, ಧಾರವಾಡ ಪರಿಸರದ ಬಗ್ಗೆ ದ.ಪ.ಕರಮರಕರರ ವರದಿ ಗಮನಿಸಿದಾಗ ಇದು ಅರ್ಥವಾಗುವುದು. "ಧಾರವಾಡ ಜಿಲ್ಲೆಯಲ್ಲಿ ಖಾಸಗಿ ಮಾಲಕಿಯ ಸಿಂದಿಗಿಡ ಕಡಿಯುವ ಸತ್ಯಾಗ್ರಹ ಆರಂಭ ಆಗಿರಲು, ಧಾರವಾಡ ಜಿಲ್ಲೆಯಲ್ಲಿ ಖಾಸಗಿ ಮಾಲಕಿಯ ಸಿಂದಿಗಿಡ ಕಡಿದರೆ ಅಧಿಕಾರಿಗಳು ಸುಮ್ಮನಿರುತ್ತಿದ್ದರಷ್ಟೇ ಅಲ್ಲ, ಸರಕಾರಿ ಮಾಲಕಿಯ ಸಿಂದಿಗಿಡ ಕಡಿ'ರೆ ಕೂಡ, ಕಡಿದಷ್ಟು ಗಿಡಗಳನ್ನು ಸರಕಾರೀ ಲೆಕ್ಕದಲ್ಲಿ ಕಡಿಮೆಮಾಡುವಂತೆ ಕಲೆಕ್ಟರರು ಸರಕಾರೀ ಅಧಿಕಾರಿಗಳಿಗೆ ಸೂಚನೆ ಮಾಡುತ್ತಿದ್ದರು". ಧಾರವಾಡದಲ್ಲಿ ಬಂಧಿತರಾದ ಸ್ವಯಂಸೇವಕರನ್ನು ಬಿಡುಗಡೆ ಮಾಡುವಂತೆ ಮ್ಯಾಜಿಸ್ಟ್ರೇಟರಿಗೆ ಜಿಲ್ಲಾಧಿಕಾರಿ ಸೂಚಿಸಿದ್ದರು. "ಅಬಟರು ಜಿಲ್ಲಾಧಿಕಾರಿಗಳಾಗಿರುವವರೆಗೆ ನಾವು ಏನು ಮಾಡಿದರೂ ದಕ್ಕುವಂತಾಗಿ ನೂರಾರು ಜನ ದೊಡ್ಡ ಪ್ರಮಾಣದಲ್ಲಿ ಚಳವಳಿ ಮಾಡಿದರೂ ಕೆಲವೇ ಪ್ರಮುಖರ ಬಂಧನ ಆಗುವಂತೆ ಆಯಿತು." (ಸ್ವಾ.ಸಂ.ಸ್ಮ.III, ಪು. 336). ಇದೇ ವಿಚಾರ ಮುಂದುವರಿಸುತ್ತ ಕರಮರಕರರು "ನಾನು ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯ ಊರುಗಳಿಗೂ ಹೋಗಿ ಚಟುವಟಿಕೆ ನಡೆಸತೊಡಗಿದೆ. ಸಿಂದಿ ಗಿಡ ಕಡಿಯುವ ಚಳವಳಿಯನ್ನು ಡಾ॥ಕಬ್ಬೂರರು ನಡೆಸುತ್ತಿದ್ದರು. ಧಾರವಾಡದಲ್ಲಿ ವಿದೇಶೀ ಬಟ್ಟೆ ಅಂಗಡಿ ಪಿಕೆಟಿಂಗ್ ತೀರ ಯಶಸ್ವಿಯಾಗಿ ವಿದೇಶೀ ಬಟ್ಟೆಗಳ ಗಂಟುಕಟ್ಟಿಸಿ ಸೀಲು ಮಾಡಿಸಲಾಯಿತು," ಎಂದಿದ್ದಾರೆ (ಅದೇ ಪು. 336). ಇದಲ್ಲದೆ ಧಾರವಾಡದಲ್ಲಿ ಮುನಿಸಿಪಾಲಿಟಿ ಮೇಲೆ ಮೊದಲಿನಿಂದ ತ್ರಿವರ್ಣಧ್ವಜ ಹಾರಿಸಿದ್ದು, ಚಕ್ರವರ್ತಿಯ ಹುಟ್ಟು ಹಬ್ಬದ ದಿನ (ಜೂನ್ 3) ಅದಕ್ಕೂ ಎತ್ತರದಲ್ಲಿ ಯೂನಿಯನ್ ಜಾಕ್ ಹಾರಿಸಿರಲು ಹುಕ್ಕೇರಿಕರರೂ ಕರಮರಕರರೂ ಅದನ್ನು ಮಾಳಿಗೆ ಮೇಲೆ ಏರಿ ಕಿತ್ತು ತೆಗೆದರು. "ಮುಂದೆ ಕಲೆಕ್ಟರರು ಈ ಬಗ್ಗೆ ನನಗೆ ಹೇಳಿ ಕಳುಹಿಸಿರಲು ಬೇರೆ ರಾಷ್ಟ್ರದ ಧ್ವಜವನ್ನು ಕೆಳಕ್ಕಿಳಿಸಿದ್ದು ನ್ಯಾಯವೆಂದು ನಾನು ಸಮರ್ಥಿಸಿಕೊಂಡು ಅದನ್ನು ಭದ್ರವಾಗಿ ಇರಿಸಿ ಕೊಂಡಿರುವೆನಾಗಿ ಹೇಳಿ ಅದನ್ನು ಮರಳಿಸಿದೆ", ಎಂದು ಕರಮರಕರರು ಹೇಳಿದ್ದಾರೆ. ಅಬ್ಬಟ್ ವಿದ್ಯಾವಂತರಾದ ಕರಮರಕರರ ಜೊತೆ ಸ್ನೇಹದಿಂದ ವರ್ತಿಸುತ್ತಿದ್ದರು. ಎಲ್ಲೆಡೆ ಅಸಾಧಾರಣ ಜನ ಜಾಗೃತಿ ಆಗಿರಲು ಪ್ರತಿಭಟನೆ, ರಕ್ತಪಾತ ವ್ಯರ್ಥವೆಂದು ಬಹುಶಃ ಅವರು ಮನಗಂಡಿದ್ದರು. ಅಂಥ ಅಪೂರ್ವ ಜನಜಾಗೃತಿ 1930 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಆಗಿತ್ತು. ಪೇಟೆಗಳಲ್ಲಿ ಎಲ್ಲೆಡೆ ಪಿಕೆಟಿಂಗ್‌ನಿಂದ ವಿದೇಶೀ ಬಟ್ಟೆಗಳನ್ನು ಮಾರದಂತೆ ಗಂಟು ಕಟ್ಟಿಸಲಾಗಿತ್ತು.

1931ರ ಜನವರಿಯಲ್ಲಿ (ದಿ. 12) ಸೊಲ್ಲಾಪುರದಲ್ಲಿ ಮಲ್ಲಪ್ಪ ಧನಶೆಟ್ಟಿ ಪ್ರಭೃತಿಗಳಿಗೆ ಫಾಶಿಯಾಗಲು ಎಲ್ಲೆಡೆ ತೀವ್ರ ಪ್ರತಿಭಟನೆ ಆಯಿತು. ಧಾರವಾಡದಲ್ಲಿ ಕರಮರಕರರ ನೇತೃತ್ವದಲ್ಲಿ ಕಾಲೇಜು ವಿದ್ಯಾರ್ಥಿಗಳ ಮೆರವಣಿಗೆ ಆಯಿತು. ಇದೇ ಕಾಲದಲ್ಲಿ ಭಗತ್‌ಸಿಂಗ್ ಮುಂತಾದ ಕ್ರಾಂತಿಕಾರಿಗಳಿಗೂ ಫಾಶಿ ಆಗಿದ್ದು ಜ್ಞಾಪಿಸಬೇಕಾದ ಸಂಗತಿ (ಮಾರ್ಚ್ 29). ತರುಣರ ಮನವನ್ನು ಅತ್ಯಂತ ತೀವ್ರವಾಗಿ ತಟ್ಟಿದ ಪ್ರಕರಣಗಳು ಇವು.

1931ರ ಫೆಬ್ರವರಿಯಲ್ಲಿ ಹಿರೇಕೆರೂರು ತಾಲೂಕಿನಲ್ಲಿ (ಮಳೆಯಾಗದ ಕಾರಣ) ಕ್ಷಾಮ ಪರಿಸ್ಥಿತಿ ಇರಲು ಕಂದಾಯ ಕೊಡದಂತೆ ವೀರನಗೌಡ ಪಾಟೀಲರ ನೇತೃತ್ವದಲ್ಲಿ ಕರನಿರಾಕರಣ ಸತ್ಯಾಗ್ರಹ ಸಂಘಟಿಸಿದರು. ತಿಮಪ್ಪ ನೇಸ್ವಿ, ಕಲ್ಲನಗೌಡ (ಕೆ.ಎಫ್.ಪಾಟೀಲ), ಜಿ.ವಿ.ಹಳ್ಳಿಕೇರಿ ಇದರ ಸಂಘಟನೆಗೆ ನೆರವಾದರು. ಸೇವಾದಳದ ಸ್ವಯಂಸೇವಕರು ಇದ್ದೇ ಇದ್ದರು. ಮೊದಲು ಕಂತಿನಲ್ಲಿ (ಫೆ. 15) ರೂ. 1.91 ಲಕ್ಷ ವಸೂಲಿ ಮೊತ್ತದಲ್ಲಿ ಕೇವಲ ಏಳು ಸಾವಿರ ರೂ. ಸಂಗ್ರಹವಾಯಿತು. ಮಾರ್ಚ್ 15 ಕ್ಕೆ ಎರಡನೇಯ ಕಂತು ಇದ್ದು ಒಟ್ಟು ವಸೂಲಿ 12,000ರೂ. ಮಾತ್ರ ಆಯಿತು. ಮಾರ್ಚ್ 25 ರಿಂದ ಜಪ್ತಿ ಆರಂಭವಾಯಿತು. ಹಂಸಭಾವಿ ಮತ್ತು ಸುತ್ತಲ ಹಳ್ಳಿಗಳಲ್ಲಿ ವೀರನಗೌಡರ ಜಮೀನು ಸಹಿತ 51 ಜನರ ಜಮೀನನ್ನು ಸೆಳೆದರು. ಅಷ್ಟರಲ್ಲಿ ಗಾಂಧಿ ಇರ್ವಿನ್ ಒಪ್ಪಂದವಾಗಿ (ಮಾರ್ಚ್ 5) ದೇಶದಲ್ಲಿ ಚಳವಳಿ ನಿಂತಿತು. ಆದರೆ ಈ ಚಳವಳಿ ನಿಲ್ಲಲಿಲ್ಲ.

ಮೇ 7 ಕ್ಕೆ ಶಿರಸಿ ಸಿದ್ದಾಪುರಗಳ ಬಗ್ಗೆ (ಅಲ್ಲೂ ಕರನಿರಾಕರಣ ಮಾಡಿದ್ದರು) ಸರಕಾರಕ್ಕೂ ಕೆ.ಪಿ.ಸಿ.ಸಿ. ಅಧ್ಯಕ್ಷ ದಿವಾಕರರಿಗೂ ಒಪ್ಪಂದವಾದರೂ ಇಲ್ಲಿ ಯಾವುದೆ ಒಪ್ಪಂದ ತಕ್ಷಣ ಆಗಲಿಲ್ಲ, ('ಸತ್ಯಾಗ್ರಹದ ವರದಿಯು', ಪು. 45-49). ಹಿರೇಕೆರೂರು ತಾಲೂಕಿನ ಅನೇಕ ಗೌಡ (ಪಟೇಲ), ಕುಲಕರ್ಣಿಗಳು ಆನುವಂಶಿಕ ಹುದ್ದೆಗಳಿಗೆ ಚಳವಳಿಯ ಕರೆಗೆ ಓಗೊಟ್ಟು ರಾಜೀನಾಮೆ ನೀಡಿದ್ದರು. ಕಡೆಗೆ ಸರಕಾರವು ತಾಲೂಕಿನಲ್ಲಿ ಕಾಲು ಭಾಗ (ನಾಲ್ಕಾಣೆ) ಬೆಳೆ ಬಂದಿದೆಯೆಂದೂ ಲೆಕ್ಕ ಹಾಕಿ 40,000 ರೂ. ರಿಯಾಯಿತಿ ಕೊಟ್ಟರು

(ವೀರನಗೌಡರ ಬರಹ, "ಸ್ವಾ.ಸಂ.ಸ್ಮ", III, ಪು. 296). ಇದು ರೈತರಿಗೆ ಸಿಕ್ಕ ದೊಡ್ಡ ರಿಯಾಯತಿಯಾಗಿ ಕಾಂಗ್ರೆಸ್ ಮತ್ತು ಅದರ ನಾಯಕರ ಮೇಲೆ ರೈತಾಪಿ ಜನರಲ್ಲಿ ಮೂಡಿದ ವಿಶ್ವಾಸಕ್ಕೆ ಇದು ಸಾಕ್ಷಿಯಾಯಿತು. "ಈ ಚಳವಳಿಯಿಂದ ಜನತೆ ಸ್ಫೂರ್ತಿಗೊಂಡಿತು. ಕಾಂಗ್ರೆಸ್ಸು ಹಾಗೂ ನನ್ನಲ್ಲಿ ಒಂದು ರೀತಿಯ ಆತ್ಮೀಯ ಭಾವನೆ ಜನರಲ್ಲಿ ಬೆಳೆಯಿತು...." ಎಂದ ವೀರನಗೌಡರು ಜನ ತಮ್ಮನ್ನು (ಸರ್ದಾರ ಪಟೇಲರಂತೆ) 'ನಮ್ಮ ಸರದಾರ' ಎಂದು ಕರೆಯ ಹತ್ತಿದರೆಂದು ಹೇಳಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಜನರನ್ನು ಇತಿಮಿತಿಯಲ್ಲಿ ಬಂಧಿಸಿದರೂ 1930-31ರಲ್ಲಿ 202 ಜನರಿಗೆ ಶಿಕ್ಷೆಯಾಯಿತು. (ತಾಲೂಕುವಾರಾಗಿ ಹುಬ್ಬಳ್ಳಿ 48, ಗದಗ 26, ರೋಣ 1, ಹಾವೇರಿ 73, ರಾಣೆಬೆನ್ನೂರ 31, ಧಾರವಾಡ 6, ಬಂಕಾಪುರ 16). ಜಿಲ್ಲಾಧಿಕಾರಿಯ ಮೆದು ಧೋರಣೆಯಿಂದ ಮಹಿಳೆಯರನ್ನು ಯಾರನ್ನೂ ಬಂಧಿಸಲಿಲ್ಲ, ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು, ಪಿಕೆಟಿಂಗ್, ಸತ್ಯಾಗ್ರಹಗಳಲ್ಲಿ ಪಾಲುಗೊಂಡಿದ್ದರು. ಇದಲ್ಲದೇ ಧಾರವಾಡದ ಅನೇಕ ಕಾರ್ಯಕರ್ತರು ಉತ್ತರ ಕನ್ನಡ ಜಿಲ್ಲೆಯಲ್ಲೂ ಬಂಧಿತರಾಗಿದ್ದರು. (ಸತ್ಯಾಗ್ರಹದ ವರದಿಯು, ಪು. 23 ರಿಂದ 31ರವರೆಗಿನ ಧಾರವಾಡ ಜಿಲ್ಲಾ ಶಿಕ್ಷಿತರ ಪಟ್ಟಿ). ಈ ಕಾಲಕ್ಕೆ ಗದಗಿನಲ್ಲಿದ್ದ ಕೆ.ಪಿ.ಸಿ.ಸಿ. ಕಛೇರಿ ಬಂದಾಗಿ ಬೆಂಗಳೂರಿನಲ್ಲಿ ಕಛೇರಿ ತೆರೆದು ಕೆಲಸಗಳನ್ನು ಗುಪ್ತವಾಗಿ ಸಾಗಿಸುತ್ತಿದ್ದರು. ಸಂಪಿಗೆ ವೆಂಕಟಪತಯ್ಯ ವಕೀಲರು ಈ ಕಛೇರಿ ನೋಡಿಕೊಳ್ಳುತ್ತಿದ್ದರು.

### ಮತ್ತೆ ಕಾನೂನು ಭಂಗ

ದುಂಡು ಮೇಜಿನ ಪರಿಷತ್ತಿಗೆ ಲಂಡನ್‌ಗೆ ಹೋಗಿ ಗಾಂಧೀಜಿ ಬರಿಗೈಯಲ್ಲಿ ಮರಳಿದಾಗ ಗಾಂಧೀಜಿ ಸಹಿತ ಎಲ್ಲ ಗಣ್ಯ ನಾಯಕರ ಬಂಧನವಾಗಿ 1932ರಲ್ಲಿ ಮತ್ತೆ ಕಾನೂನುಭಂಗ ಚಳವಳಿ ಆರಂಭವಾಗಲು ಧಾರವಾಡ ಜಿಲ್ಲೆಯಲ್ಲೂ ಎಲ್ಲೆಡೆ ಹಿಂದಿನಂತೆ ಅರಣ್ಯ ಸತ್ಯಾಗ್ರಹ ಪಿಕೆಟಿಂಗ್ ಇತ್ಯಾದಿ ಬಿರುಸಾಗಿ ನಡೆದು 1934ರವರೆಗೆ ಚಳವಳಿ ಸಾಗಿತು. ಉತ್ತರ ಕನ್ನಡದಲ್ಲಿ ಕರನಿರಾಕರಣ ಚಳವಳಿ ಆಗಲು ಅದಕ್ಕೂ ಧಾರವಾಡದಿಂದ ಕರಮರಕರ, ಕೃಷ್ಣಾಬಾಯಿ ಪಂಜೇಕರ, ಬಿಂದುಮಾಧವ ಬುರ್ಲಿ, ವೆಂಕಟೇಶ ಮಾಗಡಿ, ಧಾರವಾಡದ ಭಾಲಚಂದ್ರ ಫಾಟಕೇಕರ, ಮುಂಡರಗಿಯ ಯಲ್ಲಪ್ಪ ಫತ್ತೇಪುರ, ಕರಿಯಪ್ಪ ಯರೇಶೀಮೆ (ಸಂಗೂರು), ದಿವಾಕರ, ಡಾ॥ ಕಬ್ಬೂರ ಮುಂತಾದ ನಾಯಕರು ತೆರಳಿದರು. "ಇದೊ ಹೊರಟೆವು ಬಿಡುಗಡೆಗಾಗಿ" ಮುಂತಾದ ಗೀತೆಗಳನ್ನು ಚಳವಳಿಗೆ ಬರೆದುಕೊಟ್ಟ ಬೇಂದ್ರೆಯವರಿಗೂ ಈ ಅವಧಿಯಲ್ಲಿ ಶಿಕ್ಷೆಯಾಯಿತು. ಜಿಲ್ಲೆಯ 'ತರುಣ ಕರ್ನಾಟಕ', 'ವಿಜಯ' ಹಾಗೂ 'ಕರ್ಮವೀರ' ಪತ್ರಿಕೆಗಳ ಮೇಲೆ ಪ್ರತಿಬಂಧ ಹೇರಿದರು. ಏಪ್ರಿಲ್ 1932ರ ಒಳಗೆ ಧಾರವಾಡ ಜಿಲ್ಲೆಯಲ್ಲಿ 625 ಜನರನ್ನು ಬಂಧಿಸಲಾಗಿತ್ತು. ಜನವರಿ 12ಕ್ಕೆ ಮಲ್ಲಪ್ಪ ಧನಶೆಟ್ಟಿ ದಿನಾಚರಣೆ ಆಚರಿಸಿ ಅನೇಕರು ಬಂಧಿತರಾದರು.

ಜನವರಿ 26 (1932) ಸ್ವಾತಂತ್ರ್ಯ ದಿನಾಚರಣೆ ಮುಖ್ಯ ಮೊದಲ ಕಾರ್ಯಕ್ರಮವಾಗಿತ್ತು. ಆ ದಿನ ಉಮಾಬಾಯಿ ಕುಂದಾಪುರ ಹುಬ್ಬಳ್ಳಿಯಲ್ಲಿ ಕೆ.ಪಿ.ಸಿ.ಸಿ.ಯ ಪ್ರಥಮ 'ಡಿಕ್ಟೇಟರ್' ಆಗಿ ಧ್ವಜ ಹಾರಿಸಿ ಬಂಧಿತರಾದರು (1932). ಗದಗಿನಲ್ಲಿ ಧ್ವಜ ಹಾರಿಸಿದ್ದಕ್ಕೆ ಮಧ್ವರಾವ್ ಶಿರಹಟ್ಟಿ, ಕೃಷ್ಣಾಚಾರ್ಯ ಹುಯಿಲುಗೋಳ ಆದಿನ ಬಂಧಿತರಾದರು. ಅದೇ ಊರಲ್ಲಿ ಶ್ರೀನಿವಾಸ ಮಳಗಿ ಮೆರವಣಿಗೆ ಹೊರಡಿಸಲು ಯತ್ನಿಸಿ ಬಂಧಿತರಾದರು. ಡಾ॥ ಹರ್ಡಿಕರರು ಅದೇ ದಿನ ಮುಂಬೈಯಲ್ಲಿ ಬಂಧಿತರಾದರು. ಗುತ್ತಲದ ಕಾರ್ಯಕರ್ತರು ಆರಂಭಿಸಿದ್ದ ಗ್ರಾಮ ಸಂಘಟನಾ ದಳವನ್ನು ಪ್ರತಿಬಂಧಿಸಿ ಅದರ ಕಟ್ಟಡಕ್ಕೆ ಬೀಗಹಾಕಿದರು. ಜನವರಿ 26ಕ್ಕೆ ಹಾವೇರಿಯಲ್ಲಿ ಮೆರವಣಿಗೆ ನಡೆಸಲು ಯತ್ನಿಸಿದ ರಾಮಕೃಷ್ಣ ಗಣಪುಲೆ, ಚನ್ನಬಸಯ್ಯ ಮುಂತಾದ ಎಂಟು ಜನರನ್ನು ಬಂಧಿಸಿದರು. ಮೆರವಣಿಗೆ ಚದುರಿಸಲು ಲಾಠಿ ಚಾರ್ಜ ಮಾಡಿದರು. ಮುಂದೆ ಕೆಲದಿನಗಳಲ್ಲಿ ಅದೇ ಊರಲ್ಲಿ ಪರಮಣ್ಣ ಹೊಸಮನಿಯವರನ್ನು ಪ್ರತಿಬಂಧಕಾಜ್ಞೆ ಉಲ್ಲಂಘಿಸಿ ಭಾಷಣ ಮಾಡಿದ್ದಕ್ಕಾಗಿ ಬಂಧಿಸಿದರು. ಜನವರಿ 9ಕ್ಕೆ ಹಂಸಭಾವಿಯ ಶಾಲೆಯ 40 ವಿದ್ಯಾರ್ಥಿಗಳು ಜಂಗಲ್ ಸತ್ಯಾಗ್ರಹ ಮಾಡಲು ತೆರಳಿರಲು ಆ ಪೈಕಿ ಚನ್ನಯ್ಯ ಸೂಳೇಕೆರಿಮಠ ಎಂಬ 14 ವರ್ಷದ ಹುಡುಗನಿಗೆ 15 ಛಡಿ ಏಟಿನ ಶಿಕ್ಷೆ ವಿಧಿಸಿದರು. ಹಿಂದಿನ ಬಾರಿ (1930ರಲ್ಲಿ) ಜಂಗಲ ಸತ್ಯಾಗ್ರಹದಿಂದ ಅಪಾರಹಾನಿ ಆದುದನ್ನು ಗಮನಿಸಿ ಈ ಬಾರಿ ಸರಕಾರವು ಜಿಲ್ಲೆಯಲ್ಲಿ ಮೊದಲೇ ನಾಯಕರನ್ನು ಬಂಧಿಸುವ ಕೆಲಸಮಾಡಿತ್ತು. ಅನೇಕ ನಾಯಕರು ಭೂಗತರಾಗಿದ್ದರು. ಹಾಗೂ ಉತ್ತರ ಕನ್ನಡದ ಕರನಿರಾಕರಣ ಯಶಸ್ವಿನ ಬಗ್ಗೆ ಹೆಚ್ಚು ಗಮನ ನೀಡಲಾಗಿತ್ತು.

20.6.1932ರಂದು ಧಾರವಾಡದಲ್ಲಿ ಕಾಂಗ್ರೆಸ್ ಪ್ರಾಂತಿಕ ಸಮ್ಮೇಳನ ನಡೆಸಬೇಕೆಂದಿದ್ದಾಗ ಅದರ ಹಿಂದಿನ ದಿನವೇ ಗೋವಿಂದರಾವ್ ಗುತ್ತಲ, ಶೀನಪ್ಪ ಜೋಗ, ಅನಂತರಾವ್ ಕರಮರಕರ, ಡಾ|| ಕಾಂತರಾವ್ ಕಮಲಾಪುರ, ದ.ರಾ. ಬೇಂದ್ರೆ ಮುಂತಾದವರನ್ನು ಬಂಧಿಸಿದರು. ಆದರೆ ಶಂಕರದೀಕ್ಷಿತ ಕರ್ಮಠ ಎಂಬ ಶಿಗ್ಗಾಂವಿಯ ತರುಣರು 5-6 ಜೊತೆಗಾರರ ಜೊತೆ ಧಾರವಾಡ ಮುನಿಸಿಪಾಲಿಟಿ ಬಳಿ ಸೇರಿ, ಧ್ವಜ ಹಿಡಿದು ಜಯಘೋಷ ಹಾಕಿ, ಸಮ್ಮೇಳನದ ಠರಾವು ಓದಿ ಬಂಧಿತರಾದರು. ಜನವರಿಯಲ್ಲೇ ರಾಣೆಬೆನ್ನೂರಲ್ಲಿ, ಸತ್ಯಾಗ್ರಹ ಮಾಡಿ ಶಿದ್ದಪ್ಪಾ ಹುಂಬಿ, ಮುರಿಗೆಪ್ಪಗೌಡ ಪಾಟೀಲ ಮುಂತಾದ 7-8 ಜನ ಬಂಧಿತರಾದರು. ಹಿರೇಕೆರೂರು ತಾಲೂಕಿನಲ್ಲಿ ಆರಿಕಟ್ಟಿ ಜಂಗಲಿನಲ್ಲಿ 5,000 ಜನರ ಜೊತೆ ಹೇಮಣ್ಣ ಅಂಗಡಿ, ಮೆಣಸಿನಹಾಳು ತಿಮ್ಮಣಗೌಡ, ಸಿದ್ದಪ್ಪ ಹಿರೇಮಾರ ಮುಂತಾದ 8 ಜನರು ಜಂಗಲ್ ಸತ್ಯಾಗ್ರಹಕ್ಕಾಗಿ ಬಂಧಿತರಾದರು. 1932-33ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಒಟ್ಟು ಬಂಧಿತರ ಸಂಖ್ಯೆ 1000 ಆಗಿರಬಹುದೆಂದು ಅಂದಾಜು.

ಮುಂದೆ ಮ್ಯಾಕ್‌ಡನಾಲ್ಡ್ ಅವಾರ್ಡ್ ವಿರುದ್ಧ ಗಾಂಧೀಜಿ ಅಸ್ಪೃಶ್ಯತಾ ನಿವಾರಣೆಗಾಗಿ ಉಪವಾಸ ಆರಂಭಿಸಲು ಧಾರವಾಡ ಜಿಲ್ಲೆಯಲ್ಲಿ ಹರಿಜನರನ್ನು ದೇವಾಲಯಗಳಿಗೆ, ಸಾರ್ವಜನಿಕ ಕೆರೆ, ಬಾವಿಗಳಿಗೆ ಕರೆದೊಯ್ಯುವ ಕಾರ್ಯಕ್ರಮಗಳಾದವು. ಹರಿಜನ ಸೇವಕ ಸಂಘ ಆರಂಭ ಆದಾಗ ಸರದಾರ ವೀರನಗೌಡರು ಅದಕ್ಕೆ ರಾಜ್ಯಮಟ್ಟದ ಅಧ್ಯಕ್ಷರಾದರು.

ಮುಂದೆ ಚಳವಳಿ ನಿಂತ ಮೇಲೆ ಗಾಂಧೀಜಿ ಹರಿಜನ ಪ್ರವಾಸ ಕೈಗೊಂಡಾಗ ಹಾವೇರಿಗೆ ಮಾರ್ಚ್ 1ಕ್ಕೆ ಬಂದರು (1934). ಅಲ್ಲಿ ಚಿತ್ರದುರ್ಗದ ಸ್ವಾಮಿಗಳ ಭೇಟಿ ಆಯಿತು. ಅಲ್ಲಿಂದ ಮೋಟೆಬೆನ್ನೂರು, ಬ್ಯಾಡಗಿಗಳಿಗೆ ತೆರಳಿರಲು ಬ್ಯಾಡಗಿಯಲ್ಲಿ ಮಹಿಳೆಯರು ಹರಿಜನ ನಿಧಿಗೆ ಆಭರಣ ಕಳಚಿಕೊಟ್ಟರು. ಸಂಜೆ ಹಾವೇರಿಯಲ್ಲಿ ಸಭೆಗೆ 30,000 ಜನ ಕೂಡಿದ್ದರು. ಅಲ್ಲಿಂದ ಮರುದಿನ ದಾವಣಗೆರೆಗೆ ತೆರಳಿದರು. ನಂತರ ಬಳ್ಳಾರಿ ಜಿಲ್ಲೆಗೆ ಹೋಗಿ ಮಾರ್ಚ್ 5ಕ್ಕೆ ಹೊಸಪೇಟೆಯಿಂದ ಗದಗಿಗೆ ಬಂದು ಅಲ್ಲಿಂದ ಜಕ್ಕಲಿಗೆ ಪ್ರಯಾಣ ಮಾಡಿದರು. ಜಕ್ಕಲಿಯಲ್ಲಿ ಭಾರೀ ಸಭೆ ನಡೆದು ಅಂದಾನಪ್ಪ ದೊಡ್ಡಮೇಟಿ ಹರಿಜನ ನಿಧಿಗೆ ಒಂದು ಸಾವಿರ ರೂ. ಕೊಟ್ಟರು. ಗದಗಿನಲ್ಲೂ ಸಭೆ ನಡೆಸಿ ಅಲ್ಲಿಂದ ಹುಬ್ಬಳ್ಳಿಗೂ ಬಂದು ಹರಿಜನರ ಕೇರಿಯನ್ನು ಗಾಂಧೀಜಿ ಸಂದರ್ಶಿಸಿದರು. ರೈಲ್ವೇ ಕಾರ್ಮಿಕರು ಗಾಂಧೀಜಿಗೆ ಬಿನ್ನವತ್ತಳೆ ಕೊಟ್ಟರು. ಗುಳಕವ್ವನ ಕೆರೆಯಲ್ಲಿ ಬಾರಿ ಸಭೆ ಆಯಿತು. ಇದು ಮಾರ್ಚ್ 6. ಹುಬ್ಬಳ್ಳಿಯಿಂದ ಉಪ್ಪಿನ ಬೆಟಗೇರಿ ಖಾದೀ ಕೇಂದ್ರಕ್ಕೆ ಹೋದರು. ಬಳ್ಳಿಗೇರಿ ಊರಿನ ಹನುಮಂತ ದೇವಾಲಯವನ್ನು ಹರಿಜನರಿಗೆ ಮುಕ್ತಗೊಳಿಸಲಾಯಿತು. ಕರೀಕಟ್ಟಿಯಲ್ಲಿ ಅದೇ ದಿನ ಮಹಾದೇವ ದೇವಾಲಯಕ್ಕೆ ಹರಿಜನರನ್ನು ಕರೆದೊಯ್ದರು. "ಬ್ರಾಹ್ಮಣ ಬ್ರಾಹ್ಮಣೇತರ ಭೇದವಿಲ್ಲದೆ ಮಂದಿರಗಳು ಹರಿಜನರಿಗೆ ಮುಕ್ತವಾದವು. ಇದನ್ನು ಠಕ್ಕರ ಬಾಪಾರು 'ಎ ರೆಕಾರ್ಡ್ ಡೇ' ಎಂದು ಕರೆದರು", ಎಂದು ಸರದಾರ ವೀರನಗೌಡರು ಹೇಳಿದ್ದಾರೆ.

ಮುಂದೆ ಹರಿಜನ ಸೇವಕ ಸಂಘದಿಂದ ಬಾಲಿಕಾಶ್ರಮವನ್ನು ಹುಬ್ಬಳ್ಳಿಯಲ್ಲಿ ಸರದಾರ ವೀರನಗೌಡರು ತೆರೆಯಲು (1934) ಅದು ಕಾಲಕ್ರಮದಲ್ಲಿ ಮಹಿಳಾ ವಿದ್ಯಾಪೀಠವಾಗಿ ಬೆಳೆದು ನೂರಾರು ಹರಿಜನ ತರುಣಿಯರಿಗೆ ಶಿಕ್ಷಕರಾಗಲು ತರಬೇತಿ ನೀಡುವ ಸಾರ್ಥಕ ಕ್ರಮವಾಯಿತು.

ಗಾಂಧೀಜಿಯವರ ಪ್ರವಾಸದ ನಂತರ ಕೇಂದ್ರ ಎಸೆಂಬ್ಲಿಗೆ ಚುನಾವಣೆ ನಡೆಯಲು 1934 ರಿಂದ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದ (ಅವರೆಗೆ 1929ರಿಂದ 34ರಂ.ರಾ. ದಿವಾಕರರು ಅಧ್ಯಕ್ಷರಾಗಿದ್ದರು) ಹೊಸಮನಿ ಸಿದ್ದಪ್ಪನವರು ಕೇಂದ್ರ ಎಸೆಂಬ್ಲಿಗೆ ದಕ್ಷಿಣ ಮುಂಬೈಯ ಆರು ಜಿಲ್ಲೆಗಳಿಂದ (ಉತ್ತರ ಕರ್ನಾಟಕ, ರತ್ನಾಗಿರಿ, ಕುಲಾಬಾ) ಆರಿಸಿ ಬಂದರು. ಬ್ರಾಹ್ಮಣೇತರ ಪರಿಷತ್ತಿನ ಡಾ|| ಬ|| ಬಿ.ಎಲ್. ಪಾಟೀಲ ಮತ್ತು ಸ್ವತಂತ್ರರಾದ ವಿಶ್ವನಾಥರಾವ್ ಜೋಗ್ ಒಟ್ಟಾಗಿ ಪಡೆದುದಕ್ಕಿಂತ ಹೆಚ್ಚು ಮತಗಳು ಅವರಿಗೆ ಲಭಿಸಿದವು. 11.5.1930ರಲ್ಲಿ ಬೆಳಗಾವಿಯಲ್ಲಿ ವೀರನಗೌಡ ಪಾಟೀಲರು ಸ್ವಾಗತಾಧ್ಯಕ್ಷರಾಗಿ ಸಿದ್ದಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಸೇರಿದ ಬ್ರಾಹ್ಮಣೇತರ ಸಮ್ಮೇಳನ ಕಾಂಗ್ರೆಸ್‌ಗೆ ಹಾಗೂ ಕಾಂಗ್ರೆಸ್‌ನ ಬಹಿಷ್ಕಾರ ಚಳವಳಿಗೆ ಬೆಂಬಲ ಕೊಡಬೇಕೆಂದು ನಿರ್ಣಯಿಸಿತು. ಅದರಂತೆ ಹೊಸಮನಿ ಕಾಂಗ್ರೆಸ್ ಸೇರಿ ಜೇಲು ಕಂಡಿದ್ದರು. 1935 ಅ.ಭಾ.ಕಾಂಗ್ರೆಸ್ ಅಧ್ಯಕ್ಷ ರಾಜೇಂದ್ರ ಪ್ರಸಾದರು ಧಾರವಾಡ ಜಿಲ್ಲೆಯಲ್ಲಿ ಸಂಚಾರ ಮಾಡಿದರು. 1935ರಲ್ಲಿ ಎಲ್ಲೆಡೆ ಕಾಂಗ್ರೆಸ್ಸಿನ ಸ್ವರ್ಣ ಮಹೋತ್ಸವವನ್ನು ಅದ್ದೂರಿಯಿಂದ ಆಚರಿಸಿದರು.

1937ರ ಫೆಬ್ರುವರಿ ವಿಧಾನಸಭಾ ಚುನಾವಣೆಯ ಕಾಲಕ್ಕೆ ನೆಹರೂ ಎಲ್ಲೆಡೆ ಮಿಂಚಿನ ಪ್ರವಾಸ ಮಾಡಿದ್ದಂತೆ ಧಾರವಾಡ ಜಿಲ್ಲೆಯಲ್ಲೂ ಭಾರೀ ಸಭೆಗಳಲ್ಲಿ ಪ್ರಚಾರ ಭಾಷಣಗಳನ್ನು ಮಾಡಿದರು. ಧಾರವಾಡ ಜಿಲ್ಲೆಯ ಉತ್ತರ ಭಾಗದಲ್ಲಿ ಅಂದಾನಪ್ಪ ದೊಡ್ಡಮೇಟಿ, ದುಂದೂರ ವಕೀಲರು ಗೆದ್ದರು. ವೀರನಗೌಡ ಪಾಟೀಲರು ಸೋತರು. ದಕ್ಷಿಣ ಭಾಗದಿಂದ ನೇಸ್ವಿ, ಕರಗುದರಿ ಮತ್ತು ನಾಗಮ್ಮ ಪಾಟೀಲ (ಮಹಿಳೆಯರ ಮೀಸಲು) ಹೀಗೆ ಮೂರು ಸ್ಥಾನಗಳೂ ಕಾಂಗ್ರೆಸ್ಸಿಗೆ ದೊರೆತವು. ಈ ಹಿಂದೆ ಅಸಹಕಾರ ತತ್ವದಂತೆ ಕಾಂಗ್ರೆಸ್ ಚುನಾವಣೆಗಳನ್ನು ಬಹಿಷ್ಕರಿಸಿದ್ದರಿಂದ ಕಾಂಗ್ರೆಸ್ ವಿರೋಧಿಗಳು ಆಯ್ಕೆ ಆಗುತ್ತಿದ್ದರು. ಮುಂದೆ ಜಿಲ್ಲಾ ಬೋರ್ಡ್ ಚುನಾವಣೆ ಆಗಿ ಕಾಂಗ್ರೆಸ್ಸಿಗೆ ಬಹುಮತ ದೊರೆತು ವೀರನಗೌಡ ಪಾಟೀಲರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದರು.

ಮುಂಬೈಯಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಬಿ.ಜಿ.ಖೇರರ ನೇತೃತ್ವದಲ್ಲಿ ಅಧಿಕಾರ ಸ್ವೀಕರಿಸಿತು. ಅದು ಅನೇಕ ರೈತಪರ ಕಾರ್ಯಕ್ರಮಗಳನ್ನು ರೂಪಿಸಿತು. ಕರ ನಿರಾಕರಣ ಚಳವಳಿಯಲ್ಲಿ ಭೂಮಿ ಜಪ್ತಿ ಮಾಡಿಕೊಂಡ (1931) ಹಿರೇಕೆರೂರು ರೈತರ ಭೂಮಿಯನ್ನು ಅದು ಮರಳಿಸಿತು. ಋಣ ಮುಕ್ತಿಯ ಪ್ರಗತಿಪರ ಕಾನೂನನ್ನ ಜಾರಿ ಮಾಡಿತು (1939).

ಧಾರವಾಡದ ಕಾಂಗ್ರೆಸ್ಸಿಗರು ಬಹುಮಟ್ಟಿ 1938ರಲ್ಲಿ ಪಟ್ಟಾಭಿಯವರ ವಿರುದ್ಧ ಸುಭಾಷಚಂದ್ರ ಬೋಸರಿಗೆ ಅ.ಬಾ.ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಪಟ್ಟಕ್ಕೆ ಚುನಾವಣೆಯಲ್ಲಿ ಮತವಿತ್ತು ಸುಭಾಷರು ಗೆದ್ದರೂ ಮುಂದೆ ಸುಭಾಷರು ಗಾಂಧೀಜಿಯವರ ಜೊತೆ ಬಿನ್ನಾಭಿಪ್ರಾಯ ತೋರಿ ಕಾಂಗ್ರೆಸ್ ತ್ಯಜಿಸಿ ಫಾರ್ವರ್ಡ್ ಬ್ಲಾಕ್ ಸ್ಥಾಪಿಸಿದರು. ಮೇ ತಿಂಗಳಲ್ಲಿ ಬೋಸರು ಧಾರವಾಡಕ್ಕೆ ಬಂದಾಗ ಹೊಸಮನಿ ಸಿದ್ದಪ್ಪನವರು ಕಾಂಗ್ರೆಸ್ ತ್ಯಜಿಸಿ ಕರ್ನಾಟಕ ಫಾರ್ವರ್ಡ್ ಬ್ಲಾಕ್ ಘಟಕದ ಅಧ್ಯಕ್ಷರಾದರು; ಬೆಳಗಾವಿಯ ಮಂಡಗಿ, ವಿಜಾಪುರ ಜಿಲ್ಲೆಯ ಮರುಳಾರಾಧ್ಯ ಶಾಸ್ತ್ರಿ ಕಾರ್ಯದರ್ಶಿಗಳಾದರು. ಸುಭಾಷ್ಚಂದ್ರರು ಧಾರವಾಡ, ಬ್ಯಾಡಗಿ, ಹಾವೇರಿಗಳಿಗೂ 1939ರ ಜುಲೈ ತಿಂಗಳಲ್ಲಿ ಭೇಟಿ ನೀಡಿದರು. ಧಾರವಾಡದ ಇಡಗುಂಜಿ ಜಿಲ್ಲಾ ಫಾರ್ವರ್ಡ್ ಬ್ಲಾಕ್ ಅಧ್ಯಕ್ಷರಾದರೆ ಪಾಟೀಲ ಕಲ್ಲನಗೌಡರು ಕಾರ್ಯದರ್ಶಿಗಳಾದರು.

ಆಲೂರು ವೆಂಕಟರಾವ್, ಘ.ಗು. ಹಳಕಟ್ಟಿ, ಹರ್ಡೇಕರ ಮಂಜಪ್ಪ, ಭೂಪಾಲಂಚಂದ್ರಶೇಖರಯ್ಯ (ಶಿವಮೊಗ್ಗ), ಪಂಡಿತ ಬಿ. ಶಿವಮೂರ್ತಿ ಶಾಸ್ತ್ರಿ ಮುಂತಾದವರು ಆಗ ಕಾಂಗ್ರೆಸ್ಸಿನ ಭಾಗವಾಗಿದ್ದ ಹಿಂದೂ ಮಹಾ ಸಭೆಯಲ್ಲಿ ಇದ್ದು, 1940ರಲ್ಲಿ ಸಾವರ್ಕರರು (ಇವರು ಆಲೂರರ ಸಹಪಾಠಿ ಪುಣೆ ಕಾಲೇಜಿನಲ್ಲಿ) ಧಾರವಾಡಕ್ಕೆ 1940ರಲ್ಲಿ ಬಂದು ಉಪನ್ಯಾಸ ಮಾಡಿದರು.

ಇದಲ್ಲದೆ ಬಾಂಬೆ ಸ್ಟೇಟ್ ಮುಸ್ಲಿಂ ಲೀಗ್‌ನ ಸಮ್ಮೇಳನವು 24.5.1940ರಂದು ಹುಬ್ಬಳ್ಳಿಯಲ್ಲಿ ಮಹಮ್ಮದಾಬಾದ್‌ನ ರಾಜರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಾಂಸ್ಕೃತಿಕ ಚಟುವಟಿಕೆಗಳು, ಕನ್ನಡ ಜಾಗೃತಿ ಎಡೆಬಿಡದೆ ಸಾಗಿದವು. 1933ರಲ್ಲಿ ಕರ್ನಾಟಕ ನಾಟ್ಯವಿಲಾಸಿ ಎಂಬ ಹವ್ಯಾಸಿ ನಟರ ಸಂಸ್ಥೆಯನ್ನು ಧಾರವಾಡದಲ್ಲಿ ಅಧ್ಯಾಪಕರಾಗಿದ್ದ ಶ್ರೀರಂಗರು ಸ್ಥಾಪಿಸಿ 'ಹರಿಜನ್ವಾರ' ಮುಂತಾದ ನಾಟಕ ಆಡಿದರು. ಇದಲ್ಲದೆ ಆರ್ಥಿಕ ವಿಚಾರಗಳ ಚರ್ಚೆಗೆಂದೇ 1934ರಲ್ಲಿ 'ಧನಂಜಯ' ಎಂಬ ಮಾಸ ಪತ್ರಿಕೆಯನ್ನು ಹುಕ್ಕೇರಿಕರರು ಆರಂಭಿಸಿದರು. ಅದೇ ರೀತಿ ಏಕೀಕರಣ, ಕರ್ನಾಟಕದ ಪ್ರಗತಿಗಳ ಚಿಂತನೆಗಾಗಿ 'ಯುನಾಯಿಟೆಡ್ ಕರ್ನಾಟಕ' ಎಂಬ ಇಂಗ್ಲೀಷ್ ವಾರಪತ್ರಿಕೆಯನ್ನು ಅವರೇ 1937ರಲ್ಲಿ ಆರಂಭಿಸಿದರು. ಬೆಳಗಾವಿಯಲ್ಲಿ ಇದ್ದ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ 1937ರಲ್ಲಿ ಹುಬ್ಬಳ್ಳಿಗೆ ಬಂತು. ರಾಷ್ಟ್ರೀಯ ವಾಙ್ಮಯ ಮಂಡಳ ಇದನ್ನು ನಡೆಸುತ್ತಿತ್ತು. ನಿಂತು ಹೋಗಿದ್ದ 'ಕರ್ಮವೀರ'ವೂ ಮುಂದೆ ಇದೇ ಮಂಡಳದ ಆಡಳಿತಕ್ಕೆ ವರ್ಗಾವಣೆ ಹೊಂದಿತ್ತು. ಈ ಪ್ರಕಟಣೆಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಗಣ್ಯ ಪಾತ್ರ ವಹಿಸಿದವು. 1936ರಲ್ಲಿ ವಿಜಯನಗರ ಷಟ್‌ಶತಮಾನೋತ್ಸವವು ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ವೀರಭದ್ರಪ್ಪ ಹಾಲಭಾವಿ ಸ್ವಾಗತಾಧ್ಯಕ್ಷರಾಗಿ ಸಂಘಟಿತವಾಗಿ ಹಂಪಿಯಲ್ಲಿ ಅದ್ದೂರಿಯಾಗಿ ನಡೆಯಿತು. ಆಲೂರರ ಪ್ರೇರಣೆಯಂತೆ ದಸರಾವನ್ನು ಆಗಿನಿಂದ ಎಲ್ಲೆಡೆ 'ನಾಡಹಬ್ಬ'ವೆಂದು ರಾಷ್ಟ್ರೀಯ ಉತ್ಸವವಾಗಿ ಆಚರಿಸುವುದನ್ನು ಮೊದಲಿಟ್ಟರು. 1937ರಲ್ಲಿ 'ಜಯಂತಿ' ಮಾಸಪತ್ರಿಕೆಯನ್ನು ಬೆಟಗೇರಿ ಕೃಷ್ಣಶರ್ಮರು ಆರಂಭಿಸಿದರು. ಗೆಳೆಯರ ಗುಂಪು 'ಜೀವನ' ಮಾಸಿಕ ಆರಂಭಿಸಿತು. 1938ರಲ್ಲಿ ರಾಣೆಬೆನ್ನೂರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ವಾರ್ಷಿಕ ಪರಿಷತ್ತು ಸೇರಿದಾಗ ಗಂಗಾಧರರಾವ್ ದೇಶಪಾಂಡೆ ಕೆ.ಪಿ.ಸಿ.ಸಿ. ಅಧ್ಯಕ್ಷರಾದರು. ಜಿ.ವಿ.ಹಳ್ಳಿಕೇರಿ (ಅವರಿಗೆ ಜೊತೆ ಕಾರ್ಯದರ್ಶಿ ಇದ್ದವರು) ಪ್ರಧಾನ ಕಾರ್ಯದರ್ಶಿ ಆದರು.

ಮುಂದೆ 1939ರಲ್ಲಿ ಮಹಾಯುದ್ಧ ಆರಂಭ ಆದಾಗ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ಕೊಟ್ಟ ಖೇರ್ ಸಂಪುಟವೂ ರಾಜೀನಾಮೆ ನೀಡಿತ್ತು. ಅನಂತರ ಯುದ್ಧ ವಿರೋಧಿ ವೈಯಕ್ತಿಕ ಸತ್ಯಾಗ್ರಹ ನಡೆದಾದ 1940-41ರಲ್ಲಿ ರಾಜ್ಯದಲ್ಲಿ ಗಾಂಧೀಜಿಯವರ ಅನುಮತಿ ಪಡೆದ ಸುಮಾರು 1,100 ಜನರಲ್ಲಿ ಧಾರವಾಡ ಜಿಲ್ಲೆಯಲ್ಲಿ 274 ಜನ ಜೈಲು ಕಂಡರು. ಮುನಿಸಿಪಾಲಿಟಿ, ಜಿಲ್ಲಾ ಬೋರ್ಡ್, ಶಾಸನ ಸಭೆಗಳ ಸದಸ್ಯರಾಗಿದ್ದ ಎಲ್ಲ ಕಾಂಗ್ರೆಸ್ಸಿಗರೂ ಸತ್ಯಾಗ್ರಹ ಹೂಡಲು ಗಾಂಧೀಜಿ ಕರೆ ನೀಡಿದ್ದರು.

## ಕ್ವಿಟ್ ಇಂಡಿಯಾ ಚಳವಳಿ

ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಗುವುದಕ್ಕೂ ಮುಂಚೆ ಕೆ.ಪಿ.ಸಿ.ಸಿ. ಕಾರ್ಯಸಮಿತಿ ಸಭೆಯು ಆಗಸ್ಟ್ 4ಕ್ಕೆ ಧಾರವಾಡದಲ್ಲಿ ನಡೆಯಿತು. ಆಗ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದ ಡಾ|| ಆರ್. ನಾಗನಗೌಡರು ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದ್ದರು. ಅವರ ರಾಜೀನಾಮೆ ಅಂಗೀಕರಿಸಿ ದ.ಪ. ಕರಮಕರರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಮುಂಬೈಯಲ್ಲಿ ಕೆಲವೇ ದಿನಗಳಲ್ಲಿ ನಡೆಯಲಿದ್ದ ಎ.ಐ.ಸಿ.ಸಿ.ಯ ಮಾರ್ಗದರ್ಶನದಂತೆ ಕೆಲಸ ಮಾಡಲು ನಿರ್ಧರಿಸಲಾಯಿತು. ಬಂಧಿಸಬೇಕೆಂದಿದ್ದ ಕಾರ್ಯಕರ್ತರ ಒಂದು ಪಟ್ಟಿಯನ್ನೇ ಸರಕಾರವು ಮೊದಲೇ ಸಿದ್ಧಪಡಿಸಿದ್ದು ಆಗಸ್ಟ್ 8 ರ ರಾತ್ರಿ ಗಾಂಧೀಜಿ ಭಾಷಣ ನೀಡಿದ ನಂತರ ದೇಶದ ಗಣ್ಯ ನಾಯಕರನ್ನು ಮುಂಬೈಯಲ್ಲೇ ಬಂಧಿಸಿದರು. ಕಾಂಗ್ರೆಸ್ ಕಾನೂನು ಬಾಹಿರವೆಂದು ಪ್ರಕಟಿಸಿ ಅದರ ಕಚೇರಿಗಳಿಗೆ ಎಲ್ಲೆಡೆ ಬೀಗಮುದ್ರೆ ಹಾಕಿ ಕಾವಲು ಹಾಕಲಾಯಿತು. ಹುಬ್ಬಳ್ಳಿಯಲ್ಲಿ ಡಾ|| ಹರ್ಡೀಕರ್, ಡಿ.ಸಿ.ಸಿ. ಕಾರ್ಯದರ್ಶಿ ಹಾಗೂ ಕಾರ್ಮಿಕ ನಾಯಕ ದೇವಪುರೆ, ತಾಲೂಕು ಕಾಂಗ್ರೆಸ್ ಕಾರ್ಯದರ್ಶಿ ಸಯ್ಯದ್ ಬಂದಾರ್, ಆರ್.ವಿ. ಕರಗುದರಿ, ವಿರಕ್ತಮಠ ಇವರನ್ನೆಲ್ಲ ಬಂಧಿಸಿತು.

ಆಗಸ್ಟ್ 9 ರಂದು ಭಾನುವಾರವಾದರೂ ಧಾರವಾಡದಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಪೋಲೀಸರು ಅದನ್ನು ತಡೆದಾಗ ವಿದ್ಯಾರ್ಥಿಗಳು ರಸ್ತೆಯಲ್ಲೇ ಕೂತು ರಾಮಧುನ್ ಹಾಡಹತ್ತಿದರು. ಜಿಲ್ಲಾಧಿಕಾರಿಗಳು ಮಧ್ಯೆ ಪ್ರವೇಶಿಸಿ ಮೆರವಣಿಗೆಯನ್ನು ಸಾಗಗೊಟ್ಟರು. ಅದೇ ದಿನ ಸಂಜೆ ಮಳೆ ಸುರಿಯುತ್ತಿದ್ದರೂ ಕಡಪಾ ಬಯಲಲ್ಲಿ ಭಾಷಣ ಮಾಡಿದ ನಂತರ ಡಾ|| ಕಟ್ಟೂರರನ್ನು ಬಂಧಿಸಿದರು. ಹುಬ್ಬಳ್ಳಿಯಲ್ಲಿ ಅಲ್ಲಿನ ಮೂರು ಹೈಸ್ಕೂಲಿನ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಜಿಲ್ಲೆಯಲ್ಲಿ ನಾಯಕರಾಗಿದ್ದ ಪರಮಣ್ಣ ಹೊಸಮನಿ, ಜಿ.ವಿ.ಹಳ್ಳಿಕೇರಿ, ಅಂದಾನಪ್ಪ ದೊಡ್ಡಮೇಟಿ, ವಿರನಗೌಡಪಾಟೀಲ ಮುಂತಾದವರನ್ನು ಒಂದೆರಡು ದಿನಗಳಲ್ಲೇ ಬಂಧಿಸಿದರು. ಎಲ್ಲ ಪ್ರಮುಖ ಊರುಗಳಲ್ಲೂ ಹರತಾಳ ಮೆರವಣಿಗೆಗಳು 10 ರಂದು, ಕೆಲವೆಡೆ 11 ರಂದು ನಡೆದವು. ಶಿರಹಟ್ಟಿ ಬಳಿಯ ಶಿಗ್ಲಿ (ಆಗಿನ ಸಾಂಗ್ಲೀಸಂಸ್ಥಾನ)ದಲ್ಲೂ ಆಗಸ್ಟ್ 11 ರಂದು ಹರತಾಳವು ಪ್ರಜಾ ಸಂಘದ ಅಧ್ಯಕ್ಷರ ಮನವಿಯಂತೆ ಆಯಿತು. ಆಗಸ್ಟ್ 12 ರಂದು ಗದಗಿನಲ್ಲಿ ಹರತಾಳವಾಗಿ ಸಾರ್ವಜನಿಕ ಸಭೆಯಲ್ಲಿ ಎಂ. ಹರಿದಾಸರಾವ್ ಮತ್ತು ಅಬಲೂರ್ ಭಾಷಣ ಮಾಡಿದರು. ಆ ಊರಲ್ಲೂ ಜಾಲಿಹಾಳ ವಕೀಲರೇ ಮುಂತಾದ ಹಿರಿಯ ನಾಯಕರನ್ನು ಬಂಧಿಸಿದರು. 12 ರಂದು ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿಗಳ ಮೆರವಣಿಗೆಯಾಗಿ ಗೊಬ್ಬಣ್ಣನವರ್ ಭಾಷಣ ಮಾಡಿದರು. ಹಾನಗಲ್, ಮೊರಬ, ಗಜೇಂದ್ರಗಡ ಮುಂತಾದ ಕಡೆಯೂ ಆ ದಿನ ಮೆರವಣಿಗೆ ಆಯಿತು. 13 ರಂದೂ ಹುಬ್ಬಳ್ಳಿಯಲ್ಲಿ ಮೆರವಣಿಗೆ ನಡೆಯಿತು. ಗಾಂಧೀಜಿ ಮತ್ತು ರಾಷ್ಟ್ರನಾಯಕರ ಬಂಧನಕ್ಕೆ ನಡೆದ ಈ ಪ್ರತಿಭಟನೆ ಶಾಂತವಾಗಿ ಸಾಗಿತು. ಗಣ್ಯ ನಾಯಕರ ಬಂಧನವಾದುದರಿಂದ ಚಳವಳಿ ಅನಾಯಕವಾಗುವ ಸಂದರ್ಭ ಕಾಣಿಸಿತು. ಕಾಂಗ್ರೆಸ್ ಬುಡಮೇಲು ಕೃತ್ಯಗಳನ್ನು ನಡೆಸಲು ನಿರ್ಧರಿಸಿತ್ತು ಎಂಬ ವಿವರವನ್ನು ಒಳಗೊಂಡ ಭಾಷಣವನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂತ್ರಿ ಅಮೆರಿ ಮಾಡಿರಲು ಈ ವಾರ್ತೆ ಎಲ್ಲೆಡೆ 13-14 ಕ್ಕೆ ಹರಡಿ, ಇದೇ ಕಾಂಗ್ರೆಸ್ಸಿನ ಕಾರ್ಯಕ್ರಮವೆಂಬ ಕಲ್ಪನೆ ಕಾರ್ಯಕರ್ತರಲ್ಲಿ ಬಂದು ಟೆಲಿಗ್ರಾಫ್ ತಂತಿ ಕತ್ತರಿಸುವುದು ಸರಕಾರೀ ಕಟ್ಟಡಗಳಿಗೆ ಹಾನಿ ಮಾಡುವುದು ಆರಂಭವಾಯಿತು. ಮೊದಲ ವಿಧ್ವಂಸಕ ಕೃತ್ಯ 13 ರ ರಾತ್ರಿ ಬೆಳಗಾವಿ ಜಿಲ್ಲೆಯ ಸುಲಧಾಳ-ಗೋಕಾಕಗಳ ನಡುವೆ ತಂತಿ ಕತ್ತರಿಸಿದಾಗ ಆರಂಭವಾಯಿತು. ಆಗಸ್ಟ್ 14 ಕ್ಕೆ ಲ್ಯಾಮಿಂಗ್ಟನ್ ಹೈಸ್ಕೂಲಿನಿಂದ ಹೊರಟ ಮೆರವಣಿಗೆಯನ್ನೂ ಹುಬ್ಬಳ್ಳಿ ಪೋಲೀಸರು ಸರಾಫಕಟ್ಟೆ ಬಳಿ ತಡೆದರು. ಧಾರವಾಡದಲ್ಲಿ ಕರ್ನಾಟಕ ಕಾಲೇಜಿನಿಂದ ಅದೇ ದಿನ ಕರ್ನಾಟಕ ಹೈಸ್ಕೂಲ್‌ವರೆಗೆ ಮೆರವಣಿಗೆ ಆಯಿತು.

ಆಗಸ್ಟ್ 15 ರಂದು ಮಹಾದೇವಭಾಯಿ ದೇಸಾಯರು ನಿಧನರಾದುದರಿಂದ ಮತ್ತೆ ಎಲ್ಲೆಡೆ ಚಳವಳಿ ಭುಗಿಲೆಂದು ಎದ್ದಿತು. ಈ ನಿಧನದ ಹಿನ್ನೆಲೆಯಲ್ಲಿ ಎಲ್ಲೆಡೆ ಬಿಗಿ ಬಂದೋಬಸ್ತ್ ಮಾಡಿರಲು, ವಾರ್ತೆಗಳಲ್ಲಿ ಪತ್ರಿಕೆಗಳಲ್ಲಿ ಮೊದಲು ಬಾರದ್ದರಿಂದ, ರೇಡಿಯೋ ಮೂಲಕ ತಿಳಿದ ಸುದ್ದಿಯಿಂದ ಜನ ರೊಚ್ಚಿಗೆದ್ದರು. ಹುಬ್ಬಳ್ಳಿಯಲ್ಲಿ ಭಾರೀ ಮೆರವಣಿಗೆ (ಐದಾರು ಸಾವಿರ ಜನರದು)

ಕೊಪ್ಪೀಕರ ಬೀದಿಯಿಂದ ದುರ್ಗದ ಬೈಲು ಕಡೆ ಸಾಗಲು ಸಂಜೆ ಗೋಳಿಬಾರಾಗಿ ನಾರಾಯಣ ಡೋಣಿ ಎಂಬ ವಿದ್ಯಾರ್ಥಿ ನಿಧನನಾದ. ಗಾಯಗೊಂಡ ಈಶ್ವರಠಾಕೂರ್ ಕಾಟ್ಕರ್ ಎಂಬವರ ಕಾಲನ್ನು ಮರುದಿನ ಶಸ್ತ್ರಕ್ರಿಯೆ ಮಾಡಿ ಕತ್ತರಿಸಿದರು. ಧಾರವಾಡ, ಗದಗ, ಹಾವೇರಿ ಮುಂತಾದ ಎಲ್ಲ ಊರುಗಳಲ್ಲಿ 15, 16, 17 ರಂದು ಉಗ್ರ ಪ್ರತಿಭಟನೆ, ಮೆರವಣಿಗೆ, ಹರತಾಳ ಆಯಿತು. ಧಾರವಾಡ ಜಿಲ್ಲೆಯ ಯಾವ ಗಣ್ಯ ಊರೂ ತಣ್ಣಗಿರದಂತೆ ಕಾರ್ಯಕ್ರಮಗಳು ನಡೆದವು. ಬೆಂಗಳೂರು, ದಾವಣಗೆರೆ, ನಿಪ್ಪಾಣಿ, ತಿಪಟೂರು, ಬೈಲಹೊಂಗಲಗಳಲ್ಲಿ ಆದ ಗೋಳೀಬಾರು ಸಾವುಗಳ ಸುದ್ದಿ ಜಿಲ್ಲೆಯಲ್ಲಿ ಭಾರೀ ಕ್ಷೋಭೆ ಉಂಟು ಮಾಡಿತು.* "ಮಾಡು ಇಲ್ಲವೆ ಮಡಿ" (ಡೂ ಆರ್ ಡೈ) ಎಂಬ ಮಹಾತ್ಮರ ಕರೆ ಎಲ್ಲರನ್ನು ಬಡಿದೆಬ್ಬಿಸಿತ್ತು.

ಈ ಚಳವಳಿಯಲ್ಲಿ ಶೀಘ್ರ ಸುಸಂಘಟಿತ ಬುಡಮೇಲು ಕೃತ್ಯಗಳು ಯೋಜಿತವಾಗಿ ವಿಶೇಷತಃ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಎರಡು ವರ್ಷಗಳ ತನಕ ಸಾಗಿದವು. ಈ ಚಟುವಟಿಕೆ 'ಕರ್ನಾಟಕ ಪ್ಯಾಟರ್ನ್' ಎಂದು ಪ್ರಸಿದ್ಧವಾಗಿ ಜಯಪ್ರಕಾಶ ನಾರಾಯಣರಿಂದಲೂ ಸ್ತುತಿಸಲ್ಪಟ್ಟಿತು. ಈ ಕಾರ್ಯಕ್ರಮಗಳನ್ನು ಮುಂಬೈಗೆ ಎ.ಐ.ಸಿ.ಸಿ.ಗೆ ತೆರಳಿದ್ದ ನಾಯಕರು ಬಂಧನಕ್ಕೆ ಒಳಗಾಗದೆ ಭೂಗತರಾಗಿ ಸಂಘಟಿಸಿದರು. ಈ ಬಾರಿಯ ಚಳವಳಿಯ ಸ್ವರೂಪವೇ ಬೇರೆ, ಎಂದಿದ್ದ ಗಾಂಧೀಜಿ ಚಳವಳಿಯ ಸ್ವರೂಪ ಏನೆಂದು ಪ್ರಕಟಿಸುವ ಮೊದಲೇ ಬಂಧಿತರಾಗಿದ್ದರು.

ಎ.ಐ.ಸಿ.ಸಿ. ಮುಗಿದಾಗ ಬಂಧನಕ್ಕೆ ಒಳಗಾಗದೇ ತಪ್ಪಿಸಿಕೊಂಡಿದ್ದ ದಿವಾಕರರು ಮುಂಬೈಯಲ್ಲಿದ್ದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಕೆಲವು ಸದಸ್ಯರು ಪರಸ್ಪರ ಭೇಟಿಯಾದರೂ "ಕೈಕೊಳ್ಳಬೇಕಾದ ಕಾರ್ಯಕ್ರಮದ ಬಗ್ಗೆ ಯಾವುದೇ ತಲೆಬುಡ ನಮಗೆ ತಿಳಿದಿರಲಿಲ್ಲ...ಕಾರ್ಯಕ್ರಮದ ರೂಪರೇಷೆ ತಿಳಿದಮೇಲೆ ಅದನ್ನು ಕಾರ್ಯಾಚರಣೆಗೆ ತರಲೆಂದು ಐವರ ಕ್ರಿಯಾಸಮಿತಿಯೊಂದನ್ನು ಕರ್ನಾಟಕಕ್ಕಾಗಿ ನಿರ್ಮಿಸಬೇಕೆಂದು ನಾವು ನಿರ್ಧರಿಸುವುದು ಸಾಧ್ಯವಾಯಿತು", ಎಂದಿದ್ದು ವಿಜಾಪುರದ ಚನ್ನಬಸಪ್ಪ ಅಂಬಲಿ ಅಧ್ಯಕ್ಷರಾಗಿ ತಾವು ಕಾರ್ಯದರ್ಶಿಗಳಾಗಿ, ಕರಮರಕರ, ಹುಕ್ಕೇರಿಕರ ಮತ್ತು ಮಂಗಳೂರಿನ ಶ್ರೀನಿವಾಸಮಲ್ಯ ಸದಸ್ಯರಾಗಿ ಇರುವ ಒಂದು ಕ್ರಿಯಾಸಮಿತಿಯನ್ನು ಕೆ.ಪಿ.ಸಿ.ಸಿ ಪರವಾಗಿ ರಚಿಸಿಕೊಂಡುದಾಗಿ ಹೇಳಿದ್ದಾರೆ. (ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ, ಪು.246)

ಕ್ರಿಯಾ ಸಮಿತಿಯು ಗುಪ್ತವಾಗಿ ಮುಂಬೈಯಿಂದ ಕಾರ್ಯಾಚರಣೆ ನಡೆಸುತ್ತಿದ್ದು ಮುಂಬೈಯಿಂದ ಹಣ ಸಂಗ್ರಹಿಸಿ, ಅದೇ ರೀತಿ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡುವ ಸೂಚನೆಗಳನ್ನು ಸೈಕ್ಲೋಸ್ಟೈಲ್ ಮಾಡಿ ಇಲ್ಲವೆ ಮುದ್ರಿಸಿ ಕಳುಹಿಸುತ್ತಿತ್ತು. ಸ್ವತಃ ಅಂಬಲಿ ಮುದ್ರಣಕಾರರಾಗಿದ್ದು ಪುಣೆಯಲ್ಲಿ ಗುಪ್ತವಾಗಿ ಒಂದೆಡೆ ಕನ್ನಡ ಮೊಳೆಗಳನ್ನು ತರಿಸಿ ಇಟ್ಟುಕೊಂಡು ಕನ್ನಡದಲ್ಲೂ ಮುದ್ರಣ ಮಾಡುತ್ತಿದ್ದರು. ಬಿಂದು ಮಾಧವ ಬುರ್ಲಿ, ಶಂಕರ ಕುರ್ತಕೋಟಿ, ನರಸಿಂಹ ದಾಬಡೆ ಇವರೆಲ್ಲ ಆಗಾಗ, ಮುಂಬೈಯಿಂದ ಜಿಲ್ಲೆಗೆ ಬಂದು ಮಾರ್ಗದರ್ಶನ ಮಾಡುತ್ತಿದ್ದರು. ಸಂಯುಕ್ತ ಕರ್ನಾಟಕದ ಸಂಪಾದಕ ಮೊಹರೆ ತಮ್ಮ ವೃತ್ತಿ ಸಂಬಂಧ ಚಟುವಟಿಕೆಗಳಿಗಾಗಿ ಮುಂಬೈಗೆ ಆಗಾಗ ಬರುತ್ತಿದ್ದು ಹಣವಿತರಣೆ ಇತ್ಯಾದಿ ಕಾರ್ಯಗಳಿಗೆ ಮಧ್ಯಸ್ಥರಾಗಿದ್ದರು.

ಭೂಗತ ಚಟುವಟಿಕೆ ನಡೆಸಲು ಹಲವಾರು ತಂಡಗಳಿದ್ದು ಬೆಳಗಾವಿಯ ಶ್ರೀರಂಗ ಕಾಮತ್, ಗೋವಿಂದರೆಡ್ಡಿ ಹೂಲಿ ಮುಂತಾದವರು ದಾರವಾಡ ಜಿಲ್ಲೆಯ ಉತ್ತರ ಭಾಗದ ಕೆಲಸ ನೋಡಿಕೊಳ್ಳುತ್ತಿದ್ದರು. ವೆಂಕಟೇಶ್ ಮಾಗಡಿ, ಶಿವರಾಯ ಮಾನಣ್ಣನವರ್, ದುಂದೂರ್ ವಕೀಲರೇ ಮುಂತಾದವರನ್ನು ಒಳಗೊಂಡ ಧಾರವಾಡ, ನವಲಗುಂದ ತಾಲೂಕಿನ ಹಳ್ಳಿಗಳಲ್ಲಿ ನೂರಾರು ಜನರನ್ನುಳ್ಳ ತಂಡದ ಸಂಪರ್ಕವನ್ನು ಹೊಂದಿದ್ದರು. ಕರ್ಲವಾಡ, ಹೆಬಸೂರು, ಯವನೂರು, ಜಗಾಪುರ, ಅರೆಕುರಹಟ್ಟಿ ಊರಿನ ಕಾರ್ಯಕರ್ತರು ಇದರಲ್ಲಿದ್ದರು. ಬ್ಯಾಹಟ್ಟಿ, ಮೊರಬ, ಉಪ್ಪಿನ ಬೆಟಗೇರಿ ಊರಿನ ಗುಂಪುಗಳೂ ಇದರ ಜೊತೆ ಸೇರುತ್ತಿದ್ದರು. ಗದುಗಿನಲ್ಲಿ ಶಿವಪ್ಪ ಕುಬಸದ ಅವರ ತಂಡವಿತ್ತು. ಹಿರೇಕೆರೂರಲ್ಲಿ ಕರಿಯಪ್ಪ ಯರೇಶಿಮೆ (ಸಂಗೂರ), ರಾಣೆಬೆನ್ನೂರಲ್ಲಿ ತಿಮ್ಮಣ್ಣಗೌಡ ಮೆಣಸಿನಹಾಳ ಹಾಗೂ ಹಾವೇರಿಯಲ್ಲಿ ಮೈಲಾರ ಮಹದೇವಪ್ಪ ಅವರ ಗುಂಪುಗಳಿದ್ದವು.

ಮಾಡತಕ್ಕ ಚಟುವಟಿಕೆಗಳಲ್ಲಿ ನಿತ್ಯ ಪ್ರಕಟವಾಗಿ ನಡೆಯುವ ಸಭೆ, ಮೆರವಣಿಗೆ, ದಿನಾಚರಣೆಗಳು (ಉದಾ: ಗಾಂಧೀಜಿಯವರ ಬಂಧನ ಪ್ರತಿಭಟಿಸಿ ಪ್ರತೀ ತಿಂಗಳ 9ಕ್ಕೆ ಗಾಂಧೀದಿನ ಇತ್ಯಾದಿ), ಅಲ್ಲದೆ ಸರಕಾರವು ತಾನೇ ಪತ್ತೆ ಹಚ್ಚಿ ತಿಳಿಸಿರುವಂತೆ (ಸರಕಾರವೇ ನಡೆಯದಂತೆ ಮಾಡಲು ಹಾಗೂ ಆಗ ನಡೆಯುತ್ತಿದ್ದ ಮಹಾಯುದ್ಧಕ್ಕೆ ಯಾವುದೇ ನೆರವು ಸಿಗದಂತೆ ಮಾಡಲು) (1) ಸಂಪರ್ಕ

* ಇಲ್ಲಿನವರೆಗಿನ ಕಥನ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ವರದಿಗಳ ಮೇಲೆ ಆಧಾರಿತ

ಸಾಧನಗಳ ನಾಶ, (2) ರೈಲು ಹಳಿಗಳನ್ನು ಕಿತ್ತು ರೈಲು ಸಾರಿಗೆಯನ್ನು ತಡೆಯುವುದು ಮತ್ತು ಸರಕು ಸಾರಿಗೆ (ಗೂಡ್ಸ್) ರೈಲು ಬಂಡಿಗಳನ್ನು ಉರುಳಿಸುವುದು, (3) ಎಲ್ಲ ಗ್ರಾಮದಫ್ತರುಗಳನ್ನು ಸುಡುವುದು, (4) ರೈಲು ನಿಲ್ದಾಣ, ಗ್ರಾಮಚಾವಡಿ, ಧರ್ಮಶಾಲೆ, ಡಾಕ್ ಬಂಗ್ಲೆಗಳನ್ನು ಸುಡುವುದು, (5) ತಮ್ಮ ವಿರುದ್ಧ ಬರುವ ಪೋಲೀಸರು ಮತ್ತು ಇತರರನ್ನು ನಿಶಸ್ತ್ರಗೊಳಿಸುವುದು, (6) ಕಂದಾಯ ಸಂಗ್ರಹಣೆ ಮಾಡುವ ಕೇಂದ್ರಗಳನ್ನು ಸೂರೆ ಮಾಡುವುದು, ಮತ್ತು (7) ಮೇಲ್ ಬ್ಯಾಗುಗಳನ್ನು ಅಪಹರಿಸುವುದು (ಮೇಲಿನದೇ, ಪು.92-93).

ಭೂಗತ ಕಾರ್ಯಕರ್ತರು ರೈಲು, ಬಸ್ಸು ಬಳಸದೆ, ನಡೆದೇ ಪ್ರಯಾಣ ಮಾಡಬೇಕಾಗುತ್ತಿತ್ತು. ಹಗಲು ಬೆಟ್ಟ, ಗುಡ್ಡ, ಅಡವಿ, ಜೋಳದ ಬೆಳೆಯ ನಡುವೆ ಆಶ್ರಯ. ಊಟ ಸಿಕ್ಕರೆ ಉಂಟು, ಇಲ್ಲವಾದರೆ ಇಲ್ಲ. ಎಲ್ಲ ಕಾರ್ಯಾಚರಣೆ ರಾತ್ರಿಕಾಲದಲ್ಲೇ. 10-20-30 ತಂಡ ಕಟ್ಟಿಕೊಂಡು ಭೂಗತರಾಗಿದ್ದು ಕೆಲಸ ಮಾಡಬೇಕಿತ್ತು. ಅನಾರೋಗ್ಯವಾದರೆ ಔಷಧೋಪಚಾರವಿರಲಿಲ್ಲ. ಸದಾ ಪೋಲಿಸರ ಭಯ. ಅನೇಕ ಕಾರ್ಯಕರ್ತರ ಬಂಧನಕ್ಕೆ ಸುಳಿವು ನೀಡಿದವರಿಗೆ ನೂರು, ಇನ್ನೂರು, ಸಾವಿರದಿಂದ ಐದು ಸಾವಿರ ರೂ.ವರೆಗೆ ಬಹುಮಾನ ಘೋಷಿಸಿದ್ದರು.

ಪ್ರಕಟ ಚಳವಳಿ ಹಲವು ವಾರಗಳವರೆಗೆ ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ಶಿಗ್ಗಾಂವಿಗಳಲ್ಲಿ ನಡೆಯಿತು. ಶಾಲೆ ಕಾಲೇಜು ಪೂರ್ತಿ ಬಹಿಷ್ಕರಿಸಿದರು. ಧಾರವಾಡ ಕರ್ನಾಟಕ ಹೈಸ್ಕೂಲಿನ ಕೆ.ಜಿ. ಜೋಶಿ ಮಾಸ್ತರ ಹುದ್ದೆಗೆ ರಾಜೀನಾಮೆ ನೀಡಿ ಉತ್ತರ ಕನ್ನಡ ಜಿಲ್ಲೆಗೆ ತೆರಳಿ ಚಳವಳಿ ನಡೆಸಲು ಭೂಗತರಾದರು. ಅದೇ ಶಾಲೆಯ ರುದ್ರಪ್ಪ ಪತ್ತಾರ ಗರಗಕ್ಕೆ ತೆರಳಿದ್ದರು. ಕೆ.ಇ. ಬೋರ್ಡ್ಸ್ ಸಂಸ್ಥೆಯ ಮೂರು ಹೈಸ್ಕೂಲುಗಳ ಅಧ್ಯಾಪಕರಾದ ಶಿನೋಳಿಕರ್, ಎಸ್.ಜಿ. ನಾಡಗೀರ್, ಹೋಳಿಕಟ್ಟಿ, ಹರಪನಹಳ್ಳಿ ಹಾಗೂ ಮುಧೋಳ್ಕರ್ ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಿದ್ದರು. ಕಲ್ಕತ್ತಾದಿಂದ ಬಂದ ವಿಮಲ ಗುಲವಾಡಿ, ಹಾಗೂ ಗೋಪಾಲ್ ನಖಾತೆ, ನಾರಾಯಣ ಕೊರವಾರ, ರವಿ ಕೊಯಮತ್ತೂರ, ಗಂಗಾಧ ಚಿತ್ತಾಳ, ಗುಂಡು ನರಬೋಳಿ, ವಿಕ್ರಮ ಬುರ್ಲಿ ಮತ್ತು ಜಿ.ಎಸ್. ಜೋಶಿ ಧಾರವಾಡದ ಗಣ್ಯ ವಿದ್ಯಾರ್ಥಿನಾಯಕರು.

10.9.42 ರಂದು ಹರತಾಳ ಆಚರಿಸಿ ವಿದ್ಯಾರ್ಥಿಗಳ ಅಧ್ಯಾಪಕರುಗಳಿಗೆ ಖಾದಿ ಟೋಪಿ ಉಡುಗೊರೆ ನೀಡಿದ್ದರು. ಮರುದಿನ 32 ವಿದ್ಯಾರ್ಥಿಗಳನ್ನು ಧಾರವಾಡದಲ್ಲಿ ಬಂಧಿಸಿದರು. ದಸರಾ ರಜೆ ನಂತರ ಸೆಪ್ಟೆಂಬರ್ 17 ಕ್ಕೆ ಕರ್ನಾಟಕ ಕಾಲೇಜು ತೆರೆದಾಗ ಹಾಜರಾತಿ ಕಡಿಮೆ ಇತ್ತು. ಸೆಪ್ಟೆಂಬರ್ 23 ಕ್ಕೆ ಪ್ರೌಢಶಾಲೆಗಳು ತೆರೆದಾಗಲೂ ಹಾಜರಾತಿ ಕಡಿಮೆ ಇತ್ತು. 25.9.42 ಕರ್ನಾಟಕ ಕಾಲೇಜು ಕಚೇರಿಗೆ ಕೊಳ್ಳಿ ಇಟ್ಟರು. ಗಾಂಧಿಜಯಂತಿ (ಅಕ್ಟೋಬರ್ 2ಕ್ಕೆ)ಯಂದು ಊರಲ್ಲಿ ಮೆರವಣಿಗೆ ನಡೆಸಲು ಅನೇಕ ಮಹಿಳೆಯರ ಸಹಿತ ಹಲವು ವಿದ್ಯಾರ್ಥಿಗಳ ಬಂಧನವಾಯಿತು.

ವಿಮಲ ಗುಲ್ವಾಡಿ ಮತ್ತು ಶಿನೋಳಿಕರ್ ಎಂಬ ವಿದ್ಯಾರ್ಥಿನಿಯರು 24.10.42 ರಂದು ಜಿಲ್ಲಾ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಕೊಠಡಿಯಲ್ಲಿ ತ್ರಿವರ್ಣ ಧ್ವಜ ಹಾರಿಸಿದರು. ಈ ಇಬ್ಬರಿಗೂ ಮೂರು ತಿಂಗಳ ಶಿಕ್ಷೆ ಆಯಿತು. 29.10.42 ರಂದು ಧಾರವಾಡದ ವಿದ್ಯಾರ್ಥಿಗಳು ಸಭೆ ನಡೆಸಿ ಚಳವಳಿ ಮುಂದುವರಿಸಲು ನಿರ್ಧರಿಸಿದರು. ಆದರೆ ಮುಂದೆ ಕೆಲವೇ ದಿನಗಳಲ್ಲಿ ಶಾಲೆ ಕಾಲೇಜುಗಳ ಯಥಾಪ್ರಕಾರ ನಡೆದವು. ಆದರೆ ಅನೇಕ ವಿದ್ಯಾರ್ಥಿವಿದ್ಯಾರ್ಥಿನಿಯರು ಕಾಯಂ ಆಗಿ ಶಾಲೆಕಾಲೇಜು ತ್ಯಜಿಸಿದ್ದರು. ಕೆ.ಜಿ. ಜೋಶಿಯವರು ಉತ್ತರ ಕನ್ನಡದಲ್ಲಿ ಬಂಧನವಾದ ಬಗ್ಗೆ 8.1.43 ರಂದು ಕರ್ನಾಟಕ ಹೈಸ್ಕೂಲಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದರು.

ಹುಬ್ಬಳ್ಳಿಯಲ್ಲಿ 9.9.42 ರಂದು ನಾಯಕರ ದಿನ ಆಚರಿಸಿ ಮೆರವಣಿಗೆ ನಡೆಸುವ ಯತ್ನ ಮಾಡಿದ ವಿದ್ಯಾರ್ಥಿಗಳಲ್ಲಿ 10 ಮಂದಿಯನ್ನು ಬಂಧಿಸಿದರು. ಲ್ಯಾಮಿಂಗ್ಟನ್ ಹೈಸ್ಕೂಲಿಗೆ ಅಗ್ನಿಸ್ಪರ್ಶ ಮಾಡಿದ ಕಾರಣಕ್ಕೆ 29.9.42 ರಂದು ಇಬ್ಬರನ್ನು ಬಂಧಿಸಿದರು. ಈ ಹೈಸ್ಕೂಲೇ ಅಲ್ಲದೆ ಸಿಟಿ ಮತ್ತು ನ್ಯೂ ಇಂಗ್ಲಿಷ್ ಹೈಸ್ಕೂಲು ವಿದ್ಯಾರ್ಥಿಗಳು ಚಳವಳಿಯಲ್ಲಿ ಉತ್ಸಾಹದಿಂದ ಪಾಲುಗೊಂಡರು.

ಗದಗಿನಲ್ಲಿ 5.9.42 ರಂದು 10 ವಿದ್ಯಾರ್ಥಿಗಳನ್ನು ಬಂಧಿಸಿ ರಾತ್ರಿ ಬಿಡುಗಡೆ ಮಾಡಲು ಅವರ ಸಹಿತ ವಿದ್ಯಾರ್ಥಿಗಳು ಗದಗಿನಲ್ಲಿ ರಾತ್ರಿಯೇ ಮೆರವಣಿಗೆ ಮಾಡಿದರು. ಸೆಪ್ಟೆಂಬರ್ 8 ಕ್ಕೂ ಗದಗಿನಲ್ಲಿ ವಿದ್ಯಾರ್ಥಿ ಮೆರವಣಿಗೆಯಾಯಿತು. 26.1.43ರಂದು ವಿದ್ಯಾರ್ಥಿಗಳು ಹುಬ್ಬಳ್ಳಿಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಿದರು.

ಹಾವೇರಿಯಲ್ಲಿ ಸೆಪ್ಟೆಂಬರ್ 9 ಕ್ಕೂ ವಿದ್ಯಾರ್ಥಿಗಳು ಹರತಾಳ ಆಚರಿಸಿದರು. ಅಕ್ಟೋಬರ್ 2 ಕ್ಕೆ (ಗಾಂಧೀ ಜಯಂತಿ) ಮೆರವಣಿಗೆ ನಡೆಸಿದ 11 ವಿದ್ಯಾರ್ಥಿಗಳಿಗೆ ಶಿಕ್ಷೆಯಾಯಿತು. ಶಾಲಾ ದಾಖಲೆಗಳನ್ನು 15.2.43ರಂದು ಹಾವೇರಿಯಲ್ಲಿ ಸುಡಲಾಯಿತು. ಹಂಸಭಾವಿ ಶಾಲೆಯ ವಿದ್ಯಾರ್ಥಿಗಳೂ ಹಲವು ದಿನ ಮೆರವಣಿಗೆ, ಸಭೆ ನಡೆಸಿದರು. ಶಿಗ್ಗಾಂವಿಯಲ್ಲಿ ಸೆಪ್ಟೆಂಬರ್ 20 ಕ್ಕೆ ಪ್ರಭಾತ ಫೇರಿ ನಡೆಸಿದ್ದಕ್ಕೆ 16 ವಿದ್ಯಾರ್ಥಿಗಳನ್ನು ಬಂಧಿಸಿದರು. ಸೆಪ್ಟೆಂಬರ್ 27 ಕ್ಕೆ ಇದೇ ಕಾರಣಕ್ಕೆ ಮತ್ತೆ 16 ವಿದ್ಯಾರ್ಥಿಗಳನ್ನು ಕೈದು ಮಾಡಿದರು. ನರಗುಂದದಲ್ಲಿ ಸೆಪ್ಟೆಂಬರ್ 20 ರಂದು ವಿದ್ಯಾರ್ಥಿಗಳು ಪ್ರಭಾತಪೇರಿ ಮಾಡಿದರು. ಅದೇ ದಿನ ನವಲಗುಂದದಲ್ಲಿ ಪ್ರಭಾತಫೇರಿ ನಡೆಸಿದ್ದಕ್ಕೆ ಇಬ್ಬರನ್ನು ಬಂಧಿಸಿದರು (ಉಳಿದ ಊರುಗಳಲ್ಲೂ ಚಟುವಟಿಕೆಗಳು ನಡೆದಿದ್ದರೂ ಆ ಬಗ್ಗೆ ದಾಖಲೆಗಳು ದೊರೆತಿಲ್ಲ) ಸಂಸ್ಥಾನೀ ಪ್ರದೇಶದ ಕುಂದಗೋಳ, ಶಿರಹಟ್ಟಿ, ಲಕ್ಷ್ಮೇಶ್ವರಗಳಲ್ಲೂ ಮೊದಲ ಬಾರಿ ಚಳವಳಿ ನಡೆಯಿತು.

ಭೂಗತ ಚಳವಳಿಯ ಸ್ವರೂಪವೇ ಬೇರೆ. ಸೆಪ್ಟೆಂಬರ್ 15 ರಂದು ಒಂದೇ ರಾತ್ರಿ ಕ್ರಿಯಾಸಮಿತಿಯ ಸೂಚನೆಂತುಂತೆ ಧಾರವಾಡ ಜಿಲ್ಲೆಯ ಅಮರಗೋಳ ಹೆಬಸೂರು, ಕುಸುಗಲ್ ಮತ್ತು ಬ್ಯಾಡಗಿ ರೈಲು ನಿಲ್ದಾಣಗಳನ್ನು ಸುಡಲಾಯಿತು. ಮುಂಬೈ ರಾಜ್ಯದ ಪೋಲೀಸ್ ಇಲಾಖೆಯ ಪಾಕ್ಷಿಕ ಗುಪ್ತವರದಿ ಪ್ಯಾರಾ 925 ರಂತೆ, ರಾಜಕೀಯ ಉದ್ದೇಶಗಳಿಗಾಗಿ ಜನಜಂಗುಳಿ ನಡೆಸುತ್ತಿರುವ ಹಿಂಸಾಕೃತ್ಯಗಳು ಬೆಳಗಾವಿ, ಧಾರವಾಡ, ಕೆನರಾ (ಉತ್ತರ ಕನ್ನಡ) ಜಿಲ್ಲೆಗಳಿಂದ ವರದಿಯಾಗಿದೆ. (ಮುಂಬೈ ರಾಜ್ಯದ ಇತರ ಜಿಲ್ಲೆಗಳ ಹೆಸರು ಈ ವರದಿಯಲ್ಲಿ ಇಲ್ಲ, ಕರ್ನಾಟಕದ ಜಿಲ್ಲೆಗಳಲ್ಲೇ ಈ ಚಟುವಟಿಕೆ ಹೆಚ್ಚೆಂದು ಭಾವಿಸಬೇಕು). ಈ ವರದಿಯಲ್ಲಿ ಹೇಳಿದ ಘಟನೆಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಅಂಚೆ ರನ್ನರರಿಂದ ಅಂಚೆಚೀಲ ಅಪಹರಿಸಿದ (ಸೆಪ್ಟೆಂಬರ್ 30) ವರದಿ ಇದೆ. ವರದಿಯ 940ರ ನೇಯ ಪ್ಯಾರಾದಂತೆ ಸಿಡೇನೂರಬಳಿ ಅಕ್ಟೋಬರ್ 2 ರಂದು 80 ಜನರು ಬಸ್ ನಿಲ್ಲಿಸಿ ಮೇಲ್‌ಬ್ಯಾಗ್ ಅಪಹರಿಸಿದ್ದು, 50 ಜನರ ಗುಂಪು ರಟ್ಟೆಹಳ್ಳಿ ಪಿ.ಡಬ್ಲ್ಯುಡಿ. ಬಂಗ್ಲೆ ಸುಟ್ಟದ್ದು ವರದಿಯಾಗಿದೆ. ಅಕ್ಟೋಬರ್ 10 ರ ರಾತ್ರಿ ಮೊರಬ, ತಿರ್ಲಾಪುರ ಹಾಗೂ ಬ್ಯಾಹಟ್ಟಿ ಗ್ರಾಮಗಳ 200 ಜನರ ಗುಂಪು ಮೊರಬ ಹಂಗಾಮಿ ಪಟೇಲನ ಮನೆ ಮುಂದೆ ಸೇರಿ ಆತ ರಾಜೀನಾಮೆ ಕೊಡುವಂತೆ ಒತ್ತಾಯಿಸಿದರು. (ಹಿಂದಿನ ಪಟೇಲ ಸುಬ್ಬರಾವ್ ಮೊದಲೇ ಕಾಂಗ್ರೆಸ್ಸಿನ ಕರೆಯಂತೆ ರಾಜೀನಾಮೆ ನೀಡಿದ್ದರು). ವೆಂಕಟೇಶ ಮಾಗಡಿಯವರ ತಂಡ ಈ ಪ್ರದರ್ಶನ ಮಾಡಿದ್ದು ಅವರೇ ಸೆಪ್ಟೆಂಬರ್ 15 ಕ್ಕೆ ಅಮರಗೋಳಕ್ಕೆ ರೈಲು ನಿಲ್ದಾಣ, ಸೆಪ್ಟೆಂಬರ್ 22 ಕ್ಕೆ ಅಮ್ಮಿನಬಾವಿ ಬಂಗ್ಲೆ ಹಾಗೂ ಅಕ್ಟೋಬರ್ 30 ಕ್ಕೆ ಹುಲಕೋಟಿ ರೈಲು ನಿಲ್ದಾಣ ಇವುಗಳಿಗೆ ಕೊಳ್ಳೀ ಇಟ್ಟಿದ್ದರು. ಮೊರಬದಲ್ಲಿ ಸ್ವಾತಂತ್ರ್ಯ ಘೋಷಿಸಿ ಪೋಲೀಸರು ಬರದಂತೆ ರಸ್ತೆಗೆ ಅಡ್ಡಲಾಗಿ ಹೊಂಡ ತೋಡಿ ಅದನ್ನು ಖೆಡ್ಡಾದಂತೆ ಮುಚ್ಚಿದ್ದರು. ಪೋಲೀಸರು ಬೆದರಿ ತಗ್ಗು ಮೊರಬ ಎಂದು ಆ ಊರಿಗೆ ಅನ್ನುತ್ತಿದ್ದರು. ಆ ಊರಿನಿಂದಲೇ 124 ಜನ ಜೈಲು ಕಂಡು ಅಪಾರ ಕಷ್ಟನಷ್ಟ ಅನುಭವಿಸಿದರು.

ಅಕ್ಟೋಬರ್ 16 ರಿಂದ 22 ರ ನಡುವೆ ನಾಲ್ಕು ಅಂಚೆ ರನ್ನರರಿಂದ ಚೀಲ ಅಪಹರಿಸಿದ್ದು, ಶಿರಹಟ್ಟಿ ಬಳಿಯ ಮಾಗಡಿ ಬಳಿ 12 ಜನ ಬಸ್ ತಡೆದು ಮೇಲ್ ಬಸ್ ನಿಂದ ಅಂಚೆ ಚೀಲಗಳನ್ನು ಲೂಟಿ ಮಾಡಿದ್ದು, ಅದೇ ರೀತಿ ಹಾನಗಲ್ ಬಳಿ ಕ್ಯಾಲಕೊಂಡದಲ್ಲಿ ಮಾಡಿದ್ದು ವರದಿಯಾಗಿದೆ. ಹಿರೇಕೆರೂರ ಪೋಲೀಸ್ ಠಾಣೆಯ ವ್ಯಾಪ್ತಿಯ 15 ಗ್ರಾಮಗಳಿಂದ 130 ಜನ ವಿಧ್ವಂಸಕರನ್ನು ಅಕ್ಟೋಬರ್‌ನಲ್ಲಿ ಬಂಧಿಸಲಾಯಿತು. ಭೂಗತರ ಚಟುವಟಿಕೆ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಎಷ್ಟು ತೀವ್ರವಾಯಿತೆಂದರೆ, ಈ ಎರಡೂ ಜಿಲ್ಲೆಗಳಲ್ಲಿ ಚಳವಳಿ ನಿಯಂತ್ರಿಸಲು ಬಿಳಿಯ ಸೈನಿಕರನ್ನು ತರಬೇಕಾಯಿತು.

ನವೆಂಬರ್ 14 ರಿಂದ 19 ರ ವರೆಗೆ ಧಾರವಾಡ ಜಿಲ್ಲೆಯಲ್ಲಿ 1200 ಅಡಿ ತಂತಿ ಕತ್ತರಿಸಿದ್ದು 30 ತಂತಿ ಕಂಬಗಳನ್ನು ಹಾನಿ ಮಾಡಿದ್ದರು. ಇಂಥ ಘಟನೆಗಳು ಸಾಗಿಯೇ ಇದ್ದವು. ಡಿಸೆಂಬರ್ 29 ರಂದು 13 ಜನರ ಗುಂಪು ರಾಣೆಬೆನ್ನೂರು ಸ್ಟೇಶನ್ ಬಳಿ ರನ್ನರ್ ಮತ್ತು ಜೊತೆಗಿನ ಕಾನ್‌ಸ್ಟೇಬಲರಿಂದ ಹಾಡೇ ಹಗಲು ಅಂಚೆಚೀಲ, ಬಂದೂಕು ಕಸಿದುಕೊಂಡರು. 150 ಜನ ಇದನ್ನು ನೋಡುತ್ತ ಇದ್ದರೂ ಯಾರೂ ಇವರ (ಸರಕಾರೀ ನೌಕರರ) ನೆರವಿಗೆ ಬರಲಿಲ್ಲ, ಎಂದು ಸರಕಾರೀ ವರದಿ ಹೇಳುತ್ತದೆ. ಡಿಸೆಂಬರ್

12 ರಂದು ಪುಣೆ-ಹರಿಹರ, ಹಾಗೂ ಹುಬ್ಬಳ್ಳಿ-ಬಾಗಲಕೋಟೆ ನಡುವಿನ ಎಲ್ಲ ರೈಲ್ವೇ ಸ್ಟೇಶನ್‌ಗಳ ನಡುವಣ ತಂತಿ ಕತ್ತರಿಸುವ ಕ್ರಿಯಾಸಮಿತಿಯ ನಿರ್ಣಯ ಹಾಡೇಹಗಲೇ ಇಡೀ ಜಿಲ್ಲೆಯಲ್ಲಿ ಕಾರ್ಯರೂಪಕ್ಕೆ ಬಂತು.

ಡಿಸೆಂಬರ್, ಜನವರಿಗಳಲ್ಲಿ ತಡಸ, ಬೀರನಕೊಪ್ಪ, ನೆಲ್ಲಿಕೊಪ್ಪ, ಕುಮ್ಮೂರು, ಸುಂಕೊಪ್ಪ, ಮದನಬಾವಿ, ಯಾದವಾಡ, ಗರಗ, ಬೇಗೂರು, ಭಾವಿಹಾಳ್, ಕೋಟೂರು ವೆಂಕಟಾಪುರ ಮುಂತಾದ ಊರುಗಳ ಕುಲಕರ್ಣಿಗಳಿಂದ ಗ್ರಾಮದಫ್ತರ (ಕಂದಾಯ ದಾಖಲೆ) ಅಪಹರಿಸಿ ಸುಟ್ಟರು (ಕಂದಾಯ ವಸೂಲಿ ಸಾಧ್ಯವಾಗಬಾರದೆಂದು ಈ ಕ್ರಮ). ಹಿರೇಕೆರೂರು ತಾ॥ ಕಡೂರು, ಕುಡಪಲ್ಲಿ ಹಾಗೂ ಸೂಡಂಬಿ ಊರುಗಳು ಮೇಲೆ 4,000 ರೂ. ಪುಂಡುಗಂದಾಯ ಹಾಕಿದರು (ಸಂಯುಕ್ತ ಕರ್ನಾಟಕ, ಜನವರಿ 12 ರ ವರದಿ).

1943ರ ಜನವರಿ 26 ರಂದು ಸ್ವಾತಂತ್ರ್ಯ ದಿನ ಎಂದು ಎಲ್ಲ ಪಟ್ಟಣಗಳಲ್ಲಿ ಮೆರವಣಿಗೆ ಇತ್ಯಾದಿ ನಡೆದುವಲ್ಲದೆ ವಿಧ್ವಂಸಕ ಕೃತ್ಯಗಳೂ ಅಪಾರವಾಗಿ ಆದವು.

ಜನವರಿ 28 ರಂದು ಅಮಿನ್ನಭಾವಿ, ಗುಡಿಸಾಗರ, ಖನ್ನೂರು, ಕೆಲವಡಿಗಳ ಗ್ರಾಮಚಾವಡಿ ಸುಟ್ಟರು. ಹೊಂಬಳ, ಮಂಗಳಗಟ್ಟಿ, ಬೆಳವಣಿಕಿ, ಯಾವಗಲ್, ಗುಮ್ಮಗೋಳ, ಶಿರೂರ, ಬ್ಯಾಲಾಳ, ಜೇವೂರುಗಳ ಚಾವಡಿಗಳನ್ನು ಜನವರಿ 28 ರಿಂದ 31 ರ ನಡುವೆ ಸುಟ್ಟರು. ಫೆಬ್ರವರಿ ಆರಂಭಕ್ಕೆ ಹಾರೋಬೆಳವಡಿ, ಬ್ಯಾಹಟ್ಟಿ, ಮೊರಬ ಚಾವಡಿ ಸುಟ್ಟರು. ದಕ್ಷಿಣದ ಹಿರೇಕೆರೂರು ತಾಲೂಕಿನಲ್ಲಿ 16 ಊರ ಚಾವಡಿ ಸುಟ್ಟರು.

ಇದೇ ರೀತಿ ಗ್ರಾಮರಕ್ಷಕರ (ತಳಾರ, ಪಟೀಲ) ಶಸ್ತ್ರಾಸ್ತ್ರ ಕಸಿಯುವ ಕೆಲಸ ಕೈಗೊಂಡರು. ಆಗ ಸಾಂಗ್ಲಿಸಂಸ್ಥಾನದಲ್ಲಿ ಇದ್ದ ದೊಡ್ಡವಾಡದ ಚಾವಡಿಯನ್ನು 200 ಜನ ಸುತ್ತುವರಿದು ದಫ್ತರ್ ಸುಟ್ಟು ಎರಡು ಬಂದೂಕು, 1000 ರೂ. ನಗದು ಅಪಹರಿಸಿದರು. ಹೊನ್ನಾಪುರದಿಂದ ಎರಡು, ತೇಗೂರಿನಿಂದ ಎರಡು ಬಂದೂಕು ಅಪಹರಿಸಿ ತೇಗೂರಿನ ಡಾಕ್ ಬಂಗ್ಲೆ ಸುಟ್ಟರು. ಇವು ಕೆಲವೇ ಉದಾಹರಣೆಗಳು. ಜನವರಿ ಕೊನೆಯ ವಾರದಲ್ಲಿ ಜೀರಿಗೆವಾಡ, ಹೂಲಿಕೇರಿ, ಕ್ಯಾರಕೊಪ್ಪ, ತಡಕೋಡ (ಇಲ್ಲಿದ್ದ ನಾಲ್ಕು ಗ್ರಾಮಗಳ) ದಫ್ತರ ಸುಟ್ಟರು. ಅದೇ ರೀತಿ ಉಪ್ಪಿನ ಬೆಟಗೇರಿ, ತೇಗೂರು, ಮುಗಳಿ, ಅಮಿನ್ನಬಾವಿ (ಇಲ್ಲಿದ್ದ ಐದು ಊರಿನ)ಗಳ ದಾಖಲೆಗಳ ದಹನ ಮಾಡಿದರು. ಫೆಬ್ರವರಿಯಲ್ಲಿ ಕೊಗ್ನೋಳಿ, ಉಡಿಕೇರಿ, ತೇಗೂರು, ತಡಕೋಡ, ಕಾಗಿನೆಲ್ಲಿ (ಹಾಗೂ ಹಿರೇಕೆರೂರು ತಾ॥ ನ ಅನೇಕ ಗ್ರಾಮಗಳ) ದಫ್ತರ ಭಸ್ಮವಾದವು. ಬ್ಯಾಹಟ್ಟಿಯ ಚಾವಡಿ, ದಫ್ತರ, ಸೇಂದಿ ಅಂಗಡಿ, ಬಂಗ್ಲೆ ಇವೆಲ್ಲವೂ ಫೆಬ್ರವರಿ ಆರಂಭಕ್ಕೆ ಅಗ್ನಿಗಾಹುತಿಯಾದವು. ದೇಶದಲ್ಲಿ ಎಲ್ಲೆಡೆ ನಡೆದ ವಿಧ್ವಂಸಕ ಕಾರ್ಯಗಳ ವರದಿ ತಿಳಿದು ಜೈಲಿನಲ್ಲಿದ್ದ ಗಾಂಧೀಜಿಗೆ ಫೆಬ್ರವರಿ 10 ರಿಂದ ಪುಣೆಯಲ್ಲಿ ಉಪವಾಸ ಮಾಡಿದರು. ಇದರ ವರದಿ ಭೂಗತರಿಗೆ ತಿಳಿದರೂ ಉಪವಾಸದ ಕಾರಣ ತಿಳಿಯದೆ ಚಟುವಟಿಕೆಗಳನ್ನು ಹಾಗೆಯೇ ಮುಂದುವರಿಸಿದರು. ಮಹಾತ್ಮರ ಆರೋಗ್ಯಕ್ಕಾಗಿ ಅನೇಕ ಊರುಗಳಲ್ಲಿ (ಧಾರವಾಡ, ಗದಗ, ಹಾವೇರಿ ಇತ್ಯಾದಿ) ಬಹಿರಂಗ ಪ್ರಾರ್ಥನಾ ಸಭೆಗಳಾದವು.

**ಹುತಾತ್ಮರು**

ಪೋಲೀಸರನ್ನೂ ಸರಕಾರೀ ನೌಕರರನ್ನೂ ಬೆದರಿಸಲು ಪಿಸ್ತೂಲು, ಕೈಬಾಂಬು (ಗ್ರೆನೇಡ್)ಗಳನ್ನು ಸ್ವಾತಂತ್ರ್ಯಯೋಧರು ಹೊಂದಿದ್ದರೂ ಯಾರಿಗೂ ಪ್ರಾಣಹಾನಿ ಮಾಡಿದವರಲ್ಲ. (ಜಿಲ್ಲೆಯಲ್ಲಿ ಅಂಥ ಒಂದೂ ಪ್ರಕರಣವಿಲ್ಲ). ಸುಣಕಲ್ ಬಿದರಿ ಗ್ರಾಮದಲ್ಲಿ ಹೊಲದಲ್ಲಿ ಹೂತಿಟ್ಟ ಕೈಬಾಂಬ್‌ಗಳನ್ನು ತೆಗೆಯುವಾಗ ಸ್ಫೋಟವಾಗಿ ಕರಿಯಪ್ಪ ಯರೇಶಿಮೆಯವರ ಕೈಗೆ ಗಾಯವಾಗಿ ದಾವಣಗೆರೆಯಲ್ಲಿ ಚಿಕಿತ್ಸೆ ಪಡೆಯುತ್ತಿರಲು ಅವರ ಅಂಗೈ ಕತ್ತರಿಸಬೇಕಾಯಿತು (ಜನವರಿ, 1943). ಕುಪ್ಪೇಲೂರಲ್ಲಿ ಗ್ರಾಮಚಾವಡಿಯಲ್ಲಿ ಸಂಗ್ರಹಿಸಿಟ್ಟ ಕಂದಾಯವನ್ನು ಅಪಹರಿಸಲು ಯತ್ನಿಸುವಾಗ (ಫೆ.10) ರಾತ್ರಿ ಮೆಣಸಿನಕಾಳು ತಿಮ್ಮನಗೌಡರು ಪೋಲೀಸರ ಜೊತೆ ಘಾಸಾಘಾಸಿ ನಡೆಯಬೇಕಾಗಿ ಬರಲು ಬಗಲ ಚೀಲದಲ್ಲಿ ಇಟ್ಟಿದ್ದ ಕೈಬಾಂಬು ಸಿಡಿದು ತೀವ್ರ ಗಾಯಗೊಂಡರು. ಮುಂದೆ ಸರಿಯಾದ ಚಿಕಿತ್ಸೆ ಪಡೆಯಲಾರದೆ ಧನುರ್ವಾತವಾಗಿ ಭೂಗತರಾಗಿದ್ದಾಗಲೇ ತೀರಿಕೊಂಡರು.

ಏಪ್ರಿಲ್ 1 ಕ್ಕೆ (1943) ಹೊಸರಿತ್ತಿ ಊರ ವೀರಭದ್ರ ದೇವಸ್ಥಾನದಲ್ಲಿ ಸಂಗ್ರಹಿಸಿಟ್ಟ ಕಂದಾಯದ ಅಪಹರಣಕ್ಕೆ ಯತ್ನಿಸಿ ಮೈಲಾರ ಮಹಾದೇವಪ್ಪ, ತಿರುಕಪ್ಪ ಮಡಿವಾಳರ ಹಾಗೂ ವೀರಪ್ಪ ಕಮತರ ಪೋಲೀಸರ ಗುಂಡಿಗೆ ಬಲಿಯಾದರು. ತಮ್ಮಲ್ಲಿ

ಪೋಲೀಸರಿಂದ ಕಸಿದ ಬಂದೂಕುಗಳಿದ್ದರೂ ಹಾಗೂ ಪೋಲೀಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಜೊತೆಗಾರರಿದ್ದರೂ ಬಾಯೊನೆಟ್ ತಿವಿತದಿಂದ ಗಾಯಗೊಂಡ ಮೈಲಾರರು ತನ್ನ ಜೊತೆಗಾರರು ಪೋಲೀಸರ ಮೇಲೆ ಗುಂಡು ಹಾರಿಸಬಾರದೆಂದು ತೀವ್ರವಾಗಿ ಆಜ್ಞಾಪಿಸಿ, ಅವರನ್ನು ತಡೆದು ಪ್ರಾಣ ನೀಗಿದರು.

ಗುಪ್ತ ಮತ್ತು ಪ್ರಕಟ ಚಳವಳಿ ಮುಂದೆಯೂ ಸಾಗಿತು. ನೂರಾರು ಜನರನ್ನು ಧಾರವಾಡ ಜಿಲ್ಲೆಯಲ್ಲಿ ಬಂಧಿಸಿದರು. ಭೂಗತರಾದವರು ಶರಣಾಗಲೆಂದು ಒತ್ತಾಯ ತರಲು ಅವರುಗಳ ತಂದೆ, ತಾಯಿ, ಹೆಂಡತಿ, ಮಕ್ಕಳನ್ನೂ ಬಂಧಿಸಿದ್ದರು. ಮೈಲಾರರ ಮುದಿ ತಂದೆ ತಾಯಿಯರನ್ನು ಬಂಧಿಸಿಟ್ಟಿದ್ದರು. ತಿಮ್ಮಣ್ಣಗೌಡರ ತಂದೆ, ತಾಯಿ, ಹೆಂಡತಿ, ಎಳೆ ಇಬ್ಬರು ಮಕ್ಕಳನ್ನೂ ಕೈದು ಮಾಡಿದ್ದರು. ಮಹಮ್ಮದ್ ಗೌಸ್ ಎಂಬುವರ ತಾಯಿ, ಸೋದರಿ ಮುಂತಾದ ಸಂಬಂಧಿಕರನ್ನು ಹಾಗೆಯೇ ಬಂಧಿಸಿದ್ದರು. ಗೋರೇಸಾಬ ನಧಾಫ (ಬ್ಯಾಹಟ್ಟಿ) ಇವರ ತಾಯಿ, ತಂಗಿ, ಅಣ್ಣಂದಿರನ್ನು ಸ್ಥಾನಬದ್ಧರಾಗಿ ಮಾಡಿದರು.

ಗಾಂಧೀಜಿಯ ಇಚ್ಛೆಯಂತೆ ಭೂಗತ ಚಳವಳಿ ನಿಲ್ಲಿಸಲು ಕ್ರಿಯಾಸಮಿತಿ ಸೂಚಿಸಿತು. 1944 ರ ಜನವರಿ 26 ಕ್ಕೆ ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ತ್ರಿವರ್ಣ ಧ್ವಜ ಹಾರಿಸಿದರು. ತಿರ್ಲಾಪುರ ಮತ್ತು ಬ್ಯಾಲಿಹಾಳದಿಂದ ಮಹಿಳೆಯರ ಎರಡು ಗುಂಪುಗಳು ಅದೇ ದಿನ ಮೆರವಣಿಗೆಯಲ್ಲಿ ಧಾರವಾಡಕ್ಕೆ ಬಂದು ಬಂಧಿತರಾದರು. ರೋಣದಲ್ಲಿ ಶಿವಪ್ಪ ನೆಲ್ಲೂರ ಹಾಗೂ ಆರು ಜನ ಮೆರವಣಿಗೆ ನಡೆಸಿ ಬಂಧಿತರಾದರು. ಏಪ್ರಿಲ್ 13 ರಿಂದ ರಾಷ್ಟ್ರೀಯ ಸಪ್ತಾಹಕ್ಕೆ ಕರೆಕೊಟ್ಟಂತೆ ಜಿಲ್ಲೆಯಲ್ಲಿ ಹಲವೆಡೆ ಬೇರೆ ಬೇರೆ ಸ್ವರೂಪದ ಕಾರ್ಯಕ್ರಮಗಳಾದವು. ಮುಂದೆ ಆಗಸ್ಟ್ 9 ರಂದು ದಿವಾಕರರು ಹುಬ್ಬಳ್ಳಿಯಲ್ಲಿ ಪೋಲೀಸರಿಗೆ ಶರಣಾಗತರಾದರು. ಚನ್ನಬಸಪ್ಪ ಅಂಬಲಿ ವಿಜಾಪುರದಲ್ಲಿ ಅದೇ ದಿನ ಪೋಲೀಸರಿಗೆ ಶರಣಾದರು. ಅಲ್ಲಿಗೆ ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳವಳಿಗೆ ತೆರೆಬಿತ್ತು. ಧಾರವಾಡ ಜಿಲ್ಲೆಯಲ್ಲಿ 2000 ಜನರನ್ನಾದರೂ ಸರಕಾರ ಬಂಧಿಸಿರಬೇಕು. ಜೈಲಿನಲ್ಲಿ (ಹಿಂಡಲಗಿ, ವಿಸಾಪುರ ಇತ್ಯಾದಿ) ಕಾಲರಾ ಮುಂತಾದ ಪೀಡೆಗಳಿಂದ ಹಲವರು ಸತ್ತರು. ಆದರೆ ಹಿಂದೆಂದೂ ಆಗದಂಥ ಚಳವಳಿ ನಡೆದು ಸರಕಾರವನ್ನು ನಡುಗಿಸಿತು. ಇಡೀ ಕರ್ನಾಟಕದಲ್ಲೂ ಮುಂಬೈ ರಾಜ್ಯದಲ್ಲೂ ಬೆಳಗಾವಿ ಜಿಲ್ಲೆಯ ನಂತರ ಧಾರವಾಡದಲ್ಲೇ ಚಳವಳಿ ಉಗ್ರವಾಗಿತ್ತು. ಕರ್ನಾಟಕ ಪ್ಯಾಟರ್ನ್ ಎಂದು ಪರಿಚಿತವಾದ ಸುಸಂಘಟಿತ ಉಗ್ರ ಭೂಗತ ಚಳವಳು 1942-43 ರಲ್ಲಿ ನಡೆದುದು ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ. ಆಗ ದಿವಾಕರರು ಮೊದಲು ಅರುಣಾ ಅಸಫ್ ಅಲಿ ಅವರ ನಾಯಕತ್ವದ ಅಖಿಲಭಾರತ ಸಮಿತಿ, ಮುಂದೆ ಸುಚೇತಾ ಕೃಪಲಾನಿ ಅವರ ನೇತೃತ್ವದ ಅ.ಭಾ ಸತ್ಯಾಗ್ರಹ ಸಮಿತಿಯ ಸದಸ್ಯರೂ ಆಗಿದ್ದರು. ಬಹುಪಾಲು ಮುಖ್ಯ ನಾಯಕರು 1945 ರವರೆಗೂ ಜೈಲಿನಲ್ಲಿ ಇದ್ದರು. (ಮೇಲೆ ಹೇಳಿದ 'ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ' ಇದಕ್ಕೆಲ್ಲ ಆಧಾರ).

### ಸಂಸ್ಥಾನದ ಪ್ರದೇಶಗಳು

ಧಾರವಾಡ ಜಿಲ್ಲೆಯ ಸಂಸ್ಥಾನದ ಪ್ರದೇಶಗಳಲ್ಲೂ (ಸಾಂಗಲಿ, ಕಿರೇಮಿರ್ಜಿ, ಮಿರ್ಜಿ, ಜಮಖಂಡಿಗೆ ಸೇರಿದವು) ಪ್ರಜಾ ಸಂಸ್ಥೆಗಳೆಂಬ ಹೆಸರಿನ ಕಾಂಗ್ರೆಸ್ ವಿಚಾರಗಳಿಂದ ಪ್ರೇರಿತವಾದ ಸಂಸ್ಥೆಗಳು ಇದ್ದವು. ಸಾಂಗಲಿ ಸಂಸ್ಥಾನದ ಭಾಗವಾದ ಶಿರಹಟ್ಟಿಯಲ್ಲಿ ಅಶ್ವತ್ಥರಾವ್ ಮಹಿಷಿಯೆಂಬ ಟಿಳಕರ ಸಹಪಾಠಿಗಳು ಇದರ ನೇತೃತ್ವ ವಹಿಸಿದ್ದರು. ಶ್ರೀನಿವಾಸರಾವ್ ಮಾಗಡಿ, ಭೋರಶೆಟ್ಟಿ ಇತರ ನಾಯಕರು. ಶಿಗ್ಗಿಯಲ್ಲಿ ಬಸವಕುಮಾರ ಮುಳಗುಂದಮಠ ಇದರ ಶಾಖೆಯನ್ನು ನೋಡಿಕೊಳ್ಳುತ್ತಿದ್ದರು. 1939ರಲ್ಲಿ ಈ ಭಾಗದಲ್ಲಿ ಬೆಳೆಗೇಡಾದಾಗ ಕಂದಾಯ ವಿನಾಯತಿಗೆ ಯಶಸ್ವೀ ಚಳವಳಿಯಾಯಿತು.

ಜಮಖಂಡಿಯ ಭಾಗವಾದ ಕುಂದಗೋಳದಲ್ಲಿ 1938-39 ರ ಸುಮಾರಿಗೆ ದಿವಾಕರರ ಬೆಂಬಲದಿಂದ ಜನ ಚಳವಳಿ ನಡೆಸಿದರು. ಕರನಿರಾಕರಣೆಗೆ ಸಜ್ಜಾದರು. ಮುಂದೆ ಅಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಗಳು ಬಲವಾದವು.

1938ರಲ್ಲಿ ಮೀರಜ್ ಸಂಸ್ಥಾನಕ್ಕೆ ಸಂಬಂಧಿಸಿದ ಲಕ್ಷ್ಮೇಶ್ವರ ತಾಲೂಕಿನಲ್ಲಿ ಕಂದಾಯ ಹೆಚ್ಚಿಸಿದಾಗ ಈ ಬಗ್ಗೆ ದಕ್ಷಿಣ ಸಂಸ್ಥಾನಗಳ ಪ್ರಜಾ ಸಮ್ಮೇಳನ ಸಾಂಗ್ಲಿಯಲ್ಲಿ ನಡೆದಿರಲು ಆಗ ಗಂಗಾಧರರಾಮ್ ದೇಶಪಾಂಡೆ ಅವರ ನೇತೃತ್ವದಲ್ಲಿ ಒಂದು ಸಮಿತಿ ನೇಮಿಸಲಾಯಿತು. ಈ ಸಮಿತಿಯ ವರದಿಯಂತೆ ಶೇ.20 ರಷ್ಟು ಕಂದಾಯ ರಿಯಾಯತಿ ನೀಡಿದರು. ಈ ಎಲ್ಲ ಸಂಸ್ಥಾನೀ ಪ್ರದೇಶಗಳಲ್ಲಿ ಕಾಂಗ್ರೆಸ್ಸಿನ ಪ್ರೇರಣೆಯಿಂದ ಜನಜಾಗೃತಿ ಆಗಿತ್ತು. 1942 ರ ಚಳವಳಿಯಲ್ಲಿ ಸಂಸ್ಥಾನೀ ಪ್ರದೇಶದ ಜನ ಪಾಲುಗೊಂಡಿದ್ದರು. ಈ ಭಾಗದಲ್ಲಿ ಸವಣೂರು ರೈಲು ನಿಲ್ದಾಣವನ್ನು ಆ ಕಾಲದಲ್ಲಿ ಸುಡಲಾಗಿತ್ತು.

1937 ರಲ್ಲಿ ಮುಂಬೈ ರಾಜ್ಯದ ಪ್ರಾದೇಶಿಕ ವಿಶ್ವವಿದ್ಯಾಲಯಗಳಿರಬೇಕು ಠರಾವನ್ನು ವಿಧಾನ ಪರಿಷತ್ತಿನಲ್ಲಿ ಡಾ॥ ಮಹಾಜನಿ ಮಂಜೂರು ಮಾಡಿಸಿದ್ದರು. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿಸಲು ಚಳವಳಿಯಾಯಿತು. 1940-41ರಲ್ಲಿ ಈ ಪ್ರಯತ್ನವಾಗಿ ಎಸ್.ಎಸ್. ಬಸವನಾಳರ ಅಧ್ಯಕ್ಷತೆಯಲ್ಲಿ ಸಮಿತಿ ಸ್ಥಾಪಿಸಿದರು. ಸಾಹಿತಿ ಶ್ರೀರಂಗ ಅದರ ಸಂಚಾಲಕರಾಗಿದ್ದರು. ಜಸ್ಟೀಸ್ ಲೋಕೂರರ ಅಧ್ಯಕ್ಷತೆ ಈ ಬಗ್ಗೆ ಸರಕಾರ ನೇಮಿಸಿದ ಸಮಿತಿಗೆ ಧಾರವಾಡದ ಸ್ಥಳೀಯ ಸಮಿತಿ ಸೂಕ್ತ ಮಾಹಿತಿ ಒದಗಿಸಿತ್ತು. ಅದರಂತೆ 1949 ರಲ್ಲಿ ಮಸೂದೆ ಮಂಜೂರಾಗಿ ಆರ್.ಎ. ಜಾಗಿರ್ದಾರ ಎಂಬ ವಕೀಲರು ಉಪಕುಲಪತಿಯೆಂದು ನೇಮಿಸಿ ಕರ್ನಾಟಕ ವಿಶ್ವವಿದ್ಯಾಲಯವು 1949 ರಲ್ಲಿ ಮುಂಬೈಯಲ್ಲಿ ಕಚೇರಿ ತೆರೆದ ಅಸ್ತಿತ್ವಕ್ಕೆ ಬಂತು. 1950 ರ ಮಾರ್ಚ್ 31 ಕ್ಕೆ ಧಾರವಾಡದಲ್ಲಿ ಕಾರ್ಯಾರಂಭ ಮಾಡಿತು. ಇದಕ್ಕೆ ಆಗ 14 ಕಾಲೇಜುಗಳು ಸುಲಗ್ನವಾಗಿ, 1947 ರಲ್ಲಿ ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕೃಷಿ ವಿದ್ಯಾಲಯವೂ ಅದರಲ್ಲಿ ಸೇರಿತ್ತು. ಅದೇ ರೀತಿ 1950 ರಲ್ಲಿ ಧಾರವಾಡದಲ್ಲಿ ಆಕಾಶವಾಣಿ ಪ್ರಸಾರ ಕೇಂದ್ರ ಆರಂಭವಾಯಿತು. ಆಗ ಕೇಂದ್ರ ಮಂತ್ರಿಗಳಾಗಿದ್ದ ದಿವಾಕರರು ಇದಕ್ಕೆ ಶ್ರಮಿಸಿದರು.

1946 ರಲ್ಲಿ ವಿಧಾನ ಸಭೆಗೆ ಚುನಾವಣೆಗಳಾದಾಗ ಧಾರವಾಡ ಜಿಲ್ಲೆಯಿಂದ ಆರಿಸಿ ಬಂದ ಎಲ್ಲ ಕಾಂಗ್ರೆಸ್ ಶಾಸಕರಲ್ಲಿ ಕೆ.ಎಫ್. ಪಾಟೀಲರು ಮುಂಬೈ ಸರಕಾರದಲ್ಲಿ ಕೃಷಿ ಹಾಗೂ ಅರಣ್ಯ ಇಲಾಖಾ ಪಾರ್ಲಿಮೆಂಟರಿ ಸೆಕ್ರೆಟರಿ ಆದರು. ಇದೇ ಕಾಲಕ್ಕೆ ನೇಸ್ವಿಯವರು ನವಯುಗ (1947) ದಿನಪತ್ರಿಕೆಯನ್ನು ಹುಬ್ಬಳ್ಳಿಯಿಂದ ಆರಂಭಿಸಿದರು. ಧಾರವಾಡವಲ್ಲಿ ಜಠಾರರು ನಡೆಸುತ್ತಿದ್ದ ವಿಶಾಲ ಕರ್ನಾಟಕವನ್ನು ಖರೀದಿಸಿ ಕೆ.ಎಫ್. ಪಾಟೀಲರು ಹುಬ್ಬಳ್ಳಿಯಿಂದ ಈ ದಿನಪತ್ರಿಕೆ ಆರಂಭಿಸಿದರು. ಪಾಟೀಲ ಪುಟ್ಟಪ್ಪ ಈ ಪತ್ರಿಕೆಯ ಸಂಪಾದಕರು.

ಹೈದರಾಬಾದ್ ನಿಜಾಮನಿಗೆ ಸೇರಿದ ಕೆಲವು ಪ್ರದೇಶಗಳು (ಇಟಗಿ ಮುಂತಾದ 12 ಹಳ್ಳಿಗಳು) ರೋಣ ತಾಲೂಕಿನಿಂದ ಸುತ್ತುವರಿದಿದ್ದು 1947 ರಲ್ಲಿ ಅವುಗಳನ್ನು ಹೈದರಾಬಾದ್‌ನ ಸ್ವಯಂಸೇವಕರೂ ಸ್ಥಳೀಯ ಕಾಂಗ್ರೆಸ್ಸಿಗರೂ ಮೊದಲೇ ಸ್ವತಂತ್ರಗೊಳಿಸಿದರು. ಗಡಿರಕ್ಷಣೆ ಮತ್ತು ಗಡಿಗ್ರಾಮಗಳ ಜನರ ರಕ್ಷಣೆಗೆ ಮುಂಡರಗಿಯಲ್ಲಿ ಒಂದು ಶಿಬಿರವಿತ್ತು. ಶಿವಮೂರ್ತಿ ಸ್ವಾಮಿ ಅಳವಂಡಿ ಇದರ ಪ್ರಮುಖರು. ಸಂಸ್ಥಾನದಲ್ಲಿದ್ದ ಕನ್ನಡ ಜಿಲ್ಲೆಗಳ ಪರ ಚಳವಳಿಗೆ ಮಾರ್ಗದರ್ಶನ ನೀಡಲು ಗದಗಿನಲ್ಲಿ ಒಂದು ಕಛೇರಿಯು ಗರುಡ ಸದಾಶಿವರಾಯರ ಮನೆಯಲ್ಲಿ ಇದ್ದು ಹೈದರಾಬಾದ್ ನಾಯಕ ಜನಾರ್ದನರಾವ್ ದೇಸಾಯಿ ಅಲ್ಲೇ ಇರುತ್ತಿದ್ದರು. ಗಡಿ ಪ್ರದೇಶದಿಂದ ಗುಳೇ ಬಂದ ಜನರಿಗೆ ಅನ್ನಾಹಾರ ಒದಗಿಸುವಲ್ಲಿ ಬಸರೀಗಿಡದ ವೀರಪ್ಪ ಗದಗಿನಲ್ಲಿ ಭಾರೀ ವ್ಯವಸ್ಥೆ ಮಾಡಿದ್ದರು. ಹಳ್ಳೀಕೇರಿ ಎಂಬ ಊರಲ್ಲಿ ಇನ್ನೊಂದು ಶಿಬಿರವಿತ್ತು. ಸೆಪ್ಟೆಂಬರ್ 1948 ರ ಪೋಲೀಸ್ ಕಾರ್ಯಾಚರಣೆವರೆಗೆ ಈ ಚಟುವಟಿಕೆ ಸಾಗಿತು. 1950 ರಲ್ಲಿ ಯಲಬುರ್ಗಿ ತಾಲೂಕಿನಲ್ಲಿ ಇದ್ದ ಈ 12 ಹಳ್ಳಿಗಳನ್ನು ರೋಣ ತಾಲೂಕಿಗೆ ಸೇರಿಸಿದರು. (ಹಳ್ಳಿಗಳ ಹೆಸರು: ಇಟಗಿ, ಗುಳಗುಳಿ, ಹಿರೇ ಅಳಗುಂಡಿ, ಚಿಕ್ಕ ಅಳಗುಂಡಿ, ಶಾಂತಗಿರಿ, ಬೊಮ್ಮಸಾಗರ, ಗುಡ್ಡದ ಮಲ್ಲಾಪುರ, ಸರಜಾಪುರ, ಬಿಳಗೋಡ, ಹೊನ್ನಿಗನೂರು, ತಳ್ಳೀಹಾಳ, ಮುಗಳಿ ಮತ್ತು ಯರೇಕುರುಬನಹಾಳ).

## ಏಕೀಕರಣ ಚಳವಳಿ

ಏಕೀಕರಣ ಚಳವಳಿಯನ್ನು ಹುಟ್ಟುಹಾಕಿದ್ದು ಧಾರವಾಡ ಜಿಲ್ಲೆಯೇ; ಆಲೂರರೇ ಇದರ ಕಾರಣ ಪುರುಷರು. 1928 ರಲ್ಲಿ ಮೋತಿಲಾಲ್ ನೆಹರೂ ಸಮಿತಿಯನ್ನು ಕಾಂಗ್ರೆಸ್ ಭಾರತದ ಸಂವಿಧಾನ ರಚಿಸಲು ನೇಮಿಸಿತು. ಏಕೀಕರಣದ ಪರ 30,000 ಜನರ ಹಸ್ತಾಕ್ಷರವನ್ನು ಡಾ॥ ಹರ್ಡೀಕರರ ಸೇವಾದಳದ ನೆರವಿನಿಂದ ಸಂಗ್ರಹಿಸಿ ದಿವಾಕರರು ಆ ಸಮಿತಿ ಮುಂದೆ ಸಾಕ್ಷ್ಯ ಹೇಳಿದರು. 'ಎ ಕೇಸ್ ಫಾರ್ ಯುನೈಟೆಡ್ ಕರ್ನಾಟಕ' ಎಂಬ ಪುಸ್ತಕವನ್ನು ದಿವಾಕರರು ಬರೆದರು. ನೆಹರೂ ಕಮಿಟಿಯು ಕರ್ನಾಟಕ ಏಕೀಕರಣವು ಕಾರ್ಯಸಾಧ್ಯವೆಂದು ಒಪ್ಪಿ ವರದಿ ಬರೆಯಿತು. ಸೈಮನ್ ಕಮಿಶನ್ ಕೂಡ ಭಾಷಾವಾರು ಕಲ್ಪನೆಯನ್ನು ಒಪ್ಪಿತ್ತು. ಆದರೆ ಕರ್ನಾಟಕದ ಕಾಂಗ್ರೆಸ್ ಈ ಬಗ್ಗೆ ಈ ಆಯೋಗಕ್ಕೆ ಯಾವುದೇ ಮನವಿ ಸಲ್ಲಿಸಲಿಲ್ಲ. ಕಾಂಗ್ರೆಸ್ಸೇತರರಿಗೂ ವರದಿ ಸಲ್ಲಿಸದಂತೆ ಒತ್ತಾಯ ತಂದಿತು. ಇದರಿಂದ ಬಹುಶಃ ಆಯೋಗವು ಆಗಲೇ ಒಪ್ಪಬಹುದಾದ ಏಕೀಕರಣಕ್ಕೆ ವಿಳಂಬವಾಯಿತು. ಆರನೇಯ ಏಕೀಕರಣ ಸಮ್ಮೇಳನವು ಧಾರವಾಡದಲ್ಲಿ 1936 ರಲ್ಲಿ ದತ್ತೋಪಂತ ಬೆಳವಿ ಅವರ ಅಧ್ಯಕ್ಷತೆಯಲ್ಲಿ ಆಯಿತು.

ಫೆಡರಲ್ ಕಾನೂನು (1935) ಜಾರಿಗೆ ಬಂದು ಪ್ರಾಂತೀಯ ಸ್ವಾಯತ್ತತೆಗೆ ಅವಕಾಶ ಸಿಕ್ಕಾಗ ಈ ಚಳವಳಿಗೆ ಇನ್ನೂ ಬಲ ಬಂತು. 1937ರ ಚುನಾವಣಾ ಘೋಷಣೆಯಲ್ಲಿ ಏಕೀಕರಣ ತನ್ನ ಗುರಿಯೆಂದು ಕಾಂಗ್ರೆಸ್ ಸಾರಿತು. 1938ರಲ್ಲಿ ವಿಶ್ವನಾಥರಾವ್ ಜೋಗ ಅವರು ಏಕೀಕರಣ ಪರ ಠರಾವನ್ನು ವಿಧಾನ ಸಭೆ (ಮುಂಬೈ)ಯಲ್ಲಿ ಮಂಜೂರು ಮಾಡಿಸಿದರು. ಕ್ವಿಟ್ ಇಂಡಿಯಾ ಚಳವಳಿ ಕಾಲಕ್ಕೆ ಕಾಂಗ್ರೆಸ್ ನಾಯಕರೆಲ್ಲ ಜೈಲಿಗೆ ಹೋಗಿರಲು ಮುಂದೆ 1944 ರಲ್ಲಿ ಧಾರವಾಡದಲ್ಲೇ ಒಂಬತ್ತನೇಯ ಏಕೀಕರಣ ಸಮ್ಮೇಳನವಾಯಿತು. ಮಳೀಮಠ ವಕೀಲರು ಸ್ವಾಗತಾಧ್ಯಕ್ಷರಾಗಿ ಶ್ರೀರಂಗರು ಮುಖ್ಯ ಸಂಚಾಲಕರಾಗಿ ದುಡಿದರು. ಕೆ.ಬಿ. ಜಿನರಾಜ ಹೆಗ್ಡೆ ಸಮ್ಮೇಳನಾಧ್ಯಕ್ಷರು. ಏಕೀಕರಣಕ್ಕಾಗಿ ದುಡಿಯಲು ಅಖಿಲ ಕರ್ನಾಟಕ ಏಕೀಕರಣ ಸಂಘವನ್ನು ಪುನರ್ಘಟಿಸಲು ಜಿನರಾಜ ಹೆಗ್ಡೆ ಅಧ್ಯಕ್ಷರೂ ಶ್ರೀರಂಗರು ಉಪಾಧ್ಯಕ್ಷರಲ್ಲಿ ಒಬ್ಬರೂ ಆದರು. ಎಲ್ಲೆಡೆ ಇದರ ಶಾಖೆಗಳನ್ನು ತೆರೆದರು. ಶ್ರೀರಂಗರು ಏಕೀಕರಣಕ್ಕಾಗಿ ಎಲ್ಲೆಡೆ ಸಂಚಾರ, ಭಾಷಣ ಮಾಡಿದರು.

1946 ರಲ್ಲಿ ಮುಂಬೈಯಲ್ಲಿ ಬಿ.ಜಿ. ಖೇರರು ಅಧ್ಯಕ್ಷರಾಗಿ ಏಕೀಕರಣ ಸಮ್ಮೇಳನ ನಡೆಯಿತು. ಸ್ವಾತಂತ್ರ್ಯ ಬಂದು ಘಟನಾ ಸಮಿತಿ ಕಾರ್ಯರತವಾದರೂ ಏಕೀಕರಣದ ಪ್ರಶ್ನೆಗೆ ಸಂವಿಧಾನದಲ್ಲಿ ಸ್ಥಾನ ಸಿಗಲಿಲ್ಲ. ದಾವಣಗೆರೆಯಲ್ಲಿ ಕರ್ನಾಟಕಸ್ಥರ ಮಹಾ ಸಭೆ ನಡೆದು (ಎಂ.ಪಿ. ಪಾಟೀಲ್ ಅಧ್ಯಕ್ಷರು) ಏಕೀಕರಣ ಹಾಗೂ ಭಾಷಾವಾರು ಪ್ರಾಂತದ ಕಲ್ಪನೆಯನ್ನು ಸಂವಿಧಾನದಲ್ಲಿ ಅಳವಡಿಸಲು ಒತ್ತಾಯಿಸಿದರು. ಮುಂದೆ ಕರ್ನಾಟಕ ಏಕೀಕರಣ ಮಹಾ ಸಮಿತಿಯನ್ನು ಎಸ್. ನಿಜಲಿಂಗಪ್ಪ ಅಧ್ಯಕ್ಷರಾಗಿ ರೂಪಿಸಿದರು. ಅದು ಕಾಂಗ್ರೆಸ್ಸಿನ ಅಂಗ ಸಂಸ್ಥೆಯಾಗಿತ್ತು. ಅಂದಾನಪ್ಪ ದೊಡ್ಡಮೇಟಿ ಹಾಗೂ ಮಂಗಳವೇಡೆ ಶ್ರೀನಿವಾಸರಾಯರು ಅದರ ಕಾರ್ಯದರ್ಶಿಗಳು. ಆಗ ಕೆ.ಪಿ.ಸಿ.ಸಿ.ಕಛೇರಿ ಹುಬ್ಬಳ್ಳಿಗೆ ಬಂದಿತ್ತು. ಜಿ.ವಿ. ಹಳ್ಳಿಕೇರಿಯವರು 1938 ರಿಂದ 1960 ರವರೆಗೆ ಕೆ.ಪಿ.ಸಿ.ಸಿ. ಕಾರ್ಯದರ್ಶಿಗಳಾಗಿದ್ದರು. ಮಂಗಳವೇಡೆಯವರು ಹುಬ್ಬಳ್ಳಿಗೆ ಬಂದು ನೆಲೆಸಿ ಏಕೀಕರಣದ ಚಟುವಟಿಕೆ ಸಾಗಿಸಿದರು. ಬಸರೀಗಿಡದ ವೀರಪ್ಪ, ಶಾಂತಪ್ಪ ಯಳಮಲಿ ಮುಂತಾದ ಗಣ್ಯರು ಏಕೀಕರಣ ಚಳುವಳಿಗೆ ಬಿಡುಗೈಯಿಂದ ಧನ ಸಹಾಯ ಮಾಡಿದರು.

ಘಟನಾ ಸಮಿತಿಗೆ ಈ ವಿಚಾರ ಬಿಂಬಿಸಲು ಶ್ರೀರಂಗರ ನೇತೃತ್ವದಲ್ಲಿ ಒಂದು ಶಿಷ್ಟಮಂಡಳವು ದೆಹಲಿಗೆ ಹೋಗಿ ನೆಹರೂರನ್ನು 1946ರ ಡಿಸೆಂಬರ್‌ನಲ್ಲಿ ಕಂಡಿತು. ಅದರಂತೆ ಭಾಷಾವಾರು ಪ್ರಾಂತ ರಚನೆ ಬಗ್ಗೆ ವರದಿ ಮಾಡಲು ಎಂಟು ಜನರ ಸಮಿತಿಯನ್ನು ಸರಕಾರ ರಚಿಸಿತು.* ಆದರೆ ಮುಂಬೈ ನಗರ ಗುಜರಾತಿಗೆ ಸೇರಬೇಕೋ ಮಹಾರಾಷ್ಟ್ರಕ್ಕೆ ಸೇರಬೇಕೋ ಎಂಬ ಬಗ್ಗೆ ತೀವ್ರ ವಾದವಿವಾದಗಳು ಬೆಳೆದು ಶಂಕರರಾವ್ ದೇವ್ ಮತ್ತು ಸರ್ದಾರ್ ಪಟೇಲರಲ್ಲಿ ಆಗ ಒಮ್ಮತವಾಗದ್ದರಿಂದ ಪ್ರಶ್ನೆಯನ್ನು ಆಗ ಕೈಬಿಟ್ಟರೆಂದು ದಿವಾಕರರು ಹೇಳಿದ್ದಾರೆ (ಸ್ವಾಸಂ.ಸ್ಮ III, ಪು.292). ಹೈದರಾಬಾದ್ ಸಂಸ್ಥಾನದ ವಿಭಜನೆಗೂ ಸ್ವತಃ ನೆಹರೂ ವಿರುದ್ಧವಾಗಿದ್ದರು. ದಿವಾಕರರ ಅಧ್ಯಕ್ಷತೆಯಲ್ಲಿ 1947 ರಲ್ಲಿ ಕಾಸರಗೋಡಿನಲ್ಲೂ ಏಕೀಕರಣ ಸಮ್ಮೇಳನ ನಡೆಯಿತು. 20 ಕ್ಕೂ ಮೀರಿದ ಘಟಕಗಳಿಗೆ ಒಳಪಟ್ಟಿದ್ದ ಕನ್ನಡ ಬಾಷಿಕ ಪ್ರದೇಶಗಳು ಸ್ವಾತಂತ್ರ್ಯಾನಂತರ ಮುಂಬೈ, ಮದ್ರಾಸ್, ಮೈಸೂರು, ಹೈದರಾಬಾದ್ ಹಾಗೂ ಕೊಡಗು ಹೀಗೆ ಐದು ಘಟಕಗಳಲ್ಲಿ ಬಂದವು.

ಸಂವಿಧಾನವು ಭಾಷಾವಾರು ಪ್ರಾಂತವನ್ನು ತರಲಿಲ್ಲ. ಹೀಗಾಗಿ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತನ್ನು 1951 ರ ಮೇ ತಿಂಗಳಲ್ಲಿ ಹಾವೇರಿಯಲ್ಲಿ ಕರೆದರು. ಕರ್ನಾಟಕದ ಪ್ರಜಾ ಪ್ರತಿನಿಧಿಗಳ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿ ಹೊಸಮನಿ ಸಿದ್ದಪ್ಪನವರು ಮುಖ್ಯರಾಗಿರುವ ಮೂವರ ಸಮಿತಿಯನ್ನು ನೇಮಿಸಲಾಯಿತಲ್ಲದೆ ಏಕೀಕರಣ ಪಕ್ಷದ ಪರವಾಗಿ ಎಲ್ಲೆಡೆ ಹುರಿಯಾಳುಗಳನ್ನು ಈ ಪರಿಷತ್ತು ನಿಲ್ಲಿಸಿತು (1952). ಕಾಂಗ್ರೆಸ್ಸೂ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಏಕೀಕರಣದ ಕಾರ್ಯಕ್ರಮವನ್ನು ಸೇರ್ಪಡೆಮಾಡಿತ್ತು. ಇದರಿಂದ ಏಕೀಕರಣ ಪಕ್ಷದ ಯಾರೂ ಚುನಾವಣೆಯಲ್ಲಿ ಗೆಲ್ಲಲಿಲ್ಲ.

ಪೊಟ್ಟಿ ಶ್ರೀರಾಮುಲು ಎಂಬವರು 64 ದಿನ ಉಪವಾಸ ಮಾಡಿ ಪ್ರಾಣ ತ್ಯಾಗಮಾಡಿದ ಪರಿಣಾಮವಾಗಿ ತೆಲುಗು ಭಾಷಿಕ ಪ್ರದೇಶದಲ್ಲಿ ಆದ ಭಾರೀ ಚಳವಳಿಗಳನ್ನು ಗಮನಿಸಿ ಪ್ರಧಾನಿ ನೆಹರೂರು 1952ರ ಕೊನೆಗೆ ಆಂಧ್ರ ಪ್ರದೇಶದ ರಚನೆಗೆ ಒಪ್ಪಿದರು. ಆದರೆ ಅದು ಮದ್ರಾಸ್ ಪ್ರಾಂತದಲ್ಲಿ ಇದ್ದ ತೆಲುಗು ಪ್ರದೇಶಗಳನ್ನಷ್ಟೆ ಒಳಗೊಂಡಿತ್ತು. ಹೈದರಾಬಾದ್ ರಾಜ್ಯ ವಿಭಜನೆ, ಕರ್ನಾಟಕ ಏಕೀಕರಣದ ಪ್ರಶ್ನೆ ಅಲ್ಲಿ ಬರಲಿಲ್ಲ. 1953ರ ಜನವರಿಯಲ್ಲಿ ಹೈದರಾಬಾದ್‌ನಲ್ಲಿ ಅ.ಬಾ. ಕಾಂಗ್ರೆಸ್ ಅಧಿವೇಶನ ನಡೆದಾಗ (ಅದಕ್ಕೂ

* ಶ್ರೀರಂಗ, 'ಸಾಹಿತಿಯ ಆತ್ಮಜಿಜ್ಞಾಸೆ', ಪು.139

ಮೊದಲಿನಿಂದಲೇ) ಜಕ್ಕಲಿಯಲ್ಲಿ ದೊಡ್ಡಮೇಟಿಯವರು 24.11.1952ರಿಂದ ಏಕೀಕರಣಪರ 21 ದಿನ ಆತ್ಮಶುದ್ಧಿ ಉಪವಾಸ ಮಾಡಿದರು. ಹೈದರಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಇದರ ಪ್ರತಿಧ್ವನಿಯಾಗಿ ಕೆಂಗಲ್ ಹನುಮಂತಯ್ಯ ಏಕೀಕರಣದ ಪರ ಮಾತನಾಡಿದರು. ಜಕ್ಕಲಿಯಲ್ಲಿ ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರ ಮುಂದುವರಿಯಿತು. ಮುಂದೆ ಆ.4 ಕ್ಕೆ (1954) ದೊಡ್ಡಮೇಟಿಯವರು ಮುಂಬೈ ವಿಧಾನಸಭೆಗೆ ರಾಜೀನಾಮೆ ಇತ್ತರು.

ಈ ನಡುವೆ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಚಳವಳಿಯ ಮಾರ್ಗಹಿಡಿಯಲು ಅಸ್ತಿತ್ವಕ್ಕೆ ಬಂತು (ಮೇ 1953). ರಾಮಕೃಷ್ಣ ಕಾರಂತ ಇದರ ಅಧ್ಯಕ್ಷರು. ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳಲು ಸತ್ಯಾಗ್ರಹವನ್ನು ಈ ಸಂಸ್ಥೆ ಹೂಡಿತು. 5000 ಜನ ಬಂಧಿತರಾದರು. ಇದೇ ಕಾಲಕ್ಕೆ ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ವಿಧಾನ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಏಕೀಕರಣ ಪರ ಉಮೇದ್ವಾರರು ಗೆದ್ದರು.

ಇದರ ಹಿಂದೆಯೇ ಹುಬ್ಬಳ್ಳಿ ಬಳಿಯ ಅದರಗುಂಚಿಯ ಶಂಕರಗೌಡ ಪಾಟೀಲ ಎಂಬವರು ಹಂಪಿಯಲ್ಲಿ ಏಕೀಕರಣ ಸಾಧನೆಗೆ ಅಮರಣ ಉಪವಾಸ ನಡೆಸಿದರು. ಇದೇ ಕಾಲಕ್ಕೆ ಏಪ್ರಿಲ್ 13-14(1953) ಹುಬ್ಬಳ್ಳಿಯಲ್ಲಿ ಕೆ.ಪಿ.ಸಿ.ಸಿ. ಸಭೆ ನಡೆಯಿತು. ಆಗ ಅಪಾರ ಜನ ಜಂಗುಳಿ ಸೇರಿ ಭಾರೀ ಮತ ಪ್ರದರ್ಶನಗಳಾಗಿ, ಜನ ಜಂಗುಳಿ ಹಿಂಸಾಚಾರಕ್ಕೆ ತಿರುಗಿತು. ಈ ಎಲ್ಲ ಹಿನ್ನಲೆಯಲ್ಲಿ ಸರಕಾರವು ಫಜಲ್ ಅಲಿ ಆಯೋಗ ನೇಮಿಸಲು ಅದು ಏಕೀಕರಣಕ್ಕೆ ಒಪ್ಪಿಗೆ ನೀಡಿತು.

ಧಾರವಾಡ ಜಿಲ್ಲೆಯಲ್ಲಿ ಆರಂಭವಾದ ಚಳವಳಿಯ ಯಶಸ್ವಿಗೆ ಕೊನೆಯ ಉಗ್ರಕ್ರಮವೂ ಧಾರವಾಡ ಜಿಲ್ಲೆಯಲ್ಲೇ ನಡೆಯಿತು. ನವೆಂಬರ್ 1(1956) ಕ್ಕೆ ಏಕೀಕರಣವಾದರೂ ಕರ್ನಾಟಕ ಎಂಬ ನಾಮಕರಣಕ್ಕೂ (1973) ಧಾರವಾಡ ಜಿಲ್ಲೆಯಲ್ಲಿ ಬಲವಾಗಿ ಚಳವಳಿ ಆಯಿತು.

## ಚುನಾವಣೆಗಳು

ಧಾರವಾಡ ಜಿಲ್ಲೆಯು ಹಿಂದಿನ ಮುಂಬೈ ಪ್ರಾಂತ್ಯದ ಭಾಗವಾಗಿದ್ದಾಗ ಪ್ರಥಮ ಬಾರಿಗೆ ಪ್ರೌಢ ಮತಾಧಿಕಾರದಂತೆ ಚುನಾವಣೆ ನಡೆದಿದ್ದು 1952 ನೇ ಇಸ್ವಿಯಲ್ಲಿ, ರಾಜ್ಯಗಳ ಪುನರ್ವಿಂಗಡಣೆಯ ನಂತರ ಜಿಲ್ಲೆಯ ಜನತೆಯು ಮೊದಲ ಬಾರಿಗೆ ಕರ್ನಾಟಕ ರಾಜ್ಯ ವಿಧಾನ ಸಭೆಗೆ ಮತ್ತು ಲೋಕಸಭೆ ಚುನಾವಣೆಯಲ್ಲಿ 1957ರಲ್ಲಿ ಪಾಲ್ಗೊಂಡರು. 1956ರ ಲೋಕಸಭೆ ಮತ್ತು ವಿಧಾನಸಭಾ, ಕ್ಷೇತ್ರಗಳ ಡಿಲಿಮಿಟೇಷನ್ ಆದೇಶದ ಅನುಸಾರ ಜಿಲ್ಲೆಗೆ ಧಾರವಾಡ ಉತ್ತರ ಮತ್ತು ಧಾರವಾಡ ದಕ್ಷಿಣ ಎಂದು ಎರಡು ಲೋಕಸಭಾ ಕ್ಷೇತ್ರಗಳನ್ನು ನಿಗದಿ ಮಾಡಲಾಗಿತ್ತು. ಜಿಲ್ಲೆಯು 16 ವಿಧಾನ ಸಭಾ ಕ್ಷೇತ್ರಗಳನ್ನು ಹೊಂದಿದ್ದು ರಾಣೆಬೆನ್ನೂರು ಕ್ಷೇತ್ರವನ್ನು ಇಬ್ಬರು ಸದಸ್ಯರ ಕ್ಷೇತ್ರವನ್ನಾಗಿ (ಇದರಲ್ಲಿ ಒಂದು ಪರಿಶಿಷ್ಟ ಜಾತಿ ಮೀಸಲು) ವಿಂಗಡಿಸಲಾಗಿತ್ತು.

### 1957ರ ಲೋಕಸಭೆ ಚುನಾವಣೆ

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ, ಪಕ್ಷೇತರರು ಹಾಗೂ ಭಾರತೀಯ ಜನಸಂಘಗಳು ಭಾಗವಹಿಸಿದ್ದವು. ಧಾರವಾಡ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಹಾಗೂ ಪಕ್ಷೇತರ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆ ಇದ್ದು ಕಾಂಗ್ರೆಸ್ಸಿನ ರುದ್ರಪ್ಪ ತಿಮ್ಮಪ್ಪ ನೆಸ್ವಿಯವರು ಆಯ್ಕೆಯಾದರು. ಧಾರವಾಡ ಉತ್ತರ ಕ್ಷೇತ್ರದಲ್ಲಿ ತ್ರಿಕೋಣ ಸ್ಪರ್ಧೆ ಏರ್ಪಟ್ಟಿದ್ದು ಕಾಂಗ್ರೆಸ್ಸಿನ ಮತ್ತೊಬ್ಬ ಅಭ್ಯರ್ಥಿ ಡಿ.ಪಿ. ಕರಮರ್‌ಕರ್‌ರವರು ಆಯ್ಕೆಯಾದರು. ಈ ಕ್ಷೇತ್ರಗಳಲ್ಲಿ ಸ್ಪರ್ದಿಸಿದ್ದ ಅಭ್ಯರ್ಥಿಗಳು ಗಳಿಸಿದ ಮತಗಳು ಹಾಗೂ ಶೇಕಡಾವಾರು ಈ ರೀತಿ ಇದೆ. (1) ಧಾರವಾಡ ದಕ್ಷಿಣ ಐಎನ್‌ಸಿ 1,43,184 (68.68) ಆಯ್ಕೆ; ಪಕ್ಷೇತರ 65,247 (31.32). (2) ಧಾರವಾಡ ಉತ್ತರ ಐಎನ್‌ಸಿ 1,23,622 (59.44) ಆಯ್ಕೆ; ಪಕ್ಷೇತರ 58,259 (28.01), ಬಿಜೆಎಸ್ 26,106 (12.55).

### 1957ರ ವಿಧಾನಸಭಾ ಚುನಾವಣೆ

ಜಿಲ್ಲೆಯಲ್ಲಿ 15 ವಿಧಾನಸಭೆ ಕ್ಷೇತ್ರಗಳು ಹಾಗೂ ಇಬ್ಬರು ಸದಸ್ಯರ ಒಂದು ಕ್ಷೇತ್ರವು ಇದ್ದಿತು. ಅವುಗಳೆಂದರೆ (1) ಹಿರೇಕೆರೂರು (2) ರಾಣೆಬೆನ್ನೂರು (ಇಬ್ಬರು ಸದಸ್ಯರ ಕ್ಷೇತ್ರ) (3) ಹಾನಗಲ್ (4) ಶಿಗ್ಗಾಂವ (5) ಹಾವೇರಿ (6) ಶಿರಹಟ್ಟಿ (7) ಕುಂದಗೋಳ

(8) ಹುಬ್ಬಳ್ಳಿ ನಗರ (9) ಹುಬ್ಬಳ್ಳಿ ಗ್ರಾಮಾಂತರ (10) ಕಲಘಟಗಿ (11) ಧಾರವಾಡ (12) ನವಲಗುಂದ (13) ನರಗುಂದ (14) ಗದಗ (15) ಮುಂಡರಗಿ (16) ರೋಣ. ರಾಣೆಬೆನ್ನೂರು ಇಬ್ಬರು ಸದಸ್ಯರ ಕ್ಷೇತ್ರವಾಗಿದ್ದು ಅದರಲ್ಲಿ ಒಂದು ಮೀಸಲು ಸ್ಥಾನವಾಗಿತ್ತು. ವಿಧಾನಸಭೆಯ ಎಲ್ಲಾ ಕ್ಷೇತ್ರಗಳಿಗೂ ಕಾಂಗ್ರೆಸ್ ಸ್ಪರ್ಧಿಸಿತ್ತು. ಮೂರು ಕ್ಷೇತ್ರಗಳಲ್ಲಿ ಭಾರತೀಯ ಜನಸಂಘ ಸ್ಪರ್ದಿಸಿತ್ತು. ಚುನಾವಣೆಯಲ್ಲಿ ಹಾನಗಲ್ ಹೊರತುಪಡಿಸಿ ಬಾಕಿ ಎಲ್ಲಾ ಕ್ಷೇತ್ರಗಳಿಂದಲೂ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದರು. ಗೆದ್ದ ಅಭ್ಯರ್ಥಿಗಳ ಹೆಸರು, ಗಳಿಸಿದ ಮತ ಹಾಗೂ ಶೇಕಡಾವಾರು ಈ ರೀತಿ ಇದೆ. (1) ಹಿರೇಕೆರೂರು ಐಎನ್‌ಸಿ 18,137 (59.93) ಆಯ್ಕೆ ಗುಬ್ಬಿ ಶಂಕರರಾವ್ ಬಸಲಿಂಗಪ್ಪಗೌಡ; ಪಕ್ಷೇತರ 10,060 (33.25), ಪಕ್ಷೇತರ 2.065 (6.82). (2) ರಾಣೆಬೆನ್ನೂರು (ದ್ವಿಸದಸ್ಯ ಹಾಗೂ ಒಂದು ಮೀಸಲು) ಐಎನ್‌ಸಿ 33,937 (35.59) ಆಯ್ಕೆ ಕೆ.ಎಫ್. ಪಾಟೀಲ್ ಹಾಗೂ ಐಎನ್‌ಸಿ 28,988 (30.42), ಆಯ್ಕೆ ಶ್ರೀಮತಿ ಸಾಂಬ್ರಾಣಿ ಯಲ್ಲವ್ವ (ಮೀಸಲು); ಪಕ್ಷೇತರ 19,804 (20.76), ಪಕ್ಷೇತರ 12,624 (13.23). (3) ಹಾನಗಲ್ ಪಕ್ಷೇತರ 13,152 (51.66) ಆಯ್ಕೆ ಬಿ.ಆರ್. ಪಾಟೀಲ್; ಐಎನ್‌ಸಿ 12,303 (48.3). (4) ಶಿಗ್ಗಾಂವಿ ಐಎನ್‌ಸಿ 16,412 (62.42) ಆಯ್ಕೆ ಆರ್.ಸಿ. ಪಾಟೀಲ್; ಪಕ್ಷೇತರ 9,884 (37.58). (5) ಹಾವೇರಿ ಐಎನ್‌ಸಿ 17,286 (86.57) ಆಯ್ಕೆ ಶ್ರೀಮತಿ ಸಿದ್ದವ್ವಾ ಮೈಲಾರ; ಪಕ್ಷೇತರ 2.067 (10.36), ಪಕ್ಷೇತರ 614 (3.07). (6) ಶಿರಹಟ್ಟಿ ಐಎನ್‌ಸಿ 16,644 (60.10) ಆಯ್ಕೆ ಶ್ರೀಮತಿ ಮಾಗಡಿ ಲೀಲಾವತಿ ವೆಂಕಟೇಶ್; ಪಕ್ಷೇತರ 8,343 (30.13), ಪಕ್ಷೇತರ 2,703, (9.77). (7) ಕುಂದಗೋಳ ಐಎನ್‌ಸಿ 15,819 (54.04) ಆಯ್ಕೆ ಟಿ.ಕೆ. ಕಂಬಳಿ; ಪಕ್ಷೇತರ 13,458 (45.96). (8) ಹುಬ್ಬಳ್ಳಿನಗರ ಐಎನ್‌ಸಿ 17,609 (64.96) ಆಯ್ಕೆ ಎಫ್.ಹೆಚ್. ಮೊಹಿಸಿನ್; ಬಿಜೆಎಸ್ 4,779 (17.62), ಪಕ್ಷೇತರ 3,096 (11.33), ಪಕ್ಷೇತರ 1,653 (6.09). (9) ಹುಬ್ಬಳ್ಳಿ ಗ್ರಾಮಾಂತರ ಐಎನ್‌ಸಿ 20,858 (68.96) ಆಯ್ಕೆ ಎಮ್.ಆರ್. ಪಾಟೀಲ್; ಪಕ್ಷೇತರ 9,388 (31.04). (10) ಕಲಘಟಗಿ ಐಎನ್‌ಸಿ 16,928 (84.64) ಆಯ್ಕೆ ಬಿ.ಆರ್. ತಂಬಾಕದ; ಪಕ್ಷೇತರ 1,842 (9.21), ಪಕ್ಷೇತರ 1,229 (6.15), (11) ಧಾರವಾಡ ಐಎನ್‌ಸಿ 13,317 (47.84) ಆಯ್ಕೆ ಎಂ.ಬಿ. ಇನಾಮತಿ; ಪಕ್ಷೇತರ 11,590 (41.63), ಬಿಜೆಎಸ್ 2,388 (8.57), ಪಕ್ಷೇತರ 541 (1.96). (12) ನವಲಗುಂದ ಐಎನ್‌ಸಿ 21,798 (69.48) ಆಯ್ಕೆ ಆರ್.ಎಂ. ಪಾಟೀಲ್; ಪಕ್ಷೇತರ 9,578 (30.52). (13) ನರಗುಂದ ಐಎನ್‌ಸಿ 18,143 (67.74) ಆಯ್ಕೆ ಎ.ಎಸ್. ಪಾಟೀಲ್; ಪಕ್ಷೇತರ 8.640 (32.26). (14) ಗದಗ ಐಎನ್‌ಸಿ 16,922 (77.35) ಆಯ್ಕೆ ಕೆ.ಪಿ. ಗದಗ; ಬಿಜೆಎಸ್ 2,995 (13.69), ಪಕ್ಷೇತರ 1,160 (5.31) , ಪಕ್ಷೇತರ 800 (3.65). (15) ಮುಂಡರಗಿ ಐಎನ್‌ಸಿ 18,926 (84.29) ಆಯ್ಕೆ ಸಿ.ಎಸ್. ಹುಲಕೋಟಿ; ಪಕ್ಷೇತರ 3,526 (15.71). (16) ರೋಣ ಐಎನ್‌ಸಿ 17,836 (55.82) ಆಯ್ಕೆ ಎ.ಜಿ. ದೊಡ್ಡಮೇಟಿ; ಪಕ್ಷೇತರ 14,116 (44.18).

ಕಲಘಟಗಿ ಕ್ಷೇತ್ರದ ಶಾಸಕರು ನಿಧನರಾಗಿದ್ದರಿಂದ ದಿನಾಂಕ 16.10.57 ರಂದು ಈ ಕ್ಷೇತ್ರದಿಂದ ಉಪಚುನಾವಣೆ ನಡೆಯಿತು. ಇದರಲ್ಲಿ ಪಕ್ಷೇತರ ಅಭ್ಯರ್ಥಿ ಬಸವರಾಜ ಅಯ್ಯಪ್ಪ ದೇಸಾಯಿಯವರು ಕಾಂಗ್ರೆಸ್ ಸ್ಪರ್ಧಿಯನ್ನು ನೇರ ಸ್ಪರ್ಧೆಯಲ್ಲಿ ಸೋಲಿಸಿದರು. ಪಕ್ಷೇತರ 17,865 (61.14) ಆಯ್ಕೆ, ಕಾಂಗ್ರೆಸ್ 11,354 (38.86). ( ಐಎನ್‌ಸಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್; ಬಿಜೆಎಸ್ ಭಾರತೀಯ ಜನಸಂಘ).

### 1962 ರ ಚುನಾವಣೆ

1961 ರಲ್ಲಿ ಎಲ್ಲಾ ದ್ವಿಸದಸ್ಯ ಕ್ಷೇತ್ರಗಳನ್ನು ರದ್ದುಗೊಳಿಸಲಾಯಿತು. (ದ್ವಿಸದಸ್ಯ ಕ್ಷೇತ್ರಗಳನ್ನು ರದ್ದು ಮಾಡುವ 1961 ಕಾಯಿದೆ). ವಿಧಾನಸಭಾ ಚುನಾವಣೆಗಳಿಗೋಸ್ಕರ ರಾಣೆಬೆನ್ನೂರು ದ್ವಿಸದಸ್ಯ ಕ್ಷೇತ್ರವನ್ನು ರದ್ದು ಮಾಡಿ, ರಾಣೆಬೆನ್ನೂರು ಮತ್ತು ಬ್ಯಾಡಗಿಗಳನ್ನು ಏಕಸದಸ್ಯ ಕ್ಷೇತ್ರಗಳನ್ನಾಗಿ ಮಾಡಲಾಯಿತು. ಅಲ್ಲದೆ ರಾಣೆಬೆನ್ನೂರು ಮೀಸಲು ಕ್ಷೇತ್ರವಾಯಿತು. ಜಿಲ್ಲೆಯಲ್ಲಿ ಒಟ್ಟು 17 ವಿಧಾನಸಭಾ ಕ್ಷೇತ್ರಗಳು ಹಾಗೂ ಎರಡು ಲೋಕಸಭಾ ಕ್ಷೇತ್ರಗಳಿದ್ದವು. 1962 ರಲ್ಲಿ ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಲಾಯಿತು.

ಲೋಕಸಭೆಯ ಎರಡು ಸ್ಥಾನಗಳಿಗೆ ಕಾಂಗ್ರೆಸ್, ಪ್ರಜಾಸೋಶಿಯಲಿಸ್ಟ ಪಕ್ಷ, ಸ್ವತಂತ್ರ ಪಕ್ಷ ಹಾಗೂ ಭಾರತೀಯ ಜನಸಂಘಗಳು ಹೋರಾಟ ನಡೆಸಿದವು. ಚುನಾವಣೆಯಲ್ಲಿ ಕಾಂಗ್ರೆಸ್ ಎರಡೂ ಸ್ಥಾನಗಳನ್ನು ಮತ್ತೆ ಗೆದ್ದುಕೊಂಡಿತು. ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪಕ್ಷಗಳು ಹಾಗೂ ಅವುಗಳು ಗಳಿಸಿದ ಮತಗಳು ಹೀಗಿದೆ. (1) ಧಾರವಾಡ ದಕ್ಷಿಣ ಐಎನ್‌ಸಿ 1,72,777 (62.92) ಆಯ್ಕೆ ಎಫ್.ಹೆಚ್. ಮೊಹಿಸಿನ್; ಪಿ ಎಸ್ ಪಿ 97,537 (36.08). (2) ಧಾರವಾಡ ಉತ್ತರ ಐಎನ್‌ಸಿ 1,87,654 (71.64) ಆಯ್ಕೆ ಶ್ರೀಮತಿ ಸರೋಜಿನಿ ಬಿಂದೂರಾವ್ ಮಹಿಷಿ; ಸ್ವತಂತ್ರ 34.104 (13.02), ಬಿಜೆಎಸ್ 30,136 (11.50), ಪಿಎಸ್‌ಪಿ 10,036 (3.84).

ಜಿಲ್ಲೆಯ 17 ವಿಧಾನಸಭಾ ಸ್ಥಾನಗಳಿಗೂ ಕಾಂಗ್ರೆಸ್ ಪಕ್ಷ ತನ್ನ ಉಮೇದುವಾರರನ್ನು ನಿಲ್ಲಿಸಿತು. ಸ್ವತಂತ್ರ ಪಕ್ಷ ಹಾಗೂ ಪಿ ಎಸ್ ಪಿಗಳು ಕಾಂಗ್ರೆಸ್ ಪಕ್ಷಕ್ಕೆ ಕೆಲವು ಸ್ಥಾನಗಳಲ್ಲಿ ತೀವ್ರ ಸವಾಲನ್ನೊಡ್ಡಿದ್ದವು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 16 ಸ್ಥಾನಗಳನ್ನು ಹಾಗೂ ಸ್ವತಂತ್ರ ಪಕ್ಷ ಒಂದು ಸ್ಥಾನವನ್ನು ಗೆದ್ದುಕೊಂಡಿತು. ಈ ಚುನಾವಣೆಯಲ್ಲಿ ವಿವಿಧ ಪಕ್ಷಗಳು ಗಳಿಸಿದ ಮತಗಳು, ಶೇಕಡಾವಾರು ಇತ್ಯಾದಿಗಳು ಇಂತಿವೆ. (1) ಹಿರೇಕೆರೂರು ಐಎನ್‌ಸಿ 23,284 (64.27) ಆಯ್ಕೆ ಎಸ್.ಬಿ. ಗುಬ್ಬಿ; ಸ್ವತಂತ್ರ ಪಕ್ಷ 12,946 (35.73). (2) ರಾಣೆಬೆನ್ನೂರು (ಮೀಸಲುಕ್ಷೇತ್ರ) ಐಎನ್‌ಸಿ 18,715 (58.56) ಆಯ್ಕೆ ಶ್ರೀಮತಿ ಯಲ್ಲವ್ವ ಧರ್ಮಪ್ಪ ಸಾಂಬ್ರಾಣಿ; ಪಿಎಸ್‌ಪಿ 12,596 (39.41), ಸ್ವತಂತ್ರ ಪಕ್ಷ 650 (2.03). (3) ಬ್ಯಾಡಗಿ ಐಎನ್‌ಸಿ 21,092 (60.18) ಆಯ್ಕೆ ಶ್ರೀಮತಿ ಶಿದ್ದಮ್ಮ ಮಹದೇವಪ್ಪ ಮೈಲಾರ; ಪಿಎಸ್‌ಪಿ 13,958 (39.82). (4) ಹಾನಗಲ್ ಐಎನ್‌ಸಿ 19,843 (51.23) ಆಯ್ಕೆ ಜಿ.ಎನ್. ದೇಸಾಯಿ; ಪಿಎಸ್‌ಪಿ 18,890 (48.77). (5) ಶಿಗ್ಗಾಂವಿ ಐಎನ್‌ಸಿ 20.838 (75.93) ಆಯ್ಕೆ ಎಫ್.ಎಸ್.ತಾವರೆ; ಪಿಎಸ್‌ಪಿ 6,606 (24.07). (6) ಹಾವೇರಿ ಐಎನ್‌ಸಿ 18,945 (57.78) ಆಯ್ಕೆ ಬಿ.ವಿ. ಮಾಗಾವಿ; ಸ್ವತಂತ್ರಪಕ್ಷ 9,790 (29.86), ಸಿಪಿಐ 4,054 (12.36). (7) ಶಿರಹಟ್ಟಿ ಸ್ವತಂತ್ರಪಕ್ಷ 17,347 (50.75) ಆಯ್ಕೆ ಕೆ.ಎಸ್. ವೀರಯ್ಯ; ಐಎನ್‌ಸಿ 16,832 (43.25). (8) ಕುಂದಗೋಳ ಐಎನ್‌ಸಿ 13,265 (44.15) ಆಯ್ಕೆ ಟಿ.ಕೆ. ಕಂಬ್ಳಿ; ಪಕ್ಷೇತರ 11,465 (38.16), ಸ್ವತಂತ್ರ ಪಕ್ಷ 5,315 (17.69). (9)ಹುಬ್ಬಳ್ಳಿ ನಗರ ಐಎನ್‌ಸಿ 21,169 (57.28) ಆಯ್ಕೆ ಕೆ.ಆರ್. ಅಬ್ದುಲ್ ಸಾಬ್; ಬಿಜೆಎಸ್ 11,900 (32.21), ಪಕ್ಷೇತರ 3,187 (8.62), ಸಿಪಿಐ 698 (1.89). (10) ಹುಬ್ಬಳ್ಳಿ (ಗ್ರಾ) ಐಎನ್‌ಸಿ 23,356 (74.82) ಆಯ್ಕೆ ಎಂ.ಆರ್. ಪಾಟೀಲ್; ಪಕ್ಷೇತರ 4,489 (14.38), ಬಿಜೆಎಸ್ 3,371 (10.80). (11) ಕಲಘಟಗಿ ಐಎನ್‌ಸಿ 13,842 (45.95) ಆಯ್ಕೆ ಎಫ್.ಎಮ್.ಹಸಬಿ; ಎಲ್.ಎಸ್.ಎಸ್ 12,047 (39.99), ಸ್ವತಂತ್ರ ಪಕ್ಷ 3,431 (11.31), ಬಿಜೆಎಸ್ 803 (2.69). (12) ಧಾರವಾಡ ಐಎನ್‌ಸಿ 17,092 (68.65) ಆಯ್ಕೆ ಹೆಚ್.ಎಮ್. ದಾಸನಕೊಪ್ಪ; ಬಿಜೆಎಸ್ 5,185 (20.83), ಪಕ್ಷೇತರ 2,208 (8.87), ಪಕ್ಷೇತರ 412 (1.65). (13) ನವಲಗುಂದ ಐಎನ್‌ಸಿ 20,618 (58.23) ಆಯ್ಕೆ ಆರ್.ಎಂ.ಪಾಟೀಲ್; ಪಕ್ಷೇತರ 13,183 (37.23), ಬಿಜೆಎಸ್ 1,607 (4.54). (14) ನರಗುಂದ ಐಎನ್‌ಸಿ 24,601 (73.40) ಆಯ್ಕೆ ಎ.ಎಸ್. ಪಾಟೀಲ್; ಪಕ್ಷೇತರ 7,951 (23.72), ಬಿಜೆಎಸ್ 590 (1.76), ಪಕ್ಷೇತರ 373 (1.12). (15) ಗದಗ ಐಎನ್‌ಸಿ 18,539 (49.19) ಆಯ್ಕೆ ಕೆ.ಪಿ. ಗದಗ; ಪಕ್ಷೇತರ 17,234, (45.72), ಬಿಜೆಎಸ್ 1,918 (5.09). (16) ಮುಂಡರಗಿ ಐಎನ್‌ಸಿ 18,303 (66.46) ಆಯ್ಕೆ ಸಿ.ಎಸ್. ಹುಲ್ಕೋಟಿ; ಪಕ್ಷೇತರ 7,547 (27.50), ಬಿ ಜೆ ಎಸ್ 1,663 (6.04). (17) ರೋಣ ಐಎನ್‌ಸಿ 18,640 (63.92) ಆಯ್ಕೆ ಎ.ಜಿ. ದೊಡ್ಡಮೇಟಿ; ಪಕ್ಷೇತರ 8,543 (29.30), ಬಿಜೆಎಸ್ 1,978 (6.78).

ಐಎನ್‌ಸಿ - ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, (2)ಬಿಜೆಎಸ್ - ಭಾರತೀಯ ಜನಸಂಘ, (3)ಪಿಎಸ್‌ಪಿ - ಪ್ರಜಾಸೋಶಿಯಲಿಸ್ಟ ಪಕ್ಷ (4) ಸಿಪಿಐ - ಭಾರತೀಯ ಕಮ್ಯೂನಿಸ್ಟ್ ಪಕ್ಷ (5) ಎಲ್.ಎಸ್.ಎಸ್. - ಲೋಕಸೇವಕ ಸಂಘ (6) ಐಎನ್‌ಡಿ - ಪಕ್ಷೇತರರು; ಸ್ವತಂತ್ರ ಪಕ್ಷ (ಎನ್.ಜಿ. ರಂಗಾ ಅಧ್ಯಕ್ಷತೆಯದು).

### ಉಪ ಚುನಾವಣೆ

ಧಾರವಾಡ ಕ್ಷೇತ್ರದ ಶಾಸಕರ ನಿಧನದಿಂದಾಗಿ ಪುನಃ ಉಪಚುನಾವಣೆಯನ್ನು 1963ರ ಡಿಸೆಂಬರ್ 23ರಂದು ನಡೆಸಲಾಯಿತು. ಚುನಾವಣೆಯಲ್ಲಿ ಎಸ್.ವಿ. ಅಗ್ನಿಹೋತ್ರಿಯವರ ಆಯ್ಕೆಯಿಂದ ಕಾಂಗ್ರೆಸ್ ತನ್ನ ಸ್ಥಾನವನ್ನು ಉಳಿಸಿಕೊಂಡಿತು. ಅಭ್ಯರ್ಥಿಗಳು ಗಳಿಸಿದ ಮತಗಳು: ಐಎನ್‌ಸಿ 12,859 (51.78; ಆಯ್ಕೆ) ಮೂರು ಜನ ಪಕ್ಷೇತರ ಅಭ್ಯರ್ಥಿಗಳು ಗಳಿಸಿದ ಮತಗಳು 11.977 (48.22).

### 1967 ರ ಸಾರ್ವತ್ರಿಕ ಚುನಾವಣೆಗಳು

ಲೋಕಸಭೆ ಹಾಗೂ ವಿಧಾನಸಭೆಗಳ ಕ್ಷೇತ್ರಗಳ 1966 ರ ಪುನರ್ವಿಂಗಡನೆ ಆದೇಶದ ಅನುಸಾರ ಜಿಲ್ಲೆಯ ಮತದಾರ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಯಿತು. ರೋಣ ವಿಧಾನಸಭಾ ಕ್ಷೇತ್ರವನ್ನು ಬಾಗಲಕೋಟೆ (ಬಿಜಾಪುರ ಜಿಲ್ಲೆ) ಲೋಕಸಭಾ ಕ್ಷೇತ್ರಕ್ಕೆ ಸೇರಿಸಲಾಯಿತು. ಅದೇ ರೀತಿ ಮುಂಡರಗಿ ಕ್ಷೇತ್ರ ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ (ರಾಯಚೂರು ಜಿಲ್ಲೆಗೆ) ಸೇರ್ಪಡೆಯಾಯಿತು. ಧಾರವಾಡ ವಿಧಾನಸಭಾ ಕ್ಷೇತ್ರವನ್ನು ವಿಭಾಗ ಮಾಡಿ ಧಾರವಾಡ ಗ್ರಾಮಾಂತರ ಹಾಗೂ ಧಾರವಾಡ ನಗರ ಕ್ಷೇತ್ರವನ್ನಾಗಿ ವಿಂಗಡಿಸಿದ್ದರಿಂದ 17 ಕ್ಷೇತ್ರಗಳಿದ್ದ ಜಿಲ್ಲೆ 1967 ರ ಚುನಾವಣೆಯಲ್ಲಿ 18 ವಿಧಾನಸಭಾ ಕ್ಷೇತ್ರಗಳಿಗೆ ಏರಿಕೆಯಾಯಿತು. ಮೀಸಲು ಕ್ಷೇತ್ರವನ್ನು ಬ್ಯಾಡಗಿಯಿಂದ ನರಗುಂದಕ್ಕೆ ಬದಲಾಯಿಸಲಾಯಿತು.

ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಧಾರವಾಡ ದಕ್ಷಿಣ ಹಾಗೂ ಧಾರವಾಡ ಉತ್ತರ ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಈ ಎರಡು ಕ್ಷೇತ್ರಗಳನ್ನು ಕಾಂಗ್ರೆಸ್ ತನ್ನ ಹತೋಟಿಯಲ್ಲಿ ಉಳಿಸಿಕೊಂಡಿತು. 1967 ರ ಲೋಕಸಭೆ ಚುನಾವಣೆಯಲ್ಲಿ ವಿವಿಧ ಪಕ್ಷಗಳು ಗಳಿಸಿದ ಮತಗಳು ಹಾಗೂ ಅವುಗಳ ಶೇಕಡಾವಾರು ಇಂತಿದೆ. (1) ಧಾರವಾಡ ದಕ್ಷಿಣ ಐಎನ್‌ಸಿ 1,47,272 (50.28) ಆಯ್ಕೆ ಎಫ್.ಹೆಚ್. ಮೊಹಿಸಿನ್; ಪಿಎಸ್ಪಿ 82,641 (28.21), ಪಕ್ಷೇತರ 62,994 (21.51), (2) ಧಾರವಾಡ ಉತ್ತರ ಐಎನ್‌ಸಿ 1,62,173 (62.52) ಆಯ್ಕೆ ಶ್ರೀಮತಿ ಸರೋಜಿನಿ ಮಹಿಷಿ ಬಿಂದೂರಾವ್; ಬಿಜೆಎಸ್ 81,743 (30.21); ಪಿಎಸ್‌ಪಿ 19,679 (7.27).

### 1967 ರ ವಿಧಾನಸಭಾ ಚುನಾವಣೆ

ಒಟ್ಟು 18 ವಿಧಾನಸಭೆ ಕ್ಷೇತ್ರಗಳಲ್ಲೂ ಕಾಂಗ್ರೆಸ್ಸು ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ವಿರೋಧಪಕ್ಷಗಳಾದ ಪ್ರಜಾಸೋಶಿಯಲಿಸ್ಟ್ ಪಕ್ಷ, ಜನಸಂಘ ಹಾಗೂ ಸ್ವತಂತ್ರ ಪಕ್ಷಗಳು ತಕ್ಕಮಟ್ಟಿಗೆ ಸ್ಥಾನ ಹೊಂದಿಸಿಕೊಂಡು ತೀವ್ರ ಹೋರಾಟ ನಡೆಸಿದವು. ಈ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ಸಿಗೆ 8 ಕ್ಷೇತ್ರಗಳಲ್ಲಿ ಪರಾಭವವುಂಟಾಯಿತು. ಕಾಂಗ್ರೆಸ್ ಕೇವಲ 10 ಸ್ಥಾನಗಳನ್ನು ಪಡೆಯಿತು. ಇತರ 8 ಕ್ಷೇತ್ರಗಳಲ್ಲಿ ಪಿಎಸ್‌ಪಿ ಎರಡು, ಜನಸಂಘ ಹಾಗೂ ಸ್ವತಂತ್ರ ಪಕ್ಷಗಳು ತಲಾ ಒಂದೊಂದು ಸ್ಥಾನ ಮತ್ತು ಪಕ್ಷೇತರರು 4 ಸ್ಥಾನಗಳನ್ನು ಗೆದ್ದರು. ಪ್ರತೀ ಕ್ಷೇತ್ರದಲ್ಲಿ ವಿವಿಧ ಪಕ್ಷಗಳು ಗಳಿಸಿದ ಮತಗಳು ಹಾಗೂ ಶೇಕಡಾವಾರು ಈ ರೀತಿ ಇದ್ದಿತು. (1) ಧಾರವಾಡ ಗ್ರಾಮಾಂತರ ಐಎನ್‌ಸಿ 22,276 (70.86) ಆಯ್ಕೆ ಎಸ್.ವಿ. ಅಗ್ನಿಹೋತ್ರಿ; ಸ್ವತಂತ್ರ 9,157 (29.14). (2) ಧಾರವಾಡ ನಗರ ಐಎನ್‌ಸಿ 15,325 (53.58) ಆಯ್ಕೆ ಕೆ.ಎಂ. ದಾಸನಕೊಪ್ಪ; ಬಿಜೆಎಸ್ 11,786 (41.52), ಪಕ್ಷೇತರ 1,277 (4.50). (3) ಹುಬ್ಬಳ್ಳಿ ಬಿಜೆಎಸ್ 14,898 (43.60) ಆಯ್ಕೆ ಎಸ್.ಎಸ್. ಶೆಟ್ಟರ; ಐಎನ್‌ಸಿ 9.830 (28.77), ಸಿಪಿಐ 8,012 (23.45), ಪಕ್ಷೇತರ 507 (1.48), ಇತರ ಮೂವರು ಪಕ್ಷೇತರರು 923 ಮತಗಳನ್ನು ಗಳಿಸಿದರು. (4) ಹುಬ್ಬಳ್ಳಿ ಗ್ರಾಮಾಂತರ ಐಎನ್‌ಸಿ 22,540 (64.27) ಆಯ್ಕೆ ಎಂ.ಆರ್. ಪಾಟೀಲ್; ಬಿಜೆಎಸ್ 8,713 (34.84), ಪಿ ಎಸ್‌ಪಿ 965 (2.75), ಮೂವರು ಪಕ್ಷೇತರರು ಗಳಿಸಿದ ಮತಗಳು 2,853 (8.14). (5) ಕಲಘಟಗಿ ಪಕ್ಷೇತರ 20,188 (62,39) ಆಯ್ಕೆ ಎಫ್.ಎಸ್. ಪಾಟೀಲ್; ಐಎನ್‌ಸಿ 12,170 (36.61). (6) ಕುಂದಗೋಳ ಪಕ್ಷೇತರ ಲೋಕಸೇವಕ ಸಂಘ 20,291 (63.21) ಆಯ್ಕೆ ಎಸ್.ಆರ್. ಬೊಮ್ಮಾಯಿ; ಐಎನ್‌ಸಿ 9,371 (29.19), ಪಕ್ಷೇತರ 2,439 (7.60). (7) ಶಿಗ್ಗಾಂವಿ ಕ್ಷೇತ್ರದಿಂದ ಐ.ಎನ್ ಸಿಯ ಎಸ್. ನಿಜಲಿಂಗಪ್ಪನವರು ಅವಿರೋಧವಾಗಿ ಆಯ್ಕೆಗೊಂಡರು, (8) ಹಾನಗಲ್ ಪಕ್ಷೇತರ 18,742 (50.14) ಆಯ್ಕೆ ಬಿ.ಆರ್. ಪಾಟೀಲ್; ಐಎನ್‌ಸಿ 16,781 (44.89), ಬಿಜೆಎಸ್ 1,859 (4.97). (9) ಹಿರೇಕೆರೂರು ಐಎನ್‌ಸಿ 30,368 (66.65) ಆಯ್ಕೆ ಎಸ್.ಬಿ.

ಗುಬ್ಬಿ; ಪಿಎಸ್‌ಪಿ 15,126 (33.25). (10) ರಾಣೆಬೆನ್ನೂರು ಪಿಎಸ್‌ಪಿ 25,550 (61.71) ಎನ್.ಎಲ್. ಬೆಲ್ಲದ; ಐಎನ್‌ಸಿ 15,262 (36.86), ಪಕ್ಷೇತರ 593 (1.43). (11) ಬ್ಯಾಡಗಿ ಪಿಎಸ್‌ಪಿ 23,055 (61.41) ಆಯ್ಕೆ ಎಂ.ಜಿ. ಬಣಕಾರ; ಐಎನ್‌ಸಿ 15,262 (36.86); ಪಕ್ಷೇತರ 562 (1.49). (12) ಹಾವೇರಿ ಐಎನ್‌ಸಿ 20,494 (59.37) ಆಯ್ಕೆ ಡಿ.ವಿ. ಮಾಗಾವಿ, ಸಿ ಪಿಎಂ 11,905 (34.49), ಹಾಗೂ ಮೂರು ಜನ ಪಕ್ಷೇತರರು 2,118 (6.14). (13) ಶಿರಹಟ್ಟಿ ಸ್ವತಂತ್ರಪಕ್ಷ 23.646 (51.06), ಆಯ್ಕೆ ಎಸ್.ವಿ. ಕಾಶೀಮಠ; ಐಎನ್‌ಸಿ 22,661 (48.94). (14) ಮುಂಡರಗಿ ಐಎನ್‌ಸಿ 26,220 (59.90) ಆಯ್ಕೆ ಸಿ.ಎಂ. ಚುರ್ಚಿಹಾಳುಮಠ; ಪಕ್ಷೇತರ 17,552 (40.10). (15) ಗದಗ ಪಕ್ಷೇತರ ಆಯ್ಕೆ ಕೆ.ಹೆಚ್. ಪಾಟೀಲ್ 27,759 (55.11); ಐಎನ್‌ಸಿ 22,609 (44.89). (16) ನರಗುಂದ (ಮೀಸಲು) ಐಎನ್‌ಸಿ 14,402 (73.52) ಆಯ್ಕೆ ಆರ್.ವಿ. ದೊಡ್ಡಮನಿ; ಎಸ್‌ಎಸ್ ಪಿ 4,714 (24.06), ಆರ್.ಪಿ.ಐ 473 (2.42). (17) ರೋಣ ಐಎನ್‌ಸಿ 21,573 (61.89) ಆಯ್ಕೆ ಎ.ಜಿ. ದೊಡ್ಡಮೇಟಿ; ಪಕ್ಷೇತರ 13,285 (38.11). (18) ನವಲಗುಂದ ಐಎನ್‌ಸಿ 25,973 (74.64), ಆಯ್ಕೆ ಆರ್.ಎಂ. ಪಾಟೀಲ್; ಪಕ್ಷೇತರ 7,791 (22.39), ಬಿಜೆಎಸ್ 1,036 (2.97). ಹಾನಗಲ್ ಕ್ಷೇತ್ರದ ಶಾಸಕರು ನಿಧನ ಹೊಂದಿದ್ದರಿಂದ ದಿನಾಂಕ 2.3.1968 ರಂದು ಈ ಕ್ಷೇತ್ರದಲ್ಲಿ ಉಪಚುನಾವಣೆ ನಡೆದು ಕಾಂಗ್ರೆಸ್ಸಿನ ಸಿ.ಎಸ್. ದೇಸಾಯಿ ಜಯಗಳಿಸಿದರು. ಪಕ್ಷಗಳು ಗಳಿಸಿದ ಮತಗಳು ಐಎನ್‌ಸಿ 20,759 (52.09), ಪಿಎಸ್‌ಪಿ 13,762 (34.53), ಎಸ್ ಎಸ್‌ಪಿ 4,328 (10.86).

**ಉಪಚುನಾವಣೆ**

ಹುಬ್ಬಳ್ಳಿಯ ಶಾಸಕರು ನಿಧನ ಹೊಂದಿದ್ದರಿಂದ ಮತ್ತೊಂದು ಉಪಚುನಾವಣೆ ದಿನಾಂಕ 2.6.1969 ರಂದು ನಡೆದು ಇದರಲ್ಲಿ ಕಾಂಗ್ರೆಸ್ಸಿನ ಅಭ್ಯರ್ಥಿ ಆರ್.ಜಿ.ವಾಲಿಯವರು ಗೆದ್ದರು. ಪಕ್ಷಗಳು ಗಳಿಸಿದ ಮತಗಳು ಐಎನ್‌ಸಿ 14,942 (41.99) ಆಯ್ಕೆ; ಬಿಜೆಎಸ್ 14,140 (39.74), ಸಿಪಿಐ 5,097 (14.32), ಇಬ್ಬರು ಪಕ್ಷೇತರರು 1406 (3.95) ಮತಗಳನ್ನು ಪಡೆದರು. (ಎಸ್.ಎಸ್.ಪಿ ಸಂಯುಕ್ತ ಸೋಶಿಯಲಿಸ್ಟ ಪಕ್ಷ, ಆರ್.ಪಿ.ಐ.-ಭಾರತೀಯ ರಿಪಬ್ಲಿಕನ್ ಪಕ್ಷ).

**ಲೋಕಸಭಾ ಚುನಾವಣೆ 1971**

ಲೋಕಸಭೆಯ ಅವಧಿ ಪೂರ್ಣಗೊಳ್ಳುವುದಕ್ಕೆ ಇನ್ನೂ ಒಂದು ವರ್ಷದ ಅವಧಿ ಇರುವಾಗಲೇ ಲೋಕಸಭೆಯನ್ನು ವಿಸರ್ಜಿಸಿ, ಹೊಸ ಚುನಾವಣೆಗಳನ್ನು 1971 ರ ಮಾರ್ಚಿ ತಿಂಗಳಲ್ಲಿ ನಡೆಸಲಾಯಿತು. ಆಡಳಿತ ನಡೆಸುತ್ತಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗಿ ಎರಡು ಬಣಗಳಾಯಿತು. ಜಗಜೀವನರಾಮರ ನೇತೃತ್ವದ ಬಣ ರಾಷ್ಟ್ರೀಯ ಕಾಂಗ್ರೆಸ್ ಜಗಜೀವನರಾಮ್ (ಎನ್‌ಸಿಜೆ) ಎಂದು ಹೆಸರು ಪಡೆದರೆ ಮತ್ತೊಂದು ಬಣ ನಿಜಲಿಂಗಪ್ಪನವರ ನೇತೃತ್ವದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ನಿಜಲಿಂಗಪ್ಪ (ಎನ್‌ಸಿಓ ಅಥವಾ ಸಂಸ್ಥಾ ಕಾಂಗ್ರೆಸ್) ಎಂಬುದಾಗಿ ಅಸ್ತಿತ್ವಕ್ಕೆ ಬಂದವು. ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯ ಎರಡು ಸ್ಥಾನಗಳಿಗೂ ಈ ಪಕ್ಷಗಳು ತಮ್ಮ ಉಮೇದುವಾರರನ್ನು ನಿಲ್ಲಿಸಿದ್ದವು. ಈ ಎರಡು ಕ್ಷೇತ್ರಗಳನ್ನು ಜಗಜೀವನರಾಮ ನೇತೃತ್ವದ ಕಾಂಗ್ರೆಸ್ ಪಕ್ಷ ಗೆದ್ದುಕೊಂಡಿತು. ಸ್ಪರ್ಧಿಸಿದ್ದ ಪ್ರತಿಯೊಂದು ಪಕ್ಷವು ಗಳಿಸಿದ ಮತಗಳು ಹೀಗಿತ್ತು. (1) ಧಾರವಾಡ ದಕ್ಷಿಣ ಎನ್‌ಸಿಜೆ 1,97,901 (69.00) ಆಯ್ಕೆ ಎಫ್.ಹೆಚ್. ಮೊಹಿಸಿನ್; ಎನ್‌ಸಿಓ 83,959 (29.27); ಪಕ್ಷೇತರ 4,943 (1.72). (2) ಧಾರವಾಡ ಉತ್ತರ ಎನ್‌ಸಿಜೆ 1,89,382 (66.82) ಆಯ್ಕೆ ಶ್ರೀಮತಿ ಸರೋಜಿನಿ ಬಿಂದೂರಾವ್ ಮಹಿಷಿ; ಎನ್‌ಸಿಓ 91,313 (31.22), ಪಿಎಸ್‌ಪಿ 2,742 (0.96).

**1972 ರ ವಿಧಾನಸಭೆ ಚುನಾವಣೆ**

ಐದನೇಯ ವಿಧಾನ ಸಭೆಗೆ ಸದಸ್ಯರನ್ನು ಆಯ್ಕೆ ಮಾಡಲು 1972 ರ ಮಾರ್ಚಿ ತಿಂಗಳಲ್ಲಿ ಚುನಾವಣೆಗಳನ್ನು ನಡೆಸಲಾಯಿತು. ನರಗುಂದವು ಮೀಸಲು ಕ್ಷೇತ್ರವಾಗಿ ಮುಂದುವರೆಯಿತು. ಈ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐ) 18

ಸ್ಥಾನಗಳಲ್ಲಿ 17 ಸ್ಥಾನಗಳಲ್ಲಿ ತನ್ನದಾಗಿಸಿಕೊಂಡಿತು. ಸಂಸ್ಥಾ ಕಾಂಗ್ರೆಸ್ ಪಕ್ಷವು ನವಲಗುಂದ ಕ್ಷೇತ್ರವನ್ನು ಮಾತ್ರ ಗೆಲ್ಲುವುದರಲ್ಲಿ ಸಫಲವಾಯಿತು. ಪ್ರತೀ ಕ್ಷೇತ್ರದಲ್ಲಿ ವಿವಿಧ ಪಕ್ಷಗಳು ಗಳಿಸಿದ ಮತಗಳು ಈ ರೀತಿ ಇದೆ. (1) ಧಾರವಾಡ ಗ್ರಾಮಾಂತರ ಐಎನ್‌ಸಿ 22,710 (70.37) ಆಯ್ಕೆ ಶ್ರೀಮತಿ ಸುಮತಿ ಬಾಲಚಂದ್ರ ಮಡಿಮನ್; ಎನ್‌ಸಿಓ 7,392 (22.91), ಎಸ್‌ಓಪಿ 2,170 (6.72). (2) ಧಾರವಾಡ ಐಎನ್‌ಸಿ 18,653 (51.62) ಆಯ್ಕೆ ಡಿ.ಕೆ. ನಾಯ್ಕರ್; ಬಿಜೆಎಸ್ 10,117 (28.00), ಎನ್‌ಸಿಓ 6,685 (18.50), ಸ್ವತಂತ್ರ 677 (1.88). (3) ಹುಬ್ಬಳ್ಳಿ ಐಎನ್‌ಸಿ 24,741 (57.51) ಆಯ್ಕೆ ಐ.ಜಿ. ಸನದಿ; ಬಿಜೆಎಸ್ 16,432 (38.20), ಎನ್‌ಸಿಓ 1,848 (4.29). (4) ಹುಬ್ಬಳ್ಳಿ ಗ್ರಾಮಾಂತರ ಐಎನ್‌ಸಿ 27,745 (60.05) ಆಯ್ಕೆ ಜಿ.ಆರ್. ಸಾಂಡ್ರ; ಎನ್‌ಸಿ ಓ 10,515 (22.75); ಬಿಜೆಎಸ್ 7,946 (17.20). (5) ಕಲಘಟಗಿ ಐಎನ್‌ಸಿ 18,708 (51.94) ಆಯ್ಕೆ ಜಿ.ಸಿ. ಪಾಟೀಲ್; ಎನ್‌ಸಿಓ 16,259 (45.14), ಪಕ್ಷೇತರ 1,054 (2.92). (6) ಕುಂದಗೋಳ ಐಎನ್‌ಸಿ 25,694 (60.67) ಆಯ್ಕೆ ಆರ್.ವಿ. ರಂಗನಗೌಡ; ಎನ್‌ಸಿಓ 16,659 (39.33). (7) ಶಿಗ್ಗಾಂವಿ ಐಎನ್‌ಸಿ 19,799 (48.79) ಆಯ್ಕೆ ನದಾಫ ಮಹಮ್ಮದ್ ಕಾಸಿಂಸಾಬ್ ಮರ್ದಾನಸಾಬ್; ಪಕ್ಷೇತರ 16,270 (40.10), ಬಿಜೆಎಸ್ 657 (1.62), ಮೂರು ಜನ ಪಕ್ಷೇತರರು 3,850 (9.49). (8) ಹಾನಗಲ್ ಐಎನ್‌ಸಿ 31,348 (65.59) ಆಯ್ಕೆ ಪಿ.ಸಿ. ಶೆಟ್ಟರ್; ಎನ್‌ಸಿಓ 15,002 (31.39), ಪಕ್ಷೇತರ 806 (1.69), ಬಿಜೆಎಸ್ 636 (1.33). (9) ಹಿರೇಕೆರೂರು ಐಎನ್‌ಸಿ 28,205 (53.15) ಆಯ್ಕೆ ಬಿ.ಜಿ. ಬಣಕಾರ್; ಎನ್‌ಸಿಓ 24,529 (46.22), ಬಿಜೆಎಸ್ 333 (0.63). (10) ರಾಣೆಬೆನ್ನೂರು ಐಎನ್‌ಸಿ 28,540 (61.00) ಆಯ್ಕೆ ಬಿ.ಕೋಳಿವಾಡ; ಎನ್‌ಸಿಓ 17,043 (36.43), ಪಕ್ಷೇತರ 703 (1.50), ಬಿಜೆಎಸ್ 503 (1.07), 11. ಬ್ಯಾಡಗಿ ಐಎನ್‌ಸಿ 19,792 (47.66) ಆಯ್ಕೆ ಕೆ.ಎಫ್. ಪಾಟೀಲ್; ಎನ್‌ಸಿಓ 12419 (29.91), ಪಕ್ಷೇತರ 8.766 (21.11), ಹಾಗೂ ಇಬ್ಬರು ಪಕ್ಷೇತರರು ಒಟ್ಟು 549 (1.32). (12) ಹಾವೇರಿ ಐಎನ್‌ಸಿ 25,061 (57.16) ಆಯ್ಕೆ ಎಫ್.ಎಸ್. ತಾವರೆ; ಎನ್‌ಸಿಓ 15,650 (35.70), ಸಿಪಿಎಂ 3,132 (7.14). (13) ಶಿರಹಟ್ಟಿ ಐಎನ್‌ಸಿ 21,314 (45.28) ಆಯ್ಕೆ ವಿ.ವಿ. ವಾಯಿ; ಸ್ವತಂತ್ರ 9,797 (20.81), ಪಕ್ಷೇತರ 8,711 (18.51), ಎನ್‌ಸಿಓ 3,430 (7.29), ಮೂರು ಮಂದಿ ಪಕ್ಷೇತರರು 3,816 ಮತ (8.11). (14) ಮುಂಡರಗಿ ಐಎನ್‌ಸಿ 28,054 (60.46) ಆಯ್ಕೆ ಕೆ.ಹೆಚ್. ಕುರಡಗಿ; ಎನ್‌ಸಿಓ 16,993 (36.62), ಬಿ ಜೆಎಸ್ 1,355 (2.92). (15) ಗದಗ ಐಎನ್‌ಸಿ 29,638 (54.19) ಆಯ್ಕೆ ಕೆ.ಹೆಚ್. ಪಾಟೀಲ್; ಎನ್‌ಸಿಓ 22,709 (41.51), ಬಿಜೆಎಸ್ 2,350 (4.30). (16) ರೋಣ ಐಎನ್‌ಸಿ 20,567 (58.59) ಆಯ್ಕೆ ಎ.ವಿ. ಪಾಟೀಲ; ಪಕ್ಷೇತರ 13,121 (37.38), ಬಿಜೆಎಸ್ 1,413 (4.03). (17) ನರಗುಂದ (ಮೀಸಲು) ಐಎನ್‌ಸಿ 20,070 (60.05) ಆಯ್ಕೆ ವೈ.ವಿ. ಜೋಗಣ್ಣವರ್; ಎನ್‌ಸಿಓ 13,350 (39.95). (18) ನವಲಗುಂದ ಎನ್‌ಸಿಓ 21,716 (51.31) ಆಯ್ಕೆ ಎಂ.ಕೆ. ಕುಲಕರ್ಣಿ; ಐಎನ್‌ಸಿ 19,594 (46.30), ಬಿಜೆಎಸ್ 1,013 (2.39).

### 1977 ರ ಲೋಕಸಭಾ ಚುನಾವಣೆ

ಕಾರಣಾಂತರಗಳಿಂದ 1976 ರಲ್ಲಿ ಮುಕ್ತಾಯವಾಗಬೇಕಾಗಿದ್ದ ಐದನೇಯ ಲೋಕಸಭೆಯ ಅವಧಿಯನ್ನು ಒಂದು ವರ್ಷ ವಿಸ್ತರಿಸಲಾಯಿತು. 1977 ರಲ್ಲಿ ಆರನೇಯ ಲೋಕಸಭೆಗೆ ಚುನಾವಣೆಗಳನ್ನು ನಡೆಸಲಾಯಿತು. ಈ ಸಮಯದಲ್ಲಿ ದೇಶದಲ್ಲಿ ರಾಜಕೀಯ ಧ್ರುವೀಕರಣ ಪ್ರಾರಂಭವಾಯಿತು. ರಾಷ್ಟ್ರೀಯ ಪಕ್ಷಗಳಿಂದ ಭಾರತೀಯ ಜನಸಂಘ, ಸ್ವತಂತ್ರಪಕ್ಷ, ಸೋಶಿಯಲಿಸ್ಟ ಮುಂತಾದವು ಸಂಯುಕ್ತವಾಗಿ ಭಾರತೀಯ ಲೋಕದಳ ಎಂಬ ನೂತನ ಪಕ್ಷವನ್ನು (ವಾಸ್ತವವಾಗಿ ಅದಕ್ಕೆ ಜನತಾ ಪಕ್ಷ ಎಂದು ಹೆಸರಿತ್ತು) ರಚಿಸಿದವು. ಧಾರವಾಡ ದಕ್ಷಿಣ ಪಾರ್ಲಿಮೆಂಟ ಕ್ಷೇತ್ರದಲ್ಲಿ ಕುಂದಗೋಳ ಶಿಗ್ಗಾಂವಿ, ಹಾನಗಲ್, ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ, ಬ್ಯಾಡಗಿ (ಮೀಸಲು) ಹಾಗೂ ಶಿರಹಟ್ಟಿ ವಿಧಾನ ಸಭಾ ಕ್ಷೇತ್ರಗಳಿದ್ದವು. ಧಾರವಾಡ ಉತ್ತರ ಕ್ಷೇತ್ರದಲ್ಲಿ, ಧಾರವಾಡ ಗ್ರಾಮಾಂತರ, ಧಾರವಾಡ, ಹುಬ್ಬಳ್ಳಿ ಗ್ರಾಮಾಂತರ, ಕಲಘಟಗಿ ಗದಗ, ನರಗುಂದ ಮತ್ತು ನವಲಗುಂದ ವಿಧಾನಸಭಾ ಕ್ಷೇತ್ರಗಳಿದ್ದವು. ರೋಣ ಮತ್ತು ಮುಂಡರಗಿ ವಿಧಾನ ಸಭಾ ಕ್ಷೇತ್ರಗಳು, ಕ್ರಮವಾಗಿ ಬಾಗಲಕೋಟೆ ಹಾಗೂ ಕೊಪ್ಪಳ ಲೋಕಸಭಾ ಕ್ಷೇತ್ರಗಳ ಭಾಗವಾಗಿದ್ದವು. ಈ ಚುನಾವಣೆಯಲ್ಲಿ ಜಿಲ್ಲೆಯ ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಭಾರತೀಯ ಲೋಕ ದಳಗಳ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತು. ಈ ಎರಡು ಕ್ಷೇತ್ರಗಳಲ್ಲೂ ರಾಷ್ಟ್ರೀಯ ಕಾಂಗ್ರೆಸ್

ಅಭ್ಯರ್ಥಿಗಳು ಗೆಲುವನ್ನು ಸಂಪಾದಿಸಿದರು. 1977 ರ ಚುನಾವಣೆಯಲ್ಲಿ ಸ್ಪರ್ಧೆಯಲ್ಲಿದ್ದ ಪಕ್ಷಗಳು ಪಡೆದ ಮತಗಳು ಹಾಗೂ ಶೇಕಡಾವಾರು ಇಂತಿದೆ. (1) ಧಾರವಾಡ ದಕ್ಷಿಣ ಐಎನ್‌ಸಿ 2,39,210 (60.66) ಆಯ್ಕೆ ಎಫ್.ಹೆಚ್. ಮೊಹಿಸಿನ್; ಬಿಎಲ್‌ಡಿ 1,47,270 (37.35), ಪಕ್ಷೇತರ 7,834 (1.99). (2) ಧಾರವಾಡ ಉತ್ತರ ಐಎನ್‌ಸಿ 2,05,627 (57.63) ಆಯ್ಕೆ ಶ್ರೀಮತಿ ಸರೋಜಿನಿ ಬಿಂದೂರಾವ್ ಮಹಿಷಿ; ಬಿಎಲ್‌ಡಿ 1,51,199 (42.37).

### 1978 ರ ವಿಧಾನಸಭಾ ಚುನಾವಣೆ

ಒಟ್ಟು 18 ಸ್ಥಾನಗಳ ಪೈಕಿ ನರಗುಂದವು ಮೀಸಲು ಕ್ಷೇತ್ರವಾಗಿತ್ತು. ಆದರೆ 1976 ರ ಡಿಲಿಮಿಟೇಷನ್ ಆದೇಶದ ಪ್ರಕಾರ ನರಗುಂದವು ಸಾಮಾನ್ಯ ಕ್ಷೇತ್ರವಾಯಿತು. ಬ್ಯಾಡಗಿಯನ್ನು ಮೀಸಲು ಕ್ಷೇತ್ರವಾಗಿ ಮಾಡಲಾಯಿತು. ಕಾಂಗ್ರೆ ಪಕ್ಷದಲ್ಲಿ ಒಡಕುಂಟಾಗಿ ಬ್ರಹ್ಮಾನಂದ ರೆಡ್ಡಿಯವರ ನೇತೃತ್ವದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಎಂಬುದಾಗಿ ಕರೆಯಲ್ಪಟ್ಟಿತು. ಹಿಂದಿನ ಭಾರತೀಯ ಲೋಕ ದಳವು ನಂತರ ಜನತಾ ಪಕ್ಷವೆಂದು ಕೇಂದ್ರದಲ್ಲಿ ಅಧಿಕಾರ ಸೂತ್ರ ಹಿಡಿಯಿತು. ಈ ಚುನಾವಣೆಯಲ್ಲಿ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಲ್ಲಿ ಮುಖ್ಯವಾದ ಹೋರಾಟವಿದ್ದಿದ್ದು ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆ ಪಕ್ಷ ಹಾಗೂ ಜನತಾಪಕ್ಷಗಳ ನಡುವೆ. 18 ಕ್ಷೇತ್ರಗಳ ಪೈಕಿ ಕಾಂಗ್ರೆ ಪಕ್ಷ 12 ಸ್ಥಾನಗಳನ್ನು ಪಡೆದರೆ, ಜನತಾಪಕ್ಷ 5 ಹಾಗೂ ಪಕ್ಷೇತರರು ಒಂದು ಸ್ಥಾನವನ್ನು ಗಳಿಸಿದರು. ಈ ಪಕ್ಷಗಳು ಪಡೆದ ಮತಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ. (1) ಧಾರವಾಡ ಗ್ರಾಮಾಂತರ ಕಾಂಗ್ರೆಸ್ ಐ 30,354 (63.72) ಆಯ್ಕೆ ಎಸ್.ಬಿ. ಮಡಿಮನ್; ಜನತಾ 15,378 (32.28), ಕಾಂಗ್ರೆಸ್-ಬಿ 1,279 (2.69), ಪಕ್ಷೇತರ 622 (1.31). (2) ಧಾರವಾಡ ಜನತಾ ಪಕ್ಷ 27,530 (51.89) ಆಯ್ಕೆ ಭಾವುರಾವ್ ದೇಶಪಾಂಡೆ; ಕಾಂಗ್ರೆಸ್ ಐ 23,182 (43.70), ಕಾಂಗ್ರೆಸ್-ಬಿ 717 (1.46), ಇಬ್ಬರು ಪಕ್ಷೇತರರು 1,563 (2.95). (3) ಹುಬ್ಬಳ್ಳಿ ಜನತಾಪಕ್ಷ 27,694 (47.88) ಆಯ್ಕೆ ಎಂ.ಜಿ. ಜರತಾರಘರ್; ಸಿಪಿಐ 27,438 (47.43), ಕಾಂಗ್ರೆಸ್ ಬಿ 1,501 (2.59), ಐದು ಮಂದಿ ಪಕ್ಷೇತರರು 1,213 (2.10). (4) ಹುಬ್ಬಳ್ಳಿ ಗ್ರಾಮಾಂತರ ಜನತಾ ಪಕ್ಷ 31,771 (53.35) ಆಯ್ಕೆ ಎಸ್.ಆರ್. ಬೊಮ್ಮಾಯಿ; ಕಾಂಗ್ರೆಸ್ ಐ 23,137 (38.85); ಕಾಂಗ್ರೆಸ್-ಬಿ 4,165 (6.99), ಪಕ್ಷೇತರ 482 (0.81). (5) ಕಲಘಟಗಿ ಜನತಾ ಪಕ್ಷ 23,789 (48.74) ಆಯ್ಕೆ ಎಫ್.ಎಸ್. ಪಾಟೀಲ್; ಕಾಂಗ್ರೆಸ್ ಐ 17,736 (36.34), ಕಾಂಗ್ರೆಸ್-ಬಿ 6,237 (12.78), ಪಕ್ಷೇತರ 1,049 (2.14). (6) ಕುಂದಗೋಳ ಕಾಂಗ್ರೆಸ್ ಐ 34,761 (60.74) ಆಯ್ಕೆ ಎಂ.ಎಸ್. ಕಟಗಿ; ಜನತಾಪಕ್ಷ 16,884 (29.50), ಆರು ಮಂದಿ ಪಕ್ಷೇತರರು ಒಟ್ಟು 5,587 (9.76). (7) ಶಿಗ್ಗಾಂವಿ ಕಾಂಗ್ರೆಸ್ ಐ 33,669 (56.36), ಆಯ್ಕೆ ಎಂ.ಕೆ.ಎಂ. ನದಾಫ್; ಜನತಾ ಪಕ್ಷ 22,496 (37.66), ಕಾಂಗ್ರೆಸ್-ಬಿ 2,759 (4.62), ಇಬ್ಬರು ಪಕ್ಷೇತರರು 811 (1.36). (8) ಹಾನಗಲ್ ಕಾಂಗ್ರೆಸ್ ಐ 35,228 (63.66) ಆಯ್ಕೆ ಎಂ.ಹೆಚ್. ತಹಸೀಲ್ದಾರ್; ಜನತಾಪಕ್ಷ 9,866 (17.83), ಕಾಂಗ್ರೆಸ್ ಬಿ 8,609 (15.56) ಇಬ್ಬರು ಪಕ್ಷೇತರರು 1,638 (2.95). (9) ಹಿರೇಕೆರೂರು ಪಕ್ಷೇತರ 32,103 (52.83) ಆಯ್ಕೆ ಎಸ್.ಬಿ. ಗುಬ್ಬಿ; ಕಾಂಗ್ರೆಸ್ ಐ 23,695 (38.99), ಜನತಾ ಪಕ್ಷ 3,069 (5.05), ಕಾಂಗ್ರೆಸ್-ಬಿ 1,708 (2.82), ಪಕ್ಷೇತರ 190 (0.31). (10) ರಾಣೆಬೆನ್ನೂರು ಕಾಂಗ್ರೆಸ್ ಐ 25,675 (43.51), ಆಯ್ಕೆ ಎಸ್.ಹೆಚ್. ನಲವಾಗಲ; ಜನತಾ ಪಕ್ಷ 24,892 (42.18), ಕಾಂಗ್ರೆಸ್ ಬಿ 8,238 (13.96), ಪಕ್ಷೇತರ 203 (0.35). (11) ಬ್ಯಾಡಗಿ (ಮೀಸಲು) ಕಾಂಗ್ರೆಸ್ ಐ 27,640 (58.30), ಆಯ್ಕೆ ಎಂ.ಎ. ಮಳಗಿ, ಜನತಾಪಕ್ಷ 16,289 (34.35), ಕಾಂಗ್ರೆಸ್ ಬಿ 2,144 (4.52), ಪಕ್ಷೇತರ 304 (0.64). (12) ಹಾವೇರಿ ಕಾಂಗ್ರೆಸ್-ಬಿ 34,067 (58.99), ಆಯ್ಕೆ ಎಫ್.ಎಸ್. ತಾವರೆ; ಜನತಾ ಪಕ್ಷ 17,105 (29.61), ಕಾಂಗ್ರೆಸ್-ಬಿ 6,583 (11.40). (13) ಶಿರಹಟ್ಟಿ ಕಾಂಗ್ರೆಸ್ ಐ 28,606 (55.03) ಆಯ್ಕೆ ಜಿ.ಎಫ್. ಉಪನಾಳ್; ಜನತಾ ಪಕ್ಷ 14,466 (27.83), ಕಾಂಗ್ರೆಸ್-ಬಿ 8,190 (15.75), ಇಬ್ಬರು ಪಕ್ಷೇತರರು 723 (1.39). (14) ಮುಂಡರಗಿ ಕಾಂಗ್ರೆಸ್ ಐ 19,069 (39.19) ಆಯ್ಕೆ ವಿ.ಬಿ. ಭಾವಿ; ಜನತಾ ಪಕ್ಷ 18,363 (37.74), ಕಾಂಗ್ರೆಸ್ ಬಿ 9,598 (19.73), ಪಕ್ಷೇತರ 1,622 (3.34). (15) ಗದಗ ಜನತಾ ಪಕ್ಷ 28,094 (44.41) ಆಯ್ಕೆ ಸಿ.ಎಸ್. ಮುತ್ತಿನಪೆಂಡಿಮಠ; ಕಾಂಗ್ರೆಸ್ 25,649 (40.54), ಕಾಂಗ್ರೆಸ್ ಐ 9,025 (14.55), ಪಕ್ಷೇತರ 319 (0.50). (16) ರೋಣ ಕಾಂಗ್ರೆಸ್ ಐ 26,546 (51.33) ಆಯ್ಕೆ ವಿ.ಎ.

ಮತ್ತಿಕಟ್ಟಿ; ಜನತಾ ಪಕ್ಷ 20,709 (40.04), ಪಕ್ಷೇತರ 2,671 (5.16), ಕಾಂಗ್ರೆಸ್-ಬಿ 1,791 (3.47). (17) ನರಗುಂದ ಕಾಂಗ್ರೆಸ್ ಐ 16,496 (36.93) ಆಯ್ಕೆ ಬಿ.ಆರ್. ಪಾಟೀಲ್; ಜನತಾ ಪಕ್ಷ 15,450 (34.59), ಕಾಂಗ್ರೆಸ್ 8,887 (19.89), ಇಬ್ಬರು ಪಕ್ಷೇತರರು 3,837 (8.09). (18) ನವಲಗುಂದ ಕಾಂಗ್ರೆಸ್ ಐ 22,825 (44.86) ಆಯ್ಕೆ ಎಸ್.ಪಿ. ಪಾಟೀಲ್; ಜನತಾ ಪಕ್ಷ 20,205 (38.82), ಕಾಂಗ್ರೆಸ್-ಬಿ 9.014 (17.32).

## 1980 ರ ಲೋಕಸಭಾ ಚುನಾವಣೆ

ಆರನೇಯ ಲೋಕಸಭೆಯ ಅವಧಿ ಇನ್ನೂ ಎರಡು ವರ್ಷಗಳಿರುವಾಗಲೇ ವಿಸರ್ಜಿಸಿ 1980ರಲ್ಲಿ ಮಧ್ಯಾವಧಿ ಚುನಾವಣೆಗಳನ್ನು ನಡೆಸಲಾಯಿತು. ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ ಐ ಪಕ್ಷದಲ್ಲಿ ಒಡಕುಂಟಾಗಿ ದೇವರಾಜ ಅರಸರು ಪಕ್ಷ ತ್ಯಜಿಸಿ ಬ್ರಹ್ಮಾನಂದರೆಡ್ಡಿಯವರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸೇರಿದರು. ನಂತರ ಅರಸುರವರೇ ಈ ಪಕ್ಷದ ಅಧ್ಯಕ್ಷರಾದರು. ಜಿಲ್ಲೆಯ ಎರಡು ಪಾರ್ಲಿಮೆಂಟ್ ಕ್ಷೇತ್ರಗಳಿಗೂ ಕಾಂಗ್ರೆಸ್ (ಐ), ಕಾಂಗ್ರೆಸ್ (ಅರಸು) ಹಾಗೂ ಜನತಾ ಪಕ್ಷಗಳು ತಮ್ಮ ಉಮೇದುವಾರರನ್ನು ನಿಲ್ಲಿಸಿದ್ದವು. ಚುನಾವಣೆಯಲ್ಲಿ ಕಾಂಗ್ರೆಸ್ ಐ ಪಕ್ಷವು ಧಾರವಾಡ ದಕ್ಷಿಣ ಹಾಗೂ ಉತ್ತರ ಕ್ಷೇತ್ರಗಳನ್ನು ಗೆದ್ದಿತು. ವಿವಿಧ ಪಕ್ಷಗಳು ಗಳಿಸಿದ ಮತಗಳು (1) ಧಾರವಾಡ ದಕ್ಷಿಣ - ಕಾಂಗ್ರೆಸ್ ಐ 2,26,083 (61.00) ಆಯ್ಕೆ ಎಫ್.ಹೆಚ್. ಮೊಹಿಸಿನ್; ಕಾಂಗ್ರೆಸ್ (ಅರಸು) 75,050 (20.25), ಜನತಾ ಪಕ್ಷ 61,584 (16.62), ನಾಲ್ಕು ಮಂದಿ ಪಕ್ಷೇತರರು 8,921 (2.13). (2) ಧಾರವಾಡ ಉತ್ತರ - ಕಾಂಗ್ರೆಸ್ ಐ2,08,269 (58.19) ಆಯ್ಕೆ ಡಿ.ಕೆ. ನಾಯ್ಕರ್; ಜನತಾ ಪಕ್ಷ 1,11,575 (31.17), ಕಾಂಗ್ರೆಸ್ (ಅರಸು) 25,851 (7.22), ನಾಲ್ಕು ಮಂದಿ ಪಕ್ಷೇತರರು 12,246 (3.42).

## 1983 ರ ವಿಧಾನ ಸಭೆಯ ಚುನಾವಣೆ

ವಿಧಾನ ಸಭೆಯು ಐದು ವರ್ಷಗಳ ಅವಧಿ ಪೂರೈಸಿದ ನಂತರ ಚುನಾವಣೆಗಳನ್ನು ನಡೆಸಲಾಯಿತು. ಜನತಾ ಪಕ್ಷದಲ್ಲಿ ಒಡಕು ಉಂಟಾಗಿ ಸಿಡಿದು ಬಂದ ಒಂದು ಬಣ ಭಾರತೀಯ ಜನತಾ ಪಕ್ಷವೆಂದು ಹೊಸದಾಗಿ ಪಕ್ಷ ರಚಿಸಿಕೊಂಡಿತು. ಚರಣಸಿಂಗರ ನೇತೃತ್ವದ ಲೋಕದಳವು ಚುನಾವಣೆಯಲ್ಲಿ ಸ್ಪರ್ಧಿಸಿತು. ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಐ ಪಕ್ಷವು ಜಿಲ್ಲೆಯ ಎಲ್ಲಾ 18 ಸ್ಥಾನಗಳಿಗೆ ಸ್ಪರ್ಧಿಸಿದರೆ, ಜನತಾ ಪಕ್ಷ 16 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸಿತು. ಭಾರತೀಯ ಜನತಾ ಪಕ್ಷದ 6 ಅಭ್ಯರ್ಥಿಗಳು ಹಾಗೂ ಸಿಪಿಐ ನ ಒಬ್ಬರು ಚುನಾವಣೆ ಕಣದಲ್ಲಿದ್ದರು. ಚುನಾವಣೆಯಲ್ಲಿ ಕಾಂಗ್ರೆಸ್ ಐ ಪಕ್ಷ ಅನೇಕ ಸ್ಥಾನಗಳನ್ನು ಕಳೆದುಕೊಂಡು ಕೇವಲ 8 ಕ್ಷೇತ್ರಗಳನ್ನು ಗೆಲ್ಲುವುದರಲ್ಲಿ ಸಫಲವಾಯಿತು. ಜನತಾ ಪಕ್ಷ, ಭಾರತೀಯ ಜನತಾ ಪಕ್ಷ ಹಾಗೂ ಪಕ್ಷೇತರರು ಕ್ರಮವಾಗಿ 5, 1 ಹಾಗೂ 4 ಸ್ಥಾನಗಳನ್ನು ಪಡೆದರು. ಚುನಾವಣಾ ವಿವರಗಳು ಈ ರೀತಿ ಇದೆ: (1) ಧಾರವಾಡ ಗ್ರಾಮಾಂತರ ಕಾಂಗ್ರೆಸ್ 30,240 (56.00) ಆಯ್ಕೆ ಸಿ.ವಿ. ಪುಡಕಲಕಟ್ಟಿ; ಜನತಾ ಪಕ್ಷ 21,946 (40.65). ಮೂರು ಮಂದಿ ಪಕ್ಷೇತರರು 1,811 (3.45). (2) ಧಾರವಾಡ ಕಾಂಗ್ರೆಸ್ 17,991 (31.21) ಆಯ್ಕೆ ಎಸ್.ಆರ್. ಮೋರೆ; ಜನತಾ ಪಕ್ಷ 17,859 (30.98), ಭಾಜಪ 9,864 (17.12), ಲೋಕದಳ 1.064 (1.85), 16 ಮಂದಿ ಪಕ್ಷೇತರರು 10.863 (18.84). (3) ಹುಬ್ಬಳ್ಳಿ ಭಾಜಪ22.938 (40.80) ಆಯ್ಕೆ ಎಂ.ಜಿ. ಜರತಾರಘರ್; ಸಿಪಿಐ (ಭಾರತೀಯ ಕಮ್ಯೂನಿಸ್ಟ್ ಪಕ್ಷ)18,424 (32.77), ಕಾಂಗ್ರೆಸ್ 14,259 (25.36), ಮೂರು ಮಂದಿ ಪಕ್ಷೇತರರು 602 (1.07). (4) ಹುಬ್ಬಳ್ಳಿ ಗ್ರಾಮಾಂತರ ಜನತಾ ಪಕ್ಷ 31,644 (49.38) ಆಯ್ಕೆ ಎಸ್.ಆರ್. ಬೊಮ್ಮಾಯಿ; ಕಾಂಗ್ರೆಸ್22,341 (34.87), ಭಾಜಪ 9,388 (14.65), ಮೂರು ಮಂದಿ ಪಕ್ಷೇತರರು 701 (1.10). (5) ಕಲಘಟಗಿ ಪಕ್ಷೇತರ23,664 (46.56) ಆಯ್ಕೆ ಜೇಕಬ್ ಪಲ್ಲಿಪುರಥು; ಕಾಂಗ್ರೆಸ್ 23,168 (45.58), ಜನತಾ ಪಕ್ಷ 3.007 (5.98), ನಾಲ್ಕು ಮಂದಿ ಪಕ್ಷೇತರರು 958 (1.88). (6) ಕುಂದಗೋಳ ಕಾಂಗ್ರೆಸ್ 28,848 (54.43) ಆಯ್ಕೆ ವಿ.ಎಸ್. ಕುಬಿಹಾಳ; ಜನತಾಪಕ್ಷ 22,489 (42.43)ಮೂರು ಮಂದಿ ಪಕ್ಷೇತರರು 1,665 (3.14). (7) ಶಿಗ್ಗಾಂವಿ ಕಾಂಗ್ರೆಸ್ 26,801 (48.11) ಆಯ್ಕೆ ನದಾಫ್ ಕಾಸಿಂಸಾಬ್ ಮರ್ದಾನ್ ಸಾಬ್; ಜನತಾಪಕ್ಷ 24,250 (43.54), ಭಾಜಪ 1,488 (2.67), ನಾಲ್ಕು ಮಂದಿ ಪಕ್ಷೇತರರು 3,161 (5.68). (8) ಹಾನಗಲ್ ಪಕ್ಷೇತರ

35,617 (56.55) ಆಯ್ಕೆ ಸಿ.ಎಂ. ಉದಾಸಿ; ಕಾಂಗ್ರೆಸ್25,565 (40.60), ಜನತಾ ಪಕ್ಷ 1,568 (2.49), ಪಕ್ಷೇತರ 224 (0.36). (9) ಹಿರೇಕೆರೂರು ಪಕ್ಷೇತರ32,268 (51.17) ಆಯ್ಕೆ ಬಿ.ಜಿ.ಬಣಕಾರ; ಕಾಂಗ್ರೆಸ್27,517 (43.65), ಜನತಾ ಪಕ್ಷ 2,877 (4.56), ಇಬ್ಬರು ಪಕ್ಷೇತರರು 393 (0.62).(10) ರಾಣೆಬೆನ್ನೂರು ಜನತಾ ಪಕ್ಷ36,395 (54.41) ಆಯ್ಕೆ ಬಿ.ಜಿ. ಪಾಟೀಲ್; ಪಕ್ಷೇತರ 13,302 (19.88), ಕಾಂಗ್ರೆಸ್ 11,911 (17.85), ಆರು ಮಂದಿ ಪಕ್ಷೇತರರು 5,257 (7.86). (11) ಬ್ಯಾಡಗಿ (ಮೀಸಲು) ಕಾಂಗ್ರೆಸ್ 20,377 (42.42), ಆಯ್ಕೆ ಹೆಚ್.ಡಿ. ಲಮಾಣಿ; ಜನತಾಪಕ್ಷ13,488 (28.08), ಪಕ್ಷೇತರ 10,204 (21.23), ನಾಲ್ಕು ಮಂದಿ ಪಕ್ಷೇತರರು 3,970 (8.27). (12) ಹಾವೇರಿ ಜನತಾ ಪಕ್ಷ33,316 (53.64) ಆಯ್ಕೆ ಸಿ.ಸಿ. ಕಲಕೋಟಿ; ಕಾಂಗ್ರೆಸ್ 26,813(43.16) ಮೂರು ಜನ ಪಕ್ಷೇತರರು 1,989 (3.20). (13) ಶಿರಹಟ್ಟಿ ಪಕ್ಷೇತರ (ಸಂಜಯ ವಿಚಾರ ಮಂಚ) 25,825 (49.14) ಆಯ್ಕೆ ಜಿ.ಎಫ್. ಉಪನಾಳ; ಕಾಂಗ್ರೆಸ್ 20.540 (39.08), ಜನತಾಪಕ್ಷ 4,952 (9.43), ಐದು ಮಂದಿ ಪಕ್ಷೇತರರು 1,240 (2.35). (14) ಮುಂಡರಗಿ ಕಾಂಗ್ರೆಸ್ 23,264 (45.91) ಆಯ್ಕೆ ಕೆ.ಹೆಚ್. ಕುರಡಗಿ; ಪಕ್ಷೇತರ 19,784 (30.04), ಹತ್ತು ಮಂದಿ ಪಕ್ಷೇತರರು 7,533 (15.05). (15) ಗದಗ ಕಾಂಗ್ರೆಸ್ 25,104 (45.94), ಆಯ್ಕೆ ಸಿ.ಎಸ್. ಮುತ್ತಿನಪೆಂಡಿಮಠ; ಜನತಾಪಾರ್ಟಿ20,697 (37.88), ಭಾಜಪ 8.039 (14.71), ಇಬ್ಬರು ಪಕ್ಷೇತರರು 801 (1.47). (16) ರೋಣ ಜನತಾಪಕ್ಷ31,921 (59.10), ಆಯ್ಕೆ ಜೆ.ಎಸ್. ದೊಡ್ಡಮೇಟಿ; ಕಾಂಗ್ರೆಸ್ 20,979 (39.09), ಪಕ್ಷೇತರ 971 (1.81). (17) ನವಲಗುಂದ ಕಾಂಗ್ರೆಸ್ ೨೫,೫೨೪ (56.43) ಆಯ್ಕೆ ಎಂ.ಕೆ. ಕುಲಕರ್ಣಿ; ಜನತಾಪಕ್ಷ 13,857 (30.63), ಭಾಜಪ 2,746 (6.07), ನಾಲ್ಕು ಮಂದಿ ಪಕ್ಷೇತರರು 3,108 (6.87). (18) ನರಗುಂದ ಜನತಾಪಕ್ಷ 22.675 (55.02) ಆಯ್ಕೆ ಯಾವಗಲ್ ಬಸವರೆಡ್ಡಿ ರಂಗಾರೆಡ್ಡಿ; ಕಾಂಗ್ರೆಸ್ 14,156 (34.35), ನಾಲ್ಕು ಮಂದಿ ಪಕ್ಷೇತರರು 4,291 (10.63).

### 1984ರ ಲೋಕಸಭಾ ಚುನಾವಣೆ

ಏಳನೇಯ ಲೋಕ ಸಭೆಯ ಅವಧಿ ಇನ್ನೂ ಪೂರ್ಣಗೊಳ್ಳದೇ ಇರುವಾಗಲೇ ವಿಸರ್ಜಿಸಿ ಹೊಸ ಚುನಾವಣೆಯನ್ನು 1984 ರ ಡಿಸೆಂಬರ್ 24 ರಂದು ನಡೆಸಲಾಯಿತು. ಧಾರವಾಡ ಉತ್ತರ ಮತ್ತು ದಕ್ಷಿಣ ಪಾರ್ಲಿಮೆಂಟ್ ಕ್ಷೇತ್ರಗಳಲ್ಲಿ ತಲಾ 8 ವಿಧಾನ ಸಭಾ ಕ್ಷೇತ್ರಗಳಿದ್ದು ಇವುಗಳ ಗಡಿಗಳಲ್ಲಿ ಯಾವ ಬದಲಾವಣೆಗಳು ಇರಲಿಲ್ಲ. ಎರಡು ಕ್ಷೇತ್ರಗಳಲ್ಲಿ ಬಹುಮುಖ ಸ್ಪರ್ಧೆ ಇದ್ದರೂ, ಮುಖ್ಯ ಹೋರಾಟ ಕಾಂಗ್ರೆಸ್ ಪಕ್ಷ ಹಾಗೂ ಜನತಾ ಪಕ್ಷಗಳ ನಡುವೆ ಇದ್ದಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎರಡು ಕ್ಷೇತ್ರಗಳನ್ನು ಉಳಿಸಿಕೊಂಡಿತು. ಚುನಾವಣೆಯ ಅಂಕಿ ಅಂಶಗಳನ್ನು ಇಲ್ಲಿ ಕೊಡಲಾಗಿದೆ (1)ಧಾರವಾಡ ದಕ್ಷಿಣ ಕಾಂಗ್ರೆಸ್2,57,834 (51.13) ಆಯ್ಕೆ ಅಜೀಜ್‌ಸೇಟ್; ಜನತಾಪಕ್ಷ2,00,227 (41.26), ಹನ್ನೊಂದು ಜನ ಪಕ್ಷೇತರ ಅಭ್ಯರ್ಥಿಗಳು 19,562 ಮತಗಳನ್ನು ಗಳಿಸಿದ್ದರು. (2) ಧಾರವಾಡ ಉತ್ತರ ಕಾಂಗ್ರೆಸ್ 2,29,865 (52.31) ಆಯ್ಕೆ ಡಿ.ಕೆ. ನಾಯ್ಕರ್; ಜನತಾಪಕ್ಷ 1,85,014 (42.10), ಲೋಕದಳ 8,510 (1.93), ಹದಿನಾಲ್ಕು ಮಂದಿ ಪಕ್ಷೇತರರು 16,015 (3.57).

### 1985 ರ ವಿಧಾನಸಭಾ ಚುನಾವಣೆ

ವಿಧಾನಸಭೆಯ ಅವಧಿ ಇನ್ನೂ ಮೂರು ವರ್ಷಗಳಿರುವಾಗಲೇ ವಿಧಾನಸಭೆಯನ್ನು ವಿಸರ್ಜಿಸಿ 1985 ರ ಮಾರ್ಚ ಮಾಹೆಯಲ್ಲಿ ಮಧ್ಯಾವಧಿ ಚುನಾವಣೆಗಳನ್ನು ನಡೆಸಲಾಯಿತು. ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ಜನತಾಪಕ್ಷವು ಜಿಲ್ಲೆಯ 12 ವಿಧಾನ ಸಭಾ ಕ್ಷೇತ್ರಗಳಲ್ಲಿ ಮೇಲುಗೈ ಪಡೆದು ಕಾಂಗ್ರೆಸ್ ಪಕ್ಷವನ್ನು ಸೋಲಿಸಿತು. ಕಾಂಗ್ರೆಸ್ ಪಕ್ಷಕ್ಕೆ ಕೇವಲ ನಾಲ್ಕು ಸ್ಥಾನಗಳು ಲಭಿಸಿತು. ಎರಡು ಕ್ಷೇತ್ರಗಳು ಪಕ್ಷೇತರರ ಪಾಲಾಯಿತು. ವಿವಿಧ ಪಕ್ಷಗಳು ಪಡೆದ ಮತಗಳ ಅಂಕಿ ಸಂಖ್ಯೆಗಳು ಈ ರೀತಿ ಇದ್ದಿತು. (1) ಧಾರವಾಡ ಗ್ರಾಮಾಂತರ ಜನತಾಪಕ್ಷ 35,492 (57.77) ಆಯ್ಕೆ ಎ.ಬಿ. ದೇಸಾಯಿ; ಕಾಂಗ್ರೆಸ್ 25,199 (41.01), ಪಕ್ಷೇತರರು ಇಬ್ಬರು ಪಡೆದ ಮತಗಳು 745 (1.20). (2) ಧಾರವಾಡ ಪಕ್ಷೇತರ 15,949 (25.04) ಆಯ್ಕೆ ಸಿ.ಜಿ. ಬೆಲ್ಲದ; ಕಾಂಗ್ರೆಸ್ 14,662 (23.02), ಜನತಾ ಪಕ್ಷ 14,397 (22.60); ಭಾಜಪ 8,461 (13.28), 8 ಪಕ್ಷೇತರ ಸ್ಪರ್ಧಿಗಳು 10.230 (16.06). (3)

ಹುಬ್ಬಳ್ಳಿ ಕಾಂಗ್ರೆಸ್ 35,856 (53.32) ಆಯ್ಕೆ ಎ.ಎಂ. ಹಿಂಡಸಗೇರಿ; ಭಾಜಪ 27,610 (41.06); ಸಿಪಿಐ-ಭಾರತೀಯ ಕಮ್ಯೂನಿಷ್ಟ ಪಕ್ಷ 2,310 (3.44), ಲೋಕದಳ 632 (0.94), 6 ಮಂದಿ ಪಕ್ಷೇತರರು 834 (1.25). (4) ಹುಬ್ಬಳ್ಳಿ ಗ್ರಾಮಾಂತರ ಜನತಾಪಕ್ಷ 32,125 (42.44) ಆಯ್ಕೆ ಎಸ್.ಆರ್. ಬೊಮ್ಮಾಯಿ; ಕಾಂಗ್ರೆಸ್ 30,687 (40.48), ಭಾಜಪ 4,751 (6.26), ಪಕ್ಷೇತರರು ನಾಲ್ಕು ಮಂದಿ 8,188 (10.78). (5) ಕಲಘಟಗಿ ಜನತಾಪಕ್ಷ 34,211 (53.53) ಆಯ್ಕೆ ಪಿ.ವಿ. ಶಿದ್ದನಗೌಡರ; ಕಾಂಗ್ರೆಸ್ 24,631 (40.70), ಪಕ್ಷೇತರರು ಮೂರು ಮಂದಿ 1.671 (2.77). (6) ಕುಂದಗೋಳ ಜನತಾ ಪಕ್ಷ 28.038 (43.76) ಆಯ್ಕೆ ಬಿ.ಎ. ಉಪ್ಪಿನ; ಕಾಂಗ್ರೆಸ್ 21,578 (33.67), ಆರು ಮಂದಿ ಪಕ್ಷೇತರರು 14,447 (22.51). (7) ಶಿಗ್ಗಾಂವಿ ಪಕ್ಷೇತರ 35,075 (51.38) ಆಯ್ಕೆ ಎನ್.ವಿ. ಪಾಟೀಲ್; ಕಾಂಗ್ರೆಸ್ 20,736 (30.39), ಜನತಾ ಪಕ್ಷ 10.147 (14.86), ಏಳು ಮಂದಿ ಪಕ್ಷೇತರರು 2,305 (3.34). (8) ಹಾನಗಲ್ ಜನತಾಪಕ್ಷ 39.264 (51.23) ಆಯ್ಕೆ ಸಿ.ಎಂ. ಉದಾಸಿ; ಕಾಂಗ್ರೆಸ್ 36,205 (47.24), ನಾಲ್ಕು ಮಂದಿ ಪಕ್ಷೇತರರು 1,174 (1.54). (9) ಹಿರೇಕೆರೂರು ಜನತಾಪಕ್ಷ 36.164 (52.22) ಆಯ್ಕೆ ಬಿ.ಜಿ. ಬಣಕಾರ; ಕಾಂಗ್ರೆಸ್ 30.645 (44.25); ಪಕ್ಷೇತರರು ಐದು ಮಂದಿ 2.310 (3.52). (10) ರಾಣೆಬೆನ್ನೂರು ಕಾಂಗ್ರೆಸ್ 33,296 (43.40) ಆಯ್ಕೆ ಕೆ.ಬಿ. ಕೋಳಿವಾಡ; ಜನತಾಪಕ್ಷ 32,939 (43.05), ಏಳು ಮಂದಿ ಪಕ್ಷೇತರರಿಗೆ ಲಭ್ಯವಾದ ಮತಗಳು 10.270 (13.28). (11) ಬ್ಯಾಡಗಿ (ಮೀಸಲು) ಜನತಾಪಕ್ಷ 36,694 (57.76) ಆಯ್ಕೆ ಕೆ.ಎಸ್. ಬೀಳಗಿ; ಕಾಂಗ್ರೆಸ್ 26,187 (41.22), ಪಕ್ಷೇತರ 641 (1.00). (12) ಹಾವೇರಿ ಜನತಾ ಪಕ್ಷ 35,564 (48.76) ಆಯ್ಕೆ ಸಿ.ಸಿ. ಕಲಕೋಟಿ; ಕಾಂಗ್ರೆಸ್ 25,628 (35.12), ಪಕ್ಷೇತರರು ಇಬ್ಬರು 10,307 (14.13). (13) ಶಿರಹಟ್ಟಿ ಜನತಾಪಕ್ಷ 24,362 (41.76) ಆಯ್ಕೆ ಟಿ.ಬಿ. ಬಾಳೆಕಾಯಿ; ಕಾಂಗ್ರೆಸ್ 21,568 (36.97), ಆರು ಮಂದಿ ಪಕ್ಷೇತರರು 12,396 (21.21). (14) ಮುಂಡರಗಿ ಜನತಾಪಕ್ಷ 36,764 (60.61) ಆಯ್ಕೆ ಡಾ: ಎನ್.ಎಸ್. ಹುಂಬರವಾಡಿ; ಕಾಂಗ್ರೆಸ್ 22,043 (36.31), ಪಕ್ಷೇತರರು ಐದುಮಂದಿ 1,864 (3.05). (15) ಗದಗ ಕಾಂಗ್ರೆಸ್ 39,226 (53.21) ಆಯ್ಕೆ ಕೆ.ಹೆಚ್. ಪಾಟೀಲ; ಜನತಾಪಕ್ಷ 33,943 (46.04), ಇಬ್ಬರು ಪಕ್ಷೇತರರು 550 (0.74). (16) ರೋಣ ಜನತಾಪಕ್ಷ 33,635 (58.67) ಆಯ್ಕೆ ಜೆ.ಎಸ್. ದೊಡ್ಡಮೇಟಿ; ಕಾಂಗ್ರೆಸ್ 22,911 (39.94); ಪಕ್ಷೇತರರು ಇಬ್ಬರು 789 (1.36). (17) ನರಗುಂದ ಜನತಾಪಕ್ಷ 36,506 (68.54) ಆಯ್ಕೆ ಬಿ.ಆರ್. ಯಾವಗಲ್; ಕಾಂಗ್ರೆಸ್ 16,234 (30.48), ಭಾಜಪ (ಭಾರತೀಯ ಜನತಾಪಾರ್ಟಿ) 195 (0.36), ಇಬ್ಬರು ಪಕ್ಷೇತರರು 326 (0.61). (18) ನವಲಗುಂದ ಕಾಂಗ್ರೆಸ್ 23,469 (46.85) ಆಯ್ಕೆ ಎಂ.ಕೆ. ಕುಲಕರ್ಣಿ, ಜನತಾಪಕ್ಷ 22,997 (45.91), ಭಾಜಪ 1,246 (2.48); ಎಂಟು ಮಂದಿ ಪಕ್ಷೇತರರಿಗೆ ಲಭಿಸಿದ ಮತಗಳು 2,376 (4.70).

## 1989 ರ ಲೋಕಸಭಾ ಚುನಾವಣೆ

ಎಂಟನೇಯ ಲೋಕಸಭೆಯ ಅವಧಿ ಪೂರ್ಣಗೊಂಡ ನಂತರ, ಒಂಬತ್ತನೇಯ ಲೋಕಸಭೆಗೆ ನೂತನ ಸದಸ್ಯರನ್ನು ಆರಿಸಲು 1989ರ ನವೆಂಬರ್ ಮಾಹೆಯಲ್ಲಿ ಚುನಾವಣೆಗಳನ್ನು ನಡೆಸಲಾಯಿತು. ರಾಷ್ಟ್ರದ ರಾಜಕೀಯದಲ್ಲಿ ಅನೇಕ ಬದಲಾವಣೆ ಗಳುಂಟಾಯಿತು. ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ಜನತಾಪಕ್ಷವು ಎರಡು ಹೋಳಾಯಿತು. ಒಂದು ಬಣ ರಾಷ್ಟ್ರಮಟ್ಟದಲ್ಲಿ ಜನತಾದಳದಲ್ಲಿ ಸೇರಿದರೆ, ಇನ್ನೊಂದು ಬಣ ಮೂಲ ಪಕ್ಷ ಅಂದರೆ, ಜನತಾಪಕ್ಷದ ಅಸ್ತಿತ್ವವನ್ನು ಮುಂದುವರೆಸಿಕೊಂಡು ಹೋಗಲು ನಿಶ್ಚಯಿಸಿತು. ವಿ.ಪಿ. ಸಿಂಗ ಅವರು ಜನತಾದಳದ ನಾಯಕರಾದರೆ, ಜನತಾಪಕ್ಷದ ನೇತೃತ್ವವನ್ನು ಚಂದ್ರಶೇಖರ್ ವಹಿಸಿದರು. ಧಾರವಾಡ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಲ್ಲಿ ಮುಖ್ಯ ಸ್ಪರ್ಧೆಯು ಕಾಂಗ್ರೆಸ್ ಮತ್ತು ಜನತಾದಳಗಳ ನಡುವೆ ಇದ್ದಿತು. ಚುನಾವಣೆಯಲ್ಲಿ ಕಾಂಗ್ರೆಸ್ ಎರಡು ಸ್ಥಾನಗಳನ್ನು ತನ್ನ ವಶದಲ್ಲೆ ಉಳಿಸಿಕೊಂಡಿತು. ನಾನಾಪಕ್ಷಗಳು ಚುನಾವಣೆಯಲ್ಲಿ ಗಳಿಸಿದ ಮತಗಳ ಅಂಕಿ ಸಂಖ್ಯೆಗಳು ಇಂತಿವೆ. (1) ಧಾರವಾಡ ದಕ್ಷಿಣ ಕಾಂಗ್ರೆಸ್ 3,39,235 (51.2) ಆಯ್ಕೆ ಬಿ.ಎಂ. ಮುಜಾಹೀದ್; ಜನತಾದಳ 3,10,507 (45.8), ಜನತಾಪಕ್ಷ 8,787 (1.3), ಇಬ್ಬರು ಪಕ್ಷತರರು 4,410 (0.70). (2) ಧಾರವಾಡ ಉತ್ತರ ಕಾಂಗ್ರೆಸ್ 2.76,545 (45.6) ಆಯ್ಕೆ ಡಿ.ಕೆ. ನಾಯ್ಕರ್; ಜನತಾದಳ 2,20,997 (36.4), ರಾಜ್ಯ ರೈತ ಸಂಘ 69,645 (11.5), ಜನತಾಪಕ್ಷ 13,405 (2.2), ಮುಸ್ಲಿಂಲೀಗ್ 3,877 (9.6), ಲೋಕದಳ ಬಿ 885 (0.1), ಕೆಜಿಪಿ 1,915 (0.3) ಹಾಗೂ ಏಳು ಮಂದಿ ಪಕ್ಷೇತರರಿಗೆ ಬಿದ್ದ ಮತಗಳು 19,109 (3.3).

**1989ರ ವಿಧಾನಸಭಾ ಚುನಾವಣೆ**

ಅವಧಿಗೆ ಮುನ್ನವೇ ವಿಧಾನ ಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಯನ್ನು ಲೋಕಸಭೆಯ ಚುನಾವಣೆಯ ಜೊತೆಯಲ್ಲೇ ನಡೆಸಲಾಯಿತು. ಮುಂಡರಗಿ ವಿಧಾನ ಸಭಾ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಯಿತು. ದಿನಾಂಕ 26.11.89 ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜನತಾದಳಗಳ ನಡುವೆ ತೀವ್ರ ಹೋರಾಟವಿದ್ದು, 14 ಸ್ಥಾನಗಳನ್ನು ಗೆದ್ದು ಕಾಂಗ್ರೆಸ್ ತನ್ನ ಪ್ರತಿಷ್ಠೆಯನ್ನು ಮತ್ತೆ ಮರಳಿ ಪಡೆಯಿತು. ಕರ್ನಾಟಕ ರಾಜ್ಯ ರೈತ ಸಂಘ ಕೊಂಚ ಕಾಲದಿಂದಲೂ ಜಿಲ್ಲೆಯಲ್ಲಿ ಕ್ರಿಯಾಶೀಲವಾಗಿದ್ದು ಅಲ್ಲಲ್ಲಿ ಪ್ರಭಾವ ಹೊಂದಿತ್ತು. ಈ ಪಕ್ಷವು ಅನೇಕ ಸ್ಥಾನಗಳಿಗೆ ಸ್ಪರ್ಧಿಸಿದ್ದರೂ, ಧಾರವಾಡ ಗ್ರಾಮಾಂತರ ಕ್ಷೇತ್ರದಲ್ಲಿ ಮಾತ್ರ ಯಶಸ್ಸನ್ನು ಪಡೆಯಿತು. ವಿಧಾನ ಸಭಾ ಚುನಾವಣೆಯಲ್ಲಿ ವಿವಿಧ ಪಕ್ಷಗಳಿಗೆ ಲಭಿಸಿದ ಮತಗಳ ಅಂಕಿ ಸಂಖ್ಯೆ ಈ ರೀತಿ ಇದೆ: (1) ಧಾರವಾಡ ಗ್ರಾಮಾಂತರ ಕರ್ನಾಟಕ ರಾಜ್ಯ ರೈತಸಂಘ (ಮುಂದೆ ರೈ. ಸಂ. ವೆಂದು ಸಂಕ್ಷಿಪ್ತವಾಗಿ ಕೊಡಲಾಗುವುದು). 35,497 (45.77) ಆಯ್ಕೆ ಬಿ.ಆರ್. ಪಾಟೀಲ್; ಕಾಂಗ್ರೆಸ್21,668 (27.94); ಜನತಾದಳ 18,353 (23.67), ಜನತಾಪಾರ್ಟಿ 869 (1.12), ಇಬ್ಬರು ಪಕ್ಷೇತರರು 1,159 (1.50). (2) ಧಾರವಾಡ ಕಾಂಗ್ರೆಸ್36,627 (48.07) ಆಯ್ಕೆ ಎಸ್.ಆರ್. ಮೋರೆ; ಜನತಾದಳ 14,826 (19.46), ಭಾಜಪ 14,584 (19.14). ರೈ.ಸಂ.3,210 (4.21), ಮುಸ್ಲಿಂಲೀಗ್ 2,648 (3.47), ಜನತಾ ಪಕ್ಷ 1,109 (1.46), 15 ಮಂದಿ ಪಕ್ಷೇತರರು 3,192 (4.18), (3) ಹುಬ್ಬಳ್ಳಿ ಕಾಂಗ್ರೆಸ್37,832 (51.78), ಆಯ್ಕೆ ಎ.ಎಂ. ಹಿಂಡಸಗೇರಿ; ಭಾಜಪ 19,844 (27.16), ಜನತಾದಳ 13,972 (19.12), ಜನತಾಪಕ್ಷ 1,055 (1.44), ಇಬ್ಬರು ಪಕ್ಷೇತರರು 372 (0.50). (4) ಹುಬ್ಬಳ್ಳಿ ಗ್ರಾಮಾಂತರ ಕಾಂಗ್ರೆಸ್45,718 (47.66) ಆಯ್ಕೆ ಗೋಪಿನಾಥ ಆರ್. ಸಾಂಡ್ರ; ಜನತಾದಳ 42,548 (44.35), ಜನತಾಪಕ್ಷ 609 (0.63), ಮುಸ್ಲಿಂಲೀಗ್ 362 (0.38). 16 ಮಂದಿ ಪಕ್ಷೇತರ ಸ್ಪರ್ಧಿಗಳಿಗೆ ಲಭಿಸಿದ ಮತಗಳು 6,690 (6.87). (5) ಕಲಘಟಗಿ ಜನತಾದಳ 19,427 (27.38) ಆಯ್ಕೆ ಪಿ.ಸಿ. ಶಿದ್ದನಗೌಡರ; ರೈ.ಸಂ. 18,700 (26.37), ಕಾಂಗ್ರೆಸ್ 14,467 (20.39), ಸಿಪಿಐ 2,007 (2.82), ಜನತಾಪಕ್ಷ 1,750 (2.47), ಏಳು ಮಂದಿ ಪಕ್ಷೇತರರು 14,950 (20.56). (6) ಕುಂದಗೋಳ ಕಾಂಗ್ರೆಸ್36,925 (51.47) ಆಯ್ಕೆ ಜಿ.ಹೆಚ್. ಜುಟ್ಟಲ; ಜನತಾದಳ31,404 (43.78), ಜನತಾಪಕ್ಷ 1,652 (2.30), ರೈತಸಂಘ 489 (0.68), ನಾಲ್ಕು ಮಂದಿ ಪಕ್ಷೇತರರು 1,265 (1.77). (7) ಶಿಗ್ಗಾಂವಿ ಕಾಂಗ್ರೆಸ್40,549 (49.69) ಆಯ್ಕೆ ಎಂ.ಸಿ. ಕುನ್ನೂರು; ಜನತಾದಳ36,035 (44.17), ಜನತಾಪಕ್ಷ 2,978 (3.65), ರೈತಸಂಘ 1,912 (2.35), ಪಕ್ಷೇತರ 121 (0.14). (8) ಹಾನಗಲ್ ಕಾಂಗ್ರೆಸ್54,760 (57.5) ಆಯ್ಕೆ ಎಂ.ಹೆಚ್. ತಹಸೀಲ್ದಾರ್; ಜನತಾದಳ 39,023 (41.0), ಜನತಾಪಕ್ಷ 1,525 (1.5). (9) ಹಿರೇಕೆರೂರು ಜನತಾದಳ34,093 (39.71) ಆಯ್ಕೆ ಬಿ.ಹೆಚ್. ಬನ್ನಿಕೊಡ; ಕಾಂಗ್ರೆಸ್30,955 (36.24), ಪಕ್ಷೇತರ 18,940 (22.96), ಜನತಾಪಕ್ಷ 1,337 (1.71), ನಾಲ್ಕು ಪಕ್ಷೇತರರು ಪಡೆದ ಒಟ್ಟು ಮತ 537 (0.63). (10) ರಾಣೆಬೆನ್ನೂರು ಕಾಂಗ್ರೆಸ್43,228 (49.36) ಆಯ್ಕೆ ಕೆ.ಬಿ. ಕೋಳಿವಾಡ; ಜನತಾದಳ 40,350 (46.02), ಜನತಾಪಕ್ಷ 1,857 (2.12), ಭಾಜಪ 765, ಆರು ಜನ ಪಕ್ಷೇತರರಿಗೆ ಒಟ್ಟು ಮತಗಳು 1,373. (11) ಬ್ಯಾಡಗಿ ಮೀಸಲು ಕಾಂಗ್ರೆಸ್34,405 (37.32), ಆಯ್ಕೆ ಡಾ. ಹೆಚ್.ಡಿ. ಲಮಾಣಿ; ಜನತಾದಳ 31,565 (43.42), ಜನತಾಪಕ್ಷ 1,293 (1.72), ಪಕ್ಷೇತರರು ಆರು ಮಂದಿ ಅಭ್ಯರ್ಥಿಗಳಿಗೆ ದೊರೆತ ಮತಗಳು 6,722. (12) ಹಾವೇರಿ ಕಾಂಗ್ರೆಸ್45,331 (51.48) ಆಯ್ಕೆ ಎಂ.ಡಿ. ಶಿವಪುರ; ಜನತಾದಳ 39,488 (44.83), ರೈ.ಸಂ.1,427 (1.62), ಜನತಾಪಕ್ಷ 1,056 (1.19); ನಾಲ್ಕು ಮಂದಿ ಪಕ್ಷೇತರರು 768. (13) ಶಿರಹಟ್ಟಿ ಕಾಂಗ್ರೆಸ್ 24,882 (33.59), ಆಯ್ಕೆ ಎಸ್.ಎನ್. ಪಾಟೀಲ; ಜನತಾದಳ23,715 (32.01), ಪಕ್ಷೇತರ 19,865 (26.82), ರೈ.ಸಂ. 2,864 (3.87), ಲೋಕದಳ (ಬಿ) 995 (1.35), ಜನತಾಪಕ್ಷ 707 (0.95), ಭಾಜಪ 495 (0.67), ಇಬ್ಬರು ಪಕ್ಷೇತರರಿಗೆ ಒಟ್ಟು ಮತ 552 (0.68). (14) ಗದಗ ಕಾಂಗ್ರೆಸ್44,155 (55.73), ಆಯ್ಕೆ ಕೆ.ಹೆಚ್. ಪಾಟೀಲ್; ಜನತಾದಳ 28,463 (35.89); ಜನತಾಪಕ್ಷ 2,289 (2.88), ಭಾಜಪ 1,600 (2.01), ರೈ.ಸಂ. 309 (0.38), 7 ಜನ ಪಕ್ಷೇತರರಿಗೆ ಒಟ್ಟು ಮತ 2,461 (3.47). (15) ರೋಣ ಕಾಂಗ್ರೆಸ್32,610 (46.00) ಆಯ್ಕೆ ಜಿ.ಎಸ್. ಪಾಟೀಲ್; ಜನತಾದಳ21,203 (29.91), ಪಕ್ಷೇತರ 12,388 (17.47), ರೈತಸಂಘ 3,686 (5.20), ಜನತಾಪಕ್ಷ 579 (0.81), ಮೂರು ಪಕ್ಷೇತರರಿಗೆ ಒಟ್ಟು ಮತ 429

(0.61). (16) ನರಗುಂದ ಕಾಂಗ್ರೆಸ್30,284 (48.69) ಆಯ್ಕೆ ಎಸ್.ಎಫ್. ಪಾಟೀಲ್; ಜನತಾದಳ29,595 (47.58), ಜನತಾಪಕ್ಷ 1,262 (2.03), ರೈಸಂ. 838 (1.35), ಇಬ್ಬರು ಪಕ್ಷೇತರರು ಒಟ್ಟು 218 (0.35). (17) ನವಲಗುಂದ ಕಾಂಗ್ರೆಸ್ 27,222 (42.80) ಆಯ್ಕೆ ಎಂ.ಕೆ. ಕುಲಕರ್ಣಿ; ರೈಸಂ.16,929 (26.30), ಜನತಾದಳ 16,484 (25.91), ಜನತಾಪಕ್ಷ 2,261 (3.55); 5 ಪಕ್ಷೇತರರ ಒಟ್ಟು 916 (1.44).

### ಮುಂಡರಗಿ ವಿಧಾನಸಭಾ ಕ್ಷೇತ್ರದ ಚುನಾವಣೆ

ದಿನಾಂಕ 26.11.1989 ರಲ್ಲಿ ನಡೆಯಬೇಕಾಗಿದ್ದ ಮುಂಡರಗಿ ಕ್ಷೇತ್ರದ ಚುನಾವಣೆ, ಸ್ಪರ್ಧಿಸಿದ್ದ ಉಮೇದುವಾರರೊಬ್ಬರ ನಿಧನದಿಂದಾಗಿ ಮುಂದೂಡಲ್ಪಟ್ಟಿತು. ಮುಂದೆ 27.2.1990 ರಂದು ನಡೆದ ಚುನಾವಣೆಯಲ್ಲಿ ಬಹುಮುಖ ಸ್ಪರ್ಧೆ ಏರ್ಪಟ್ಟು ಕಾಂಗ್ರೆಸ್ಸಿನ ಕೆ.ಹೆಚ್. ಕುರುಡಗಿಯವರು ಆಯ್ಕೆಯಾದರು. ಫಲಿತಾಂಶದ ವಿವರಗಳು ಈ ರೀತಿ ಇದೆ: ಮುಂಡರಗಿ ಕಾಂಗ್ರೆಸ್ 24,914 (34.82) ಆಯ್ಕೆ; ರೈಸಂ. 23,203 (32.43), ಜನತಾದಳ 19,266 (26.93), ಜನತಾಪಕ್ಷ 2,180 (3.05), ಏಳುಮಂದಿ ಪಕ್ಷೇತರರು ಪಡೆದುಕೊಂಡ ಮತಗಳು 1,981 (2.77).

### ಧಾರವಾಡ ಗ್ರಾಮೀಣ ಕ್ಷೇತ್ರದ ಉಪಚುನಾವಣೆ

ರೈತಸಂಘದ ಬಾಬಾಗೌಡ ಪಾಟೀಲರು ರಾಜೀನಾಮೆ ನೀಡಿದ್ದರಿಂದ ತೆರವಾದ ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ದಿನಾಂಕ 27.2.1990 ರಂದು ಪುನಃ ಉಪ ಚುನಾವಣೆ ನಡೆಯಿತು. ಏಳು ಮಂದಿ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು. ರೈತ ಸಂಘದ ಎಂ.ಡಿ. ನಂಜುಂಡಸ್ವಾಮಿಯವರು ಈ ಕ್ಷೇತ್ರದಿಂದ ಆಯ್ಕೆಯಾದರು. ಚುನಾವಣಾ ಫಲಿತಾಂಶದ ವಿವರಗಳು ಇಂತಿವೆ: 1. ಕರ್ನಾಟಕ ರಾಜ್ಯ ರೈತ ಸಂಘ 34,374 ಆಯ್ಕೆ; ಕಾಂಗ್ರೆಸ್ 21,112; ಜನತಾದಳ 8,567; ಜನತಾಪಕ್ಷ 9,580; ಕರ್ನಾಟಕ ಪರಿಷತ್ 322, ಇಬ್ಬರು ಪಕ್ಷೇತರರು 8,120.

### ಗದಗ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ

ಗದಗ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಾಂಗ್ರೆಸ್ಸಿನ ಕೆ.ಹೆಚ್. ಪಾಟೀಲರು ನಿಧನರಾಗಿದ್ದರಿಂದ ತೆರವಾದ ಸ್ಥಾನಕ್ಕೆ ದಿನಾಂಕ 8.6.1992 ರಂದು ಉಪ ಚುನಾವಣೆ ನಡೆಯಿತು. ಒಂಬತ್ತು ಮಂದಿ ಅಭ್ಯರ್ಥಿಗಳು ಚುನಾವಣಾ ರಂಗದಲ್ಲಿದ್ದರೂ ಕಾಂಗ್ರೆಸ್ಸಿನ ಅಭ್ಯರ್ಥಿ ಡಿ.ಆರ್. ಪಾಟೀಲರು ಈ ಕ್ಷೇತ್ರದಿಂದ ಆಯ್ಕೆಯಾದರು. ಮತಗಳಿಕೆಯ ವಿವರಗಳು ಈ ರೀತಿ ಇದೆ. 1. ಕಾಂಗ್ರೆಸ್ 43,878 ಆಯ್ಕೆ; ಜನತಾದಳ 17,756; ಭಾಜಪ 11,199; ಆರು ಮಂದಿ ಪಕ್ಷೇತರರು 859.

### 1994ರ ವಿಧಾನಸಭಾ ಚುನಾವಣೆ

ರಾಜ್ಯದ ವಿಧಾನ ಸಭೆಗೆ ಹೊಸ ಸದಸ್ಯರನ್ನು ಆಯ್ಕೆ ಮಾಡಲು 1994 ರ ಡಿಸೆಂಬರ್ ಮಾಹೆಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಹೊಸದಾಗಿ ಆರಂಭವಾದ ಕರ್ನಾಟಕ ಕಾಂಗ್ರೆಸ್ (ಕೆ.ಸಿ.ಪಿ.), ವಾಟಾಳ ಕನ್ನಡ ಚಳವಳಿ ಪಕ್ಷ (ವಿ.ಕೆ.ಸಿ.ಪಿ.) ಹಾಗೂ ಬಹುಜನ ಸಮಾಜಪಕ್ಷ (ಬಿ.ಎಸ್.ಪಿ.) ಇವುಗಳೂ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು. ಈ ಹತ್ತನೇಯ ಚುನಾವಣೆಯ ಮೂಲಕ ಜನತಾದಳವು ರಾಜ್ಯದ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿತು. ಹಿಂದೆ ಆಡಳಿತವನ್ನು ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷವನ್ನು ಭಾರತೀಯ ಜನತಾ ಪಕ್ಷವು ಮೂರನೇಯ ಸ್ಥಾನಕ್ಕೆ ದೂಡಿತು. ಜಿಲ್ಲೆಯ ಎಲ್ಲಾ 18 ಮತಕ್ಷೇತ್ರಗಳಲ್ಲೂ ಬಹುಮುಖ ಸ್ಪರ್ಧೆ ಏರ್ಪಟ್ಟಿತ್ತು; ವಿಧಾನ ಸಭಾ ಚುನಾವಣೆಯಲ್ಲಿ ಎಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿ ಜನತಾದಳವು ಹತ್ತು ಸ್ಥಾನಗಳನ್ನು ಜಯಭೇರಿ ಹೊಡೆಯಿತು. ಭಾರತೀಯ ಜನತಾ ಪಕ್ಷಕ್ಕೆ (ಭಾಜಪ) ನಾಲ್ಕು ಸ್ಥಾನಗಳು, ಕಾಂಗ್ರೆಸ್ ಪಕ್ಷಕ್ಕೆ ಮೂರು ಸ್ಥಾನಗಳು ಹಾಗೂ ಕರ್ನಾಟಕ ಕಾಂಗ್ರೆಸ್ ಪಕ್ಷಕ್ಕೆ ಒಂದು ಸ್ಥಾನ ಲಭ್ಯವಾದುವು. ವಿವಿಧ ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷಗಳು ಗಳಿಸಿದ ಮತಗಳು ಈ ರೀತಿ ಇದ್ದವು. 1. ಧಾರವಾಡ ಗ್ರಾಮೀಣ - ಕಾಂಗ್ರೆಸ್ 25,054, ಆಯ್ಕೆ ಅಂಬಡಗಟ್ಟಿ ಶ್ರೀಕಂಠ ರುದ್ರಪ್ಪ; ಜನತಾದಳ 21,812, ರೈತಸಂಘ

20,043, ಭಾಜಪ 11,472, ಕೆಸಿಪಿ 2,611, ನಾಲ್ಕು ಮಂದಿ ಪಕ್ಷೇತರರು 1,992 ಮತಗಳು. 2. ಧಾರವಾಡ - ಭಾಜಪ 26,630 ಆಯ್ಕೆ ಚೆಲ್ಲದ ಚಂದ್ರಕಾಂತ ಗುರಪ್ಪ; ಕಾಂಗ್ರೆಸ್‌ಗೆ 17,114, ಜನತಾದಳ 15,533, ಕೆಸಿಪಿ 10,715, ರೈತಸಂಘ 1,082, ಐ.ಯು.ಎಮ್.ಎಲ್ 437, ಎಸ್.ಪಿ.134, ಪಕ್ಷೇತರ 20 ಮಂದಿ 9,049. 3. ಹುಬ್ಬಳ್ಳಿ - ಭಾರತೀಯ ಜನತಾ ಪಕ್ಷ 42,244 ಆಯ್ಕೆ ಅಶೋಕ ಕಾಟ್ವೆ; ಕಾಂಗ್ರೆಸ್ 34,103, ಜನತಾದಳ 1,786, ಕೆಸಿಪಿ 1,333, 8 ಮಂದಿ ಪಕ್ಷೇತರರು 2,120. 4. ಹುಬ್ಬಳ್ಳಿ ಗ್ರಾಮೀಣ - ಭಾರತೀಯ ಜನತಾಪಕ್ಷ 42,768, ಆಯ್ಕೆ ಜಗದೀಶ ಶೆಟ್ಟರ್; ಜನತಾದಳ 26,794, ಕಾಂಗ್ರೆಸ್ 18,433, ಪಕ್ಷೇತರ 9,188, ಕೆಸಿಪಿ 2,522, ರೈತಸಂಘ 1,192, ಪಕ್ಷೇತರರು 24 ಪಡೆದ ಒಟ್ಟು ಮತಗಳು 6,412. 5. ಕಲಘಟಗಿ-ಜನತಾದಳ 25,392, ಆಯ್ಕೆ ಶಿದ್ದನಗೌಡ್ರ ಪರ್ವತಗೌಡ ಚನ್ನವೀರಗೌಡ; ರೈತಸಂಘ 14,718, ಭಾಜಪ 14,473, ಪಕ್ಷೇತರ 11,189, ಕೆಸಿಪಿ 6,755, ಕಾಂಗ್ರೆಸ್ 4,604, ಒಂಬತ್ತು ಮಂದಿ ಪಕ್ಷೇತರರು 8,782. 6. ಕುಂದಗೋಳ ಜನತಾದಳ 32,707 ಆಯ್ಕೆ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ; ಕೆಸಿಪಿ 19,320, ಕಾಂಗ್ರೆಸ್ 17,034, ಭಾಜಪ 4,295, ರೈತಸಂಘ 1,704, ಪಕ್ಷೇತರರು 7 ಮಂದಿ ಗಳಿಸಿದ ಮತಗಳು 3,086. 7. ಶಿಗ್ಗಾಂವಿ-ಕಾಂಗ್ರೆಸ 23,552, ಆಯ್ಕೆ ಕುನ್ನೂರು ಮಂಜುನಾಥ ಚೆನ್ನಪ್ಪ; ಪಕ್ಷೇತರ 17,778, ಪಕ್ಷೇತರ 9,179, ಕೆಸಿಪಿ 9,038, ಭಾಜಪ 8,611, ಜನತಾದಳ 8,443, ಪಕ್ಷೇತರ 6,806, ರೈತ ಸಂಘ 3,143, ಮತ್ತು 11 ಮಂದಿ ಇತರ ಪಕ್ಷೇತರರು ಗಳಿಸಿದ ಒಟ್ಟು ಮತಗಳು 4,385. 8. ಹಾನಗಲ್-ಜನತಾದಳ 56,348, ಆಯ್ಕೆ ಉದಾಸಿ ಚನ್ನಬಸಪ್ಪ ಮಹಾಲಿಂಗಪ್ಪ; ಕಾಂಗ್ರೆಸ್ 38,865, ಭಾಜಪ 3,391, ಕೆಸಿಪಿ 2,980, ಮತ್ತು ನಾಲ್ಕು ಮಂದಿ ಪಕ್ಷೇತರರಿಗೆ 564. 9. ಹಿರೇಕೆರೂರು-ಭಾರತೀಯ ಜನತಾಪಾರ್ಟಿ 32,248 ಆಯ್ಕೆ ಉಜನೇಶ್ವರ ಬಸವಣ್ಣೆಪ್ಪ ಬಣಕಾರ; ಜನತಾದಳ 22,855, ಕಾಂಗ್ರೆಸ್ 13,239, ಕೆಸಿಪಿ 10,584, ರೈತಸಂಘ 6,315 ಮತ್ತು ಐದು ಮಂದಿ ಪಕ್ಷೇತರರಿಗೆ ಲಭಿಸಿದ ಮತಗಳು 5,268. 10. ರಾಣೆಬೆನ್ನೂರು-ಜನತಾದಳ 53,080 ಆಯ್ಕೆ ಕರಜಗಿ ವೀರಪ್ಪ ಸಣ್ಣತಮ್ಮಪ್ಪ; ಕಾಂಗ್ರೆಸ್ 28,542, ಭಾಜಪ 5,663, ರೈತಸಂಘ 3,735, ಜನತಾಪಾರ್ಟಿ 1,060 ಹಾಗೂ ಐದು ಮಂದಿ ಪಕ್ಷೇತರರು ಗಳಿಸಿದ ಮತಗಳು 1,444. 11. ಬ್ಯಾಡಗಿ (ಮೀಸಲು)-ಜನತಾದಳ 29,905 ಆಯ್ಕೆ ಬೀಳಗಿ ಕಲ್ಲೊಳಪ್ಪ ಸಾಬಣ್ಣ; ಕಾಂಗ್ರೆಸ್ 27,045, ಭಾಜಪ 11,669, ಕೆಸಿಪಿ 5,300, ರೈತಸಂಘ 2,140, ಜನತಾಪಾರ್ಟಿ 726 ಮತ್ತು ಐದು ಮಂದಿ ಪಕ್ಷೇತರರು 1,493. 12. ಹಾವೇರಿ- ಜನತಾದಳ 55,806, ಆಯ್ಕೆ ಶಿವಣ್ಣನವರ ಬಸವರಾಜ ನೀಲಪ್ಪ; ಕಾಂಗ್ರೆಸ್ 23,086, ಭಾಜಪ 9,465, ಕೆಸಿಪಿ 4,887, ರೈತಸಂಘ 351, ಬಿಎಸ್‌ಪಿ 264 ಮತ್ತು ಮೂರು ಮಂದಿ ಪಕ್ಷೇತರರು 585. 13. ಶಿರಹಟ್ಟಿ- ಜನತಾದಳ 26,449 ಆಯ್ಕೆ ಗಂಗಣ್ಣ ಮಲ್ಲೇಶಪ್ಪ ಮಹಾಂತಶೆಟ್ಟರ; ಪಕ್ಷೇತರ 26,637, ಕಾಂಗ್ರೆಸ್ 13,139, ರೈತ ಸಂಘ 4,902, ಭಾಜಪ 2,427, ಕೆಸಿಪಿ 1,640 ಮತ್ತು ನಾಲ್ಕು ಮಂದಿ ಪಕ್ಷೇತರರು 4,908. 14. ಮುಂಡರಗಿ-ಜನತಾದಳ 21,145 ಆಯ್ಕೆ ಪಾಟೀಲ್ ಶಿದ್ಲಿಂಗನಗೌಡ ಶಿದ್ದನಗೌಡ; ಪಕ್ಷೇತರ 14,706, ಪಕ್ಷೇತರ 12,633, ಕಾಂಗ್ರೆಸ್ 10,641, ರೈತಸಂಘ 9,393, ಕೆಸಿಪಿ 2,143, ಭಾಜಪ 1,152, ಜನತಾಪಾರ್ಟಿ 738 ಹಾಗೂ ಎಂಟು ಮಂದಿ ಪಕ್ಷೇತರರಿಗೆ 4,399. 15. ಗದಗ-ಕಾಂಗ್ರೆಸ್ 44,388 ಆಯ್ಕೆ ಡಿ.ಆರ್. ಪಾಟೀಲ್; ಜನತಾದಳ 19,971, ಭಾಜಪ 9,886 ಕೆಸಿಪಿ 4,347, ಹಾಗೂ ಮೂರು ಮಂದಿ ಪಕ್ಷೇತರರಿಗೆ 514. 16. ರೋಣ- ಜನತಾದಳ 39,268 ಆಯ್ಕೆ ಬಿದನೂರು ಶ್ರೀಶೈಲಪ್ಪ ವಿರುಪಾಕ್ಷಪ್ಪ; ಕಾಂಗ್ರೆಸ್ 30,664, ಭಾಜಪ 2,402, ರೈತಸಂಘ 1,987 ಹಾಗೂ ಇಬ್ಬರು ಪಕ್ಷೇತರರು 895. 17. ನರಗುಂದ- ಜನತಾದಳ 37,154 ಆಯ್ಕೆ ಬಿ.ಆರ್. ಯಾವಗಲ್; ಕಾಂಗ್ರೆಸ್ 18,502, ಭಾಜಪ 5,433, ಕೆಸಿಪಿ 2,088 ಮತ್ತು ಏಳುಮಂದಿ ಪಕ್ಷೇತರರು 1,807. 18. ನವಲಗುಂದ - ಕೆಸಿಪಿ 13,988 ಆಯ್ಕೆ ಗದ್ದಿಕಲ್ಲಪ್ಪ ನಾಗಪ್ಪ; ಕಾಂಗ್ರೆಸ್ 10,650, ಜನತಾದಳ 10,537, ರೈತಸಂಘ 8,678, ಪಕ್ಷೇತರ 8,667, ಭಾಜಪ 8,284 ಮತ್ತು ಹತ್ತು ಮಂದಿ ಪಕ್ಷೇತರರು 7,531.